# ಸಿಂಗಾರೆವ್ವ ಮತ್ತು ಅರಮನೆ

## ನನ್ನ ಮಾತು

'ಸಿಂಗಾರೆವ್ವ ಮತ್ತು ಅರಮನೆ' ಮೊದಲು ಮುದ್ರಣವಾದದ್ದು ೧೯೮೨ರಲ್ಲಿ. ಪ್ರಜಾವಾಣಿ ಪತ್ರಿಕಾ ಬಳಗ ಪ್ರಕಾಶನ ಆರಂಭಿಸಿದಾಗ ಆ ಮಾಲಿಕೆಯಲ್ಲಿ ಸಿಂಗಾರೆವ್ವ ಮತ್ತು ಅರಮನೆ ಪ್ರಕಟವಾಗಿತ್ತು. ಅಲ್ಲಿಯೇ ಹಲವಾರು ಮುದ್ರಣಗಳನ್ನು ಕಂಡಿತು. ಈ ಕಾದಂಬರಿಯನ್ನು ನನ್ನಿಂದ ಬರೆಯಿಸಿ ಪ್ರಕಾಶ ಪಡಿಸಿದ ಪ್ರಜಾವಾಣಿಯ ಬಳಗಕ್ಕೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಹೇಳುತ್ತೇನೆ. ನಂತರ ಅಕ್ಷರ ಪ್ರಕಾಶನದವರು ಈ ಕೃತಿಯ ಕೆಲವು ಮುದ್ರಣಗಳನ್ನು ಹೊರತಂದರು. ಈ ಕಾದಂಬರಿಯನ್ನು ಮುದ್ರಿಸಿ ಜನಪ್ರಿಯಗೊಳಿಸಿದ ಹಿಂದಿನ ಪ್ರಕಾಶಕರೆಲ್ಲರಿಗೂ ನನ್ನ ವಂದನೆಗಳು.

ಈ ಕೃತಿಯ ಇಂಗ್ಲಿಷ್ ಅನುವಾದಕ್ಕೆ ಖ್ಯಾತ ಮಲಯಾಳಂ ಸಾಹಿತಿ ಶ್ರೀ ಎಂ.ಟಿ. ವಾಸುದೇವನ್ ನಾಯರ್ ಅವರು ಮುನ್ನುಡಿ ಬರೆದಿದ್ದಾರೆ. ಅವರ ಇಂಗ್ಲಿಷ್ ಲೇಖನವನ್ನು ಹಾಗೆಯೇ ಉಳಿಸಿಕೊಂಡಿದ್ದೇನೆ. ಶ್ರೀ ಎಂ.ಟಿ. ವಾಸುದೇವನ್ ನಾಯರ್ ಅವರಿಗೆ ಹಾಗೂ ಇಂಗ್ಲಿಷಿಗೆ ಅನುವಾದಿಸಿದ ಶ್ರೀಮತಿ ಲಕ್ಷ್ಮಿ ಚಂದ್ರಶೇಖರ ಅವರಿಗೂ ನನ್ನ ನಮನಗಳು.

ಮಲಯಾಳಂನ 'ಮಾತೃಭೂಮಿ' ಪತ್ರಿಕೆಯಲ್ಲಿ ಈ ಕೃತಿಯ ಅನುವಾದ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಅದನ್ನು ಓದಿ, ಮೆಚ್ಚಿ, ಪ್ರತಿಕ್ರಿಯಿಸಿದ ಓದುಗರೆಲ್ಲರಿಗೆ ನನ್ನ ವಂದನೆಗಳು.

ಇದೀಗ 'ಅಂಕಿತ ಪುಸ್ತಕ'ದವರು ಈ ಕೃತಿಯ ಹದಿನಾರನೆಯ ಮುದ್ರಣವನ್ನು ಹೊರತರುತ್ತಿದ್ದಾರೆ. ಅವರಿಗೆ;

ಮುದ್ರಿಸಿದ ಸ್ವ್ಯಾನ್ ಪ್ರಿಂಟರ್ಸ್ ಅವರಿಗೆ; ಮುಖಪುಟ ರಚಿಸಿದ ಶ್ರೀ ಹಾದಿಮನಿ ಅವರಿಗೆ ನನ್ನ ವಂದನೆಗಳು ಸಲ್ಲುತ್ತವೆ.

**ಚಂದ್ರಶೇಖರ ಕಂಬಾರ**

## ಅಧ್ಯಾಯ - ೧

ನಮ್ಮೂರಿನ ಅರಮನೆಯನ್ನು ಹರಾಜು ಹಾಕುವವರಿದ್ದಾರೆಂದು ಮಿತ್ರ ಹೇಳಿದಾಗ ನನಗೆ ಬಾರೀ ಆಶ್ಚರ್ಯ ಮತ್ತು ಆಘಾತವಾಯಿತು. ನಾನು ಊರು ಬಿಟ್ಟು ತುಂಬಾ ದಿನಗಳಾಗಿದ್ದರಿಂದ ಅಲ್ಲಿಯ ವಿದ್ಯಮಾನಗಳ ಅರಿವಿರಲಿಲ್ಲ.

"ಯಾಕ, ಹರಾಜ ಹಾಕೋವಂಥಾದ್ದೇನ ಬಂತೋ?" - ಅಂದೆ

"ಯಾಕೆಂದರ ರವಿಚಂದ್ರ ಅಲ್ಲಿ ಇರಾಕ ಒಲ್ಲ. ಅರಮನಿ ಮಾರಿ ಶಹರದಾಗ ಇರಬೇಕಂತಾನ. ಕಲಿತವರು ಹಳ್ಳ್ಯಾಗ ಇರಾಕ ಹೆಂಗ ಒಪ್ಪತಾರ, ಹೇಳು. ಬಾ ಅಂದರ ನೀ ಹಳ್ಳಿಗೆ ಬರತೀಯೇನ? ಹಂಗs ಅವನೂ".

"ಅಲ್ಲಪ್ಪಾ, ನನಗ ನೌಕರಿ ಐತಿ, ಅದಕ್ಕ ನಾ ತೀರ್ಇಲ್ಲಿತೀರ್ನಿ. ಹಾಂಗ ಅವಗೇನೈತಿ?"

“ಇನ್ನೇನಿರಬೇಕಾಗಿತ್ತೋ? ಅರಮನಿ ಐತಿ, ಹೌಂದ? ಮಾರತಾನ, ರೊಕ್ಕ ಬರತೈತಿ, ಖರ್ಚು ಮಾಡಿಕೊಂಡ ಮಜಾಶೀರ ಶಹರದಾಗ ಇರತಾನಾಯ್ತು. ದೇಸಾಯರಂದ ಮ್ಯಾಲ ಕಷ್ಟಪಟ್ಟಗೊಂಡ ನಮ್ಮ ನಿಮ್ಹಾಂಗ ಯಾಕಿದ್ದಾರ ಹೇಳು?”

- ಅಂದ. ಅದು ನಿಜವೋ ಏನೋ. ದೇಸಗತಿಯ ಕೊನೆಯ ಕುಡಿಯಾದ ರವಿಚಂದ್ರ ಬುದ್ಧಿಗಲಿತಾಗಿನಿಂದ ಅಲ್ಲಿ ಇದ್ದವನಲ್ಲವೆಂದೂ, ಬರೀ ಬೆಂಗಳೂರಲ್ಲೇ ಇರುತ್ತಾನೆಂದೂ ಕೇಳಿದ್ದೆ. ಆದರೆ ಅವನೊಮ್ಮೆಯೂ ನನಗೆ ಭೇಟಿಯಾಗಿರಲಿಲ್ಲ.

“ಯಾಕ ಸುಮ್ಮನ ಕುಂತಿ?”

- ಎಂದು ನನ್ನ ಮಿತ್ರ ಕೇಳಿದ. ನನಗೆ ಮಾತಾಡುವ ಮನಸ್ಸಿರಲಿಲ್ಲ. ಖಿನ್ನನಾಗಿದ್ದೆ. ಆ ಅರಮನೆಯ ಬಗ್ಗೆಯೇ ಧೇನಿಸುತ್ತ ಕೂತೆ.

ನಿಜ ಹೇಳಬೇಕೆಂದರೆ ಆ ಅರಮನೆ ಎಂಥದಿತ್ತೆಂದು ಅದೇ ಊರಿನವನಾದರೂ ನಾನು ಈತನಕ ನೋಡಿರಲಿಲ್ಲ. ಮತ್ತು ನನ್ನ ಹಾಗೆ ಅದರ ಹೊಸ್ತಿಲು ಮೆಟ್ಟದ ಅನೇಕರು ನಮ್ಮೂರಲ್ಲಿದ್ದರು. ಅದರ ಬಗ್ಗೆ ನಾವೆಲ್ಲ ಕಥೆ ಕೇಳಿದ್ದೆವು. ಮತ್ತು ಕಥೆಯ ಪ್ರಕಾರ ಕಲ್ಪಿಸಿಕೊಂಡಿದ್ದೆವು. ನಮ್ಮ ಕಲ್ಪನೆ ಎಷ್ಟು ಮಡಿಯಾಗಿತ್ತೆಂದರೆ - ಅರಮನೆ ಮತ್ತು ಹರಾಜು - ಇಂಥ ಶಬ್ದಗಳನ್ನು ಒಂದೇ ಉಸುರಿನಲ್ಲಿ ಹೇಳುವುದಾಗಲಿ, ಒಂದೇ ಕಿವಿಯಿಂದ ಕೇಳುವುದಾಗಲಿ ನಮ್ಮಿಂದಾಗುತ್ತಿರಲಿಲ್ಲ. ಅರಮನೆಯಲ್ಲಿ ನಮಗೆ ಪ್ರವೇಶವಿರಲಿಲ್ಲ ನಿಜ. ಆದರೂ ಅದು ನಮ್ಮ ಎಳೆತನದ ಭಾವಪ್ರಪಂಚದ ಒಂದು ಭಾಗವಾಗಿತ್ತು. ಊರ ಹಿರಿಯರು ಅಗತ್ಯವಿದ್ದಾಗ ಒಳಗೆ ಹೋದದ್ದುಂಟು ಮತ್ತು ಕೊನೆಯ ದೇಸಾಯಿ ಆಗಾಗ ಊರಿನಲ್ಲಿ ಬರುತ್ತಿದ್ದನಲ್ಲ, ಅವನನ್ನು ನಾನು ಕಂಡಿದ್ದೆ. ಊರವರು ಅರಮನೆಯ ವಿದ್ಯಮಾನಗಳ ಬಗ್ಗೆ ಆಡಿಕೊಳ್ಳುವುದಿತ್ತು. ಅವೆಲ್ಲ ನಮಗೆ ವಿಚಿತ್ರ ಪ್ರಪಂಚವೊಂದರ ಮಾತಾಗಿ ಕೇಳಿಸುತ್ತಿದ್ದವು. ಕೇಳಿದಂತೆಲ್ಲ ನನಗೆ ಅನ್ನಿಸುತ್ತಿತ್ತು: ಅರಮನೆಯ ಜೀವನಕ್ಕೂ ಹೊರಗಿನ ಜೀವನಕ್ಕೂ ಎಂದೂ ತಾಳೆಯಾಗುತ್ತಿರಲಿಲ್ಲ - ಎಂದು. ಘಟನೆಗಳು ಅಲ್ಲಿಯೂ ಜರುಗುತ್ತಿದ್ದವು. ಆದರೆ ಅವ್ಯಾವೂ ನಮ್ಮ ಮನಸ್ಸಿಗೆ ನೇರವಾಗಿ ನಿಲುಕುತ್ತಿರಲಿಲ್ಲ. ಮತ್ತು ಊರ ಜೀವನದಿಂದ ಅರಮನೆಯ ಜೀವನದ ಮೇಲಾದ ಪರಿಣಾಮವನ್ನು ತಿಳಿಯುವುದೂ ಎಳೆಯರಾದ ನಮಗೆ ಸಾಧ್ಯವಿರಲಿಲ್ಲ. ಹೊರಗೆ ರೈತರು, ಅವರ ಹೆಂಗಸರು, ಮಕ್ಕಳು ಹೊಲಗಳಿಗೆ ನುಗ್ಗಿ, ಬಿತ್ತನೆಯಂತೆ, ಸಾಲುಗೊಬ್ಬರವಂತೆ, ಮಳೆಯಂತೆ, ಬೆಳೆಯಂತೆ, ಕುಮುದವ್ವನ ಜಾತ್ರೆಯಂತೆ - ಹೀಗೆ ಎಷ್ಟೆಲ್ಲ ಕಾರ್ಯಗಳಲ್ಲಿ ತೊಡಗಿರುತ್ತಿದ್ದರು. ಆ ಹುರುಪಳಿಸುವ ಬಿಸಿಲು, ಮಳೆಗಾಲದ ಮಳೆಯ ಸೆಳಕು, ಸೂಸಿ ಬರುವ ಆಷಾಢದ ಗಾಳಿ, ಕಾಲಿಗಂಟುವ ಹಸಿಮಣ್ಣು, ಮೋಡಗಳ ಮರೆಯಲ್ಲಿ ಸೂರ್ಯ ಅಡಗುವ, ಹೊರಬರುವ ಕಣ್ಣಮುಚ್ಚಾಲೆಯಾಟ - ಇವ್ಯಾವೂ ಅರಮೆನಯಲ್ಲಿದ್ದವರ ಪಾಲಿಗೆ ಇರಲೇ ಇಲ್ಲ. ಅಲ್ಲೇ ಅವರ ಗೋಡೆಯಾಚೆ ಇರುವ ಋತುಮಾನಗಳು ಅರಮನೆಯ ಒಳಕ್ಕೆ ಕಾಲಿಡುತ್ತಿರಲಿಲ್ಲ. ಅಥಾ ಅರಮನೆಯ ಹವಾಮಾನ ನೋಡಿ ಹೊರಗೆ ಯಾವ ಋತುಮಾನ ಇದೆಯೆಂದು ಹೇಳುವುದು ಸಾಧ್ಯವಿರಲಿಲ್ಲ. ಹಾಗೆಂದೇ ಅರಮನೆಯಲ್ಲಿದ್ದವರ ನಿಟ್ಟುಸಿರು ಊರವರಿಗೆ ತಾಗುತ್ತಿರಲಿಲ್ಲ. ಅರಮನೆಯ ಒಳಗೊಂದು ಹವಾಮಾನ ಹೊರಗೊಂದು ಹವಾಮಾನ! ನಮ್ಮ ಪಕ್ಕದಲ್ಲಿದ್ದೂ ಅದು ನಮಗೆ ಪರಕೀಯವಾಗಿತ್ತು. ಕಥೆಯಾಗಿತ್ತು....

ನಾನು ಹೀಗೆ ಯೋಚನೆ ಮಾಡುತ್ತಿದ್ದಾಗ ನನ್ನ ಮಿತ್ರನ ದನಿ ಕೇಳಿಸಿತು.

“ಅಲ್ಲಪ್ಪಾ ನೀ ಯಾಕ ಆ ಅರಮನಿ ಬಗ್ಗೆ ಒಂದ ಕಾದಂಬರಿ ಬರೀಬಾರ್ದು?”

- ಕೂತು ಕೂತು ಬೇಸರವಾಯ್ತೆಂದು ತೋರುತ್ತದೆ, ಕೇಳಿದ್ದ. ಈ ಮಾತು ಕೇಳಿ ಒಮ್ಮೆಲೆ ಬೆಂಕಿ ತುಳಿದವರಂತೆ ಚುರುಕಾದೆ. ಇದು ತುಂಬ ಅನಿರೀಕ್ಷಿತ ಪ್ರಶ್ನೆ. ಈ ತನಕ ಇಂಥ ಆಲೋಚನೆಯೇ ನನಗೆ ಹೊಳೆದಿರಲಿಲ್ಲ. ಅರಮನೆಯ ಘಟನೆಗಳು ಕಥೆಯಾಗಿಯಾದರೂ ನನಗೂ ಅಷ್ಟಿಷ್ಟು ಗೊತ್ತಿರುವುದರಿಂದ ಈ ಪ್ರಶ್ನೆ ಕೇಳುವುದಕ್ಕೆ ಅವನ ಅಂತರಂಗದಲ್ಲೇನಾದರೂ ಕುಹಕವಿದೆಯೋ ಎಂದು ನೋಡಿದೆ. “ಹಂಗ್ಯಾಕ ನೋಡತೀಯೋ?” ಅಂದ.

“ಬರೀಬಹುದು”.

- ಎಂದು ಅರ್ಧ ಸ್ವಗತಕ್ಕೆ, ಅರ್ಧ ನನ್ನ ಮಿತ್ರನಿಗೆಂಬಂತೆ ಹೇಳಿದೆ.

“ಬರೀಭೌದೇನು? ಬರಿ ಅಂದರ…?

- ಎಂದು ಸಿಡುಕಿನಿಂದ ಆಜ್ಞೆಯನ್ನೇ ಮಾಡಿದ.

“ಬರಿ ಅಂದರ ಹೆಂಗೊ? ಎಷ್ಟಂದರೂ ನಾ ಅದನ್ನ ಹೊರಗಿನಿಂದ ಕಂಡವ. ನನಗೇನ ತಿಳಿದೀತು?”

- ಅಂದೆ.

“ನಿನಗ ನೋಡಪಾ. ಫರ್ಸ್ಟ್‌ಹ್ಯಾಂಡ್ ಇನ್‌ಫಾರ್ಮೇಷನ್ ಸಿಗಬೇಕಂದರ ಶೀನಿಂಗವ್ವನಃ ಸೈ. ಊರಿಗಿ ಹೋಗು. ಹೆಂಗೂ ಶೀನಿಂಗವ್ವಿನ್ನೂ ಜೀವಂತ ಇದ್ದಾಳ. ಕೇಳಿ ಬರಿ.”

- ಎಂದು ಹೇಳಿ, “ಯಾವಾಗ ಹೋಗ್ತಿ?” ಎಂದು ದುಂಬಾಲು ಬಿದ್ದ. ನಾನಿನ್ನೂ ಬರೆಯುವುದನ್ನೇ ನಿಶ್ಚಯಿಸಿರಲಿಲ್ಲ. ಆಗಲೇ ‘ಯಾವಾಗ ಹೋಗ್ತಿ?’ ಎಂದು ಕೇಳಿದರೆ ಏನು ಹೇಳಲಿ?

“ಹೋಗೋಣ, ಹೋಗೋಣ ಸಡುವಾಗಲಿ” - ಅಂದೆ.

“ನಿಂದ ಯಾವಾಗ್ಲೂ ಹಳೀಹಾಡ ಇದ್ದದ್ದಃ. ನಾಳಿ ಹರಾಜಾಗಿ ಹೋಯ್ತಂದರ ಮುಂದ ಅರಮನೀಗಿ ಯಾರು ಬರ್ತಾರೋ, ಎಂತೋ! ನೋಡಕ ಇದಃ ಆಕಾರದಾಗ ಸಿಕ್ಕೀತೋ ಇಲ್ಲೋ! ಇದಃ ಹರುಪಿನಾಗ ಹೋಗಿ ಬರದ ಬಿಡಲ್ಲ. ಈಗಂತೂ ಅವನವ್ವನ ಅರಮನಿ ಭೀಕೋ ಅಂತ ಕಂಡವರ ಕರುಳು ಬಾಯಿಗಿ ಬರೋಹಾಂಗ ಕಾಣತೈತಿ. ಹೋಗಿ ಒಂದ ಸಲ ನೋಡಿದರೆ ಸಾಕು, ಗ್ಯಾರಂಟಿ ನೀ ಏನಾರ ಬರದಃ ಬರೀತಿ. ನನ್ನ ಮಾತ ಖರೆ ಸುಳ್ಳೋ, ಬೇಕಾದರ ಒಮ್ಮಿ ಹೋಗಿ ನೋಡಿ ಬಾ, ನಿನಗಃ ಗೊತ್ತಾಗತೈತಿ.”

- ಎಂದು ಹೇಳಿ ಹೊರಟುಹೋದ.

ಅವನು ಹೋದಮೇಲೂ ಅದನ್ನೇ ಧ್ಯಾನಿಸುತ್ತ ಕೂತೆ. ನಾನಾಗಲೇ ಹೇಳಿದಂತೆ ಅರಮನೆಯ ನೇರ ಅನುಭವ ಇಲ್ಲದಿದ್ದರೂ ಒಳಗೆ ನಡೆದದ್ದಕ್ಕೆ ಹೊರಗಿನ ಅಂದರೆ ಊಡಿನ ಪ್ರತಿಕ್ರಿಯೆಗಳಲ್ಲಿ ಪ್ರತ್ಯಕ್ಷ ಭಾಗವಹಿಸಿದ್ದೆ. ಅದೇ ಧೈರ್ಯದಿಂದ ಬರೆಯುವ ಮನಸ್ಸು ಮಾಡಿದೆ. ಹಾಗೂ ಬರುವ ಸೂಟಿಗೆ ಶಿವಾಪುರಕ್ಕೆ ಹೋಗುವುದೆಂದು ನಿರ್ಧರಿಸಿದೆ.

ವಾಚಕ ಮಹಾಶಯರಲ್ಲಿ ಕ್ಷಮೆ ಕೋರಿ ಒಂದು ಮಾತನ್ನು ಈಗಲೇ ಸ್ಪಷ್ಟಪಡಿಸುತ್ತೇನೆ. ಶಿವಾಪುರದಂಥ ಹಳ್ಳಿಯಲ್ಲಿ ಅರಮನೆಯಿರುವುದೆಂದರೆ ಏನರ್ಥ? ಬಹುಶಃ ಇದು ಜನಪದ ಕಥೆಗಳಲ್ಲಿ ಬರುವಂಥ ಅರಮನೆಯಿರಬೇಕೆಂದು ನೀವು ಭಾವಿಸಬಹುದು. ಮೈಸೂರಿನ ಅರಮನೆಯನ್ನು ನಾನೂ ಕಂಡಿದ್ದೇನೆ. ಮೈಸೂರಿನದು ರಾಜರ ಅರಮನೆಯಾದರೆ ಶಿವಾಪುರದ್ದು ದೇಸಾಯರ ಅರಮನೆ. ವಿಸ್ತಾರ ಮತ್ತು ಗಾತ್ರದಲ್ಲಿ ಅದಕ್ಕಿಂತ ಇದು ಬಹಳ ಚಿಕ್ಕದು. ಆದರೆ ಅರಮನೆಗೆ ಭೌತಿಕ ಅಸ್ತಿತ್ವವಿರುವ ಹಾಗೆ ಮಾನಸಿಕ ಅಸ್ತಿತ್ವವೂ ಒಂದಿರುತ್ತದಲ್ಲ? ಶಿವಾಪುರದಲ್ಲಿ ಹುಟ್ಟಿ ಬೆಳೆದವರಿಗೆ ಇದು ಮೈಸೂರರಮನೆಗಿಂತ ಯಾವ ರೀತಿಯಲ್ಲೂ, ಕೊನೇಪಕ್ಷ ಕಡಿಮೆಯದಂತೂ ಅಲ್ಲ. ನಮ್ಮ ಊರಿನದು ಹದಿನಾಲ್ಕೂರಿನ ಇಪ್ಪತ್ತೆರಡು ಸಾವಿರ ಎಕರೆ ಜಮೀನಿನ ದೇಸಗತಿ. ಇಲ್ಲಿಯ ದೇಸಾಯರಿಗೂ ಮಹಾರಾಜರೆಂದೇ ಸಂಬೋಧಿಸುವ ಬಿರುದಾಳಿಗಳಿದ್ದವು. ಕೊನೆಯ ಸರಗಂ ದೇಸಾಯರಿಗೆ

“ಮಹಾರಾಜ” ಎಂದು ಜನ ಕರೆಯುವುದನ್ನು ನಾನೇ ಕೇಳಿದ್ದೇನೆ. ಈ ಮನೆತನದ ಹಿಂದಿನ ಒಬ್ಬ ದೇಸಾಯರಿಗೆ 'ಮೂರು ಲೋಕದ ಗಂಡ' ನೆಂಬ ಬಿರುದಿತ್ತು. ಎಲ್ಲಾ ಅರಮನೆಗಿರುವಂತೆ ಇದಕ್ಕೂ ಚರಿತ್ರೆಯಿದೆ.

ಇದು ಒಂದು ಕಾಲಕ್ಕೆ ಈ ಭಾಗದಲ್ಲೆಲ್ಲ ಅದ್ದೂರಿಯಿಂದ ಮೆರೆದ ಅರಮನೆಯೆಂಬುದರಲ್ಲಿ ಸಂದೇಹವೇ ಇಲ್ಲ. ಹುಲಿ ಕೊಂದವರಿಂದ ಹಿಡಿದು ಯುದ್ಧ ಮಾಡಿ ಗೆದ್ದವರವರೆಗೂ ಇಲ್ಲಿಯವರ ವಂಶಾವಳಿಯಿದೆ. ಅರಮನೆಯ ಶ್ರೀಮಂತಿಕೆಯ ಬಗ್ಗೆ ಜನಪದ ಕಥೆಗಳೇ ಇವೆ. ಬೆಳ್ಳಿಯ ರೂಪಾಯಿಗಳನ್ನು ಕಲ್ಲಿನ ಮೇಲೆ ಬಾರಿಸಿ ಬಾರಿಸಿ ಪರೀಕ್ಷಿಸುತ್ತಿದ್ದ ಕಾಲ ಅದು. ಹಾಗೆ ಬಾರಿಸಿ ಬಾರಿಸಿ ತಗ್ಗುಬಿದ್ದು ಒಳಕಲ್ಲಾದ ನಾಕೈದು ಕಲ್ಲುಗಳು ಈಗಲೂ ಅರಮನೆಯಲ್ಲಿವೆಯೆಂದು ಹೇಳುತ್ತಾರೆ. ಹಿಂದಿನ ಒಬ್ಬ ದೇಸಾಯಿ ಬರೀ ಬೆಳ್ಳಿಯ ರೂಪಾಯಿ ಮತ್ತು ಚಿನ್ನದ ಆಭರಣಗಳನ್ನು ಏಳು ತಾಮ್ರದ ಹಂಡೆಗಳಲ್ಲಿ ಹಾಕಿ ಹುಗಿದಿರುವನೆಂದೂ ಜೋಡುಹೆಡೆಯ ಸರ್ಪವೊಂದು ಸದಾ ಆ ನಿಧಿಗೆ ಕಾವಲಿದೆಯೆಂದೂ ಜನ ಹೇಳುತ್ತಾರೆ. ಆದರೆ ಅಲ್ಲೊಂದು ಸರ್ಪವಿದ್ದದ್ದನ್ನು ಸ್ವಥಾ ನೋಡಿದ್ದಾಗಿ ನಮ್ಮಣ್ಣ ಹೇಳಿದ್ದು ನನಗೆ ನೆನಪಿದೆ.

ಅದರ ವೈಭವವನ್ನು ಹಾಡಿ ಹೊಗಳುವ ಜನರೇ ಇನ್ನೊಂದು ಕಥೆಯನ್ನೂ ಹೇಳುತ್ತಾರೆ. ಅದು ಅರಮನೆಯ ಶಾಪಕ್ಕೆ ಸಂಬಂಧಪಟ್ಟಿರುವಂಥದು. ಈಗಿನ ಅರಮನೆಯಿದೆಯಲ್ಲ, ಮೊದಲು ಅಲ್ಲಿ ಒಂದು ಪ್ರತೀಬನವಿತ್ತಂತೆ. ಅರಮನೆ ಕಟ್ಟುವುದಕ್ಕೆ ಅಷ್ಟೊಂದು ಉತ್ಕೃಷ್ಟವಾದ ಸ್ಥಳ ಬೇರೆ ಕಡೆ ಸಿಕ್ಕಲಿಲ್ಲವಾದ್ದರಿಂದ ಅಲ್ಲಿಯೇ ಕಟ್ಟಲು ಯೋಚಿಸಿ ಪ್ರತೀ ಗಿಡಿಗಳನ್ನು ಕಡಿಯುತ್ತ ಬಂದರು. ಅದಕ್ಕೆ ಜಂಗಮನೊಬ್ಬ ಅಡ್ಡಿಬಂದ. ದೇಸಾಯರ ಎದುರು ಒಬ್ಬ ಜಂಗಮ ಎದಕ್ಕೆ ಈಡಾದಾನು? ಅವನನ್ನು ಸರಿಸಿ ಕಟ್ಟತೊಡಗಿದರು. ಅದನು ಒದರ್ಯಾಡ ತೊಡಗಿದ. ಕೊನೆಗೆ ಪಾಯಕ್ಕೊಂದು ಬಲಿಯಾಗಬೇಕಿತ್ತಲ್ಲ, ಅವನನ್ನೇ ಹಾಕಿ ಕಟ್ಟಿದರು. ಸಾಯುವಾಗ ಅವನು 'ಅರಮನ್ಯಾಗ ಪ್ರತೀಬನ ಬೆಳೀಲೋ' ಎಂದು ಶಾಪಹಾಕಿ ಬೂದಿ ಎಸೆದನಂತೆ. ಶಾಪವಿಲ್ಲದ ಶ್ರೀಮಂತರ್ಯಾರಿದ್ದಾರೆ? ಈ ಕಥೆಯನ್ನು ನಮ್ಮೂರವರು ಕೇಳುವವರಲ್ಲಿ ಭಯವುಂಟಾಗುವ ಹಾಗೆ ಹೇಳುತ್ತಾರೆ. ಮತ್ತು ಈ ಕಥೆ ಅರಮನೆಯ ಚರಿತ್ರೆಯ ಒಂದು ಅವಿಭಾಜ್ಯ ಅಂಗವೆಂಬಂತೆ ಬೆಳೆದುಬಂದಿದೆ. ಒಬ್ಬೊಬ್ಬರು ಒಂದೊಂದು ಥರ ಹೇಳಿದರೂ ಒಟ್ಟು ಅರಮನೆ, ಪ್ರತೀಬನ, ಜಂಗಮ, ಶಾಪ - ಇವಿಷ್ಟು ವಿಷಯಗಳು ಪ್ರತಿಯೊಂದರಲ್ಲೂ ಬರುವುದರಿಂದ, ಅವರು ಸೇರಿಸುವ ಭಾವುಕ ವಿವರಗಳನ್ನು ಸುಲಿದು ಈ ಕಥೆಯ ಸಾರಾಂಶವಷ್ಟನ್ನೇ ನಿಮ್ಮ ಮುಂದೆ ಹೇಳಿದ್ದೇನೆ.

ಮುಂದೆ ಇನ್ನೊಬ್ಬ ಜಂಗಮ ಈ ಅರಮನೆಯ ಬದುಕಿನಲ್ಲಿ ಕಾಲು ಹಾಕುವುದಿದೆ. ಈ ವಂಶದ ಹಿಂದಿನ ಒಬ್ಬ ದೇಸಾಯಿಗೆ ತುಂಬಾ ಚೆಲುವೆಯಾದ ಹೆಂಡತಿಯೊಬ್ಬಳಿದ್ದಳು. ಅವಳೆಷ್ಟು ಚೆಲುವೆಯೆನ್ನುವುದಕ್ಕೆ ಒಂದು ಸಣ್ಣ ಉದಾಹರಣೆಯಿದೆ. ತೌರುಮನೆಯಿಂದ ಅವಳನ್ನು ಸ್ವಯಂ ದೇಸಾಯಿ ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಕರೆತರುತ್ತಿದ್ದ. ಊರ ಸಮೀಪ ಬಂದಾಗ ರಾತ್ರಿಯಾಗಿ ಪಲ್ಲಕ್ಕಿ ಹೊತ್ತ ಒಬ್ಬ ಆಳು ಎಡವಿಬಿದ್ದು ಕಾಲ್ಮುರಿದುಕೊಂಡ. ತಕ್ಷಣ ದೇಸಾಯಿ ಆಳುಗಳು ಅವಳನ್ನು ಕಂಡಾರೆಂದು ಕಂಬಳಿಮೂಟೆಯಲ್ಲಿ ಅವಳನ್ನು ಸುತ್ತಿ ತಾನೇ ಹೊತ್ತುಕೊಂಡು ಅರಮನೆಗೆ ಬಂದನಂತೆ! ಒಮ್ಮೆ ಜಂಗಮನೊಬ್ಬ ಭಿಕ್ಷೆಗೆ ಬಂದಾಗ ಈ ಚೆಲುವೆಯಾದ ದೊರೆಸಾನಿಯೇ ನೀಡಲಿಕ್ಕೆ ಹೋದಳು. ಬಂದೊಡನೆ ಜಂಗಮ ಅವಳನ್ನೊಮ್ಮೆ ತೀಕ್ಷ್ಣ ದೃಷ್ಟಿಯಿಂದ ನೋಡಿ, ಏನು ಹೊಂಚಿದನೋ ಬೆನ್ನು ತಿರುಗಿಸಿ ಹೊರಟುಬಿಟ್ಟ. ಇವಳು “ಭಿಕ್ಷ ತಗೋ ಸ್ವಾಮಿ, ಭಿಕ್ಷ ತಗೋ ಸ್ವಾಮಿ” ಎಂದು ಹಲುಬುತ್ತ ಹೊಸ್ತಿಲು ದಾಟಿ, ಬೆನ್ನು ಹತ್ತಿದ್ದಳು. ಮುಂದೆ ಮುಂದೆ ಜಂಗಮ, ಹಿಂದೆ ಹಿಂದೆ ದೊರೆಸಾನಿ! ದೊರೆಸಾನಿಯ ಮುಖವನ್ನೇ ಕಾಣದ ಜನ ಅವಳ ಮತ್ತು ಜಂಗಮನ ಇಂಥ ವಿಚಿತ್ರ ವರ್ತನೆಗೆ ಬೆರಗಾಗಿ ಬಾಯ್ಗೆ ಬೆರಳಿಟ್ಟುಕೊಂಡು ನಿಂತವರು ನಿಂತಹಾಗೇ ನೋಡತೊಡಗಿದರು. ಜನ ನೋಡನೋಡುತ್ತಿದ್ದಂತೆ ಇಬ್ಬರೂ ಕುಮುದವ್ವನ ಹುಣಿಸೇ ಮೆರೆಯಲ್ಲಿ ಕಣ್ಮರೆಯಾದರಂತೆ! ಈ ಕಥೆಯಲ್ಲಿ ವಾಸ್ತವಾಂಶ ಎಷ್ಟಿದೆಯೆಂದು ನನಗೆ ತಿಳಿಯದು. ಅಂತೂ ಅರಮನೆಯವರಿಗೆ ಜಂಗಮರನ್ನು ಕಂಡರಾಗುವುದಿಲ್ಲವೆಂಬುದಂತೂ ನಿಜ. ಜಂಗಮರು ಭಿಕ್ಷೆ ಬೇಡುತ್ತ ಊರಾಡಿದರೂ ಅರಮನೆಯ ಹೊಸ್ತಿಲಿಗೆ ಮಾತ್ರ ಹೋಗುವುದಿಲ್ಲ. ಇವರೂ ಕರೆಯುವುದಿಲ್ಲ.

ಶಿವಾಪುರವೆಂದರೆ ದೇಸಾಯರ ಈ ಅರಮನೆಯೇ. ನೀವು ಅಷ್ಟು ದೂರದಿಂದ ನೋಡಿದರೆ ಒಡೆದು ಕಾಣುವುದು ಅದೊಂದೇ ಅರಮನೆ; ಎರಡಂತಸ್ತಿನ ಎತ್ತರವಾದ ಅರಮನೆ. ಉಳಿದ ಸುಮಾರು ನೂರಿನ್ನೂರು ಮನೆಗಳು ಮಣ್ಣಿನವು, ಮಣ್ಣಿನ ಮಾಳಿಗೆಯವು. ಊರಿನ ಯಾವ ಭಾಗದಲ್ಲಿ ನಿಂತು ನೋಡಿದರೂ ಕಾಣುವ ಕೆಂಪು ಹಂಚಿನ ಶ್ರೀಮಂತ ಅರಮನೆ ಹಾಗೂ ಉಳಿದ ಮಣ್ಣಿನ ಬಡಮನೆಗಳ ನಡುವಿನ ವ್ಯತ್ಯಾಸ ಯಾರ ಕಣ್ಣಿಗಾದರೂ ಹೊಡೆದು ಕಾಣಿಸುವಷ್ಟು ಸ್ಪಷ್ಟವಾಗಿದೆ. ಅರಮನೆಯ ಸುತ್ತ ಎತ್ತರವಾದ ಪೌಳಿ (ಕೌಂಪೌಂಡ್) ಯಿದ್ದು ಎಷ್ಟು ದೂರದಿಂದ ನೋಡಿದರೂ ಅದರ ಮೊದಲನೇ ಅಂತಸ್ತು ಕಾಣಿಸುವುದೇ ಇಲ್ಲ. ಅರಮನೆಯ ಎದುರಿಗೆ ಒಂದು ದೊಡ್ಡ ಆಲದಮರದ ಕಟ್ಟೆಯಿದೆ. ಹಿಂದೆ ಊರವರ್ಯಾರಾದರೂ ದೇಸಾಯರನ್ನು ಭೇಟಿ ಮಾಡಬೇಕಾದಾಗ, ನ್ಯಾಯ ಕೇಳುವುದಿದ್ದಾಗ ಇಲ್ಲೇ ಕಾಯಬೇಕಿತ್ತು. ಪೌಳಿಯೊಳಗಿನ ಅರಮನೆ ನನಗೆ, ನನ್ನಂಥ ಅನೇಕರಿಗೆ ಈಗಲೂ ದೊಡ್ಡ ರಹಸ್ಯ. ಯಾಕೆಂದರೆ ಈತನಕ ನಾನು ಪೌಳಿಯೊಳಗೆ ಕಾಲಿಟ್ಟವನೇ ಅಲ್ಲ. ನಿಜ ಹೇಳಬೇಕೆಂದರೆ ಭೂತಸ್ಥಾನದಷ್ಟೇ ಈ ಅರಮನೆ ನನ್ನಲ್ಲಿ ಭಯ ಹುಟ್ಟಿಸುತ್ತಿತ್ತು. ರಾತ್ರಿ ಒಬ್ಬಂಟಿಯಾಗಿ ನಾನೇನಾದರೂ ಅದರ ಅಕ್ಕಪಕ್ಕ ಹಾದುಹೋಗುವ ಸಂದರ್ಭ ಬಂದರೆ ಕಿರಿಚಿ ಹಾಡುತ್ತ ಓಡಿಹೋಗುತ್ತಿದೆ. ಜೊತೆಯಲ್ಲಿ ಯಾರಾದರೂ ಇದ್ದರೆ ಅವರ ಮೈಗೆ ಅಂಟಿಕೊಂಡೇ ನಡೆಯುತ್ತಿದ್ದೆ. ರಾತ್ರಿ ಒಂದ ಮಾಡುವುದಿದ್ದಾಗ ಆ ಕಡೆ ಬೆನ್ನು ಮಾಡಿ ಕೂರುತ್ತಿರಲಿಲ್ಲ. ಅಂಥ ಸಂದರ್ಭಗಳಲ್ಲಿ ಅಕಸ್ಮಾತ್ ಒಳಗಿನಿಂದ ಯಾವುದಾದರೂ ದನಿ ಕಿವಿಗೆ ಬಿದ್ದರೆ ಹತ್ತಾರು ಭಯಾನಕ ದೃಶ್ಯಗಳನ್ನು ಕಲ್ಪಿಸಿಕೊಂಡು ನಡುಗುತ್ತಿದ್ದೆ. ಒಮ್ಮೆ ನಮ್ಮಣ್ಣನ ಜೊತೆ ಅಲ್ಲಿ ಹಾಗು ಹೋಗುತ್ತಿದ್ದಾಗ ಒಳಗೆ ಯಾರೋ ಕಿರಿಚಿದ್ದು ಕೇಳಿ ಅಣ್ಣನನ್ನು ತಬ್ಬಿಕೊಂಡು ನಾನೂ ಕಿರುಚಿದ್ದು ನನಗಿನ್ನೂ ನೆನಪಿದೆ. ನನ್ನಣ್ಣ ಅದು ದೇಸಾಯರ ದನಿಯೆಂದು ಹೇಳಿದ್ದ. ಆದರೆ ನನಗದು ಹೆಣ್ಣಿನ ದನಿಯಂತೆ ಕೇಳಿಸಿತ್ತು. ಹೆದರಿದ್ದ ನನ್ನನ್ನು ಅಣ್ಣ ಎತ್ತಿಕೊಳ್ಳಲಿಲ್ಲ. ಯಾಕೆಂದರೆ ನನ್ನ ಚಡ್ಡಿ ಒದ್ದೆಯಾಗಿತ್ತು.

ಅರಮನೆಯಿಂದ ಮೇಲೆ ಅದಕ್ಕೊಂದು ಪ್ರಭಾವಳಿ ಇರಬೇಕಲ್ಲ. ಆ ಪ್ರಭಾವಳಿಯಲ್ಲಿ ಜನಕ್ಕೆ ಪ್ರವೇಶವಿರಲಿಲ್ಲ. ಹೊರಗೆ ನಿಂತವರೋ ಪ್ರಭಾವಳಿಯ ಬಗ್ಗೆ ಕೊನೇಪಕ್ಷ ಹೆಮ್ಮೆ ತಾಳಬೇಕೆಂದು ತಿಳಿಯದವರು. ಹೀಗ್ಯಾಕೆಂದು, ಅರಮನೆ ಮತ್ತು ಜನರ ಸಂಬಂಧ ಎಂಥದೆಂದು ತಿಳಿಯಬೇಕಾದರೆ ನೀವು ಶಿವಾಪುರದ ಗ್ರಾಮದೇವತೆ - ಕುಮುದವ್ವನ ವಿಷಯ ತಿಳಿಯಬೇಕು. ಊರ ಪಶ್ಚಿಮಕ್ಕೊಂಡು ಹುಣಿಸೇ ಮೆಳೆಯಿದೆ. ಅಲ್ಲೇ ಕುಮುದವ್ವನ ಗುಡಿಯಿರೋದು. ಮರಗಳಲ್ಲಿ ಹುಗಿದಿರೋದರಿಂದ ಒಡೆದು ಕಾಣುವುದಿಲ್ಲ. ಹುಣಿಸೇ ಮೆಳೆಯ ಬಗ್ಗೆ ಆಮೇಲೆ ಹೇಳುತ್ತೇನೆ. ಗುಡಿ ಮಾತ್ರ ತುಂಬ ವಿಚಿತ್ರವಾಗಿದೆ. ಎತ್ತರವಾದ ಹುಣಿಸೇ ಮರಗಳ ಅಂಚಿನಲ್ಲಿ ಮೊಳಕಾಲೆತ್ತರದ ಒಂದು ಪೌಳಿ. ಅದರ ಮಧ್ಯೆ ಮಡಕೆಯಾಕಾರದ ಎರಡಾಳೆತ್ತರದ ಗುಡಿ. ಚಿಕ್ಕಬಾಗಿಲಿದೆ. ತೆರೆದರೆ ಎದುರಿಗೆ ಅಡ್ಡಿಬಿಟ್ಟ ಬಿಳಿ ಪರದೆ ಬಿಟ್ಟು ಬೇರೇನೂ ಕಾಣಿಸುವುದಿಲ್ಲ. ಚಿಕ್ಕಂದಿನಲ್ಲಿ ನಾವು ಈ ಪರದೆಯನ್ನೆತ್ತಿ ನೋಡಿದ್ದೆವು. ಒಳಗೆ ತೊಡೆ ಗೀಸಿ ಕುಳಿತ ಒಂದು ಬತ್ತಲೆ ಹೆಣ್ಣಿನ ಶಿಲ್ಪವಿದ್ದ ಅದರ ಎರಡೂ ಕೈಗಳಲ್ಲಿ ಒಂದೊಂದು ಕಮಲಗಳಿವೆ. ಈ ಮೂರ್ತಿಗೆ ತಲೆ ಇಲ್ಲ. ಬದಲು ಅದರ ಸ್ಥಳದಲ್ಲೊಂದು ಅರಳಿದ ಕಮಲವಿದೆ. ಗುಡಿಯ ಈ ದೇವಿ ಕುಮುದವ್ವ, ನಮ್ಮ ಊರಿಗೆ ಪ್ರಸ್ತುತವಾದ ರೀತಿ ಮಾತ್ರ ವಿಚಿತ್ರವಾಗಿದೆ. ಕುಮುದವ್ವ ಎಂಬ ಹೆಸರೇನೋ ಸೈ. ಯಾಕೆಂದರೆ ಕೈಯಲ್ಲಿ ಕಮಲಗಳಿವೆ, ತಲೆ ರೂಪದಲ್ಲಿದೆ. ಹಿಂದೆ ಇದೊಂದು ತಾಂತ್ರಿಕರ ಸ್ಥಳವಾಗಿತ್ತೆಂಬುದರಲ್ಲೂ ಸಂದೇಹವಿಲ್ಲ. ಆದ್ದರಿಂದಲೇ ಏನೋ ಹೆಂಗಸರು ಈ ಗುಡಿಯ ಕಡೆಗೆ ತಪ್ಪಿ ಕೂಡ ಸುಳಿಯುವುದಿಲ್ಲ. ಹರಕೆ ಹೊತ್ತರೂ ಬೇಡಿಕೊಂಡರೂ ಸೇವೆ ಸಲ್ಲಿಸುವುದು ಮಾತ್ರ ಗಂಡಸರ ಮುಖಾಂತರವೇ. ಆದರೆ ಈ ದೇವಿಗೆ ಯಾರೇನು ಕಾಣಿಕೆ ಕೊಟ್ಟರೂ ಮುಡಿಪು ತೆತ್ತರೂ ಅದು ಕದ್ದು ತಂದುದಾಗಿರಬೇಕು. ಸ್ವಂತದ್ದಾಗಲಿ, ಸ್ವಂತ ಗಳಿಸಿದ್ದಾಗಲಿ ಖಂಡಿತ ಆಗಿರಕೂಡದು!

ವರ್ಷಕ್ಕೊಮ್ಮೆ ಯುಗಾದಿಯ ಸುತ್ತ ಈ ದೇವಿಯ ಜಾತ್ರೆಯಾಗುತ್ತದೆ. ಜಾತ್ರೆಯೆಂದರೆ ಅಕ್ಕಪಕ್ಕ ಊರವರು, ಗಂಡುಹೆಣ್ಣು ಸೇರಿ ಚಂದಾಗಿ ಆಚರಿಸುವಂಥದಲ್ಲ. ನಾಳೆ ಜಾತ್ರೆಯೆಂದರೆ ಈ ದಿನ ಮಧ್ಯಾಹ್ನದ ಹೊತ್ತು ಊರಿನ ಗಂಡಸರು ಮನೆಗೊಂದಾಳಿನಂತೆ ಬಂದು ಗುಡಿಯಲ್ಲಿ ಸೇರುತ್ತಾರೆ. ಎಲ್ಲರೂ ಬಂದರೆಂದಾಗ ದೇಸಾಯರ ಮನೆಯಿಂದ ಜೋಡು ತೆಂಗಿನಕಾಯಿ ತರುತ್ತಾರೆ. ಅವನ್ನು ಒಡೆದು, ಹಲಗೆ ಬಾರಿಸುತ್ತ ಬೆಳಗಾವಿಗೆ ಹೊರಡುತ್ತಾರೆ. ಹಲಗೆ ಸಪ್ಪಳ ಕೇಳಿದೊಡನೆ ಊರವರು ತಂತಮ್ಮ ಮನೆಯ

ಬಾಗಿಲುಗಳನ್ನು ಭದ್ರಪಡಿಸಿಕೊಂಡು ಒಳಗೇ ಕುಂತಿರುತ್ತಾರೆ. ಮತ್ತೆ ಅವರು ಬಾಗಿಲು ತೆಗೆಯುವುದು ಬೆಳಗಾವಿಗೆ ಹೋದ ಗಂಡಸರು ತಿರುಗಿ ಬಂದ ಮೇಲೆಯೇ. ಅಲ್ಲೀತನಕ ಕೂಸುಕುನ್ನಿ ಅತ್ತರಿಲ್ಲ, ಕಿರಿಚಿದರಿಲ್ಲ, ಸತ್ತರೂ ಇಲ್ಲ.

ಗಂಡಸರೆಲ್ಲರೂ ಒಟ್ಟಾಗಿ ಬೆಳಗಾವಿಗೆ ಹೋಗುತ್ತಾರಲ್ಲ, ಜಾತ್ರೆಯ ಪರಿಕರಗಳನ್ನು ಅಂದರೆ ಸೀರೆ, ಖಣ, ತೆಂಗಿನಕಾಯಿ, ಗೋಧಿ, ಬೆಲ್ಲ, ಕುರಿ, ಕೋಳಿ - ಇವನ್ನು ತರುವುದಕ್ಕೆ. ಅವು ಇಷ್ಟಿಷ್ಟಿರಬೇಕೆಂದು ಒಂದು ಲೆಕ್ಕವಿದೆ. ಅಷ್ಟನ್ನೂ ಅವರು ಕದ್ದು ತರಬೇಕು. ಕೊಂಡಲ್ಲ! ದೇವಿಯ ಮಹಿಮೆಯ ಎಂಥಾದ್ದೆಂದರೆ, ಇಷ್ಟು ವರ್ಷ ಜಾತ್ರೆ ಮಾಡಿದ್ದಾರೆ, ಒಂದು ಸಲವೂ ಶಿವಾಪುರದ ಒಂದು ಕುಳವೂ ಕದಿಯುವಾಗ ಇನ್ನೊಬ್ಬರಿಗೆ ಸಿಕ್ಕುಬಿದ್ದಿಲ್ಲ! ಕಳುವಿನಲ್ಲಿ ಪಾಲ್ಗೊಂಡವರು ಹೇಳುವುದೇನೆಂದರೆ ಸ್ವಥಾ ಪೋಲೀಸರು ಅಲ್ಲೇ ನಿಂತಿರುತ್ತಾರೆ. ಅವರ ಕಣ್ಣೆದುರಿನಲ್ಲೇ ಇವರು ಕದ್ದರೂ ಅವರಿಗೆ ಕಾಣಿಸುವುದಿಲ್ಲವಂತೆ! ದೇವಿಯ ಮಹಿಮೆಯೋ ಇವರ ಚಾಲಾಕುತನವೋ ಅಥವಾ ಬೆಳಗಾವಿ ಪೋಲೀಸರ ಮತ್ತು ಅಂಗಡಿಯವರ ಜಂಟೀ ಧಡ್ಡತನವೋ ಅಂತೂ ನಮ್ಮ ಊರವರು ಜಾತ್ರೆಯ ಕಳ್ಳತನದಲ್ಲಿ ಇನ್ನೊಬ್ಬರ ಕೈಗೆ ಸಿಕ್ಕುಬಿದ್ದಿಲ್ಲವೆನ್ನುವುದಂತೂ ನಿಜ. ದೇವಿಯ ಈ ಮಹಿಮೆಯನ್ನು 'ಸಾರಿಸಾರಿ ಹೇಳುವ' ನಾಕೈದು ಜನಪದ ಹಾಡುಗಳು ನಮ್ಮಲ್ಲಿವೆ. ಹೀಗೆ ಕದ್ದಾದ ಮೇಲೆ ಮಾಲು ಸಮೇತ ಎಲ್ಲರೂ ಒಟ್ಟಾಗಿ ಊರಿಗೆ ಹೊರಡುತ್ತಾರೆ. ಹದಿನೆಂಟು ಮೈಲು ಬರಿಗಾಲಲ್ಲಿ ನಡೆದುಕೊಂಡೇ ಬರಬೇಕು. ಯಾಕೆಂದರೆ ಕದ್ದ ಮಾಲಿನಲ್ಲಿ ಎರಡು ಮೇಕೆಗಳೂ ಇರುತ್ತವೆ.

ಊರು ತಲುಪಬೇಕಾದರೆ ಮಾರನೇ ದಿನ ಹೊತ್ತು ನೆತ್ತಿಗೇರಿರುತ್ತದೆ. ಬರುವಾಗಲೂ ಹಲಗೆ ಬಾರಿಸಿಕೊಂಡು ಊರಿನಲ್ಲಿ ಹಾದುಕೊಂಡು ಕದ್ದಮಾಲನ್ನು ಪ್ರದರ್ಶಿಸಿಕೊಂಡು ಬರುತ್ತಾರೆ. ಆ ಸಪ್ಪಳ ಕೇಳಿಯೇ ಊರವರು ಬಾಗಿಲು ತೆರೆಯೋದು. ಕಳ್ಳಭಕ್ತರಿಗೆ ನೀರುನೀಡಿ, ಆಯಾಯ ಮನೆಯವರು ತಂತಮ್ಮ ಗಂಡಸರಿಗೆ ತಮ್ಮ ಮನೆಯ ಹರಕೆಯ ಬಲಿಪ್ರಾಣಿಯನ್ನು (ಅದೂ ಆಯಾ ವರ್ಷದ ಅವಧಿಯಲ್ಲಿ ಕದ್ದು ತಂದುದೇ) ಕೊಡುತ್ತಾರೆ. ಬಂಟರು ಹಾಗೇ ದೇವಿಯ ತನಕ ಬಂದು ಮೊದಲು ಬೆಳಗಾವಿಯ ಮೇಕೆಗಳನ್ನು ಬಲಿಕೊಟ್ಟು ಆಮೇಲೆ ತಂತಮ್ಮ ಬಲಿಗಳನ್ನು ಕತ್ತರಿಸಿ ಮನೆಗೆ ತರುತ್ತಾರೆ. ಅದನ್ನೇ ಅಡಿಗೆ ಮಾಡಿ ಉಂಡು ಬಯಲಾಟವಾಡಿ ಸಂತೋಷಪಡುತ್ತಾರೆ. ಇಲ್ಲಿಗೆ ಕುಮುದವ್ವನ ಜಾತ್ರೆ ಮುಗಿದಂತೆ. ಜಾತ್ರೆಯ ಒಟ್ಟಾರೆ ತತ್ವ ಏನೇ ಇರಲಿ, ಅದು ಬಂದಾಗ ನಮಗೆಲ್ಲ ಭಾರೀ ಆನಂದವಾಗುತ್ತಿತ್ತು. ಆ ಮೆರವಣಿಗೆ, ಆ ಕುಣಿತಗಳು, ಅವರು ಹೇಳುತ್ತ ಬರುವ ಕಳ್ಳತನದ ಪವಾಡಗಳು, ಅಂದಿನ ಬಯಲಾಟ - ಅಯ್ಯೋ ಈ ಹಬ್ಬ ಇಷ್ಟು ಬೇಗ ಕಳೆದು ಹೋಯಿತಲ್ಲಾ - ಎಂದು ಹಳಹಳಿಸುವಂತೆ ಮಾಡುತ್ತಿದ್ದವು. ಹಬ್ಬಹರಿದಿನಗಳಲ್ಲಿ ಈ ಜನ ಹಾಕುವ ಒಂದು ಜನಪ್ರಿಯ ವೇಷವಿದೆ. 'ಗುಡದಪ್ಪನ ಸೋಗು' ಎಂದು ಅದಕ್ಕೆ ಹೆಸರು. ಹಿಂದೆ ಗುಡದಪ್ಪ ಎಂಬಾತ ತಾಯಿ ಕುಮುದವ್ವನನ್ನು ಒಲಿಸಿಕೊಂಡಿದ್ದನಂತೆ. ಆತ ತಾಯಿಯ ಎದುರು ಕೂತು "ತಾಯೀ ಇಂದ ನಿನಗೇನ ಆದೆ ಆಗೇತಿ?" ಎಂದು ಕೇಳುತ್ತಿದ್ದನಂತೆ. ತಾಯಿ ಅವನಿಗೆ ಪ್ರತ್ಯಕ್ಷಳಾಗಿ "ಇಂಥಾ ಊರಿನ, ಇಂಥವನ ಮನೆಯನ್ನ, ಇಂಥಾ ಸಂಚಿನಿಂದ ಒಡೆದು ಇಂತಿಂಥಾ ವಸ್ತು ಒಡವೆ ಕದ್ದು ತಗಂಬಾ" ಎಂದು ಅಪ್ಪಣೆ ಕೊಡುತ್ತಿದ್ದಳಂತೆ! ಆ ದೇವಿಯೋ, ಆ ಭಕ್ತರೋ... ಸುಳ್ಳು ಯಾಕೆ, ಅಭಿಮಾನ ಬದಿಗಿರಿಸಿ ಹೇಳುತ್ತೇನೆ - ನನ್ನ ಊರಿನ ಜನ ಕಳ್ಳರೇ!

ಆದರೆ ನಮ್ಮ ಊರಿನಲ್ಲಿ ಮಾತ್ರ ಕಳ್ಳತನಗಳೇ ಆಗುವುದಿಲ್ಲ ಎನ್ನುವುದನ್ನು ನೀವು ಮರೆಯಬಾರದು. ಅದಕ್ಕೆ ದೇವಿಯ ಶಾಪವಿದೆ, ಕಠಿಣ ಶಿಕ್ಷೆಯಿದೆ. ಕಾರಣ ಹೀಗಿರಬಹುದು: ದೇಸಾಯರ ಮನೆತನವೊಂದನ್ನು ಬಿಟ್ಟರೆ ಊರಿನ ಎಲ್ಲರೂ ಬಡವರೇ, ಇದ್ದ ಜಮೀನೆಲ್ಲ ದೇಸಗತಿಯದು. (ಈಗೀಗ 'ಉಳುವವನೇ ಭೂಮಿಯ ಒಡೆಯ' ಎಂಬ ಕಾಯ್ದೆ ಬಂದಾಗಿನಿಂದ ಭೂಮಾಲೀಕರಾಗಿದ್ದಾರೆ ಅಷ್ಟೇ) ಆದ್ದರಿಂದ ಊರಿನ ಜನಗಳೆಲ್ಲ ಆ ಮನೆತನದ ಆಳುಗಳು; ಜೀತದಾಳುಗಳಾಗಿರಬಹುದು. ಚಾಕರಿಯವರಾಗಿರಬಹುದು, ಹರಕೆ ಆಳುಗಳಾಗಿರಬಹುದು, ಇಲ್ಲ ಮಾರಿಕೊಂಡವರಾಗಿರಬಹುದು. ಆಳುಗಳೆಂದ ಮೇಲೆ ಅವರಿಗೆ ಬೇಕಾದಷ್ಟು ಆಹಾರವಗೈರೆ ಸಿಕ್ಕದಿದ್ದಾಗ ಕಳ್ಳತನಕ್ಕಿಳಿಯುವುದು ಸಹಜ. ಆದರೆ ಸ್ವಂತ ಊರಿನಲ್ಲಿ ಮಾತ್ರ ಕಳ್ಳತನ ಮಾಡಬಾರದು. ಯಾಕೆಂದರೆ ಏನು ಕಳ್ಳತನ ಮಾಡಿದರೂ ದೇಸಗತಿಯೇ ಗುರಿಯಾಗುತ್ತದಾದ್ದರಿಂದ - ಹಿಂದಿನ ದೇಸಾಯರೇ ಕಳ್ಳತನಕ್ಕೆ ದೇವಿ ಆರಾಧನೆಯ ರೂಪ ಕೊಟ್ಟಿರಬಹುದು. ಇಲ್ಲದಿದ್ದರೆ ತಾಂತ್ರಿಕರ ದೇವಿಯೊಬ್ಬಾಕೆ ಕಳ್ಳತನ ಕಲಿಸುವುದು, ಕಳ್ಳಮಾಲು ಮಾತ್ರ ಸ್ವೀಕರಿಸುವುದು, ಊರಿನಲ್ಲಿ ಕಳ್ಳತನ ಮಾಡಬಾರದೆಂದು ಕಟ್ಟಳೆ ಮಾಡುವುದು - ಎಂದರೇನರ್ಥ ಕಳ್ಳರಾಗುವುದಕ್ಕೆ ಯಾರು ಬಯಸುತ್ತಾರೆ? ಶತಮಾನಗಳಿಂದ

ತಾವು ಕಳ್ಳರಾಗಿ, ಅಪರಾಧಿಗಳಾಗಿ ಬಂದುದಕ್ಕೆ ಕುಮುದವ್ವನ ಮೂಲಕ ದೇಸಗತಿ ಮಾಡಿದ ವ್ಯವಸ್ಥೆಯೇ ಕಾರಣವೆಂದು ಜನರ ಕರಿಮನಸ್ಸಿಗೆ ಹೊಳೆಯುತ್ತ ಬಂದಿತ್ತು. ಅದು ಪೂರ್ತಿ ಗೊತ್ತಾಗಿ ಅವರು ಕಣ್ಣು ತೆರೆದಾಗ ಎದುರು ಸಿಕ್ಕವನು ಅರಮನೆಯ ಕೊನೆಯ ದೇಸಾಯಿ. ಅಪರಾಧಿ ಅವನಲ್ಲ ನಿಜ. ಅಷ್ಟೇ ಅಲ್ಲ, ಅವನು ಯಾವನೇ ದೊಡ್ಡಮನುಷ್ಯನಿಗಿಂತ ಕೊಂಚ ಮಾತ್ರ ಕಮ್ಮಿಯೆಂದು ನಾನು ಕೈ ಎತ್ತಿ ಹೇಳಬಲ್ಲೆ. ಆದರೆ ಆತ ಹಿಂದಿನದವರ ಆಸ್ತಿಗೆ ಮಾತ್ರವಲ್ಲ, ಅಪರಾಧಕ್ಕೂ ಹೊಣೆಗಾರನಾಗಬೇಕಾಯ್ತು. ಅವನು ಪಂಚಾಯ್ತಿ ಎಲೆಕ್ಷನ್ನಿಗೆ ನಿಂತಾಗ, ಜನ ಅವನನ್ನಲ್ಲ ಆ ವಂಶದ ಭೂತಕಾಲ ನೋಡಿ ಸೋಲಿಸಿಬಿಟ್ಟರು. ಒಮ್ಮೆ ಜನ ಸ್ವತಂತ್ರರಾದರೋ, ಮುಂದೆ ಅರಮನೆಯನ್ನು ಅದರಷ್ಟಕ್ಕೆ ಬಿಟ್ಟು ಊರಿನ ಯಾವ ಚಟುವಟಿಕೆಯಲ್ಲೂ ಅದು ಭಾಗಿಯಾಗದಂತೆ ನೋಡಿಕೊಂಡರು. ಹಾಗೂ ಅರಮನೆಯಲ್ಲಿ ಏನು ನಡೆದರೂ, ಅದಕ್ಕೆ ನಿರ್ಲಿಪ್ತರಾಗಿ ಉಳಿದರು. ಅರಮನೆಯ ಕೊನೆಗಾಲದ ಈ ಕಥೆಯನ್ನು ಹೇಳುವುದೇ ನನ್ನ ಉದ್ದೇಶ. ಆದರೆ ಅದರ ಪ್ರತ್ಯಕ್ಷ ಸ್ಪರ್ಶ ಇರಲಿಲ್ಲವೆಂದನಲ್ಲ, ಶೀನಿಂಗವ್ವನನ್ನು ಕೇಳುವುದಕ್ಕೆ, ಅವಳಿಂದ ಕಥೆ ಹೊರಡಿಸಲಿಕ್ಕೆ ಸೂಟಿಯಲ್ಲಿ ಶಿವಾಪುರಕ್ಕೆ ಹೋದೆ.

* * *

## ಅಧ್ಯಾಯ - ೧

ಶಿವಾಪುರದ ಬಳಿ ನಾನು ಬಸ್ಸಿನಿಂದಿಳಿದಾಗ ಮಟಮಟಾ ಮಧ್ಯಾಹ್ನವಾಗಿತ್ತು. ಸುತ್ತ ಯಾರೂ ಇರಲಿಲ್ಲ. ಅವು ಬೇಸಿಗೆಯ ದಿನಗಳಾದ್ದರಿಂದ ಊರವರ್ಯಾರೂ ಹೊಲಗಳ ಕಡೆಗೆ ಸುಳಿಯುವುದೂ ಇಲ್ಲ. ಇಕ್ಕೆಡೆಗಳಲ್ಲಿ ದಟ್ಟವಾಗಿ ಬೆಳೆದ ಕಳ್ಳಿ, ಅದರ ಮಧ್ಯೆ ಇಕ್ಕಟ್ಟಾದ ದಾರಿ, ಸುಡುಸುಡುವ ಬಿಸಿಲು, ಒಂದಾದರೂ ಹಕ್ಕಿಯ ಉಲುವಿಲ್ಲ. ಊರು ದೂರವಿಲ್ಲದಿದ್ದರೂ ಒಟ್ಟಾರೆ ಬೋರಾಯಿತು. ಮಲೆನಾಡಿನ ನಿಸರ್ಗ ಒಂದು ಥರವಾದರೆ, ಬಯಲಸೀಮೆಯ ನಿಸರ್ಗ ಇನ್ನೊಂದು ಥರ. ಥರಾವರಿ ಸಮೃದ್ಧ ಹಸಿರಿನಿಂದ ಮೈಮನಸ್ಸುಗಳಿಗೆ ತಂಪೆರೆದು ಧನ್ಯವಾಗಿರುವ ರೀತಿ ಮಲೆನಾಡಿನದು. ಅಲ್ಲಿ ಬರುವ ಹಿಂಸಪ್ರಾಣಿಗಳು ಕೂಡ ಆ ಸೌಂದರ್ಯದ ಚಿತ್ತಾರಗಳಾಗಿ, ಅವುಗಳ ಕ್ರೌರ್ಯ ಸುಂದರ ಅನುಭವವಾಗುತ್ತದೆ. ಬಯಲಸೀಮೆ ಹಾಗಲ್ಲ. ಎತ್ತ ನೋಡಿದರತ್ತ ಬೆತ್ತಲಾಗಿ ಬಿದ್ದ ಬೋಳುಬಂಡೆಗಳು, ಒಣಗಿ ತಲೆ ಕೆದರಿಕೊಂಡ ಗಿಡಮರಗಳು, ಬಿಸಿಲಿಗೆ ಸುಟ್ಟು ಕರಕಾದ ಎರೆನೆಲ, ಇವುಗಳ ಮಧ್ಯೆ ಎಲ್ಲಾದರೂ ಹಸಿರು ಕಣ್ಣಿಗೆ ಬಿದ್ದರೂ ಸಾಕು, ಕಣ್ಣಿಗೆ ಹಿಂಸೆಯಾಗುತ್ತದೆ. ತನ್ನ ಬೋಳುತನ, ಬಂಜೆತನ, ನಿಷ್ಕ್ರಿಯತೆಗಳಿಂದ ಇಲ್ಲಿಯ ನಿಸರ್ಗ ಪಂಚೇಂದ್ರಿಯಗಳನ್ನು ಇರಿಯುತ್ತದೆ. ಇರಿದು ಇರಿದು ತನ್ನ ಹಾಜರಿಯನ್ನು ಮನಸ್ಸಿನ ಮೇಲೆ ಹೇರುತ್ತದೆ. ಮತ್ತು ಮನುಷ್ಯನನ್ನು ತನ್ನ ಹಾಗೇ ಕ್ರೂರಿಯನ್ನಾಗಿ ಮಾಡುತ್ತದೆ. ಇಲ್ಲಿ ಆಗುವಷ್ಟು ಕೊಲೆ ಖೂನಿ ಹಾದರಗಳು ಬೇರೆ ಕಡೆ ಆಗದೇ ಇರುವುದಕ್ಕೆ ಇದೇ ಕಾರಣವಾಗಿರಬಹುದು. ಇಂಥ ಧಗಧಗಿಸುವ ಬಿಸಿಲಿನಲ್ಲಿ ಎಂಥಾ ಸಮಚಿತ್ತನ ಪಿತ್ಥವೂ ನೆತ್ತಿಗೇರಿ ಆತ ಅಘಟಿತ ಘಟನೆಗಳನ್ನು ಮಾಡುವಂತೆ ಪ್ರೇರೇಪಿಸುವುದು ಸಾಧ್ಯ.

ಇಲ್ಲಿ ಅನೇಕ ದಿನ ಘಟನೆಗಳು ಜರುಗುವುದೇ ಇಲ್ಲ. ದಟ್ಟ ಬಿಸಿಲು, ದಟ್ಟ ಕತ್ತಲೆಗಳನ್ನುಳಿದು. ನಿಸರ್ಗದ ಇಂಥ ನಿಷ್ಕ್ರಿಯತೆಯಿಂದ ಮನುಷ್ಯನಿಗೆ ಬೋರ್ ಬೋರಾಗಿ ಕೊನೆಗೆ ಇನ್ನೇನು 'ದೇವರು ನಮ್ಮನ್ನು ಕಾಪಾಡಲಿಲ್ಲ' ಎನ್ನುವಾಗ ಮಳೆಗಾಲ ಬರುತ್ತದೆ. ಆಗ ಇಲ್ಲಿಯ ಜನರ ಕಣ್ಣಿಗೆ ತುಸು ಜೀವಕಳೆ, ತುಸು ಬೆಳಕು ಇಳಿಯುತ್ತದೆ. ಮಳೆ ಕೂಡ ಇವರೊಂದಿಗೆ ಒಳ್ಳೆಯ ಅತಿಥಿಯಂತೆ ವ್ಯವಹರಿಸುವುದಿಲ್ಲ. ಮಳೆಗಾಲದ ಮೋಡಗಳು ಕ್ಷಯರೋಗಿಯಂತೆ ಬಿಳಿಚಿಕೊಂಡಿರುವುದನ್ನು ನೋಡಿದರೆ ಇಲ್ಲಿ ಜನ ಹ್ಯಾಗಾದರೂ ಬದುಕಿದ್ದಾರೆಂದು ಆಶ್ಚರ್ಯವಾಗುತ್ತದೆ. ಅವರ ಹೋರಾಟವನ್ನು ಅಭಿನಂದಿಸಬೇಕೆನಿಸುತ್ತದೆ.

ಅದಕ್ಕೇ ಇರಬೇಕು. ಮಳೆ, ಮಕ್ಕಳು ಮತ್ತು ಹೆಣ್ಣು ಇಲ್ಲಿಯ ಜನರ ಸೂಕ್ಷ್ಮವಾದ ಮರ್ಮಸ್ಥಾನಗಳು, ಇವರೆಲ್ಲ ಆಸೆ, ನಿರಾಸೆ ಭಾವನೆಗಳ ಉಗಮ ಈ ಮರ್ಮಸ್ಥಾನಗಳಿಂದಲೇ. ನಿಜ ಹೇಳಬೇಕೆಂದರೆ ಇಲ್ಲಿಯ ದೇವರುಗಳು ಕೂಡ ಹುಟ್ಟಿದ್ದು ಈ ಮರ್ಮಸ್ಥಾನಗಳಿಗೆ, ಈಯೆಲ್ಲ ದೇವರುಗಳು ಮಳೆಯ ಮೇಲೆ ಹತೋಟಿ ಹೊಂದಿ, ಮಳೆ ಬರಿಸುವ, ಮಕ್ಕಳ ಫಲಪುತ್ರ ಸಂತಾನ

ಸೌಭಾಗ್ಯ ನೀಡುವ ಸಮೃದ್ಧಿ ದೇವತೆಗಳು. ಮಳೆ ಬರಿಸುವ ಕಪ್ಪೆ ಅವರ ದೇವರು, ಶಿಶ್ನರೂಪದ ಜೋಕುಮಾರಸ್ವಾಮಿ ಅವರ ದೇವರು. ಯೋನಿರೂಪದ ಕರಗ ಅವರ ದೇವರು...

ಹೀಗೆ ವಿಚಾರ ಮಾಡುತ್ತಿದ್ದಾಗ ಊರು ಬಂತು. ಸೀದಾ ಅಣ್ಣನ ಮನೆಗೆ ಹೋದೆ. ಅವನೀಗ ಹೊಸಮನೆ ಕಟ್ಟಿಸಿಕೊಂಡು ಅಲ್ಲೇ ವಾಸಿಸುತ್ತಿದ್ದ. ಹಳೆಯ ಮನೆಯನ್ನು ದನದ ಕೊಟ್ಟಿಗೆಯನ್ನಾಗಿಸಿಕೊಂಡಿದ್ದ. ನಾವು ಹುಟ್ಟಿ ಬೆಳೆದದ್ದು ಈ ಹಳೆ ಮನೆಯಲ್ಲಿಯೇ. ಹ್ಯಾಗೂ ಅಲ್ಲಿ ಒಂದು ಕೋಣೆ ಖಾಲಿಯಿದ್ದುದರಿಂದ ಹಸನು ಮಾಡಿಸಿ ಅಲ್ಲಿಯೇ ನನ್ನ ವಾಸದ ವ್ಯವಸ್ಥೆ ಮಾಡಿಕೊಂಡೆ. ಅಷ್ಟರಲ್ಲಿ ಹಳೇಗೆಳೆಯರು, ಪರಿಚಿತರು ಬಂದರು. ಬಂದವರೊಡನೆ ಶೀನಿಂಗವ್ವನ ಬಗ್ಗೆ ವಿಚಾರಿಸಿಕೊಂಡೆ. ಅವಳಿಗಿನ್ನೂ ಅರಳುಮರಳಾಗಿಲ್ಲವೆಂದು ತಿಳಿಯಿತು.

ಮಾರನೇ ದಿನ ಶೀನಿಂಗವ್ವನನ್ನು ನೋಡಲು ಓಂಪ್ರಥಮದಲ್ಲಿ ನನ್ನ ಮಿತ್ರ ಶಿರಸೈಲನೊಂದಿಗೆ ಅರಮನೆಗೆ ಹೋದೆ. ಇದೇ ಮೊದಲನೇ ಬಾರಿ ಇದ್ದುದ್ದರಿಂದ ಪೂರ್ವದ ಭಯದಲ್ಲೋ, ಇಲ್ಲವೆ ಅರಮನೆ ನೋಡುವ ಸಡಗರದಲ್ಲೋ ನನ್ನ ಎದೆ ಹಾರುತ್ತಿತ್ತು. ಪೌಳಿ ದಾಟಿ ಒಳಗೆ ಹೊರಡುವಷ್ಟರಲ್ಲಿ ಶೀನಿಂಗವ್ವನೇ ಹೊರಬಂದಳು. ತುಂಬು ಹಣ್ಣುಹಣ್ಣಾದ ಮುದುಕಿ. ಕಡ್ಡಿ ಮುರಿದು ಅಂಟಿಸಿದ ಹಾಗೆ ಅವಳ ಮುಖದಲ್ಲಿ ಗೆರೆ ಮೂಡಿದ್ದವು. ಅಡ್ಡತಿಡ್ಡ ಗೆರೆಯ ಬಿಳಿ ಮುಖದಲ್ಲಿ ಬಹಳ ಚಂಚಲವಾದ ಎರಡು ನೀಲಿ ಕಣ್ಣು ನೀರಾಡಿ ಹೊಳೆಯುತ್ತಿದ್ದವು. ತುಸು ಗಿಡ್ಡಮೂಗು, ತೆಳುವಾದ ತುಟಿ, ಗದ್ದ ತುಂಟುತನದಿಂದ ತುಸು ಮುಂದೆ ಬಂದಿದ್ದು ಅವಳ ವಯಸ್ಸಾದ ಮುಖಕ್ಕೆ ಅದೂ ಒಂದು ಬಗೆಯ ಶೋಭೆ ತಂದಿತ್ತು. ನೋಡಿದರೆ ಒಂದು ಕಾಲಕ್ಕೆ ಖಂಡಿತ ಕುರೂಪಿಯಾಗಿರಲಿಲ್ಲವೆಂದು ಹೇಳಬಹುದಾದ ಆದರೆ ತುಂಬ ಅನುಭವವುಂಡವಳಾದ್ದರಿಂದ ಗೌರವಭಾವನೆ ಉಕ್ಕುವಂತೆ ಮಾಡುವ ವ್ಯಕ್ತಿತ್ವ ಅವಳದೆಂದು ಗೊತ್ತಾಗುತ್ತಿತ್ತು. ಬಂದವಳೇ ಅಸ್ಪಷ್ಟವಾಗಿ ಕಂಡ ನಮ್ಮನ್ನು ಹುಬ್ಬಿಗೆ ಕೈ ಹಚ್ಚಿಕೊಂಡು ನೋಡುತ್ತ "ಯಾರಪಾ ನೀವು?" ಎಂದಳು. ಶಿರಸೈಲ ನನ್ನ ಸಹಾಯಕ್ಕೆ ಬಂದ. ನನ್ನ ತಂದೆಯ ಹೆಸರು ಹೇಳಿ ಅವನ ಮಗ ಬಂದಿರುವುದಾಗಿ ಹೇಳಿದ. ಮುದುಕಿ ನಮ್ಮಪ್ಪನ ಸದ್ಗುಣ ನೆನೆದು ಕಣ್ಣಿರು ಸುರಿಸಿದಳು. "ಅಂಥವರು ಈಗೆಲ್ಲಿದ್ದಾರಪ್ಪಾ!" ಎಂದು ಅತ್ತಳು. ನನ್ನ ತಾಯಿಯನ್ನು ಜ್ಞಾಪಿಸಿಕೊಂಡು ಇನ್ನೊಮ್ಮೆ ಅತ್ತಳು. ನಮ್ಮನ್ನು ಕಾಪಾಡುವಾಗ ನನ್ನ ತಾಯಿ ಸೀತೆ ಸಾವಂತ್ರಿಯ ಹಾಗೆ 'ಕಣ್ಣೀರಿನಲ್ಲಿ ಕಲ್ಲು ಕುದಿಸಿ ಮುಳ್ಳು ಬೇಯಿಸಿ ತಿಂದದ್ದನ್ನು' ಭಾವಪೂರಿತವಾಗಿ ನೆನೆದು ಮತ್ತಷ್ಟು ಅತ್ತಳು. ನನಗೆ ಏನು ಮಾಡುವುದಕ್ಕೂ ತೋಚಲಿಲ್ಲ. ಸಮಾಧಾನ ಮಾಡುವ ಗೋಜಿಗೂ ಹೋಗಲಿಲ್ಲ. ಯಾಕೆಂದರೆ ಅವಳು ಸಮಾಧಾನ ಹೊಂದ್ಯಾಳೆಂದು ನನಗೆ ವಿಶ್ವಾಸವಿರಲಿಲ್ಲ. ನನಗೆ ಚಿಂತೆಯಾದದ್ದು ಈ ಮುದುಕಿಯಿಂದ  ಹ್ಯಾಗೆ ಈ ಮನೆತನದ ಕಥೆ ಹೊರಡಿಸೋದು - ಎಂದು. ಅವಳು ಇನ್ನೂ ಏನೇನೋ ಆ ಕಾಲ ನೆನೆದು ಆಳುತ್ತಿದ್ದಾಗ ಶಿರಸೈಲನಿಗೆ ಸಣ್ಣದನಿಯಲ್ಲಿ ನನ್ನ ಆತಂಕ ಹೇಳಿದೆ. ಅವನೂ ಅಷ್ಟೇ ಸಣ್ಣ ದನಿಯಲ್ಲಿ "ಎಣ್ಣಿ (ಸೆರೆ) ಇಳಿದರ ತಾನಃ ದಾರಿಗೆ ಬರ್ತಾಳ ಬಿಡು" ಅಂದ. ಅಷ್ಟರಲ್ಲಿ ಮುದುಕಿಗೆ ಎದುರಿಗಿನ ನಮ್ಮ ಅರಿವು ಮೂಡಿ.

"ಬೆಳಗಾವ್ಯಾಗ ಸಾಲೀಬರೀತಿ, ನೀನಃ ಅಲ್ಲಾ ಮಗನಃ?" - ಎಂದಳು. ನಾನು "ಹೌಂದಬೇ" ಎಂದೆ. ಶಿರಸೈಲನಿಗಿದು ಸರಿಬರಲಿಲ್ಲ.

"ಸಾಲೀ ಎಲ್ಲ ಬರದ ಮುಗಿಸಿ ಈಗ ದೊಡ್ಡ ಸಾಹೇಬ ಆಗ್ಯಾನಬೇ."

- ಅಂದ. ಸುದೈವದಿಂದ ಮುದುಕಿಯ ಕಿವಿ ಹರಿತವಾಗಿದ್ದವು. ಕೇಳಿದವಳೇ ಎದೆಯ ಮೇಲೆ ಎರಡೂ ಕೈ ಊರಿಕೊಂಡು "ಅವ್ ಅವ್ ಅವ್ ನನ ಶಿವನಃ" ಎಂದು ಹೊಯ್ಕನು ಭವಿಸಿ "ಬಾ ಇಲ್ಲಿ ನೋಡೋಣು" ಎಂದು ಎರಡೂ ಕೈಯಲ್ಲಿ ನನ್ನ ಮುಖ ಹಿಡಿದು ತನ್ನ ಕಣ್ಣಿನ ಸಮೀಪಕ್ಕೊಯ್ದು ನೋಡಿದಳು. ತಕ್ಷಣ ನನ್ನ ಮುಖ ಬಿಟ್ಟು ಬೆಳಗಾವಿಯಲ್ಲಿದ್ದ ರವಿಚಂದ್ರನನ್ನು ನೆನೆದು ಕಟ್ಟೆಯ ಮೇಲೆ ಕುಸಿದು ಕೂತಳು. ಇದನ್ನೆಲ್ಲ ನೋಡಲು ನಾವು ನಿಲ್ಲಲಿಲ್ಲ. ಅರಮನೆಯ ಒಳಗೆ ಹೊಕ್ಕೆವು. ಎದುರಿಗಿನ ಭವ್ಯ ಕಟ್ಟಡ ನೋಡಿ ದಂಗಾಗಿ ನಿಂತುಬಿಟ್ಟೆ. ನಮ್ಮ ಬಡ ಊರಿನಲ್ಲಿ ಇಂಥ ಅದ್ಭುತವಾದೊಂದು 'ಅರಮನೆ' ಇದ್ದು ನಾನು ಈತನಕ ನೋಡಿಲ್ಲದ್ದಕ್ಕೆ ಹಳಹಳಿಸಿದೆ. ಇದರ ಬಗ್ಗೆ ಇರುವ ನಮ್ಮೂರು ಗರತಿಯರ ಹಾಡು ಕೇಳಿದ್ದೆ, ಕೇಳಿ ಕಲ್ಪಿಸಿಕೊಂಡಿದ್ದೆ. ಆದರೆ ಈ ಅರಮನೆ ನನ್ನ ಕಲ್ಪನೆ ಮೀರಿತ್ತು. ಸಾಲು ಸಾಲು ಕಂಬಗಳ ದೊಡ್ಡ ಒಡ್ಡೋಲಗ ಶಾಲೆ, ಪ್ರತಿಕಂಬದ ಸೂಕ್ಷ್ಮ ಕೆತ್ತನೆ ಕೆಲಸ. ಗೋಡೆಗಳ ಮೇಲೆ ಬರೆದ ಹಳೇ ಚಿತ್ರಗಳು,

ಮೇಲೆ ನೋಡಿದರೆ ಮತ್ತೆ ಮರಗೆಲಸದ ಸೂಕ್ಷ್ಮ ವಿನ್ಯಾಸಗಳು... ನಿಜ ಹೇಳುತ್ತೇನೆ. ನಾನು ನಮ್ಮೂರಲ್ಲಿದ್ದುದನ್ನೇ ಮರೆತುಬಿಟ್ಟೆ. ಒಡ್ಡೋಲಗ ಸಾಲೆಗಿದ್ದ ಒಂದೇ ಒಂದು ದೊಡ್ಡ ಬಾಗಿಲು ದಾಟಿ ಒಳಕ್ಕೆ ಹೋದರೆ ಪಡಸಾಲೆ. ಅದಕ್ಕಂಟಿ ದೇವರ ಕೋಣೆಯಿದೆ. ಅದರಾಚೆ ಒಂದು ಸಣ್ಣಕೋಣೆ, ಬೆಳಕು ಸಾಲದ ಇಂಥ ಮೂರು ಕೋಣೆ ದಾಟಿದರೆ ತುಸು ಬೆಳಕಿನ ಇನ್ನೊಂದು ಕೋಣೆ, ಅಲ್ಲಿಂದ ಮೇಲಿನ ಅಂತಸ್ತಿಗೆ ಹೋಗುವ ಮೆಟ್ಟಿಲುಗಳಿವೆ. ಹೀಗೆ ಹತ್ತು ಬಾಗಿಲು ದಾಟಿ ಮೆಟ್ಟಲೇರಿ ಮೇಲೆ ಹೋದೆ.

ಒಳಗೆ ಕತ್ತಲಿತ್ತ. ನನಗಿಂತ ಮುಂಚೆಯೇ ನುಗ್ಗಿದ ಶಿರಶೈಲ ಕಿಟಕಿಯ ಬಾಗಿಲು ತೆಗೆದ. ಈ ಕಿಟಕಿಗಳು ಸಾಮಾನ್ಯವಾದವುಗಳಲ್ಲ, ರಾತ್ರಿ ಸಮಯದಲ್ಲಿ ದೂರದ ಎಷ್ಟೋ ರೈತರಿಗೆ ಮಂದಬೆಳಕಿನ ಈ ಕಿಟಕಿಗಳೇ ಹಾದಿ ತೋರಿಸುವ ನಕ್ಷತ್ರಗಳು! ಇದನ್ನು ಹಾಗೆ ಗುರುತಿಸಿ ನಾನೆಷ್ಟೋ ಬಾರಿ ಊರು ಸೇರಿದ್ದೇನೆ. ಈಗ ಮಾತ್ರ ಆ ಕಿಟಕಿಯಿಂದ ಬರುವ ಬೆಳಕು ಒಳಗಿಗೆ ಸಾಲುತ್ತಿರಲಿಲ್ಲ. ಎರಡೇ ಕಿಟಕಿಯಿದ್ದ ಈ ವಿಶಾಲ ಕೋಣೆಯ ಮಧ್ಯೆ ಒಂದು ದೊಡ್ಡ ಮಂಚವಿತ್ತು. ಅದರ ಮೇಲೊಂದು ಮಾಸಿದ ಕುತನೀಗಾದಿಯಿತ್ತು. ಅದರ ಪಕ್ಕದಲ್ಲೊಂದು ಕಪಾಟಿದ್ದು ಅದಕ್ಕೆ ದೊಡ್ಡದೊಂದು ನಿಲುವುಗನ್ನಡಿ ಅಂಟಿಸಲಾಗಿತ್ತು. ಕನ್ನಡಿ ಮುಂದೆ ಕೂತು ಸಿಂಗರಿಸಿಕೊಳ್ಳಲು ಅನುಕೂಲವಾಗುವಂತೆ ಅದರೆದುರೊಂದು ಗಡಂಚಿಯಿತ್ತು. ಇಲ್ಲಿಯೂ ಜಂತಿಜಂತಿಯ ಮೇಲೆ ಕೆತ್ತನೆ ಕೆಲಸವಿದ್ದು ಸೂಕ್ಷ್ಮವಾಗಿ ನೋಡಿದರೆ ಹೆಣ್ಣುಗಂಡು ನಾನಾ ಭಂಗಿಗಳಲ್ಲಿ ಭೋಗಿಸುವ ವಿನ್ಯಾಸಗಳಿದ್ದದ್ದು ಗೊತ್ತಾಗುತ್ತಿತ್ತು. ನಾನು ಅವುಗಳನ್ನೇ ತೀಕ್ಷ್ಣವಾಗಿ ನೋಡುತ್ತಿದ್ದಾಗ ಶಿರಸೈಲ ಬಾಯ್ಗೆ ಕೈಯಿಟ್ಟುಕೊಂಡು ಒಳಗೊಳಗೇ ನಗುತ್ತಿದ್ದ. ಅವನನ್ನೆಳೆದುಕೊಂಡು ಇನ್ನೊಂದನ್ನು ನೋಡತೊಡಗಿದೆವು. ಅದರಲ್ಲಿ ಹೆಣ್ಣೊಬ್ಬಳು ನಾಯಿಯ ಜೊತೆ ಭೋಗಿಸುತ್ತಿದ್ದಳು. ಈಗ ಮಾತ್ರ ನನ್ನ ಮಿತ್ರನ ನಗೆ ಖೊಖ್ ಎಂದುಕ್ಕಿ ಹೊರಸೂಸಿಬಿಟ್ಟಿತು. ಆಶ್ಚರ್ಯವೆಂದರೆ ಅಷ್ಟು ದೊಡ್ಡ ಕೋಣೆಗೆ ಎರಡೇ ಕಿಟಕಿಯಿದ್ದದ್ದು. ಊರಕಡೆಗಿನ ಎರಡು ಗೋಡೆಗಳಲ್ಲೂ ಕಿಟಕಿಗಳಿರಲಿಲ್ಲ. ದಕ್ಷಿಣದ ಕಿಟಕಿಯಲ್ಲಿ ನೋಡಿದರೆ ಹೊಲೆಯರ ಗುಡಿಸಲುಗಳಿಂದ ಆವೃತವಾದ ಬಯಲಿದೆ. ನಮ್ಮೂರಿನ ಕಲಾವಿದರು ಬಯಲಾಟ ಮಾಡುವುದು ಇಲ್ಲಿಯೇ. ಅಂಥ ಬಯಲಾಟಗಳನ್ನು ಈ ಕಿಟಕಿಯಿಂದಲೇ ನೋಡಬಹುದಿತ್ತು. ಬೇಕಾದರೆ ಮಂಚದ ಮೇಲೆಯೇ ಒರಗಿಕೊಂಡು ಕೂಡ ನೋಡಬಹುದಿತ್ತು. ದೊರೆಸಾನಿಯರು ಬಯಲಾಟಗಳನ್ನು ಇಲ್ಲಿಂದಲೇ ನೋಡುತ್ತಿದ್ದರೆಂದು ಊಹಿಸಿಕೊಂಡು ಇನ್ನೊಂದು ಕಿಡಿಕಿಗೆ ಹೋದೆ. ಅದು ಪಶ್ಚಿಮ ದಿಕ್ಕಿನದು. ನೋಡಿದರೆ ಬಯಲು ಹೊಲಗಳಗುಂಟ ಒಂದು ಕಾಲುದಾರಿ ಸುಳಿದು ತುಸು ದೂರದ ಹುಣಸೇಮೆಳೆಗೆ ಸೇರುತ್ತದೆ. ಅಲ್ಲಿಯೇ ಕುಮುದವ್ವನ ಗುಡಿಯಿರೋದು. ಅದರ ಬಗ್ಗೆ ನಿಮಗಾಗಲೇ ಹೇಳಿದ್ದೇನೆ.

ಅಂತಸ್ತಿನ ಕೋಣೆಯನ್ನು ಇನ್ನಷ್ಟು ವಿವರವಾಗಿ ನೋಡಿ ನಾನು ಮತ್ತ ಶಿರಸೈಲ ಕೆಳಗಿಳಿದು ಬಂದೆವು. ನಾವು ಒಳಕ್ಕೆ ಹೋಗುವ ಮುನ್ನ ಕುಸಿದು ಕೂತ ಶೀನಿಂಗವ್ವ ಎದ್ದು ಬಂದು ಎದುರಾದಳು. ಈ ಸಲ ಅವಳು ಅಳುತ್ತಿರಲಿಲ್ಲ. ಸುಮ್ಮನೆ ಬೆನ್ನು ಹತ್ತಿದಳು. ಹೊರಕ್ಕೆ ಬಂದಾಗ ಮನೆಯ ಕಟ್ಟೆಯೊಡೆದು ಒಂದು ಪತ್ರೀಗಿಡ ಬೆಳೆದದ್ದನ್ನು ಶಿರಸೈಲ ತೋರಿಸಿದ. ನನಗದು ಗೊತ್ತಿತ್ತು. ಶೀನಿಂಗವ್ವನ ಕಡೆ ನೋಡಿದೆ. ನಾನು ನಿರೀಕ್ಷಿದ್ದಂತೆಯೇ ಮುದುಕಿ "ಕತೀ ಆಗಿ ಹೋದ್ನೋ ಮಗನs" ಎನ್ನುತ್ತ ಮತ್ತೆ ಅಳತೊಡಗಿದಳು. ಅರಮನೆ ನೋಡಿ ನನ್ನ ಮನಸ್ಸಿಗೂ ನೋವಾಗಿತ್ತು. ಅವಳನ್ನು ಸಮಾಧಾನ ಮಾಡುವಷ್ಟು ನೆಮ್ಮದಿ ನನಗಿರಲಿಲ್ಲ. ಸಾಯಂಕಾಲ ಬಂದರಾಯ್ತೆಂದು ಮನೆಗೆ ಹೋದೆವು.

ಮಧ್ಯಾಹ್ನ ಉಂಡು ಅಡ್ಡಾದಾಗಲೂ ಸಲಕ್ಕೊಮ್ಮೆ ಅಳುವ ಈ ಮುದುಕಿಯಿಂದ ಕಥೆ ಹ್ಯಾಗೆ ಹೊರಡಿಸೋದು - ಎಂಬ ಚಿಂತೆಯೇ ನನ್ನನ್ನು ಕಾಡಿಸುತ್ತಿತ್ತು. "ಐದ ರೂಪಾಯಿ ಕೊಡು, ಅಮ್ಯಾಲ ಅದರ ಗಮ್ಮತ್ತ ನೋಡು" ಎಂದು ನನ್ನ ಮಿತ್ರನೇನೋ ಸಮಾಧಾನ ಮಾಡಿದ್ದ. ನನಗೆ ನಂಬಿಕೆಯಿರಲಿಲ್ಲ. ಆತನಿಗೆ ಐದು ರೂಪಾಯಿ ಕೊಟ್ಟು ಅದೇನು ಮಾಡುತ್ತಾನೋ ಮಾಡಿಕೊಳ್ಳಲಿ ಎಂದು ಸುಮ್ಮನಾಗಿದ್ದೆ.

ಸಂಜೆ ಆರು ಗಂಟೆಯ ಸುಮಾರಿಗೆ ಅರಮನೆಗೆ ಹೋದೆ. ಮೊದಲೇ ಹೇಳಿದ್ದಂತೆ ಶಿರಸೈಲ ಅಲ್ಲಿದ್ದವನು ನನ್ನನ್ನು ನೋಡಿ ಓಡಿಬಂದ. ಅವಳಿಗೆ ಸಲ್ಲುವ ಹರಕೆ ಸಂದಾಯವಾಗಿದೆಯೆಂದೂ ಇನ್ನು ಕಾಳಜಿ ಮಾಡಬೇಡವೆಂದೂ ಹೇಳಿದ. (ಹರಕೆ ಅಂದರೆ ಒಂದು ಬಾಟ್ಲೆ

ಸೆರೆ, ಒಂದು ಕಟ್ಟುಬೀಡಿ ಹಾಗೂ ಒಂದು ಹುರಿದ ಮೀನು. ಈ ಜಂಗಮರ ಹುಡುಗ ಇದನ್ನೆಲ್ಲ ಹ್ಯಾಗೆ ವ್ಯವಸ್ಥೆ ಮಾಡಿದ್ದನೋ!) ಆಶ್ಚರ್ಯವೆಂದರೆ ಮುದುಕಿ ಮನೆಯಿಂದ ಹೊರ ಬಂದಾಗ ಭರ್ಜರಿ ಮೂಡಿನದಲ್ಲಿದ್ದಳು. ನಗುತ್ತ "ಬಾ ಎಪ್ಪಾ" ಎಂದಳು. ಕಾಣಿಸದಿದ್ದ ಅವಳ ಕಣ್ಣುಗಳು ಹೊಳೆಯುತ್ತಿದ್ದವು. ಮುಖದ ಸುಕ್ಕಿನ ಗೆರೆಗಳೀಗ ಪಕ್ವ ಹಣ್ಣಿನ ಮೇಲೆ ಮೂಡುವ ಗೆರೆಗಳಂತಿದ್ದವು. ನಾನು ಅಲ್ಲೇ ಪಕ್ಕದ ಪ್ರತಿಕಟ್ಟೆಯ ಮೇಲೆ ಕೂತೆ. ಮುದುಕಿ ತುಸು ದೂರದಲ್ಲಿ ಕೂತಳು. ಶಿರಸ್ಸೈಲ ಕಟ್ಟೆ ಸಮೀಪದ ಕಂಬಕ್ಕೊರಗಿ, ಮೊಳಕಾಲ ಸುತ್ತ ಕೈ ಹೆಣೆದು ಮುಂದೇನೋ ಭಾರೀ ಸಂಭಾಷಣೆ ಆಗಲಿದೆಯೆಂದೂ, ಆ ಮೂಲಕ ತನ್ನ ಮಿತ್ರನಾದ ನನ್ನ ಪಾಂಡಿತ್ಯವನ್ನು ಮೆಚ್ಚಬೇಕೆಂದೂ ಕೂತ. ಆ ಈ ಮಾತುಗಳಾಗಿ ಹಿಂದೆ ನಾ ಕಂಡ ಘಟನೆಗಳನ್ನು ಹೇಳಿದೆ. ಮುದುಕಿಗೂ ಅವು ನೆನಪಿದ್ದವು. ಹೋ ಎಂದು ನನ್ನ ಕಡೆ ಮಾಡಿ, ನಕ್ಕಳು. ನನ್ನ ಮಿತ್ರನ ಹರಕೆ ಸರಿಯಾಗಿ ಕೆಲಸ ಮಾಡಿತ್ತು. ಮುಂಜಾನೆ ಸಲಕ್ಕೊಮ್ಮೆ ಅಳುತ್ತಿದ್ದ ಮುದುಕಿ ಇದೇನೋ ಎಂದು ನನಗೆ ಹೊಯ್ಕಾಯ್ತು. ನಾ ಒಂದು ಹೇಳಿದರೆ ಅವಳು ಎರಡು ಘಟನೆಗಳನ್ನು ಸರಿಯಾಗಿ ಹೇಳಿ ನನ್ನನ್ನು ನಗಿಸಿದಳು. ನನಗಾದ ಸಂತೋಷಕ್ಕೆ ಎಣೆಯೇ ಇರಲಿಲ್ಲ. ಯಾಕೆಂದರೆ ಆ ಮುದುಕಿಯ ನೆನಪು ನಿಚ್ಚಳವಾಗಿತ್ತು. ಘಟನೆಯನ್ನು ಅದು ನಿನ್ನೆಯೇ ನಡೆಯಿತೆಂಬಂತೆ, ಆ ನಿನ್ನೆ ಇನ್ನೊಮ್ಮೆ ಪ್ರತ್ಯಕ್ಷವಾಗಿ ಈಗ ಕಣ್ಣೆದುರು ಕಟ್ಟುವಂತೆ ಹೇಳುತ್ತಿದ್ದಳು. ಅವಳ ಮಾತುಗಳಿಂದ ನನಗೆ ಪೂರ್ತಿ ಧೈರ್ಯ ಮತ್ತು ವಿಶ್ವಾಸ ಮೂಡಿದ ಮೇಲೆ ಕೇಳಿದೆ -

"ಆಯೀ ಈ ಊರಿಗಿ ನೀ ಎಂದ ಬಂದಿ?"

ಮುದುಕಿ ನೆಲದಿಂದ ಎತ್ತರ ಸೂಚಿಸಲು ಕೈಮಾಡಿ,

"ಇಷ್ಟಿದ್ದೆ" ಎಂದು ಹೇಳಿ "ನಾವಿಬ್ಬರೂ ಮುಟ್ಟಾಗಿ ಎರಡು ವರ್ಷ ಆಗಿದ್ದವು" ಎಂದಳು

"ನಾವಿಬ್ಬರೂ ಅಂದರ?"

"ನಾನು ಮತ್ತು ಸಿಂಗಾರೆವ್ವ"

"ಮುಟ್ಟಾಗಿ ಎರಡ ವರ್ಷಕ್ಕs ಮದಿವಿ?" ಆ ಭಾಗದಲ್ಲಿ ಎಳೇ ಕೂಸುಗಳಿಗೆ ಮದುವೆ ಮಾಡುವ ವಿಚಾರ ನನಗೆ ಗೊತ್ತಿತ್ತು. ಆದರೆ ಅದರಿಂದ ಕಥೆ ಮುಂದುವರಿಯುವ ಸಾಧ್ಯತೆಯಿದೆಯೆಂದು ಅನ್ನಿಸಿ ಕೇಳಿದ್ದೆನಷ್ಟೆ.

"ಮುಟ್ಟಾದ ಎರಡು ವರ್ಷಕ್ಕs ಮದಿವೆಂದರೆ...? ಸರಗಂ ದೇಸಾಯಿ ಆಕೀ ಎರಡ್ನೇ ಗಂಡ!"

- ಎರಡನೇ ಗಂಡ! ನನಗಿದು ಗೊತ್ತಿರಲಿಲ್ಲ. ಹಾಗೆಂದು ಆಡಿಯೂ ಬಿಟ್ಟೆ.

"ನಮ್ಮ ಸಿಂಗಾರೆವ್ವನ ಅಪ್ಪ ಭಾಳ ಕೊಳಕ ಇದ್ದ. ಕೊಳಕ ಅಂದರೆ ಅಂತಿಂತಾ ಕೊಳಕಂತ ಅಂದೀ ಮತ್ತ. ಅಸಮಾನ ಕೊಳಕ. ಮಕ್ಕಳ್ನ ಮಾರಿಕೊಳ್ಳೋವಂಥ ಕೊಳಕ..."

- ಎಂದು ಶೀನಿಂಗವ್ವ ಹೇಳತೊಡಗಿದಳು. ಸಿಂಗಾರೆವ್ವನ ತಂದೆಯ ಬಗ್ಗೆ ಅವಳಿಗೆ ಒಳ್ಳೆಯ ಭಾವನೆ ಇರಲಿಲ್ಲವೆಂದೂ ಗೊತ್ತಾಯಿತು. ಅಲ್ಲದೆ ಆ ವಿಷಯವನ್ನಾಕೆ ಸಂಕಟದಿಂದ ಹೇಳತೊಡಗಿದಳು. ಒಟ್ಟಾರೆ ದುರಂತಕ್ಕೆ ಆತನ ಕೊಳಕುತನವೇ ಕಾರಣವೆಂದು ಅವಳ ಅಭಿಪ್ರಾಯವಾಗಿದ್ದಂತೆ ಕಂಡಿತ್ತು. ಇಲ್ಲಿಗೆ ಪ್ರಸ್ತಾವನೆ ನಿಲ್ಲಿಸಿ ಇನ್ನು ಮುಂದೆ ಅವಳು ಹೇಳಿದ್ದನ್ನೇ ಗ್ರಾಂಥಿಕ ಭಾಷೆಯಲ್ಲಿ ನಿರೂಪಿಸುತ್ತೇನೆ. ಯಾಕೆಂದರೆ ಆಕೆಯೂ ಈ ಘಟನಾವಳಿಯಲ್ಲಿಯ ಒಂದು ಪ್ರಮುಖ ಪಾತ್ರ. ಮಾತ್ರವಲ್ಲ ಎಲ್ಲರ ಸಾವಿಗೆ ಸಾಕ್ಷಿಯಾಗಿ ಸಾಯದೆ ಇನ್ನೂ ಬದುಕಿದ್ದವಳು. ಹೇಳ ಹೇಳುತ್ತ ಭಾವುಕಳಾಗಿ ಅಂದವರ್ಯಾರು ಅನ್ನಿಸಿಕೊಂಡವರ್ಯಾರೆಂದು ತಿಳಿಸದೆ ಬರೀ ಸಂಭಾಷಣೆಯ ಮೂಲಕವೇ ಒಮ್ಮೊಮ್ಮೆ ಕಥೆ ಹೇಳುತ್ತಿದ್ದಳು. ಪ್ರತ್ಯಕ್ಷ ಎದುರು ಕೂತಲ್ಲದೆ ಅದು

ತಿಳಿಯುವುದಿಲ್ಲವಾದ್ದರಿಂದ ಭಾಷೆಯಲ್ಲಿ ತುಸು ಒಪ್ಪಂದ ಮಾಡಿಕೊಂಡಿದ್ದೇನೆ. ಅಗತ್ಯ ಮತ್ತು ಅನಿವಾರ್ಯವೆನ್ನಿಸಿದಾಗ ಅವಳ ಮಾತುಗಳನ್ನೇ ಉದ್ಧರಿಸುತ್ತ, ಕಥೆಯ ಭಾವಪ್ರಪಂಚವನ್ನು ಪರೋಕ್ಷವಾಗಿ ನಾನೂ ಅನುಭವಿಸಿದ್ದನಾದ್ದರಿಂದ ಅಲ್ಲಲ್ಲಿ ನಮ್ಮ ಅಂದಿನ ಪ್ರತಿಕ್ರಿಯೆಗಳನ್ನೂ ಬೆರೆಸುತ್ತ ಸಾವಳಗಿ ಶಿವಲಿಂಗೇಶ್ವರ ಮಠದ ಸಿದ್ಧರಾಮಸ್ವಾಮಿಗಳು, ಭೂಸನೂರು ಮಠದ ಸಂಗಯ್ಯ ಸ್ವಾಮಿಗಳು ಹಾಗೂ ಘೋಡಗೇರಿಯ ಕಂಬಾರ ಬಸವಣ್ಣೆಪ್ಪ - ಇವರ ಹೆಸರುಗೊಂಡು ಸಾಧ್ಯವಾದಷ್ಟು ಪ್ರಾಮಾಣಿಕತೆಯಿಂದ ಕಥೆ ಹೇಳುತ್ತೇನೆ, ಕೇಳಿರಿ:

ಕಥೆ ನಂದಗಾವಿಯಿಂದ ಸುರುವಾದೀತೆಂದು ನನಗೂ ಅನ್ನಿಸಿರಲಿಲ್ಲ. ಅದಿನ್ನೂ ಒಳ್ಳೆಯದೇ ಆಯಿತೆಂದು ಮುಂದೆ ನಿನಗೂ ಗೊತ್ತಾಗುತ್ತದೆ. ಶೀನಿಂಗವ್ವ ಹೇಳತೊಡಗಿದಳು:

* * *

## ಅಧ್ಯಾಯ - ೨

"ನಂದಗಾವಿಗೆ ಪಂಡರೀಗೌಡನ ಒಡೆತನ. ಗೌಡ ದಪ್ಪ ಹೊಟ್ಟೆಯ ಅಷ್ಟೇನೂ ಎತ್ತರವಲ್ಲದ ಆಸಾಮಿ. ಪುಟ್ಟ ಕಾಲುಗಳು, ಬೊಜ್ಜು ತುಂಬಿಕೊಂಡು ಬೆವರು ಸುರಿಸುವ ಕೈ, ಕೊರೆದಂತಿರುವ ಮೀಸೆ; ಅವನ ಚಿಕ್ಕ ಚಂಚಲ ಕಣ್ಣು ಬಹಳ ಹೊತ್ತು ಒಂದು ವಸ್ತುವಿನ ಮೇಲೆ ಕೂರುತ್ತಲೇ ಇರಲಿಲ್ಲ. ಅವನು ಯಾವಾಗಲೂ ವಿಚಾರ ಮಾಡುತ್ತಿದ್ದುದ್ದು ಒಂದೇ: ಯಾರ ಬಳಿ ತುಪ್ಪ ಇದೆ; ಮತ್ತು ಆ ತುಪ್ಪದಲ್ಲಿ ತನ್ನ ರೊಟ್ಟಿ ಹ್ಯಾಗೆ ಜಾರಿ ಬೀಳಬೇಕು? ಹಾಗೆ ಜಾರಿ ಬೀಳದಿದ್ದರೆ ಆ ತುಪ್ಪವನ್ನು ಹ್ಯಾಗೆ ಅಪಹರಿಸಬೇಕು? - ಅದೊಮ್ಮೆ ಗೊತ್ತಾದರಾಯ್ತು, ಕಾರ್ಯೋನ್ಮುಖನಾಗುತ್ತಿದ್ದ, ಅವನೊಮ್ಮೆ ಕಾರ್ಯೋನ್ಮುಖನಾದರಾಯ್ತು, ಖಂಡಿತ ಅದರಲ್ಲಿ ಯಶಸ್ಸು ಗಳಿಸುತ್ತಿದ್ದ. ಅದಕ್ಕೇ ಅವನು ತನ್ನ ಅದೃಷ್ಟದಲ್ಲಿ ಭಾರೀ ನಂಬಿಕೆಯಿಟ್ಟಿದ್ದ. ತನಗೆ ಹೃದಯ ಕೂಡ ಇದೆಯೆಂದು ತೋರಿಸುವುದಕ್ಕೆ ಬೇರೆಯವರೊಂದಿಗೆ ಮುದುಕಿಯರ ಥರ ಹರಟುತ್ತಿದ್ದ. ಬೇರೆಯವರು ತಮ್ಮ ಮನಸ್ಸಿನೊಳಗಿರೋದನ್ನ ನಿಸ್ಸಂಕೋಚವಾಗಿ ಹೇಳುವಂತೆ ಮಾಡುತ್ತಿದ್ದ. ಆದರೆ ಸ್ವಂತದ ವಿಚಾರವೊಂದನ್ನೂ ಹೊರಗೆಡವುತ್ತಿರಲಿಲ್ಲ. ಹೊಂಚುತ್ತ ಅವರು ಹೇಳಿದನ್ನೆಲ್ಲ ಆಸಕ್ತಿಯಿಂದ ಕೇಳುತ್ತ ಕೂರುತ್ತಿದ್ದ. ಇಷ್ಟೆಲ್ಲಾ ಸದ್ಗುಣಗಳಿದ್ದಾಗ್ಯೂ ಮಾತಾಡುವವರಿಗೆ ಮಾತಿನ ಅಂತ್ಯದಲ್ಲಿ ಅವನೊಂದಿಗೆ ಮಾತಾಡಿದ್ದಕ್ಕೆ ಪಶ್ಚಾತ್ತಾಪವಾಗುತ್ತಿತ್ತು. ಅದಕ್ಕೇ ಜನ ಅವನನ್ನು ಹಚ್ಚಿಕೊಳ್ಳುತ್ತಿರಲಿಲ್ಲ. ಇವನೂ ಜನರನ್ನು ಪ್ರೀತಿಸಿದವನಲ್ಲ; ಆದರೆ ಅಧಿಕಾರವಿತ್ತಲ್ಲ, ಜನ ಹೆದರುತ್ತಿದ್ದರು; ಕುತಂತ್ರಿಯಾದ ಬೇಟೆಗಾರನಿಗೆ ಪ್ರಾಣಿಗಳು ಹೆದರುವ ಹಾಗೆ. ಇಷ್ಟು ತಿಳಿಯಪ್ಪ; ನರಮನುಷ್ಯನಿಗೆ ಹಣಬೇಕು, ಆಸ್ತಿಬೇಕು ಮತ್ತು ಅದಕ್ಕಾಗಿ ಎಂಥ ಹೀನ ಕೆಲಸ ಮಾಡಿದರೂ ಕೊಂದರೂ ತಪ್ಪಿಲ್ಲ ಎನ್ನುವುದು ಆತ ಒಳಗೊಳಗೇ ನಂಬಿದ ಸಿದ್ಧಾಂತವಾಗಿತ್ತು. ಗೌಡನಾದ್ದರಿಂದ ಊರಿನ ಹೆಚ್ಚಿನ ಜಮೀನು ಆತನದೇ. ಆದರೂ ಮನುಷ್ಯ ತೃಪ್ತಿ ಹೊಂದಿದವನೇ ಅಲ್ಲ. ಇಷ್ಟೆಲ್ಲಾ ಗಳಿಸಿದ್ದನಲ್ಲ, ಹೋಗಲಿ ಮಕ್ಕಳಾದರೂ ಇದ್ದವೇ ಎಂದರೇ ಅವೂ ಇರಲಿಲ್ಲ. ಹಾಗಂತ ಪ್ರಯತ್ನ ಬಿಡುವ ಪೈಕಿ ಅಲ್ಲ, ಒಂದರ ಮೇಲೊಂದರಂತೆ ನಾಲ್ಕು ಮದುವೆಯಾಗಿದ್ದ. ಕೊನೆಗೆ ಇಳಿವಯಸ್ಸಿನಲ್ಲಿ ಎರಡನೆಯ ನಿಂಗವ್ವಗೌಡ್ತಿಗೆ ಸಿಂಗಾರೆವ್ವ ಹುಟ್ಟಿದಳು. ಎರಡನೆಯ ಹೆಂಡತಿಯೇನೋ ಬಚಾವಾದಳು. ಉಳಿದ ಮೂವರಿಗೆ ಮಾತ್ರ ನರಕಯಾತನೆ ತಪ್ಪಲಿಲ್ಲ. ಮಕ್ಕಳನ್ನು ಹೆರಲಿಲ್ಲವಾದ್ದರಿಂದ ಅವರು ತನ್ನ ಕರ್ತವ್ಯ ನೆರವೇರಿಸಲಿಲ್ಲವೆಂದೇ ಅವನ ಅಭಿಪ್ರಾಯ. ಬರಬರುತ್ತ ಅವರು ಮೋಸ ಮಾಡಿದರೆಂದೇ ನಂಬಿ ಬಾರುಕೋಲಿನಿಂದ ಬಾರಿಸುತ್ತಿದ್ದ.

ನಾಲ್ಕೂ ಜನ ತಾಯಂದಿರ ಕಣ್ಮಣಿಯಾಗಿಯೇ ಸಿಂಗಾರೆವ್ವ ಬೆಳೆದಳು. ನಾನು ಮತ್ತು ಸಿಂಗಾರೆವ್ವ ಇಬ್ಬರೂ ತುಸು ಹೆಚ್ಚುಕಮ್ಮಿ ಓರಗೆಯವರೇ, ನಾನೂ ಅವರ ಮನೆಯಲ್ಲೇ ಬೆಳೆದವಳು. ನನ್ನ ತಾಯಿ ಗೌಡರ ಮನೆಯ ಹೆಣ್ಣಾಗಿದ್ದಳು. ಆಕೆ ನನ್ನನ್ನು ಹೆತ್ತ ಆರು ತಿಂಗಳಲ್ಲೇ ಅಪ್ಪ ತೀರಿಕೊಂಡನಂತೆ. ಹುಟ್ಟಿದ ಒಂದು ವರ್ಷದಲ್ಲೇ ಅಪ್ಪನ್ನ ತಿಂದವಳೆಂದು ನಮ್ಮವ್ವನಿಗೆ ನನ್ನಮೇಲೆ ಭಾರೀ ಸಿಟ್ಟಿತ್ತಂತೆ. ಮುಂದೆ ಬಹಳ ದಿನ ಉಳಿಯಲಿಲ್ಲ. ಆಕೆ ಸತ್ತೊಡನೆ ಗೌಡನ ಮನೆಯೇ ನನಗೆ ಆಶ್ರಯ ಸ್ಥಾನವಾಯಿತು.

ಒಬ್ಬಳೇ ಮಗಳಾದ್ದರಿಂದ ಸಿಂಗಾರೆವ್ವನನ್ನು ಬಹಳ ಅಚ್ಚೆಯಿಂದ ಬೆಳೆಸಿದರು. ಅದೇ ವಯಸ್ಸಿನವಳಾದರೂ ನಾನು ಕೆಲಸ ಮಾಡಬೇಕಾಗುತ್ತಿತ್ತು. ನನಗೆ ಸಿಗುತ್ತಿದ್ದುದು ತಂಗಳನ್ನ, ರೊಟ್ಟಿಮಾತ್ರ. ಅವಳ ತಾಯಂದಿರಿಂದ ಆಗಾಗ ಏಟುಗಳನ್ನೂ ತಿನ್ನಬೇಕಾಗುತ್ತಿತ್ತು. ಆದರೆ ಸಿಂಗಾರೆವ್ವನ ಗೆಳೆತನದ ಮುಂದೆ ನನಗೆ ಅದೆಲ್ಲ ಹಗುರವಾಗೇ ಕಾಣುತ್ತಿತ್ತು. ಅಪರೂಪದ ತಿಂಡಿಗಳನ್ನು ಆಕೆ ತಾಯಂದಿರ ಕಣ್ಣು ತಪ್ಪಿಸಿ ನನಗೂ ಕೊಡುತ್ತಿದ್ದಳು. ಆಸುಪಾಸು ಅವರಿಲ್ಲದಿದ್ದರೆ ಕೆಲಸಕ್ಕೂ ನೆರವಾಗುತ್ತಿದ್ದಳು. ಆಕೆ ಗೌಡನ ಮಗಳಾದ್ದರಿಂದ ಮನೆಬಿಟ್ಟು ಹೊರಗೆ ಹೋಗುವಂತಿರಲಿಲ್ಲ. ನಾನು ಮಾತ್ರ ಊರತುಂಬ ಅಡ್ಡಾಡುತ್ತಿದ್ದೆ. ಹೊಲಕ್ಕೂ ಹೋಗುತ್ತಿದ್ದೆ. ಜನರನ್ನು ನೋಡುತ್ತಿದ್ದೆ. ಮಾತಾಡುತ್ತಿದ್ದೆ, ಎಷ್ಟೇಷ್ಟೋ ಕಥೆ ಕೇಳಿಕೊಂಡು ಬಂದು ಅವನ್ನೆಲ್ಲ ಸಿಂಗಾರೆವ್ವನಿಗೆ ಹೇಳಿ ಖುಷಿಪಡಿಸುತ್ತಿದ್ದೆ. ಅವಳು ಒಮ್ಮೊಮ್ಮೆ ಹಟಮಾಡಿ ನಾನೂ ಅವಳ ಹಾಸಿಕೆಯಲ್ಲಿ ಮಲಗುವಂತೆ ಮಾಡುತ್ತಿದ್ದಳು. ಇದನ್ನು ನೋಡಿ ಗೌಡನೊಮ್ಮೆ ನನ್ನ ಬೆನ್ನು ಬಾರಿಸಿದ ಮೇಲೆ ನಾನು ಅವಳ ಜೊತೆ ಮಲಗುವುದನ್ನು ನಿಲ್ಲಿಸಬೇಕಾಯಿತು.

ಅವಳ ತಂದೆ ಎಷ್ಟು ಒರಟನೋ ಸಿಂಗಾರೆವ್ವ ಅಷ್ಟು ಮೃದು. ಅವಳ ಮನಸ್ಸು ಹೂವಿನ ಹಾಗೆ, ಯಾರೊಬ್ಬರು ಮುಖ ಕೆಳಗೆ ಹಾಕಿದರೂ ಮುದುಡುವಾಕಿ. ಇನ್ನು ಕಣ್ಣೀರು ಕಂಡರಂತೂ ಚಡಪಡಿಸುತ್ತಿದ್ದಳು. ನೀನು ಸಿಂಗಾರೆವ್ವನನ್ನು ನೋಡಿಲ್ಲ, ಅಲ್ಲ? ಥೇಟ್ ರತಿದೇವಿಯ ಹಾಂಗಿದ್ದಳು. ಕೊರೆದಿಟ್ಟಂಥ ಹುಬ್ಬು, ನೀಳವಾದ ಮೂಗು, ತೆಳುವಾದ ಇಷ್ಟಿಷ್ಟೆ ತುಟಿ, ಆ ಗದ್ದ ಕೂಡ ಎಷ್ಟು ಚೆಂದಾಗಿತ್ತು! ಸದಾಕಾಲ ಹೊಚ್ಚಹೊಸ ಚೆಲುವು ಅವಳ ಮುಖದಲ್ಲಿ ಚಿಮ್ಮುತ್ತಿತ್ತು. ಆ ಬಟ್ಟಲಗಣ್ಣುಗಳೋ ಮುಗ್ಧವಾಗಿ ನೀಲಿಮಣಿ ಇಲ್ಲವೆ ವಜ್ರದ ಹಾಗೆ ಹೊಳೆಯುತ್ತಿದ್ದವು. ಅತ್ಯಂತ ಆಕರ್ಷಕವಾದ ಮೋಹಕವಾದ ರೂಪಲಾವಣ್ಯಗಳಿದ್ದವು ಆಕೆಗೆ. ಆಕೆ ನಕ್ಕರೆ ಅವಳನ್ನೇ ನೋಡಬೇಕೆನಿಸುತ್ತಿತ್ತು. ಅಂಥ ಮಾದಕ ನಗೆ.

ಯಾವಾಗಲೂ ಏನಾದರೂ ಮಾಡುವುದು, ಆಡುವುದು, ಹಾಡುವುದು, ನಗುವುದು, ಇಲ್ಲಾ ಕೀಟಲೆ ಮಾಡುವುದು ಅವಳ ಸ್ವಭಾವ. ಎದುರಿಗೆ ಏನು ಕಂಡರೂ ಹಿಗ್ಗುತ್ತಿದ್ದಳು. ಕೋಗಿಲೆಯ ದನಿ ಕೇಳುವುದೆಂದರೆ ಅವಳಿಗಿನ್ನೂ ಹಿಗ್ಗು, ಸುಗ್ಗಿ ಮುಗಿಯುತ್ತಿದ್ದಂತೆ ಅದು ಪಕ್ಕದ ತೋಟದಲ್ಲಿ ಕೂಗುತ್ತಿದ್ದಿತಲ್ಲ, ಅದನ್ನ ತಾನು ಮೊದಲು ಕೇಳಬೇಕೆಂದು ಅವಳಾಸೆ, ಹಾಗೇನಾದರೂ ಅದು ತನಗೇ ಮೊದಲು ಕೇಳಿದರೆ ಅವಳಿಗೆ ಆನಂದವಾಗುತ್ತಿತ್ತು. ಕುಣಿದಾಡಿ ಅದನ್ನು ಮತ್ತೆ ಮತ್ತೆ ನನ್ನ ಮುಂದೆ ಹೇಳುತ್ತಿದ್ದಳು. ಅವಳ ಹತ್ತಿರ ಎಷ್ಟು ಹೊತ್ತಿದ್ದರೂ, ಅವಳು ಕೀಟಲೆ ಮಾಡಿದರೂ ಅವಳ ಸಹವಾಸ ಸಾಕೆನಿಸುತ್ತಿರಲಿಲ್ಲ. ಯಾಕೆಂದರೆ ಅವಳ ಹೃದಯ ಅಷ್ಟು ಪರಿಶುದ್ಧವಾದುದು. ಈಗ ಕೀಟಲೆ ಮಾಡಿ ನನ್ನನ್ನು ಅಳಿಸಿದರೆ ಮರುಕ್ಷಣದಲ್ಲೇ ನನ್ನನ್ನು ನಗಿಸಿ ನಾನೇ ಅವಳನ್ನು ಮಾತಾಡಿಸುವ ಹಾಗೆ ಮಾಡುತ್ತಿದ್ದಳು. ನನಗೆ ಸ್ವಲ್ಪ ಬಿಡುವು ಸಿಕ್ಕರೂ ಸಾಕು ಅವಳೊಂದಿಗೆ ಆಟಕ್ಕೆ ನಿಲ್ಲುತ್ತಿದ್ದೆ. ಆ ಆಟಗಳಾದರೋ ಬರೀ ಗಂಡ - ಹೆಂಡತಿಯರ ಆಟ; ಪ್ರತಿ ಆಟದಲ್ಲೂ ನಾನು ಗಂಡ, ಅವಳು ಹೆಂಡತಿ. ಆದರೆ ಅವರಪ್ಪನ ಹಾಗೆ ನಾನು ಹೆಂಡತಿಯನ್ನು ಹೊಡೆದು ಹೆದರಿಸುವಂತಿರಲಿಲ್ಲ; ಆಕೆ ಹೇಳಿದ ಹಾಗೆ ಕೇಳಬೇಕಿತ್ತಷ್ಟೆ. ಆಶ್ಚರ್ಯವೆಂದರೆ ಆ ಆಟದಲ್ಲಿ ಅವಳು ಗೌಡ್ತಿಯಾಗುತ್ತಿದ್ದಳಲ್ಲ. ಅವಳ ಮನೆತುಂಬ ಮಕ್ಕಳು. ಸದಾ ಒಂದು ಅಳುವ ಕೂಸನ್ನು ಬಗಲಲ್ಲಿ ಹಿಡಿದುಕೊಂಡೋ, ಅದನ್ನು ಮಲಗಿಸುತ್ತಲೋ, ಅದಕ್ಕೆ ಮೊಲೆಯೂಡಿಸುತ್ತಲೋ ಇರುತ್ತಿದ್ದಳು. ನಾನು ಗಂಡ ತೋಟದಿಂದ ಬಂದರೆ ಬೇರೆ ಮಾತೇ ಇಲ್ಲ. ಸಂಪಿಗೆ (ಅವಳ ಹಿರಿಯ ಮಗಳು) ಹಾಗೆ ಮಾಡಿದಳು, ಶಿವಲಿಂಗ (ಮಗ) ಹೀಗೆ ಮಾಡಿದ - ಇದೇ ಗೋಳು. ಮಕ್ಕಳ ತಕರಾರು ಮುಗಿಯುವ ಮುನ್ನವೇ ನನ್ನನ್ನು ಯಾರಾದರೂ ಗೌಡ್ತಿಯರು "ಶೀನಿಂಗೀ" ಎಂದು ಕರೆಯುತ್ತಿದ್ದರು. ನಾನು ಓಡಲೇಬೇಕಾಗುತ್ತಿತ್ತು. ಆಗ ಅವಳ ಮುಖದಲ್ಲಿ ಮೂಡುವ ನಿರಾಸೆಯನ್ನು ನೋಡಲಾಗುತ್ತಿರಲಿಲ್ಲ. ಒಂದು ದಿನ ಅವಳ ಕೂಸಿಗೆ ಜ್ವರ ಬಂದಾಗಲೇ ಗೌಡ್ತಿಯ ಕರೆ ಕೇಳಿಸಿ ಓಡಿಹೋದೆ. ಸಿಂಗಾರೆವ್ವ ಕಣ್ಣೀರಿಟ್ಟು ಅಳೋದೆ? ಅಂಥಾ ಮಿದು ಮನಸ್ಸಿನವಳು.

ಮರ್ಯಾ ಸಣ್ಣವನಿದ್ದಾಗ ನಮ್ಮಲ್ಲೇ ಚಾಕರಿಗಿದ್ದ. ಅವನಿಗೆ ನಾವಾಗ 'ಮರ್ಯಾ ಮರ್ಯಾ' ಎಂದೇ ಕರೆಯುತ್ತಿದ್ದೆವು. ಅವನು ಹೊಲೇರ ಪೈಕಿ. ಅದ್ಯಾಕೋ ಏನೋ, ಅಂತೂ ಗೌಡನಿಗೆ ಆ ಹುಡುಗನ್ನ ಕಂಡರೆ ಆಗುತ್ತಿರಲಿಲ್ಲ. ಆ ಹುಡುಗ ತನ್ನ ಸರಿಕನೆಂಬಂತೆ ವೈರ ಸಾಧಿಸುತ್ತಿದ್ದ. ಗೌಡನೊಬ್ಬ ಚಾಕರಿ ಆಳಿನ ಬಗ್ಗೆ, ಅದೂ ಬಾಲಕನ ಮೇಲೆ ಈ ರೀತಿ ಸೇಡು ತೀರಿಸಿಕೊಳ್ಳುವುದು ನಮಗೆ ಮೋಜಾಗಿ ಕಾಣಿಸುತ್ತಿತ್ತು. ವಿನಾಕಾರಣ ಗೌಡ ಮರ್ಯಾನನ್ನು ಒದೆಯುತ್ತಿದ್ದ. ಹೊಡೆಯುತ್ತಿದ್ದ, ಬೈಗಳಂತೂ ಸೈಯೇ. ಗೌಡ ಆ ಹುಡುಗನನ್ನು

ಹೊಗಳುವುದಕ್ಕೆ ಎಷ್ಟೊಂದು ಕಾರಣಗಳಿದ್ದವು. ಹತ್ತಾಳಿನ ಕೆಲಸ ಒಬ್ಬನೇ ಮಾಡುತ್ತಿದ್ದ. ಮಾಡೋ ಕೆಲಸ ಇನ್ನೊಬ್ಬರು ಹೆಸರಿಡದ ಹಾಗೆ ಮಾಡುತ್ತಿದ್ದ. ಸಾಲದ್ದಕ್ಕೆ ಮಾಡಬೇಕಾದ ಕೆಲಸಗಳನ್ನು ತಾನೇ ಮುಂದಾಗಿ ಕಂಡು ಹೇಳಿಸಿಕೊಳ್ಳದೇ ಮಾಡುತ್ತಿದ್ದ. ಇಂಥಾ ನಿಯತ್ತಿನ ಚಾಕರ ಈಗಿರಲಿ, ಆಗಿನ ಕಾಲದಲ್ಲೂ ಸಿಗುತ್ತಿರಲಿಲ್ಲ. ಮರ್ಯಾ ಗೌಡನಿಂದ ಏಟು ತಿನ್ನುವ ದೃಶ್ಯವೂ ನಿಂತು ನೋಡುವ ಹಾಗಿರುತ್ತಿತ್ತು. ಗೌಡ ಕೋಲು, ಬಾರುಕೋಲು, ಕಾಲ್ಮರಿ - ಕೈಗೆ ಏನು ಸಿಕ್ಕರೆ ಅದರಿಂದ ಹೊಡೆಯುತ್ತಿದ್ದಲ್ಲ; ಮರ್ಯಾ ಅಲುಗುತ್ತಿರಲಿಲ್ಲ. ತನ್ನ ಮುಖದ ಚೇರಾಪಟ್ಟಿ ಬದಲಿಸುತ್ತಿರಲಿಲ್ಲ. ಉಕ್ಕಿನ ದೊಡ್ಡ ಗೊಂಬೆಯ ಹಾಗೆ, ಹ್ಯಾಗಿರುತ್ತಿದ್ದನೋ ಹಾಗೇ ನಿಂತಿರುತ್ತಿದ್ದ. ಆಗಾಗ ಆತನ ನೀಲಿಕಣ್ಣುಗಳು ಮಾತ್ರ ಗುರಿ ಹಿಡಿದು ಹೊಳೆಯುವ ಚೂರಿಯಂತಿರುತ್ತಿದ್ದವು. ಉಗುರು ಕಚ್ಚುತ್ತ ದುರುಗುಟ್ಟಿ ನೋಡುತ್ತಿದ್ದ. ಅದನ್ನು ನೋಡಿ ಗೌಡ ಇನ್ನಷ್ಟು ರೇಗುತ್ತಿದ್ದ. ರೇಗಿ ಇನ್ನಷ್ಟು ಹೊಡೆಯುತ್ತಿದ್ದ. ಇವನು ಮಾತ್ರ ಒಂದೇ ಭಂಗಿಯಲ್ಲಿ ನಿಂತಿರುತ್ತಿದ್ದ. ಗೌಡನೇ ಹೊಡೆದು ಒದ್ದು ಸುಸ್ತಾದಾಗ ಮರ್ಯಾನ ಅವ್ವನನ್ನು ಬೈಯುತ್ತ ಮರೆಯಾಗುತ್ತಿದ್ದ. ಈತ ಏನೇನೂ ಆಗದವರಂತೆ ತನ್ನ ಕೆಲಸ  ತಾನು ಮುಂದುವರಿಸುತ್ತಿದ್ದ.

ಒಂದು ದಿನ ಸಿಂಗಾರೆವ್ವ ಮತ್ತು ನಾನು ಕೊಟ್ಟಿಗೆಯಲ್ಲಿದ್ದೆವು. ಯಾಕೆಂದರೆ ನಮ್ಮ ಪ್ರೀತಿಯ ಕೆಂದಾಕಳು ಕಪಲಿ ಕರು ಹಾಕಿತ್ತು. ಅದನ್ನು ಕಂಡಂತೂ ಸಿಂಗಾರೆವ್ವನಿಗೆ ಹಿಗ್ಗಾದದ್ದು ಅಷ್ಟಿಷ್ಟಲ್ಲ. ಆ ಕರುವನ್ನು ಎಷ್ಟು ತಬ್ಬಿಕೊಂಡರೂ ತೃಪ್ತಿಯಿರಲಿಲ್ಲ. ಆಗಲೇ ಅದಕ್ಕೆ 'ತುಳಸಿ' ಎಂದು ಹೆಸರು ಕೂಡ ಇಟ್ಟಿದ್ದಳು. ಅದು ಮೊಲೆ ಕುಡಿಯುವಾಗಂತೂ ಅದನ್ನು ಬಿಟ್ಟು ಬೇರೆ ಕಡೆ ಹೋಗುತ್ತಲೇ ಇರಲಿಲ್ಲ. ಅದು ತಾಯಿಯ ಕೆಚ್ಚಲು ಗುದ್ದಿಗುದ್ದಿ ಮೊಲೆ ಕುಡಿಯುವಾಗ ಬಿಟ್ಟ ಕಣ್ಣಿನಿಂದ ಅದನ್ನೇ ನೋಡುತ್ತ ಕೂತಿದ್ದರೆ ಕೂತೇ, ನಿಂತಿದ್ದರೆ ನಿಂತೇಬಿಡುತ್ತಿದ್ದಳು. ಆಗ ಕಪಲಿಯೇನಾದರೂ ಬಾಲ ಅಲುಗಿಸಿದರೆ, ಒದ್ದರೆ ಇವಳಿಗೆ ಭಾರಿ ಸಿಟ್ಟು. "ಥೂ ಹಾಂಗ ಮಾಡಬಾರದು" ಎಂದು ಗದರಿಸಿ ಹತ್ತು ಹಡೆದ ತಾಯೊಬ್ಬಳು ಚೊಚ್ಚಿಲ ಬಾಣಂತಿಗೆ ಬುದ್ಧಿ ಹೇಳುವಂತೆ ಹೇಳುತ್ತಿದ್ದಳು. ಒಂದು ಮಧ್ಯಾಹ್ನವಂತೂ ಮಲಗಿದ್ದ ಆ ಕರುವನ್ನು ತನ್ನ ತೊಡೆಯ ಮೇಲೆ ಮಲಗುವಂತೆ ಹಾಕಿಕೊಳ್ಳ ಹೋಗಿ ಬಿದ್ದು ಅದರ ಕೆಳಗೆ ಸಿಕ್ಕು ಒದ್ದಾಡಿದ್ದಳು.

ಒಂದು ದಿನ ಬೆಳಿಗ್ಗೆ ಎದ್ದವಳೇ ಸಿಂಗಾರೆವ್ವ ಕೊಟ್ಟಿಗೆಗೆ ಬಂದಿದ್ದಳು. ಅವಳೊಂದಿಗೆ ನಾನೂ. ಮಲಗಿದ್ದ ಕರುವನ್ನು ಕಪಿಲೆ ನೆಕ್ಕುತ್ತಿತ್ತು. ಸಿಂಗಾರೆವ್ವ ಅಲ್ಲೆ ಕೂತು ಅದನ್ನೇ ಕಣ್ಣುತುಂಬ ನೋಡುತ್ತಿದ್ದಳು. ಮರ್ಯಾ ಸಗಣಿ ಬಳಿಯುತ್ತಿದ್ದ.

"ನಿನ್ನಿ ಏನಾಯ್ತಿಂದಿ! ಕಪಲಿ ಮೇಯಾಕ ಹೋಗಿತ್ತಲ್ಲ, ಮಧ್ಯಾಹ್ನ ಹಸಿವಾಗಿ ತುಳಸಿ ಅಂಬಾ ಅಂತ ಒದರಾಕ ಹತ್ತಿತ್ತು! ಅಂಬಾ ಅದಂರ ಏನು ಹೇಳು? ಅವ್ವಾ ಅವ್ವಾ 'ಅಂಥಾಂಗ"

- ಎಂದು ಸಿಂಗಾರೆವ್ವ ನಿನ್ನಿನ ಘಟನೆಯನ್ನು ಹೇಳುತ್ತಿದ್ದಳು. ಇಲ್ಲಿ ತುಳಸಿ ಅಂಬಾ ಎಂದು ಒದರಿದರೆ ಅಲ್ಲಿ ಅಡವಿಯಲ್ಲಿದ್ದ ಕಪಲಿಯ ಮೊಲೆ ಹಾಲು ತೊಟ್ಟಿಕ್ಕಿತಂತೆ! ಅದಕ್ಕೆ ಕಪಲಿ "ಅಯ್ ನನ್ನ ಶಿವನ! ನನ್ನ ಕಂದ ಹಸಿದೈತಲ್ಲ!" ಎಂದು ಓಡಿ ಬಂದಿತಂತೆ!

ಹೀಗೆ ಏನೇನೋ ಮುದ್ದುಮುದ್ದಾಗಿ ಹೇಳುತ್ತಿದ್ದಳು. ಮರ್ಯಾ ಕೂಡ ಇವಳ ಮಾತು ಕೇಳಿಸಿಕೊಳ್ಳುತ್ತಿದ್ದ. ಅಷ್ಟರಲ್ಲಿ ಗೌಡ ಯಾಕೋಏನೋ ಹೊರಗಿನಿಂದ ಬಿರುಗಾಳಿಯಂತೆ ಬಂದವನು "ಸೂಳಿ ಮಗನಽ!" ಎನ್ನುತ್ತ ಕೊಟ್ಟಿಗೆಯಲ್ಲಿಯ ಗೂಟಿಗಲ್ಲೊಂದನ್ನು ಎತ್ತಿ ಮರ್ಯಾನ ಮೇಲೆ ಹೇರುವುದಕ್ಕೆ ಸಿದ್ಧನಾದ! ಹಾಹಾ ಎನ್ನುವುದರೊಳಗೆ ಏನಾಗುತ್ತಿತ್ತೊ - ಕೂತಿದ್ದ ಸಿಂಗಾರೆವ್ವ ಚೆಂಗನೇ ನೆಗೆದು "ಎಪ್ಪಾಽ" ಎಂದವಳೇ ಮರ್ಯಾನನ್ನು ತಬ್ಬಿಕೊಂಡಳು. ಗೌಡ "ಸಿಂಗಾರೀ ಈ ಕಡೆ ಬಾ" ಅಂದ. ಅವಳು ಕೇಳಲಿಲ್ಲ. ಅಗಲವಾಗಿ ಕಣ್ಣು  ತೆರೆದು "ಬರಾಣಿಲ್ಲ ಬರಾಣಿಲ್ಲ" ಎನ್ನುತ್ತ ಗಡಗಡ ನಡುಗುತ್ತಿದ್ದಳು. ಗೌಡ ಕಲ್ಲನ್ನು ಬೇರೆ ಕಡೆ ಎಸೆದು ಸಿಂಗಾರೆವ್ವನನ್ನು ದರದರ ಎಳೆದುಕೊಂಡು ಹೋದ. "ಈ ಬೋಳಿಮಗ ಇಂದ ರೊಟ್ಟೀ ಹಾಕಬ್ಯಾಡ್ರೀ" ಎಂದು ಅಡಿಗೆ ಮನೆ ಕಡೆ ಮುಖಮಾಡಿ ಒದರಿ ಮಾಯವಾದ.

ಇದರಿಂದ ನನಗೇನೂ ಆಘಾತವಾಗಲಿಲ್ಲ. ಯಾಕೆಂದರೆ ಮರ್ಯಾನನ್ನು ಗೌಡ ಹೊಡೆದದ್ದನ್ನು ಅನೇಕ ಸಲ ನಾನು ಕಂಡಿದ್ದೆ. ಆದರೆ ಸಿಂಗಾರೆವ್ವ ಇದೇ ಮೊದಲ ಸಲ ನೋಡಿದ್ದಳು. ಯಾಕೆಂದರೆ ಗೌಡ ಈತನಕ ಅವನನ್ನು ಥಳಿಸಿದ್ದು ತೋಟದಲ್ಲಿ, ಮನೆಯಲ್ಲಲ್ಲ,

ಇದಾಯ್ತಲ್ಲ, ಅಂದಿನಿಂದ ಕರುವಿನ ಜೊತೆಗೆ ಮರ್ಯಾ ಕೂಡ ಅವಳ ಕರುಣೆಯ ಕಂದನಾದ. ಗೌಡ ಎಷ್ಟೆಷ್ಟು ಕೋಪಗೊಂಡರೆ ಅಷ್ಟಷ್ಟು ಮರ್ಯಾನ ಬಗ್ಗೆ ಇವಳ ಅನುಕಂಪ ಹೆಚ್ಚುತ್ತಿತ್ತು. ಮರ್ಯಾನಿಗೆ "ರೊಟ್ಟಿ ಹಾಕಬ್ಯಾಡ್ರೆ"ಂದು ಗೌಡ ಹೇಳಿದ್ದನಲ್ಲ. ಆ ದಿನ ಸಿಂಗಾರೆವ್ವ ಎರಡು ರೊಟ್ಟಿ ಕದ್ದು ಲಂಗದಲ್ಲಿ ಮುಚ್ಚಿಟ್ಟುಕೊಂಡು ಬಂದು ಮರ್ಯಾನ ಹರಿವಾಣದಲ್ಲಿ ಹಾಕಿಹೋದಳು. ಅಂದಿನಿಂದ ನಾವಿಬ್ಬರೂ ರೊಟ್ಟಿ ಕದಿಯುತ್ತಿದ್ದೆವು. ಮರ್ಯಾನ ಹರಿವಾಣದಲ್ಲಿ ಚೆಲ್ಲಿ ಬರುತ್ತಿದ್ದೆವು. ಬರಬರುತ್ತ ಸೇಂಗಾ, ಬೆಲ್ಲ, ಉಂಡಿಗಳನ್ನೂ ಕದ್ದುಕದ್ದು ಚೆಲ್ಲಿ ಬರುತ್ತಿದ್ದೆವು. ಮತ್ತು ಬೈಲಕಡೆ ಹೋದಾಗ ಅಕ್ಕಪಕ್ಕ ಕೂತು ನಮ್ಮ ಕಳ್ಳತನದ ಸಾಹಸದ ಬಗ್ಗೆ ಪಿಸಿಪಿಸಿ ಮಾತಾಡಿ ಖುಸಿಪಡುತ್ತಿದ್ದೆವು. ಆಮೇಲಾ ಮೇಲಂತೂ ಸಿಂಗಾರೆವ್ವ ತನಗಿತ್ತ ತಿಂಡಿಯ ಭಾಗವನ್ನು ನನಗೆ ಕೊಡುವ ಬದಲು ಮರ್ಯಾನ ಹರಿವಾಣಕ್ಕೇ ಹಾಕುತ್ತ ಬಂದಳು. ಆದರೆ ಅವ ಕಟುಕ. ಒಮ್ಮೆಯೋ ನಮ್ಮ ಕಡೆ ಒಂದು ಕೃತಜ್ಞತೆಯ ನೋಟವನ್ನೂ ಬೀರಲಿಲ್ಲ. ಅವನು ಗಂಟುಹಾಕಿದ ಹುಬ್ಬುಗಳನ್ನು ಒಮ್ಮೆ ಮಾತ್ರ ಸಡಿಲು ಮಾಡಿದರೂ ನಾವು ಅವನೊಂದಿಗೆ ಆಟ ಆಡಲು ತಯಾರಿದ್ದೆವು. ಯಾಕೆಂದರೆ ಮರ್ಯಾ ನಮ್ಮ ಓರಗೆಯವನೇ, ಬಹಳವಾದರೆ ನಮಗಿಂತ ಒಂದೆರೆಡು ವರ್ಷ ದೊಡ್ಡವನಿದ್ದಾನು. ಅವನಿಗೆ ಗೆಳೆಯರ್ಯಾರೂ ಇರಲಿಲ್ಲ. ಹ್ಯಾಗಿದ್ದಾರು? ಇವನೋ ಮಾತಿನವಲ್ಲ, ಸಲಿಗೆಯವನಲ್ಲ, ನಕ್ಕವನಲ್ಲ, ಸಾಲದ್ದಕ್ಕೆ ರೂಪವಂತನಲ್ಲ, ಅಸಹ್ಯವಾಗಿದ್ದನೆಂದೇ ಹೇಳಬೇಕು. ಎರೀ ಮಣ್ಣಿನಂಥ ಕರೀಮುಖ, ಹುಲ್ಲಿನಂಥ ಹುಬ್ಬು, ಮುಗಿಲು ನೋಡುವ ಸಣ್ಣಮೂಗು, ದಪ್ಪ ತುಟಿಗಳಲ್ಲಿ ಅವನ ಅಸಮಾನ ಹಲ್ಲು ಬಹಳ ಸ್ಪಷ್ಟವಾಗಿ ಕಾಣಿಸುತ್ತಿದ್ದವು. ಗದ್ದವೂ ಸಣ್ಣದು. ಕಣ್ಣಷ್ಟೇ ಚೆನ್ನಾಗಿದ್ದವು. ನೀಲಿಬಣ್ಣದ ಹೊಳೆಯುವ ಆ ಕಣ್ಣನ್ನಾದರೂ ನೋಡೋಣವೆಂದರೆ ಅಲ್ಲಿಯೂ ಮಾರಾಯ ಹಿರಿದ ಅಲಗನ್ನಿಟ್ಟಿರುತ್ತಿದ್ದ. ಆದರೆ ಕಹಕಿಯಲ್ಲ, ಒಂದನ್ನು ಮುಚ್ಚಿ ಒಂದನ್ನು ತೋರುವವನಲ್ಲ. ಮನಸ್ಸಿನಲ್ಲಿ ಏನಿರುತ್ತಿತ್ತೋ ಅದನ್ನೇ ಮುಖ ತೋರಿಸುತ್ತಿತ್ತು. ಅದಕ್ಕೇ ಅವನ ಬಗ್ಗೆ ಗೌರವಭಾವನೆ ಬರುತ್ತಿತ್ತು. ನಮ್ಮ ಓರಗೆಯವನೇ ಎಂದು ಹೇಳಿದೆನಲ್ಲ, ಮೈ ಪೈಲ್ವಾನನಂತೆ ದಷ್ಟಪುಷ್ಟವಾಗಿತ್ತು. ಆರಾರು ರೊಟ್ಟಿಗಳನ್ನು ಒಮ್ಮೆಯೇ ಕತ್ತರಿಸಿ ತಿನ್ನುತ್ತಿ. ಎಷ್ಟು ನೀಡಿದರೂ ಸಾಕೆನ್ನುತ್ತಿರಲಿಲ್ಲ. 'ಮತ್ತು ನೀಡಿದ್ದನ್ನು ಹಾಗೆ ಹೀಗನ್ನದೆ, ನೀಡುವವರ ಕಡೆ ಒಮ್ಮೆಯೂ ನೋಡದೆ ತಿನ್ನುತ್ತಿದ್ದ. ಅವನಿಗೆ ಇನ್ನಷ್ಟು ಏನಾದರೂ ಬೇಕಾದರೆ ಬೇಡುತ್ತಿರಲಿಲ್ಲ. ನಾವೇ ತಂದರೆ ತರಲಿ ಎಂದು ಸುಮ್ಮನೆ ಎಡೆಯಲ್ಲಿ ಬಲಗೈಯೂರಿ ಕೂರುತ್ತಿದ್ದ. ನಾವು ತಂದರೆ ಸೈ, ತರದಿದ್ದರೆ ಕೈ ತೊಳೆದುಕೊಂಡೆದ್ದುಬಿಡುತ್ತಿದ್ದ. ಆತ ಮಾತಾಡುತ್ತಿದ್ದುದ್ದು ಬಹಳ ಕಮ್ಮಿ. ಮಾತಾಡಿದರೆ ಉಕ್ಕು ಬಾರಿಸಿದಂಥ ದನಿಯಲ್ಲಿ ಹಾ ಹೂ ಅನ್ನುತ್ತಿದ್ದ, ಅಷ್ಟೆ. ನಮ್ಮನ್ನಂತೂ ಇವರು ತನ್ನ ಸಮಾನರಲ್ಲವೆಂಬಂತೆ ತಿರಸ್ಕರಿಸಿಬಿಟ್ಟಿದ್ದ. ಇಷ್ಟು ದಿನ ಊಟಕ್ಕೆ ಹಾಕಿದ್ದೆನಲ್ಲ, ನನ್ನ ಕಡೆ ಒಮ್ಮೆಯೂ ಭಾವಪೂರಿತ ದೃಷ್ಟಿ ಬೀರಿದವನಲ್ಲ, ನಾನಿರಲಿ, ಸಿಂಗಾರೆವ್ವ ಎಷ್ಟು ಮಾತಾಡಿಸಿದರೂ ಮಾತಾಡುತ್ತಿರಲಿಲ್ಲ. ಬರೀ ಅವಳ ಕಡೆಗೆ ನೋಡುತ್ತಿದ್ದ, ಅಷ್ಟೆ. ಅವನ ಮೈ ಹ್ಯಾಗೆ ತರುಣವಾಗಿರಲಿ, ಮನಸ್ಸಿನಲ್ಲಿ ಅವನಿಗಾಗಲೇ ವಯಸ್ಸಾಗಿತ್ತು. ಆ ವಯಸ್ಸಿನಲ್ಲೇ ಗೌಡನಂಥವನನ್ನು ಎದುರು ಹಾಕಿಕೊಳ್ಳುವುದೆಂದರೆ ಹುಡುಗಾಟವೇ?

ಅದ್ಯಾಕೆ ಗೌಡನಿಗೂ ಅವನಿಗೂ ವೈರವಿತ್ತೋ ಕಾಣೆ. ನಾವು ಸಣ್ಣವರು, ನಮಗೆ ಇವೆಲ್ಲ ಅಷ್ಟಾಗಿ ತಿಳಿಯುತ್ತಿರಲಿಲ್ಲ. ಮರ್ಯಾನ ಅಪ್ಪ ತೀರಿಕೊಂಡ ಮೇಲೆ ಗೌಡ ಅವನ ತಾಯಿಯನ್ನು ಇಟ್ಟಿಕೊಂಡಿದ್ದನಂತೆ. ಇದು ಮರ್ಯಾನಿಗೆ ಸರಿಬರದೆ ತಾಯಿಗೆ ತಾಕೀತು ಮಾಡಿದ್ದನಂತೆ. ಇನ್ನು ಕೆಲವರು ಆಡಿಕೊಳ್ಳುವ ಪ್ರಕಾರ ಮರ್ಯಾನ ತಂದೆ ಹೋದ ಮೇಲೆ ಅವನ ಜಮೀನನನ್ನು ಗೌಡ ಎತ್ತಿ ಹಾಕಿದ್ದನಂತೆ. ಇದು ಖರೆಯಿದ್ದೀತು. ಯಾಕೆಂದರೆ ಒಮ್ಮೆ ಹೊಲದಲ್ಲಿ ಅವರಿಬ್ಬರೂ ಜಗಳವಾಡುತ್ತಿದ್ದಾಗ ಮರ್ಯಾ ಆ ಹೊಲವನ್ನು ಅಂಗೈಯಿಂದ ಬಡಿಬಡಿದು "ಇದು ನಂದೆ"ಂದು ಹೇಳಿದ್ದನ್ನು ಸ್ವಥಾ ಕೇಳಿದ್ದೇನೆ, ಕಂಡಿದ್ದೇನೆ, ಅಲ್ಲದೆ ಗೌಡ ದೇವರಾಣೆ ಕೊಳಕ.

ಒಮ್ಮೆ ದೀಪಾವಳಿ ಹಬ್ಬದ ಸುತ್ತಾ ಇದ್ದೀತು. ನಮ್ಮ ತೋಟದ ಮಗಿ ಮಾವಿನ ಗಿಡಕ್ಕೆ ಕಾಯಾಗಿದ್ದವು. ದೀಪಾವಳಿಯಲ್ಲೆಂಥ ಮಾವಿನಕಾಯಿ ಎಂದು ಅನ್ನಬೇಡ. ಆ ಮಾವಿನಗಿಡ ವರ್ಷದಲ್ಲಿ ಎರಡು ಸಲ ಕಾಯಿ ಬಿಡೋದು. ದೀಪಾವಳಿಯ ಸುಮಾರಿಗೆ ಹತ್ತೆಂಟು ಕಾಯಿ ಬಿಡುತ್ತಿತ್ತು. ಆಗ ಊರಿನ ಎಲ್ಲ ಎಳೆಯರ ಬಾಯಲ್ಲಿ ನೀರು ಬರುತ್ತಿತ್ತು. ಆ ಕಾಲದಲ್ಲಿ ಮಾವಿನ ಕಾಯಾದರೆ ಯಾರಿಗೆ ಆಸೆಯಾಗುವುದಿಲ್ಲ? ಸುದ್ದಿ ಗೊತ್ತಾಗಿ ನಾನು ಸಿಂಗಾರೆವ್ವನಿಗೆ ಹೇಳಿದೆ. ಈ ತನಕ ಸಿಂಗಾರೆವ್ವ ಬಾಯಿಬಿಟ್ಟು ಮರ್ಯಾನಲ್ಲಿ ಏನನ್ನೂ ಕೇಳಿದವಳಲ್ಲ. ಅಲ್ಲದೆ ನಾವು ಕೊಡುತ್ತಿದ್ದ ರೊಟ್ಟಿ, ತಿಂಡಿಗಳಿಂದಾಗಿ ಆತ ನಮ್ಮ ಬಗ್ಗೆ ಮಾತಾಡಿ ತೋರದಿದ್ದರೂ, ತುಂಬ

ಸ್ನೇಹದಿಂದ ಇದ್ದಾನೆಂದೇ ನಮ್ಮ ತರ್ಕವಾಗಿತ್ತು. ಸಿಂಗಾರೆವ್ವ 'ಮರ್ಯಾ ಮಾವಿನಕಾಯಿ ತಗೊಂಬಾರೊ" ಎಂದಳು. ಯಥಾ ಪ್ರಕಾರ ಅವನು ಹಾ ಹೂ ಅನ್ನಲಿಲ್ಲ. ತೋಟಕ್ಕೆ ಹೋದ.

ಸಂಜೆ ಯಾವಾಗಾದೀತೆಂದು, ಮರ್ಯಾ ಯಾವಾಗ ಮಾವಿನಕಾಯಿ ತಂದಾನೆಂದು, ನಾವು ತಿಂದೇವೆಂದು ತುದಿಗಾಲಲ್ಲಿ ನಿಂತು ಕಾಯುತ್ತಿದ್ದೆವು. ಹೊತ್ತು ಮುಳುಗಿದ ಮೇಲೆ ಮರ್ಯಾ ಬಂದ. ನಾವೆಣಿಸಿದ್ದಂತೆ ತನ್ನ ಧೋತರದ ಉಡಿಯಲ್ಲಿ ಮಾವಿನಕಾಯಿ ತಂದಿದ್ದ. ಇವೆಲ್ಲ ಕದ್ದು ಮಾಡುವ ವ್ಯವಹಾರಗಳು. ನಾನು ಬೇಕಾದರೆ ಮರೆಪ್ಪನ ಜೊತೆ ಮಾತಾಡಬಹುದಿತ್ತು. ಸಿಂಗಾರೆವ್ವನಿಗದು ಸಾಧ್ಯವಿರಲಿಲ್ಲ. ಇನ್ನೂ ದೀಪ ಹಚ್ಚಿರಲಿಲ್ಲ. ನಾವಿಬ್ಬರೂ ಕೊಟ್ಟಿಗೆಗೆ ಹೋದೆವು. ಆಗಷ್ಟೇ ದನ ಕಟ್ಟಿ ಕೂತಿದ್ದ. ಬಹುಶಃ ನಮ್ಮ ದಾರೀ ಕಾಯುತ್ತ. ಇಂಥ ಸಂದರ್ಭದಲ್ಲಿ ಯಾರಾದರೂ ಕಂಡಾರೆಂದು ಒಬ್ಬರು ಬಾಗಿಲಲ್ಲಿ ನಿಂತು ಇನ್ನೊಬ್ಬರು ಹರಿವಾಣದ ತನಕ ಹೋಗುವುದು ನಮ್ಮ ರೂಢಿ. ಸಿಂಗಾರೆವ್ವ ಬಾಗಿಲಲ್ಲಿ ನಿಂತಳು. ನಾನು ಅವನ ಬಳಿ ಹೋಗಿ "ಮಾವಿನಕಾಯಿ ತಂದ್ಯಾ?" ಎಂದು ಕೇಳಿದೆ. "ಆಕೀನs ಕಳಸು" ಅಂದ. ನಾನು ತಿರುಗಿ ಹೋಗಿ "ನಿನ್ನ ಕೈಯಾಗs ಕೊಡತಾನಂತ. ಲಗು ಹೋಗಿ ಈಸಿಕೊಂಬಾ" ಅಂದೆ. ಸಿಂಗಾರೆವ್ವ ಓಡಿಹೋದಳು. ಕಿಟಕಿಯ ಹತ್ತಿರವೇ ನಿಂತಿದ್ದರಿಂದ ಮಂದ ಬೆಳಕಿನಲ್ಲಿ ನನಗೂ ಅವ ಕಾಣಿಸುತ್ತಿದ್ದ. ಸಿಂಗಾರೆವ್ವನ ಉಡಿಯಲ್ಲಿ ಮಾವಿನಕಾಯಿ ಹಾಕಿದ. ಅವಳು ತಿರುಗುವಷ್ಟರಲ್ಲಿ ಗಪ್ಪನೆ ತಬ್ಬಿಕೊಂಡು ಲಟಲಟನೆ ಅವಳ ಕೆನ್ನೆಗೆ ಮುದ್ದುಕೊಟ್ಟ! ಏನು ಎತ್ತ ತಿಳಿಯುವಷ್ಟರಲ್ಲಿ ಸಿಂಗಾರೆವ್ವ "ಎವ್ವಾ" ಎಂದು ಕಿರಿಚಿ ಓಡಿಬಂದಳು. ಇಬ್ಬರೂ ಪಡಸಾಲೆಗೆ ಒಂದೇ ಧಾವತಿಯಲ್ಲಿ ಓಡಿಬಂದೆವು.

"ಅಲ್ಲಿ ಆಗಲೇ ದೀಪ ಹಚ್ಚಿದ್ದರು. ಕಂಬಕ್ಕೊರಗಿ ನಿಂತಳು. ನಾನೂ ಅವಳ ಪಕ್ಕದಲ್ಲೇ ನಿಂತೆ. ಏದುಸಿರು ಬಿಡುತ್ತ ಹಾಗೆ ನನ್ನ ಭುಜಕ್ಕೆ ಒರಗಿದಳು. ಹುಡುಗಿ ಬೆಂಕಿಯ ಝಳ ತಾಗಿದ ಎಳೆ ಬಾಳೆಯೆಲೆಯಂತೆ ಮೆತ್ತಗಾಗಿದ್ದಳು. ತೊಡೆ ಥರಥರ ನಡುತ್ತಿದ್ದವು. ಮೂಗು, ಹಣೆಯ ಮೇಲೆ ಬೆವರು ಮೂಡಿತ್ತು. ಕಿವಿ ಸುಡುತ್ತಿದ್ದವು. ಕೆನ್ನೆಯ ಮೇಲೆ ಮರ್ಯಾನ ಬಾಯೆಂಜಲಿತ್ತು. ಒರೆಸಿದೆ. ಅವನ ಹಲ್ಲು ಮೂಡಿದ್ದವು. ಸುದೈವದಿಂದ ಅವಳು ಚೀರಿದ್ದು ಯಾರಿಗೂ ಕೇಳಿಸಿರಲಿಲ್ಲ. ಸಾವರಿಸಿಕೊಂಡಾದ ಮೇಲೆ "ಯಾರ ಮುಂದ ಹೇಳಬ್ಯಾಡ" ಎಂದು ನನ್ನ ಕಿವಿಯಲ್ಲಿ ಪಿಸುಗುಟ್ಟಿ ತನ್ನ ತಾಯಿಯ ಕೋಣೆಗೆ ಹೋದಳು.

ಎಂಟುದಿನ ಕಳೆದರೂ ನಾವಿಬ್ಬರೂ ನಗಾಡಲಿಲ್ಲ. ಬಹಳ ಗಂಭೀರವಾಗಿದ್ದೆವು. ಆಮೇಲೆ ನಾವು ಮತ್ತೊಮ್ಮೆ ಕೊಟ್ಟಿಗೆಯ ಕಡೆ ಸುಳಿಯಿಲ್ಲ. ಮರ್ಯಾನ ಸುದ್ದಿ ನಾವಂತೂ ಆಡುತ್ತಿರಲಿಲ್ಲ. ಇನ್ನ್ಯಾರಾದರೂ ಪ್ರಾಸಂಗಿಕವಾಗಿ ಎತ್ತಿದ್ದರೂ ಸಾಕು. ಸಿಂಗಾರೆವ್ವ ಕರಡಿ ಕಂಡ ಮಕ್ಕಳಂತೆ ಹೆದರುತ್ತಿದ್ದಳು. ನಾನಂತೂ ಅವನೊಬ್ಬ ನೀಚನೆಂದು ನಿರ್ಧರಿಸಿ, ನನಗೆ ಗೊತ್ತಿದ್ದ ಎಲ್ಲಾ ಬೈಗುಳಗಳಿಂದ ಅವನ ಕುಲದ ಎಲ್ಲರನ್ನೂ ಬೈದುಬಿಟ್ಟಿದ್ದೆ. ಒಂದೆರಡು ಸಲ ಆತ ನನ್ನ ಮಾತಾಡಿಸಿ ಸಿಂಗಾರೆವ್ವನನ್ನು ಕರೆತರುವಂತೆ ಹೇಳಿದ. ಹಾ ಹೂ ಎನ್ನದೆ ನಿರ್ಲಕ್ಷಿಸಿ ಸುಮ್ಮನಾಗಿದ್ದೆ. ಕರೆತರದಿದ್ದರೆ ಸೀಳಿ ಹೊಳೆಗಾಣಿಸುವುದಾಗಿ ಒಮ್ಮೆ ಬೆದರಿಕೆ ಹಾಕಿದ. ಆಗಲೂ ನಾನು ಸೊಪ್ಪುಹಾಕಲಿಲ್ಲ. ಇನ್ನೊಮ್ಮೆ ತಾನು ಉಪವಾಸವಿರುವುದಾಗಿಯೂ ಸಿಂಗಾರೆವ್ವ ರೊಟ್ಟಿ ಕೊಟ್ಟರೆ ತಿನ್ನುವುದಾಗಿಯೂ ಹೇಳಿದ. ಈ ಸಲ ಅವ ಹಣ್ಣಾದ ಹಾಗಿತ್ತು. ಕಣ್ಣಿನಲ್ಲಿ ಪಶ್ಚಾತ್ತಾಪ ಮೂಡಿತ್ತು. ಹೋಗಿ ಸಿಂಗಾರೆವ್ವನ ಕಿವಿಯಲ್ಲಿ ಹೇಳಿದೆ.

ಆ ದಿನ ಇಬ್ಬರಿಗೂ ರೊಟ್ಟಿ ಕದಿಯಲಾಗಲಿಲ್ಲ. ಕೊನೆಗೆ ಊಟ ಮಾಡುವಾಗ ಸಿಂಗ್ಯಾರೆವ್ವ ಹ್ಯಾಗೋ ತನ್ನ ತಟ್ಟೆಯೊಳಗಿನ ಎರಡು ರೊಟ್ಟಿಗಳನ್ನೇ ಕದ್ದುಕೊಟ್ಟಳು. ನಾನು ಕೊಟ್ಟಿಗೆಗೆ ತಗೊಂಡು ಹೋದಾಗ ಮರ್ಯಾ ನಮ್ಮ ದಾರಿಯನ್ನೇ ಕಾಯುತ್ತಿದ್ದ. ನನ್ನೊಬ್ಬಳನ್ನೇ ನೋಡಿ ಅವನಿಗೆ ಅಸಮಾಧಾನವಾಯ್ತು. ನಾನು ರೊಟ್ಟಿ ಕೊಡಹೋದರೆ "ಅವಳ್ಯಾಕ ಬರಲಿಲ್ಲ?" ಎಂದು ಕಣ್ಣು ಮೂಗು ಕಿಸಿದ. ಅವನ ಮುಖಕ್ಕೆ ಎರಡೂ ರೊಟ್ಟಿ ಎಸೆದು ಓಡಿಬಂದೆ. ಆ ದಿನ ಸಿಂಗಾರೆವ್ವ ಊಟ ಮಾಡಲೇ ಇಲ್ಲ. ಆದ್ದರಿಂದ ನಾನೂ ಮಾಡಲಿಲ್ಲ.

* * *

# ಅಧ್ಯಾಯ - ೪

ಈ ಮಧ್ಯೆ ಗೌಡ ಶಿರಟ್ಟಿಯ ಗೌಡನಿಗೆ ಅಜಾರಿಯೆಂದು ನೋಡಲಿಕ್ಕೆ ಹೋದ. ಊರಿನಲ್ಲಿ ಗೌಡನಿಲ್ಲ ಎಂದರೆ ನಮಗೂ ಹೆಂಗಸರಿಗೂ ಬಹಳ ಸಂತೋಷವಾಗುತ್ತಿತ್ತು. ಅವ ಮನೆಯಲ್ಲಿದ್ದಾನೆಂದರೆ ನಮಗ್ಯಾಕೋ ಕಟ್ಟಿಹಾಕಿಸಿಕೊಂಡ ಅನುಭವವಾಗುತ್ತಿತ್ತು. ದನಿ ಎತ್ತಿ ಮಾತಾಡುವ ಹಾಗಿಲ್ಲ, ಒಳಹೊರಗೆ ಸುಳಿದಾಡುವಂತಿಲ್ಲ. ಅಷ್ಟು ದೂರದ ಪಡಸಾಲೆಯಲ್ಲಿ ಅವ ಕೂತಿದ್ದರೂ ಅಡಿಗೆ ಮನೆಯಲ್ಲಿಯ ಹೆಂಗಸರು ಪಿಸುಗುಟ್ಟಿಕೊಂಡೇ ಮಾತಾಡಬೇಕು. ಆತ ಮನೆಯಲ್ಲಿದ್ದಾಗೆಲ್ಲ ದನಿ ಕೇಳಿಸುತ್ತಿದ್ದುದು ಆತನೊಬ್ಬನದೇ. ಬಹಳವಾದರೆ ಸಿಂಗಾರೆವ್ವನ ದನಿ ಅಷ್ಟಿಷ್ಟು ಕೇಳಿಸಬೇಕು. ಅವನೇನಾದರೂ ಸುಮ್ಮನೆ ಕೂತನೆನ್ನೋಣ, ಅಥವಾ ಮಲಗಿದನೆನ್ನೋಣ. ಆಗಂತೂ ತಾಸು ಗಟ್ಟಲೆ ಇಡೀ ಮನೆ ಮನುಷ್ಯರ ದನಿಯ ಸುಳಿವೇ ಇಲ್ಲದೆ ಬಣಗುಡುತ್ತಿತ್ತು. ಒಮ್ಮೊಮ್ಮೆ ಹಾಡುಹಗಲಲ್ಲೇ ಹೆದರಿಕೆಯಾಗುತ್ತಿತ್ತು. ಗೌಡ ಈಗ ಶಿರಟ್ಟಿಗೆ ಹೋಗಿದ್ದನಲ್ಲ, ನಾವು ಸಂತೋಷವಾಗಿರಬೇಕು. ಆದರೆ ನಮ್ಮಿಬ್ಬರ ಮುನ್ನಿನ ಖುಶಿ ಮಾತ್ರ ಹಿಂದಿರುಗಲೇ ಇಲ್ಲ.

ಸಿಂಗಾರೆವ್ವ ಆಗ ಐದನೇ ಇಯತ್ತೆ ಓದುತ್ತಿದ್ದಳು. ದಿನ ಮುಂಜಾನೆ ಅವಳನ್ನು ಸಾಲೆಯ ತನಕ ಕಳಿಸಿ, ದನ ಕಾಡಿಗೆ ಹೊಡೆಯೋ ಸಮಯಕ್ಕೆ ಮತ್ತೆ ಸಾಲೆಗೆ ಹೋಗಿ ಕರೆತರುತ್ತಿದ್ದೆ. ನಾವಿಬ್ಬರೂ ಸಾಲೆಗೆ ಹೊಂಟಾಗೆಲ್ಲ ಮರ್ಯಾ ಕೊಟ್ಟಿಗೆ ಬಾಗಿಲಲ್ಲಿ ಸಿಂಗಾರೆವ್ವನನ್ನು ನೋಡುತ್ತ ನಿಂತಿರುತ್ತಿದ್ದ. ಅದು ಗೊತ್ತಾಗಿ ಸಿಂಗಾರೆವ್ವ ಜೋರಿನಿಂದ ನಡೆಯುತ್ತಿದ್ದಳು. ಗೌಡ ಊರಿನಲ್ಲಿ ಇರಲಿಲ್ಲವಲ್ಲ. ಆದ್ದರಿಂದ ಮರ್ಯಾನ ಬಗ್ಗೆ ಹೆದರಿಕೆ ಇನ್ನೂ ಜಾಸ್ತಿಯಾಗಿತ್ತು. ಸಿಂಗಾರೆವ್ವನಿಗೆ ಇನ್ನೂ ಹೆಚ್ಚು, ಯಾಕೆಂದರೆ ಆತ ಏನೂ ಮಾಡಬಲ್ಲವನಾಗಿದ್ದ. ಆದರೆ ನಾವು ಹೆದರುವಂಥದೇನೂ ನಡೆಯಲಿಲ್ಲ. ಅಷ್ಟರಲ್ಲಿ ಗೌಡ ಅವಸರದಿಂದ ಬಂದ.

ಊರಿಗೆ ಹೋದ ಗೌಡ ಸಾಮಾನ್ಯವಾಗಿ ದಣಿದು ಬರುವುದು ರೂಢಿ. ಆದರೆ ಈ ಸಲ ಬಹಳ ತರಾತುರಿಯಲ್ಲಿದ್ದ. ಮತ್ತು “ಎಲ್ಲಾರು ಇಂದಃ ಸವದತ್ತಿ ಎಲ್ಲಮ್ಮನ ಗುಡ್ಡಕ ಹೋಗಬೇಕು. ಲಗು ತಯಾರಾಗ್ರಿ” ಎಂದೂ ಹೇಳಿದ. ಆಳನ್ನು ಕರೆದು ಗಾಡಿಗೆ ಕೊಲ್ಲಾರಿ ಬಿಗಿಯಲು ಹೇಳಿದ. ಸಿಂಗಾರೆವ್ವನನ್ನು ಕರೆದು ತೊಡೆಯ ಮೇಲೆ ಕುಳ್ಳರಿಸಿಕೊಂಡು ಅಚ್ಚೆ ಮಾಡಿದ. “ನೀನೂ ಗುಡ್ಡಕ್ಕೆ ಬರಬೇಕವಾ” ಎಂದ. ಸಿಂಗಾರೆವ್ವ “ಶೀನಿಂಗೀನ ಕರತರಲಾ ಅಪ್ಪ?” ಎಂದು ಕೇಳಿದಳು. “ಓಹೋ ಆಕೀನೂ ಬರಲಿ” ಎಂದು ಗೌಡ ದೊಡ್ಡಮನಸ್ಸು ತೋರಿಸಿದ. ಆಗಂತೂ ನಮ್ಮ ಸಂತೋಷಕ್ಕೆ ಪಾರವೇ ಇರಲಿಲ್ಲ. ಇಬ್ಬರೂ ಹಿತ್ತಲಿಗೋಡಿ ಕೈಕೈ ತಟ್ಟಿ ಕುಣಿದಾಡಿದೆವು. ಎಷ್ಟು ಬೇಗ ಹೊರಟೇವೋ ಎಂದು ನಾವು ಆತುರರಾದದ್ದು ನಿಜ. ಆದರೆ ನಮ್ಮ ಆತುರವನ್ನೂ ಮೀರಿ ಗಾಡಿ ತಯಾರಿಸಿದ್ದರು. ಗೌಡ ತನ್ನ ಜೋಡುನಳಿಗೆಯ ಬಂದೂಕನ್ನು ಗಾಡಿಯಲ್ಲಿ ಹಾಕಿದ. ಹೆಂಗಸರಿಗೆ ಇದು ಸರಿಬರಲಿಲ್ಲ. ದೇವರು ದಿಂಡರೆಂದರೂ ಯಾವುದಕ್ಕೂ ಒಂದು ತಯಾರಿ ಬೇಡವೇ? ಬೇಡವೆಂದೇ ಗೌಡ ಹೇಳಿದ. “ಒಂದಿತ್ತು, ಒಂದಿಲ್ಲ, ಮೊದಲು ಗಾಡಿ ಹತ್ತರಿ” ಎಂದು ಹೇಳಿದ. ಗೌಡನಿಗೆ ಎದುರಾಡುವ ಶಕ್ತಿ ಯಾರಿಗಿತ್ತು? ಮನಸ್ಸಿನಲ್ಲಿಯೇ ಅದು ಇದು ಹೇಳಿಕೊಳ್ಳುತ್ತ ಗಾಡಿ ಹತ್ತಿದರು. ಗೌಡ ಮೊದಲೇ ಹೇಳಿದ್ದಿರಬೇಕು. ಮಠದ ಜಂಗಮ ಅಜ್ಜಯ್ಯನೂ ಗಾಡಿ ಹತ್ತಿದ. ಗಾಡಿ ಹೊರಟಾಗ ಮಟಮಟ ಮಧ್ಯಾಹ್ನವಾಗಿತ್ತು.

ಗೌಡ ಗಾಡಿಯ ಮುಂದೆ ಮುಂದೆ ನಡೆದದ್ದರಿಂದ ಒಳಗಿದ್ದ ಹೆಂಗಸರ ವಟವಟ ನಡದೇ ಇತ್ತು. ಅದೇನೆಂದು ತಿಳಿಯುವ ಗೋಜಿಗೆ ನಾವು ಹೋಗಲೇ ಇಲ್ಲ. ಅಜ್ಜಯ್ಯ ಆಗಾಗ ಬಾಯಿ ಹಾಕುತ್ತಿದ್ದ. ನಮಗೋ ರೆಕ್ಕೆ ಮೂಡಿದ್ದವು. ಹೊಸ ಸೀಮೆ, ಹೊಸ ನೆಲ, ಹೊಸ ಗುಡ್ಡಬೆಟ್ಟಗಳನ್ನು ಕಣ್ಣರಳಿಸಿಕೊಂಡು ನೋಡುತ್ತ ಹತ್ತಿದ ಊರುಗಳ ಹೆಸರು ಕೇಳುತ್ತ ಖುಚಿ ಖುಷಿಯಾಗಿದ್ದೆವು. ಗುಡ್ಡಬೆಟ್ಟಗಳನ್ನು ಇದೇ ಮೊದಲ ಬಾರಿಯೆಂಬಂತೆ, ದಾರಿಗೆ ಯಾರೆದುರಾದರೂ ಮನುಷ್ಯರನ್ನೇ ಕಾಣದವರಂತೆ ಕುತೂಹಲದಿಂದ ನೋಡುತ್ತಿದ್ದೆವು.

ಹೊತ್ತು ಮುಳುಗುವ ಮುನ್ನ ದಾರಿಯಲ್ಲಿ ಸಿಕ್ಕ ಹಳ್ಳದಲ್ಲಿ ಊಟ ಮಾಡಿ ಮತ್ತೆ ಅವಸರದಿಂದ ಗಾಡಿ ಬಿಟ್ಟರು. ಕತ್ತಲಾದ ಮೇಲೆ ಬಹಳ ಹೊತ್ತು ಎಚ್ಚರಿರಲಾಗಲಿಲ್ಲ. ತನ್ನ ತಾಯಿಯ ತೊಡೆಯ ಮೇಲೆ ಸಿಂಗಾರೆವ್ವ ನಿದ್ದೆ ಹೋದಳು. ನಾನೂ ಕೂತಲ್ಲೇ ಕಣ್ಣು ಮುಚ್ಚಿದೆ.

ಆಮೇಲೆ ನನಗೆ ಎಚ್ಚರವಾದದ್ದು ಬಡಿದು ಎಬ್ಬಿಸಿದಾಗಲೇ, ಸಿಂಗಾರೆವ್ವನಿಗಿನ್ನೂ ಎಚ್ಚರವಾಗಿರಲಿಲ್ಲ. ಅವರವ್ವ ಅವಳನ್ನು ಅರೆನಿದ್ದೆಯಲ್ಲೇ ಎಳೆದುಕೊಂಡು ನಡೆದಳು. ಒಂದು ಮನೆಯನ್ನು ಹೊಕ್ಕೆವು. ಚಿಮಣಿ ದೀಪದಲ್ಲಿ ಕೂಡ ಅದೊಂದು ದೊಡ್ಡ ಮನೆಯೆಂದು ತಿಳಿಯುತ್ತಿತ್ತು. ಅಲ್ಲಿದ್ದ ಐದಾರು ಮಂದಿ ನಮ್ಮ ದಾರಿಯನ್ನೇ ಕಾಯುತ್ತಿದ್ದವರಂತೆ, ನಮ್ಮ ವ್ಯವಸ್ಥೆಯನ್ನೆಲ್ಲ ಮೊದಲೇ ಲೆಕ್ಕಹಾಕಿದ್ದಂತೆ ಕಂಡರು. ದೊಡ್ಡ ಪಡಸಾಲೆಯಲ್ಲಿ ನಮ್ಮನ್ನೆಲ್ಲ ಇಳಿಸಿ, ಜಳಕ ಮಾಡಬೇಕೆಂದು ಬಚ್ಚಲುಮನೆ ತೋರಿಸಿದರು. ಇಂಥ ರಾತ್ರಿಯಲ್ಲೇಕೆ ಜಳಕ ಎಂದು ನನಗರ್ಥವಾಗಲಿಲ್ಲ. ನಾವಿಳಿದು ಅರೆಘಳಿಗೆ ಕೂಡ ಆಗಿರಲಿಲ್ಲ. ಸಿಂಗಾರೆವ್ವನ ತಾಯಿ ಅಳುವುದೂ, ಉಳಿದವರು ಅವಳ ದುಃಖದಲ್ಲಿ ಪಾಲ್ಗೊಳ್ಳುವುದೂ ಕೇಳಿಸಿತು. ನಿಂಗವ್ವ ಗೌಡ್ತಿ ಸಿಂಗಾರೆವ್ವನನ್ನು ತಬ್ಬಿಕೊಂಡು "ಮಗಳಃ ಮಗಳಃ!" ಎಂದು ಅಳುತ್ತಿರುವುದನ್ನು ಕೇಳಿ ಸಿಂಗಾರೆವ್ವನಿಗೇನಾಯಿತೆಂದು ನನಗೆ ಹೆದರಿಕೆಯಾಯಿತು. ಸಿಂಗಾರೆವ್ವ ಈಗ ಪೂರ್ತಿ ಎಚ್ಚರವಾಗಿದ್ದಳು, ಇದೇನೆಂದು ಗೆಳತಿಯನ್ನು ಕೇಳುವಂತಿರಲಿಲ್ಲ. ಹೆಂಗಸರ ಶಾಪ, ಬೈಗಳ, ಅಸಮಾಧಾನದ ಮಾತುಗಳಿಂದ ನನಗೆ ತಿಳಿಯಿತು; ನಾವು ಎಲ್ಲವ್ವನ ಗುಡ್ಡಕ್ಕೆ ಬಂದಿರಲಿಲ್ಲ, ಶಿರಟ್ಟಿಗೆ ಸಿಂಗಾರೆವ್ವನ ಮದುವೆಗೆ ಬಂದಿದ್ದೆವು! - ಎಂದು.

ಇರುವ ಒಬ್ಬಳೇ ಮಗಳ ಮದುವೆಯನ್ನು ಎಂಥಾ ಅದ್ದೂರಿಯಿಂದ ಮಾಡಬೇಕು; ಅದು ಬಿಟ್ಟು ಕಳ್ಳತನದಲ್ಲಿ ಮಾಡುವುದೆಂದರೇನು? ಸ್ವಂತ ಮಗಳ ಮದುವೆ ದಿಬ್ಬಣವನ್ನೂ ಕಳ್ಳತನದಲ್ಲಿ ಹೊರಡಿಸಬೇಕೇ? ಅದೂ ಅಕ್ಕಪಕ್ಕದ ಅವ್ವಕ್ಕಗಳಿಲ್ಲ, ಊರವರಿಲ್ಲ, ಕೇರಿಯವರಿಲ್ಲ; ಒಂದು ಬಾರಿಸುವರಿಲ್ಲ ಊದುರವರಿಲ್ಲ - ಹೋಗಲಿ ಎಲ್ಲವ್ವನ ಗುಡ್ಡಕ್ಕೆಂದು ಕರೆತಂದು, ಮಧ್ಯೆ ದಾರಿ ತಪ್ಪಿಸಿ ಶಿರಟ್ಟಿಗೆ ಕರೆತಂದು ಸ್ವಂತ ಹೆಂಡತಿಗೇ, ಸ್ವಂತ ಮಗಳಿಗೇ ಈ ರೀತಿ ಮೋಸ ಮಾಡುವುದೇ? ಗೌಡನ ಮಗಳ ಮದುವೆಯೆಂದರೆ ಊರಿಗೂರೇ ಸಡಗರ ಮಾಡಬೇಕು. ಇಲ್ಲಿ ನೋಡಿದರೆ ಊರವರೇನು ಬಂತು? ಇದ್ದ ಮನೆಯವರೂ ಸಂತೋಷವಾಗಿರಲಿಲ್ಲವೆಂದರೆ ಅದೆಂಥ ಮದುವೆ? ಇದನ್ನೇ ಆಡಿಕೊಂಡು ಹೆಂಗಸರು ಹಾಡಿಕೊಂಡು ಅಳುತ್ತಿದ್ದರು. ಅವಳ ತಾಯಿ ಅಳುತ್ತಿದ್ದುದರಿಂದ ಸಿಂಗಾರೆವ್ವನೂ ಅಳುತ್ತಿದ್ದಳು. ಇದರಲ್ಲೇನೋ ಮೋಸ ಇರಬೇಕೆಂದು ಅವರೆಲ್ಲ ಆಡಿಕೊಂಡರು. ಆಡಿಕೊಂಡರಷ್ಟೆ; ಗೌಡನೆದುರಿಗೆ ಹೇಳಬೇಕಲ್ಲ? ಯಾರು ಹೇಳಲಿಲ್ಲ. ಯಾಕೆಂದರೆ ಅಷ್ಟರಲ್ಲಿ ಅಲ್ಲೇ ಎಲ್ಲಿಯೋ ಹೋಗಿದ್ದ ಗೌಡ ಸುಂಟರಗಾಳಿಯಂತೆ ಒಳಬಂದು "ಯಾರಾದ್ರೂ ತುಟಿಪಿಟಕ್ಕಂದರ ಚರ್ಮ ಸುಲದ ತೂಗ ಹಾಕತೀನಿ!" ಎಂದು ಹೇಳಿ, ನಿಜವಾಗಿ ಸುಲಿಯುವನೋ ಎಂಬಂತೇ ಅಲ್ಲೇ ತೂಗುಹಾಕಿದ್ದ ಒಂದು ಕತ್ತಿ ತಗೊಂಡು ಜಳಪಿಸಿ "ಹುಷಾರ್!" ಎಂದು ಗರ್ಜನೆ ಮಾಡಿದ.

ಎಲ್ಲರ ನಿಟ್ಟುಸಿರು ಹಾರಿಹೋದವು. ಕಣ್ಣೀರು ಇದ್ದಲ್ಲೇ ಇಂಗಿದವು. ಸಿಂಗಾರೆವ್ವನ ತಾಯಿ ಕುಸಿದವಳು ಮೇಲೇಳಲು ಒಪ್ಪಲೇ ಇಲ್ಲ. ಆ ಮನೆಯ ಒಬ್ಬಿಬ್ಬರು ಹೆಂಗಸರೂ ನೆರವಿಗೆ ಬಂದರು. ಆಗಲೇ ಬೆಳ್ಳಂಬೆಳಕಾಗಿತ್ತು. ಹಾಹಾ ಅನ್ನುವುದರೊಳಗೆ ಸಿಂಗಾರೆವ್ವನಿಗೆ ಜಳಕ ಕೂಡ ಮಾಡಿಸದೆ ಸೀರೆ ಉಡಿಸಿದರು. ಅವಸರದಲ್ಲಿ ತಲೆ ಬಾಚಿ ಮೈತುಂಬ ಆಭರಣ ತೊಡಿಸಿದರು, ಕೈತುಂಬ ಬಳೆ ಇಡಿಸಿದರು. ಸಿಂಗಾರೆವ್ವ ಆಗ ಎಷ್ಟು ಚಂದ ಕಾಣುತ್ತಿದ್ದಳೆಂದರೆ ಸಿಂಗರಿಸುತ್ತಿದ್ದ ಆ ಹೆಂಗಸರೂ ಕಣ್ಣೀರು ಸುರಿಸಿದರು. ಪುಣ್ಯಾತ್ಮ ಅದಕ್ಕಾದರೂ ಅವಕಾಶ ಕೊಟ್ಟನೇ? - ಓಡ್ಯೋಡಿ ಬಂದು ಸಿಂಗರಿಸುತ್ತಿದ್ದವರ ಕೈಯಲ್ಲಿಂದ ಕೂಸನ್ನು ಕಸಿದುಕೊಂಡು ಹೋಗೇ ಬಿಟ್ಟ! ಅಮಂಗಳ ಆಡಬಾರದು, ಆದರೂ ಹೇಳುತ್ತೇನೆ - ಅವನು ಸಿಂಗಾರೆವ್ವನನ್ನು ಎತ್ತಿಕೊಂಡು ಹೋದೊಡನೆ ಸುಡುಗಾಡಕ್ಕೆ ಒಯ್ಯುವ ಹೆಣದ ಹಿಂದೆ ಧಾವಿಸುವಂತೆ ಹೆಂಗಸರು ಬೆನ್ನುಹತ್ತಿ ಹೋದರು. ನಾನೂ ಓಡಿಹೋದೆ.

ಅಲ್ಲಿ ನೋಡಿದರೆ, ಒಂದು ಬಾಜಾಬಜಂತ್ರಿಯೇ, ಒಂದು ಹಾಡೇ, ಒಂದು ಬೀಗರೇ, ಒಂದು ಧಾರೆಯೇ, ಏನಿದೆ? ಒಬ್ಬ ಫೋಟೋ ಹಿಡಿಯೋನು, ಅವನ ಯಂತ್ರ, ಅದರೆದುರಿಗೆ ಹಿಂಡುಹಿಂಡು ಜನ, ಅವರ ಮಧ್ಯೆ ಬಾಸಿಂಗ ಕಟ್ಟಿಕೊಂಡ ವರ, ಅವನ ಎಡಗಡೆ ಸಿಂಗಾರೆವ್ವನನ್ನು ಕೂರಿಸಿದ್ದರು. ಗೌಡ ತನ್ನ ಕೈಯನ್ನು ವರನ ಕೈಗೆ ಆಧಾರವಾಗಿ ಕೊಟ್ಟು ಸಿಂಗಾರೆವ್ವನ ಕೈ ಹಿಡಿಯುವಂತೆ ಮಾಡಿದ್ದ. ಅವಸರದಲ್ಲಿ ಎರಡು ಫೋಟೋ ಹಿಡಿದರು. ಆಯ್ತಲ್ಲ, ಮದುವೆ ಮುಗಿಯಿತು!

"ನೀ ನಂಬುತೀಯೇನಪ್ಪ, ಮದಿವಿ ಖರೆ ಖರೇನಃ ಮುಗೀತು!"

- ಈ ಮಾತು ಹೇಳುತ್ತ, ನನ್ನನ್ನೇ ನೋಡುತ್ತ ಶೀನಿಂಗವ್ವ ಗೋಡೆಗೊರಗಿದಳು. ನಾನು ಬೆಕ್ಕಸ ಬೆರಗಾಗಿದ್ದೆ. ಕಂಡು ಕೇಳರಿಯದ ಇಂಥ ಮದುವೆಯಿಂದ ಯಾರಿಗೆ ಹೊಯ್ಕಾಗುವುದಿಲ್ಲ? ಏನು, ಎತ್ತ ಹ್ಯಾಗೆಂದು ಕಣ್ಣರಳಿಸಿ ಕೇಳುತ್ತಿದ್ದಂತೆ ನನ್ನ ಪ್ರಶ್ನೆಗಳನ್ನೆಲ್ಲ ಮಧ್ಯದಲ್ಲೇ ಕತ್ತರಿಸಿ ಹೇಳಿದಳು:

"ಇಷ್ಟಕ್ಕs ಕಣ್ಣ ಕಿಸಿದರ ಹೆಂಗಪಾ? ಇಲ್ಲಿ ಕೇಳು, ಮಗಳ ಮದಿವೀ ಹೆಣದ ಜೋಡಿ ಮಾಡಿದ್ದ!"

ಈ ಮಾತಿನಿಂದ ನನಗೆ ಆಘಾತವಾಗಿದ್ದಿತೆಂದು ಮುದಕಿಗೂ ಗೊತ್ತಿತ್ತು. ತುಂಟತನದಿಂದ ತುಸು ನಕ್ಕಳು ಕೂಡ. ನನಗೆ ಆಘಾತ ಮಾಡುವುದಕ್ಕಾಗಿಯೇ ಹೀಗೆ ಹೇಳಿರಬಹುದೇ ಎಂದೂ ಅನ್ನಿಸಿತು. ಅವಳೋ ಇಂಥ ಅಘಟಿತಗಳನ್ನು ಅನುಭವಿಸಿ ಹಣ್ಣಾದವಳು. ನಾನೋ ಸಾಹಿತ್ಯದ ಕೃತಿಗಳಲ್ಲಿ ಕೂಡ ಇಂಥ ಘಟನೆಗಳನ್ನು ಓದಿದವನಲ್ಲ. ತುಸು ಹೊತ್ತು ನನ್ನ ಮುಖಭಾವಗಳನ್ನು ನೋಡಿ ಮನಸ್ಸಿನಲ್ಲೇ ತುಸು ಆಟ ಆಡಿ, ಮುದುಕಿ ಮತ್ತೆ ಕಥೆ ಮುಂದುವರಿಸಿದರಳು;

"ಮದುವೆಯಾದ ಕೂಡಲೇ ಅವಸರದಲ್ಲಿ ಊಟದ ಶಾಸ್ತ್ರ ಮುಗಿಸಿ ನಮ್ಮನ್ನು ಮತ್ತೆ ಗಾಡಿಯೊಳಗೆ ತಳ್ಳು ಎತ್ತಿನ ಕೊರಳು ಕಟ್ಟಿದರು. ಯಾರ ಮುಖದಲ್ಲೂ ಗೆಲುವಿರಲಿಲ್ಲ. ಗೌಡ್ತಿ ಸುಮ್ಮನೆ ಕಣ್ಣೀರು ಸುರಿಸುತ್ತಿದ್ದಳು. ಸಿಂಗಾರೆವ್ವ ತನ್ನ ತಾಯಿಯನ್ನೊಮ್ಮೆ, ನನ್ನನ್ನೊಮ್ಮೆ ನೋಡುತ್ತ ಖಿನ್ನಳಾಗಿ ಕೂತಿದ್ದಳು. ಮದುವೆಯ ಉಡುಪಿನಲ್ಲೇ ಅವಳನ್ನು ಗಾಡಿಗೇರಿಸಲಾಗಿತ್ತು. ಮೈತುಂಬ ಆಭರಣಗಳಿದ್ದವು. ಅಂಥ ಉಸಿರು ಕಟ್ಟುವ ವಾತಾವರಣದಲ್ಲೂ ಅವಳ ಚೆಲುವನ್ನು ನಾನು ಗಮನಿಸದಿರಲು ಸಾಧ್ಯವಾಗಲಿಲ್ಲ. ಅವಳು ಹೆಣದ ಜೊತೆಗೆ ಮದುವೆಯಾದದ್ದು ನಮಗಿನ್ನೂ ಗೊತ್ತಾಗಿರಲಿಲ್ಲ. ವರ ಬಿಳಿಚಿಕೊಂಡಿದ್ದ, ಮುಚ್ಚಿ ಹೇಳುವುದೇನು ಬಂತು; ಹೆಣದ ಹಾಗೇ ಇದ್ದ. ಮೈಯಲ್ಲಿ ಹುಷಾರಿರಲಿಲ್ಲವಲ್ಲ, ಅದಕ್ಕೇ ಹಾಗಿದ್ದಿದ್ದಾನು. ಮುಂದೆ ಇದೆಲ್ಲ ಒಂದಿಲ್ಲೊಂದು ದಿನ ಸರಿಹೋಗುವಂಥಾದ್ದು. ಮದುವೆ ಅವಸರದಲ್ಲಾಯಿತು. ಬಂಧು - ಬಳಗ ಕೂಡಲಿಲ್ಲ, ಅದ್ದೂರಿಯಾಗಿರಲಿಲ್ಲ ಎನ್ನುವುದನ್ನು ಬಿಟ್ಟರೆ ಉಳಿದಂತೆ ನನಗೆ ಆನಂದವೇ ಆಗಿತ್ತು; ಆನಂದವೇನು, ಅಸೂಯೆ ಕೂಡ. ಆ ಹುಡುಗ ಗೌಡನ ಒಬ್ಬನೇ ಮಗ. ಎಷ್ಟೊಂದು ಆಸ್ತಿ, ಎಂಥ ದೊಡ್ಡಮನೆ, ಎಷ್ಟು ಆಭರಣ ಹಾಕಿದ್ದರು!... ಇತ್ಯಾದಿ. ಆದರೆ ಮುಂದೆ ಗಾಡಿಯನ್ನು ತುಸು ಮುಂದೆ ಕಳಿಸಿ ಗೌಡ ತಿರುಗಿ ಶಿರಟ್ಟಿಗೇ ಹೋದ. ಆಗ ಎಲ್ಲರಿಗೆ ಉಸಿರು ಬಂತು. ಅಜ್ಜಯ್ಯ ಮೆಲ್ಲಗೆ ಬಾಯಿಬಿಟ್ಟ. ಮದುವೆಯ ಪೌರೋಹಿತ್ಯ ಆತನದೇ ತಾನೆ? ಅವನಿಗೆಲ್ಲ ಗೊತ್ತಾಯಿತು. ನಡೆದಿದ್ದನ್ನೆಲ್ಲ ಒಂದೂ ಬಿಡದೆ ಹೇಳಿದ. ಅದನ್ನು ಕೇಳಿ ಹೆಂಗಸರು ಹೆಣದ ಮುಂದೆ ಅತ್ತಂತೆ ಸಿಂಗಾರೆವ್ವನನ್ನು ತಬ್ಬಿಕೊಂಡು ಅತ್ತರು. ಅಳುತ್ತಲೇ ಊರು ಸೇರಿದೆವು. ಅದು ನಡೆದದ್ದು ಹೀಗೆ:

ಶಿರಟ್ಟಿಯ ಗೌಡ ಸತ್ತಿದ್ದ. ಅವನಿಗೆ ಒಬ್ಬನೇ ಮಗ, ವಯಸ್ಸಿನ್ನೂ ಹದಿನೆಂಟಾಗಿರಲಿಲ್ಲ. ಕ್ಷಯರೋಗಕ್ಕೆ ತುತ್ತಾದ. ನಾಡಿನ ಎಲ್ಲಾ ಮದ್ದುಮಸಿ ಮಾಡಿದ್ದಾಯ್ತು. ಅದೇನು ಗುಣವಾಗಲಿಲ್ಲ. ಆ ಹುಡುಗ ನಮ್ಮ ಗೌಡನ ತಂಗಿಯ ಮಗ. ಅಂದರೆ ಗೌಡನಿಗೆ ಸೋದರಳಿಯನಾಗಬೇಕು. ಅಣ್ಣ - ತಂಗಿ ಸೇರಿ ಅದೇನೇನು ಹೊಂಚಿದರೋ, ಅಥವಾ ಅದ್ಯಾವ ಪರಿಯಲ್ಲಿ ಗೌಡ ತನ್ನ ತಂಗಿಯನ್ನು ಒಪ್ಪಿಸಿದನೋ, ಆ ಸಾಯಲಿರುವ ಹುಡುಗನಿಗೇ ತನ್ನ ಮಗಳನ್ನು ಮದುವೆ ಮಾಡಿಕೊಡುವುದೆಂದು ತೀರ್ಮಾನಿಸಿ ಗೌಡ ಊರಿಗೆ ಬಂದ. ಗುಡ್ಡದೆಲ್ಲಮ್ಮನ ಹೆಸರಲ್ಲಿ ನಿಬ್ಬಣ ಹೊರಟ. ನಮ್ಮ ಸವಾರಿ ಶಿರಟ್ಟಿಗೆ ತಲುಪುವಷ್ಟರಲ್ಲಿ ವರ ಸತ್ತುಹೋಗಿದ್ದ. ಗೌಡ ಮುಂದಾಗಿ ಇದನ್ನೆಲ್ಲಾ ತಿಳಿದೇ ಶಿರಟ್ಟಿಯಲ್ಲಿ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟಿರಲು ತನ್ನವರನ್ನು ನಿಯಮಿಸಿ ಬೆಳಗಾವಿಯಿಂದ ಫೋಟೋ ಹಿಡಿಯೋರನ್ನೂ ಕರೆಸಿದ್ದ. ಮುಂದೆ ಮದುವೆ ನಡೆದು ಹೋಯ್ತಲ್ಲ. ವರ ಸತ್ತದ್ದನ್ನು ನಾವು ಈ ಕಡೆಗೆ ಬಂದ ಮೇಲೆ ಸಾರಲಾಯಿತು. ಗೌಡನ ತಂಗಿಗೆ ಕೂಡ ಮಗ ಸತ್ತದ್ದನ್ನು ಮದುವೆಯ ನಂತರವೇ ಹೇಳಿದರಂತೆ! ಗೌಡ ಹೀಗ್ಯಾಕೆ ಮಾಡಿದ ಗೊತ್ತ? ಹ್ಯಾಗೂ ಹುಡುಗ ಸಾಯುತ್ತಾನೆ. (ಸತ್ತೇ ಹೋಗಿದ್ದನಲ್ಲ!) ಅವ ಸತ್ತರೆ ಅವನ ಆಸ್ತಿಯೆಲ್ಲ ಅವನ ಹೆಂಡತಿಗೆ ಅರ್ಥಾತ್ ತನ್ನ ಮಗಳಿಗೆ ಸೇರಬೇಕು! ಮನುಷ್ಯನಲ್ಲಿ ಇಂಥಾ ಆಮಿಷ ಹಾಕುವ ದೇವರು ಸಣ್ಣವ ಹ್ಯಾಗಾದಾನು? ನೀನೂ ಎಷ್ಟೋ ಆಸೆ ಬುರುಕರನ್ನು ನೋಡಿರಬೇಕು, ಇಂಥವರನ್ನು ಕಂಡಿದ್ದೀಯೇನಪ್ಪ? ಅದೂ ಎಂಥಾ ಆಸೆ, ಕರುಳಿನ ಕುಡಿ ಕೂಡ ಕಾಣಿಸುವುದಿಲ್ಲವೆಂದರೆ?

ದೇವರು ಯಾವಾಗಲೂ ಕಣ್ಣು ಮುಚ್ಚಿಕೊಂಡಿರುತ್ತಾನೆನ್ನುವುದೂ ತಪ್ಪೇ! ಶಿರಟ್ಟಿಯ ಗೌಡನಿಗೆ ಬೇರೆ ಹೆಂಡತಿಯರೂ ಇದ್ದರು. ಅದು ಅನ್ಯಾಯದ ಮದುವೆಯೆಂದು ಕೋರ್ಟಿನಲ್ಲಿ ನ್ಯಾಯ ಹೂಡಿದರು. ಕೇಸು ಮುಂಬೈ ತನಕ ಹೋಯಿತು. ನಿಕಾಲಿಯಾಗುವುದಕ್ಕೆ ಐದಾರು ವರ್ಷಗಳೇ ಹಿಡಿದವು. ಕೊನೆಗೂ ನಮ್ಮ ಗೌಡನೇ ಕೇಸಿನಲ್ಲಿ ಗೆದ್ದ ಅಂತಿಟ್ಟುಕೋ, ಫೋಟೋದಲ್ಲಿದ್ದ ಮದುವೆಯನ್ನೇ ಜಜ್ಜಿ ಸಾಹೇಬರು ಖರೇ ಮದುವೆಯೆಂದಿದ್ದರು! ಆಸ್ತಿಯೇನೋ ಬಂತು. ಆದರೆ ಅದರ ದುಪ್ಪಟ್ಟು ತಿಪ್ಪಟ್ಟು ಖರ್ಚು ಮಾಡಬೇಕಾಯ್ತು. ಮನೆಯಲ್ಲಿದ್ದ ಚಿನ್ನ ಬೆಳ್ಳಿಯೆಲ್ಲವೂ ಕರಗಿಹೋಯ್ತು. ಸಾಲದ್ದಕ್ಕೆ ಊರಿನ ಹೊಲ ಮನೆಗಳನ್ನೂ ಅಡವಿಡಬೇಕಾಯಿತು.

ಹೆಣಕ್ಕೆ ಮಗಳನ್ನು ಕೊಟ್ಟ ಗೌಡನಿಗೆ ಊರೆಲ್ಲ ಥೀ ಥೂ ಹಾಕಿದರು. ಆದರೆ ಗೌಡನ ಎದುರಿನಲ್ಲಿ ಯಾರೂ ಉಗುಳಲಿಲ್ಲವಲ್ಲ. ಎದುರಿಗೇ ಉಗುಳಿದ್ದರೆನ್ನೋಣ. ಗೌಡನ ಸ್ವಭಾವ ಗೊತ್ತೇ ಇದೆ. ಆತನಿಗೆ ನಾಚಿಕೆಯೆಂಬುದೇ ಇರಲಿಲ್ಲ. ಸಾಲದ್ದಕ್ಕೆ ಅಧಿಕಾರವಿತ್ತು. ದರ್ಪ ಇತ್ತು. ಅಥವಾ ಇದ್ದದ್ದಕ್ಕಿಂತ ಹೆಚ್ಚಾಗಿಯೇ ದರ್ಪ ಉಪಯೋಗಿಸಿ ಸದ್ದಡಗಿಸಬಲ್ಲವನಾಗಿದ್ದ. ಗೌಡನ್ನ ಕಂಡಾಗಂತೂ ನನ್ನ ಮೈಯೆಲ್ಲ, ಉರಿದುರಿದು ಬೀಳುತ್ತಿತ್ತು. ಇಡೀ ಜಗತ್ತಿನಲ್ಲಿ ಅವನಂಥ ಚಂಡಾಲ ಇರೋದು ಸಾಧ್ಯವಿಲ್ಲವೆಂದೇ ನನ್ನ ತೀರ್ಮಾನವಾಗಿತ್ತು. ಮತ್ತು ಅವ ಎಂದು ಸತ್ತಾನೋ ಎಂದು ತಪಿಸುತ್ತ, ಅವ ಸತ್ತ ದಿನ ಹಾಲು ಕುಡಿಯಬೇಕೆಂದೂ ನಿಶ್ಚಯಿಸಿಕೊಂಡಿದ್ದೆ.

ಈ ಮಧ್ಯೆ ನಾನು ಮತ್ತು ಸಿಂಗಾರೆವ್ವ ಇಬ್ಬರೂ ಮೈನೆರೆದು ಹೆಂಗಸರಾಗಿದ್ದೆವು. ಮದುವೆಯಾಗಿ ಬಂದಮೇಲಂತೂ ಸಿಂಗಾರೆವ್ವ ಯಾರೊಂದಿಗೂ, ನನ್ನೊಂದಿಗೂ ಮುಖಕೊಟ್ಟು ಮಾತಾಡುತ್ತಿರಲಿಲ್ಲ. ಸಾಲೆ ಬಿಟ್ಟಿದ್ದಳು. ಸದಾ ತನ್ನಮ್ಮನ ಕತ್ತಲು ಕೋಣೆಯಲ್ಲೇ ಕೂತಿರುತ್ತಿದ್ದಳು. ಮೈನೆರೆದ ಹುಡುಗಿಯರು ಹುಡುಗಾಟ ಬಿಡುವುದು ಸರ್ವೇಸಾಮಾನ್ಯವಾದರೂ ಸಿಂಗಾರೆವ್ವನ ವಿಷಯ ಹಾಗಿರಲಿಲ್ಲ. ಮದುವೆಯ ಮೊದಲೇ ಅವಳು ವಿಧವೆಯಾಗಿದ್ದಳು. ಹಾಗಂತ ಯಾರನ್ನೂ ದೂರುವ ಪೈಕಿ ಅಲ್ಲ ಅವಳು. ಇದೆಲ್ಲ ಪೂರ್ವಜನ್ಮದ ಫಲ ಎಂದು, ಅನುಭವಿಸಿಯೇ ತೀರಬೇಕು ಎಂಬುದು ಅವಳ ಒಟ್ಟು ಧೋರಣೆಯಾಗಿತ್ತು. ಯಾರೇನು ತಪ್ಪಿಸಲಾಗುತ್ತಿತ್ತು? ಅಪ್ಪ ಎಂಬವನೋ ಮಾಡಬಾರದ್ದನ್ನು ಮಾಡಿ, ಮಾಡಿದ್ದನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಕೋರ್ಟು ಕಚೇರಿ ಅಲೆದಾಡುತ್ತಿದ್ದ. ಹೆಂಗಸರೋ ಬಾಯಿಮಾತ್ರ ಇದ್ದ ಅಬಲೆಯರು. ತಾವು ಬಲ್ಲ ಬೈಗುಳಗಳಲ್ಲಿ ಗೌಡನ್ನ ಕದ್ದು ಶಪಿಸಬಲ್ಲವರು. ಎಷ್ಟು ದಿನ ಅಂತ ಅವರಾದರೂ ಶಪಿಸುತ್ತಾರೆ? ಮೈಗೆ ಒಗ್ಗಿದ ಮೇಲೆ ಅವರೂ ಸುಮ್ಮನಾದರು. ಊರ ಹೆಂಗಸರು, ಗೌಡನಿಲ್ಲದಾಗ ಬಂದು ಸತ್ತವರ ಬಂಧುಗಳನ್ನು ಸಮಾಧಾನ ಮಾಡುವ ಹಾಗೆ ಮಾತಾಡಿಕೊಂಡು ಹೋಗುತ್ತಿದ್ದರು.

ನನಗೊಂದೇ ಸಮಾಧಾನವೆಂದರೆ ಗೌಡನನ್ನು ಮರೆಪ್ಪ ಇನ್ನಷ್ಟು ತೀವ್ರವಾಗಿ ದ್ವೇಷಿಸುತ್ತಿದ್ದ. ತನ್ನ ಗಡುಸಾದ ದನಿಯಿಂದ ಅಸಹ್ಯ ಬೈಗುಳಗಳನ್ನು, ಒಂದೊಂದು ಬೈಗಳನ್ನು ಹಲ್ಲಿನಿಂದ ಕಚ್ಚಿಕಚ್ಚಿ ಉಗುಳಿದಂತೆ ಬೈಯುತ್ತಿದ್ದ. ಕೋಪಿಸಿಕೊಂಡಾಗ ಇವನೆಲ್ಲಿ ಗೌಡನನ್ನು ಕೊಂದು ಹಾಕುತ್ತಾನೋ ಎಂಬಂಥ ಆವೇಶ ಅವನ ಮುಖದಲ್ಲಿ ವ್ಯಕ್ತವಾಗುತ್ತಿತ್ತು. ಸಿಂಗಾರೆವ್ವನನ್ನು ನೋಡುವುದಕ್ಕಾಗಿ ಅವನೆಷ್ಟೋ ಪ್ರಯತ್ನ ಪಟ್ಟ. ಆಕೆ ಹಿಂದೆ ಬಯಸುತ್ತಿದ್ದ ಅಪರೂಪದ ಪದಾರ್ಥಗಳನ್ನು ತಂದು ಆಕೆಗೆ ಕೊಡೆಂದು ನನ್ನ ಕೈಗೆ ಕೊಟ್ಟ. ನನಗೆ ಸಿಂಗಾರೆವ್ವನ ಸ್ವಭಾವ ಗೊತ್ತು. ಅವಳ್ಯಾವುದನ್ನೂ ಮುಟ್ಟಲಿಲ್ಲ. ದೀಪ ಮುಟ್ಟಿ ಆಣೆ ಮಾಡಿ "ನಾ ಆಕಿಗೇನೂ ಮಾಡಾಣಿಲ್ಲ, ಆಕೀನೊಮ್ಮೆ ಕೊಟ್ಟಿಗೀ ಹಂತ್ಯಾಕ ಕರಕೊಂಬಾ" ಎಂದು ಅನೇಕ ಸಲ ಅಂಗಲಾಚಿದ. ಅಂದು ರಾತ್ರಿ ನಾನು ಮತ್ತು ಸಿಂಗಾರೆವ್ವ ಅಕ್ಕಪಕ್ಕ ಬೈಲುಕಡೆ ಕೂತಿದ್ದೆವು. ಹೆಂಗಸರ್ಯಾರೂ ಬಳಿ ಇರಲಿಲ್ಲವಾದ್ದರಿಂದ ಮರೆಪ್ಪ ಅಂಗಲಾಚಿದ್ದನ್ನು ಹೇಳಿದೆ. ಆಕೆಗೇನು ನೆನಪಾಯಿತೋ. ಬೈಲಕಡೆ ಕೂತವಳು ಹಾಗೇ ಮುಖ ಮುಚ್ಚಿಕೊಂಡು "ನನ್ನ ನಶೀಬ ಏನಾತಃ ಶೀನಿಂಗೀ" ಎಂದು ಸಣ್ಣ ದನಿ ತೆಗೆದು ಅತ್ತೇಬಿಟ್ಟಳು. ಕರುಳು ಕತ್ತರಿಸಿದಂತಾಗಿ ನಾನೂ ದನಿ ತೆಗೆದು ಅತ್ತೆ.

ಮನೆಗೆ ವಾಪಾಸ್ ಬಂದಾಗ ತೊಲೆಬಾಗಿಲ ಬಳಿ, ಚಪ್ಪಲಿ ಕಳೆಯುವಲ್ಲಿ ಮರೆಪ್ಪ ನಿಂತಿದ್ದ. ಇಬ್ಬರು ನೋಡಿದೆವು. ಸಿಂಗಾರೆವ್ವ ಏನೇನೂ ತೋರದೆ ಒಳಗೆ ಹೋದಳು. ಅವನು ಉತ್ತರಕ್ಕಾಗಿ ಕಾಯುತ್ತಿದ್ದನೆಂದು ನನಗೆ ಗೊತ್ತು. ಹೋಗಿ ಚರಿಗೆ ತೊಳಿದಿಟ್ಟು, ಕೈಕಾಲಮೇಲೆ ನೀರು ಚೆಲ್ಲಿಕೊಂಡು ಕೊಟ್ಟಿಗೆಗೆ ಬಂದೆ.

ದೀಪದ ಮುಂದೆ ಮರೆಪ್ಪ ಮೊಳಕಾಲಲ್ಲಿ ತಲೆ ಹುದುಗಿ ಕುಂತಿದ್ದ. "ಮರ್ಯಾ" ಎಂದೆ. ಮುಖ ಎತ್ತಿ ನೋಡಿದ. ನೋಡಿದರೆ ಕಣ್ಣು ಅತ್ತು ಕೆಂಪಾಗಿದ್ದವು. ಈ ಹುಡುಗನ ಮುಂದೆ ಗೌಡ ಲುಚ್ಚಾ ಎನ್ನಿಸಿತು. ಅವನ ಮುಖಭಾವ ನೋಡಿ ಅವನ ಬಗ್ಗೆ ಗೌರವ ಭಾವನೆ ಮೂಡಿತು. ಸುಮ್ಮನೆ ತಿರುಗಿ ಬಂದೆ.

ಈ ಸ್ಥಿತಿ ನಾಕೈದು ವರ್ಷ ಹೀಗೆ ಇತ್ತು. ಈ ಮಧ್ಯೆ ಸಿಂಗಾರೆವ್ವನಂತೂ ನನ್ನ ಸಹವಾಸ ಬಿಟ್ಟುಬಿಟ್ಟಿದ್ದಳು. ಇನ್ನು ಇದ್ದವಳು ಮರ್ಯಾ ಒಬ್ಬ. ಸಿಂಗಾರೆವ್ವನ ಬಗ್ಗೆ ಮಾತಾಡುವ ನೆಪಮಾಡಿಕೊಂಡು ಕದ್ದು ಕದ್ದು ಕೊಟ್ಟಿಗೆಗೆ ಹೋಗುತ್ತಿದ್ದೆ. ಒಂದು ದಿನ ಮರ್ಯಾನಿಗೆ ಹೇಳಲೇಬೇಕಾದ ವಿಷಯವಿತ್ತು. ಶಿರಟ್ಟಿಯ ಆಸ್ತಿ ಗೌಡನಂತಾಗಿತ್ತು. ಇತ್ತ ಗೌಡ್ತಿ ಮಗಳ ಏಕಾಂಗಿತನ ಸಹಿಸದೆ ಇನ್ನೊಂದು ಮದುವೆ ಮಾಡುವಂತೆ ಗೌಡನಿಗೆ ಹೇಳಿ ಅತ್ತಿದ್ದಳು, ಅದನ್ನು ಕೇಳಿ ನನ್ನ ಗೆಳತಿಗೂ ಅತ್ತಿದ್ದಳು. ಮರ್ಯಾ ಯಾವಾಗ ಬಂದಾನೋ ಯಾವಾಗ ಇದನ್ನೆಲ್ಲಾ ಹೇಳೇನೋ ಎಂದು ತವಕಿಸುತ್ತಿದ್ದೆ. ಕೊನೆಗೊಮ್ಮೆ ಮರ್ಯಾ ತೋಟದಿಂದ ಬಂದ.

ಕೊಟ್ಟಿಗೆಯಲ್ಲಿ ಎತ್ತುಕಟ್ಟಿ ಮೇವು ಕೊರೆದು ಹಾಕಿದ್ದ. ನಾನು ಹೋದೆ. ದೀಪ ಹಚ್ಚುವುದಕ್ಕೆ ಕಡ್ಡೀಪೆಟ್ಟಿಗೆ ತೆಗೆದು ಕೊರೆಯಬೇಕೆಂದಿದ್ದ. ನಾನು ಅವನ ಪಕ್ಕಕ್ಕೇ ಹಾರಿ ಅವನ ಕಿವಿಯ ಬಳಿ ಬಾಯಿ ತಂದು ನಡೆದುದನ್ನೆಲ್ಲ ಹೇಳಿದೆ. ಹೇಳುತ್ತ ಹೋದಂತೆ ಈತ, ಆ ದಿನ ಸಿಂಗಾರೆವ್ವನನ್ನು ಹಿಡಿದು ಕೆನ್ನೆ ಕಚ್ಚಿದ ಹಾಗೆ ನನಗೂ ಮಾಡಿದರೇನು ಗತಿ ಎಂದುಕೊಂಡೆ. ಮೈ ಝುಂ ಎಂದಿತು. ನನ್ನ ಎದೆ ಅವನ ಬೆನ್ನಿಗೆ ತಾಗುತ್ತಿತ್ತು. ಅವನ ಬೆನ್ನಿಗೇನಾದರೂ ಬುದ್ಧಿ ಇದ್ದಿದ್ದರೆ ನನ್ನ ಎದೆ ಹ್ಯಾಗೆ ಹಾರಿಹಾರಿ ಅದನ್ನಿರಿಯುತ್ತಿತ್ತು ಎಂದು ತಿಳಿಯಬಹುದಾಗಿತ್ತು. ಹಾಗೇನಾದರೂ ಅವನು ಕೆನ್ನೆ ಕಚ್ಚಿದರೆ... ಕಚ್ಚಲೆಂದೇ ಅಂದುಕೊಂಡೆ. ಅಯ್ಯೋ ಇವನ್ಯಾಕೆ ಕಚ್ಚುತ್ತಿಲ್ಲ ಎಂದೂ ಅನ್ನಿಸಿತು. ನನ್ನ ಬಿಸಿ ಉಸಿರಾಟ ನನಗೇ ಕೇಳಿಸುತ್ತಿತ್ತು. ಮುಂದೆ ಬಂದು ಅವನ ಕೈ ಹಿಡಿದುಕೊಂಡೆ. ಹಸೀ ಮರದ ಹಾಗೆ ತಂಪಾಗಿತ್ತು. ಆತನಿಗೂ ಗೊತ್ತಾಗಿ ಹೋಯಿತೋ ಏನೋ, ಕಡ್ಡಿಗೀರಿ ನನ್ನ ಮುಖಕ್ಕೆ ಅದರ ಉರಿ ಹಿಡಿದ. ಅವನ ಕಣ್ಣಲ್ಲಿ ಎರಡು ಕೊಳ್ಳಿ ಕಂಡವು. ನನ್ನ ಉಸಿರಿಂದ ಅದು ಆರಿತೋ, ಅಥವಾ ಊದಿ ಆರಿಸಿದನೋ ಅಂತೂ ಕಡ್ಡಿ ಆರಿತು. ಹಾಗೇ ಅವನ ಕೈ ಹಿಡಿದುಕೊಂಡು ನನ್ನ ಎದೆಗೆ ಒತ್ತಿಕೊಂಡೆ. ಅವನು "ಥೂ ಹಾದರಗಿತ್ತೀ" ಎಂದು ಹೇಳಿ, ನನ್ನನ್ನ ದೂಕಿ ಇನ್ನೊಂದು ಕಡ್ಡಿ ಕೊರೆದು ದೀಪ ಹಚ್ಚಿದ. ಅಲ್ಲಿ ನಿಲ್ಲದೆ ನಾನು ಓಡಿ ಓಡಿ ಬಂದೆ.

ಬಂದ ಮೇಲೆ ನನಗೆ ನಾಚಿಕೆಯಾಯಿತು. ಒಬ್ಬರ ಬಾಯಿಂದ ಹಾದರಗಿತ್ತೆ ಎಂದು ಅನ್ನಿಸಿಕೊಳ್ಳುವುದು ನನಗೆ ಅಗ್ಗದೀ ಆಗದ ಮಾತು. ಆದರೆ ಅದೇನು ಒತ್ತಡವೋ ಆ ಗಳಿಗೆಯಲ್ಲಿ ಹಾಗಾಗಿದ್ದೆ. ಆದರೆ ನಡೆದದ್ದನ್ನು ಬೈಲಕಡೆ ಹೋದಾಗ, ಸಿಂಗಾರೆವ್ವ ಒಂಟಿಯಾಗಿ ಸಿಕ್ಕಿದ್ದಾಗಲೂ ಹೇಳಲಿಲ್ಲ. ಅಥವಾ ಅವಳೆದುರಿದ್ದಾಗ ಈ ಘಟನೆ ನೆನಪಾದರೆ ಮನಸ್ಸು ಹುಳ್ಳಗಾಗುತ್ತಿತ್ತು. ಒಂದು ಧೈರ್ಯವೆಂದರೆ ಮರೆಪ್ಪ ಇದನ್ನು ಬೇರೆಯವರ ಮುಂದೆ ಆಡಿಕೊಂಬನಲ್ಲ ಎಂಬುದೇ.

ಸಿಂಗಾರೆವ್ವನ ಮರುಮದುವೆಯ ಬಗ್ಗೆ ಮನೆಯಲ್ಲಿ ವಾದವಿವಾದ ಎದ್ದಿತ್ತು. ಕೋರ್ಟಿನಲ್ಲಿ ಕೇಸು ಗೆಲ್ಲುವುದಕ್ಕಾಗಿ ತನ್ನ ಆಸ್ತಿ ಕರಗಿದ್ದೋ, ಸಿಂಗಾರೆವ್ವನ ಬಗೆಗಿನ ಕರುಣೆಯೋ ಕಾರಣವಾಗಿ ಗೌಡ ಕರಗಿದ್ದ. ಒಂದು ದಿನ ಇದ್ದಕ್ಕಿದ್ದಂತೆ ಮನೆಯಲ್ಲಿ ಶಿವಾಪುರ ದೇಸಾಯರ ವರ್ಣನೆ ಮಾಡಿದ. ಒಬ್ಬನೇ ಹುಡುಗನೆಂದೂ, ಅತ್ತೆಯೊಬ್ಬಳನ್ನು ಬಿಟ್ಟು ಮನೆಯಲ್ಲಿ ಇನ್ಯಾರು ಇಲ್ಲವೆಂದೂ, ಅಂಥಾ ದೊಡ್ಡ ಅರಮನೆಗೆ ಸಿಂಗಾರೆವ್ವನೇ ದೊರೆಸಾನಿಯೆಂದೂ ಬಾಯಿತುಂಬಾ ಹೇಳಿದ. ಗೌಡ್ತಿ ಈ ಮಾತು ಕೇಳಿ "ಈ ಸಲ ಆದರೂ ವರ ಮದಿವ್ಯಾಗೂ ಮುನ್ನ ಸತ್ತಿರೋದಿಲ್ಲ, ಹೌಂದಲ್ಲೊ?" ಎಂದು ಕೇಳಿದಳು. ಅದು ಅವಳ ಸಂಕಟದ ಮಾತು. ಅಮಂಗಲ ಆಡಬೇಡವೆಂದೂ ಹುಡುಗ ಚೆನ್ನಾಗಿದ್ದಾನೆಂದೂ ಗೌಡನೇ ಹೇಳಬೇಕಾಯಿತು. ಅದರ ಮಾರನೇ ದಿನವೇ ಮರ್ಯಾ ತನ್ನ ತಾಯಿಯನ್ನು ಕೊಂದು ಪರಾರಿಯಾದ.

ಈ ತನಕ ನಾನು ಸ್ವಾಭಾವಿಕವಾಗಿ ಸತ್ತವರ ಹೆಣ ಕಂಡವಳೇ ಹೊರತು ಖೂನಿಯಾದ ಹೆಣಗಳನ್ನಲ್ಲ. ಎಷ್ಟು ಭಯಾನಕವಾಗಿತ್ತಪ್ಪ ಅದು! ನೆನೆದರೀಗಲೂ ಕಣ್ಣಿಗೆ ಕಟ್ಟುತ್ತದೆ. ಯಾರಂತ ನೆನಪಿಲ್ಲ, ಆ ದಿನ ಊರೊಳಕ್ಕೆ ಹೋಗಿದ್ದೆ. ತಿರುಗಿ ಬರುತ್ತಿರುವಾಗ ಗದ್ದಲ ಕೇಳಿಸಿತು, ಮರ್ಯಾ ತನ್ನ ತಾಯಿಯನ್ನು ಕೊಂದನಲ್ಲ - ಕೊಂದು ಓಡಿಹೋದನೆ? ಪುಣ್ಯಾತ್ಮ ಹೆಣ ಹೊತ್ತುಕೊಂಡು ಊರೊಳಕ್ಕೇ

ಬಂದನೇ! ಚಾವಡಿತನಕ ಹೆಗಲಮೇಲೆ ಅವಳ ಹೆಣ ಹೊತ್ತುಕೊಂಡು ಬಂದದ್ದನ್ನು ಸೂಥಾ ನಾನೇ ಕಣ್ಣಾರೆ ಕಂಡಿದ್ದೇನೆ. ರಸ್ತೆ ತುಂಬ ಜನ ಸೇರಿದ್ದರು. ಅವನ ಮೈತುಂಬ ನೆತ್ತರು ಸೋರ್ಯಾಡುತ್ತಿತ್ತು. ಕಣ್ಣು ಕೆಂಪಗೆ ಮಾಡಿಕೊಂಡು ರೌದ್ರಾವೇಶ ತಾಳಿದ್ದ. "ಆ ಗೌಡ ಸೂಳೀಮಗ ಎಲ್ಲಿದ್ದರೂ ಬಿಡಾಣಿಲ್ಲ" ಎಂದು ಮರ್ಯಾ ಗುಡುಗಿ ಹೆಣವನ್ನು ಚಾವಡಿಯಲ್ಲಿ ಚೆಲ್ಲಿ ಗೌಡನ ಮನೇ ಕಡೆ ಓಡಿದ. ಓಡಿದಾಗ ಇನ್ನೇನು ಗೌಡ ಸತ್ತನೆಂದೇ ತಿಳಿದು ಗಡಗಡ ತೊಡೆ ನಡುಗಿ ನಡೆಯಲಾರದವಳಾಗಿದ್ದೆ. ಅಷ್ಟು ಜನ ಸೇರಿದ್ದರಲ್ಲ, ಒಬ್ಬರೂ ಮರ್ಯಾನನ್ನೂ ಹಿಡಿಯಲಾಗಲಿಲ್ಲ. ಅವನು ಗೌಡನ ಮನೇ ಕಡೆ ಓಡಿದಾಗ ದೂರದಿಂದ ಎಲ್ಲರೂ ಅವನ ಬೆನ್ನು ಹತ್ತಿದರೇ ವಿನಾ ಒಂದೂ ಮಾತಾಡಲಿಲ್ಲ. ಜನ ಅಷ್ಟು ಗಾಬರಿಯಾಗಿದ್ದರು. ಅವನ ತಾಯಿಗಾಗಿ ಹೆಂಗಸರು ಮಕ್ಕಳು ಕಣ್ಣೀರು ಸುರಿಸಿದರೇ ಹೊರತು ದನಿಮಾಡಿ ಅಳುವ ಧೈರ್ಯ ಮಾಡಲಿಲ್ಲ. ಒಬ್ಬಿಬ್ಬರು ಕಿರಿಚಿದರಷ್ಟೆ. ಆದರೆ ಮರ್ಯಾನ ಚೂರೀ ದೃಷ್ಟಿ ಈ ಕಡೆ ತಿರುಗಿದೊಡನೆ ಹೆಣ್ಣು ನಾಯಿಗಳ ಹಾಗೆ ಒಂದೆರಡು ಬಾರಿ ಕುಂಯ್‌ಗುಟ್ಟಿ ಸುಮ್ಮನಾದರಷ್ಟೆ. ಜನ ಆತನ ಹಿಂದೆ ಓಡಿದರಲ್ಲ, ನನಗೆ ಸಾಧ್ಯವಾಗಲಿಲ್ಲ. ಪಕ್ಕದ ಮನೆಯ ಕಟ್ಟೆಯ ಮೇಲೆ ಕುಸಿದುಬಿಟ್ಟೆ. ಸಾವರಿಸಿಕೊಂಡು ವಾಡೆಗೆ ಬಂದಾಗ ಮರ್ಯಾ ಆಗಲೇ ಪರಾರಿಯಾಗಿದ್ದ.

ವಾಡೆಗೆ ಹೋದರೆ ತೊಲೆಬಾಗಿಲು ಭದ್ರಮಾಡಿ ಒಳಗಿನಿಂದ ಅಗಳಿ ಜಡಿದು ಬಿಟ್ಟಿದ್ದರು. ಹೀಗಾಗಿ ಅದು ತೆಗೆಯುವ ತನಕ ನಾನು ಹೊರಗೇ ಕಾಯಬೇಕಾಯಿತು. ಅಲ್ಲೂ ಜನ ಸೇರಿದ್ದರು. ತಂತಮ್ಮಲ್ಲಿ ಪಿಸುಗುಡುತ್ತಿದ್ದರೇ ಹೊರತು ದನಿ ಮಾಡಿ ಯಾರೂ ಮಾತಾಡುತ್ತಿರಲಿಲ್ಲ. ಹಿಂಡನಗಲಿದ ಕರುವಿನಂತೆ, ಯಾರಾದರೂ ನನ್ನನ್ನು ನನ್ನ ಬಳಗ ಸೇರಿಸುವಿರಾ, ಎಂಬಂತೆ - ಅವರಿವರ ಮುಖಗಳನ್ನು ಪಿಳಿಪಿಳಿ ನೋಡುತ್ತ ಅಳಲಾರರೆ ಅಳುತ್ತ ನಿಂತೆ, ನನ್ನ ಬಬ್ಬೆ ಯಾರೂ ಕಾಳಜಿ ತೋರಿಸಲಿಲ್ಲ. ಅಳೋಣವೆನಿಸುತ್ತಿತ್ತು ದನಿಮಾಡಿ. ಆದರೆ ಅಲ್ಲಿದ್ದ ಮೌನ ಅದಕ್ಕೆ ಅನುಕೂಲವಾಗಿರಲಿಲ್ಲ. ಬಹಳ ಹೊತ್ತಾದ ಮೇಲೆ ಕುಲಕರ್ಣಿ ಬಂದ. ಮರ್ಯಾ ಪರಾರಿಯಾಗಿದ್ದಾನೆಂದೂ ಬಾಗಿಲು ತೆರೆಯಬೇಕೆಂದೂ ಆತ ವಾಡೆಯ ತೊಲೆ ಬಾಗಿಲಲ್ಲಿ ನಿಂತು ಅನೇಕ ಬಾರಿ ಕೂಗಿದ. ತೆರೆಯಿತು. ಕುಲಕರ್ಣಿಯ ಜೊತೆಗೇ ನಾನು ಒಳಗೆ ನುಗ್ಗಿದೆ.

ಒಳಗೆ ನೋಡಿದರೆ ಗೌಡನ ಮನೆಯವರೆಲ್ಲ ಎಷ್ಟು ಗಾಬರಿಯಾಗಿದ್ದರು ಶಿವನೆ! ಹೆಂಗಸರೆಲ್ಲ ನಡುಮನೆಯ ಒಂದು ಮೂಲೆಯಲ್ಲಿ ಕೂಡುಬಿದ್ದಿದ್ದರು. ಅವರ ನಡುವೆ ಸಿಂಗಾರೆವ್ವ ಇದ್ದಳು. ನಾನು ಅವರಲ್ಲಿ ಇಲ್ಲದ್ದನ್ನಾಗಲೀ, ಈಗ ಬಂದು ಸೇರಿಕೊಂಡಿದ್ದನ್ನಾಗಲೀ ಯಾರೂ ಗಮನಿಸಲೇ ಇಲ್ಲ. ಯಾವಾಗ ಮರ್ಯಾ ನುಗ್ಗಿ ಗೌಡನ ಖೂನಿ ಮಾಡುತ್ತಾನೋ ಎಂದು ಅವರೆಲ್ಲ ತಂತಮ್ಮ ಜೀವಗಳನ್ನು ಅಂಗೈಯಲ್ಲಿ ಇಟ್ಟುಕೊಂಡು, ಒದರಲಾರದೆ, ಅಳಲಾರದೆ ಗಪ್‌ಚಿಪ್ ಕೂತಿದ್ದರು. ಗೌಡನನ್ನು ದೇವರ ಕೋಣೆಯಲ್ಲಿ ಅಡಗಿಸಿ ಕೀಲಿ ಹಾಕಿದ್ದರು. ಕುಲಕರ್ಣಿ ಬಂದದ್ದರಿಂದ ಕೀಲಿ ತೆಗೆಸಿ ಗೌಡ ಹೊರಬಂದ. ಆಗಲೂ ಆತ ಜೋರಿನಿಂದ ಮಾತಾಡಲಿಲ್ಲ. ಕುಲಕರ್ಣಿಯ ಜೊತೆಗೆ ಹೊರಗೆ ಹೋದ. ಹೋಗುವಾಗ ಈ ಸಲ ಗೌಡ ತನ್ನ ಬಂದೂಕನ್ನೂ ಜೊತೆಗೊಯ್ದ.

ಖೂನಿ ಹ್ಯಾಗಾಯ್ತೆಂದು. ಗೌಡ ಹಾಗೆ ಪಾರಾದನೆಂದು ನನಗೆ ಆಮೇಲೆ ತಿಳಿಯಿತು. ಗೌಡ ಮರೆಪ್ಪನ ತಾಯಿಯನ್ನು ಇಟ್ಟುಕೊಂಡಿದ್ದ ನಿಜ. ಅದು ಮರ್ಯಾನಿಗೆ ಗೊತ್ತಾಗಿ, ಇಂಥ ಸಲುಗೆ ಸಲ್ಲದೆಂದು ಅನೇಕ ಬಾರಿ ತಾಯಿಗೆ ತಾಕೀತು ಮಾಡಿದ್ದ. ಆ ಬಗ್ಗೆ ಅವಳಿಂದ ಆಣೆ ಪ್ರಮಾಣ ಮಾಡಿಸಿಕೊಂಡಿದ್ದ. ಸಾಲದ್ದಕ್ಕೆ ಗೌಡ ಮರ್ಯಾನ ಹೊಲವನ್ನು ಅಕ್ರಮವಾಗಿ ತನ್ನ ಹೆಸರಿಗೆ ಮಾಡಿಸಿಕೊಂಡಿದ್ದ. ಇದೇ ನೆಪ ಮಾಡಿಕೊಂಡು ಗೌಡ ಮರ್ಯಾನನ್ನು ಹೊರಗಟ್ಟಬಹುದಿತ್ತು. ಆದರೆ ಅವನಿಗೆ ಮರ್ಯಾನ ತಾಯಿಯೂ ಬೇಕಿದ್ದಳು. ಜೊತೆಗೆ ಮರ್ಯಾ ಹುಂಬ ಬೇರೆ. ಅವನನ್ನು ಉಪಾಯದಿಂದ ನಿವಾರಿಸಬೇಕಿತ್ತು. ಅದಕ್ಕಾಗಿ ಗೌಡ ಕಾಯುತ್ತಿದ್ದ. ಆದರೆ ಅದು ಆದ್ದದ್ದೇ ಬೇರೆ.

ಆ ದಿನ ಅವರಿಬ್ಬರೂ ಜೋಳದ ಹೊಲದಲ್ಲಿ ಆಸುಪಾಸು ಯಾರಿಲ್ಲವೆಂದು ಖಾತ್ರಿ ಮಾಡಿಕೊಂಡು ಸೇರಿದರು. ಏನು ಮಾಡುವುದು, ಅವಳ ದಿನ ಮುಗಿದು ಬಂದಿದ್ದವು. ಮರ್ಯಾ ಇದನ್ನು ಕಂಡ. ಚೂಪುಗೊಡಲಿ ಹಿಡಿದು ಆವೇಶದಿಂದ ಅವರಿದ್ದಲ್ಲಿಗೇ ನುಗ್ಗಿದ. ಗರಿಯ ಸಪ್ಪಳಕ್ಕೆ ಗೌಡ ಎಚ್ಚರಗೊಂಡು ಸತ್ತೇನೋ ಬದುಕಿದೆನೋ ಎಂದು ವಾರೆಯಾಗಿ ಬೀಳಲಿದ್ದ ಏಟಿನಿಂದ ಪಾರಾದ. ಅಂಗಾತ ಬಿದ್ದಿದ್ದ ಇವನ ತಾಯಿ ಎದ್ದೇಳುವಷ್ಟರಲ್ಲಿ ಅವಳ ಹೊಟ್ಟೆಗೇ ಏಟು ಬಿತ್ತು. ಗೌಡ ಸತ್ತು ಕೆಟ್ಟು ಓಡಿಬಂದ. ತಾಯಿ ಹಾ ಎಂದು ಹಾಗೇ ಕೆಡೆದಳು.

ಮರ್ಯಾ ಓಡ್ಯೋಡಿ ಗೌಡನ್ನ ಹುಡುಕಿದ. ಆಮೇಲೆ ನೋಡಿಕೊಂಡರಾಯ್ತೆಂದು ಬಂದು ಹೆಣವನ್ನು ಹೆಗಲಮೇಲೆ ಹೊತ್ತುಕೊಂಡು ಚಾವಡಿಗೆ ಬಂದ. ಮುಂದಿನದು ನಿನಗೆ ಗೊತ್ತೇ ಇದೆ.

ನಾನೆಷ್ಟೋ ಖೂನಿ ನೋಡಿದ್ದೇನೆ, ಹೆಣ ನೋಡಿದ್ದೇನೆ, ಇದರಂಥಾದ್ದನ್ನು ನೋಡಲೇ ಇಲ್ಲ ಬಿಡು. ಹೆಣದ ಕರುಳು ಹೊರಬಂದು ಹೊಟ್ಟೆಗಂಟೆ ನೇತಾಡುತ್ತಿತ್ತು. ನನಗೆ ಎಂಟೆಂಟು ದಿನ ಊಟ ಮಾಡಲಾಗಲಿಲ್ಲ. ರಾತ್ರಿ ನಿದ್ದೆ ಬರುತ್ತಿರಲಿಲ್ಲ. ಮಲಗಿದರಾಯ್ತು, ಆ ಹೆಣವೇ ಎದುರು ಬಂದು ತಬ್ಬಿಕೊಳ್ಳಲು ಹಾತೊರೆದ ಹಾಗಿರುತ್ತಿತ್ತು. ರಾತ್ರಿ ಬೈಲಕಡೆ ಹೋಗೋದನ್ನು ನಿಲ್ಲಿಸಿದೆ. ಒಂದ ಮಾಡಹೋದಾಗಂತೂ ಹೇಳುವುದೇ ಬೇಡ, ಇನ್ನೇನು ಹಿಂದಿನಿಂದ ಬಂದು ತಬ್ಬಿಕೊಳ್ಳುತ್ತಾಳೆಂದು ಪ್ರತಿ ಗಳಿಗೆಯೂ ಅನ್ನಿಸುತ್ತಿತ್ತು. ನಾಕೆಂಟು ಬಾರಿ ಆ ಹೆಣ ಕನಸಿನಲ್ಲೂ ಬಂದು ಹೆದರಿಸಿತ್ತು. ಆದಾಗಲೇ ದೆವ್ವವಾಗಿ ಊರ ತುಂಬ ಅಳುತ್ತ ಅಲೆಯುವುದು ನನಗೆ ಗೊತ್ತಾಗಿತ್ತು. ಅಮಾವಾಸ್ಯೆಯ ರಾತ್ರಿ ಅದು ನಮ್ಮ ಮನೆಯ ತೋಲೆ ಬಾಗಿಲಲ್ಲಿ ನಿಂತು "ಗೌಡಾ ಗೌಡಾss!" ಎಂದು ನರಳಿದ್ದನ್ನು ನಾನೇ ಕಿವಿಯಾರೆ ಕೇಳಿದ್ದೇನೆ.

ಇಡೀ ತಿಂಗಳು ಊರ ಬಾಯೊಳಗೆಲ್ಲ ಮರ್ಯಾನ ಮಾತೇ ಮಾತು. ಆತ ತಾಯಿಯ ಖೂನಿ ಮಾಡಿದ್ದು ಅನೇಕರಿಗೆ ಸರಿಬಂದಿರಲಿಲ್ಲ. ನನಗೂ, ತಾಯಿ ತಪ್ಪು ಮಾಡಿದಳೆಂದೇ ಇಟ್ಟುಕೊಳ್ಳೋಣ. ಆದರೂ ಮಗನಾದವನು ಒಂಬತ್ತು ತಿಂಗಳು ಹೊತ್ತು ಹೆತ್ತ ತಾಯಿಯನ್ನು ಖೂನಿ ಮಾಡುವುದು ದೇವರು ಒಪ್ಪದ ಮಾತು. ಅದರೇನು ಅವ ಎಲ್ಲರ ಕಣ್ಣಲ್ಲಿ ಧೀರನಾಗಿ ಬಿಟ್ಟಿದ್ದ. ಇಡೀ ಊರಿನಲ್ಲಿ ಒಬ್ಬನಾದರೂ ಅವನೆದುರು ನಿಲ್ಲುವಂಥ ಧೈರ್ಯ ತೋರಿರಲಿಲ್ಲ. ಹೋಗಲಿ, ಹಾಡಾಹಗಲಲ್ಲಿ ಇಡೀ ವಾಡೆ ತೋಲೆಬಾಗಿಲು ಮುಚ್ಚಿಕೊಳ್ಳುವ ಹಾಗೆ ಮಾಡಿದ್ದನಲ್ಲ, ಅದೇನು ಸಣ್ಣಮಾತೆ? ಗೌಡನಂಥ ಗೌಡ ಗಡಗಡ ನಡುಗಿ ಹೆಣ್ಣುನಾಯಿಯ ಹಾಗೆ ಅವಿತುಕೊಂಡಿದ್ದನೆಂದರೆ! ಮರ್ಯಾ ಯಾವಾಗ ಪ್ರತ್ಯಕ್ಷನಾಗಿ ತನ್ನನ್ನು ಮುಗಿಸುತ್ತಾನೆಂದು ಗೌಡನಿಗೆ ಖಾತ್ರಿಯಿರಲಿಲ್ಲ. ಆಮೇಲೆ ಕೂಡ ಗೌಡ ಶಿರಹಟ್ಟಿಯ ಅರೇಳು ಪೈಲವಾನರನ್ನು ಕರೆಸಿ ಅವರ ಮಧ್ಯದಲ್ಲಿದ್ದುಕೊಂಡೇ ಹೊರಗೆ ಅಡ್ಡಾಡುತ್ತಿದ್ದ. ಬಂದೂಕಿಲ್ಲದೆ ಬೈಲಕಡೆ ಹೋಗುತ್ತಿರಲಿಲ್ಲ. ಅಂತೀನಿ! ಇದರ ಮೇಲೆ ಅವ ಎಷ್ಟು ಹೆದರಿದ್ದ ಅಂತ ಅಂದಾಜು ಮಾಡಿಕೊ! ಆದರೆ ಗೌಡನ ಸ್ವಭಾವ ಗೊತ್ತೇ ಇದೆ; ಅವ ನರಿಯಂಥವನು. ಹ್ಯಾಗೋ ಪತ್ತೆ ಮಾಡಿ ಪೊಲೀಸರಿಂದ ಮರ್ಯಾನನ್ನು ಹಿಡಿಸಿಯೇ ಬಿಟ್ಟ. ಕೇಸೂ ಆಯಿತು. ಸುದೈವದಿಂದ ಮರ್ಯಾನಿಗಿನ್ನೂ ಹದಿನೆಂಟು ವರ್ಷ ತುಂಬಿರಲಿಲ್ಲ. ಜಜ್ಜ ಸಾಹೇಬ ಅದೇ ಆಧಾರದ ಮೇಲೆ ಕೇಸು ಖುಲಾಸೆ ಮಾಡಿಬಿಟ್ಟ. ಆಮೇಲೆ ಮರೆಪ್ಪ ಮಾತ್ರ ಊರಿಗೆ ಹಿಂದಿರುಗಲೇ ಇಲ್ಲ. ಗೌಡ ಪೈಲವಾನರಿಂದ ಕೊಲ್ಲಿಸಿದ್ದನೆಂದೂ ಕೆಲವರು ಹೇಳಿದರು. ಖರೆಯೆಷ್ಟೋ ಸುಳ್ಳೆಷ್ಟೋ ಎಂದು ಸುಮ್ಮನಾದೆವು. ಮರೆಪ್ಪ ಮರೆಯಾದನೆಂದು ಖಾತ್ರಿಯಾದಾಗ ಅಪ್ಪಾಸಾಬ ದೇಸಾಯರ ಜೊತೆ ಸಿಂಗಾರೆವ್ವನ ಮದುವೆಯಾಯಿತು."

- ಎಂದು ಹೇಳಿ ಕಥೆಯ ಒಂದು ಭಾಗ ಮುಗಿಯಿತೆಂಬಂತೆ ಶೀನಿಂಗವ್ವ ತನ್ನ ನಿರೂಪಣೆಗೆ ವಿಶ್ರಾಂತಿ ಕೊಟ್ಟಳು. ನನಗೆ ಈ ಮದುವೆಯ ಬಗ್ಗೆಯೂ ಅನುಮಾನಗಳಿದ್ದವು. ಅಪ್ಪಾಸಾಬ ದೇಸಾಯಿ ನಾನು ಕಂಡಂತೆ ರೋಗಿಷ್ಟ. ಬ್ಲಡ್‌ಪ್ರೆಷರ್ ಮತ್ತು ಮೂರ್ಛೆರೋಗ ಇತ್ತು. ಸಿಂಗಾರೆವ್ವ ಮಹಾಚೆಲುವೆ. ಮೇಲಾಗಿ ಗೌಡನ ಒಬ್ಬಳೇ ಮಗಳು. ಹೀಗಿದ್ದೂ ಅವಳು ಇಂಥವನನ್ನು ಮದುವೆಯಾಗಲು ಒಪ್ಪಿದಳೇ? - ಎಂದು ಕೇಳಿದೆ.

"ಮಾಡ್ಕೋತೀನಿ, ಬಿಡತೀನಿ ಅಂತ ಹೇಳಾಕೆ ಹೆಂಗಸರಿಗೆ ಅಧಿಕಾರ ಎಲ್ಲೀದಪ್ಪ? ಅಷ್ಟಾಗಿ ಗಂಡಸರು ಇವರ ಮನಸಿನಾಗ ಏನೈತಿ ಅಂತ ಕೇಳಿದರಲ್ಲೇನ ಹೇಳೋದು? ಸಿಂಗಾರೆವ್ವನ ಸೊಭಾವನೂ ಹಂಗs ಅಂತಿಟ್ಟಕ. ಮೊದಲನೇ ಮದಿವ್ಯಾಗs ಬಾಯಿ ಕಳಕೊಂಡಿದ್ದಳು. ಹೆಚ್ಚು ಮಾತಾಡತಿರಲಿಲ್ಲ. ಹಾ ಅಂದರ ಹಾ; ಹೂ ಅಂದರ ಹೂ. ಎಷ್ಟು ಬೇಕೋ ಅಷ್ಟ."

"ಅಲ್ಲಬೇ, ಗೌಡಗಾದರೂ ದೇಸಾಯಿ ರೋಗಿಷ್ಟನ್ನೋದ ತಿಳೀಬಾರದ? ತಿಳಿದೂ ಮಗಳ್ನ ಇಂಥವನ ಕೊರಳಿಗೆ ಕಟ್ಟೋದಂದರ...?

- ಎಂದು ನನ್ನ ಸಂಶಯ ತೋಡಿಕೊಂಡೆ. ಮುದುಕಿ ಸುಸ್ತಾಗಿದ್ದಳು. "ನಾಳೆ ಬಾ, ಎಲ್ಲಾ ಹೇಳತೀನಿ" ಅಂದಳು. ಆಗಲೇ ಊರ ಜನ ಉಂಡು ಮಲಗುತ್ತಿದ್ದರು. ನಾನು ಮತ್ತು ಶಿರಸೈಲ ಮನೇಕಡೆ ಬಂದೆವು.

* * *

# ಅಧ್ಯಾಯ - ೫

ಮಾರನೇ ದಿನ ತುಸು ಬೇಗನೆ ಹೋದೆವು. ಈ ಮೊದಲೇ ಶೀನಿಂಗವ್ವನಿಗೆ ಹರಕೆ ತಲುಪಿಸಿದ್ದಾಗಿತ್ತು. ನಿನ್ನೆಗಿಂತ ಈ ದಿನ ಹೆಚ್ಚು ಹುರುಪಿನಲ್ಲಿದ್ದಳು. ಹೋದ ತಕ್ಷಣವೇ ಕಥೆ ಸುರುಮಾಡಲಿಕ್ಕಾಗುವುದಿಲ್ಲವಲ್ಲ, ಆ ಈ ಮಾತಾಡುತ್ತ ನಾನು ಸರಗಂ ದೇಸಾಯಿಯನ್ನು ನೋಡಿದ್ದಾಗಿ ಹೇಳಿ ಅವನ ವರ್ಣನೆ ಮಾಡಿದೆ. ಅವಳೂ ಒಂದಷ್ಟು ವಿಷಯ ಹೇಳಿದಳು. ಕೊನೆಗೆ ಆತನ ಸ್ವಭಾವವನ್ನು ನಾನು ಭಾಗಶಃ ಸರಿಯಾಗಿ ತಿಳಿದಿದ್ದೇನೆಂದು ಒಪ್ಪಿಕೊಂಡಳು. ಇಲ್ಲಿ ವಾಚಕರ ಕ್ಷಮೆ ಕೋರಿ, ಅವಳ ಕಥೆ ತುಸು ನಿಲ್ಲಿಸಿ ಸಿಂಗಾರೆವ್ವನ ಎರಡನೇ ಗಂಡನಾದ ಅಪ್ಪಾಸಾಬ ದೇಸಾಯಿಯ ಉರ್ಫ್ ಸರಗಂ ದೇಸಾಯಿಯ 'ಭಾಗಶಃ' ಪರಿಚಯ ಮಾಡಿಕೊಡುತ್ತೇನೆ.

ಚಿಕ್ಕವನಿದ್ದಾಗ ನಾನು ಅವನನ್ನು ಕಂಡಿದ್ದೆ. ಒಂದೇ ಮಾತಿನಲ್ಲಿ ವರ್ಣಿಸಬೇಕೆಂದರೆ ಒಟ್ಟಾರೆ ವಾತಾವರಣದಲ್ಲಿ ಅವನೊಬ್ಬ ಮಿಸ್‌ಫಿಟ್ ಆಗಿದ್ದ. ಸಜ್ಜನನೇ. ಆದರೆ ಆತನಲ್ಲಿ ಹೇಳಿಕೊಳ್ಳುವಂಥ ದೋಷಗಳೂ ಇದ್ದವು. ಶೀನಿಂಗವ್ವ ಹೇಳುವ ಹಾಗೆ ಅವನು ಜನರನ್ನು ಅತಿಯಾಗಿ ನಂಬುತ್ತಿದ್ದ. ಮಿತಿಮೀರಿ ಧಾರಾಳಿಯಾಗಿದ್ದ. ಇವು ನನ್ನ ಪ್ರಕಾರ ದೋಷಗಳೇ ಅಲ್ಲ. ಆತನ ಶರೀರ ಸಣಕಲಾಗಿದ್ದರೂ, ಗಂಭೀರವಾಗಿರುತ್ತಿದ್ದ. ಆದರೆ ಬಯಲಾಟದ ರಿಹರ್ಸಲ್ ಮಾಡುವಾಗ ಮಾತ್ರ ಭಾರೀ ಹಾಸ್ಯಾಸ್ಪದವಾಗಿ ಕಾಣುತ್ತಿದ್ದ. ಆಗ ಮಾತ್ರ ಯಾವುದು ಲಘು ಯಾವುದು ಗಂಭೀರ ಎನ್ನುವುದನ್ನು ನಿರ್ಧರಿಸಲು ಅಸಮರ್ಥನಾಗುತ್ತಿದ್ದ. ಇಂಥ ಇನ್ನೂ ಎರಡು ಸಂದರ್ಭಗಳಿವೆ. ಅದನ್ನು ಮುಂದೆ ಶೀನಿಂಗವ್ವ ಹೇಳುತ್ತಾಳೆ.

ಅವನಿಗೆ ಬಯಲಾಟದ ಭಾರೀ ಖಯಾಲಿ ಇದ್ದಿತಲ್ಲ. ಹಾಡಬೇಕಾದಾಗ ಪ್ರತಿ ಆರಂಭವನ್ನು "ಸರಿಗಮ ಪದನಿಸ, ಸನಿದಪ ಮಗರಿಸ" ಎಂದು ಹೇಳಿ ಸುರುಮಾಡುತ್ತಿದ್ದ. ಅದಕ್ಕೇ ಅವನಿಗೆ ಈ ಹೆಸರು ಬಂದದ್ದು. ಅವನ ಹೆಸರಿದ್ದದ್ದು ಅಪ್ಪಾಸಾಹೇಬ ದೇಸಾಯಿ ಎಂದು. ಆದರೆ ಜನ ಸರಗಂ ದೇಸಾಯಿ ಎಂದೇ ಕರೆಯುತ್ತಿದ್ದರು. ಮತ್ತು ಹಾಗೆ ಹೇಳಿದಾಗ ಅವನಿಗೆ ಸಂತೋಷವೇ ಆಗುತ್ತಿತ್ತು. ಪಾಪ ಬಯಲಾಟದವರಿಗೆ ಸರಿಗಮಪದನಿ ಎಂದರೇನು ಗೊತ್ತು? ಸಾಮಾನ್ಯವಾಗಿ ಅವರು ಪದಗಳನ್ನು ಹಾಡುತ್ತಿರಲಿಲ್ಲ, ಒದರುತ್ತಿದ್ದರು. ಹಿಂದೊಮ್ಮೆ ಕಲಿಸಲಿಕ್ಕೆ ಬಂದ ಮಾಸ್ತರನು ಇವರ ದನಿಗಳಿಗೆ ಸರಿಗಮಪದನಿಯ ದೀಕ್ಷೆ ಕೊಡಹೋಗಿ, ಸೋತು, ಇವರು ಒದರಿದ್ದೇ ಸರಿ ಎಂಬಂತೆ - ಅವನೇನೋ ನುಡಿಸಿ, ಇವರೇನೋ ಹಾಡಿ - ಅಂತೂ ಆ ಸಲ ಬಯಲಾಟ ಮುಗಿಸಿದ್ದರು. ಅವನು ಹಾರ್ಮೋನಿಯಂ ನುಡಿಸುತ್ತಿದ್ದಾಗ, ಇವರು ಹಾಡುವಾಗ ಬೇಸೂರಂತೂ ಕಟ್ಟಿಟ್ಟದ್ದು ತಾನೆ? - ಪಾಪ, ಆಗವನ ಕರುಣಾಜನಕ ಮುಖ ನೋಡಬೇಕಿತ್ತು. ಆತ ಸಹಜವಾಗಿಯೇ ಬಯಲಾಟದ ಈ ನಟಭಯಂಕರರ ಬಗ್ಗೆ ತಾತ್ಸಾರ ಭಾವನೆಯಿಂದ ಇದ್ದ. ಈ ತಾತ್ಸಾರವನ್ನು ಸರಗಂ ದೇಸಾಯಿ ಗಮನಿಸಿ ತನ್ನ ಮನೆಗೆ ಅವನನ್ನು ಊಟಕ್ಕೆ ಕರೆದು ಸಂಗೀತ ವಿದ್ಯೆಯ ರಹಸ್ಯ ಹೇಳಿಕೊಡಬೇಕೆಂದು ಕೇಳಿದ್ದನಂತೆ. ಮಾಸ್ತರನು ಉಂಡ ಕೂಳಿನ ಋಣಕ್ಕೆ ಸರಿಗಮಪದನಿ ಎಂಬ ಸಪ್ತಾಕ್ಷರೀ ಮಂತ್ರವನ್ನು ಕಲಿಸಿದ. ಆಶ್ಚರ್ಯವೆಂದರೆ ಆ ಸರಿಗಮಪದನಿ ಎಂಬ ಮಂತ್ರ ಬಾತಿಗೆ ಬಂತಲ್ಲ, - ಇಡೀ ಸಂಗೀತ ವಿದ್ಯೆಯೇ ತನ್ನ ಕೈವಶವಾಯಿತೆಂದು ಸರಗಂ ತಿಳಿದುಬಿಟ್ಟ! ಯಾವುದೇ ಹಾಡಿನ ಆರಂಭದಲ್ಲಿ ಸರಿಗಮಪದನಿ ಸನಿದಪಮಗರಿಸ ಎಂದು ಹೇಳಿ ಸುರು ಮಾಡಿದರೆ ಅದು ಬೇಸೂರಾಗಲೀ, ತಪ್ಪುದಾಗಲೀ ಸಾಧ್ಯವೇ ಇಲ್ಲವೆಂದು ಆತ ನಿಜವಾಗಿ ನಂಬಿಬಿಟ್ಟಿದ್ದ. ಅಲ್ಲೇ ಆ ಮಂತ್ರ ಹೇಳಿ ಎಲ್ಲರನ್ನೂ ತಬ್ಬಿಬ್ಬಾಗಿಸುತ್ತಿದೇನೆಂದೂ, ಎಲ್ಲರೂ ತಪ್ಪಿದರೂ ತನ್ನ ಹಾಡು ತಪ್ಪುತ್ತಿಲ್ಲವೆಂದೂ ಅವನಿಗೆ ವಿಶ್ವಾಸ ಮೂಡಿತ್ತು. ಸರಗಂ ಸಾಬ ಹ್ಯಾಗೆ ಹಾಡುತ್ತಿದ್ದನೆಂಬ ಬಗ್ಗೆ ಮುಂದೆ ಹೇಳುತ್ತೇನೆ; ಈಗ ನೀವು ಇಷ್ಟು ತಿಳಿದರೆ ಸಾಕು; ಆತ ಸಂಗೀತ ವಿದ್ಯೆ ಅರಿಯದ ಆ ಹಳ್ಳಿ ಮುಕ್ಕರ ಬಗ್ಗೆ ಸಹಾನುಭೂತಿಪರನಾಗಿದ್ದ, ಇಂಥವರನ್ನು ಕಟ್ಟಿಕೊಂಡು ತನ್ನಂಥ ಕಲಾವಿದ ಬಯಲಾಟ ಮಾಡಬೇಕಿದೆಯಲ್ಲಾ ಎಂದು ತನ್ನ ಬಗ್ಗೆ ತಾನೇ ಮರುಗುತ್ತಿದ್ದ. ಬಂದ ಮಾಸ್ತರನು ಯಾರಿಲ್ಲದಾಗ ಇವನನ್ನು ಹುಟ್ಟು ಕಲಾವಿದನೆಂದು ಕರೆದಿದ್ದನಂತೆ. ಇನ್ನು ಕೇಳಬೇಕೇ?

ನನ್ನ ಅಣ್ಣ ಸರಗಂ ದೇಸಾಯಿಯ ಜೊತೆ ನಟನಾಗಿದ್ದುದರಿಂದ ಚಿಕ್ಕಂದಿನಲ್ಲಿ ಅವರ ರಿಹರ್ಸಲ್‌ಗಳನ್ನು ನೋಡುವುದಕ್ಕೆ ನಾನು ಹೋಗುತ್ತಿದ್ದೆ. ಬಯಲಾಟ ಯಾವುದೇ ಇರಲಿ, ಅದರ ಖರ್ಚು ವೆಚ್ಚಗಳನ್ನೆಲ್ಲ ದೇಸಾಯಿಯೇ ನೋಡಿಕೊಳ್ಳುತ್ತಿದ್ದುದರಿಂದ ಸ್ವಾಭಾವಿಕವಾಗಿ ನಾಯಕನ ಪಾತ್ರವನ್ನು ಅವನೇ ವಹಿಸುತ್ತಿದ್ದ. ಅವೆಲ್ಲ ಸಾಮಾನ್ಯವಾಗಿ ರಾಜನ ಪಾತ್ರಗಳು. ಉಳಿದವರು

ತಂತಮ್ಮ ಉಡುಪುಗಳನ್ನು ಬಾಡಿಗೆಗೆ ತರುತ್ತಿದ್ದರೆ ದೇಸಾಯಿ ಮಾತ್ರ ಪ್ರತಿಯೊಂದು ರಾಜಪಾತ್ರಕ್ಕೆ ವಿಶಿಷ್ಟವಾದ ಉಡುಪುಗಳನ್ನು ಹೊಸದಾಗಿಯೇ ತಯಾರಿಸಿಕೊಳ್ಳುತ್ತಿದ್ದ. ಅವರ ಮನೆತನದ್ದೇ ಒಂದು ಬೆಳ್ಳಿಯ ಖಡ್ಗವಿತ್ತು. ಭಾರೀ ಹಣ ಖರ್ಚು ಮಾಡಿ ಭುಜ ಕಿರೀಟಗಳನ್ನು ತಾನೇ ಮಾಡಿಸಿಕೊಂಡಿದ್ದ. ಯಾಕೋ ಏನೋ ಕಿರೀಟವೊಂದನ್ನು ಮಾಡಿಸಿಕೊಂಡಿರಲಿಲ್ಲ.

ಆತ ರಾಜನ ಪಾತ್ರಗಳನ್ನೇ ಯಾಕೆ ಮಾಡುತ್ತಿದ್ದನೆಂದು ನನಗೆ ಈಗೀಗ ಅರ್ಥವಾಗುತ್ತಿದೆ. ನಮ್ಮೂರ ದೇಸಗತಿಯೆಂದರೆ ನಾಡಿನ ಆ ಭಾಗಕ್ಕೆಲ್ಲಾ ಒಂದು ಕಾಲಕ್ಕೆ ಪ್ರಸಿದ್ಧವಾದದ್ದು. ಮೈಸೂರು ಮಹಾರಾಜರು ನಮ್ಮ ಹಿಂದಿನ ದೇಸಾಯರನ್ನು ದಸರಾ ಕಾಲದಲ್ಲಿ ಆಹ್ವಾನಿಸಿ, ತಮ್ಮ ಆಸನದ ಮೇಲೆ ಕೂರಿಸಿಕೊಂಡಿದ್ದರೆಂದು ಹೆಂಗಸರು ಹೇಳುವುದನ್ನು ಕೇಳಿದ್ದೇನೆ. ಬಹುಶಃ ಇದರಲ್ಲಿ ಅತಿಶಯೋಕ್ತಿ ಇದ್ದೀತು. ಅಂತೂ ಒಂದು ಕಾಲಕ್ಕೆ ವೈಭವದಿಂದ ಮೆರೆದ ದೇಸಗತಿಯೆನ್ನುವುದರಲ್ಲಿ ಸಂದೇಹವೇ ಬೇಡ. ಬೇರೆ ದೇಸಗತಿಗಳಿಗೆ ಒಂದೆರಡು ಊರಿದ್ದಾವು. ನಮ್ಮೂರಿನ ದೇಸಗತಿಗೆ ಹದಿನಾಲ್ಕು ಊರು! ಈಗ ಸರಗಂ ದೇಸಾಯಿಯ ಪಾಲಿಗೆ ಎಷ್ಟೇ ಉಳಿದಿರಲಿ; ಆ ಹಳೆಯ ವೈಭವದಲ್ಲೇ ಇರಬೇಕೆಂಬ, ಅದರ ಪ್ರಭಾಮಂಡಲವನ್ನು ಮತ್ತೆ ತರಬೇಕೆಂಬ ಭಾರೀ ಆಸೆ ಆತನಿಗಿತ್ತು. ಆದರೆ ಜನ ಬದಲಾಗಿದ್ದರು. ಯಾರೂ ಮೊದಲಿನ ಹಾಗೆ ದೇಸಗತಿಗೆ ಹೆದರುತ್ತಿರಲಿಲ್ಲ. ಹೀಗಾಗಿ ಹೊಸ ಪರಿಸ್ಥಿತಿಗೆ ಹೊಂದಿಕೊಳ್ಳುವುದು ದೇಸಾಯಿಗೆ ಕೊನೆಗೂ ಸಾಧ್ಯವಾಗಿರಲಿಲ್ಲ. ಆತ ಎಲ್ಲಿದ್ದರೂ ಪರಕೀಯನಾಗಿ, ಇವನು ಅಲ್ಲಿ ಕೂಡಿದವರ ಪೈಕಿ ಅಲ್ಲ ಎಂದು ಯಾರಿಗಾದರೂ ಅನ್ನಿಸುವಂತೆ ಇರುತ್ತಿದ್ದ. ಆದರೆ ಅವನ ದುರಾದೃಷ್ಟಕ್ಕೆ ತನ್ನ ದೊಡ್ಡ ಮನೆಯ ಒಟ್ಟಾರೆ ಚಿತ್ರದಲ್ಲೂ ಆತ ಹೊಂದುತ್ತಿರಲಿಲ್ಲ. ಯಾವನೋ ಒಬ್ಬ ನಾಟಕದ ಪಾತ್ರಧಾರಿ ದೇಸಾಯಿಯ ಉಡುಪಿನಲ್ಲಿದ್ದಂತೆ ಕಾಣಿಸುತ್ತಿತ್ತು. ಈ ಅರ್ಥದಲ್ಲಿ ಅವನು ಹುಟ್ಟು ನಟನೇ ಹೌದು. ಈ ಕೊರತೆ ದೇಸಾಯಿಯ ವ್ಯಕ್ತಿತ್ವದ ಆಳದಲ್ಲೆಲ್ಲೋ ಕೊರೆಯುತ್ತಿದ್ದಿತೆಂದು ತೋರುತ್ತದೆ. ಅದಕ್ಕೇ ಆತ ಬಯಲಾಟಗಳಲ್ಲಿ ರಾಜನಾಗಿ ಅದನ್ನು ಭರ್ತಿ ಮಾಡಿಕೊಳ್ಳುತ್ತಿದ್ದ. ಅವನು ಕುಡಿದಾಗ ಅರೆಹುಚ್ಚನಂತಿರುತ್ತಿದ್ದನಲ್ಲ, ಈ ಕಾರಣಕ್ಕೇ ಹಾಗಾಗಿರಬೇಕೆಂದು ನನಗೆ ಅನುಮಾನವಿದೆ. ಯಾಕೆಂದರೆ ಕುಡಿದಾಗ ಬಯಲಾಟದ ಮಾತುಗಳನ್ನು ನಿಜಜೀವನದಲ್ಲೂ, ನಿಜಜೀವನದ ಮಾತುಗಳನ್ನು ಬಯಲಾಟದಲ್ಲಿಯೂ ಆಡುತ್ತಿದ್ದ. ಎರಡರ ಧಾಟಿ ಒಂದೇ, ಅಂದರೆ ಅದೇ - ನಾಟಕದ ರಾಜರದು. ಆದ್ದರಿಂದ ಮುಂದೆ ನಮ್ಮ ಕಥೆಯಲ್ಲಿ ನಮ್ಮೀ ಕಥಾನಾಯಕ ರಾಜ ಠೀವಿಯಲ್ಲಿ ಗಹಗಹಿಸಿ ನಕ್ಕು ಗುಡುಗಿದರೆ ನಮ್ಮ ವಾಚಕರು ಅನ್ಯಥಾ ಭಾವಿಸಬಾರದೆಂದು ವಿನಂತಿಸಿಕೊಳ್ಳುತ್ತೇನೆ.

ಇನ್ನವನ ಹಾಡುಗಾರಿಕೆ: ನಾನೇ ಸ್ವತಾ ಕೇಳಿದ್ದೇನೆ, ಕಂಡಿದ್ದೇನಲ್ಲ - ಹಾಡುವುದೆಂದರೆ ಅವನಿಗೆ ಬಾರೀ ವ್ಯಾಮೋಹ, ಸರಿಗಮಪದನಿಯ ಮಂತ್ರದಿಂದ ಅವನಿಗೆ ಸಂಗೀತ ವಿದ್ಯೆ ಕೈವಶವಾಗಿತ್ತೋ ಇಲ್ಲವೋ ನನಗೆ ತಿಳಿಯದು. ಅದು ಅವನಿಗೆ ಹುಚ್ಚನ್ನಂತೂ ಹಿಡಿಸಿದ್ದು ನಿಜ. ಉಳಿದವರು ಹಾಡುವುದಕ್ಕೆ ಅಷ್ಟಾಗಿ ಇಷ್ಟಪಡುತ್ತಿರಲಿಲ್ಲ. ಆದರೆ ಬಯಲಾಟವೆಂದ ಮೇಲೆ ಹಾಡಲೇಬೇಕಲ್ಲ, ಆದ್ದರಿಂದ ಬಾಯಿ ತೆರೆಯುತ್ತಿದ್ದರು. ಒಮ್ಮೆ ಬಾಯಿ ತೆರೆದರೆ ಅದು ಕೇಳುವವರ ದೈವವನ್ನು ಅವಲಂಬಿಸುವಂಥಾದ್ದು, ದೈವ ಚೆನ್ನಾಗಿದ್ದರೆ ಹಾಡು ಚೆನ್ನಾಗೇ ಬರಬಹುದು, ಅಂತೂ ಅದು ತಮ್ಮ ಕೈಯಲಿಲ್ಲ ಎನ್ನುವುದನ್ನು ಪ್ರತಿಯೊಬ್ಬರೂ ಮನಗಂಡಿದ್ದರು. ದೇಸಾಯಿಯ ಮಾತು ಹಾಗಲ್ಲ. ದೈವ ಇಲ್ಲಿಯೂ ಆತನಿಗೆ ಕೈಕೊಟ್ಟಿತ್ತು. ತೆಳ್ಳಗೆ ಬೆಳ್ಳಗೆ ಉದ್ದಕ್ಕೆ ಕೋಲಿನಂಥ ಶರೀರ ಅವನದು. ಗರುಡನಂಥ ಚೂಪು ಮೂಗು ಮೇಲ್ತುಟಿಯ ಮೇಲೋರಗಿತ್ತು. ನೀಟಾಗಿ ಕೊರೆದಂಥ ಹುಬ್ಬು, ಅಗಲವಾದ ಹಣೆ, ಈಗಷ್ಟೇ ಮೂಡಿದಂತಿದ್ದ ಒಂದೆರಡು ಹರಕು ಗಡ್ಡಮೀಸೆ. ಹುಲುಸಾಗಿ ಬರುತ್ತಿಲ್ಲವಾದ್ದರಿಂದ ಅವನ್ನು ಬೋಳಿಸುತ್ತಿದ್ದ. ಇವನು ಸ್ತ್ರೀ ಪಾತ್ರಕ್ಕೇ ಲಾಯಖ್ಖಾದವನೆಂದು ಯಾರು ನೋಡಿದರೂ ಹೇಳುತ್ತಿದ್ದರು. ಇಂಥ ಕೋಮಲ ದೇಹಕ್ಕೆ ಒರಟು ದನಿ. ಹೀಗಾಗಿ ಅವನು ಹಾಡಿದರೂ ಅವನೊಳಗಿಂದ ಇನ್ಯಾರೋ ಹಾಡಿದಂತೆ ಕೇಳಿಸುತ್ತಿತ್ತು.

ಆತನ ಹಾಡುಗಾರಿಕೆಯನ್ನು ನೀವೇ ಕೇಳಬೇಕು. ಸರಿಗಮಪದನಿ ಸನಿದಪಮಗರಿ ಎಂದು ಮಂತ್ರದ ಹಾಗೆ ಭಯಭಕ್ತಿಯಿಂದೊಮ್ಮೆ ಹೇಳಿ, ತಕ್ಷಣ ಹಾಡನ್ನು ತಾರಕದಲ್ಲಿ ಸುರು ಮಾಡುತ್ತಿದ್ದ. ತಾರಕದಲ್ಲೇ ಸುರುವಾದ ಹಾಡಿಗೆ ಇನ್ನೊಂಡು ತಾರಕ ಎಲ್ಲಿ ಸಿಕ್ಕೀತು? ಆದ್ದರಿಂದ ಕಂಠ ಮಧ್ಯೆ ಗದ್ಗದವಾಗಿ ವಿಚಿತ್ರ ಸಪ್ಪಳ ಮಾಡುತ್ತಿತ್ತು. ಕೆಲವೊಮ್ಮೆ ಕೇಳುವವರಲ್ಲಿ ಅವನ ಜೀವದ ಬಗ್ಗೆ ಭಯ ಉಂಟುಮಾಡುವಂಥ ಕಂಪನಗಳುಂಟಾಗುತ್ತಿದ್ದವು. ಆದರೂ ಗಟ್ಟಿ ಆಸಾಮಿ, ಹಿಡಿದ ಸ್ವರವನ್ನು, ಅಂದರೆ ಅದೇ ತಾರಕವನ್ನು

ಬಿಡುತ್ತಿರಲಿಲ್ಲ. ಹ್ರಸ್ವ ದೀರ್ಘ ಸ್ವರಗಳನ್ನು ಎತ್ತೆತ್ತಿ ಅವು ಹಾದಿಗೆಡದಂತೆ ಕಂಪನಗಳಿಂದ ಬೆದರಿಸಿ, ಹಿಂದೆಮುಂದೆ ಮಾಡಿ, ತಿರುವಿ ತಿರುವಿ ಹಾಡುತ್ತಿದ್ದ. ಹಾಡುವಾಗಿನ ಭಂಗಿಯೂ ಅವನದೇ, ಜಿಗ್ಗಾಲು ಕೊಟ್ಟು, ಆಳ ಬಾವಿಯೊಳಗಿನ ಬಂಡೆಯನ್ನೆತ್ತುವಂತೆ ಸ್ವರಕ್ಕೆ ಕುಮ್ಮಕ್ಕು ಕೊಟ್ಟು ಅದು ನುಣಚಿಕೊಳ್ಳದಂತೆ ಹೊಂಚಿ ಹಿಡಿಯುವ ಹಾಗೆ ಹಸ್ತಾಭಿನಯ ಮಾಡುತ್ತಾ ಅದೊಂದು ಸುಖದ ನೆಲೆ ತಲುಪಿತೆಂದು ಖಾತ್ರಿಯಾದಾಗ ಐಷಾರಾಮಾಗಿ ಕಣ್ಣು ಮುಚ್ಚುತ್ತಿದ್ದ. ತನ್ನ ಹಾಡಿನ ಗುಂಗಿನಲ್ಲೇ ಇರುವ ಮಹಾ ಕಲಾವಿದನಂತೆ ತುಸು ಹೊತ್ತು ಹಾಗೆ ಕಣ್ಣು ಮುಚ್ಚುಕೊಂಡಿದ್ದು ಆಮೇಲೆ ನಿಧಾನವಾಗಿ ಕಣ್ಣು ತೆರೆಯುತ್ತಿದ್ದ. 'ಹಾಡುಗಾರಿಕೆಯೆಂದರೆ ಇದು' ಎಂದು ಹೇಳುವಂತೆ ಎಲ್ಲರ ಮುಖವನ್ನೊಮ್ಮೆ ಹೆಮ್ಮೆಯಿಂದ ದಿಟ್ಟಿಸುತ್ತಿದ್ದ. ಅವನು ಇಲ್ಲದೇ ಇದ್ದಾಗ ನಮ್ಮಣ್ಣ ಅವನಿಗೆ ತಾರಕಾಸುರ ಎಂದು ಹೇಳುತ್ತಿದ್ದ.

ನನಗೆ ಅನ್ನಿಸುವಂತೆ ದೇಸಗತಿಯ ಕೆಟ್ಟಗಳಿಗೆಯಲ್ಲಿ ಈ ದೇಸಾಯಿ ಹುಟ್ಟಿದ ಇವನಪ್ಪ ಮಹಾಲಂಪಟ, ಅವನ ಇಬ್ಬರು ತಂಗಿಯರು, ಅವರ ಗಂಡಂದಿರು ದೇಸಗತಿಯನ್ನು ಲೂಟಿ ಮಾಡಿ ಮೋಜು ಮಾಡಿದರು. ಕೈಗೆ ಬಂದಷ್ಟು ಹಣಕ್ಕೆ ಆಸ್ತಿ ಮಾರಿದರು. ದೊಡ್ಡ ದೇಸಾಯಿಯ ಕಚ್ಚೆ ಹುರುಕುತನ, ಅವನ ತಂಗಿಯರ ಹಡಬಿಟ್ಟಿತನ, ಅವರ ಗಂಡಂದಿರ ಬೇಜವಾಬ್ದಾರಿತನ.. ಎಲ್ಲೆಲ್ಲೋ ಹೋಗಿ, ಏನೇನೋ ರೋಗ ಅಂಟಿಸಿಕೊಂಡು ಬಂದು ಪ್ರತಿಯೊಬ್ಬರೂ ಒಂದೊಂದು ಥರ ನರಳಿ ಸತ್ತರು. ಪ್ರತಿಯೊಬ್ಬರ ಮನಸ್ಸುಗಳೂ ವಿಕೃತವಾಗಿದ್ದವು. ಇವರು ಸತ್ತಾಗ ಆಸ್ತಿಯ ಬಹುಪಾಲು ಹೋಗಿತ್ತಲ್ಲ, ಜೊತೆಗೇ ಸಾಲ ಬಂದಿತ್ತು; ಇವರ ರಕ್ತ ಹಂಚಿಕೊಂಡು, ಇವರ ಮಧ್ಯೆ ಹುಟ್ಟಿ ಬೆಳೆದವನು ದೇಸಾಯಿ. ಗುಣಗಳನ್ನಲ್ಲದಿದ್ದರೂ ಅವರ ರೋಗಗಳನ್ನಂತೂ ತನ್ನ ಜೊತೆಗೇ ತಂದಿದ. ಇದ್ದ ಬಿದ್ದ ಆಸ್ತಿಯನ್ನು ಮಾರಿ ಹಿಂದಿನವರ ಸಾಲ ತೀರಿಸಿ ಉಳಿದ ಅಷ್ಟಿಷ್ಟನ್ನು ಆಗೀಗ ಮಾರುತ್ತ ಬದುಕಿದ್ದ.

ದೇಸಾಯಿಯ ಔದಾರ್ಯದ ಬಗ್ಗೆ ಇಡೀ ಊರಿನಲ್ಲಿ ದುಸರಾ ಮಾತಿಲ್ಲ. ಇವನಿಗೆ ಬಯಲಾಟ ಕಲಿಸಿದ ಒಬ್ಬ ಮಾಸ್ತರ ಬಂದು "ಮಗಳ ಮದುವೆ ಮಾಡ್ಬೇಕು. ಮಾರಾಜ್ರ, ತಾವು ಕೈ ಹಚ್ಚಬೇಕು, ತಮ್ಮ ಹೆಸರ್ಹೇಳಿ ಮದವಿ ಮಾಡ್ತೀನಿ" - ಎಂದಾಗ ದೇಸಾಯಿ ತನ್ನ ಕತ್ತಿನಲ್ಲಿದ್ದ ಎರಡೆಳೆ ಚಿನ್ನದ ಸರವನ್ನು ಹಾಗೇ ಹರಿದು ಅವನ ಕೈಗಿತ್ತನೆಂದು ನಮ್ಮಣ್ಣ ಹೇಳಿದ್ದ. ಒಬ್ಬ ಹರಿಜನ ಹುಡುಗ, ನನ್ನ ಓರಗೆಯವನು, ಕಾಲೇಜು ಕಲಿಯುತ್ತಿದ್ದಾಗ ತುಂಬ ತೊಂದರೆಯಾಗಿ ಶಿಕ್ಷಣ ಮುಂದುವರಿಸದೆ ವಾಪಸ್ಸು ಬಂದ ವಿಷಯ ದೇಸಾಯಿಗೆ ಗೊತ್ತಾಗಿ ಅವನನ್ನು ಮನೆಗೆ ಕರೆಸಿ ಐನೂರು ರೂಪಾಯಿ ಕೊಟ್ಟದ್ದನು, ಆ ಹುಡುಗ ದೇಸಾಯಿಯ ಸಹಾಯದಿಂದಲೇ ಶಿಕ್ಷಣ ಮುಂದುವರಿಸಿದ್ದನ್ನು ಈಗಲೂ ಸ್ಮರಿಸಿಕೊಳ್ಳುತ್ತಾನೆ. ಆತನ ಔದಾರ್ಯವನ್ನು ಹೇಳುವ ಇಂಥ ನಾಕೆಂಟು ಘಟನೆಗಳನ್ನು ನಾನೇ ಕಂಡಿದ್ದೇನೆ. ಆದರೆ ಅವನ ಔದಾರ್ಯವನ್ನು ಜನ ಒಬ್ಬರೂ ಮೆಚ್ಚಿ ಹೊಗಳಿದ್ದನ್ನು ನಾ ಕಾಣೆ. ಬಹುಶಃ ಕ್ರೂರಿಯಾದ ಇವರಪ್ಪನ ಮೇಲಿನ ಸೇಡಿನಿಂದಲೋ ಅಥವಾ ಇವರ ಶ್ರೀಮಂತಿಕೆ ಸೋರಿಹೋದದ್ದರಿಂದಲೋ ನಮ್ಮೂರ ಜನ ಈ ದೇಸಾಯಿಯನ್ನು ಗಂಭೀರವಾಗಿ ಪರಿಗಣಿಸಲೇ ಇಲ್ಲ. ದೇಸಗತಿಯ ಅಹಂಕಾರವನ್ನು ತೃಪ್ತಿಪಡಿಸಿಕೊಳ್ಳಲಿಕ್ಕಾಗಿ ಈತ ಧಾರಾಳಿಯಾಗಿದ್ದನೋ ಎಂದು ಅನೇಕರು ಸಂಶಯ ವ್ಯಕ್ತಪಡಿಸಿದ್ದುಂಟು. ಪಂಚಾಯ್ತಿ ಎಲೆಕ್ಷನ್ನಿಗೆ ದೇಸಾಯಿ ಹಳೆ ಜನರದೊಂದು ತಂಡ ಕಟ್ಟಿಕೊಂಡು ನಿಂತನಲ್ಲ, ನೀರನಂತೆ ಹಣ ಸುರಿದ. ಮನೆಮನೆಗೆ ಹೋಗಿ ಎಲ್ಲರನ್ನೂ ತನಗೇ ಓಟು ಬರೆಯುವಂತೆ ಕೇಳಿದ. ಊರುಗಾರಿಕೆಗೆ ಸಹಾಯ ಮಾಡಿದ್ದಿತ್ತು. ಧಾರಾಳಿಯಾಗಿ ಅವರಿವರ ಕುಟುಂಬಗಳನ್ನು ನಿಲ್ಲಿಸಿದ್ದಿತು. ಆದರೂ ಜನ ಪ್ರಚಂಡ ಬಹುಮತದಿಂದ ಅವನನ್ನೂ ಅವನ ತಂಡವನ್ನೂ ಸೋಲಿಸಿದರು. ಇದರಿಂದ ದೇಸಾಯಿಗೆ ಭಾರೀ ನಿರಾಶೆಯಾಗಿತ್ತು. ಅಥವಾ ಯಾರಿಗೆ ಆಗುವುದಿಲ್ಲ? ಹಾಗಂತ ಊರವರ ಮೇಲೆ ಕೋಪಗೊಂಡವನಲ್ಲ, ಸೇಡು ತೀರಿಸಿಕೊಳ್ಳಲು ಹೊಂಚಿದವನಲ್ಲ, ತನ್ನ ಪಾಡಿಗೆ ತಾನು ಅರಮನೆಯಾಯಿತು, ಆಗಾಗ ಬಯಲಾಟವಾಯಿತು, ನಿತ್ಯದ ಕುಡಿತವಾಯಿತು - ಇದ್ದ. ಮಾತಾಡಿಸಿದರೆ ನಗುನಗುತ್ತಲೇ ಮಾತಾಡುತ್ತಿದ್ದ. ಯಾವಾನಾದರೂ ಬಂದು ಹೊಗಳಿದರೆ ಆತನ ಮನಸ್ಸಿನಲ್ಲೇನೋ ಸಹಾಯ ಕೇಳುವುದಿದೆ, ಅದಕ್ಕೇ ಹೀಗೆ ಹಲ್ಲುಗಿಂಜುತ್ತಿದ್ದಾನೆಂದು ಅವನಿಗೆ ಗೊತ್ತಾಗುತ್ತಿತ್ತು. ಆದರೂ ಅವನಿಗೆ ಸಹಾಯ ಮಾಡುತ್ತಿದ್ದ. ಇನ್ನೇನು, ಅವನಿಗಿನ್ನೊಂದು ಭಯಂಕರ ರೋಗವಿತ್ತು. ಅದನ್ನು ಮುಂದೆ ಶೀನಿಂಗವ್ವ ವಿವರಿಸುತ್ತಾಳೆ.
ಇನ್ನು ಶೀನಿಂಗವ್ವ ಹೇಳುವ ಕಥೆ ಕೇಳಿರಿ:

* * *

# ಅಧ್ಯಾಯ - ೭

“ಈ ವರನನ್ನು ಗೊತ್ತು ಮಾಡಿದವನೂ ಗೌಡನೇ. ನಿಶ್ಚಯಕಾರ್ಯದಲ್ಲಿ ಹೆಂಗಸರು ಭಾಗವಹಿಸಿದ್ದರಾದರೂ ಗೌಡನಿಗೆ ಎದುರಾಗಿ ಮಾತಾಡುವ ಧೈರ್ಯ ಯಾರಿಗೂ ಇರಲಿಲ್ಲ. ಈ ಸಲದ ಮದುವೆ ಅದ್ದೂರಿಯಿಂದಲೇ ಆಯಿತು. ಸಿಂಗಾರವ್ವನಿಗೆ ಮೈತುಂಬ ಆಭರಣ ಹಾಕಿದ್ದರೂ ವರನನ್ನು ನೋಡಿ ಹೆಂಗಸರ್ಯಾರಿಗೂ ನೆಮ್ಮದಿಯಾಗಲಿಲ್ಲ. ಗೌಡ ಇಲ್ಲಿಯೂ ಏನೋ ಹೊಂಚಿದ್ದಾನೆಂದು ಊರವರಿಲ್ಲ ಆಡಿಕೊಂಡರು. ಸಿಂಗಾರೆವ್ವನ ಬಗ್ಗೆ ಸಹಾನುಭೂತಿ ತೋರಿಸಿದರು. ಮದುವೆ ಆದಮೇಲೆ ಯೊರೇನು ಮಾಡಲಾದಿತು? ಅನೇಕರು ಆಡಿಕೊಂಡ ಹಾಗೆ ಒಂದೇ ಒಂದು ನೆಮ್ಮದಿಯೆಂದರೆ ‘ಈ ಸಲದ ವರ ಜೀವಂತ ಇದ್ದ.’

ಮದುವೆಯಾಗಿ ಒಂದು ತಿಂಗಳಾದ ಮೇಲೆ ಸಿಂಗಾರೆವ್ವ ‘ನಡೆಯಲಿಕ್ಕೆ’ ಗಂಡನ ಮನೆಗೆ ಬಂದಳು ಅವಳನ್ನು ಕಳಿಸಲಿಕ್ಕೆ ಬಂದವರಲ್ಲಿ ನಾನೂ ಇದ್ದೆ. ಕಳಿಸಿ ಉಳಿದವರೆಲ್ಲ ತಿರುಗಿ ಹೋಗುವಾಗ “ಸಿಂಗಾರೆವ್ವ ಒಬ್ಬಾಕಿನs ಆಗ್ತಾಳ, ತುಸ ದಿನ ನೀನೂ ಆಕೀ ಜೊತೆಗಿರು” ಎಂದು ಹೇಳಿ ನನ್ನನ್ನು ಇಲ್ಲೇ ಬಿಟ್ಟು ಹೋದರು. ಆಗ ಬಂದಿವಲ್ಲ, ಅದೇಕಡೆ, ಆಮೇಲೆ ನಾವು ನಂದಗಾವಿಗೆ ಹೋಗಲೇ ಇಲ್ಲ. ತೌರು ಮನೆ ಎಂಬ ಜೈಲಿನಿಂದ ಒಮ್ಮೆ ಹೊರಬಂದರೆ ಸಾಕೆಂದು ಸಿಂಗಾರೆವ್ವನಿಗೆ ಅನಿಸಿರಬೇಕು; ಅದಕ್ಕೇ ಆಮೇಲೆ ತೌರಿನಿಂದ ಯಾರು ಕರೆಯ ಬಂದರೂ ಹೋಗಲಿಲ್ಲ. ತಾಯಿಯನ್ನು ನೋಡಬೇಕೆನಿಸಿದಾಗ ಅವಳನ್ನು ಇಲ್ಲಿಗೇ ಕರೆಸುತ್ತಿದ್ದಳು.

ನಾವು ಅರಮನೆಯ ಬಗ್ಗೆ ಎಷ್ಟೆಲ್ಲ ಕನಸು ಕಂಡಿದ್ದೆವು. ಇಡೀ ಶಿವಾಪುರ ಊರಿನ ಅರ್ಧದಷ್ಟಿರುವ ಅರಮನೆ, ಮನೆತುಂಬಿ ತುಳುಕುವ ಶ್ರೀಮಂತಿಕೆ, ಕೈಗೊಂದಾಳು, ಕಾಲಿ ಗೊಂದಾಳು, ದೊರೆಸಾನಿಗೆ ಪಲ್ಲಕ್ಕಿ ಸೇವೆ - ಅಬ್ಬಾ ಸಡಗರವೇ ಎಂದು ಮದರೆ - ಇಲ್ಲೇನಿದೆ ? ಸಿಂಗಾರೆವ್ವನಿಗೆ ಮೈತುಂಬ ಆಭರಣ ಹಾಕಿದ್ದರಲ್ಲ, ಅವನ್ನು ಭದ್ರವಾಗಿ ಇಡುತ್ತೇವೆಂದು ಹೇಳಿ, ಕೈಯಲ್ಲಿಯ ಅವರೆಡು ಬಂಗಾರದ ಬಳೆ, ಅದೊಂದು ತಾಳಿ ಬಿಟ್ಟು ಉಳಿದುವೆಲ್ಲವನ್ನೂ ಕಸಿದುಕೊಂಡರು. ಆಮೇಲೆ ನಮಗೆ ಗೊತ್ತಾಯಿತು: ಅವನ್ನು ಊರಿನ ಪರುಮಶೆಟ್ಟಿಯಿಂದ ಕಡ ತಂದಿದ್ದರು ಎಂದು ! ಸಾಕೇನಪ್ಪ ದೇಸಗತಿಯ ಸಡಗರ ?

ಇನ್ನು ಅರಮನೆಯ ಸ್ಥಿತಿಗತಿಗಳೋ ಸ್ವಾಮಿ ಶಿವಲಿಂಗನೇ ಕಾಪಾಡಬೇಕು ! ನೀನೇ ನೋಡೀಯಲ್ಲ. ಅರಮನೆ ಎಷ್ಟು ದೊಡ್ಡದು ಅಂತ. ಇಂಥಾ ಅರಮನೆಗೆ ಸಾವಿರ ಜನ ಆದರೂ ಸಾಲದು. ಆದರೆ ಇಲ್ಲಿದ್ದವರು ಇಬ್ಬರು ಗಂಡಾಳು, ಇಬ್ಬರು ಹೆಣ್ಣಾಳು. ಗಂಡಾಳುಗಳು ಮುಂಜಾನೆ ನ್ಯಾರೆ ಮಾಡಿ ತೋಟಕ್ಕೆ ಹೋದರೆ ತಿರುಗಿ ಬರುವುದು ಸಂಜೇಯೇ. ಆದ್ದರಿಂದ ಅರಮನೆಯಲ್ಲಿ ಅವರ ಉಲಿವೇ ಇರುತ್ತಿರುಲಿಲ್ಲ. ಸಂಜೆ ಬಂದವರು ದನಗಳಿಗೆ ಮೇವು ಹಾಕಿ. ಊಟಮಾಡಿ, ಒಬ್ಬ ತೊಲೆಬಾಗಿಲ ಬಳಿ ಮಲಗಿದರೆ ಇನ್ನೊಬ್ಬ ಕೊಟ್ಟಿಗೆಯಲ್ಲಿ ಮಲಗುತ್ತಿದ್ದ. ಈ ಇಬ್ಬರೂ ಏಳುವುದ ಬೆಳಿಗ್ಗೆಯೇ. ಆ ಇಬ್ಬರೂ ಗಂಡಾಳುಗಳಿದ್ದರಲ್ಲ ಭಾರೀ ಧಿಮಾಕಿನವರು. ಒಂದು ಎಮ್ಮೆ ಹಿಂಡಿಕೊಡುತ್ತಿರಲಿಲ್ಲ, ಒಂದೆರಡು ಕೊಡನೀರು ತರುತ್ತಿರಲಿಲ್ಲ. ಆ ದೋಡ್ಡ ಅರಮನೆಯ ಕಸವನ್ನಾದರೂ ಗುಡಿಸುತ್ತಿದ್ದರೇ ಎಂದರೆ ಅದೂ ಇಲ್ಲ. ತೋಟದಲ್ಲಿ ಅದೇನು ಕೆಲಸ ಮಾಡುತ್ತಿದ್ದರೋ, ಭಾರೀ ದಣಿದವರ ಹಾಗಿ ಬಂದು ಬತ್ತೀ ಸೇದುತ್ತಾ ಕೂತುಬಿಡುತ್ತಿದ್ದರು. ಹಂಗಸರ ಬಗ್ಗೆ ಅವರಲ್ಲಿ ಸದಭಿಪ್ರಾಯ ಬೇಡ, ಅವರೂ ಮನುಷ್ಯರೆಂಬ ಭಾವನೆಯೂ ಇದ್ದಂತಿರಲಿಲ್ಲ. ತಾವುದಿಸಿದು ತರುವವರು, ನಾವು ಕುತುಕೊಂಡು ತಿನ್ನುವವರು - ಎಂಬಂಥ ಧೋರಣೆಯವರು. ಏನಾದರೊಂದು ಮಾತಾಡಬೇಕಾದಾಗಲೂ ಅನುಗ್ರಹಿಸುವವರ ಹಾಗೆ ಅವರ ಮಾತಿನ ಧಾಟಿ ಇರುತ್ತಿತು.

ಒಂದು ದಿನ ನೀರಿನ ಸೀತಿ ಹೊಟ್ಟೆನೋವೆಂದು ಬರಲಿಲ್ಲ. ದನಕರು ನೋಡಿಕೊಳ್ಳುತ್ತಿದ್ದ ನಿಂಗಪ್ಪನಿಗೆ ‘ಹೋಗಿ ಒಂದೆರಡು ಕೊಡನೀರು ತಗಂಬಾ’ ಎಂದರೆ ಅವನು ದುರುಗುಟ್ಟಿನನ್ನ ಕಡಿನೋಡಿ ಸುಮ್ಮನಾದ. ನನಗೆ ಅವಮಾನವಾಯಿತು. ಮತ್ತೊಮ್ಮೆ ಅದೇಮಾಗು ಹೇಳಿದೆ. “ ಈ ಹೆಂಗಸರಿಗೆ ಗಂಡಸರಂದರ ಕಿಮ್ಮತ್ತs ಇಲ್ಲಲಾ. ಹತ್ತಾಳಿನ ಕೆಲಸ ನಾ ಒಬ್ಬನs ನೋಡಿಕೋತೀನಿ, ಇವರಿಗೆ ಗೊತ್ತಾಗೋದs ಇಲ್ಲ” - ಎಂಬಿತ್ಯಾದಿ ಏನೇನೋ ಗೊಣಗಿ ಮಹಾ ನಟ್ಟು ಕಡಿದವರ ಹಾಗೆ ನನ್ನ ಮುಂದೆ ಹಾದು, ನನ್ನ ಕಡೆ ಕೂಡ ನೋಡದೆ ಹೋಗಿಬಿಟ್ಟ. ನನಗೆ ಸಿಟ್ಟು ತಡೆಯಲಾಗಲಿಲ್ಲ. ಹೋಗಿ ಸಿಂಗಾರೆವ್ವನಿಗೆ ಹೇಳಿದೆ. ಅವಳು ದೇಸಾಯಿಗೆ ಹೇಳಿದಳು.

ದೇಸಾಯಿ ವಿಚಲಿತನಾಗಲೇ ಇಲ್ಲ. ಇದೆಲ್ಲ ಇಲ್ಲಿ ಮಾಮೂಲಿ ಎಂಬಂತೆ "ತರಿಸೋಣ, ತರಿಸೋಣ" ಎಂದು ಹೇಳಿ, ಅಲ್ಲಿದ್ದ ಕಾಳ್ಯಾನಿಗೆ ಹೇಳಿದ, ಅವನು ಹಾ ಹೂ ಎನ್ನದೆ ತನ್ನ ಪಾಡಿಗೆ ತಾನಿದ್ದುಬಿಟ್ಟ! ನನ್ನ ಚಡಪಡಿಕೆ ನೋಡಲಾರದೆ ಇನ್ನೊಬ್ಬ ಹೆಣ್ಣಾಳು ನಂಜಿ ಹೋಗಿ ನೀರು ತಂದಳು.

ಇನ್ನು ಹೆಣ್ಣಾಳುಗಳು: ಇವರು ಗಂಡಸರಿಗಿಂತ ಒಳ್ಳೆಯವರೇನೋ ನಿಜ. ಯಾಕೆಂದರೆ ಗೊಣಗಿಕೊಳ್ಳುತ್ತಿರಲಿಲ್ಲ. ಇಬ್ಬರಲ್ಲಿ ಒಬ್ಬಳು ಕಸಮುಸುರೆ ಮಾಡಿ ನೀರು ತಂದರೆ ಇನ್ನೊಬ್ಬಳು ಅಡಿಗೆ ನೋಡಿಕೊಳ್ಳುತ್ತಿದ್ದಳು. ಪ್ರತಿ ವಾರಕ್ಕೊಮ್ಮೆ ಈ ಕೆಲಸ ಅದಲುಬದಲು ಮಾಡಿಕೊಳ್ಳುತ್ತಿದ್ದರು. ಮುಂಜಾನೆ ಸಂಜೆಗಳಲ್ಲಿ ತಮ್ಮ ಕೆಲಸ ಮುಗಿಯಿತೆಂದರೆ ಹೇಳದೆ ಕೇಳದೆ ತಮ್ಮ ಮನೆಗಳಿಗೆ ಹೊರಟು ಬಿಡುತ್ತಿದ್ದರು. ಆದರೆ ಇವರೂ ಮೈಗಳ್ಳರೆ, ಒಮ್ಮೆ ಅಡಿಗೆ ಮನೆಗೆ ಹೋದೆ. ಸೀತಿ ಅಡಿಗೆ ಮಾಡುತ್ತಿದ್ದಳು. ಪಾಪ ಒಬ್ಬಳೇ ಇದ್ದಾಳಲ್ಲಾ, ನಾನೂ ಸ್ವಲ್ಪ ನೆರವಾಗೋಣವೆಂದು ಸೌಟು ಹಿಡಿದು ಒಲೆಮೇಲಿನ ಪಾತ್ರೆಯಲ್ಲಿ ಹಾಕಿದ್ದೇ ತಡ, ಇಡೀ ಅಡಿಗೆಯ ಭಾರ ನನಗೇ ಬಿಟ್ಟು ಬುಟ್ಟಿಯೊಳಗೆ ಐದಾರು ರೊಟ್ಟಿ ಹಿಡಿದು, ಪಲ್ಯ ಹಾಕಿಕೊಂಡು ಮಡಿಚಿ ಉಡಿ ಕಟ್ಟಿಕೊಂಡು ತನ್ನ ಮನೆಗೆ ಹೋಗೇಬಿಟ್ಟಳು. ಅಂದು ಬುದ್ಧಿ ಕಲಿತವಳು ಆಮೇಲೆ ಉಸ್ತುವಾರಿ ಮಾತ್ರ ಮಾಡತೊಡಗಿದೆ. ಆದರೆ ದೇಸಾಯಿಗೂ ಹಿರಿಯ ದೊರೆಸಾನಿಗೂ ನಾನೇ ಊಟ ಬಡಿಸುತ್ತಿದ್ದೆ. ಆಮೇಲೆ ಸಿಂಗಾರೆವ್ವನ ಜೊತೆಯಲ್ಲೇ ಊಟ ಮಾಡುತ್ತಿದ್ದೆ.

ಅಂತೂ ಆಳು ಮತ್ತು ಅರಮನೆಯ ಸಂಬಂಧ ಹಿತಕರವಾಗಿಲ್ಲವೆಂದೆನಿಸಿತು. ಗೌಡರ ಮನೆಯಲ್ಲೇ ಹುಟ್ಟಿಬೆಳೆದವಳು. ನನಗೆ ಗೊತ್ತಿಲ್ಲವೇ? ನಂದಗಾಂವಿಯ ಗೌಡ ಎಂಥವನೇ ಇರಲಿ, ಅವನನ್ನು ಕಂಡರೆ ಆಳುಗಳು ಹೆದರಿ ನಡುಗುತ್ತಿದ್ದರು. ಹೆಣ್ಣಾಳುಗಳಂತೂ ಅವನ ಮುಖ ನೋಡಿದವರೇ ಅಲ್ಲ; ಇನ್ನು ಮುಖಕ್ಕೆ ಮುಖಕೊಟ್ಟು ಮಾತಾಡುವುದೆಲ್ಲಿಂದ ಬಂತು? ಅದೆಲ್ಲ ಇಟ್ಟುಕೊಳ್ಳುವವರ ಧಿಮಾಕನ್ನು ಅವಲಂಬಿಸಿರುತ್ತದೆಂದು ಕಾಣುತ್ತದೆ. ಅಂಥ ಧಿಮಾಕು, ಜೋರು ದೇಸಾಯಿಯಲ್ಲಿರಲಿಲ್ಲ.

ಇನ್ನು ನಮ್ಮ ಸರಗಂ ದೇಸಾಯಿ; ಒಟ್ಟು ವಾತಾವರಣದಲ್ಲಿ ಸರಿಹೊಂದದ ಮನುಷ್ಯನಾಗಿ ಕಾಣುತ್ತಿದ್ದ. ಆತ ಸೋತವನಂತೆ, ಆದರೆ ಮತ್ತೆ ಗೆಲ್ಲುವನೆಂಬ ಆತ್ಮವಿಶ್ವಾಸವಿಲ್ಲದೆ ಸದಾ ಹತಾಶ ಮನೋಭಾವನೆಯಲ್ಲೇ ಇರುತ್ತಿದ್ದ. ಆದರೆ ತಾನು ದೇಸಾಯಿಯೆಂಬ, ಈ ಅರಮನೆಯ ಯಜಮಾನನೆಂಬ, ಒಂದು ಕಾಲದ ವೈಭವಕ್ಕೆ ಮಾಲೀಕನೆಂಬ ಹೆಮ್ಮೆ ಒಳಗೊಳಗೇ ಇತ್ತು. ಸಾಧ್ಯವಿದ್ದಿದ್ದರೆ ಅದನ್ನು ಚಲಾಯಿಸಲು ಈಗಲೂ ಸಿದ್ಧನೇ. ಆದರೆ ಅದರ ಪ್ರಭಾವದಿಂದ ಏನನ್ನೂ ಸಾಧಿಸಲಿಕ್ಕೆ ಆಗುವುದಿಲ್ಲ ಎಂಬ ಕೊರಗು ಮಾತ್ರ ಆತನ ಮುಖದಲ್ಲಿ ಕಾಣುತ್ತಿತ್ತು. ಹೀಗಾಗಿ ಚಲಾವಣೆಯಿಲ್ಲದ ನಾಣ್ಯಗಳ ದೊಡ್ಡ ನಿಧಿಯ ಯಜಮಾನನಂತಿದ್ದ.

ಕಾಲಮೇಲೆ ಕಾಲು ಹಾಕಿ ಆತ ಕೂತಾಗ ದೇಸಗತಿಯ ಧಿಮಾಕೇನೋ ಆ ಭಂಗಿಯಲ್ಲಿರುತ್ತಿತ್ತು. ಆದರೆ ಅವನು ಹಾಗೂ ಕೂರುತ್ತಿರಲಿಲ್ಲ. ಮೊಳಕಾಲಿಗೆ ಎರಡು ಕೈ ಸುತ್ತುತ್ತಿದ್ದ. ಆದ್ದರಿಂದ ಮೈಗಳ್ಳರಂತೆ ಕಾಣುತ್ತಿದ್ದ. ಆಕಳಿಕೆಯಿಂದ ತುಂಬಿಕೊಂಡಿರುತ್ತಿದ್ದ ಸಣ್ಣ ಕಣ್ಣು, ಉದ್ದಕ್ಕೆ ಚಾಚಿ ಮೇಲ್ದುಟಿಯ ಮೇಲೆ ಬಿದ್ದ ಚೂಪು ಮೂಗು, ಸಣಕಲು ದಂಟಿನಂಥ ದೇಹ - ನಡೆಯುವಾಗಲೂ ನಿಧಾನವಾಗಿ ಹೆಜ್ಜೆ ಹಾಕುತ್ತಿದ್ದುದರಿಂದ - ಯಾವುದೇ ಗತ್ತು ಗಮ್ಮತ್ತುಗಳಿಗೆ ಅವಕಾಶವೇ ಇರುತ್ತಿರಲಿಲ್ಲ.

ಸಾಮಾನ್ಯವಾಗಿ ಗೌಡ, ದೇಸಾಯಿ, ಕುಲಕರ್ಣಿ ಮುಂತಾದವರು ಕಷ್ಟಪಟ್ಟಾದರೂ ಗಂಭೀರವಾಗಿ ಕಾಣುವಂತೆ ಶ್ರೀಮಂತ ಉಡುಪು ಧರಿಸುವುದು ವಾಡಿಕೆ. ಈತನ ಉಡುಪು ಸ್ವಚ್ಛವಾಗಿರುತ್ತಿದ್ದಾದರೂ ಅದರಲ್ಲಿ ದೇಸಗತಿಯ ಛಾಪಿರುತ್ತಿರಲಿಲ್ಲ. ಬೇಕಾದಷ್ಟು ನಿರ್ಲಕ್ಷತನ ಇತ್ತು. ಆದರೆ ರುಂಬಾಲನ್ನು ಮಾತ್ರ ಪಾರಿಜಾತದ ಕೃಷ್ಣನ ಹಾಗೆ ಒಪ್ಪವಾಗಿ ಸುತ್ತಿಕೊಳ್ಳುತ್ತಿದ್ದ. ಒಮ್ಮೊಮ್ಮೆ ಕೆಳಗಿನ ಅಸ್ತವ್ಯಸ್ತ ಧೋತ್ರ ಅಂಗಿಗೂ, ತಲೆಯ ಮೇಲಿನ ಭಾರೀ ಬೆಲೆಯ ಜರತಾರಿ ರುಂಬಾಲಿಗೂ ತಾಳೆಯಾಗುತ್ತಿರಲಿಲ್ಲ. ಆದರೆ ಆ ಬಗ್ಗೆ ಅವನೆಂದೂ ತಲೆ ಕೆಡಿಸಿಕೊಂಡವನೇ ಅಲ್ಲ. ಅವನು ನಿಲ್ಲುವ ನಿಲುವಿಗಾಗಲೀ, ಕೂರುವ ಭಂಗಿಗಾಗಲೀ ನಡೆಯುವ ರೀತಿಗಾಗಲೀ ಆ ಉಡುಪು ಸಮವಲ್ಲವೆಂದೇ ನನ್ನ ಅನಿಸಿಕೆಯಾಗಿತ್ತು.

ಆದರೆ ಹೇಳಿಕೊಳ್ಳುವಂಥ ಸ್ನೇಹಿತರೂ ಅವನಿಗಿರಲಿಲ್ಲ. ಎಷ್ಟೋಂದು ದಿನಗಳಿಂದ ನೋಡುತ್ತಿದ್ದೇನೆ, ಅರಮನೆಯ ಕಡೆಗೆ ಊರವರ ಸುಳಿವೇ ಇರುತ್ತಿರುಲಿಲ್ಲ. ಆಗಾಗ ತಲೆ ಹಾಕುವವನೆಂದರೆ ಪರಮಶೆಟ್ಟಿ ಒಬ್ಬನೇ. ಎತ್ತರವಾಗಿ, ಕರ್‍ರಗಿನ ಆಕೃತಿಯ ಶೆಟ್ಟಿ ನೋಡಿದರೆ ಗೌರವ ಬರುವಂತೆ ಸುಲಭವಾಗಿ ಗಂಭೀರನಾಗಿರಬೇಕಿತ್ತು. ಬಂದವನು ಆ ಕಡೆ ಈ ಕಡೆ ನೋಡಿ, ಆಸುಪಾಸು ಯಾರೂ ಇಲ್ಲವೆಂದು ಖಾತ್ರಿಯಾದಾಗ ಮಾತ್ರ ದೇಸಾಯಿಯ ಕಿವಿಯಲ್ಲಿ ಏನೇನೋ ಪಿಸುಗುಟ್ಟುತ್ತಿದ್ದ. ಇವರಿಬ್ಬರೂ ಮಾತಾಡುವ ರೀತಿ ಕಂಡವರಿಗೆ ಇವರ ಮಧ್ಯದಲ್ಲೇನೋ ಕಳ್ಳ ವ್ಯವಹಾರವಿದೆಯೆಂದು ತಕ್ಷಣ ಗೊತ್ತಾಗುತ್ತಿತ್ತು. ಹೆಂಗಸರ ಮುಂದೆ ಮಾತ್ರ ಶೆಟ್ಟಿ ಮುಖಕ್ಕೆ ಬಿಗಿ ತಂದುಕೊಂಡು ಗಂಭೇರವಾಗಿರುವುದಕ್ಕೆ ಪ್ರಯತ್ನಿಸುತ್ತಿದ್ದ. ಹಾಗೂ ಹೆಂಗಸರು ತನ್ನ ಬಗ್ಗೆ ತುಂಬ ಗೌರವ ಭಾವನೆಯಿಂದಿರಬೇಕೆಂದು ಅವನ ಅಪೇಕ್ಷೆಯಾಗಿತ್ತು.

ಮುಂಜಾನೆ ಎದ್ದು ಸ್ನಾನ, ನ್ಯಾರೆ ಮಾಡಿ ತನ್ನ ರುಂಬಾಲು ಸುತ್ತಿಕೊಂಡು ಹೋಗಿ ದೇಸಾಯಿ ಆಲದ ಕಟ್ಟೆಯ ಮೇಲೆ ಬೀಡಿಸೇದುತ್ತ ಕೂರುತ್ತಿದ್ದ. ಹೆಂಗಸರು ನೀರಿಗೆ ಹೋಗುವುದಕ್ಕೂ ಜನ ಹೊಲಗಳಿಗೆ ಹೋಗುವುದಕ್ಕೂ ಅದೇ ಮುಖ್ಯ ರಸ್ತೆಯಾದ್ದರಿಂದ ಸದಾಕಾಲ ಜನಗಳ ಓಡಾಟದಿಂದ ತುಂಬಿರುತ್ತಿತ್ತು. ಆದರೆ ಯಾವ ಮಂದಿಗೂ ದೇಸಾಯಿ ಕೂತಪರಿವೆ ಎರುತ್ತಿರಲಿಲ್ಲ. ತಮ್ಮ ಪಾಡಿಗೆ ತಾವು ಹೋಗುತ್ತಿದ್ದರು ಬುರುತ್ತಿದ್ದರು. ಅವರಲ್ಲಿ ಒಬ್ಬಿಬ್ಬರು, ಅದೂ ಮಾತಾಡುವ ಚಟದವರು ಮಾತ್ರ “ಏನ್ರಿ ಮಾರಾಜ್ರ, ಕುಂತ್ರಿ?” ಎಂದು ಹೇಳಿದರೆ ಅದೇ ಹೆಚ್ಚು. ಅವರೂ ಉತ್ತರಕ್ಕಾಗಿ ಕಾಯುತ್ತಿರುಲಿಲ್ಲ ದೇಸಾಯಿಗಿದು ಗೊತ್ತು. ಬರೀ ಮುಗುಳುನಗುತ್ತಿದ್ದನಷ್ಟೆ.

ದೇಸಾಯಿ ಮಧ್ಯಾಹ್ನ ಊಟಮಾಡಿ ಮಲಗಿದರೆ ಮತ್ತೆ ಏಳುವುದು ಇಳಿಹೊತ್ತಿಗೇನೇ. ಎದ್ದು ಊರಿನಲ್ಲಿ ಮಾಯವಾಗುತ್ತಿದ್ದ. ಆಮೇಲೆ ಬರುವುದು ಮಧ್ಯರಾತ್ರಿಗೇನೇ. ಕುಡಿದ ಅಮಲಿನಲ್ಲೇ. ಒಮ್ಮೊಮ್ಮೆಯಂತೂ ಅವನನ್ನು ಹೊತ್ತುಕೊಂಡೇ ಬರುತ್ತಿದ್ದರು. ಅಂದರೆ ರಾತ್ರಿ ಮಾತ್ರ ಕುಡಿಯುತ್ತಾನೆಂದಲ್ಲ, ಅಥವಾ ಮಧ್ಯರಾತ್ರಿಗೇ ಮನೆಗೆ ಬರುತ್ತಾನೆಂದೂ ಅಲ್ಲ. ಒಮ್ಮೊಮ್ಮೆ ಮನೆಯಲ್ಲೇ ಕುಡಿಯುತ್ತಿದ್ದ. ಬಯಲಾಟದ ಮಾತುಗಳನ್ನು ಒದರಿ ಒದರಿ ಪಕ್ಕದಲ್ಲಿ ಯಾರಿದ್ದರೆ ಅವರಿಗೆ ಹೇಳುವುದು, ತಾರಕದಲ್ಲಿ ಹಾಡುವುದು, ಅಭಿನಯಿಸುವುದು ಸುರುವಾಗುತ್ತಿತ್ತು.

ಬಂದ ಹೊಸದರಲ್ಲಿ ಒಮ್ಮೆ, ನನಗಿನ್ನೂ ನೆನಪಿದೆ: ಕುಡಿದು ಮುಸ್ಸಂಜೆಯ ಹೊತ್ತಿಗೆ ಅರಮನೆಗೆ ಬಂದ. ಅರಮನೆಗೆ ಸಾವಿರ ಕಂಬಗಳು, ಇಕಾ ಕಾಣುತ್ತವಲ್ಲ. ಇಲ್ಲಿ ಎಷ್ಟು ಕಂದೀಲಿಟ್ಟರೂ ಈ ಕಂಬಗಳಿಂದಾಗಿ ಬೆಳಕು ಸಾಲುವುದೇ ಇಲ್ಲ. ರಾತ್ರಿ ನಾನು ಮತ್ತು ಸಿಂಗಾರೆವ್ವ ದರ್ಬಾರಿಗೆ ಕಾಲಿಡುತ್ತಲೇ ಇರಲಿಲ್ಲ. ಧಡೂತಿ ಕಂಬಗಳು ದಪ್ಪ ನೆರಳು ಚೆಲ್ಲಿಕೊಂಡು ಭೂತಗಳ ಹಾಗೆ ನಿಂತಿರುತ್ತಿದ್ದವು. ನಿಂತು ಮಾತಾಡಿದರೆ ಮಾತಾಡುತ್ತಿರುವವರು ನಾವೋ ಅಥವಾ ಈ ಕಂಬಗಳೋ ಎಂದು ಅನುಮಾನ ಮೂಡಿ ಅಂಜಿಕೆಯಾಗುತ್ತಿತ್ತು. ದೇಸಾಯಿ ಕುಡಿದು ಮತ್ತನಾಗಿದ್ದನಲ್ಲ, ಈ ಕಂಬಗಳ ಜೊತೆ ಮಾತಾಡುತ್ತ, ಪ್ರಾಸ ಹೇಳುತ್ತ, ತಾರಕ ಒದರುತ್ತ ಒಬ್ಬನೇ ಅಲೆದಾಡುತ್ತಿದ್ದ. ದೇಸಾಯಿಯ ಮಾತಿನ ಪ್ರತಿಧ್ವನಿಯಾಗುತ್ತಿತ್ತು. ಆಗ ಈ ಕಂಬಗಳು ಅವನೊಂದಿಗೆ ಗಹಗಹಿಸಿ ನಗುತ್ತಿರುವಂತೆ ಇಲ್ಲವೇ ಗಂಭೀರವಾಗಿ ಅಳುತ್ತಿರುವಂತೆ ಭಾಸವಾಗುತ್ತಿತ್ತು. ದಟ್ಟವಾದ ಕಾಡಿದೆ ಅಂದುಕೋ, ಅಮವಾಸ್ತೆ ಕತ್ತಲೆ, ಒಂದೇ ಒಂದು ಹಾಳು ದೇವಾಲಯ, ಅದೆಷ್ಟು ಹಾಳಾಗಿದೆಯೆಂದರೆ ಈಗ ಉಳಿದಿರುವುದು ಬರೀ ಕಂಬಗಳು. ಆ ಕಂಬಗಳ ಮಧ್ಯೆ ಒಂದು ದೆವ್ವ ಕಿರುಚುತ್ತ ಓಡ್ಯಾಡಿದರೆ ಹ್ಯಾಗಿರುತ್ತೆ; ಹಾಗಿತ್ತು ಆ ದೃಶ್ಯ. ಆಳದಲ್ಲಿ ಆತನಿಗೇನೋ ಭಾರೀ ದುಃಖವಿದೆಯೆಂದು ನನಗಾಗಲೇ ಹೊಳೆಯಿತು. ನಮಗೆ ಕಾಣುವ ಈತನ ಪಾತಳಿ ಇವನಲ್ಲ. ಅವನ ಒಳಗಿನ ಈ ವೇದನೆ ಅವನಿಗೇ ಗೊತ್ತಾಗದ ರೀತಿಯಲ್ಲಿ ಅವನನ್ನು ಮೀರಿ ಹೊರಗೆ ಬರುತ್ತದೆಂದು ಅನ್ನಿಸಿತು.

ಆದರೆ ಹೆಂಗಸರನ್ನು ನೋಡಿದಾಗ ದೇಸಾಯಿಯ ಕಣ್ಣುಗಳು ಹೊಳೆಯುತ್ತಿದ್ದವು. ಲಂಪಟನ ಹಾಗೆ ಅವರನ್ನು ನೋಡುತ್ತಿದ್ದ. ನೋಡಿನೋಡಿ ಮುಖ ಕೆಂಜಗಾಗಿ ಆಕಳಿಕೆ ಬರುತ್ತಿತ್ತು. ಆಗ ಅವನ ಕಣ್ಣು ಎಣ್ಣೆಣ್ಣೆಯಾಗಿ ಒದ್ದೆಯಾಗುತ್ತಿದ್ದವು.

ಇಲ್ಲಿಗೆ ಬಂದಿವಲ್ಲ, ಸಿಂಗಾರೆವ್ವ ‘ಹೊಸಮನೆಗಿತ್ತಿ’ ತನವನ್ನು ಅನುಭವಿಸಲೇ ಇಲ್ಲ. ಮಾರನೇ ದಿನವೇ ಇಂಥ ಇದೀ ದೊಡ್ಡ ಅರಮನೆಯ ಜವಾಬ್ದಾರಿಯನ್ನು ಹೊರಬೇಕಾಯಿತು. ಬಂದ ದಿನದಿಂದಲೇ ಹೊಸ ಸೊಸೆಗೆ ಮನೆತನದ ಹುವೇನವೇ ಕಾರುಭಾರ

ಯಾರು ಕೊಡುತ್ತಾರೆ? ಆದರೆ ನಿಭಾಯಸಲಿಕ್ಕೆ ಮನೆಯಲ್ಲಿ ಬೇರೆ ಯಾರಾದರೂ ಇದ್ದರಲ್ಲವೇ? ಹಿರಿಯ ದೊರೆಸಾನಿ ಅದಂರೆ ಸಿಂಗಾರೆವ್ವನ ಅತ್ತೆ ಹಣ್ಣುಹಣ್ಣು ಮುದುಕಿ, ಹಾಸಿಗೆ ಹಿಡಿದಿದ್ದಳು. ಇತ್ತ ದೇಸಾಯಿ ಮನೆಕಡೆ ಎಂದೂ ಲಕ್ಷ್ಯ ಕೊಟ್ಟವನೇ ಅಲ್ಲ, ನನಗೆ ಆಶ್ಚರ್ಯವಾದದ್ದು ಇಷ್ಟುದಿನ ಈ ಮನೆತನ ಹ್ಯಾಗೆ ತಡೆದಿದೆ ಎಂದು.

ನಮ್ಮ ಸಿಂಗಾರೆವ್ವ ಬಹಳ ಜಾಣೆ. ಎಷ್ಟೆಂದರೂ ಗೌಡನ ರಕ್ತ ನೋಡು. ಬಂದ ಒಂದು ತಿಂಗಳಲ್ಲೇ ಇದನ್ನೊಂದು 'ಮನೆತನ' ಅಂತ ಮಾಡಿದಳು. ನಾನೂ ನೆರವಾದೆ ಅಂತಿಟ್ಟುಕೋ. ನನ್ನಂಥವಳ ನೆರವು ಅಂಥಾ ದೊಡ್ಡ ಮನೆಯ ಯಾವ ಮೂಲೆಗಾದೀತು? ಅಂತೂ ಒಂದು ತಿಂಗಳಲ್ಲೇ ಖರೆಖರೆ ದೊರೆಸಾನಿಯಾಗಿ ಬಿಟ್ಟಳು.

ಇನ್ನವಳ ಅತ್ತೆ - ಅವಳದೂ ವಿಚಿತ್ರ ಸ್ವಭಾವವೇ. ಅವಳ ಸೇವೆಯನ್ನು ಖುದ್ದಾಗಿ ನಾನೇ ಮಾಡುತ್ತಿದ್ದೆ. ಸಿಂಗಾರೆವ್ವನೂ ಸಹಕರಿಸುತ್ತಿದ್ದಳು. ಹೆಸರು ನಾಗಮ್ಮ ಎಂದು. ವಯಸ್ಸು ಹತ್ತಿರ ಹತ್ತಿರ ನೂರಿದ್ದೀತು. ಒಂದೂ ಹಲ್ಲಿರಲಿಲ್ಲ. ಬೂದುಬಣ್ಣದ ಚಿಕ್ಕ ಚಿಕ್ಕ ಕಣ್ಣುಗಳು, ಬಿಳಿ ಮುಖದಲ್ಲಿ ಸುಕ್ಕಿನ ಗೆರೆಗಳು ಗೋಣಿಚೀಲದ ಹಾಗೆ ಹೆಣೆದುಕೊಂಡಿದ್ದವು. ಅವಳು ಹಾಸಿಗೆ ಬಿಟ್ಟು ಈಚೆ ಬರುವಂತಿರಲಿಲ್ಲ. ಊಟೋಪಚಾರಗಳೆಲ್ಲಾ ಹಾಸಿಗೆಯ ಮೇಲೇ ಆಗಬೇಕು. ಜಳಕ ಎಂದರೇ ಆ ಮುದುಕಿಗಾಗದು. ತಿಂಗಳಿಗೊಮ್ಮೆಯಾದರೂ ನಾನೇ ಜಳಕ ಮಾಡುಸುತ್ತೇನೆಂದರೂ "ಬ್ಯಾಡ ತಾಯಿ, ನಿನ್ನ ಕಾಲ ಬೀಳತೀನು" ಎಂದು ಹೇಳುತ್ತಿದ್ದಳು. ಎಷ್ಟು ದಿನಗಳಿಂದ ಹಾಗೆ ಇದ್ದಳೋ, ಸಮೀಪ ಹೋದರೆ ಮುಗ್ಗಲು ಜೋಳದ ಹಾಗೆ ನಾರುತ್ತಿದ್ದಳು. ಕಡ್ಡಿಯಂಥ ಕೈ, ಕಾಲು - ಒಂದು ಕಾಲಕ್ಕೆ ಮೈ ತುಂಬಿಕೊಂಡಿದ್ದಳೆಂದು ಹೇಳುವುದಕ್ಕೆ ಮೂಳೆಗಂಟಿದ್ದ ಅವಳ ಬಿಳಿ ಚರ್ಮ ಹೊಟ್ಟೆ ಮತ್ತು ಸೊಂಟದಲ್ಲಿ ಜೋತುಬಿದ್ದಿತ್ತು. ಆದರೆ ಯಾವಾಗಲೂ ಅಂದರೆ ಮಲಗಿದಾಗಲೂ ಮುದುಕಿಯ ಒಂದು ಕೈ ಸೊಂಟದ ಮೇಲಿರುತ್ತಿತ್ತು. ನಾನೇನಾದರೂ ಸಮೀಪ ಹೋದರೆ ಸಾಕು. ಸರ್ರನೆ ಕೋಲು ಹಿಡಿದುಕೊಂಡು "ಯಾರವರ?" ಎನ್ನುತ್ತಿದ್ದಳು. ನಾನು ನನ್ನ ಹೆಸರು, ಗುರ್ತು ಹೇಳಿದರೂ ಅವಳ ಬಳಿ ಕುಳಿತುಕೊಳ್ಳುವ ಹಾಗಿರಲಿಲ್ಲ. ಹಾಗೇನಾದರೂ ಕೂತರೆ ದೂಕಿ ದೂರ ಸರಿಸುತ್ತಿದ್ದಳು. ಆ ವಾಸನೆಯಿಂದಾಗಿ ನಾನೂ ಅವಳ ಸಮೀಪಕ್ಕೆ ಹೋಗುತ್ತಿರಲಿಲ್ಲವೆನ್ನು. ಆದರೆ ಅವಳ್ಯಾಕೆ ಈ ಥರ ಮನುಷ್ಯರನ್ನು ದೂರವಿಡುತ್ತಾಳೆಂದು ಬಹಳ ದಿನ ಗೊತ್ತಾಗಲೇ ಇಲ್ಲ. ಊಟಕ್ಕೆ ಹಾಕುವಾಗ ಅವಳನ್ನೆಬ್ಬಿಸುವ ಮೊದಲು ತಾನೇ ಕಷ್ಟಪಟ್ಟು ಎದ್ದು ಕೂರುತ್ತಿದ್ದಳು. ಮಲಮೂತ್ರ ಮಾಡಿಸುವಾಗ ಮಾತ್ರ ಅವಳು ನಿಸ್ಸಹಾಯಕಳಾಗುತ್ತಿದ್ದಳು. ಆದರೂ ಕೂಡ ಅವಳ ರಟ್ಟೆಯಲ್ಲೇ ಕೈಹಾಕಿ ಎಬ್ಬಿಸಬೇಕು, ಮಂಚದ ಕೆಳಗೇ ಕೂರಿಸಬೇಕು. ಆಗ ಸೊಂಟದ ಕಡೆಗೇನಾದರೂ ನಮ್ಮ ಕೈ ತಪ್ಪಿಹೋಯಿತ್ತೆನ್ನು, ಅದಿನ್ನೂ ಸೊಂಟ ಮುಟ್ಟುವ ಮೊದಲೇ ಅವಳಿಗೆ ಗೊತ್ತಾಗಿ ಮೊಳಕೈಯಿಂದ ಗುದ್ದುತ್ತಿದ್ದಳು. ನನಗೆ ಅದೇನೆಂದು ತಿಳಿಯುವ ಕುತೂಹಲ. ಸಿಂಗಾರೆವ್ವ "ಮುದುಕೇರೆಲ್ಲ ಹಾಂಗಃ ಇರತಾರ ಬಿಡು" ಎಂದು ನಿರ್ಲಕ್ಷಿಸಿದಳು.

ಬರಬರುತ್ತ ಆ ಮುದುಕಿಗೂ ನನಗೂ ಸಲುಗೆ ಬೆಳೆಯಿತು. ನಾನು ಅವಳ ಕೋಣೆಗೆ ಹೋದರೆ, ಈಗ ಮೊದಲಿನಂತೆ ಕೋಲು ತಗೊಂಡು "ಯಾರವರ?" ಎನ್ನುತ್ತಿರಲಿಲ್ಲ. "ಶೀನಿಂಗೇನ? ಬಾ ಬಾ" ಎನ್ನುತ್ತಿದ್ದಳು. ನಾನು ಹೋದಾಗೆಲ್ಲ ಆ ಮುದುಕಿ ತನ್ನ ಬೊಚ್ಚುಬಾಯಿ ಬಿಟ್ಟು ಕೇಳುತ್ತಿದ್ದುದು ಒಂದೇ ಪ್ರಶ್ನೆ: "ಸಿಂಗಾರಿ ಬಸರಾದ್ಲ?" ಅದಕ್ಕೇ ಸಿಂಗಾರೆವ್ವ ಅವಳ ಹತ್ತಿರ ಹೋಗುವುದನ್ನು ಕಡಿಮೆ ಮಾಡಿದ್ದಳು. ಅತ್ತೆಯೆಂಬ ಅಕ್ಕರ್ತಿಯಿಂದ ಹೋದರೆ, ಹೋದೊಡನೆ ಅವಳ ಹೊಟ್ಟೆಗೇ ಕೈ ಹಾಕಿ "ಬಸರಾದಿ?" ಎಂದು ಕೇಳುತ್ತಿದ್ದರೆ ಹ್ಯಾಗೆ ಹೋಗುವುದು? ಒಮ್ಮೆ ಇದೇ ಬಗ್ಗೆ ನನಗೂ ಅವಳಿಗೂ ಕೊಂಚ ಮಾತಾಯಿತು.

"ಬಸರ ಬಸರಂದರೇನು, ಶೀರೀ ನಿರಿಗಿ ಅಂತ ತಿಳಿಕೊಂಡ್ಯೇನು, ಬೇಕಾದಾಗ ಹಾಕಿಕೊಳ್ಳಾಕ, ಬ್ಯಾಡಾದಾಗ ಬಿಚ್ಚಾಕ? ತುಸ ದಿನ ತಡಿ" - ಅಂದೆ.

"ಇನ್ನಃ ಎಷ್ಟುದಿನ ಬೇಕ? ನನ್ನಂಥಾ ನನಗ ಈಗ ಬೇಕಾದರೂ ಗಂಡು ಸಿಗಲಿ, ಹಾ ಅನ್ನೂದರಾಗ ನಾಕ್ಹಡೀತೇನ. ಈಕಿಗೇನ ಧಾಡಿ?"

ಭಲೇ ಮುದುಕಿ ಅಂದುಕೊಂಡೆ, ನಗೆ ತಡೆಯುತ್ತಾ,

“ಹುಳುಕದಂಟಿನಂಥಾ ಮಗನ್ನ ಕೊಟ್ಟೇದಿ, ಅವನ್ನ ಕಟ್ಟಿಕೊಂಡು ದಿನಕ್ಕೊಂದು ಹಡ್ಯಾಕಾದೀತ?” ಅಂದೆ.

“ಏ, ಬಸರಾಗಾಗ ಒನಿಕೇ ಆಗಬೇಕಂತಿಲ್ಲಗs, ಉಚ್ಚಿ ದಾಟಿದರ ಸಾಕು. ಉಚ್ಚೀ ಹೊಯ್ತಾನೋ ಇಲ್ಲೋ? ಅದ್ಹೇಳು.”

ಈಗ ಮಾತ್ರ ನನಗೆ ನಗೆ ತಡೆಯಲಿಕ್ಕಾಗಲಿಲ್ಲ. ನಕ್ಕೆನಲ್ಲ, ಮುದುಕಿ ತಾನೂ ಹಾಸಿಗೆಯ ಮೇಲೆ ಕುಪ್ಪಳಿಸುತ್ತ ಬೊಚ್ಚಬಾಯಿ ತೆಗೆದು ನಾನು ನಗುವುದನ್ನೇ ಅಣಕಿಸತೊಡಗಿದಳು.

ಅವಳು ಒಮ್ಮೊಮ್ಮೆ ಖುಶಿ ಬಂದಾಗ ದನಿ ತೆಗೆದು ಹಾಡುತ್ತಿದ್ದಳು. ಆದರೆ ಆ ಹಾಡು ಕೇಳಿದಾಗ ನಮ್ಮಿಬ್ಬರಿಗೂ ಸಂತೋಷವಾಗುತ್ತಿರಲಿಲ್ಲ. ಅದು, ಎಲ್ಲೋ ದೂರದಲ್ಲಿ ಒಂದು ನೊಂದ ಹೆಣ್ಣುನಾಯಿ ಒದರಿ ಅಳುತ್ತಿದ್ದಂತೆ ಕೇಳಿಸುತ್ತಿತ್ತು. ಆ ಹಾಡು ಕೂಡ ಯಾವಾಗಲೂ ಒಂದೇ ನುಡಿ, –

ಚೆನ್ನದ ನಡಪಟ್ಟಿ ರನ್ನದ ನಡಪಟ್ಟಿ
ಚೆನ್ನರನ್ನದ ನಡಪಟ್ಟಿ ||ಸೋ||
ಚೆನ್ನರನ್ನದ ನಡಪಟ್ಟಿ ಕೊಡುವೇನ
ಮೊಮ್ಮಗನ ಹಡದ ಸೊಸೆಮುದ್ದಿಗೆ ||ಸೋ||

ನಮ್ಮ ಸಲಿಗೆ ಜಾಸ್ತಿಯಾದಂತೆ ನನಗೇನಾದರೂ ಅವಳು ಒರಟಾಗಿ ಮಾತಾಡಿದರೆ “ನಿನ್ನ ಸೊಂಟ ಹಿಡಿತೇನ್ನೋಡು” ಎಂದು ಹೇಳುತ್ತಿದ್ದೆ. ಅವಳು “ಬ್ಯಾಡ ತಾಯೀ, ಬ್ಯಾಡ” ಎಂದು ಕೋಲು ಅಡ್ಡಹಿಡಿದು ತಡೆಯುತ್ತಿದ್ದಳು.

ನಡೆಯಲಿಕ್ಕೆ ಬಂದ ಮೊದಲನೇ ದಿನ ಮುದುಕಿ ಸೊಸೆಯ ತಲೆಮೇಲೆ ಅಂತಃಕರಣ ಪೂರ್ವಕ ಕೈಯಿಟ್ಟು “ಲಗೂ ಗಂಡಮಗನ್ನ ಹಡೀ ಮಗಳs” ಎಂದಿದ್ದಳು. ಆಗಾಗ ನನ್ನನ್ನು ಕರೆದು ಕಿವಿಯಲ್ಲಿ “ಈ ತಿಂಗಳು ಸಿಂಗಾರಿ ಮುಟ್ಟಾದಳ?” ಎಂದು ಕೇಳುತ್ತಿದ್ದಳು. ಮತ್ತು ಸೊಸೆಯೊಬ್ಬಳ ಮುಖ್ಯ ಕರ್ತವ್ಯವೆಂದರೆ ಅದೇ ಎಂದೂ ಹೇಳುತ್ತಿದ್ದಳು. ಒಂದು ಸಲ ಅವಳು ಬಸಿರಾಗಿ ಹಡೆದಳೋ ಆಮೇಲೆ ತೌರುಮನೆಯ ಆಸೆ ತಾನೇ ಮಾಯವಾಗಿ ಆಗ ಮಾತ್ರ ಈ ಮನೆಯನ್ನು ನಿಜವಾಗಿ ನಂಬುವಳೆಂದು ಅವಳ ಭಾವನೆಯಾಗಿತ್ತು.

ಒಮ್ಮೆ ನನ್ನನ್ನು ಕರೆದು ಹಾಸಿಗೆ ಮೇಲೆ ತನ್ನ ಬಳಿಯೆ ಕೂರಿಸಿಕೊಂಡಳು. ತಡಕಾಡಿ ನನ್ನ ಕೈ ಹಿಡಿದುಕೊಂಡು ಅದನ್ನೊಯ್ದು ಈವರೆಗೆ ನಾನು ಅವಳ ಯಾವ ಸೊಂಟವನ್ನು ಮುಟ್ಟಲಾಗಿರಲಿಲ್ಲವೋ ಆ ಸೊಂಟಕ್ಕೆ ಅಂಟಿಸಿಕೊಂಡಳು. ನಾನು ಕೈಯಾಡಿಸಿದೆ. ಏನೂ ಅರ್ಥವಾಗಲಿಲ್ಲ. “ಇಕಾ ನಡಪಟ್ಟಿ, ಕೈಗಿ ಹತ್ತಿತಲ್ಲ?” ಅಂದಳು. ಹೌದು, ಅವಳ ನಡುವಿನಲ್ಲಿ ನಡುಪಟ್ಟಿ ಇತ್ತು ನಿಜ. ಅವಳೇ ಅದರ ಸುತ್ತ ನನ್ನ ಕೈ ಆಡುವ ಹಾಗೆ ಮಾಡಿದಳು. ಆಮೇಲೆ ಇನ್ನೂ ನನ್ನ ಹತ್ತಿರಕ್ಕೆ ಸರಿದು ಕಿವಿಯಲ್ಲಿ ದೊಡ್ಡ ಗುಟ್ಟು ಹೇಳುವ ಹಾಗೆ, “ಚೆನ್ನದs ಅದು, ಹದಿನೆಂಟ ತೊಲಿ ಐತಿ. ತಿಳೀತಿಲ್ಲ?” ಎಂದಳು. ನನಗೇನೂ ತಿಳಿಯಲಿಲ್ಲ. ಅದ್ಯಾಕೆ ಈ ಮುದುಕಿ ಹೀಗೆ ಮಾಡುತ್ತಿದ್ದಾಳೆಂದೂ ಬಗೆಹರಿಯಲಿಲ್ಲ. ನಾನ ಗುಟ್ಟಾಗೇ “ಅದಕ್ಕ ನಾ ಏನ ಮಾಡಲಿ?” ಎಂದು ಕೇಳಿದೆ. ಈಗ ಮಾತ್ರ ಮುದುಕಿ ತನ್ನ ಬೊಚ್ಚಬಾಯನ್ನು ಅಗಲವಾಗಿ ತೆಗೆದು ಮುಸಿಮುಸಿ ನಕ್ಕಳು. ಮತ್ತೆ ಪಿಸುದನಿಯಲ್ಲಿ “ಸಿಂಗಾರಿಗಿ ಹೇಳು, ಲಗು ಗಂಡುಮಗನ್ನ ಹಡಿ ಅಂತ. ಆಕಿ ಹಡದರ ಆ ಚೆನ್ನದ ನಡಪಟ್ಟಿ ಆಕಿಗೇ ಕೊಡತೀನಿ” ಎಂದು ಹೇಳಿದಳು. ಈ ಮುದುಕಿ ಮೊಮ್ಮಗನನ್ನು ಕಾಣುವುದಕ್ಕಾಗೇ ಜೀವ ಹಿಡಿದ ಹಾಗೆ ಚಡಪಡಿಸುವುದನ್ನು ಕಂಡು ನನಗೆ ಮೋಜೆನಿಸಿತು.

ಈ ಮೋಜಿನ ಸಂಗತಿಯನ್ನ ಸಿಂಗಾರೆವ್ವನಿಗೆ ಹೇಳಬೇಕೆಂದು ಮನಸ್ಸಾಯಿತು. ಆದರೆ ಅವಳು ವಿರಾಮವಾಗಿ ಸಿಕ್ಕುವುದೇ ಅಪರೂಪ. ಹಗಲೆಲ್ಲ ಒಂದಿಲ್ಲೊಂದು ಕೆಲಸ ಅಂಟಿಸಿಕೊಳ್ಳುವುದು ಅವಳ ಜಾಯಮಾನವಾಗಿತ್ತು. ರಾತ್ರಿ ದೇಸಾಯಿ ತಡವಾಗಿ ಬಂದರೆ ಆಗಲೇ ಅವಕಾಶ ಸಿಗಬೇಕು. ರಾತ್ರಿಯಾಯಿತೆಂದರೆ ಸಾಮಾನ್ಯವಾಗಿ ಸಿಂಗಾರೆವ್ವ ಮಲಗುವ ಅಂತಸ್ತಿನ ಕೋಣೆಗೆ ನಾನು

ಹೋಗುತ್ತಿರಲಿಲ್ಲ. ಇಂದು ಬಾಗಿಲಿಕ್ಕಿರಲಿಲ್ಲವಲ್ಲ, ಹೋದೆ. ಹೋದಾಗ ತಲೆಮೇಲೆ ಕೈಹೊತ್ತು ಮಲಗಿದ್ದಳು. ನನ್ನನ್ನು ಕಂಡವಳೇ ಎದ್ದುಕೂತು "ಬಾ ಶೀನಿಂಗೀ" ಎಂದಳು. ನನಗಿಷ್ಟೇ ಬೇಕಿತ್ತು. ಹಿರಿ ದೊರೆಸಾನಿಯ ನಡಪಟ್ಟಿಯ ಕಥೆ ಹೇಳಿ ನಗಾಡಿದೆ. ಸಿಂಗಾರೆವ್ವ ನಗಲಿಲ್ಲ. ಗಂಭೀರಳಾದಳು. ಹಣೆಯ ಮೇಲೆ ಚಿಂತೆಯ ಗೆರೆ ಮೂಡಿದವು. ಒಂದು ಬಾರಿ ನಿಟ್ಟಿಸಿರಿಟ್ಟು -

'ಏನ ಹೇಳಲೇ ಶೀನಿಂಗೀ; ರಾತ್ರಿ ಕುಡೀತಾನ, ಬಂದ ಬೀಳತಾನ. ನಾ ಮಂಚದ ಮ್ಯಾಲ ಮಲಗಿದ್ದರ ಕೆಳಗ ಮಲಗತಾನ. ಹಾಂಗಂತ ನಾನs ಕೆಳಗೆ ಮಲಗಿ ನೋಡಿದೆ. ಅವ ಮಂಚದ ಮ್ಯಾಲ ಬಿದ್ದಕೊಂಡ. ಒಂದು ಸಲ ಆದರೂ ಈ ಕ್ವಾಣ್ಯಾಗ ನನ್ನ ಹೇಂತಿ ಇದ್ದಾಳ; ಆಕೀನ ಮಾತಾಡಸಬೇಕು ಅಂತ ಅಂದವನs ಅಲ್ಲ. ಬೆಳಗ್ಗೆದ್ದಾಗ ಒಮ್ಮೊಮ್ಮೆ ಬೆರಗಲೆ ಕಣ್ಣ ತಗದ "ನೀವೂ ಇದs ಕ್ವಾಣ್ಯಾಗ ಮಲಗಿದ್ರಿ?" ಅಂತ ಕೇಳತಾನ. ಹೇಂತೀನ ಮಾಡಿಕೊಂಡದ್ದಾದರೂ ನೆನಪೈತೋ ಇಲ್ಲೊ! ಬರೀ ಮಕ್ಕಳ ಮಕ್ಕಳಂದರ ಅವೇನ ಜಂತ್ಯಾಗಿಂದ ಉದರ ತಾವು? ಶಿವ ನನ್ನ ಹಣ್ಯಾಗ ಮಕ್ಕಳ್ನ ಬರದಿಲ್ಲ ಶೀನಿಂಗೀ" - ಎಂದು ಅಳತೊಡಗಿದಳು.

ಆತ ರಾತ್ರಿ ತಡಮಾಡಿ ಬರುವುದು ನನಗೆ ಗೊತ್ತಿತ್ತು. ಆದರೆ ಗಂಡಹೆಂಡತಿ ಸರಸವಾಗೇ ಇರಬೇಕೆಂದು ನನ್ನ ಕಲ್ಪನೆಯಾಗಿತ್ತು. ಇಕಾ ಇದನ್ನ ಕೇಳಿದರೆ ಹೀಗೆ! ದೇಸಾಯಿಯ ಬಿಳಚಿಕೊಂಡ ಮುಖ, ತೆಳ್ಳಗಿನ ಮೈ ಕಂಡು ನನಗೆ ನನ್ನ ಅನುಮಾನಗಳಿದ್ದವು. ನಾನು ಅಂಥಾ ಅನುಭವಿಕಳಲ್ಲವೆಂಬುದನ್ನು ಒಪ್ಪುತ್ತೇನೆ. ಆದರೆ ಹೆಂಗಸರಿಗೆ ಅದೆಲ್ಲಾ ತಿಳಿಯುತ್ತದೆ. ಮದುವೆಯಾದ ಹೊಸದರಲ್ಲಿ ಹೆಣ್ಣಿಗೆ ಒಂದು ಬಗೆಯ ಸುಖದ ಅಮಲು ಬರುತ್ತದೆ. ಮನಸ್ಸಿನ ತುಂಬಾ ಹಾಸಿಗೆಯ ಪರಿಮಳ ಇಡಗಿ ನರನರಗಳೆಲ್ಲ ಬಿಗಿಯುತ್ತದೆ. ಆಗ ಕೆಲಸ ಬೇಡಾಗಿ ಆಕಳಿಸೋಣ ಅನ್ನಿಸುತ್ತದೆ, ಹೀಗೇ ಇನ್ನೂ ಏನೇನೋ! ಆದರೆ ಇದ್ಯಾವುದನ್ನೂ ಸಿಂಗಾರೆವ್ವ ಅನುಭವಿಸಲೇ ಇಲ್ಲ. ಅಥವಾ ಇದನ್ನು ಮರೆಯುವುದಕ್ಕೇ ಇರಬೇಕು, ಸದಾ ಒಂದಿಲ್ಲೊಂದು ಕಾರುಭಾರು ಅಂಟಿಸಿಕೊಳ್ಳುತ್ತಿದ್ದಳು. ಆದರೆ ಬಾಯಿಬಿಟ್ಟು ಕೇಳೋದು ಹ್ಯಾಗೆ? ಸಿಂಗಾರೆವ್ವ ತಾನಾಗೇ ಬಾಯಿಬಿಡುವ ಪೈಕಿ ಅಲ್ಲ. ಅವಳಿನ್ನೂ ಅಳುತ್ತಿದ್ದುದರಿಂದ ಈಗ ಮಾತಾಡಬೇಕಾದವಳು ನಾನು. ಆದರೆ ಏನು ಮಾತಾಡಬೇಕೆಂಬುದೇ ಹೊಳೆಯದಾಯಿತು. "ಬೆಂಕೀ ಹಂತ್ಯಾಕಿನಿ ಬೆಣ್ಣಿ ಎಷ್ಟದಿನ ಕರಗದs ಇದ್ದೀತ ಬಿಡ ಎವ್ವಾ" ಅಂದೆ. ಆದರಿದು ಹುಸಿ ಸಮಾಧಾನದ ಮಾತೆಂದು ಇಬ್ಬರಿಗೂ ಗೊತ್ತಿತ್ತು. ಈಗೇನೂ ಹೇಳಬೇಕಲ್ಲ. ಆದ್ದರಿಂದ ಹೇಳಿದೆ -

"ಅವ ಬರಾಣಿಲ್ಲವೆಂದರ ಬ್ಯಾಡ, ನೀನೂ ಹಾಂಗs ಮಾಡಬೇಕೆನ? ನೀನs ತುಸು ಹಾದಿಗೆ ಬರಬೇಕವಾ" ಅಂದೆ. ಇದಕ್ಕೆ ಅವಳೇನೂ ಹೇಳಲಿಲ್ಲ. ಸುಮ್ಮನಾದಳು. ನಾನೂ ಸುಮ್ಮನೇ ಎದ್ದುಬಂದೆ.

ಆದರೆ ಆದಿನ ಬಹಳ ಹೊತ್ತಿನ ತನಕ ನನಗೆ ನಿದ್ದೆಯೇ ಬರಲಿಲ್ಲ. ದೇಸಾಯಿ ಆಗಲೇ ಬಂದಿದ್ದ. ನಾನು ಸಿಂಗಾರೆವ್ವನ ಬಗ್ಗೆಯೇ ಚಿಂತೆ ಮಾಡುತ್ತಿದ್ದೆ. ಗೌಡನ ಮಗಳಾಗಿ, ಚೆಲುವೆಯಾದ ಅವಳು ಸುಖದ ಹಕ್ಕುದಾರಳಾಗಿಯೇ ಹುಟ್ಟಿದ್ದಳು. ಅವಳನ್ನು ಯಾರೂ ಕಂಡರೂ ಈ ಕೂಸು ಸುಖವಾಗಿರಲೆಂದೇ ಹರಸುತ್ತಿದ್ದರು, ಹಾಂಗಿದ್ದಳು ಸಿಂಗಾರೆವ್ವ. ಇಲ್ಲಿ ನೋಡಿದರೆ ಏನಿದೆ? ಅಪ್ಪ ಅಂಥವ ಗಂಟುಬಿದ್ದ. ಗಂಡ ನೋಡಿದರೆ ಇಂಥವನು, ಅವಳ ಯಾವ ಕರ್ಮಕ್ಕೆ ಹಿಂಗಾಗಿದೆ? ಮಗ್ಗಲು ಬದಲಿಸಿ ಮತ್ತೆ ಮತ್ತೆ ಇದನ್ನೇ ಧ್ಯಾನಿಸಿದೆ. ಬಗೆಹರಿಯಲಿಲ್ಲ.

ಅಷ್ಟರಲ್ಲೇ ಸಿಂಗಾರೆವ್ವ ಧಡಧಡ ಜಿನೆಯಿಳಿದು "ಶೀನಿಂಗೀ" ಎಂದು ಕೂಗಿದಳು. ತಕ್ಷಣ "ಯಾಕೆವ್ವಾ" ಎಂದು ಎದ್ದೆ. "ಲಗು ಬಾ" ಎಂದವಳೇ ಮತ್ತೆ ಮೇಲೇರಿ ಹೋದಳು. ನಾನೂ ಓಡಿಹೋದೆ. ನೋಡಿದರೆ, ದೇಸಾಯಿ ಕೈಕಾಲು ಸೆಟೆಸಿ ಬೇಹೋಶ್ ಆಗಿ ಬಿದ್ದುಬಿಟ್ಟಿದ್ದ. ಇಬ್ಬರೂ ಜೋರಿನಿಂದ ಅಂಗಾಲು ತಿಕ್ಕತೊಡಗಿದೆವು. ಸಿಂಗಾರೆವ್ವ ಅತ್ತೆಯ ಬಳಿ ಓಡಿದಳು. ದೇಸಾಯಿಯ ಮುಖ ಕೆಂಪೇರಿ ಕೆಂಜಗವಾಗಿತ್ತು. ಮೈತುಂಬ ನೀರು ಸುರಿದ ಹಾಗೆ ಬೆವರಿಳಿಯುತ್ತಿತ್ತು. ನನಗೆ ಅಷ್ಟಿಷ್ಟು ಆಸೆ ಮೂಡಿದ್ದೂ ಈ ಬೆವರಿನಿಂದಲೇ. ಸಿಂಗಾರೆವ್ವ ಆತಂಕದಲ್ಲಿ ಎಬ್ಬಿಸಿದರೆ ಈ ಮುದುಕಿ "ಗಡಿಬಿಡಿ ಮಾಡಬ್ಯಾಡ, ಈಗ ಎಚ್ಚರಾಗತಾನ, ಹೋಗಿ ಮೂಗಿಗೆ ಉಳ್ಳಾಗಡ್ಡಿ ಹಿಂಡು ಹಿಡಿ" ಎಂದಳಂತೆ. ಬರುವಾಗ ಸಿಂಗಾರೆವ್ವ ಒಂದು ಉಳ್ಳಾಗಡ್ಡಿಯನ್ನು ತಂದಿದ್ದಳು. ಹಿಂಡಿ ಮೂಗಿಗೆ ಹಿಡಿದಳು. ನಾನು ಅವನ ಕಿರಿಬೆರಳು ಹಿಸುಕುತ್ತಿದ್ದೆ. ನಮ್ಮ ಪ್ರಯತ್ನ ಸಾವಿನೊಂದಿಗಿನ ಸೆಣಸಾಟದಂತಿತ್ತು. ಬಹಳ ಹೊತ್ತಿನ ನಂತರ

ನಮ್ಮ ಪ್ರಯತ್ನ ಫಲಕಾರಿಯಾಯಿತು. ಮೆಲ್ಲಗೆ ದೇಸಾಯಿ ಎಚ್ಚರಗೊಂಡು ನರಳಿದ. ಸಿಂಗಾರೆವ್ವ ಈಗ ಹಗುರವಾಗಿ ಹಾಗೇ ಕಂಬಕ್ಕೊರಗಿದಳು.

ನಿನ್ನೆ ರಾತ್ರಿ ಏನು ನಡೆಯಿತೆಂದು ಸಿಂಗಾರೆವ್ವ ಮರುದಿನ ಹೇಳಿದಳು. ನಾನು ಹೇಳಿದೆನಲ್ಲ, - ನೀನಃ ತುಸು ಹಾದಿಗೆ ಬಾ ಅಂತ. ಸಿಂಗಾರೆವ್ವನಿಗೆ ಅದು ಹೌದೆನಿಸಿತ್ತು. ರಾತ್ರಿ ದೇಸಾಯಿ ಬಂದಾಗ ಅವಳು ನೆಲದ ಮೇಲೆ ಒರಗಿದ್ದಳು. ಬಂದವನು ಮಂಚದ ಮೇಲೆ ಮಲಗಿದ. ಬಹಳ ಹೊತ್ತಾದ ಮೇಲೆ ದೀಪ ಸಣ್ಣದಾಗಿಸಿ ಇವಳೂ ಮಂಚದ ಮೇಲೆ ಹೋದಳು. ಮೆಲ್ಲಗೆ ಅವನೆದೆಯ ಮೇಲೆ ಕೈಯಿಟ್ಟು ಒಂದೆರೆಡು ಬಾರಿ ಆಡಿಸಿದಳು. ದೇಸಾಯಿ ಗಬ್ಬಕ್ಕನೆ ಎದ್ದನಂತೆ. ಹೋಗಿ ದೀಪ ದೊಡ್ಡದು ಮಾಡಿ ಬಂದು ಬೆಳಕಿನಲ್ಲಿ ಅಂಗಾತಾಗಿ ಬಿದ್ದಿದ್ದ ಹೆಂಡತಿಯ ರೂಪರಾಶಿಯನ್ನು ಹರಿದು ತಿಂಬವರಂತೆ ನೋಡತೊಡಗಿದ. ಸಿಂಗಾರೆವ್ವ ಖುಶಿಯಾಗಿ, ನಾಚಿ, ನೋಡಲಾರದೆ ಎರಡೂ ಕೈಯಿಂದ ಮುಖ ಮುಚ್ಚಿಕೊಂಡಳು. ಈತ ಕಾಲಕಡೆಯಿಂದ ನಿಧಾನವಾಗಿ ಸೀರೆ ಎತ್ತುತ್ತ ಹೋದ. ಸೀರೆ ಮೇಲೆ ಸರಿದ ಹಾಗೆ ಸಿಂಗಾರೆವ್ವ ಅರಳುತ್ತ ಪುಳಕಗೊಂಡಳು. ಮೊಳಕಾಲಿನತನಕ ಬಂದಿರಬೇಕು, ಹಾಗೆ ಅವಳ ಹೊಟ್ಟೆಯ ಮೇಲೆ ಬಿದ್ದುಕೊಂಡ. ಸಿಂಗಾರೆವ್ವ ಈಗಲೂ ಕಣ್ಣು ತೆರೆಯಲಿಲ್ಲ. ಸ್ವಲ್ಪ ಹೊತ್ತಿನಲ್ಲೇ ಆತ ಹಾಗೆ ನೆಲಕ್ಕುರುಳಿದ. ಆಗ ಕಣ್ಣು ತೆರೆದು ನೋಡಿದರೆ ದೇಸಾಯಿ ಕೈಕಾಲು ಸೆಟಿಸಿ ಬೇಹೋಶ್ ಆಗಿ ಬಿದ್ದಿದ್ದನಂತೆ. ಇದು ಅವನಿಗೆ ಆಗಾಗ ಬರುವ ರೋಗವೆಂದೂ ಜೀವಕ್ಕೆ ಅಪಾಯವಿಲ್ಲವೆಂದೂ ಮುದುಕಿಯಿಂದ ತಿಳಿಯಿತು. ಬೇಕಾದಷ್ಟು ವೈದ್ಯ ಮಾಡಲಾಗಿದೆಯೆಂದೂ, ಪರಿಣಾಮ ಕಾಣದ್ದರಿಂದ ಹುಶಾರಾಗಿರಬೇಕೆಂದೂ ಹೇಳಿದಳು. ಸಿಂಗಾರೆವ್ವನ ಮುಖದಲ್ಲಿ ಅಂದು ಮೂಡಿದ ಚಿಂತೆಯ ಗೆರೆ ಕೊನೆಯ ತನಕ ಮರೆಯಾಗಲೇ ಇಲ್ಲ.

ಸಿಂಗಾರೆವ್ವ ಈಗ ಹೆಚ್ಚು ಹೆಚ್ಚು ಒಂಟಿಯಾದಳು. ಆಳುಗಳೊಂದಿಗೆ ಮನಸ್ಸಿಗೆ ಬಂದರೆ ಮಾತಾಡಿದಳು, ಇಲ್ಲದಿದ್ದರೆ ಇಲ್ಲ. ಕೆಲಸ ಕಾರ್ಯಗಳಲ್ಲಿ ಮೊದಲಿನ ಉತ್ಸಾಹ ಕಾಣಿಸುತ್ತಿರಲಿಲ್ಲ. ನನ್ನೊಂದಿಗೂ ಒಮ್ಮೊಮ್ಮೆ ಮಾತಾಡುತ್ತಿರಲಿಲ್ಲ. ಅತ್ತೆಯ ಹತ್ತಿರವೂ ಹೆಚ್ಚು ಸುಳಿಯುತ್ತಿರಲಿಲ್ಲ. ಯಾಕೆಂದರೆ ಮುದುಕಿ ಇವಳ ಮುಖ ಕಂಡರೆ ಸಾಕು ಬಸಿರಿನ ಬಗ್ಗೆಯೇ ಮಾತಾಡುತ್ತಿದ್ದಳು. ತನ್ನ ತಂದೆ ಮೋಸ ಮಾಡಿದ್ದನ್ನು ಸಿಂಗಾರೆವ್ವ ಒಂದೆರಡು ಬಾರಿ ಖಾರವಾಗಿ ನನ್ನ ಬಳಿ ತೋಡಿಕೊಂಡಳು. ತನ್ನ ತಾಯಿಯಾದರೂ ತಪ್ಪಿಸಬಹುದಿತ್ತಲ್ಲಾ ಎಂದೊಮ್ಮೆ ಕಣ್ಣೀರು ತಂದಳು. ಮರುಕ್ಷಣವೇ ತಂದೆಯ ಕ್ರೌರ್ಯದ ನೆನಪಾಗಿ, ತಾಯಿಯ ಅಸಹಾಯಕತೆಗೂ ಅತ್ತಳು. ತನ್ನ ದೈವವನ್ನಂತೂ ಕೂತಾಗೊಮ್ಮೆ, ನಿಂತಾಗೊಮ್ಮೆ, ಮಲಗುವಾಗೊಮ್ಮೆ, ಏಳುವಾಗೊಮ್ಮೆ ಹಳಿಯುತ್ತಿದ್ದಳು.

ಒಮ್ಮೆ ನನ್ನೊಂದಿಗೆ ಇಡೀ ಎರಡು ದಿನ ಮಾತಾಡಲಿಲ್ಲ. ನನ್ನ ಮೇಲೂ ಇವಳಿಗೆ ಕೋಪವೇನೋ ಅಂದುಕೊಂಡೆ. ನನ್ನೊಡನೆ ಮಾತಾಡುವುದರಿಂದ ಇವಳಿಗೆ ಹಿಂಸೆಯಾಗುತ್ತಿದ್ದರೆ ನಾನ್ಯಾಕೆ ಇಲ್ಲಿರಬೇಕು? ಆ ದಿನ ಮಧ್ಯಾಹ್ನವಾದರೂ ಇಬ್ಬರೂ ಊಟ ಮಾಡಲಿಲ್ಲ. ಪಡಸಾಲೆಯಲ್ಲಿ ಕೂತಿದ್ದಳು. ಮೆಲ್ಲಗೆ ಹೋಗಿ "ಊಟಾ ಮಾಡೇಳು" ಎಂದೆ. ನನ್ನ ಕಡೆಗೆ ಲಕ್ಷ್ಯ ಕೊಡಲೇ ಇಲ್ಲ. ನನಗೆ ತಡೆಯಲಾಗಲಿಲ್ಲ.

"ನಿನಗಃ ಬ್ಯಾಡಾದ ಮ್ಯಾಲ ನಾ ಯಾಕ ಇಲ್ಲಿರಲಿ? ನಂದಗಾಂವಿಗಿ ಹೋಗತೀನಿ" - ಅಂದೆ.

ತಕ್ಷಣ ನನ್ನ ಕಡೆಗೆ ತಿರುಗಿ "ನಿನಗೂ ಬ್ಯಾಡಾದ್ನೇನ ಶೀನಿಂಗೀ" ಎನ್ನುತ್ತ ಉಕ್ಕಿಬಂದ ಕಣ್ಣಿರು ತೋರಿಸದೆ ಒಳಕ್ಕೆ ಹೋದಳು. ಯಾಕಾದರೂ ಅಂದೆನೊ! ಯಾಕೆಂದರೆ, ಸಿಂಗಾರೆವ್ವ ಸಣ್ಣ ಮುಖಮಾಡಿ ಕೂರುವುದು ನನಗೆ ಸರಿಬರುತ್ತಿರಲಿಲ್ಲ. ಅದಕ್ಕೆ ನಾನು ಬೆನ್ನುಹತ್ತಿ ಹೋದೆ.

ಅಂತಸ್ತಿನ ಕೋಣೆಯಲ್ಲಿ ಅಳುತ್ತಿದ್ದಳು. ನನಗೂ ಅಳು ತಡೆಯಲಾಗಲಿಲ್ಲ. "ತಪ್ಪಾಯಿತು ಎವ್ವಾ" ಅಂದೆ. ತುಸು ಹೊತ್ತು ಇಬ್ಬರೂ ಮಾತಾಡಲಿಲ್ಲ. ಆಮೇಲೆ ಹೇಳಿದೆ. "ಇಲ್ಲೀತನಕ ನಿನ್ನ ಅಕ್ಕನ್ಹಾಂಗ ಇದ್ದೆ, ಈಗ ತಾಯೀ ಸಮ, ಹೇಳತೇನ ಕೇಳಃ ಎವ್ವಾ; ಮಕ್ಕಳಾಗೋದಿಲ್ಲಂತ ತಲೀಮ್ಯಾಲ ಕೈಹೊತ್ತು ಕೂತರ ಎದಕ್ಕ ಬಂತು? ಈ ಜಗತ್ತಿನಾಗ ದೇವರ ದಿಂದರ ಇಲ್ಲಂದಿ? ಹರಿಕಿ ಹೊರು,

ವರತ ಮಾಡು. ಈ ಊರಾಗಿನ ಕುಮುದವ್ವ ಎಂಥೆಂಥಾ ಬಂಜೇರಿಗಿ ಮಕ್ಕಳಾ ಕೊಟ್ಟಾಳಂತ, ನಿನಗs ಇಲ್ಲಂತಾಳು?" ಈ ಮಾತು ಕೇಳಿ ಅವಳ ಕಣ್ಣೊಳಗೆ ಭಗ್ಗನೆ ಬೆಳಕು ಹೊಳೆಯಿತು. ಮಂಚದ ಮೇಲಿದ್ದವಳು ನನ್ನ ಬಳಿ ಬಂದು

"ಶೀನಿಂಗೀ, ಖರೆಖರೆ ಮಕ್ಕಳ ಆದಾವೇನ?" ಅಂದಳು. ಮತ್ತೇನು ತಿಳಿಯಿತೋ, "ನನ್ನ ಗಂಡಗ ರೋಗ ಐತೆಲ್ಲ ಎವ್ವಾ" ಅಂದಳು.

"ದೇವರ ಸತ್ಯೆ ಮನಶೇರಿಗಿ ತಿಳಿದೀತೇನs ತಾಯಿ? ದೇವರ ಮುಂದ ನಾವೆಷ್ಟರವರಾ? ನೀ ಬಗ್ಗಿ ಬಂದರೆ ತಾಯಿ ಅದನ್ನೂ ಪರಿಹಾರ ಮಾಡತಾಳ. ನಿನ್ನ ಗಂಡನ ಸುದ್ದಿ ಕುಮುದವ್ವಗ ಗೊತ್ತಿಲ್ಲಂದಿ?"

ಈ ಮಾತು ಅವಳಿಗೆ ಪಟಾಯಿಸಿತು.

"ಹೌಂದs ಶೀನಿಂಗಿ, ದೇವೀನs ನಿನ್ನ ಬಾಯಿಂದ ಈ ಮಾತ ಆಡಿಸಿರಬಾರದ್ಯಾಕ?" - ಎಂದು ಎದ್ದಳು.

ಅಂದೇ ಕುಮುದವ್ವನಿಗೆ ಹರಕೆ ಹೊತ್ತಳು. ಮಕ್ಕಳಾದರೆ ತನ್ನ ಅತ್ತೆ ಕೊಡುವ ಚಿನ್ನದ ನಡುಪಟ್ಟಿಯನ್ನು ಅವಳಿಗೇ ಕೊಡುವುದಾಗಿ ಹೇಳಿದಳು. ಹರಕೆ ಹೊತ್ತದಿನ ಸೋಮವಾರ. ಅದು ಸಾವಳಗಿ ಶಿವನಿಂಗನ ವಾರ. ಅವನ ಹೆಸರಿನಲ್ಲಿ ಪ್ರತಿ ಸೋಮವಾರ ಉಪವಾಸ ವಿರುವುದಾಗಿ ಬೇಡಿಕೊಂಡಳು. ಮಗನಾದರೆ ಮೂರುವರ್ಷ ಎತ್ತಿಕೊಂಡು ಬಂದು ಶಿವನಿಂಗನಕೊಂಡ ಹಾಯುವುದಾಗಿಯೂ, ಸಿದ್ಧರಾಮ ಸ್ವಾಮಿಗಳಿಗೆ ಬೆಳ್ಳಿ ಚಡಿ ಮಾಡಿಸಿಕೊಡುವುದಾಗಿಯೂ ಹರಕೆ ಹೊತ್ತಳು. ಅದೇ ಕಾಲಕ್ಕೆ ಕಾಗೆಯೊಂದು ಕೂಗಿ ಶುಭಲಕ್ಷಣವಾಯಿತು. ಕೂಗಿ ನೆಂಟರನ್ನು 'ಕರೆಯುವ ಹಾಗೆ ಬೇರೆ ಸೀಮೆಯ ಈ ನೆಂಟನನ್ನೂ ಕರೆತರಲೆಂದು ಹಾರೈಸಿದೆವು; ಕರೆತರುವೆನಂದು ನಂಬಿದೆವು.

* * *

## ಅಧ್ಯಾಯ - ೭

ನಾವೇ, ಹೀಗೆ ಶಿವನೇ ಎಂದು ಕೈ ಹೊತ್ತು ಕೂತಿದ್ದರೆ ಅವರಪ್ಪ ಬಂದು ತನ್ನ ಮನಸ್ಸಿನ ನಿಜ ತೋರಿಸಿ ಹುಣ್ಣಿನ ಮೇಲೆ ಬರೆಯೆಳೆದ. ನಡೆಯಲಿಕ್ಕೆ ಬಂದವಳು ತೌರಿಗಿನ್ನೂ ಹೋಗಿರಲಿಲ್ಲವಲ್ಲ. ಅದೇ ನೆಪದಿಂದ ಗೌಡಬಂದ. ಮದುವೆಯ ಮೊದಲನೇ ವರ್ಷ ಅದು. ದೀಪಾವಳು ಹಬ್ಬಕ್ಕೆ ಮಗಳು ಅಳಿಯ ತಮ್ಮಲ್ಲಿಗೇ ಬರಬೇಕೆಂದು ಹೇಳಿದ. ಸರಗಂ ದೇಸಾಯಿ ಸರಳ ಮನುಷ್ಯ. "ಓಹೋ ಇಬ್ಬರೂ ಬರ್ತೀವಿ" ಅಂತ ಅಂದುಬಿಟ್ಟ. ಸಿಂಗಾರೆವ್ವನಿಗೆ ಅಸಮಾಧಾನವಿತ್ತಲ್ಲ "ಆಗೋದಿಲ್ಲ" ಅಂದಳು.

"ಆಗೋದಿಲ್ಲಂದರ ಬ್ಯಾಡ. ಬೇಕಾದರ ನೀವು ಒಬ್ಬರೇ ಹೋಗಿ ಬರ್ರಿ" ಎಂದು ಹೆಂಡತಿಗೆ ಹೇಳಿದ.

"ನಾನೂ ಹೋಗೋದಿಲ್ಲ"

"ಆಯಿತಲ್ಲ ಮಾವ, ನಾವಿಬ್ಬರೂ ಬರೋಣಿಲ್ಲ" ಎಂದು ಹೇಳಿ ದೇಸಾಯಿ ಹೊರಟು ಹೋದ. ಗೌಡ ಅಷ್ಟಕ್ಕೇ ಸುಮ್ಮನಾಗಿದ್ದರೆ ಪಾಡಿತ್ತು. ಕೈ ಹೊಸೆದು ಅಕ್ಕರತೆ ಅಭಿನಯಿಸುತ್ತ ಸುತ್ತ ಯಾರಿಲ್ಲದ್ದನ್ನು ಗಮನಿಸಿ,

"ನೋಡ ಸಿಂಗಾರೆವ್ವ, ನಿನ್ನ ಸಲುವಾಗಿ ನಾ ಎಷ್ಟ ತ್ರಾಸ ತಗೊಂಡೀನಿ. ಶಿರಟ್ಟಿ ಕೇಸಿನಾಗ ಮನ್ಯಾಗಿನ ಚಿನ್ನ ಸೈತ ಕರಗಿಹೋಯ್ತು" - ಅಂದ. ಸಿಂಗಾರೆವ್ವ ಸುಮ್ಮನೆ ಇದ್ದಳು.

“ಚಲೋ ಮನೀಗಿ ಬಂದಿ ಅಂತ ಕೊಟ್ಟ ಮನಿ ಮರೀಬ್ಯಾಡವಾ. ಅದನೂ ಅಷ್ಟು ಎತ್ತಿ ಹಿಡಿ.”

ಸಿಂಗಾರೆವ್ವ ಈಗಲೂ ಸುಮ್ಮನಿದ್ದಳು.

“ಅಡಚಣಿ ಭಾಳ ಐತಿ. ಈಗೊಂದ ಹತ್ತುಸಾವಿರ ರೂಪಾಯಿ ಸಾಗಸ್ತೀಯೇನು?” - ಅಂದ.

“ನನ್ನ ಹಂತ್ಯಾಕ ಎಲ್ಲೀ ರೊಕ್ಕ?” - ಅಂದಳು.

“ಎಲ್ಲೀವಂದರ ಹೆಂಗವಾ, ನಿನ್ನ ಮದಿವೀ ಸಾಲಿದು. ಬೇಕಾದ್ರ ನಿನ್ನವೆರಡು ದಾಗೀನ (ಆಭರಣ) ಕೊಟ್ಟಿರು, ಆಮ್ಯಾಲ ನೋಡೋಣಂತ” - ಅಂದ.

- ಈ ಮಾತು ಹೇಳಿದನೋ ಇಲ್ಲವೋ ಸಿಂಗಾರೆವ್ವನಿಗೆ ಅದೆಲ್ಲಿಂದ ಬಂತೋ ಭಾರೀ ಸಿಟ್ಟು ಬಂದು -

“ಹೌಂದ ಹೌಂದ, ಜಗತ್ತಿನಾಗ ಯಾರೂ ಮಾಡಾಣಿಲ್ಲ. ನನ್ನ ಮದಿವೀ ಮಾಡಿ ಉಪಕಾರ ಮಾಡೀದೀ ನೋಡು. ಹೆಣದ ಜೋಡಿ ಮದಿವಿ ಮಾಡಿದಿ, ಅಲ್ಲೀ ಆಸ್ತಿಪಾಸ್ತಿ ಎಲ್ಲಾ ನುಂಗಿದಿ. ಈ ಗಂಡನೂ ಲಗೂ ಸಾಯ್ತಾನ, ಇದೂ ಆಸ್ತಿ ನಿನಗs ಆಗ್ತೈತಿ ಅಂತ ಮದಿವಿ ಮಾಡಿದಿ. ನಿನ್ನ ಆಸೆ ಇನ್ನೂ ಕೈಗೂಡವಲ್ದು, ಕೆಡಕನ್ನಿಸೇತ್ಯೋ ಏನೋ! ಅದಕ್ಕs ಈಗ ಈ ಆಟ ಹೂಡೀದೀ.”

ನಾನು ಹುಟ್ಟಿದಾಗಿನಿಂದ ಕಂಡಿದ್ದೇನೆ. ಅವಳೆಂದೂ, ಅದೂ ಈ ಥರ ಸಿಟ್ಟಿಗೆದ್ದವಳಲ್ಲ. ನಮ್ಮ ಸಿಂಗಾರೆವ್ವ ಬಹಳ ಮೃದು ಸ್ವಭಾವದ ಹೆಂಗಸು, ಹೂವಿನಂಥಾಕಿ. ಈದಿನ ಅದ್ಯಾವ ಭೂತ ಅವಳ ಮೈಯಲ್ಲಿ ಹೊಕ್ಕಿತೋ ಅಥವಾ ಹಿಂದಿನಿಂದ ತಡೆದಿಟ್ಟ ಸಿಟ್ಟು ಈಗ ಕಟ್ಟೆಯೊಡೆದು ಹೊರನುಗ್ಗಿತೋ! ಹಡೆದ ಅಪ್ಪನಿಗೆ ಹೀಗೆ ಹೇಳೋಣವೆಂದರೆ! ಗೌಡನ ಬಗ್ಗೆ ಮೊದಲೇ ನನಗೆ ಸಿಟ್ಟಿತ್ತು. ಈ ಮಾತು ಕೇಳಿ ಆನಂದವಾಗಬೇಕಿತ್ತು. ಆದರೆ ನನಗೇ ಗಾಬರಿಯಾಯಿತೆಂದರೆ! ಆಶ್ಚರ್ಯವೆಂದರೆ ಗೌಡನಿಗೆ ಸಿಟ್ಟು ಬರಲೇ ಇಲ್ಲ. ಮೊದಲೇ ಇದನ್ನೆಲ್ಲ ಲೆಕ್ಕ ಹಾಕಿದ್ದವನಂತೆ ತನ್ನ ವ್ಯಂಗ್ಯನಗೆ ನಗುತ್ತಾ “ಹಡೆದವ್ರಿಗೆ ಹಾಂಗೆಲ್ಲ ಅನಬಾರದವ, ಇದs ನಿನ್ನ ಖಾಯಂ ಮನಿ ಅಲ್ಲ” ಅಂದ.

“ಅಂದರ?”

“ಅದs ಹೇಳಿದ್ಯಲ್ಲ ಹಾಂಗ ನಿನ ಗಂಡ ಸತ್ತ ಮ್ಯಾಲ ನಿನಗೊಂದು ಆಧಾರ ಬೇಕೋ ಬ್ಯಾಡೋ?”

ಈಗ ಮಾತ್ರ ಸಿಂಗಾರೆವ್ವ ಭಗ್ಗೆಂದು ಉರಿಯತೊಡಗಿದಳು. ತುಟಿ ನಡುಗಿ ಕಣ್ಣು ಕೆಂಪಾಗಿದ್ದವು. ಧೋಪ್ಪನೆ ಕೆಳಗಡೆ ಕೂತು ಬಲಗೈಯಿಂದ ನೆಲ ಬಾರಿಸುತ್ತ “ಹಾ ಹಾ, ಇದs ನನ್ನ ಖಾಯಂ ಮನಿ. ತೌರುಮನಿ ಹಾಳಾಗಿ ಬಾಗಿಲಿಗೆ ಬೇಲಿ ಹಚ್ಚಲಿ. ನನ್ನನ್ನ ಬರೀ ಸಾಯೋ ಗಂಡರಗಿ ಮಾರಿ ಭಾಡಾ ತಿಂದೇನಂತಿಯೇನೋ! ಥೂ ನಿನಗೆ ಹೆಂಗ ತಂದಿ ಅಂತನ್ಲಿ. ನನ್ಗಂಡ ಸಾಯತಾನಂತ ಲೆಕ್ಕ ಹಾಕೀಯಲ್ಲ, ಉಳಿಸ್ಕೋತೀನಿ, ಗಂಡಮಗನ್ನ ಹಡದ ತೋರ್ಸಾಕ ನಿನ್ನ ಕರೆಸ್ತೀನಿ. ಆಗ ಬಂದೀಯಂತ. ಅಲ್ಲೀತನಕ ಈ ಕಡೆ ಕಾಲಿಡಬ್ಯಾಡ” - ಎಂದು ಹೇಳಿ ಅಲ್ಲಿ ನಿಲ್ಲಲಾರದೆ ಒಳಕ್ಕೆ ಹೋದಳು.

ಗೌಡ ತುಸುಹೊತ್ತು ಅಲ್ಲೇ ಕೂತ. ಬಹುಶಃ ಸಿಂಗಾರೆವ್ವನಿಂದ ಇಂಥಾ ಮಾತನ್ನವ ನಿರೀಕ್ಷಿಸಿರಲಿಲ್ಲ. ಅಥವಾ ಯಾರಿಂದಲೂ ನಿರೀಕ್ಷಿಸುವುದು ಸಾಧ್ಯವಿರಲಿಲ್ಲ. ನಾಚಿಕೆಯ ನೆರಳೇನೋ ಅವನ ಮುಖದಲ್ಲಿ ಸುಳಿದಾಡಿತು. ಬಹುಶಃ ತನ್ನ ಗುಟ್ಟು ಈ ರೀತಿ ಬಯಲಾದದ್ದಕ್ಕೆ ಇದ್ದೀತು. ಆದರೆ ಅದೂ ಬಹಳ ಹೊತ್ತು ಉಳಿಯಲಿಲ್ಲ. ಮತ್ತೆ ಅದೇ ವ್ಯಂಗ್ಯನಗೆ ಮುಖದಲ್ಲಿ ಮೂಡಿತು. ಹೊರಟು ಹೋದ. ನಾನು ಏನೊಂದೂ ಆಡಲಿಲ್ಲ.

ಸಿಂಗಾರೆವ್ವ ದೊರೆಸಾನಿಯಾದದ್ದರಿಂದ ಮನೆಬಿಟ್ಟು ಊರಲ್ಲಿ ಪ್ರವೇಶಿಸುವಂತಿರಲಿಲ್ಲ. ನನಗೆ ಅಂಥ ನಿರ್ಬಂಧಗಳಿರಲಿಲ್ಲವಾದ್ದರಿಂದ ಆಳುಗಳನ್ನು ಕರೆಯುವುದಕ್ಕೆ, ಹರಟೆ ಹೊಡೆಯುವುದಕ್ಕೆ ಊರಿನಲ್ಲಿ ಹೋಗುತ್ತಿದ್ದೆ. ಊರಿನಲ್ಲಿ ನನಗೆಷ್ಟೋ ಮಂದಿ ಗೆಳತಿಯರಿದ್ದರು. ಈ ಊರಿನ ಹೆಂಗಸರು ಬಹಳ ಒಳ್ಳೆಯವರು. ಮೈ ಮುರಿದು ಹೊಲಮನೆಗಳಲ್ಲಿ ದುಡಿಯುತ್ತಾರೆ. ಬಂದುದರಲ್ಲಿ ನೀರಂಬಲಿಯೋ ಗಂಜೀನುಚ್ಚೋ ಮಾಡಿ, ಗಂಡ - ಮಕ್ಕಳೊಂದಿಗೆ ಹಂಚಿಕೊಂಡು ಕುಡಿಯುತ್ತಾರೆ. ಯಾರ ಕಣ್ಣಲ್ಲಿಯೂ ಅತೃಪ್ತಿಯೆಂಬುದಿಲ್ಲ. ಏನೂ ಬಂದರೂ ಅದನ್ನು ಕುಮುದವ್ವನ ಪ್ರಸಾದವೆಂದು ಉಡಿಯೊಡ್ಡಲು ಅದರು ಸದಾ ಸಿದ್ಧ. ಮತ್ತು ಕೃತಜ್ಞತೆಯಿಂದ ಅವಳನ್ನು ಹಾಡಿಹೋಗಲು ಪದಗಳು ಅವರ ನಾಲಗೆಯ ತುದಿಗಳಲ್ಲೇ ನಿಂತಿರುತ್ತವೆ. ಈ ಹೆಂಗಸರು ಏನನ್ನೂ ಮುಚ್ಚಿಕೊಂಬವರಲ್ಲ, ಹಾದರವನ್ನೂ, ಏನಿದ್ದರೂ ಎದುರಿಗೇ ಆಡಿಚುಕ್ತ ಮಾಡುವಂಥವರು.

ಸರಗಂ ದೇಸಾಯಿ ಒಬ್ಬಂಟಿಯಾಗಿದ್ದಾಗ ಅರಮನೆ ಅವರ ಆಸಕ್ತಿಯ ಕೇಂದ್ರವಾಗಿರಲಿಲ್ಲ. ನಾವು ಬಂದಿದಲ್ಲ, ಸುರುವಾಯ್ತು. ಬಂದು ಬಂದು ಸಿಂಗಾರೆವ್ವನಿಗೆ ನಮಸ್ಕಾರ ಮಾಡೋದೇನು, ಕಣ್ಣರಳಿಸಿ ನೋಡುತ್ತ ನಿಲ್ಲೋದೇನು, ಈಕೆ ಮಾತಾಡಿಸಿದರೆ ಹಿಗ್ಗೋದೇನು, ಅಯ್ಯಯ್ಯೋ ಈಕೆ ಕೇಳಿದ್ದರ ನಿಂತಲ್ಲೇ ಪ್ರಾಣಬಿಡೋರು! ಕುಟ್ಟುಬೀಸುವಾಗ ಅವರು ಸಿಂಗಾರೆವ್ವನ ಬಗ್ಗೆ ಹಾಡಿಕೊಳ್ಳೋದನ್ನ ನಾನೇ ಕೇಳಿದ್ದೇನೆ. ಇವಳು ಸ್ವಥಾ ದೇವೀ ಇದ್ದಹಾಗಿದ್ದಳಂತೆ. ಬಂಗಾರದ ಕೂದಲಿನವಳಂತೆ, - ಇವಳು ಒಮ್ಮೆ ನೋಡಿದರೆ ರೋಗ ಪರಿಹಾರವಾಗುತ್ತದಂತೆ, ಇವಳು ಅಂಗಾಲಿಟ್ಟಲ್ಲಿ ಕುಂಕುಮದ ಹುಡಿ ಬೀಳುತ್ತದಂತೆ, ಈಕೆ ಇದ್ದರೆ ಅರಮನೆಯಲ್ಲಿ ಕಂದೀಲಟ್ಟ ಹಾಗಂರೆ, ಇತ್ಯಾದಿ. ಅರಮನೆಯಲ್ಲಿ ಸಿಂಗಾರೆವ್ವ ಇರೋದು ತಮ್ಮ ಸೌಭಾಗ್ಯವೆಂಬಂತೆ ಹಾಡಿಕೊಂಬವರು. ಇಂಥಾ ತಾಯಿಗೆ ಎಂಥಾ ಗಂಡ ಗಂಟುಬಿಟ್ಟನಲ್ಲಾ ಎಂದು ಕೆಲವು ಮುದುಕಿಯರು ಹಳಹಳಿಸದೆಯೂ ಇರಲಿಲ್ಲ. ಏನೇ ಹೇಳು, ಬಹಳ ಸರಳ ಜನ. ಅಸೂಯೆ ಇಲ್ಲದವರು.

ಆದರೆ ಗಂಡಸರಿದ್ದಾರೆ ನೋಡು, ಹೊಟ್ಟೆಕಿಚ್ಚಿನವರು. ಒಬ್ಬೊಬ್ಬರೂ ಈ ಅರಮನೆಯಲ್ಲಿ ತನ್ನ ಪಾಲಿದೆ ಎಂದು ಒಳಗೊಳಗೇ ನಂಬಿದವರು. ಮತ್ತು ಅದೇನಾದರೂ ಹಾಳಾದರೆ ತಮ್ಮ ಪಾಲಿಗೆ ಅದರ ಎಷ್ಟು ಕಲ್ಲು, ಎಷ್ಟು ಮರ ಬರಬೇಕೆಂಬುದನ್ನು ಮನಸ್ಸಿನಲ್ಲೇ ಲೆಕ್ಕ ಹಾಕಿ ಮಂಡಿಗೆ ತಿಂಬವರು. ಇವರಲ್ಲಿ ಎಷ್ಟೋ ಮಂದಿ ದೇಸಗತಿಯಿಂದ ಸ್ಥಿತಿವಂತರಾದವರು. ಆದರೂ ಆ ಜನಕ್ಕೆ ಕೃತಜ್ಞತೆ ಬೇಡ, ತೃಪ್ತಿ ಕೂಡ ಇರಲಿಲ್ಲ. ಅವರೇನಾದರೂ ದೇಸಗತಿ ಬಗ್ಗೆ ಆಡಿದರೆ, ನೀನು ಖಂಡಿತ ತಿಳಿಯಬಹುದು; ಅವರ ಮನಸ್ಸಿನಲ್ಲಿರೋದು ಅದಲ್ಲ - ಅಂತ. ತಮ್ಮ ಮಾತುಗಳಿಂದ ಮೈಮರೆಸಿ, ನೀನು ಎಲ್ಲಿ ಮೈಮರೆಯುತ್ತಿಯೋ ಅಲ್ಲಿಂದಲೇ ಒಳಹೊಕ್ಕು ದೋಚುವವರು. ನಾನು ಹೀಗೆ ಹೇಳುವುದಕ್ಕೆ ಕಾರಣಗಳಿವೆ:

ದೇಸಾಯಿಗೆ ಬಯಲಾಟದ ಹುಚ್ಚಿತ್ತಲ್ಲ, ಹುಚ್ಚೇನು, ಬಯಲಾಟವಾಡುವುದೇ ಅವನ ಕಸಬಾಗಿತ್ತು. ಬಯಲಾಟಕ್ಕೆ ಅಲತಗಿಯಿಂದ ಚಿಮಣಾಳನ್ನು ಕರೆಸುತ್ತಿದ್ದರು. ಅವಳಿಗೆ ಬೇಕಾದಷ್ಟು ಹಣ ಸುರಿದು ಎಂಟೆಂಟು ದಿನ ಇಲ್ಲೇ ಇಟ್ಟುಕೊಳ್ಳುತ್ತಿದ್ದರು. ಇವರಾಡುವ ಬಯಲಾಟಗಳೋ, ಸಿಂಗಾರೆವ್ವನ ಮಲಗುವ ಕೋಣೆಯಿಂದ ನಾವೇ ನೋಡಿದ್ದೀವಲ್ಲ - ಚೆನ್ನಾಗಿರುತ್ತಿರಲಿಲ್ಲ. ಸರಗಂ ದೇಸಾಯಿ ರಾಜನಾಗಿರುತ್ತಿದ್ದ. ಅದೇನು ಪಾರ್ಟೋ, ಅದೇನು ಅಭಿನಯವೋ, ಇವ ಬಂದೊಡನೆ ಜನ ಬಾಯಿ ಮುಚ್ಚಿಕೊಂಡು ನಗುತ್ತಿದ್ದರು. ಸುಳ್ಯಾಕೆ ಹೇಳಲಿ, ಇವನ ಭಾಗ ಬಂದೊಡನೆ ಸಿಂಗಾರೆವ್ವ ಕಿಟಕಿ ಬಾಗಿಲು ಮುಚ್ಚಿ ಮಲಗಿಬಿಡುತ್ತಿದ್ದಳು. ಇದಲ್ಲ ನಾನು ಹೇಳಬೇಕೆಂಬುದದ್ದು. ಬಯಲಾಟದ ಹಿಂದುಮುಂದಿನ ನಾಕೈದು ದಿನ ಸರಿರಾತ್ರಿ ದೇಸಾಯಿಯನ್ನು ಹೊತ್ತುಕೊಂಡೇ ಮನೆಗೆ ಬರುತ್ತಿದ್ದರು. ಅವ ಬೇಹೋಶ್ ಆಗುವುದು ನಮಗೆ ಗೊತ್ತಿತ್ತಲ್ಲ. ದೈವ ಶಪಿಸುತ್ತ ಉಪಚರಿಸುತ್ತಿದ್ದೆವು. ಆದರೆ ಬಯಲಾಟದ ಹಿಂದುಮುಂದಿನ ದಿನಗಳಲ್ಲೇ ಯಾಕೆ ಹೀಗಾಗಬೇಕೆಂದು ನಮಗೆ ಹೊಳೆದಿರಲೇ ಇಲ್ಲ.

ಯಾಕೆಂದರೆ ಅಲ್ಲಿ ಚಿಮಣಾಳ ತೊಡೆ ನೋಡುತ್ತಿದ್ದ! ಆ ಕಾರ್ಯಕ್ರಮ ನಡೆಯುತ್ತಿದ್ದದ್ದು ಹೀಗೆ: ಚಿಮಣಾಳನ್ನು ಕರೆತಂದವನು ತಾಲೀಮು ಮುಗಿದ ಮೇಲೆ ಚಿಮಣಾಳ ರೂಪ, ಮೈಮಾಟವನ್ನು ವರ್ಣಿಸಿ, ದೇಸಾಯಿಯನ್ನು ರಮಿಸಿ ಒಂದು ಗುಡಿಸಲಿಗೆ ಕರೆದೊಯ್ಯುವುದಂತೆ, ಗುಡಿಸಲ ಹೊರಗೆ ದೇಸಾಯಿಯನ್ನು ಕೂರಿಸಿ ಒಂದು ಸಣ್ಣ ಕಿಂಡಿಯಿಂದ ಒಳಗೆ ನೋಡಲಿಕ್ಕೆ ಹೇಳುವುದು.

ಒಳಗೆ ದೀಪದ ಬೆಳಕಿನಲ್ಲಿದ್ದ ಅವಳು ಮೆಲ್ಲನೆ ಸೀರೆ ಎತ್ತುವುದು, ಎತ್ತುತ್ತ ಹೋದಂತೆ ಇವ ಉದ್ರಿಕ್ತನಾಗಿ, ಮೈಮುಖ ಕೆಂಪಾಗಿ, ಅವಳು ಪೂರಾ ತೊಡೆ ತೋರಿಸುವಷ್ಟರಲ್ಲಿ ಈತ ಬೇಹೋಶ್ ಆಗಿ ಬೀಳುವುದು. ಆಮೇಲೆ ಹೊತ್ತುತಂದು ಮನೆಯಲ್ಲಿ ಚೆಲ್ಲುವುದು. ದೇಸಾಯಿ ಈ ಉದ್ರೇಕಕ್ಕಾಗಿ ಬೇಕಾದಷ್ಟು ಹಣ ಸುರಿಯುತ್ತಿದ್ದ. ಊರಿನ ಕೆಲವರು ಇದರ ಉಪಯೋಗವನ್ನು ಸರಿಯಾಗೇ ಮಾಡಿಕೊಳ್ಳುತ್ತಿದ್ದರು. ಕೆಲವರಂತೂ ಚಿಮಣಾ ಎಂದು ಹೇಳಿ ತಮ್ಮ ಹೆಂಡಂದಿರನ್ನು ಕರೆತಂದು ತೋರಿಸುತ್ತಿದ್ದರಂತೆ. ಹ್ಯಾಗೂ ದೇಸಾಯಿ ಮುಖದ ತನಕ ನೋಡುವುದಿಲ್ಲವಲ್ಲ, ಆತಂಕವೇನಿದೆ? ಯಾವಳ ಕತ್ತಿನಲ್ಲಾದರೂ ಅರಮನೆಯ ಆಭರಣ ಕಂಡಿತೆನ್ನು, ಅವಳು ದೇಸಾಯಿಗೆ ತೊಡೆ ತೋರಿದವಳೆಂದೇ ಜನ ಆಡಿಕೊಳ್ಳುತ್ತಿದ್ದರು. ಬರಬರುತ್ತ ಅಂಥ ಆಭರಣ ಧರಿಸುವುದನ್ನೇ ಜನ ನಾಚಿ ಬಿಟ್ಟರಂತೆ.

ಇಂಥಾದ್ದನ್ನ ಎಲ್ಲಿಯಾದರೂ ಕೇಳಿದ್ದಿಯೇನಪ್ಪ? ಕೇಳೋದೇನು ಬಂತು. ಮುಂದೆ ನಾನೇ ಕಣ್ಣಾರೆ ಕಂಡೆ. ಆದರೆ ನನಗೆ ಭಾರೀ ದೊಡ್ಡ ಆಘಾತವಾಗಿತ್ತು. ಜನ ಹೇಳುವುದೆಲ್ಲ ನನಗೆ ಖಾತ್ರಿಯಾಗಿತ್ತು. ಯಾಕೆಂದರೆ ಸಿಂಗಾರೆವ್ವನ ತೊಡೆ ನೋಡಿ ದೇಸಾಯಿ ಮೂರ್ಛೆ ಹೋದದ್ದಿತ್ತಲ್ಲ. ಇವ ಹೀಗಿದ್ದರ ಸಿಂಗಾರೆವ್ವ ವ್ರತ ಮಾಡಿದರೇನು ಬಂತು, ಹರಕೆ ಹೊತ್ತರೇನು ಬಂತು, ದಿಂಡುರುಳಿದರೇನು ಬಂತು? ಇದನ್ನು ಅವಳಿಗೆ ಹ್ಯಾಗೆ ಹೇಳಬೇಕೆಂಬುದೇ ನನಗೆ ದೊಡ್ಡ ಗೂಢವಾಯ್ತು. ಹೇಳಿದರೆ ಸುಖವಿಲ್ಲ ನಿಜ; ಹೇಳದಿದ್ದರೂ ಸುಖವಿಲ್ಲ. ಅವಳನ್ನು ಕಾಡಿಸಲಿಕ್ಕೆ ಅಪ್ಪ, ಗಂಡ, ಈ ಜನ ಸಾಲದೆಂದು ದೇವರು ಕೂಡ ಇವರ ಸಂಚಿನಲ್ಲಿ ಶಾಮೀಲಾಗಿದ್ದಾನೆನ್ನಿಸಿತು. ಮನುಷ್ಯರ ದುಷ್ಟತನ ಹ್ಯಾಗೊ ಎದುರಿಸಬಹುದು. ದೇವರೇ ಎದುರು ಬಿದ್ದರೆ ಗತಿ ಯಾರು? ಈ ವಿಚಾರ ತಲೆ ಹೊಕ್ಕೊಡನೆ ನಿಂತ ನೆಲ ಕುಸಿದ ಹಾಗಾಯ್ತು; ಮುಗಿಲು ಹರಿದು ಮೈಮೇಲೆ ಬೀಳುವುದೊಂದೆ ಬಾಕಿ.“ಸಿಂಗಾರೆವ್ವಾ ಕೆಟ್ಟೆ ತಾಯಿ ಕೆಟ್ಟೆ” ಎಂದು ಎದೆಯ ಮೇಲೆ ಕೈಯಿಟ್ಟುಕೊಂಡು ಕುಸಿದುಬಿಟ್ಟೆ.

ಆ ದಿನ ಮಧ್ಯಾಹ್ನ ಊರೊಳಗಿನಿಂದ ಬಂದಾಗ ಅರಮನೆಯಲ್ಲಿ ಸಿಂಗಾರೆವ್ವ ಕಾಣಿಸಲಿಲ್ಲ. ಮಲಗೋ ಅಂತಸ್ತಿನಲ್ಲೂ ಇರಲಿಲ್ಲ. ಅತ್ತೆಯ ಬಳಿ ನೋಡಿದೆ. ಅಡಿಗೆಮನೆ ನೋಡಿದೆ; ಬಚ್ಚಲು ಮನೆ ಕೂಡ ನೋಡಿದೆ; ಅಯ್ ಶಿವನೇ, ಮನೆ ಬಿಟ್ಟೆ ಪೌಳಿಯಾಚೆ ಹೆಜ್ಜೆಯಿಟ್ಟವಳ್ಳ. ಎಲ್ಲಿ ಇದ್ದಿದ್ದಾಳೆಂದು ದನ ಕೊಟ್ಟಿಗೆಯ ಕಡೆ ನಡೆದೆ. ಯಾಕೆಂದರೆ, ಕೆಂದಾಕಳು ಮೊನ್ನೆಯಷ್ಟೆ ಕರು ಹಾಕಿತ್ತು - ಬಾಣಂತಿ ದನಗಳ ಆರೈಕೆ ಮಡುವುದು ಅವಳಿಗೆ ತುಂಬ ಪ್ರಿಯವಾದ ಕೆಲಸವೆಂದು ನಾನು ಬಲ್ಲೆ. ನಾನು ಊಹಿಸಿದಂತೆಯೇ ಅಲ್ಲಿದ್ದಳು. ನಂಜಿಯ ಜೊತೆಗೆ ಅದೇನೋ ಗುಟ್ಟನ್ನು ಹಂಚಿಕೊಂಬವರಂತೆ ಇಳಿದನಿಯಲ್ಲಿ ಮಾತಾಡುತ್ತಿದ್ದಳು. ಜೀವ ತಡೆಯಲಿಲ್ಲ, ನಾನು ಮೆಲ್ಲಗೆ ಅವರ ಬಳಿಗೆ ಹೋಗಿ ಅವರಾಡುವುದೆಲ್ಲ ಕೇಳಿಸುವಷ್ಟು ಸಮೀಪ ನಿಂತೆ. ಮೇವಿನ ಕಟ್ಟೆಯ ಮರೆಯಲ್ಲಿ ನಿಂತುದರಿಂದ ನಾನು ಅವರ ಕಣ್ಣಿಗೆ ಬೀಳುತ್ತಿರಲಿಲ್ಲ. ಇಣಿಕಿ ನೋಡಿದೆ.

ಎಳೇ ಮಕ್ಕಳಂತೆ ಇಬ್ಬರೂ ಅಸಮಾನ ಆಸಕ್ತಿ ಮತ್ತು ಆನಂದದಿಂದ ಕಳಕಳೆಯಾಗಿದ್ದರು. ನಂಜಿ, ನಮ್ಮ ಹೆಣ್ಣಾಳು, ಚೊಚ್ಚಲು ಬಸರಿದ್ದದ್ದು ನನಗೆ ಗೊತ್ತಿತ್ತು. ಇಬ್ಬರೂ ಅದರ ಬಗ್ಗೆ ಮಾತಾಡುತ್ತಿದ್ದರು. ಈಗಷ್ಟೆ ಹೊಸ ಆಟಿಗೆಯನ್ನು ಹೊಂದಿದ ಯಜಮಾನಿಯಂತೆ ನಂಜಿ, ಅದು ತನಗಿಲ್ಲವಲ್ಲಾ ಎಂದು, ಅವಳ ಕೈಲಾದರೂ ಅದನ್ನು ನೋಡಿ ಆನಂದಿಸೋಣವೆಂದು, ಆಸೆಬುರುಕುತನದಿಂದ ನೋಡುವ ಬಡಕೂಸಿನಂತೆ ಸಿಂಗಾರೆವ್ವ - ಕಂಡರು. ನಂಜಿಯ ಮುಖದಲ್ಲಿ ತೃಪ್ತಿಯ ಬಣ್ಣ ಬಂದಿತ್ತು ಹೊಡೆ ಹಿರಿದ ಬೆಳೆಯಂತೆ ಮುಗುಳುನಗೆ ಮುಖದಲ್ಲಿ ತುಳುಕಾಡುತ್ತಿತ್ತು. ದೇವರ ಮನೆಯ ನಂದಾದೀಪದಂತೆ ಅವಳ ಕಣ್ಣು ಶಾಂತವಾಗಿ, ನಿಶ್ಚಿಂತವಾಗಿ ಬೆಳಗುತ್ತಿದ್ದವು. ಸಿಂಗಾರೆವ್ವನ ಕಣ್ಣು ಆಸೆಯಿಂದ ಝಳಪಿಸುತ್ತಿದ್ದವು. ಮತ್ತೆ ಮತ್ತೆ ಅವಳೊಳಗೆ ಬಿರುಗಾಳಿಯೆದ್ದು ಹೊಯ್ದಾಡಿ ತಂತಾನೇ ಸುಂಟರಗಾಳಿಯಂತೆ ಸುತ್ತುತ್ತಿತ್ತು. ಮತ್ತು ಅವಳ ಮುಖ ಕನ್ನಡಿಯಂತೆ ಅದನ್ನೆಲ್ಲ ಬಿಂಬಿಸುತ್ತಿತ್ತು. ಎಳೇ ಮಕ್ಕಳ ಹಾಗೆ ಏನೇನೋ ಕೇಳುತ್ತಿದ್ದಳು, ಹಾಗೆ ಕೇಳಿದಾಗ ಅವಳ ಉಸಿರಾಟ ಅಸಹಜವಾಗಿ ತೀವ್ರತೆಗೇರಿ ಕುಸಿಯುತ್ತಿತ್ತು. ದನಿಯ ಏರಿಳಿತ ಅಸಮಾನವಾಗಿತ್ತು. ಸಿಂಗಾರೆವ್ವ ಹೇಳಿದಳು;

“ನಂಜೀ, ಇನ್ನಮ್ಯಾಲ ಹೊಲಕ್ಕ ಹೋಗಬ್ಯಾಡ...”

“ನಮ್ಮತ್ತಿ ಬಿಡೋದಿಲ್ರೆವ್ವ.”

“ಬಿಡೋದಿಲ್ಲಂದರ? ಚೊಚ್ಚಿಲ ಬಸರಿ, ನಿಮ್ಮತ್ತಿಗಿ ತಿಳೀಬಾರದಾ? ಶೀನಿಂಗಿ ಬರಲಿ, ನಿಮ್ಮತ್ತಿಗಿ ಹೇಳಿಕಳಸ್ತೀನಿ; ಅಂದಾಂಗ ನಂಜೀ, ಒಳಗ ಹೆಂಗ ಅನಸತೈತೆ?”

ನಂಜಿಯೇನು ಹತ್ತು ಹೆತ್ತವಳೆ? ಅವಳಿಗೂ ಇದು ಹೊಸದೇ, ಬಾಯಿಬಿಟ್ಟು ಹೇಳಲಾರದ ಸುಖದಲ್ಲಿದ್ದವಳು, ಕಣ್ಣು ಮುಚ್ಚಿ ಮುಗುಳುನಕ್ಕು ಒಂದು ಕ್ಷಣ ತಲೆದೂಗಿದಳಷ್ಟೆ.

“ಹಂಗಲ್ಲs ಹೊಟ್ಟ್ಯಾಗ ಹೆಂಗ ಅನಸತೈತಿ?”

ನಂಜಿ ಈ ಮಾತಿಗೂ ಹಾಗೇ ನಕ್ಕು. “ನಂಗೋತ್ತಿಲ್ಲರೆವ್ವಾ” ಎಂದಳು. “ಏಳುವಾಗ, ಕೂಡುವಾಗ ಮೆಲ್ಲಗೆ ಕೂಡು. ಅವಸರ ಮಾಡಬ್ಯಾಡ. ನಿಚ್ಚಣಿಕೆ ಅಂತೂ ಹತ್ತ ಬ್ಯಾಡ. ಇದನ್ನೆಲ್ಲಾ ನಿಮ್ಮಗಿತ್ತಿ ಹೇಳಿ ಕಳಿಸ್ತೀನಿ. ನೀ ಏನ ಕಾಳಜೀ ಮಾಡಬ್ಯಾಡ. ನಿನ್ನ ಗಂಡ ಈಗ ನಿನ್ನ ಜಾಸ್ತಿ ಮಾಯೇ ಮಾಡತಾನೇನ?”

“ಹೋಗ್ರೆವ್ವಾ...”

“ಅಯ್ ಹೇಳಗs....ರಾತ್ರಿ ಬರ್ತಾನಿಲ್ಲ?

“ಬರತಾನ, ಮನ್ನಿ ರಾತ್ರಿ ನಾ ಮಲಗಿದ್ದೆ, ಅವ ಬಂದು ಮೆಲ್ಲಗ ಹೊಟ್ಟೀ ಮ್ಯಾಲ ಕೈಯಾಡಿಸಿ ಮುದ್ದ ಕೊಟ್ಟ...”

ಇಷ್ಟು ಹೇಳಬೇಕಾದರೆ ಆ ಹುಡುಗಿ ನಾಚಿ ನೀರಾಗಿ ಮುಖ ಮುಚ್ಚಿಕೊಂಡಳು. ಸಿಂಗಾರೆವ್ವನಿಗೋ ಅದೆಲ್ಲಾ ತನಗೇ ಆದಂತೆ ಮುಖ ಕೆಂಪೇರಿತ್ತು.

“ಆಯ್ ಶಿವನs, ಹೌಂದೇನ ನಂಜೀ?” - ಎನ್ನುತ್ತ ಮುಖದ ಮೇಲಿನ ಅವಳ ಕೈ ತೆಗೆದು ನಂಜಿಯ ಮುಖವನ್ನು ಕಣ್ಣಿನಿಂದ ಹೀರುವ ಹಾಗೆ ನೋಡಿ ಆನಂದಭರಿತಳಾದಳು. ತಕ್ಷಣ ಅದೇನೋ ತನ್ನ ಮನಸ್ಸು ಕೊರೆಯುತ್ತಿರುವಂತೆ, “ನಂಜೀ ಒಂದ ಮಾತ ಕೇಳಲೇನ?” - ಎಂದಳು.

“ಕೇಳ್ರವ್ವ...”

“ನೀ ಇಲ್ಲಂದರ...”

“ನಿಮಗ ಇಲ್ಲದೇನೇನ್ರಿ?...”

“ನಾನೂ ನಿನ್ನ ಹೊಟ್ಟಿಮ್ಯಾಲ ಒಮ್ಮಿ ಕೈಯಾಡಿಸಲೇನ?” - ಎಂದಳು. “ಹೂಂ” ಎನ್ನುತ್ತ ನಂಜಿ ಹೊಟ್ಟೆಯ ಮೇಲಿನ ಸೀರೆ ತೆಗೆದಳು. ಅವಳು ಇಷ್ಟು ಬೇಗ ಒಪ್ಪಿಕೊಂಡಾಳೆಂದು ಇವಳಿಗೆ ಅನ್ನಿಸಿರಲಿಲ್ಲವೆಂದು ತೋರುತ್ತದೆ. ಆದರೂ ಕೈಯಾಡಿಸುವ ಮುನ್ನ ಒಮ್ಮೆ ಹಿಂದೆ ಮುಂದೆ ನೋಡಿ, ಅಪರೂಪದ ಸೌಭಾಗ್ಯ ದೊರೆತದಕ್ಕೆ ಆನಂದಗೊಂಡು, ಮೆಲ್ಲಗೆ ಅಂದರೆ ಮೆಲ್ಲಗೆ ಕೈಯಿಟ್ಟಳು. ಆಕೆ ಪುಳಕಿತಳಾದದ್ದನ್ನು, ಅವಳ ಕಣ್ಣು ದೀಪದ ಹಾಗೆ ಹೊಳೆಯುತ್ತಿದ್ದುದನ್ನು ಅಷ್ಟು ದೂರದಿಂದಲೂ ನಾನು ನೋಡುತ್ತಿದ್ದೆ. ಆನಂದೋದ್ರೇಕದಲ್ಲಿ ಮಾತು ಸಮ ಹೊರಡುತ್ತಿರಲಿಲ್ಲ. ದನಿ ಕಂಪಿಸುತ್ತ ಕೇಳಿದಳು -

“ನಂಜೀ, ಒಳಗ ಅದು ಹೆಂಗ ಹತ್ತಂತೈತಿ?”

‘ಹೆಂಗೊ ಏನೋ, ನಂಗೊತ್ತಿಲ್ಲರೆವ್ವಾ.”

“ಗೊತ್ತಿಲ್ಲಂದರ ನಾ ಹೇಳಲಿ? - ಅಂಗೈಯಾಗ ಹಕ್ಕೀಮರಿ ಹಿಡಿದಾಂಗ ಅನಸತೈತಿ, ಅಲ್ಲಾ?”

ನಂಜಿ ಹೂ ಅಂದಳು. ಹಾಗೇ ಕೈಯಾಡಿಸುತ್ತ, ‘ನಂಜೀ ನಿನಗೆ ಏನೇನ ಬೇಕ ಹೇಳ, ಏನೇನ ಬಯಕಾಗ್ಯಾವು? ಏನ ತಿನಬೇಕನಸತೈತಿ? ನನ್ನ ಮುಂದ ಹೇಳs...” ಅವಳು “ಏನೂ ಬ್ಯಾಡ್ರಿ” ಎನ್ನುತ್ತಿದ್ದಳು. ಇವಳೇ ಒತ್ತಾಯ ಮಾಡಿ ಅವಳ ಬಾಯಿಂದ ಏನೇನೋ ಪಲ್ಯ, ಏನೇನೋ ರೊಟ್ಟಿ, ಚಟ್ನಿ ಹೊರಡಿಸಿ “ನೀನು ಮೆಲ್ಲಗ ಮನೀ ಕಡೆ ನಡಿ, ಈಗಿಂದೀಗ ತಯಾರ ಮಾಡಿ ಶೀನಿಂಗೀನ ಕಳಸ್ತೇನಿ” ಎಂದು ಹೇಳಿ ಅಡಿಗೆ ಮನೆಯತ್ತ ಓಡಿದಳು. ನಾನೂ ಎದ್ದೆ.

ಓಡಿಹೋದವಳು ಶೀನಿಂಗೀ ಶೀನಿಂಗೀ ಎನ್ನುತ್ತ ಮನೆ ತುಂಬ ಹುಡುಕುತ್ತಿದ್ದಳು. ನನ್ನ ಕಂಡೊಡನೆ ಕೈಹಿಡಿದುಕೊಂಡು ಅಡಿಗೆ ಮನೆಗೆ ಎಳೆದುಕೊಂಡೇ ಹೋದಳು. “ನಂಜಿಗಿ ಬಯಕಿ ಹತ್ಯಾವಂತ; ಲಗೂನ ಅಡಿಗಿ ಮಾಡೋಣ ಬಾ” ಎಂದು ಹೇಳಿ ತಾನೂ ಸಹಾಯಕ್ಕೆ ನಿಂತಳು. ಅಡಿಗೆ ಮುಗಿಯುವ ತನಕ ನಂಜಿಯ ಬಗ್ಗೆ ಏನೇನೋ ಹೇಳಿದಳು. ಹೊಟ್ಟೆಯ ಮೇಲೆ ಕೈಯಾಡಿಸಿದ್ದನ್ನೂ ಹೇಳಿ, ಆ ಹೊಟ್ಟೆ ಹ್ಯಾಗಿರುತ್ತದೆಂದು ವರ್ಣನೆ ಮಾಡಿದಳು. ಅಡಿಗೆ ಮುಗಿದಾಗ ಸಂಜೆಯಾಗಿ ದನಕರು ಮನೆಗೆ ಬರುತ್ತಿದ್ದವು. ತಾನೇ ಕೈಯಾರೆ ಹೆಡಿಗೆ ತುಂಬಿ, ನನ್ನ ಮೇಲೆ ಹೊರಿಸಿ “ಹುಷಾರಾಗಿ ಉಣಿಸಿ ಬಾ” ಎಂದು ಬಾಗಿಲತನಕ ಬಂದು ಕಳಿಸಿದಳು.

ನಂಜಿಯ ಮನೆಗೆ ಹೋದೆ. ಮನೆ ಮುಂದೆ ಹೆಂಗಸರು ಸೇರಿದ್ದರು. ಯಾರೋ ಅವಳತ್ತೆ ಎಂದು ಕಾಣುತ್ತದೆ - ಅಳುತ್ತ ಯಾರನ್ನೋ ಶಪಿಸುತ್ತಿದ್ದಳು. ನಾನು ಬಂದುದನ್ನು ನೋಡಿದ ಒಬ್ಬ ಗರತಿ, ಬಂದವಳೇ ನನ್ನ ರಟ್ಟೇ ಹಿಡಿದು ಒಂದು ಸಂದಿಯಲ್ಲಿ ಕರೆದೊಯ್ದು.

“ಏನs ಶೀನಿಂಗಕ್ಕಾ, ಸಣ್ಣ ದೊರಿಸಾನಿ ಹಿಂಗ ಮಾಡಬೇಕೇನು?” ಎಂದಳು. ನನಗೇನೂ ಅರ್ಥವಾಗಲಿಲ್ಲ.

“ಏನು, ಏನು?” ಅಂದೆ

“ಮುದ್ದಿನದಾಗ ಸಣ್ಣ ದೊರಿಸಾನಿ ನಂಜೀನ ಕರದು ಹೊಟ್ಟಿಮ್ಯಾಲ ಕೈಯಾಡಿಸಿ ಕಳಿಸಿದಳಂತ. ನಂಜಿ ಮನೀಗಿ ಬಂದ ಹಲಿವುಳ್ದೈತಿ! ಪಾಪ, ಬಂಜೀ ಕೈ ಮುಟ್ಟಿದರ ಹೊಟ್ಟಿ ತಡದೀತs? ತಿಳೀಬಾರದ ದೊರಿಸಾನಿಗಿ? ನೀ ಆದರೂ ಬುದ್ಧಿ ಹೇಳಬಾರದ?”

- ಅಂದಳು. ಅಲ್ಲಿ ನಿಲ್ಲುವ ಮನಸ್ಸಾಗಲಿಲ್ಲ. ಹಾ ಹೂ ಎನ್ನದೆ, ಹೊತ್ತ ಹೆಡಿಗೆ ಇಳಿಸದೆ ಒಂದೇ ಹೆಜ್ಜೆಯಲ್ಲಿ ಮನೆಗೆ ಬಂದೆ. ಬಂದವಳೇ ಗಾಳಿ ತುಂಬಿದ ಕರುವಿನಂತೆ ಅಡಿಗೆಮನೆ ಹೊಕ್ಕು ಹೆಡಿಗೆ ಇಳಿಸಿ ಕಂಬಕ್ಕೊರಗಿ ಹಾಗೇ ಕುಕ್ಕರಿಸಿದೆ. ಸುರಿಯೋ ಬೆವರು, ಒತ್ತಿ ಬರುತ್ತಿದ್ದ ಏದುಸಿರು, ಢವಢವ ಎದೆ ಹೊಡೆದುಕೊಂಡು ಕಣ್ಣಿಗೇನೂ ಕಾಣಿಸಂತಾಗಿತ್ತು. ಅಷ್ಟೇ ಆತುರದಲ್ಲಿ ಸಿಂಗಾರೆವ್ವ ಬಂದಳು. ನಾ ಕೂತ ಭಂಗಿಯಿಂದಲೇ ಗಾಬರಿಯಾಗಿ

“ಶೀನಿಂಗಿ, ಯಾಕ? ಏನಾಯ್ತು?” ಅಂದಳು.

“ನಂಜಿ ಹಲಿವುಳ್ದಾಳ ಎವ್ವಾ.”

“ಏನಂದಿ?”

ನನ್ನ ಬಾಯೊಳಗೆ ಹುಳಬೀಳಲಿ, ಯಾರು ಎಂತಾ ಏನೂ ವಿಚಾರ ಮಾಡದೆ ಎಲ್ಲಾ ಹೇಳಿಬಿಟ್ಟೆ.

"ಖರೇನ ಎವ್ವಾ, ನೀ ಮದ್ದಿನದಾಗ ಆಕೀ ಹೊಟ್ಟೀಮ್ಯಾಲ ಕೈಯಾಡಿಸಿದೆಂತ. ಬಂಜೀ ಕೈ ಮುಟ್ಟಿ ಹಂಗಾಯ್ತಂತ ಎಲ್ಲರೂ ಆಡಿಕೋತಿದ್ದರು. ಓಡಿಬಂದೆ."

ಸಿಂಗಾರೆವ್ವ ಕೇಳಿ, ಸುಂಟರಗಾಳಿಗೆ ಸಿಕ್ಕ ಎಳೇ ಬಿದಿರುಮಳೆಯಂತೆ ನಡುಗಿ, ಹೊಯ್ದಾಡಿ ನಿಂತಿರಲಾರದೆ ನಾ ಕೂತ ಕಂಬ ತಬ್ಬಿಕೊಂಡು ಹಾಗೇ ಕುಸಿದಳು. ಬಹಳ ಹೊತ್ತು ಮಾತಾಡಲಿಲ್ಲ. ಕೊನೆಗೆ ನಾ ಮಾಡಿದ್ದೇನೆಂದು ಅರಿವಿಗೆ ಬಂತು. ಸಿಂಗಾರೆವ್ವನ ಎದೆಯೊಳಗೆ ಭಾರೀ ಗಾಯವಾಗಿತ್ತು. "ಎವ್ವಾs" ಅಂದೆ. ಇಲ್ಲೀತನಕ ತಡೆಹಿಡಿದ ಅಳಾಪದ ಕಟ್ಟೆಯೊಡೆದು ಉಕ್ಕಿಬಂತು.

"ಶೀನಿಂಗೀ, ಶಿವ ನನ್ನ ಹಣ್ಯಾಗ ಇನ್ನs ಏನೇನ ಬರದ್ದಾನs" - ಎಂದು ಒದರಿ ಹೇಳುತ್ತ ಕಂಬಕ್ಕೆ ಹಣೆಹಣೆ ಗಿಟ್ಟಿಸತೊಡಗಿದಳು. ಎವ್ವಾ, ನನ್ನಾಣಿ ಹಿಂಗ ಮಾಡಬ್ಯಾಡೆಂದವಳೇ ಹೋಗಿ ಹಿಡಿದುಕೊಂಡು ಕಂಬದಿಂದ ದೂರ ಎಳೆದುತಂದೆ. ನನ್ನನ್ನು ತಬ್ಬಿಕೊಂಡು ಬಿಕ್ಕಿಬಿಕ್ಕಿ ಅತ್ತಳು.

"ಮುತ್ತೈದೆ ಮೂರುಸಂಜಿ, ತುಂಬಿದ ಮನ್ಯಾಗ ಅಳಬಾರದೆವ್ವಾ" - ಅಂದೆ. ಹಾಗೇ ಕರೆದುಕೊಂಡು ಹೊರಗೆ ಬಂದೆ. ಪರಸ್ಪರ ಅಂಟಿಕೊಂಡೇ ಮನೆಯಂಗಳದ ತನಕ ಹೋದೆವು. ಬೆಳದಿಂಗಳಿತ್ತು. ಈಗ ಆಳೋದನ್ನ ನಿಲ್ಲಿಸಿ ನನ್ನ ಭುಜದ ಮೇಲೆ ತಲೆಯೂರಿ ಬರೀ ಕಣ್ಣಿರು ಸುರಿಸುತ್ತ ಕೂತಳು.

ಈ ದಿನ ಕಂಡು ಕೇಳಿದ ಸತ್ಯಗಳು ನಮ್ಮ ಕನಸುಗಳನ್ನು ಹುಡಿ ಮಾಡಿಬಿಟ್ಟಿದ್ದವು. ನಮ್ಮ ಎದೆಯೊಳಗೆ ಎಂಥಾ ದೊಡ್ಡ ಗಾಯವಾಗಿದ್ದಿತ್ತೆಂದರೆ, ಅದು ಈ ಜನ್ಮದಲ್ಲಿ ಮಾಯುವ ಹಾಗಿರಲಿಲ್ಲ. ಹಾಗೆನಿಸಿದೊಡನೆ ಥಟ್ಟಂತ ಕಣ್ಣೀರು ಬಂತು. ಸಿಂಗಾರೆವ್ವನ ಕಡೆ ನೋಡಿ ಹಾಗೇ ಕೈ ಚಾಚಿದೆ. ದುಃಖದ ಝಳದಲ್ಲಿ ಅವಳೆಷ್ಟು ಬಾಡಿ ಮೆತ್ತಗಾಗಿದ್ದಳೆಂದರೆ, ಕೈಮುಟ್ಟಿದ್ದೇ ತಡ ಮೆತ್ತಗೆ ಕೂಸಿನ ಹಾಗೆ ನನ್ನ ತೆಕ್ಕೆಗೆ ಬಂದು, ಎದೆಯಲ್ಲಿ ಮುಖ ಹುದುಗಿದಳು. ಅಳುವ ಗೆಳತಿಯನ್ನು ಸಾಂತ್ವನಗೊಳಿಸಬೇಕು; ನನ್ನಿಂದಾಗಲಿಲ್ಲ. ಬೆಳುದಿಂಗಳೇ ಆ ಕೆಲಸ ಮಾಡಲೆಂದು ಸುಮ್ಮನಾದೆ.

ಎಷ್ಟು ಹೊತ್ತು ಹೀಗೆ ಕೂತಿದ್ದೆವೋ. ಸಿಂಗಾರೆವ್ವನ ಕಣ್ಣೀರಿನಿಂದ ನನ್ನ ಕುಬಸ ಒದ್ದೆಯಾಗಿತ್ತು. ಬಿಕ್ಕು ನಿಂತಿದ್ದರೂ ನಿಟ್ಟುಸಿರಿನ ಬಿಸಿಯಿನ್ನೂ ಎದೆಗೆ ತಾಗುತ್ತಿತ್ತು. ಕರುಳು ಹಂಚಿಕೊಂಡವರ ಭಾವನೆಗಳು ಮಾತಿಲ್ಲದೇ ಪರಸ್ಪರ ತಿಳಿಯುತ್ತವಂತೆ. ಹಾಗೆ ನಮಗೂ ತಿಳಿದುಬಿಟ್ಟಿತು. ಶಿವನಿಗೆ ಕರುಳಿರಲಿಲ್ಲ. ಹಡೆದವನೊಬ್ಬ ವೈರಿ, ಮದುವೆಯಾದವ ಇನ್ನೊಬ್ಬ ವೈರಿ. ಮದುವೆಯಾಗಿ ಹೆಣ್ತನದ ಸುಖವಿಲ್ಲ. ಅದನ್ನು ಮರೆಯುವುದಕ್ಕೆ ಸಂತಾನ ಸುಖವಿಲ್ಲ ಬರಿಯುಡಿಯಲ್ಲಿ ಬಂದು, ಬರಿಯುಡಿಯಲ್ಲೇ ಮಣ್ಣುಗಾಣುವುದು. ನನ್ನ ಹೃದಯಕ್ಕೆ ಹೇಳುವ ಹಾಗೆ ಎದೆಗೊರಗಿಕೊಂಡೇ "ಶಿವ ನನ್ನs ಕೈ ಬಿಟ್ನ ಶೀನಿಂಗೀ!" ಎಂದಳು. ಈ ಮಾತು ಅವಳು ಹೇಳುವುದಷ್ಟೇ ತಡ, ತಮ್ಮಾ ನೀನು ನಂಬುತ್ತಿಯೋ ಇಲ್ಲವೋ ಪೌಳಿಯ ತೊಲೆಬಾಗಿಲು ದಡ್ಡನೆ ತೆರೆದುಕೊಂಡಿತು. ಇಬ್ಬರೂ ಆ ಕಡೆ ನೋಡುತ್ತೇವೆ. ಬಾಗಿಲ ಉದ್ದಗಲ ತುಂಬಿ ಜಂಗಮ ಮೂರ್ತಿಯೊಂದು ನಿಂತುಬಿಟ್ಟಿದೆ! ಕಾವಿಬಟ್ಟೆ, ಕರ್ರಗಿನ ಮೈ, ಗುಡಿಯೊಳಗಿನ ಶಿವಲಿಂಗವೇ ಕಾವಿಯುಟ್ಟಂತೆ. ಹೊಳೆಯೋ ಕಣ್ಣು ಉರಿಯೋ ಪಂಜಿನಂತೆ; ಒಂದು ಕೈಯಲ್ಲಿ ಕಂದೀಲಿದೆ, ಇನ್ನೊಂದರಲ್ಲಿ ಜೋಳಿಗೆಯಿದೆ! ಮೈ ಝುಮ್ಮೆಂದು, ಸಳಸಳ ಪುಳಕವೆದ್ದು, ಬೆವರಿಳಿದು, ತೆರೆದ ಕಣ್ಣು ತೆರೆದಂತೆ, ಬರೆದ ಗೊಂಬೆಯ ಹಾಗೆ ಮಾತು ಮರೆತು ಕೂತೆವು. ಬಂದವನು ಸಿಡಿಲು ಗುಡುಗಿದ ಹಾಗೆ "ಉಂಟು, ಮಕ್ಕಳ ಫಲ ಉಂಟು! ನಿನಗ ಮಕ್ಕಳಾ ಕೊಡದಿದ್ದರ ಶಿವನ ಪಾದಾ ತಿರುವತೀನಿ!" ಎಂದು ಗುಡುಗಿ, ಹಾಗೇ ಮಾಯವಾದ!

* * *

# ಅಧ್ಯಾಯ - ೮

"ಸಾಕ್ಷಾತ್ ಶಿವನೇ ಹಾಗೆ ಬಂದು ಹೇಳಿ ಹೋದನೆಂದು ಸಿಂಗಾರೆವ್ವ ಸಂಪೂರ್ಣ ನಂಬಿದಳು. ಹಾಗಂತ ನಾನು ಸುಮ್ಮನಿರಲಿಲ್ಲ. ಅವರಿವರೆದುರಿಗೆ ಅವನ ವರ್ಣನೆ ಮಾಡಿ ಅವ ಯಾರು, ಏನು, ಎತ್ತ ಎಲ್ಲಾ ತಿಳಿಯಲು ಹವಣಿಸುತ್ತಿದ್ದೆ. ನಂಜಿ ಹಲಿವುಳ್ಳಳಲ್ಲ. ಸಿಂಗಾರೆವ್ವನಿಗೆ ಬಂಜಿ ಎಂಬ ಶಬುದ ಖಾಯಂ ಅಂಟಿಕೊಂಡುಬಿಟ್ಟಿತು. ಮೊದಮೊದಲು ಎಷ್ಟೊಂದು ಜನ ಹೆಂಗಸರು ಅರಮನೆಗೆ ಬರುತ್ತಿದ್ದವು, ಬರಬರುತ್ತಾ ಕಮ್ಮಿಯಾಗಿ ಕೊನೆಗೆ ಅವರು ಬರುವುದು ನಿಂತೇ ಹೋಯಿತು. ಮಕ್ಕಳನ್ನೆತ್ತಿಕೊಂಡು ಹೋಗುತ್ತಿದ್ದ ಅವ್ವಕ್ಕಗಳು ಅರಮನೆ ಮುಂದೆ ಹಾಯುವಾಗ ಬಂಜಿ ದೊರೆಸಾನಿಯ ಕೆಟ್ಟದೃಷ್ಟಿ ತಾಗೀತೆಂದು ಮಕ್ಕಳ ಮೇಲೆ ಸೀರೆ ಸೆರಗು ಹೊದಿಸಿ ಮರೆಮಾಚಿಕೊಂಡು ದಾಟಿಹೋಗುತ್ತಿದ್ದರು. ಇದೆಲ್ಲ ಸಿಂಗಾರೆವ್ವನಿಗೆ ತಿಳಿಯಲಿಲ್ಲವೆಂದಲ್ಲ. ಈ ಜನ ಮಕ್ಕಳ ಬಗ್ಗೆ ಎಷ್ಟೊಂದು ಸೂಕ್ಷ್ಮ ಮತ್ತು ಅದೇ ಕಾರಣಕ್ಕಾಗಿ ಅವರು ಎಷ್ಟೊಂದು ನಿರ್ದಯಿಗಳಾಗಬಲ್ಲರೆಂಬುಕ್ಕೂ ಇದು ಸಾಕ್ಷಿಯಾಯಿತು. ಆದರೆ ಅದೇನೋ ಅಂತಾರಲ್ಲ - ಮುಳುಗುವವನಿಗೆ ಹುಲ್ಲುಕಡ್ಡಿಯೇ ಆಧಾರ ಅಂತ. ಹಾಗೆ ನಾವಂತೂ ಆ ಜಂಗಮನ ಮಾತಿಗೆ ಜೋತುಬಿದ್ದು ಶಿವನೇ ಎನ್ನುತ್ತ ಕುಂತೆವು. ಆ ಜಂಗಮನ ಹೆಸರು ಹುಚ್ಚಯ್ಯ ಅಂತ..."

ಇಲ್ಲಿ ಹುಚ್ಚಯ್ಯನ ಬಗ್ಗೆ ನನ್ನ ಒಂದೆರಡು ಮಾತು ಸೇರಿಸುತ್ತೇನೆ. ಹುಚ್ಚಯ್ಯನನ್ನು ಚಿಕ್ಕಂದಿನಲ್ಲಿ ನಾನು ನೋಡಿದ್ದೆ. ಅವನೊಂದಿಗೆ ಆಟ ಆಡಿದ್ದೆ. ಅವನ ಊರುಕೇರಿಗಳ ವಿಚಾರ ನಮ್ಮ ಊರಿನವರಿಗೂ ತಿಳಿಯದು. ಊರು ಕೇಳಿದರೆ ಶಿವನೂರು ಅನ್ನುತ್ತಿದ್ದ. ತಂದೆ  ತಾಯಿ ಬಗ್ಗೆ ಕೇಳಿದರೆ ಶಿವಪಾರ್ವತಿಯರ ಹೆಸರು ಹೇಳುತ್ತಿದ್ದ. ಇಂಥವನಿಂದ ಏನು ಬಿಚ್ಚಲಾದೀತು? ಅವನಿಗೊಂದು ಮನೆಯಿಲ್ಲ, ಮಠವಿಲ್ಲ, ಎಲ್ಲೆಂದರಲ್ಲಿ ಬಿದ್ದಿರುತ್ತಿದ್ದ. ಕರೆದವರ ಮನೆಗೆ ಊಟಕ್ಕೆ ಹೋದರೆ ಹೋದ, ಇಲ್ಲದಿದ್ದರಿಲ್ಲ. ಕೆಲವು ಸಲ ಯಾರದೋ ಮನೆಗೆ ನುಗ್ಗಿ "ಇಂದು ಶಿವನ ಊಟ ಇಲ್ಲೇ" - ಎಂದು ಹೇಳಿ ಕೂತುಬಿಡುತ್ತಿದ್ದ. ಅವನಿಗೆ ಇಲ್ಲವೆಂದು ಹೇಳುವಂಥ ಧೈರ್ಯ ಅಥವಾ ಮನಸ್ಸು ನಮ್ಮೂರಿನಲ್ಲಿ ಯಾರಿಗೂ ಇರಲಿಲ್ಲ. ಅಷ್ಟೇ ಅಲ್ಲ. ಅವ ಉಂಡು ಹೋದರೆ ಸ್ವಯಂ ಶಿವನೇ ಬಂದು ಉಂಡುಹೋದಂತೆ ಧನ್ಯರಾಗುತ್ತಿದ್ದರು.

ಮಕ್ಕಳೆಂದರೆ ಅವನಿಗೆ ಪ್ರಾಣ. ಒಮ್ಮೊಮ್ಮೆ ಎಳೇ ಮಕ್ಕಳ ಹಾಗೆ ಬೆವರು ಸೀಪಿಕೊಂಡು ಮಣ್ಣಾಟ ಆಡುತ್ತಿದ್ದ. ನಾವೇನಾದರೂ ಚಿಣ್ಣಿದಾಂಡ, ಹುತುತು, ಸರಮಂಚ ಆಡುತ್ತಿದ್ದರೆ ಬಂದು ಸೇರಿಕೊಳ್ಳುತ್ತಿದ್ದ. ಆಟ ತಪ್ಪಿದರೆ ಎದುರಾಳಿಯ ಅಂಗಿ ಹಿಡಿದು ಮಕ್ಕಳಂತೇ ಬೈದಾಡಿ ಜಗಳವಾಡುತ್ತಿದ್ದ. ಗೆದ್ದರೆ ಕುಣಿದಾಡುತ್ತಿದ್ದ. ಸೋತರೆ ಬಾಡುತ್ತಿದ್ದ. ಒಮ್ಮೆ ಅವನೇ ಆಟ ತಪ್ಪಿ, ತಪ್ಪನ್ನೇ ಸಮರ್ಥಿಸಿಕೊಂಡಾಗ ಈ ನನ್ನ ಮಿತ್ರ ಶಿರಸೈಲ ಮತ್ತವನ ಹುಡುಗರು ಅವನನ್ನು ಮುತ್ತಿ ಥಳಿಸಿದ್ದರು. ಹುಚ್ಚಯ್ಯ ಅಳುತ್ತ ಶಿವನಿಗೆ ಹೇಳುವುದಾಗಿ ಕುಮುದವ್ವನ ಗುಡಿಯುತ್ತ ಹೋಗಿದ್ದ. ಆದರೆ ಹುಣ್ಣಿಮೆ ಅಮಾವಾಸ್ಯೆ ಬಂತೆಂದರೆ ಅದರ ಹಿಂದುಮುಂದಿನ ನಾಕೈದು ದಿನ ಮಾಯವಾಗುತ್ತಿದ್ದ. ಆಗ ಅವ ಎಲ್ಲಿ ಹೋಗುತ್ತಿದ್ದ, ಏನು ಮಾಡುತ್ತಿದ್ದ ಎಂಬುದ್ಯಾರಿಗೂ ತಿಳಿಯದು. ಆದರೆ ಆತನ ಬಗ್ಗೆ ಜನರಲ್ಲಿಯ ಭಯಭಕ್ತಿ ಮಾತ್ರ ಅಪಾರ. ಅದಕ್ಕೆ ಮುಖ್ಯ ಕಾರಣವೆಂದರೆ ಅವನ ನಾಲಗೆ. ಆ ಭಾಗದಲ್ಲಿ ಪ್ರಚಾರದಲ್ಲಿದ್ದ ಅವನ ಪವಾಡಗಳೂ ಹಾಗಿದ್ದವು. ಒಮ್ಮೆ ಕುಮುದವ್ವನ ಜಾತ್ರೆಯಲ್ಲಿ ಜನ ಊಟಕ್ಕೆ ಕುಳಿತಿದ್ದರು. ಜೋರಿನಿಂದ ಮಳೆ ಬಂತು. ಜನ ಬುದಿಂಗನೆ ಏಳಬೇಕೆನ್ನುವಾಗ ಇವನು "ಏಳಬ್ಯಾಡ್ರಿ, ಪಂಕ್ತಿ ಹಂಗಾಽ ಸಾಗಲಿ" ಎಂದು ಹೇಳಿ ಎರಡೂ ಕೂ ಎತ್ತಿದನಂತೆ. ಜನ ಊಟಕ್ಕೆ ಕೂತಲ್ಲಿ ಮಾತ್ರ ಮಳೆ ಇರಲಿಲ್ಲ. ಅದಷ್ಟು ಸ್ಥಳ ಬಿಟ್ಟು ಉಳಿದೆಲ್ಲಾ ಕಡೆ ಧೋ ಧೋ ಮಳೆ ಸುರಿದು ನೀರಾಡಿದಂತೆ!

ಇಷ್ಟಿದ್ದೂ ಆತ ಹೆಚ್ಚು ಖ್ಯಾತನಾದದ್ದು ತನ್ನ ಕಚ್ಚೆಹರಕುತನದಿಂದ. ಮತ್ತು ಅವನ ಈ ಬಗೆಯ ಪವಾಡಗಳೇ ಹೆಚ್ಚು ಜನಪ್ರಿಯವಾಗಿದ್ದವು. ಒಂದೆರಡು ಸ್ಯಾಂಪಲ್ ನೋಡಿರಿ: ಒಮ್ಮೆ ನಮ್ಮೂರಿನ ರಕ್ಕಪ್ಪ ಗಾಡಿ ಹೂಡಿಕೊಂಡು ಗೋಕಾವಿಗೆ ಹೊರಟ್ಟಿದ್ದ. ಹುಚ್ಚಯ್ಯ ತಾನೂ ಬರುವುದಾಗಿ ಹೇಳಿ ಗಾಡಿ ಹತ್ತಿಕೂತ. ಅದೇ ದಾರಿಯಲ್ಲಿ ಬುಟ್ಟಿಹೊತ್ತು ಕೊಣ್ಣೂರಿಗೆ ಹೊರಟಿದ್ದ ಹೆಂಗಸೊಬ್ಬಳು ಸಿಕ್ಕಳು. "ದಣಿವಾಗೇತಿ ನನ್ನಪ್ಪ ಗಾಡಿ ಹತ್ತಿಸಿಕೊಳ್ರೆಪ್ಪ" ಎಂದು ಕೇಳಿಕೊಂಡು ಅವಳೂ ಹತ್ತಿದಳು. ಗಾಡಿ ತುಸು ಮುಂದೆ ಸಾಗುವಷ್ಟರಲ್ಲೇ ಹುಚ್ಚಯ್ಯ ಆ ಹೆಂಗಸನ್ನು ಮರುಳು ಮಾಡಿದ್ದ. ಗಾಡಿ ಹೊಡೆಯುತ್ತಿದ್ದ ರಕ್ಕಪ್ಪನಿಗೆ ಹುಚ್ಚಯ್ಯ "ಮಗನಽ ರಕ್ಕಾ

ಹಿಂದಿರಿಗಿ ನೋಡಬ್ಯಾಡ; ನೋಡಿದರೆ ನಿನ್ನ ಕಣ್ಣ ಹೋಗ್ತಾವಲೇ" - ಅಂದ. ರಕ್ಕಪ್ಪನಿಗೆ ಕುತೂಹಲ ತಡೆದುಕೊಳ್ಳಲಾಗಲಿಲ್ಲ. ಮೆಲ್ಲಗೆ ಎಡಗಣ್ಣಿಂದ ಓರೆ ನೋಡಿದ. ಆದರೆ ನೋಡನೋಡುತ್ತಿದ್ದಂತೆ ಅವನ ಎಡಗಣ್ಣು ಕುರುಡಾಗಿಬಿಟ್ಟಿತು. ಈ ಪವಾಡ ನನಗೂ ಖಾತ್ರಿಯಾಗಿದೆ. ಯಾಕೆಂದರೆ ಈಗಲೂ ರಕ್ಕಪ್ಪ ಜೀವಂತವಾಗಿದ್ದಾನೆ, ಎಡಗಣ್ಣು ಕುರುಡಾಗಿದೆ.

ಹುಚ್ಚಯ್ಯನೊಮ್ಮೆ ಸಾವಳಿಗಿ ಜಾತ್ರೆಗೆ ಹೋಗಿದ್ದಾಗ ಯಾವಳೋ ಒಬ್ಬ ಹೆಂಗಸಿನ ಮೇಲೆ ಆಸೆಯಾಯ್ತು. ನೆರೆದ ಭಾರಿ ಜಾತ್ರೆಯಲ್ಲಿಯೇ ಕೂಡಿಬಿಟ್ಟ. ತಕ್ಷಣ ನಮ್ಮೂರ ನಾಕೈದು ಜನ ಅವನ ಭಕ್ತರು ನೋಡಿ, ಓಡಿಹೋಗಿ ದಿಕ್ಕಿಗೊಬ್ಬೊಬ್ಬರು ಸುತ್ತುಗಟ್ಟಿ ನಿಂತು ಉಟ್ಟ ಧೋತ್ರಗಳನ್ನು ಕಳಚಿ ಅವರ ಸುತ್ತ ಪರದೆಯಂತೆ ಹಿಡಿದು ಮರೆಮಾಡಿದರಂತೆ!

ಇನ್ನೊಂದು ಪವಾಡ ಕೇಳಿರಿ: ಒಮ್ಮೆ ಒಬ್ಬ ಗೌಡನ ಮನೆಗೆ ಹುಚ್ಚಯ್ಯ ಬಿನ್ನಾಯಕ್ಕೆ ಹೋಗಿದ್ದ. ಊಟ ಬಡಿಸುತ್ತಿದ್ದ ಅವನ ಹೆಂಡತಿಯನ್ನು ನೋಡಿ ಹುಚ್ಚಯ್ಯ "ಗೌಡಾ, ಈಕೀನ ನನಗೆ ಕೊಡೋ" ಎಂದನಂತೆ. ಗೌಡ ಕೊಟ್ಟ. ಕೊಟ್ಟು "ನನಗೇನ ಕೊಡ್ತಿಯಪ್ಪ" - ಅಂದನಂತೆ. ಹುಚ್ಚಯ್ಯ "ತಗೋ" ಎಂದು ತನ್ನ ಕಾಲ್ಮರಿಯನ್ನೇ ಕೊಟ್ಟನಂತೆ. ಆ ಕಾಲ್ಮರಿಯನ್ನು ಈಗಲೂ ಆ ಮನೆತನದವರು ದೇವರ ಮನೆಯಲ್ಲಿಟ್ಟು ಪೂಜಿಸುತ್ತಿದ್ದಾರೆ! ನಮ್ಮೂರವರನ್ನು ಕೇಳಿದರೆ ಇಂಥ ಸಾವಿರ ಪವಾಡ ಹೇಳಿಯಾರು. ಇವನ್ನು ಪವಾಡವೆಂದು ಒಪ್ಪಿಕೊಂಡು ಕಥೆಮಾಡಿ ಹೇಳುವ ಈ ಜನಗಳನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ನಮ್ಮ ಊರಿನಲ್ಲಿ ಆತ ಬಯಸಿಸ್ಸನ್ನು ಎರಡು ಮಾತಿಲ್ಲದೆ ಕೊಡುವ ಭಕ್ತರಿದ್ದಾರೆ. ಸುಳ್ಳಲ್ಲ, ಅವನು ಉಗಿದ ಉಗುಳನ್ನೂ ನುಂಗಿದ ಭಕ್ತರಿದ್ದಾರೆ. ಬಹುಶಃ ಎದುರಾಡಿದರೆ ಅವನು ನೊಂದು ಏನಾದರೂ ಅಂದುಗಿಂದಾನೆಂದು, ಹಾಗೇನಾದರೂ ಅಂದರೆ ಅದು ಹುಸಿ ಹೋಗುವುದಿಲ್ಲವೆಂದು ಹೆದರಿಕೊಂಡು ಜನ ಅವನನ್ನು ಒಪ್ಪಿರಬೇಕು. ನನ್ನ ಇತ್ತೀಚಿನ ಅಂದಾಜಿನ ಪ್ರಕಾರ ಅವನೊಬ್ಬ ವಿಷಯಾಸಕ್ತನಾದ ತಾಂತ್ರಿಕ ಸಿದ್ಧ. ಕೆಲವು ವಿಲಕ್ಷಣ ಶಕ್ತಿಗಳು ಅವನಲ್ಲಿದ್ದದ್ದು ನಿಜ. ಮತ್ತು ಆ ಶಕ್ತಿಗಳ ದುಡಿಮೆಯಿಂದ ಅವನು ಚಕ್ರಬಡ್ಡಿ ಸಮೇತ ಸುಖ ಪಡೆಯುತ್ತಿದ್ದ. ಮುಖದ ವರ್ಚಸ್ಸಿನಿಂದಾಗಿ ಅವನು ಸಾಕ್ಷಾತ್ ಶಿವನೆಂದು ಸಣ್ಣ ದೊರೆಸಾನಿ ನಂಬಿದ್ದರೆ ಅದು ಹೆಚ್ಚಲ್ಲ. ಆದರೆ ಹೋಗಿ ಹೋಗಿ ಇಂಥವನ ಪ್ರಭಾವಕ್ಕೆ ಒಳಗಾದಳಲ್ಲ - ಎಂದು ನನಗೂ ಹಳಹಳಿಯಾಯಿತೆಂದು ಮಾತ್ರ ಹೇಳಬಲ್ಲೆ. ಈಗ ಶೀನಿಂಗವ್ವನ ಮುಂದಿನ ಕಥೆ ಕೇಳೋಣ:

"ಹುಚ್ಚಯ್ಯನ ಹೆಸರನ್ನು ಈ ಹಿಂದೆ ನಾವು ಕೇಳಿದ್ದೆವಾದರೂ ಅಷ್ಟು ಗಮನಕೊಟ್ಟಿರಲಿಲ್ಲ. ಊರ ಭಕ್ತರೊಂದಿಗೆ ಅಷ್ಟೊಂದು ವಹಿವಾಟಿದ್ದವನು ಅರಮನೆಗ್ಯಾಕೆ ಈತನಕ ಬಂದಿರಲಿಲ್ಲವೆನ್ನುವುದೂ ಸೋಜಿಗವೇ. ಈಗ ಕರೆಯದೆಯೇ ಅರಮನೆಗೆ ಬಂದಿದ್ದ. ಅವನ ನಾಲಗೆ ಹುಸಿ ಹೋಗುವುದಿಲ್ಲವೆಂದು ಅನೇಕರನ್ನು ಕೇಳಿ ಖಾತ್ರಿ ಮಾಡಿಕೊಂಡಿದ್ದೆ. ಅವನ ಬಗ್ಗೆ ಹೇಳುವ ಜನ ಮತ್ತೆ ಮತ್ತೆ ಆ ಮಾತನ್ನು ಹೇಳುವ ಹಾಗೆ ಮಾಡುತ್ತಿದ್ದೆ.

ಈ ಮಧ್ಯೆ ಸಿಂಗಾರೆವ್ವ ದೇಸಾಯಿಯ ಮನ ಒಲಿಸಿಕೊಳ್ಳುವ ಖಟಪಟಿ ಮಾಡುತ್ತಿದ್ದಳು. ಅವನ ಬಯಲಾಟದ ಖಯಾಲಿ ತಪ್ಪಿಸಿ ಮನೆಯಲ್ಲಿ ಬಿದ್ದುಕೊಳ್ಳುವ ಹಾಗೆ ಮಾಡಬೇಕಿತ್ತು. ಅದಕ್ಕಾಗಿ ತಾನೇ ಮುಂದಾಗಿ ಸಲಿಗೆ ಬೆಳೆಸಿಕೊಂಡಳು. ಊಟಕ್ಕೆ ನೀಡುತ್ತಿದ್ದಳು. ಜಳಕ ಮಾಡಿಸುತ್ತಿದ್ದಳು. ಕಾಲು ತಿಕ್ಕುತ್ತಿದ್ದಳು. ಒಮ್ಮೆ "ನಿಮಗ ನಾ ಹೆಚ್ಚೋ ಬಯಲಾಟ ಹೆಚ್ಚೋ?" ಎಂದು ಕೇಳಿಯೂ ಬಿಟ್ಟಿದ್ದಳು. ಆದರೆ ದೇಸಾಯಿ, "ಹಾ ಪ್ರಿಯೆ, ಪ್ರಶಾಂತ ಹೃದಯೆ" ಅಂತೇನೋ ನಾಟಕದ ಪ್ರಾಸ ಹೇಳಿ ತಪ್ಪಿಸಿಕೊಂಡಿದ್ದ.

ಅಂತೂ ಹುಚ್ಚಯ್ಯನ ವಾಕ್ಯೆ ಆಗಿ ಎಂಟು ತಿಂಗಳಾದರೂ ದೇಸಾಯಿ ಸಿಂಗಾರೆವ್ವನನ್ನು ಮುಟ್ಟುವ ಗೋಜಿಗೆ ಹೋಗಲೇ ಇಲ್ಲ. ಈ ಅವಧಿಯಲ್ಲಿ ಹುಚ್ಚಯ್ಯನು ಅರಮನೆ ಕಡೆ ಸುಳಿದಿರಲಿಲ್ಲ.

ಅವನೆಲ್ಲೋ ಯಾತ್ರೆ ಹೋಗಿದ್ದವನು ಬಂದಿದ್ದಾನೆಂದು ಸುದ್ದಿ ಬಂತು. ಆದರೆ ಅವನಿದ್ದದ್ದು ಕುಮುದವ್ವನ ಗುಡಿ ಕಡೆಯ ಖಾಲಿ ಗುಡಿಸಲಿನಲ್ಲಿ. ಈ ಊರಿನ ಹೆಂಗಸರು ಕುಮುದವ್ವನ ಹೆಸರು ಹೇಳುವರೇ ಹೊರತು ಅವಳ ಗುಡಿಯ ಕಡೆಗೆ ಕಾಲಿಡುವುದಿಲ್ಲ. ಅಷ್ಟೇ ಅಲ್ಲ, ಮೈಲಿಗೆ ಮುಡಿಚಟ್ಟಾದಾಗ ಆ ಕಡೆ ಮುಖ ಕೂಡ ಮಾಡುವುದಿಲ್ಲ. ನಾನು ಪರವೂರಿನಲ್ಲಿ ಹುಟ್ಟು ಬೆಳೆದವಳಾದುದರಿಂದ ಅಂಥ

ಭಯಗಳೇನೂ ಇರಲಿಲ್ಲ. ಅಲ್ಲದೆ ಆ ಗುಡಿಸಲಿಗೂ ಕುಮುದವ್ವನ ಗುಡಿಗೂ ತುಂಬಾ ದೂರ. ಸಿಂಗಾರೆವ್ವನಿಗೂ ಹೇಳದೆ ಇಂದು ಹುಚ್ಚಯ್ಯನನ್ನು ನೋಡೇ ಬಿಡಬೇಕೆಂದು ಹೊರಟೆ. ಊರ ಸೀಮೆ ದಾಟಿರಬೇಕು, ಸುದೈವಕ್ಕೆ ಅವನೇ ಈ ಕಡೆ ಬರುತ್ತಿದ್ದ. ಅಡ್ಡಬಿದ್ದು,

“ಸ್ವಾಮಿ, ಗುರುತ ಸಿಕ್ಕಿತ?” - ಅಂದೆ.

“ನೀ ಅರಮನಿ ಶೀನಿಂಗವ್ವಲ್ಲಾ?” - ಅಂದ. ಅವನು ಗುರುತಿಸಿದ್ದಕ್ಕೆ ಸಂತೋಷಗೊಂಡು “ಹೌಂದ್ರಿಯಪಾ” - ಅಂದೆ.

“ಹೆಂಗೇನ್ರಿ ಮಕ್ಕಳಾಗತಾವಂತ ನಿಮ್ಮ ವಾಕ್ಯೆ ಆಗಿ ಎಂಟು ತಿಂಗಳಾಯ್ತು; ಇನ್ನs ಏನು ಆಗಲಿಲ್ಲ.”

- ಅಂದೆ. ಎದುರೆದುರಿಗೇ ನಿಮ್ಮ ನುಡಿ ಹುಸಿಯಾಯಿತೆಂದು ಹೇಳಿದ್ದು ಸರಿಯಾಗಲಿಲ್ಲವೆಂದು ಅನ್ನಿಸಿತು. ಯಾರು ಬಲ್ಲರು, ಅವ ಮೊದಲೇ ಹುಚ್ಚಯ್ಯ, ಇನ್ನೇನಾದರೂ ಆಡಿಬಿಟ್ಟರೆ ಒಂದು ಮಾಡಹೋಗಿ ಇನ್ನೊಂದಾಗಬಾರದಲ್ಲ ಎಂದು ಹೆದರಿದೆ. ಸದ್ಯ ಅಂಥದೇನೂ ನಡೆಯಲಿಲ್ಲ. ನನ್ನ ಮಾತು ಕೇಳಿ ಹುಚ್ಚಯ್ಯ ಹುಬ್ಬು ಗಂಟಿಕ್ಕಿಕೊಂಡು ಪಕ್ಕದ ಬಾಂದದ ಮೇಲೆ ಕೂತು. ನನ್ನ ಕಡೆಗೊಮ್ಮೆ ನೋಡಿ ಕಣ್ಣು ಮುಚ್ಚಿದ. ಬಹುಶಃ ಶಿವನೊಂದಿಗೆ ಮಾತಾಡುತ್ತಿದ್ದಾನೆ ಎಂದುಕೊಂಡೆ. ಶಿವನಿಗೆ ನಮ್ಮಾಸೆ ಮುಟ್ಟಲೆಂದು ನಾನೂ ಕೈ ಮುಗಿದು ಕೂತೆ. ಕಣ್ಣು ತೆರೆದ. ಶಿವನಾಜ್ಞೆ ಏನಾಯಿತೋ ಎಂದು ನನ್ನೆದೆ ಹಾರುತ್ತಿತ್ತು.

“ಹಗಲಲ್ಲ, ರಾತ್ರಿ ಅಲ್ಲ, ಮೂರು ಸಂಜಿಕ ಶಿವ ಅರಮನೀಗಿ, ಬರತಾನ, ನೀ ಮುಂದ ನಡಿ” ಅಂದ. ಎದೆ ಹಗುರಾಗಿ ಮನೆಕಡೆ ಓಡಿಬಂದೆ.

ಹುಚ್ಚಯ್ಯನಿಗೆ ಭೇಟಿಯಾದದ್ದನ್ನಾಗಲಿ, ಅವನು ಅರಮನೆಗೆ ಬರುವುದನ್ನಾಗಲಿ ಸಿಂಗಾರೆವ್ವನಿಗೆ ಹೇಳಲೇ ಇಲ್ಲ. ಉತ್ಸಾಹದಿಂದ ನಾನು ಕಳೆಕಳೆಯಾಗಿರುವುದನ್ನು ನೋಡಿ “ಅದೇನs ಅಷ್ಟೊಂದು ಉಮೇದಿ ಉಕ್ಕತೈತಿ?” ಎಂದು ಕೇಳಿಯೂ ಬಿಟ್ಟಳು. ನನ್ನ ಒಡತಿ ಯಾ ಗೆಳತಿಗೆ ಉಪಯುಕ್ತವಾದೊಂದು ಕೆಲಸವನ್ನ, ಅವಳಿಂದ ಹೇಳಿಸಿಕೊಳ್ಳದೆಯೇ ಮಾಡಿದ್ದು ಗೊತ್ತಾದಾಗ ಅವಳ ಬೆರಗಿನ ಮತ್ತು ಮೆಚ್ಚುಗೆಯ ಮುಖ ನೋಡಬೇಕೆಂದು ನನ್ನ ತವಕ. ಸಂಜೆಯಾಗುತ್ತಲೂ ಅರಮನೆಯ ತೊಲೆಬಾಗಿಲು ತೆರೆದಿಟ್ಟು ಅಲ್ಲೇ ಕಣ್ಣುನೆಟ್ಟು ಕೂತೆ. ಹೊತ್ತು ಮುಳುಗುತ್ತಿದ್ದರೂ ಆತ ಬರಲಿಲ್ಲ. ಅಷ್ಟರಲ್ಲಿ ಸಿಂಗಾರೆವ್ವ ಓಡಿಬಂದು “ಏ ಶೀನಿಂಗೀ, ಹಿತ್ತಲಾಗ ಹುಚ್ಚಯ್ಯ ಬಂದಾನ ಬಾರಗs” - ಎಂದು ಕರೆದಳು. ಇಬ್ಬರೂ ಅತ್ತ ಓಡಿದೆವು.

ಹುಚ್ಚಯ್ಯ ಹಿತ್ತಲ ಬಣಿವೆಯ ಬಳಿ ಕೂತಿದ್ದ. ಇಬ್ಬರೂ ಹೋಗಿ ನಮಸ್ಕಾರ ಮಾಡಿದೆವು. ಸಿಂಗಾರೆವ್ವನನ್ನು ಕುರಿತು “ಬಾ ತಾಯಿ” - ಅಂದ. “ಕೈ ತಾ” ಅಂದ. ಅವಳು ಬಲಗೈ ನೀಡಿದಾಗ ಅಂಗೈ ಗೆರೆ ಎಣಿಕೆ ಹಾಕಿ ನನ್ನ ಕಡೆ ಓರೆನೋಟ ಬೀರಿದ. ಅವನ ಚಂಚಲ ಕಣ್ಣುಗಳಲ್ಲಿ ಬೆಳಕಾಡುತ್ತಿತ್ತು. ಆ ಕರಿಮುಖದಲ್ಲೂ ಬಿಸಿನೆತ್ತರಾಡಿ ಕೆಂಪಗಾಗಿತ್ತು. ಅವಳ ಮುಖ ನೋಡುವುದಕ್ಕೆ ಅವನು ಹೆದರುತ್ತಿದ್ದನೋ ಏನೋ, ಅವಳ ಕೈ ಹಿಡಿದ. ಅವನ ಕೈ ನಡುಗುತ್ತಿದ್ದುದು ನನ್ನ ಗಮನಕ್ಕೆ ಬಂತು.

“ಫಲ ಉಂಟು ತಾಯಿ, ಆದರೆ ಅಮಾಸೀ ದಿನ ಶಿವನಿಗೆ ಒಂದು ಪೂಜಿ ಆಗಬೇಕು. ಈ ಪೂಜಿಗಿ ನೀ ಅಲ್ಲದs ಇನ್ನ್ಯಾರೂ ಇರಬಾರದು”

- ಈ ಮಾತು ಹೇಳುವಾಗ ಅವನ ಮುಖ ಬಿಳಿಚಿಕೊಂಡಿತು. ಎರಡು ಮೂರು ಸಲ ಉಗುಳು ನುಂಗಿದ. ನಾಲಗೆಯಿಂದ ತುಟಿ ಸವರಿಕೊಂಡು ಒದ್ದೆ ಮಾಡಿಕೊಂಡ. ಆದರೆ ಸಿಂಗಾರೆವ್ವ ಒಬ್ಬಳೇ ಇರಬೇಕೆನ್ನುವ ಮಾತನ್ನು ನಾನು ಒಪ್ಪಲಿಲ್ಲ. ಅವಳಂತೂ ಹೆದರಿ ಕೊಟ್ಟ ಕೈ ಹಿಂತೆಗೆದುಕೊಂಡು ಕಣ್ಣರಳಿಸಿ ಆದಾಗದೆಂದು ಹೇಳೆಂಬಂತೆ ನನ್ನ ಕಡೆ ನೋಡಿದಳು.

“ಅಧೆಂಗರಿ ಯಪಾ, ದೊರೆಸಾನಿ ಒಬ್ಬಾಕೀನs ಹೆಂಗಿದ್ದಾಳು? ಗುರು ಹಿರಿಯರಿದ್ದ ಮನಿ ಅಂದ ಮ್ಯಾಲ ಅವರ್ನ ಬಿಟ್ಟ ನಮಗೆ ನಾವs ಪೂಜೀ ಮಾಡಾಕಾದೀತ?” - ಎಂದೆ..

ಅವನು ಬೇರೆ ರೀತಿಯ ವ್ಯವಸ್ಥೆಗೆ ಒಪ್ಪಲೇ ಇಲ್ಲ. ಗಂಡ ಹೆಂಡತಿ ಇಬ್ಬರೂ ಪೂಜೆ ಮಾಡಲಿ - ಅಂದೆ. ಅದಕ್ಕೂ ಒಪ್ಪಲಿಲ್ಲ. ಕೊನೆಗೆ "ಇಚ್ಛಾ ಇಲ್ಲದಿದ್ದರ ಬಿಡರಿ" - ಅಂದ. ಇನ್ನೆಲ್ಲಿ ಅವನು ಎದ್ದುಹೋಗುತ್ತಾನೋ ಎಂದು ಆತಂಕವಾಗಿ.

"ಸಿಂಗಾರೆವ್ವನ ಜೋಡಿ ನಾ ಇದ್ದರ ಆದೀತೇನ್ರಿ?" - ಅಂದೆ, "ಶಿವನಿಚ್ಛೆ" - ಅಂದ. ಪೂಜೆ ಅರಮನೆಯಲ್ಲೇ, ಸರಿರಾತ್ರಿ ಸುರುವಾಗಬೇಕೆಂದ. ಪೂಜಾಸಾಮಾಗ್ರಿಯ ಪಟ್ಟಿ ಹೇಳಿದ. ಆ ದಿನ ರಾತ್ರಿ ಸುಮಾರಿಗೆ ಹಿತ್ತಲ ಬಾಗಿಲಿಂದ ಬರುವುದಾಗಿ ಹೇಳಿ ಅದೇ ಬಾಗಿಲಿನಿಂದ ಮಾಯವಾದ.

ನಾವು ಭಯ ಮತ್ತು ಸಡಗರ ಎರಡನ್ನೂ ಅನುಭವಿಸುತ್ತಿದ್ದೆವು. ಭಯ, ಇದು ಕಳ್ಳ ವ್ಯವಹಾರವಾಗಿದ್ದಕ್ಕೆ; ಸಡಗರ, ಹ್ಯಾಗೂ ಮಕ್ಕಳಾಗುತ್ತವಲ್ಲಾ - ಎಂಬುದಕ್ಕೆ. ಆದರೆ ಇದಕ್ಕೆ ಅಡಚಣೆಗಳಿದ್ದವು. ಸಿಂಗಾರೆವ್ವ ಎಷ್ಟೆಂದರೂ ಹೊಸಮನೆಗಿತ್ತಿ. ಹಿರಿಯರನ್ನು ನಿರ್ಲಕ್ಷಿಸಿ, ಇಂಥ ಪೂಜೆ ಮಾಡಿಸುವುದು ಸೊಸೆಯೊಬ್ಬಳಿಗೆ ಶೋಭಿಸುವ ನಡೆಯಲ್ಲ. ಮನೆಯಲ್ಲಿ ಗಂಡನಿದ್ದಾನೆ. ಅವನೇ ಮುಂದೆ ನಿಂತು ಮಾಡಿಸಿದ್ದರೆ ಅದು ಬೇರೆ ಮಾತು. ಗಂಡಸರ ಹೆದರಿಕೆಯಲ್ಲೇ ಬೆಳೆದ ನಮಗೆ ದೇಸಾಯಿಗೆ ತಿಳಿಸದೆ ಪೂಜೆ ಮಾಡಿಸೋದು ಹ್ಯಾಗೆಂದು ಹೆಜ್ಜೆಹೆಜ್ಜೆಗೆ ಚಿಂತೆಯಾಯಿತು. ನಾನು ಆ ರಾತ್ರಿ ಹಿರಿಯ ದೊರೆಸಾನಿಯ ಹತ್ತಿರ ಹೋಗಿ ಅದು ಇದು ಮಾತಾಡಿ, ಹುಚ್ಚಯ್ಯನ ದಯದಿಂದ ಮಕ್ಕಳನ್ನ ಪಡೆಯಬಹುದಲ್ಲಾ ಎಂದು ಸೂಚಿಸಿ ಅವಳ ಅಭಿಪ್ರಾಯ ತಿಳಿಯಲು ಪ್ರಯತ್ನಿಸಿದೆ. ಅವಳು ಹೌಂದಲ್ಲಾ ಎಂದರೆ ನಮ್ಮ ಕೆಲಸ ಸರಳವಾಗುತ್ತಿತ್ತು. ಹಿರಿಯಳಿಗೆ ತಿಳಿಸಿಯೇ, ಅವಳ ಅಪ್ಪಣೆಯಿಂದಲೇ ಪೂಜೆ ಮಾಡಿಸಿದ ಹಾಗಾಗುತ್ತಿತ್ತು. ನಾಳೆ ದೇಸಾಯಿ ಕೇಳಿದ ಎನ್ನೋಣ, ಅವರವ್ವನ ಕಡೆ ಬೆರಳು ಮಾಡಿ ತೋರಿಸಬಹುದಲ್ಲ - ಎಂದು ನಮ್ಮ ಲೆಕ್ಕ. ಆದರೆ ಆ ಮುದುಕಿ ಒಂದೇ ಮಾತಿನಲ್ಲಿ.

"ಬ್ಯಾಡs ಮಗಳs. ಜಂಗಮರಿಗೂ ಈ ಅರಮನಿಗೂ ಆಗಿ ಬರಾಣಿಲ್ಲ. ಹಿಂದೊಬ್ಬ ಜಂಗಮ ಈ ವಂಶ ನಿರ್ವಂಸಾಗಲೆಂತ ಅರಮನಿ ಮ್ಯಾಲ ಬೂದಿ ಹಾರಿಸ್ಯಾನ. ಆ ನನ್ನ ಹಾಟ್ಯಾ ಹುಚ್ಚಯ್ಯನೂ ಶಾಪ ಹಾಕ್ಯಾನ. ಅದಕ್ಕs ನಾವ್ಯಾರೂ ಜಂಗಮರ್ನ ಕರೆಯೋದೂ ಇಲ್ಲ. ಅವರ್ಯಾರೂ ಬರೋದೂ ಇಲ್ಲ. ಹುಚ್ಚಯ್ಯ ಮೊದಲ ನಾಡ ಹಲಕಟ್ಟ ಅವ. ಆ ಭಾಡ್ಯಾ ನಮ್ಮ ಮನ್ಯಾಗ ಕಾಲಿಡೋದs ಬ್ಯಾಡಾ"

ಎಂದು ಸ್ಪಷ್ಟವಾಗಿ ಹೇಳಿಬಿಟ್ಟಳು. ನನ್ನ ತೊಡೆಯೊಳಗಿನ ಕಸುವೇ ಉಡುಗಿ ಹೋಯಿತು. ಆ ರಾತ್ರಿ ನನಗೆ ನಿದ್ದೆ ಬರಲೇ ಇಲ್ಲ.

ಇತ್ತ ಸಿಂಗಾರೆವ್ವನಿಗೂ ಹಾಗೇ ಆಯಿತು. "ಹುಚ್ಚಯ್ಯನ ಮಾತ ಹುಸಿ ಹೋಗೋಣಿಲ್ಲಂತ, ಖರೇ ಏನು?" ಎಂದು ಮೆಲ್ಲಗೆ ದೇಸಾಯಿಯನ್ನು ಕೇಳಿದರೆ ಅವನು ಸಿಡಿದು "ಅವ ಲಫಂಗ ಸ್ವಾಮಿ. ಅವನ ಮಾತೇನ ಖರೆ ಬಂದಾವ, ತಗಿ ತಗೀರಿ" - ಎಂದನಂತೆ. ಅಂತೂ ಹುಚ್ಚಯ್ಯನಿಗೂ ಈ ಮನೆತನಕ್ಕೂ ಕೂಡಿ ಬರುವುದಿಲ್ಲವೆಂದಾಯಿತು. ನಾವು ಮಾಡಿಸಬೇಕೆಂದ ಪೂಜೆಗೆ ಹಿರಿಯರ ಸಮ್ಮತಿ ಇಲ್ಲವೆನ್ನುವುದೂ ಸ್ಪಷ್ಟವಾಯಿತು. ಬೆಳಿಗ್ಗೆದ್ದವರೇ ಹಲ್ಲು ಕೂಡ ಉಜ್ಜದೆ ಇಬ್ಬರೂ ಇದನ್ನೇ ಮಾತಾಡಿದೆವು. ಸಿಂಗಾರೆವ್ವ ತಾ ಕಂಡ ಕನಸನ್ನು ಬೇರೆ ಹೇಳಿದಳು. ಅರಮನೆಯ ಮೇಲೆ ಹದ್ದು ಹಾರುತ್ತಿದ್ದಂತೆ, ಬೆತ್ತಲೆ ಮೈಗೆ ಎಣ್ಣೆ ಹಚ್ಚಿಕೊಂಡು, ಕೆಂಪು ಹೂ ಮಾಲೆ ಧರಿಸಿದ್ದ ದೇಸಾಯಿ ಕೋಲಿನಿಂದ ಅವುಗಳ ಜೊತೆ ಆಟ ಆಡುತ್ತಿದ್ದಂತೆ ಕನಸಾಯಿತಂತೆ. ಕನಸಿನ ಅರ್ಥ ನಮಗಾಗಲಿಲ್ಲ. ಶುಭಲಕ್ಷಣವಂತೂ ಆಗಿರಲಾರದೆಂದು ತರ್ಕ ಮಾಡಿದೆವು.

ಹಿರಿಯ ದೊರೆಸಾನಿ ಹುಚ್ಚಯ್ಯನ ಶಾಪದ ವಿಚಾರ ಹೇಳಿದ್ದಳಲ್ಲ, ಅದೇನೆಂದು ಕೇಳಿದೆ. ಒಮ್ಮೆ ಹಿಂದಿನ ದೊಡ್ಡ ದೇಸಾಯಿ ಹೊಸ ಹೆಂಡತಿಯೊಂದಿಗೆ ಶಯ್ಯಾಗೃಹದಲ್ಲಿ ಮಲಗಿರಬೇಕಾದರೆ ಇದೇ ಹುಚ್ಚಯ್ಯ ಸರಿರಾತ್ರಿಯಲ್ಲಿ ಅದ್ಯಾವುದೋ ಮಾಯೆಯಿಂದ ಅರಮನೆಯಲ್ಲಿ ನುಗ್ಗಿದ್ದನಂತೆ. ಹೋಗಿ ದೇಸಾಯಿ ಮಲಗುವ ಕೋಣೆಯ ಬಾಗಿಲು ತಟ್ಟಿದ. ಇಷ್ಟು ಹೊತ್ತಿನಲ್ಲಿ ಅದ್ಯಾರು ಬಂದಿದ್ದಾರಪ್ಪ ಎಂದು ಬಾಗಿಲು ತೆರೆದರೆ ಎದುರಿಗೆ ಹುಚ್ಚಯ್ಯ ನಿಂತಿದ್ದ. ದೇಸಾಯಿಯ ನೆತ್ತರು ಕುದಿಯಿತು. ದೊರೆಸಾನಿ ಗಾಢ ನಿದ್ದೆಯಲ್ಲಿ ಅಸ್ತವ್ಯಸ್ತವಾಗಿ ಮಲಗಿದ್ದಳು. ಹುಚ್ಚಯ್ಯ ಏನು ಎತ್ತ ಅನ್ನದೆ "ದೇಸಾಯಿ, ಇಂದು ಶಿವನ ಹಾಸಿಗೆ ಇದs" ಎನ್ನುತ್ತ ಹೋಗಿ

ದೊರೆಸಾನಿಯ ಪಕ್ಕದಲ್ಲಿ ಮಲಗಿದನಂತೆ! ದೇಸಾಯಿ "ಹುಚ್ಚಯ್ಯ, ಇಂದು ಶಿವನ ಸೇವಾ ಇದs" ಎಂದು ಹೇಳಿ ಕೋಲು ಹಿಡಿದುಕೊಂಡು ಹುಚ್ಚಯ್ಯನನ್ನು ಎಲ್ಲೆಂದರಲ್ಲಿ ಬಾರಿಸಿದ. ಹುಚ್ಚಯ್ಯ ಓಡಿ ಹೋಗುತ್ತ ಅರಮನೆಯ ಮೇಲೆ ಭಸ್ಮತೂತಿ ನಿನ್ನ ವಂಸ ನಿರ್ವಂಸವಾಗಲೆಂದು ಶಾಪ ಹಾಕಿದನಂತೆ.

ಶಾಪದ ವಿಚಾರ ಇಬ್ಬರಿಗೂ ಬಗೆಹರಿಯಲಿಲ್ಲ. ಯಾಕೆಂದರೆ ನಿರ್ವಂಸವಾಗಲೆನ್ನುವ ಶಾಪ ಒಂದು ಕಡೆ; ಮಕ್ಕಳಾಗುತ್ತವೆನ್ನುವ ಭರವಸೆ ಇನ್ನೊಂದು ಕಡೆ. ಯಾವುದನ್ನ ನಂಬಬೇಕು ಯಾವುದನ್ನ ಬಿಡಬೇಕು? ಅದೇನಾದರೂ ಆಗಿರಲಿ ಹುಚ್ಚಯ್ಯನ ಬಗೆಗಿನ ನಮ್ಮ ನಂಬಿಕೆಯಂತು ಹಾರಿತು. ಅವ ಹಿತ್ತಲ ಬಾಗಿಲಿನಿಂದ ಬಂದುದರ ಅರ್ಥವೂ ಸ್ಪಷ್ಟವಾಯಿತು. ಶಿವ ಮಾಡಿದಂತಾಗಲಿ, ಹಿರಿಯರ ಅನುಮತಿಯಿಲ್ಲದೆ ಇಂಥ ಕಾರುಬಾರಿಗೆ ಕೈಹಾಕುವುದೇ ಬೇಡವೆಂದು ತೀರ್ಮಾನಿಸಿದೆವು.

ಅಮವಾಸ್ಯೆ ಬಂತು. ಈ ಮಧ್ಯೆ ಹುಚ್ಚಯ್ಯನಿಗೆ ನಮ್ಮ ತೀರ್ಮಾನ ಹೇಳೇನೆಂದರೆ ಅವನು ಊರಲಿರಲಿಲ್ಲ. ಬಂದಾಗ ಹೇಳಿದರಾಯ್ತೆಂದುಕೊಂಡೆವು. ಆದರೆ ನಾವೋ ನರ ಮನುಷ್ಯರು; ನಮ್ಮ ನಮ್ಮ ಮನಸ್ಸುಗಳನ್ನೇ ತಿಳಿಯಲಾಗುವುದಿಲ್ಲ. ಇನ್ನು ಶಿವನ ಮನಸ್ಸನ್ನು ತಿಳಿಯಲಾದೀತೆ? ನಂದಗಾಂವಿಯಿಂದ ಸಿಂಗಾರೆವ್ವನ ಅಪ್ಪ, ಗೌಡ ಬಂದು ಒಕ್ಕರಿಸಿದ.

ಹೋದ ಸಲ ತಂದೆ ಮಗಳಿಗೆ ಜಗಳವಾಗಿತ್ತಲ್ಲ, ಇನ್ನು ಮೇಲೆ ಈ ಕಡೆ ಅವನು ಕಾಲಿಡಲಾರನೆಂದೇ ನಂಬಿದ್ದೆವು. ಆದರೆ ಅಮವಾಸ್ಯೆಯ ದಿನವೇ ಮಟಮಟ ಮಧ್ಯಾಹ್ನ ಸರಗಂ ದೇಸಾಯಿಯೊಂದಿಗೆ ನಗುನಗುತ್ತಾ ಅರಮನೆಗೆ ಬಂದ. ಹೋದ ಸಲದ ಅವಮಾನಗಳು ಅವನ ಮುಖದ ಮೇಲೆ ಒಂದೂ ಗೆರೆ ಮೂಡಿಸಿರಲಿಲ್ಲ. ಸಾಲದ್ದಕ್ಕೆ ಗೆಲುವಾಗಿದ್ದ, ಮತ್ತು ಯಾರೂ ಏನು ಹೇಳಿದರೂ ನಗಲು ಸಿದ್ಧನಾಗಿದ್ದ. ಬಂದವನು ನನ್ನನ್ನೂ ಮಗಳನ್ನೂ ಸಂತೋಷದಿಂದಲೇ ಮಾತಾಡಿಸಿದ. ಊಟಕ್ಕೆ ಕೂತಾಗ ದೇಸಾಯಿಯನ್ನು ಹೊಗಳಿದ.

ಊಟವಾದ ಮೇಲೆ ಮಾವ ಅಳಿಯ ಇಬ್ಬರೂ ಎಲಡಿಕೆ ಹಾಕುತ್ತ ಕೂತಾಗ ಸಿಂಗಾರೆವ್ವನನ್ನು ಅಲ್ಲಿಗೆ ಕರೆಸಿದರು. ಲೋಕಾಭಿರಾಮವೆಂಬಂತೆ ಗೌಡ "ಏನವಾ ಸಿಂಗಾರೆವ್ವ, ಹೋದಸಲ ಬಂದಾಗ ಗಂಡಮಗನ್ನ ಹಡದ ನೋಡಾಕ ನನ್ನ ಕರಸ್ತೇನಂತ ಅಂದಿದ್ದಿ. ಭಾಳ ದಿನ ಕರಿಬರಿಲಿಲ್ಲ. ಅದಕ್ಕ ಹಡದಿದ್ದಿಯೋ ಹೆಂಗಂತ ನಾನs ನೋಡಿಕೊಂಡ ಹೋಗಾಕ ಬಂದೆ" ಅಂದ. ಕತ್ತರಿಸಿದ ಹಲ್ಲಿಯ ಬಾಲದಂತೆ ಮಗಳು ವಿಲಿವಿಲಿ ಒದ್ದಾಡಿದಳು. ಕೋಪದಿಂದ ಉಸರಿನ ರಭಸವೇರಿ ಅವಳ ಮೂಗಿನ ತುದಿ ನಡುಗುತಿತ್ತು. ಆಕೆ ಮಾತಾಡಲಿಲ್ಲ. ನನಗೂ ಧೈರ್ಯವಾಗಲಿಲ್ಲ. ಅಲ್ಲಿ ನಿಲ್ಲದೆ ಹೋಗಬೇಕೆಂದು ಹಿಂತಿರುಗುವಷ್ಟರಲ್ಲಿ - "ಅರರರ, ಹೇಳಬೇಕಾದ ಸುದ್ದೀನs ಮರತಬಿಟ್ಟಿನಲ್ಲಾ; ನಿನಗೊಬ್ಬ ತಮ್ಮ ಹುಟ್ಯಾನವ್ವ! ನಿನ್ನ ಚಿಗವ್ವ ಗಂಡು ಮಗನ್ನ ಹಡದ್ದಾಳ; ಭಾಳ ದಿನಕ್ಕೆ ಹೆಂಗೂ ಒಬ್ಬ ಗಂಡ ಮಗ ಹುಟ್ಟಿದ, ಇನ್ನ ಮಕ್ಕಳು ಸಾಕೋ ಶಿವನs ಅಂದರ, ನಿನ್ನ ಇನ್ನೊಬ್ಬ ಚಿಗವ್ವನೂ ಬಸರಾಗ್ಯಾಳ! ಕೊಡೋ ದೇವರು, ನೋಡ್ರಿ ದೇಸಾಯರs, ಬ್ಯಾಡಂದವರಿಗಿ ಬೇಕಬೇಕಂತ ಕೊಡತಾನ, ಬೇಕಂದವರು ಉಡಿ ಒಡ್ಡಿ ಹಲುಬಿದರೂ ಕೊಡೋದಿಲ್ಲ! ಇದಕ್ಕೇನಂತೀರಿ?" ಎಂದು ದನಿಯೇರಿಸಿ ಹೇಳಿ, ಬಾಯಿಯೊಳಗೆ ಎಲೆ ತುರುಕಿ ಮಗಳ ಕಡೆ ನೋಡಿ ವ್ಯಂಗ್ಯ ನಕ್ಕ. ತಂದೆ ಮಗಳ ಸಂಬಂಧದ ಹುಳುಕು ದೇಸಾಯಿಗೇನು ಗೊತ್ತು? "ಕಂದನಾ ಆಗಮನದ ಮುಂದೆ ಇನ್ನುಳಿದ ಆನಂದಗಳು ಕುಂದೆಂಬುದರಲ್ಲಿ ಸಂದೇಹವೇನು ಮಾವಾ" ಎಂದೇನೋ ಪ್ರಾಸ ಒದರಿದ. ಆ ಪ್ರಾಸವನ್ನೇ ಮೆಚ್ಚಲಿದ್ದ ತಂದೆಯ ಮಾತನ್ನು ಕತ್ತರಿಸಿ ಸಿಂಗಾರೆವ್ವ ಹೇಳಿದಳು;

"ಭಾಳ ಚೆಲೋ ಆತ ಬಿಡಪ. ನಿನ್ನ ಸಂಸ್ಥಾನ ನಿನಗs ದಕ್ಕೊ ಹಾಂಗಾಯ್ತು. ಮರ್ಯಾ ತಿರಿಗಿ ಊರಿಗೆ ಬಂದಾದೇನು?"

ಹೀಗ್ಯಾಕೆ ಹೇಳಿದಳೆಂದು ನನಗೆ ಗೊತ್ತಿತ್ತು. ಗೌಡನಿಗೂ.

“ಸತ್ತ ಹೋದನಲ್ಲವಾ, ಸತ್ತವರು ಮತ್ತೆಲ್ಲಿ ಬರತಾರ? ಈ ಗೌಡನ ಎದುರಿಗೆ ಇನ್ನೂ ತನಕ ಯಾರೂ ನಿಂತಿಲ್ಲವಾ. ಅಂಥವರ್ನ ಇಲ್ಲಾ ದೇವರು ಮುರೀತಾನ, ಇಲ್ಲಾ ನಾ ಮುರೀತೀನಿ” ಗೌಡನ ಕಣ್ಣು ಕ್ರೂರವಾಗಿ ಇದು ನಿನಗೂ ಎಚ್ಚರಿಕೆ ಎಂಬಂತೆ ಮಗಳನ್ನು ನೋಡಿದವು. ಸಿಂಗಾರೆವ್ವ ಹತಾಶಳಾಗಿದ್ದಳು. ಇವಳನ್ನಿರಿಯುವುದಕ್ಕೆ ಅವನು ಮುದ್ದಾಂ ಪೂರ್ವ ತಯಾರಿ ಮಾಡಿಕೊಂಡು ಬಂದಿದ್ದ. ನೊಂದ ದನಿಯಲ್ಲಿ, ಆದರೂ ಕೊನೆಯ ಅಸ್ತ್ರದ ಹಾಗೆ “ಆಯ್ತಲ್ಲಪ್ಪ, ಗಂಡಮಗ ಹುಟ್ಯಾನಂತ ಅರಮನ್ಯಾಗ ಪಾಲಾ ಬೇಡಾಕ ಬಂದಿಲ್ಲ ಹೌಂದಲ್ಲೋ?” - ಎಂದಳು. ಆದರೆ ಗೌಡ ಚಂಡಾಲ. ಇಂಥ ಮಾತುಗಳನ್ನ ಮೊದಲೇ ನಿರೀಕ್ಷಿಸಿದ್ದಂತೆ “ಅದಕ್ಕs ಬಂದೀನವ ನಿನಗೂ ದೇಸಾಯರಿಗೂ ಹೇಳಿ ಹೋಗೋಣಂತ ಬಂದೆ; ನೀವ್ಯಾಕ ನನ್ನ ಮಗನ್ನ ದತ್ತಕ ತಗೋಬಾರದು?” ಅಂದ.

ಏನಪಾ, ತಂದೆಯೆಂಬವ ಮಗಳಿಗಾಡೋ ಮಾತುಗಳ ಇವು? ಬೇರು ಹಿಡಿದಲುಗಿದ ಬಳ್ಳಿಯ ಹಾಗೆ ಸಿಂಗಾರೆವ್ವ ಗಡಗಡ ನಡುಗಿ ಜೀವದಾನ ಮಾಡೆಂಬಂತೆ ಗೌಡನ ಕಡೆ ದೈನ್ಯದಿಂದ ನೋಡಿದಳು. ಈಸಲ ಕುಡಗೋಲಿನ ಹಾಗೆ ನಗೆಯನ್ನು ಬಳಸಿದ. ಸಿಂಗಾರೆವ್ವನಿಗೆ ಮತ್ತೆ ಕೋಪ ಬಂತು. ಈಗಷ್ಟೇ ಹೊತ್ತು ಮುಳುಗುತ್ತಿತ್ತಲ್ಲ. ಆ ಸಂಜೆ ಮುಗಿಲಿನ ಕೆಂಪೆಲ್ಲ ಅವಳ ಕಣ್ಣೊಳಗೆ ಗಟ್ಟಿಗೊಂಡ ಹಾಗಿತ್ತು. ಕಣ್ಣಂಚಿನಲ್ಲಿ ಒಡೆದ ಹನಿ ನೆತ್ತರಿನಂತೆ ಕಂಡಿತು. ಗೆದ್ದ ಗೌಡ ಕಿಸಕ್ಕನೆ ನಕ್ಕು ದೇಸಾಯಿಯ ಕಡೆ ನೋಡಿ “ನೋಡ್ರಿ ವಿಚಾರಮಾಡ್ರಿ ದೇಸಾಯರs ನನ್ನ ಮಗನ್ನ ಬೇಕಾದ್ರ ದತ್ತಕ ಕೊಡಾಕ ನಾ ತಯಾರಿದ್ದೀನಿ.” ಅಂದ. ದೇಸಾಯಿ ಸುಮ್ಮನೆ ಎದ್ದ.

ತಂದೆ ಮಗಳಿಬ್ಬರೂ ಪರಸ್ಪರ ವೈರಿಗಳಾಗಿದ್ದರು. ಸದ್ಯ ಬೇರೆ ಆಯುಧಗಳಿರಲಿಲ್ಲವಾದ್ದರಿಂದ ಮಾತುಗಳಿಂದಲೇ ಇನ್ನೊಬ್ಬರ ಎದೆ ಸೀಳಲು ಹವಣಿಸುತ್ತಿದ್ದರು. ಗೌಡನಂತೂ ಒಂದೊಂದು ಮಾತಾಡಿ, ಅದು ನಟ್ಟಿಯೋ ಇಲ್ಲವೋ ಎಂಬಂತೆ ಮಗಳ ಮುಖ ನೋಡುತ್ತಿದ್ದ. ನಿಜ ಹೇಳಬೇಕೆಂದರೆ ಅವನ ಪುತ್ರೋತ್ಸವವನ್ನು ಆನಂದದಿಂದ ಆಚರಿಸಲು ನಾವಿಬ್ಬರೂ ಸಿದ್ದರಿದ್ದೆವು. ಸಿಂಗಾರೆವ್ವನಿಗೇನು ಕರುಳಿಲ್ಲವೆ? ಆಕಳು ಕರು ಹಾಕಿದರೇ ಹಿಗ್ಗುವವಳು ತನ್ನ ಚಿಕ್ಕಮ್ಮ ಗಂಡು ಹಡೆದಾಗ ಸಂತೋಷಪಡದೆ ಇರುತ್ತಾಳೆಯೇ? ಆದರೆ ಗೌಡನ ಮಾತು ಅವಳೆದೆಯಲ್ಲಿ ವಿಷಬಿತ್ತಿ ಸಂತೋಷಗಳೇ ಮೊಳೆಯದ ಹಾಗೆ ಮಾಡಿದ್ದವು. ಗೌಡನಂತೂ ಹೇಳಿಕೇಳಿ ಅಗ್ಗದ ಮನುಷ್ಯ. ಈಗ ಸಿಂಗಾರೆವ್ವ ತುಸು ಹಣ ಚೆಲ್ಲಿದ್ದರೆ ಅಥವಾ ಒಂದು ಆಭರಣ ಎಸೆದಿದ್ದರೆ ಕುಲುಕುಲು ನಗುತ್ತ “ಹಾಂಗ ಮಗಳs. ಹೀಂಗ ಮಗಳ” - ಎಂದು ಹಸ್ತ ಹೊಸೆಯುತ್ತಿದ್ದನೆಂದು ನಾ ಬಲ್ಲೆ. ಹೀಗೆ ಮಾಡಿ ಇಡೀ ಅರಮನೆ ನುಂಗುವ ಸಂಚು ಮಾಡುತ್ತಿದ್ದನೆಂದೂ ಬಲ್ಲೆ. ಹೆಣಕ್ಕೇ ಮಗಳನ್ನು ಮದುವೆ ಮಾಡಿಕೊಟ್ಟವನು ಇನ್ಯಾವುದಕ್ಕೆ ಹೇಸಿಕೊಂಡಾನು?

ನಾನು ಹೋದಾಗ ಸಿಂಗಾರೆವ್ವ ಅಳುತ್ತಿರಲಿಲ್ಲ. ಎದೆಯನ್ನು ಕಲ್ಲಿನಂತೆ ಗಟ್ಟಿ ಮಾಡಿಕೊಂಡಿದ್ದಳು. ಮನಸ್ಸಿನಲ್ಲಿ ಅವಮಾನದ ಸುಳಿವಾಗಲೀ, ಸರಿತಪ್ಪುಗಳ ಹೊಯ್ದಾಟವಾಗಲೀ ಇರಲಿಲ್ಲ. ನನಗೆ ಸಮಾಧಾನವೇ ಆಯಿತು. ಮಾತಿಲ್ಲದೆ ಅವಳ ಪಕ್ಕದಲ್ಲಿ ಕೂತೆ.

ಎಷ್ಟು ಹೊತ್ತು ಹೀಗೇ ಕೂತಿದ್ದೆವೋ, ಆಗಲೇ ಮನೆಯಲ್ಲಿ ಕತ್ತಲಾಗಿತ್ತು. ಅಷ್ಟರಲ್ಲಿ ದೇಸಾಯಿ ಲುಟುಲುಟು ಬಂದು “ಮಾವನವರು ಊರಿಗೆ ಹೊರಟಾರ. ಅವರ್ನ ಕಳಿಸಿ ನಾವು ಹಂಗs ಪಕ್ಕದ ಹಳ್ಳಿಗಿ ಬಯಲಾಟ ನೋಡ್ಲಿಕ್ಹೋಗತೀವಿ” ಎಂದು ಹೇಳಿ ನೇತು ಹಾಕಿದ್ದ ಬಂದೂಕು ತಗೊಂಡು ಹೋಗಿಬಿಟ್ಟ. ನಾನು ದೀಪ ಹಚ್ಚಿ ಸಿಂಗಾರೆವ್ವನ ಮುಂದೆ ಇಡಬೇಕೆನ್ನುವಷ್ಟರಲ್ಲಿ ಅವಳು ಎದ್ದುನಿಂತು,

“ಶೀನಿಂಗಿ” ಎಂದಳು.

“ಎವ್ವ”

“ಹಿತ್ತಲ ಬಾಗಲಾ ತಗದಿಡು. ಹುಚ್ಚಯ್ಯ ಬರಲಿ. ಪೂಜಿ ಮಾಡೇಬಿಡೋಣು”

“ಹುಚ್ಚಯ್ಯ!...”

“ನಮ್ಮ ಶೀಲ ನಮ್ಮ ಕೈಯಾಗಿದ್ದರ ಯಾರೇನ ಮಾಡತಾರ? ಇಂದು ಶಿವನ ಪರೀಕ್ಷೆ!”

‘ಬ್ಯಾಡ ಯವ್ವಾ, ಶಿವನ ಪರೀಕ್ಷೆ ಮಾಡಾಕ ನಾವೆಷ್ಟರವರು?’ - ಎಂಬ ಮಾತು ನನ್ನ ತುದಿ ನಾಲಗೆಯ ತನಕ ಬಂದಿತ್ತು. ಆದರೆ ಅವಳ ಕಣ್ಣೊಳಗೆ ಉರಿಯುತ್ತಿದ್ದ ಪಂಜುಗಳನ್ನು ನೋಡಿ ಅದು ಗಂಟಲಲ್ಲೇ ಇಂಗಿಹೋಯಿತು.

* * *

# ಅಧ್ಯಾಯ - ೯

ಶೀನಿಂಗವ್ವ ತನ್ನ ಪೂಜೆಯ ಕಥೆ ಮುಂದುವರಿಸಿದಳು. ಮಧ್ಯೆ ಅವಳು ಹೇಳುವುದಕ್ಕೆ ಇಷ್ಟಪಡದ ಸಂಗತಿಗಳಿದ್ದವು. ಯಾಕೆಂದರೆ ಪೂಜೆ ಸುರುವಾಗಿ ನಾಕೆಂಟು ಮಾತು ಮುಗಿದಿರಲಿಲ್ಲ. ಅಷ್ಟರಲ್ಲೇ ಸರಗಂ ದೇಸಾಯಿಯ ಪ್ರವೇಶವಾಗಿಬಿಟ್ಟಿತ್ತು. ನಾನು ಕೆದಕಿ ಕೆದಕಿ ಕೇಳಿದರೆ ಮುದುಕಿ ಮತ್ತೆ ಮತ್ತೆ ಬಚ್ಚಿಡತೊಡಗಿದಳು. ಶಿರಸೈಲ ನನ್ನ ಸಹಾಯಕ್ಕೆ ಬಂದ. “ಏನೂ ಮುಚ್ಚಿಡಬ್ಯಾಡವೇ, ಅವರೇನು ಬ್ಯಾರೇದವರಾ? ನಮ್ಮ ಊರವರs ಅಲ್ಲೇನು? ಅವರಿಗೆಲ್ಲ ಗೊತ್ತಾಗತೈತಿ, ನೀ ಸುಮ್ಮನ ಹೇಳಿಕೊಂಡ ಹೋಗು” - ಎಂದ. ಬೇರೆ ಯಾರದೋ ಕಥೆಯಾದರೆ ನಡೆದೀತು, ಇದು ತನ್ನ ಆಪ್ತ ಗೆಳತಿಯ ವಿಚಾರ, ಕಥೆಯಲ್ಲಿ ಇವಳೂ ಭಾಗವಹಿಸಿದ್ದವಳು, ಸಂಕೋಚವಿರುವುದು ಸ್ವಾಭಾವಿಕ. ದೊರೆಸಾನಿಯ ಅವಮಾನದ ಬಗ್ಗೆ ಕೇಳುವುದು ನನ್ನ ಉದ್ದೇಶವಾಗಿರಲಿಲ್ಲ. ಈಗ ನಾಕೈದು ದಿನಗಳಿಂದ ಕಥೆ ಕೇಳುತ್ತಿದ್ದೆನಲ್ಲ, ಮುದುಕಿಗೂ ನನಗೂ ಒಂದು ಬಗೆಯ ಸದರ ಬೆಳೆದಿತ್ತು. ನನ್ನ ಮುಖ ನೋಡಿದಳು. ಕಿಡಿಗೇಡಿತನ ಕಾಣಲಿಲ್ಲವೆಂದು ತೋರುತ್ತದೆ. ಆದರೂ ಅನುಮಾನದಿಂದಲೇ ಕಥೆ ಸುರುಮಾಡಿ, ತುಸು ಮುಂದೆ ಸಾಗುವಷ್ಟರಲ್ಲಿ ಮೈಚಳಿ ಬಿಟ್ಟು ಹೇಳತೊಡಗಿದಳು.

“ದೇಸಾಯಿ ಹ್ಯಾಗೂ ಬಯಲಾಟವೆಂದು ಪಕ್ಕದ ಹಳ್ಳಿಗೆ ಹೋಗಿದ್ದ. ಹಿರಿಯ ದೊರೆಸಾನಿ ಹಾಸಿಗೆ ಬಿಟ್ಟು ಏಳುವವಳಲ್ಲ. ಇನ್ನು ಆಳುಗಳೋ, ಒಂದೊಂದು ದಿಕ್ಕಿನಲ್ಲಿ ಮಲಗುವಂಥವರು. ಪೂಜೆ ಮಾಡೋದಕ್ಕೆ, ಹಿರಿಯರ ಮಾತು ಮೀರಿದ್ದೆವೆಂಬುದನ್ನು ಬಿಟ್ಟರೆ ಬೇರೆ ಯಾವ ಆತಂಕಗಳೂ ಇರಲಿಲ್ಲ, ಸಿಂಗಾರೆವ್ವ ಮನಸ್ಸು ಕಲ್ಲಮಾಡಿ ಮಕ್ಕಳನ್ನು ಶಿವನ ಕೈಯಿಂದ ಕಸಿದಿಕೊಂಡಾದರೂ ಬರಬೇಕೆಂದು ನಿರ್ಧರಿಸಿಬಿಟ್ಟಿದ್ದಳು. ಅದೇ ಅವಳ ಕೆಟ್ಟ ನಿರ್ಧಾರವಾಯಿತು.

ನಾನು ಓಡಾಡಿ ಪೂಜೆಯ ಸಾಮಾನು ಸರಂಜಾಮು ಕೂಡಿಸತೊಡಗಿದೆ. ಸಿಂಗಾರೆವ್ವ ಅತ್ತೆಗೆ ಮತ್ತು ಆಳುಗಳಿಗೆ ಊಟ ಹಾಕಿ ನನ್ನ ನೆರವಿಗೆ ಬಂದಳು. ನಿಂಬೆ ಹಣ್ಣು, ತೆಂಗಿನಕಾಯಿ, ಕರಿಯದಾರ, ಬೇವಿನಸೊಪ್ಪು, ಮಗುವಿನ ಹೇಲು, ಐದು ಕೂದಲು - ಇವನ್ನೆಲ್ಲ ಓಡಾಡಿ ಹ್ಯಾಗೆ ಸಂಗ್ರಹಿಸಿದೆನೆಂದೇ ತಿಳಿಯದು. ಇನ್ನೆರಡು ಕೋಳಿ ಬೇಕಿದ್ದವು. ಹಿತ್ತಲ ಬಾಗಿಲಿನಿಂದ ಹೊಲಗೇರಿಗೆ ಓಡಿಹೋಗಿ ಅವನ್ನೂ ತಂದೆ. ಕೊಟ್ಟಿಗೆಯಲ್ಲಿ ಮಲಗುವ ಆಳನ್ನು ಪುಸಲಾಯಿಸಿ ದನಕರು ನಾನೇ ನೋಡಿಕೊಳ್ಳುವುದಾಗಿ ಹೇಳಿ ಅವನನ್ನ ಅವನ ಮನೆಗೆ ಕಳಿಸಿದ್ದಾಯಿತು.

ಯಾರಿಗೂ ಪತ್ತೆಯಾಗದಿರಲೆಂದು, ದೇಸಾಯಿ ಇಲ್ಲವಲ್ಲ ಎಂದು ಸಿಂಗಾರೆವ್ವ ಮಲಗುವ ಅಂತಸ್ತಿನಲ್ಲೇ ಪೂಜೆ ಮಾಡುವುದೆಂದು ಗೊತ್ತು ಮಾಡಿಕೊಂಡಿದ್ದೆವು. ನಾನು ಕರಿ ಆಕಳ ಸಗಣಿಯಿಂದ ನೆಲ ಸಾರಿಸುವಾಗ ಸಿಂಗಾರೆವ್ವ ಇನ್ನೊಮ್ಮೆ ಜಳಕ ಮಾಡಿ ಒದ್ದೆಯಲ್ಲೇ ಬಂದಳು. ಊರೆಲ್ಲ ಮಲಗಿ ಸ್ತಬ್ಧವಾಗಿತ್ತು. ಅರಮನೆಯಲ್ಲಂತೂ ಕೆಳಗೆ ಕೊಟ್ಟಿಗೆಯಲ್ಲಿಯ ದನ ಬಾಲ ಜಾಡಿಸಿಕೊಂಡರೂ ಅದರ ಸದ್ದು ನಮಗೆ ಕೇಳಿಸುತ್ತಿತ್ತು. ಸಿಂಗಾರೆವ್ವ ಸೀರೆ ಕಳಚಿ ಮಡಿಯುಟ್ಟಳು. ಹುಚ್ಚಯ್ಯ ಇನ್ನೂ ಬರಲಿಲ್ಲವಲ್ಲ. ನೋಡೋಣವೆಂದು ತಿರುಗುವಷ್ಟರಲ್ಲಿ ಕರಿ ಆಕಾರವೊಂದು ಬಾಗಿಲಬಳಿ ಮರೆಯಾದಂತೆನಿಸಿತು. ಗಾಬರಿಯಾಗಿ ಯಾರೋ ಬಂದಿದ್ದಾರೆಂದು

ದೊರೆಸಾನಿಗೆ ಸನ್ನೆ ಮಾಡಿ ಕಂದೀಲು ಹಿಡಿದುಕೊಂಡು ಬಂದೆ. ಹುಚ್ಚಯ್ಯ ನಿಂತಿದ್ದ. ಸಿಂಗಾರೆವ್ವ ಒದ್ದೆ ಕಳಚಿದ್ದನ್ನೂ ಮುಡಿಯುಟ್ಟಿದ್ದನ್ನೂ ಕದ್ದು ನೋಡಿದನೆಂದು ಅನ್ನಿಸಿತು. ಅಪಾಯವುಂಟಾಗದಂತೆ ನಾನೇ ಹುಷಾರಾಗಿರಬೇಕೆಂದುಕೊಂಡೆ.

ಮಾತಿಲ್ಲದೆ ಒಳಗೆ ಬಂದ. ಮೈ ತುಂಬ ಬೂದಿ ಬಳಿದುಕೊಂಡು ಬಗಲಿಗೊಂದು ಜೋಳಿಗೆ ತೂಗುಬಿಟ್ಟಿದ್ದ. ಜೋಳಿಗೆಯಿಂದೊಂದು ಮೂಳೆಯನ್ನೂ ತಲೆ ಬುರುಡೆಯನ್ನೂ ತೆಗೆದ. ನನ್ನ ಎದೆ ಗಡಗಡ ನಡುಗಿತು. ಕೊಡದಲ್ಲಿ ಕರಿಹೋರಿಯ ಸೆಗಣಿ ಹಾಕಿಸಿ ಗಂಜಳ ಮಾಡುವಂತೆ ನನಗೆ ಹೇಳಿದ. ಆಮೇಲೆ ಅವನೇ ಅದರಲ್ಲಿ ಮಗುವಿನ ಹೇಲನ್ನೂ ಕೂದಲನ್ನೂ ಬೆರೆಸಿ ಕೈ ಒರೆಸಿಕೊಂಡ. ಅರಿಷಿಣ ಕುಂಕುಮಗಳಿಂದ ಕುಂಬಳಕಾಯಿಯ ಮೇಲೆ ಏನೇನೋ ಗೆರೆ ಬರೆದು ಮಲ್ಲಿಗೆ ಹೂ ಅಂಟಿಸಿ, ಮಂತ್ರ ಗೊಣಗಲಿಕ್ಕೆ ಸುರುಮಾಡಿದ. ಕುಂಕುಮದಲ್ಲದ್ದಿದ್ದ ಅಕ್ಕಿಯಿಂದ ನೆಲದ ಮೇಲೇನೋ ನಕ್ಷೆ ಬರೆದ. ಕೋಳಿ ಕುಯ್ದು ನಕ್ಷೆಯ ಸುತ್ತ ನೆತ್ತರು ಸಿಂಪಡಿಸಿ ಸೀಮೆಕಟ್ಟಿದ. ಈಗ ಆತನ ದನಿ ಬಿರುಸಾಯಿತು. ಬರಲೊಲ್ಲದ ದೇವರುಗಳನ್ನ ಮಂತ್ರಗಳಿಂದ ಬಂಧಿಸಿ ಎಳೆದು ತರುವಂತೆ ಮಂತ್ರ ಹೇಳತೊಡಗಿದ. ಆಗಾಗ ಅವುಗಳನ್ನು ಹೆದರಿಸಿ ಅಪ್ಪಣೆ ಕೊಡುವಂತೆ ಹಾಂ ಹೂಂ ಎಂದು ಹೂಂಕರಿಸುತ್ತಿದ್ದ, ಅಂಕೆಗೆ ಬಾರದ ಪುಂಡು ದನಗಳಂತೆ ದೇವರು ಕಾಡಿಸುತ್ತಿದ್ದವೇನೋ, ಕಣ್ಣು ಕೆಕ್ಕರಿಸಿ, ಕೆಂಡ ಕಾರುತ್ತ ವಿಕಾರವಾಗಿ ಅವುಗಳನ್ನು ನೋಡುತ್ತ ನಕ್ಷೆಯ ಸ್ಥಳಕ್ಕೆ ಬರುವಂತೆ ಸೂಚಿಸುತ್ತಿದ್ದ. ಬಲಗೈಯಲ್ಲಿ ಮೂಳೆ ಹಿಡಿದು, ಮಂತ್ರಗಳನ್ನು ಸಣ್ಣದಾಗಿ ಹೇಳುತ್ತ ಹೊಂಚಿ, ಅವು ಸಿಕ್ಕೊಡನೆ ಅವು ಕೂತಿರಬೇಕಾದ ಸ್ಥಳವನ್ನು ಮೂಳೆ ಬಡಿದು ನಿರ್ದೇಶಿಸುತ್ತ, ಅವು ಬಂದವೆಂದಾಗ ಮೂಳೆ ಜಡಿದು ಬಂಧಿಸುವಂತೆ ಮಂತ್ರ ಗೊಣಗಿದ.

ಆಮೇಲೆ ಕುಂಬಳಕಾಯಿಯನ್ನು ಅಡ್ಡಡ್ಡ ಸರಿ ಅರ್ಧ ಹೋಳು ಮಾಡಿ ದೊರೆಸಾನಿಯ ಗರ್ಭದ ಮುಂದೆ ಹಿಡಿದು ಅದರ ಮೇಲೊಂದು ಸೆಗಣಿಯ ಗುಂಡಿಟ್ಟ. ಅದನ್ನು ನಕ್ಷೆಯೊಳಗಿಟ್ಟು ಅದರ ಮ್ಯಾಲೆ ಬುರುಡೆಯಿಟ್ಟು ಕೈಯೊಳಗಿನ ಮೂಳೆ ಊರಿದ. ಹಾಗೆ ಮೂಳೆ ಊರಿದನೋ ಇಲ್ಲವೋ ಭಗ್ಗನೆ ಬೆಂಕಿ ಹೊತ್ತಿತ್ತು. ಅದನ್ನು ಕಂಡೊಡನೆಯೇ ಅದೇನು ಮಾಯವೋ, ಮಾಟವೋ ಅರಿವು ಹಾರಿ ಇಬ್ಬರೂ ಪರವಶರಾದೆವು. ನಾನು ಬರೆದ ಚಿತ್ರವಾದೆ, ಅವಳು ಮಾಟದ ಗೊಂಬೆಯಾದಳು, ದೊರೆಸಾನಿಗೂ ಹುಚ್ಚಯ್ಯನಿಗೂ ಅಂತರಂಗದಲ್ಲೇ ಮಾತುಕತೆ ನಡೆಯುತ್ತಿತ್ತೋ ಏನೋ, ಯಾರು ಹೇಳುತ್ತಿರಲಿಲ್ಲ, ಯಾರೂ ಕೇಳುತ್ತಿರಲಿಲ್ಲ, ಹುಚ್ಚಯ್ಯ ರಭಸದಿಂದ ಮಂತ್ರ ವಟಗುಟುತ್ತ ಕೊಡದಲ್ಲಿಯ ಗಂಜಳವನ್ನು ಅವಳ ಮೈತುಂಬ ಎರೆದ. ಹುಚ್ಚಯ್ಯ ಸಿಂಗಾರೆವ್ವನನ್ನು ಹಾರಿಸಿಕೊಂಡು ಹೋಗುವೆನೆಂದೋ, ಏನು ಸಪ್ಪಳಾಯಿತೆಂದೋ, ಕೆಡುಕಿನ ಅರಿವು ಬಂದುದರಿಂದಲೋ - ಯಾಕೋ ಏನೋ ಎಂತೋ, ಅಂತೂ ಒದರಿ “ಅವ್ವಾ!” ಅಂದೆ. ಹಾಗೆ ಕೂಗಿದ್ದರಿಂದಲೇ ನನಗೆ ಸರಿಯಾಗಿ ಅರಿವು ಮೂಡಿದ್ದು. ಕೇಳಿದರೆ ಯಾರೋ ತೊಲೆಬಾಗಿಲು ಬಡಿಯುತ್ತಿದ್ದರು.

ಮೂವರೂ ಸ್ತಬ್ಧರಾಗಿ ಕೇಳಿದೆವು, “ಬಾಗಿಲಾ ತಗೀಲೇ ಬೋಳೀಮಗನs” ಎಂದು ದೇಸಾಯಿ ಕೂಗುತ್ತಿದ್ದ. “ಘಾತ ಆಯ್ತುs ಎವ್ವಾ,” ಅಂದೆ. ಒಂದು ಕ್ಷಣಕೂಡ ಹಿಂದು ಮುಂದಿನ ವಿಚಾರ ಮಾಡಲಿಲ್ಲ. ಗಬಕ್ಕನೆ ಹೋಗಿ ಅಂತಸ್ತಿನ ಬಾಗಲು ಬಂದು ಮಾಡಿ ಅಗಳಿ ಹಾಕಿಕೊಂಡು ಒಂದೇ ಉಸಿರಿನಲ್ಲಿ ಮೆಟ್ಟಿಲು ಹತ್ತಿ ಮೇಲೆ ಬಂದೆ. ಹುಚ್ಚಯ್ಯ ಗಡಗಡ ನಡುಗುತ್ತ ಮರೆಯಿದ್ದಲ್ಲಿ ತೂರಿ ಅಡಗಿಕೊಳ್ಳಲಿಕ್ಕೆ ನೋಡುತ್ತಿದ್ದ. ಸಿಂಗಾರೆವ್ವ ಬೇರೆ ಬೇರೆ ಉಟ್ಟುಕೊಂಡಳು. ನಾನು ಅಲ್ಲಿದ್ದುದನ್ನೆಲ್ಲ ಗುಂಪಿ ಮಾಡಿ ಬುಟ್ಟೀ ತುಂಬಿ, ಸಾರಿಸಿದ್ದೂ ಗೊತ್ತಾಗದ ಹಾಗೆ ಮೇಲೊಂದು ಜಮಖಾನ ಹಾಸಿದೆ. ಹುಚ್ಚಯ್ಯ ನಮ್ಮೊಂದಿಗೆ ಇದ್ದದ್ದು ಈಗಿನ ಮುಖ್ಯ ಅಡಚಣೆಯಾಯ್ತು. ದನದ ಕೊಟ್ಟಿಗೆಯ ಕಡೆಯಿಂದ ಹಿತ್ತಲ ಬಾಗಿಲಕಡೆ ಓಡಿಸಬಹುದೆಂದು ಹೊಂಚಿ, ಅವನ ಕೈ ಹಿಡಿದು ಮೆಲ್ಲಗೆ ಕರೆದುಕೊಂಡು ನಡೆದೆ. ಎರಡು ಮೆಟ್ಟಿಲಿಳಿದಿದ್ದೆವೋ ಇಲ್ಲವೋ - ದೇಸಾಯಿ ಅಂತಸ್ತಿನ ಬಾಗಿಲು ಬಡಿಯತೊಡಗಿದ. ಮತ್ತೆ ಮೇಲೇರಿ ಒಂದೇ ಉಸಿರಿನಲ್ಲಿ ಒಳಹೊಕ್ಕು, ನನಗದೇನು ಹೊಳೆಯಿತೋ ಗಡಂಚಿಯ ಮೇಲಿನ ಗಾದೆ ಸುರುಳಿ ಬಿಚ್ಚಿ ಅದರಲ್ಲಿ ಅವನನ್ನು ಚೆಲ್ಲಿ ಮತ್ತೆ ಸುತ್ತಿಬಿಟ್ಟೆ. ಕಾಲಿನ ತುದಿ ಕಾಣಿಸುತ್ತಿದ್ದವು. ಮ್ಯಾಲೊಂದು ಬಟ್ಟೆ ಎಸೆದೆ. ಬಾಗಿಲು ಬಡಿತ ಕೇಳಿಸುತ್ತಲೇ ಇತ್ತು. ಮಂಚದ ಮೇಲೆ ಸಿಂಗಾರೆವ್ವನನ್ನು ದೂಕಿ ಅವಳು ಬಿದ್ದೊಡನೆ ಚಾದರ ಹೊದಿಸಿ, ಕಂದೀಲು ತಗೊಂಡು ಬಾಗಿಲು ತೆಗೆಯಲು ಹೋದೆ.

“ಏನ ಹಿಂಗ, ಸತ್ತವರ್ಹಾಂಗ ಮಲಗೋದ?” ಎಂದು ಹೇಳುತ್ತ ದೇಸಾಯಿ ಬಂದೂಕಿನೊಂದಿಗೆ ಒಳನುಗ್ಗಿದ. ಅವನು ಲಗುಲಗು ಬೆಳಕು ತೋರಿಸೆಂದು ಅವಸರ ಮಾಡುತ್ತಿದ್ದ. ನಾನು ಸಾಧ್ಯವಾದಷ್ಟೂ ನಿಧಾನವಾಗಿ, ನಿದ್ದೆಯಲ್ಲಿದ್ದವಳಂತೆ ಮುಖ ಮಾಡಿಕೊಂಡು ಕಂದೀಲು ತೆಗೆದುಕೊಂಡು ಏರುತ್ತಿದ್ದೆ. ಕೊನೆಗೆ ತಾನೇ ಕಂದೀಲು ಕಸಿದುಕೊಂಡು ನುಗ್ಗಿದ. ದೇವರು ಕಾಪಾಡಿದನೆಂದುಕೊಂಡೆ. ಏನೂ ಗುರುತಿರಲಿಲ್ಲ. ಸಿಂಗಾರೆವ್ವ ಎದ್ದು ಕೂತಳು. ದೇಸಾಯಿ ಎಲ್ಲಾ ಕಡೆ ನೋಡಿದ. ಅವನಿಗೆ ಸಂಶಯ ಬಂದದ್ದು ಸ್ಪಷ್ಟವಿತ್ತು. ಮುಚ್ಚಿದ ಕಿಡಿಕಿ ಬಾಗಿಲುಗಳನ್ನು ಬಂದೂಕಿನಿಂದ ತಿವಿದು ತೆಗೆದ. ಎಲ್ಲವೂ ದಿನಾ ಇದ್ದ ಹಾಗೇ ಇದ್ದುದಕ್ಕೆ ತೃಪ್ತಿಯಾಯಿತೇನೋ, ಮುಖದ ಮೇಲೆ ಈಗ ಅದೇ ಅವನ ಹಳೇ ನಾಟಕದ ನಗೆ ತಂದು, ಹ ಹ್ಹ ಹ್ಹಾ ಎಂದೊಮ್ಮೆ ನಕ್ಕ. ಮತ್ತೇನು ಹೊಳೆಯಿತೋ, ಮುಖ ಕಿವಿಚಿ ಗಂಟಲ ನರ ಉಬ್ಬಿಸಿ ಕಣ್ಣುಗಳನ್ನು ವಿಕಾರವಾಗಿ ಅಗಲಿಸಿ “ಅದೆ ಅರೆ ಮರೆಯಾದೆಯಾ ಕುಲ ವೈರಿ?...” ಎಂದು ನಾಟಕೀಯವಾಗಿ ಹೇಳಿ, ವೀರಾವೇಶದಿಂದ ಬಂದೂಕನ್ನು ಗಟ್ಟಿಯಾಗಿ ತಬ್ಬಿಕೊಂಡು ಅಗಾ ಅಗಾ ಬೇಟೆ ಸಿಕ್ಕಿತೆಂಬಂತೆ ಗುರಿ ಹಿಡಿದು ಕಿಟಕಿಯ ತನಕ ಹೋಗಿ ಅದರ ಅಳಿಗೆಯನ್ನು ಹೊರ ತೂರಿ ಢಂ ಢಂ ಎಂದು ಎರಡು ಸಲ ಗುಂಡು ಹಾರಿಸಿದ. ಹುಚ್ಚಯ್ಯನ ಕಾಲು ಕೊಡಲಿಯೇಟು ಬಿದ್ದ ಮರದ ಟೊಂಗೆಯ ಹಾಗೆ ಅಲುಗಿದ್ದನ್ನು ಕಂಡೆ. ದೇಸಾಯಿಗೆ ಗೊತ್ತಾದೀತೆಂದು ಜೀವ ಬಾಯಿಗೆ ಬಂದಿತ್ತು. ಅಷ್ಟರಲ್ಲಿ ದೇಸಾಯಿ ತಿರುಗಿದ್ದ. ಅವನ ಮುಖದಲ್ಲೀಗ ವೈರಿಯನ್ನು ಸಂಹರಿಸಿದ ತೃಪ್ತಿ ಇತ್ತು. ಕಣ್ಣು ತೃಪ್ತವಾಗಿದ್ದವು. ಹ ಹ್ಹ ಹ್ಹಾ ಎಂದು ನಗುತ್ತ “ಶೀನಿಂಗೀ ಬಾಗಲಾ ಹಾಕಿಕೊ” ಎಂದು ಹೇಳಿ ದಡದಡ ಇಳಿದುಹೋದ.

ಓಡಿ ಹೋಗಿ ತೊಲೆಬಾಗಿಲ ಅಗಳಿ ಜಡಿದು ಬಂದೆ. ಇಬ್ಬರಿಗೂ ಈಗ ಉಸಿರು ಬಂತು. ಬಿಸಿ ಬೆವರಳಿದು ಮೈ ಒದ್ದೆಯಾಗಿತ್ತು. “ಶಿವನಃ ಮಾದೇವನಃ” ಎಂದು ಗೆಳತಿಯ ಪಕ್ಕದಲ್ಲಿ ಕೂತೆ. ಭಾವಗರ್ಭಿತ ಮೌನ ಆವರಿಸಿತ್ತು. ಅಥವಾ ನಮ್ಮ ಉಸಿರಾಟ ಮಾತ್ರ ಕೇಳಿಸುತ್ತಿತ್ತು. ಈತನಕದ ಕಸಿವಿಸಿ ಹಗುರಾಗಿ ಇಬ್ಬರ ಮುಖದಲ್ಲೂ ನಿರುಮ್ಮಳಿಕೆ ಮೂಡಿತು. ಹಾಯಾಗಿ ನಿಟ್ಟುಸಿರುಬಿಟ್ಟೆವು. ನಮ್ಮ ಮುಖ, ಭಾವ, ಬಟ್ಟೆ ಎಲ್ಲ ಅಸ್ತವ್ಯವಸ್ಥವಾಗಿದ್ದವು. ಕೋಣೆಯ ತುಂಬ ನೀರವರೆ, ನಿರಾಸೆ ತುಂಬಿ ಬಣಬಣಿಸುತ್ತಿತ್ತು. ಸಿಂಗಾರೆವ್ವ ಮೈಗಂಟಿದ ಕುಂಕುಮ, ಸೆಗಣಿಯ ಕೊಳೆ ಒರೆಸಿಕೊಳ್ಳುತ್ತಿದ್ದಳು. ಅವಳನ್ನು ತಬ್ಬಿಕೊಂಡು ಅಳೋಣವೆನ್ನಿಸಿತು. ಅವಳಿಗೂ ಹಾಗೆ ಅನ್ನಿಸಿತ್ತೇನೋ, ಹುಚ್ಚಯ್ಯನನ್ನು ಎಬ್ಬಿಸಿ ಮೊದಲು ಹೊರಗೆ ಕಳಿಸು ಎಂಬಂತೆ ಸನ್ನೆ ಮಾಡಿದಳು. ಹುಚ್ಚಯ್ಯನ ನೆನಪಾಗಿ ಹೌದಲ್ಲಾ ಎನ್ನಿಸಿ ಹೋಗಿ ಮೆಲ್ಲಗೆ ಗಾದೀ ತಿವಿದು “ಸ್ವಾಮೀ” ಎಂದೆ. ಏಳಲಿಲ್ಲ. “ಏ ಸ್ವಾಮೀ” ಎಂದೆ. ಏಳಲಿಲ್ಲ. “ಇವನೊಬ್ಬ ನಮಗ” ಎಂದು ಬೇಸರದಿಂದ ವಟಗುಟ್ಟುತ್ತ ಗಾದೆಯ ಸುರುಳಿ ಬಿಚ್ಚಿ “ಏ ಸ್ವಾಮೀ” ಎಂದು ತಿವಿದು ನೋಡಿದೆ; ಸ್ವಾಮಿ ಅಲ್ಲೆಲ್ಲಿದ್ದ? ಎದೆಯ ಮೇಲೆ ಕೈಜೋಡಿಸಿಕೊಂಡು ತೆರೆದಬಾಯಿ ತೆರೆದಂತೇ, ತೆರೆದ ಕಣ್ಣು ತೆರೆದಂತೇ ಹುಚ್ಚಯ್ಯ ಹರಾ ಎಂದಿದ್ದ! “ಎವ್ವಾ!” ಎಂದೊದರಿ ಗಟ್ಟಿಯಾಗಿ ಎದೆ ಹಿಡಿದುಕೊಂಡು ಹಿಂದೆ ಕುಸಿದೆ. ಸಿಂಗಾರೆವ್ವ ಅವಸರದಿಂದ ಬಂದು ಹೆಣ ನೋಡಿ “ಅಯ್ ನನ ಶಿವನ!” ಎನ್ನುತ್ತ ಬುಡ ಕಡಿದ ಮರದ ಹಾಗೆ ಖಬರು ಹಾರಿಬಿದ್ದಳು. ನಾನೇ ಅವಳ ಅಂಗಾಲು ತಿಕ್ಕಿ, ಕಿವಿಯಲ್ಲಿ ಗಾಳಿ ಊದಿ ಜೀವ ಬರಿಸಬೇಕಾಯ್ತು. ಇನ್ನು ನಾನೇ ಧೈರ್ಯ ತಗೋಬೇಕು.

ಈಗ ನೆನಪಾದರೆ ಅದನ್ನೆಲ್ಲ ಹ್ಯಾಗೆ ಮಾಡಿದನೋ ಎಂದು ನನಗೆ ಹೊಯ್ಕಾಗುತ್ತದೆ. ಧೈರ್ಯ ತಗೊಂಡೆನಪ್ಪ; ಮತ್ತೆ ಮೊದಲಿನಂತೆ ಹೆಣ ಮುಚ್ಚಿ ಕತ್ತಲಲ್ಲೇ ಓಡಿಹೋಗಿ ಹಿತ್ತಲ ಬಾಗಿಲು ದಾಟಿದೆ. ತುಸು ಓಡಿದರೆ ಸಾಕು, ಹೊಲೆಯರ ಗುಡಿಸಲು ಸಿಗುತ್ತವೆ. ಮೊದಲನೇ ಗುಡಿಸಲ ಕಟ್ಟೆಯ ಮೇಲೆ ಯಾವನೋ ಕಂಬಳಿ ಹೊದ್ದು ಕೂತಿದ್ದ. ಅಲುಗಿ “ದೊರೆಸಾನಿ ಕರೀತಾಳ ಬಾ” ಅಂದರೆ, ಆ ಹೊತ್ತಿನಲ್ಲಿ ಇಂಥಾ ಮಾತು ಕೇಳಿ ಅವನೇನೆಂದುಕೊಂಡನೋ, ಸುದೈವದಿಂದ ಯಾಕೆ, ಎತ್ತ, ಏನೊಂದೂ ಕೇಳಲಿಲ್ಲ. ಸುಮ್ಮನೆ ಬೆನ್ನುಹತ್ತಿ ಬಂದ.

ಒಂದೊಂದು ಬಾಗಿಲು ದಾಟುವಾಗಲೂ ಅವನು ಹೋಗುವುದೇ ಬೇಡವೇ ಎಂದು ಅನುಮಾನಿಸುತ್ತಿದ್ದ. “ಹೆದರಬ್ಯಾಡ, ಬಾ ಬಾ’ ಎಂದು ನಾನು ಧೈರ್ಯ ಹೇಳಿ ಕರೆಯುತ್ತಿದ್ದೆ. ಸಿಂಗಾರೆವ್ವ ಅಂತಸ್ತಿನ ಬಾಗಿಲಲ್ಲೇ ನಿಂತಿದ್ದಳು. ಅವಳ ಕೈ ಹಿಡಿದುಕೊಂಡು ಮೇಲೆ ಹತ್ತಿದೆ. ಅವಳ ಮೈ ಜ್ವರ ಬಂದು ಕಾದ ತಗಡಿನಂತೆ ಸುಡುತ್ತಿತ್ತು. ಮುಖ ಹೀರಿ ಬಾಡಿಹೋಗಿತ್ತು. ಅವನೂ ಮೇಲೆ ಬಂದು ಹೆದರಿ ಬಾಗಿಲಲ್ಲಿ ನಿಂತುಕೊಂಡ. ನಾನು ಒಳಕ್ಕೆ ಕರೆದುಕೊಂಡು ಹೋದೆ. ಅವನು ಬಿಟ್ಟು ಬಿಡದೆ ಅಗಲವಾಗಿ ತೆರೆದ ಕಣ್ಣಿನಿಂದ

ಸಿಂಗಾರೆವ್ವನನ್ನೇ ನೋಡುತ್ತಿದ್ದ. ನಾನು "ಹೆದರಬ್ಯಾಡ, ದೊರೆಸಾನೀದೊಂದ ಕೆಲಸ ಮಾಡಬೇಕು. ನಿನಗ ಸಾಕಷ್ಟು ರೊಕ್ಕಾ ಕೊಡತೀನಿ" ಅಂದೆ. ಅವನು ಆಗಲೆಂಬಂತೆ ಕತ್ತು ಹಾಕಿದ. ಕೈಹಿಡಿದು ಕರೆದುಕೊಂಡು ಹೋಗಿ, ಹೊದಿಸಿದ ಗಾದಿ ತೆಗೆದು ಹೆಣ ತೋರಿಸಿ "ಇದನ್ನೊಯ್ದು ಯಾವುದಾದರೂ ಬಾಂವ್ಯಾಗ ಚೆಲ್ಲು, ಹೆದರಬ್ಯಾಡ, ನಿನಗೇನೂ ಆಗಧಾಂಗ ನೋಡಿಕೋತೀವಿ" ಅಂದೆ.

ಅವನು ಹೆಣ ನೋಡಿ ಸರಕ್ಕನೆ ಸಿಂಗಾರೆವ್ವನ ಕಡೆಗೆ ತಿರುಗಿ ಅವಳೆದೆಯ ಹುಳುಕನ್ನು ಬೆದಕುವಂತೆ ದುರುಗುಟ್ಟಿ ನೋಡಿದ. ಕೊಲೆಗಡುಕನೆದುರಿನ ದೀನ ಪ್ರಾಣಿಯ ಹಾಗೆ ಸಿಂಗಾರೆವ್ವ ತುಟಿ ಒಣಗಿಸಿಕೊಂಡು ಕಣ್ಣರಳಿಸಿಕೊಂಡು ನಿಂತಿದ್ದಳು. ಅವನ ಕಣ್ಣಿನಲ್ಲಿ ಭಯವಾಗಲಿ, ಆಶ್ಚರ್ಯವಾಗಲಿ ಸುಳಿಯಲೇ ಇಲ್ಲ. ತಕ್ಷಣ ಸಂಶಯ ನಿವಾರಣೆಯಾದಂರೆ, ಇವಳನ್ನು ಗೆದ್ದನೆಂಬ ರಭಸದಿಂದ ಬೆರಳುಗುರು ಕಚ್ಚತೊಡಗಿದ. ಯೋಚಿಸುತ್ತಿದ್ದಾನೇನೋ ಎಂದೂ ಅಂದುಕೊಂಡೆ. ಅದಕ್ಕೆ ಅವಕಾಶವನ್ನೇ ಕೊಡದೆ ಇಬ್ಬರ ಕಡೆ ವಕ್ರನೋಟ ಬೀರಿ ತನಗೇನೇನೂ ಆಗದವನಂತೆ ಹೋಗಿ ಕುರ್ಚಿಯಲ್ಲಿ ಕೂತ! ನನಗೆ ವಿಚಿತ್ರವಾಯಿತು. ಸೊಕ್ಕಿನ ಹೊಲೆಯನೆಂದು ಗದರಬೇಕೆಂದೆ. ಅವನು ನಿಶ್ಚಿಂತನಾಗಿ ದೋತರ ಗಂಟಿನಿಂದ ಬೀಡಿ ತೆಗೆದು ಹೊತ್ತಿಸಿದ. ನನಗೆ ಗುರುತು ಹತ್ತಿದಂತಾಯಿತು. "ನೀ ನಮ್ಮ ಚಾಕರಿ ಮನಶ್ಯಾ ಮರ್ಯಾ ಅಲ್ಲ?" ಎಂದೆ. ಸಿಂಗಾರೆವ್ವ ಹೌಹಾರಿ ತಿರುಗಿ ನೋಡಿದಳು. ಹೌದು, ಇವ ನಮ್ಮ ಮರ್ಯಾ! ಅದೇ ಮುಖ, ಈಗ ಹುಲುಸಾಗಿ ಕೆನ್ನೆ ಗದ್ದದ ತುಂಬ ಮುಳ್ಳು ಮುಳ್ಳು ಗಡ್ಡ ಬೆಳೆದಿವೆ. ದಷ್ಟಪುಷ್ಟಾಗಿ ಊರ ದೇವರ ಕೋಣೆಯ ಹಾಗೆ ಇಡೀ ಕುರ್ಚಿ ತುಂಬಿಕೊಂಡು ಕೂತಿದ್ದ. ಸಿಂಗಾರೆವ್ವ "ನಮ್ಮ ಮರ್ಯಾ!" ಎಂದು ಆನಂದದಿಂದ ಒದರಿದಳು. ನಾನು ಓಡಿ ಹೋಗಿ 'ಮರ್ಯಾ, ಈಗಿಂದೀಗ ಈ ಹೆಣ ಎಲ್ಲಾದರೂ ಚೆಲ್ಲಿ ಬಾ, ಅಮ್ಯಾಲ ಎಲ್ಲಾ ಮಾತಾಡೋಣಂತ, ಮೊದಲೇಳು" ಎಂದು ಒಂದೇ ಉಸಿರಿನಲ್ಲಿ ಹೇಳಿದೆ. ನಮ್ಮ ಆನಂದ ಮತ್ತು ಸನ್ನಿವೇಶದ ತೀವ್ರತೆ ಅವನ ಚೇರಾಪಟ್ಟಿಯಲ್ಲೇನೂ ಬದಲಾವಣೆ ತರಲಿಲ್ಲ. ಬಾಯಿ ಮೂಗುಗಳಿಂದ ಭರ್ತಿ ಹೊಗೆ ಬಿಡುತ್ತ, ಉದ್ವೇಗವಿಲ್ಲದ ದನಿಯಲ್ಲಿ "ಹೆಣ ಚೆಲ್ಲಿ ಬಂದರ ನನಗೆ ಏನ ಕೊಡ್ತಿ?" ಎಂದು ಸಿಂಗಾರೆವ್ವನ ಕಡೆ ನೋಡಿದ.

"ನೀ ಕೇಳಿದಷ್ಟ ರೊಕ್ಕ ಕೊಡತೀವ ಬಾರೊ" - ಎಂದೆ. ಸನ್ನೆಮಾಡಿ ನಾನು ಸುಮ್ಮನಿರುವಂತೆ ಮಾಡಿ "ಅವಳs ಹೇಳಲಿ" ಅಂದ.

"ಸಾವಿರ ರೂಪಾಯಿ ಕೊಡೋಣ. ಮೊದಲ ಹೆಣ ಒಯ್ಯು" - ಎಂದಳು.

"ಆಗೋದಿಲ್ಲಂದರ...?"

"ಐದ ಸಾವಿರ..."

"ಇಷ್ಟ?"

"ಹತ್ತ ಸಾವಿರ ಕೊಡತೀನಿ ಒಯ್ಯು"

ಮರ್ಯಾ ಬುಸ್ ಅಂತ ಧೀಮಾಕಿನಿಂದ ಹೊಗೆಬಿಟ್ಟ. ಹಲ್ಲು ಕಾಣಿಸುವಂತೆ ನಕ್ಕು ಸಿಂಗಾರೆವ್ವನನ್ನು ಒಗರಿನಿಂದ ನೋಡಿ, "ನೀ ನಿನ್ನ ದೇಸಗತಿ ಕೊಟ್ಟರೂ ಬ್ಯಾಡ. ಈಗಿಂದೀಗ ನನ್ನ ಜೋಡಿ ಒಮ್ಮೆ ಮಲಗು, ಹೆಣ ಒಯ್ತೀನಿ. ಏನಂತಿ?"

ಸಿಂಗಾರೆವ್ವನ ಕಣ್ಣು ಕೆಂಪಗಾದವು: ಯಾರಿಗಾದರೂ ಕೇಳೀತೆಂದೂ ಚಿಂತಿಸದೆ, "ನನ್ನ ಮನಿ ಎಂಜಲಾ ಉಂಡ ಹೊಲೆಯಾ, ನನ್ನ ಜೋಡಿ ಮಲಗಂತ ಹೇಳೋ ಹಾಂಗಾದೇನೋ?" ಎಂದಳು.

"ಒದರಿ ತ್ರಾಸ ಮಾಡಿಕೊಬ್ಯಾಡ. ಬ್ಯಾಡಂದರ ಬಿಡು. ಇಕಾ ಹೊಂಟೆ. ಹುಚ್ಚಯ್ಯನ್ನ ದೊರೆಸಾನಿ ಕೊಂದಾಳ್ರೆಪೋ ಅಂತ ಹೇಳಿಕೊಂಡ ಹೋಗತೀನಷ್ಟ. ಮಂದಿ ಬೆಳಿಗ್ಗೆದ್ದ ಕಣ್ಣುಜ್ಜಿಕೊಂಡ ನೋಡತಾರ: ನಿನ್ನ ಕೈಯಾಗ ಬೇಡಿ ಹಾಕಿ ಪೊಲೀಸ ಪೋಜದಾರ ಎಳಕೊಂಡ ನಡದ್ದಾರ! ಬೇಕಾದರೆ ನಿಮ್ಮಪ್ಪಗ ನಾನs ಸುದ್ದಿ ಮುಟ್ಟೇಸ್ತೀನಿ. ಏ ಶೀನಿಂಗೀ, ಬರೋಬರಿ ಹೌಂದಲ್ಲ?"

ಎಂದು ಹೇಳಿ ಹೊರಟೇಬಿಟ್ಟ. ಒಂದು ಪೀಡೆಯನ್ನು ನಿವಾರಿಸಹೋಗಿ ಇನ್ನೊಂದನ್ನು ಕರೆತಂದಂತಾಯ್ತು. ಅವನೇನಾದರೂ ಹೊರಗೆ ಹೋದರೆ ಆಗೋ ಪರಿಣಾಮವೇನೆಂದು ನಮಗೀಗ ಗೊತ್ತಾಯ್ತು. ಕ್ಷಣ ತಪ್ಪಿದರೆ ಅನಾಹುತವಾದೀತೆಂದು ಹೋದವಳೇ ಅವನ ಕಾಲು ಹಿಡಿದು -

"ಮರೆಪ್ಪ, ಹಾಂಗ ಮಾಡಬ್ಯಾಡೋ; ನಿನಗ ಕದ್ದು ರೊಟ್ಟಿ ಹಾಕಿದ ಉಪಕಾರಕ್ಕಾದರೂ ನಮ್ಮನ್ನ ಬಚಾವ ಮಾಡೋ" ಎಂದೆ.

ಅವನು ನನ್ನನ್ನು ಹಿಡೆದೆತ್ತಲೂ ಇಲ್ಲ. ಕೈಯಿಂದ ಮುಟ್ಟಲೂ ಇಲ್ಲ. ಕೂತವಳು ಕೂತೇ ಇದ್ದೆ. ಸಿಂಗಾರೆವ್ವನಿಗೆ ಏನು ಹೊಳೆಯಿತೋ -

"ಶೀನಿಂಗೀ, ಯಾರ ಕಾಲ ಯಾಕ ಹಿಡೀತೀ ಬಿಡ. ಆದದ್ದಾಗಲೀ, ನಾನs ಹೋಗಿ ಬಾವೀ ಬೀಳತೀನಿ."

- ಎಂದು ಹೊರಟಳು. ನಾನು ಅವಳೊಂದಿಗೆ ಸಾಯುವುದೇ ಸೈ ಎಂದು ಹೊರಟೆ. ಮರ್ಯಾ ಸಿಂಗಾರೆವ್ವನ ಸೆರಗು ಹಿಡಿದು,

"ಹೆಂಗೂ ಸಾಯಬೇಕಂತಿ, ನನ್ನ ಜೋಡಿ ಒಮ್ಮಿ ಮಲಗಿ ಸಾಯಲ್ಲ" ಅಂದ. ಅಂದವನೇ ಸೆರಗು ಜಗ್ಗಿ ಬರಸೆಳೆದು ಬಿಗಿದಪ್ಪಿ ಲಟಲಟ ಮುದ್ದಿಟ್ಟ. ಸಿಂಗಾರೆವ್ವನಿಗೆ ಪ್ರತಿಭಟಿಸುವ ಶಕ್ತಿಯೆ ಇರಲಿಲ್ಲ. ಅವನ ತೆಕ್ಕೆಯಲ್ಲಿ ಹಸಿ ಮಾಂಸದ ಮುದ್ದೆಯಂತೆ ಬಿದ್ದು "ಎವ್ವಾs" ಎಂದು ಕಿರಿಚಿ ಬೇಖಬರಾದಳು. ಹೊರಳಿ ನೋಡಿದರೆ ಗುದಮುರಿಗೆಗೆ ಗಡಂಚಿಯ ಮೇಲಿನ ಹುಚ್ಚಯ್ಯನ ಹೆಣ ಅವರ ಬಳಿಯೇ ಬಿತ್ತು!

ಮಾರಾಯನಿಗೆ ಕರುಣೆ ಬಂತೇನೊ, ಮರ್ಯಾ ಅವಳನ್ನು ಬಿಟ್ಟ. ಹೆಣವನ್ನು ಹಾಗೇ ಎತ್ತಿ ನಿಲ್ಲಿಸಿ, ಮೊಳಕಾಲಲ್ಲಿ ಮುರಿದು ಮುದ್ದೀ ಮಾಡಿ ಒಂದು ಕಂಬಳಿಯಲ್ಲಿ ಮೂಟೆ ಕಟ್ಟಿದ. ಪುಣ್ಯಾತ್ಮನ ಮುಖದಲ್ಲಿ ಮೊದಲಿನ ಬಿಗಿ ಇರಲಿಲ್ಲ. ರುಚಿಯುಂಡ ಹಲ್ಲು ಕಾಣುವ ಹಾಗೆ ಒಮ್ಮೆ ನಕ್ಕ. ಕಣ್ಣುಗಳಲ್ಲಿ ತೃಪ್ತಿಯ ಮಿಂಚಾಡುತ್ತಿತ್ತು. ಹೆಣವನ್ನು ಅಮಾತ ಬೆನ್ನಿಗೇರಿಸಿಕೊಂಡು ನಮ್ಮತ್ತ ನೋಡದೆ ಹಾಗೆ ಹೋದ. ಸಿಂಗಾರೆವ್ವ ನರಳುತ್ತ ಕಣ್ಣುಮುಚ್ಚಿ ಹಾಗೇ ಬಿದ್ದುಕೊಂಡಿದ್ದಳು.

ಅಮವಾಸ್ಯೆ ಮತ್ತು ಅರಮನೆಯ ಶಾಪ ಸಿಂಗಾರೆವ್ವನನ್ನು ಸರಿಯಾಗಿ ಶಿಕ್ಷಿಸಿದ್ದವು. ಯಾವುದಕ್ಕೂ ಒಂದು ತರ್ಕ ಇರುತ್ತದಲ್ಲವೇ ಇದು ತರ್ಕ ಮೀರಿದ ಕರ್ಮ, ಊಹಿಸಬಾರದ ದಿಕ್ಕುದಿಕ್ಕಿನ ಅನಿರೀಕ್ಷಿತಗಳೆಲ್ಲ ಒಂದು ಕಡೆ ಸೇರಿ ಒಟ್ಟಾಗಿ ಸಿಂಗಾರೆವ್ವನ ಜೀವದ ಮೇಲೆ ಬಿದ್ದು ಸಾಯಲೂ ಬಿಡದೆ ಘಾಸಿ ಮಾಡುತ್ತಿದ್ದವು. ಎಲ್ಲಿಯ ಗೌಡ, ಎಲ್ಲಿಯ ದೇಸಾಯಿ, ಎಲ್ಲಿಯ ಹುಚ್ಚಯ್ಯ, ಎಲ್ಲಿಯ ಶಾಪ, ಎಲ್ಲಿಯ ಮರ್ಯಾ - ನೆನೆದರೀಗಲೂ ಸಮಲೆಕ್ಕ ಸೇರುವುದೇ ಇಲ್ಲ. ಒಬ್ಬೊಬ್ಬರು ಹುಟ್ಟಿದ ಗಳಿಗೆ ಹಾಗಿರುತ್ತದಂತೆ. ಸಿಂಗಾರೆವ್ವ ಅಂಥಾ ಗಳಿಗೆಯಲ್ಲಿ ಹುಟ್ಟಿದ್ದಳು.

ಅವಳು ಆಗಾಗ ನರಳುತ್ತಿದ್ದಳು. "ಅಯ್ಯೋ ಅವ್ವಾ" ಎನ್ನುತ್ತಿದ್ದಳು. ಅವಳು ಅಳುತ್ತಿದ್ದಳೆಂದು ನನ್ನ ಭಾವನೆ. "ಎವ್ವಾ" ಅಂದರೆ ಇಲ್ಲಿ ಅವಳ ತಾಯಿ ಇದ್ದಳೆ? ನಾನಿಲ್ಲಿ ಇದ್ದೂ ಏನು ಮಾಡಬಲ್ಲೆ? ಹುಲಿಯ ಬಾಯಿಗಿಟ್ಟು ಸುಮ್ಮನಿದ್ದೆ. ಹೋಗಲು, ಅವಳ ತಾಯಿಯಾದರೂ ಗೌಡನಿಂದ ರಕ್ಷಿಸಿದಳೇ? ರಕ್ಷಣೆಗಾಗಿ ನಮ್ಮನ್ನು ಮೀರಿದ ತಾಯಿಯೊಬ್ಬಳನ್ನು ಅವಳು ಕರೆಯುವಂತಿತ್ತು. ಆ ತಾಯಿ ಎಲ್ಲಿದ್ದಳೋ! ಹೊರಗೆ ದಟ್ಟವಾದ ಕತ್ತಲಿತ್ತು. ಕತ್ತಲಿಗೆಲ್ಲಿಯ ಕರುಳು? ಎಷ್ಟನ್ನೆಲ್ಲಾ ತನ್ನಲ್ಲಿಟ್ಟುಕೊಂಡು ಮತ್ತೆ ತನ್ನಲ್ಲಿ ಏನೇನೂ ಇಲ್ಲವೆಂಬಂತೆ ಗುಂಭವಾಗಿತ್ತು.

ಕೆಳಗೆ ಹಿರಿಯ ದೊರೆಸಾನಿ ಹಾಡಿಕೊಳ್ಳುತ್ತಿದ್ದಳು:

ಚಿನ್ನದ ನಡಪಟ್ಟಿ ರನ್ನದ ನಡಪಟ್ಟಿ
ಚಿನ್ನರನ್ನದ ನಡಪಟ್ಟಿ ||ಸೋ||
ಚಿನ್ನರನ್ನದ ನಡಪಟ್ಟಿ ಕೊಡತೀನಿ
ಮೊಮ್ಮಗನ ಹಡೆದ ಸೊಸಿಮುದ್ದಿಗೆ ||ಸೋ||

* * *

## ಅಧ್ಯಾಯ - ೧೦

ಮಾರನೇ ದಿನ ಹುಚ್ಚಯ್ಯನ ಹೆಣಕ್ಕೆ ಮರೆವಣಿಗೆ ಮಾಡಿ ಮಣ್ಣು ಮಾಡಿದರು.....

ಇಲ್ಲಿ ಓದುಗರ ಕ್ಷಮೆ ಕೋರಿ ಮೆರವಣಿಗೆಯ ಬಗ್ಗೆ ಒಂದೆರಡು ಮಾತು ಸೇರಿಸುತ್ತೇನೆ; ಹುಚ್ಚಯ್ಯ ಸತ್ತಿದ್ದನ್ನೂ ಅವನ ಹೆಣಕ್ಕೆ ಮೆರವಣಿಗೆ ಮಾಡಿ ಸಮಾಧಿ ಮಾಡಿದ್ದನ್ನೂ ನಾನು ಕಣ್ಣಾರೆ ಕಂಡಿದ್ದೆ. ಆದರೆ ಹುಚ್ಚಯ್ಯ ಅರಮನೆಯಲ್ಲಿ ಇಂಥ ವಿಚಿತ್ರ ರೀತಿಯಲ್ಲಿ ಸತ್ತ ವಿಚಾರ ಆಗ ನಮಗ್ಯಾರಿಗೂ ತಿಳಿಯದು. ದೊಡ್ಡವರಿಗೂ ತಿಳಿದಿರಲಿಲ್ಲವೆಂದು ನನ್ನ ನಂಬಿಕೆ. ಅದು ಜುಲೈ ತಿಂಗಳ ಕಾಲವಿರಬೇಕು. ಇನ್ನೂ ಮಳೆಯಾಗಿರಲಿಲ್ಲ. ಆದ್ದರಿಂದ ಬಿತ್ತನೆಯಾಗಿರಲಿಲ್ಲ. ನಮ್ಮ ಭಾಗದಲ್ಲಿ ಆ ತಿಂಗಳೂ ಮಳೆಯಾಗಲಿಲ್ಲವೆಂದರೆ ಅದು ಬರಗಾಲದ ವರ್ಷವೆಂದೇ ಲೆಕ್ಕ. ಇಂಥ ನಿಸರ್ಗದ ಕ್ರೌರ್ಯವನ್ನು ನಾನು ಅನಂತರದ ದಿನಗಳಲ್ಲೂ ಕಾಣಲಿಲ್ಲ. ಸೂರ್ಯ ಹುಟ್ಟುತ್ತಲೇ ಉರಿಯುತ್ತಿದ್ದ. ಉರಿಯುತ್ತಲೇ ಏರಿಳಿದು ಮುಳುಗುತ್ತಿದ್ದ. ಇಡೀ ಹಗಲು ಕೆಂಡಗಣ್ಣಿನಿಂದ ನಮ್ಮನ್ನು ಹುರುಪಳಿಸುತ್ತಿದ್ದ. ಮುಂಜಾನೆ ಸಂಜೆಗಳಲ್ಲಿ ಕೂಡ ಸ್ವಚ್ಛವಾದ ಬಿಸಿಲು, ಆ ಬಿಸಿಲಿಗೆ ಕಾವುಗಳಿರುತ್ತಿದ್ದವು. ಬೆಳಗಿನ ಹಾಸಿಗೆಯಲ್ಲೇ ನಾವು ಬೆವರುತ್ತಿದ್ದೆವೆಂದರೆ ನೀವು ಊಹಿಸಬಹುದು.

ಒಂದಿಷ್ಟು ತಂಗಾಳಿಯಾದರೂ ಬೀಸೀತೆಂದರೆ ನಮ್ಮೂರಿನ ಮೇಲೆ ಅದೂ ಸಿಟ್ಟಾಗಿತ್ತು. ಅಷ್ಟಿಷ್ಟು ಗಿಡಮರ ಕಂಟಿಗಳಿದ್ದವು. ಆದರೆ ಬಿಸಿಲಿಗೆ ಅವುಗಳ ಎಲೆ ಹೊತ್ತಿ ಕರಕಾಗಿ ಉದುರಿ ಹೋಗಿ ನಮ್ಮೂರಿಗೆ ಚೈತ್ರಬಂದ ಜ್ಞಾಪಕವನ್ನೇ ಅಳಿಸಿಹಾಕಿದ್ದವು. ನಾವಾಗ ದನ ಕಾಯುತ್ತಿದ್ದುದರಿಂದ ಖುದ್ದಾಗಿ ನೋಡಿದ್ದೇನೆ, - ದನಕರುಗಳು ಮಧ್ಯಾಹ್ನದ ಬಿಸಿಲುಕುದುರೆಗಳನ್ನೇ ನೋಡುತ್ತ, ಬಾಯ್ದೆರೆದು ನೀರಿನ ಕನಸು ಕಾಣುತ್ತ ಓಡುತ್ತಿದ್ದವು. ಒಂದಾದರೂ ಕಾಗೆ ಗುಬ್ಬಿಗಳಂಥ ಸರ್ವ ಸಾಮಾನ್ಯ ಹಕ್ಕಿ ಆಗ ನಮ್ಮೂರ ಸೀಮೆಯಲ್ಲಿದ್ದಂತೆ ನನಗೆ ನೆನಪಿಲ್ಲ. ಹೊಲಗಳೋ ಕಾಲಿಟ್ಟರೆ ಸುಡುವ ಬಾಣಲೆಯಾಗಿದ್ದವು. ಮರಡಿಯ ಬಂಡೆಗಲ್ಲುಗಳು ಕೂಡ ಒತ್ತಿ ಬರುತ್ತಿದ್ದ ಬಿಕ್ಕಳಿಕೆಯನ್ನು ಮೊಳಕಾಲಲ್ಲಿ ತಲೆ ಹುದುಗಿ ತಡೆದುಕೊಳ್ಳುತ್ತಿರುವಂತೆ ಕೂತಿದ್ದವು. ಆಗಿನ ನಮ್ಮೂರ ನಿಸರ್ಗದ ಬಣ್ಣಗಳೆಂದರೆ ಇವೆರಡೇ - ಆಕಾಶದ ನೀಲಿಬಣ್ಣ, ನೆಲದ ಬೂದುಬಣ್ಣ, ಇವು ಕೂಡ ಕಣ್ಣಿಗೆ ಕ್ರೂರವಾಗಿದ್ದವು. ಧೂಳೆದ್ದರೆ ಇವರೆಡರ ಅಂತರ ಇಲ್ಲವಾಗಿ ಒಂದಾಗುತ್ತಿದ್ದುವು. ಧೂಳು ಕರಗಿದಾಗ ಇವುಗಳ ಮಧ್ಯದ ಕ್ಷಿತಿಜ ಬರೀ ಒಂದು ಸಣ್ಣ ಬಿಳಿಗೆರೆಯಾಗಿ ಕಾಣುತ್ತಿತ್ತು. ಆದರೆ ಅದರಿಂದ ನಮ್ಮಲ್ಲಿ ಯಾವ ಆಶೆಗಳೂ ಮೂಡುತ್ತಿರಲಿಲ್ಲ.

ಜನ ಹುಬ್ಬುಗೈ ಹಚ್ಚಿಕೊಂಡು ಬರೀ ಆಕಾಶದ ಕಡೆ ನೋಡುತ್ತಿದ್ದರು; ಅಥವಾ ಜನ ಜೀವವನ್ನು ಕಣ್ಣಿನಲ್ಲೇ ಹಿಡಿದ್ದರು. ಮತ್ತು ಆ ಕಣ್ಣುಗಳನ್ನು ಬಾನಿನಲ್ಲಿ ನಟ್ಟಿದ್ದರು. ಸಣ್ಣದೊಂದು ತಂಗಾಳಿ ಬೀಸಿದರೂ ಹಾ ಎಂದು ಹಾರೈಸಲು ಜನ ಸಿದ್ಧರಿದ್ದರು. ಮಳೆ ಬೇಡ, ಒಂದು ಮೋಡ ಕಂಡರೂ ಕುಣಿದಾಡಲು ಸಿದ್ಧರಿದ್ದರು. ಆದರೆ ಒಂದಾದರೂ ಮೋಡ ಕಾಣಿಸುತ್ತಿರಲಿಲ್ಲ. ಬರೀ ಬಾಯಾರಿದ ಬಿಸಿಲ್ಗುದುರೆಗಳೇ ಊರ ಸುತ್ತ ಓಡಾಡುತ್ತಿದ್ದವು.

ಇನ್ನೂ ರಾತ್ರಿಗಳೋ ಬರೀ ಹಳವಂಡಗಳಿಂದ, ನಿಟ್ಟುಸಿರುಗಳಿಂದ, ಕನಸು ಕಲ್ಪನೆಗಳಿಂದ ಭಯದ ಕಥೆಗಳಿಂದ ತುಂಬಿಕೊಂಡು ಇಡೀ ಊರು ಕುದಿಯುತ್ತಿರುವ ಅನುಭವವಾಗುತ್ತಿತ್ತು. ಕತ್ತಲೆಯಂತೂ ಬದುಕಿದ್ದವರನ್ನು ಉಸಿರುಗಟ್ಟಿಸಿ ಸಾಯಿಸುವ ದಟ್ಟ ಕರಿಹೊಗೆಯಂತೆ ಆವರಿಸುತ್ತಿತ್ತು. ಇನ್ನವರ ಕನಸುಗಳೋ; ಅರಮನೆಯ ನೆತ್ತಿಯ ಮೇಲೆ ಹುಚ್ಚಯ್ಯ ಸಮಾಧಿ ಕೂತಿದ್ದನೆಂದೂ ಅವನ ಮೇಲೆ ಹಲ್ಲಿಗಳು ಹರಿದಾಡುತ್ತಿದ್ದವೆಂದೂ ಒಬ್ಬ ಗರತಿಗೆ ಕನಸಾಗಿತ್ತು! ಭಾರೀ ಮಳೆಬಿದ್ದು ಅರಮನೆಯ ನಡುಗಂಬ ಸರಿದು ಬಿದ್ದ ಹಾಗೆ ಇನ್ನೊಬ್ಬ ಗರತಿಗೆ ಕನಸಾಗಿತ್ತು! ಆಕಾಶವನ್ನೇ ದಿಟ್ಟಿಸುತ್ತ ಜನ ಮಲಗುತ್ತಿದ್ದರಲ್ಲ, ಏನೇನೋ ದೃಶ್ಯಗಳು ಕಾಣಿಸುತ್ತಿದ್ದವು. ಆಕಾಶದಲ್ಲಿ ನಾಲ್ಕು ಜನ ಹೆಣ ಹೊತ್ತೊಯ್ಯುತ್ತಿದ್ದರೆ ಹಿಂದಿನಿಂದ ಹೆಂಗಸೊಬ್ಬಳು ಎದೆ ಎದೆ ಬಡಿದುಕೊಂಡು ಅಳುತ್ತ ಬೆನ್ನು ಹತ್ತುತ್ತಿದ್ದಳಂತೆ. ಉತ್ತರದಿಂದ ದಕ್ಷಿಣಕ್ಕೆ ಹೋಗುವ ಈ ಹೆಣದ ಮೆರವಣಿಗೆ ಮಧ್ಯರಾತ್ರಿ ಅನೇಕ ದಿನಗಳ ತನಕ ಜನಕ್ಕೆ ಕಾಣಿಸುತ್ತಿತ್ತಂತೆ. ನಾವು ಹುಡುಗರು ನಿದ್ರಿಸುತ್ತಿದ್ದೆವಾದ್ದರಿಂದ ನಮಗೆ ಕಂಡಿರಲಿಲ್ಲ. ಆದರೆ ಆ ಬಗೆಗಿನ ಭಯಂಕರ ಮಾತುಕತೆಗಳನ್ನು ಕೇಳಿ, ಹೆದರಿ ರಾತ್ರಿಯಾಯಿತೆಂದರೆ ಮನೆ ಸೇರಿಬಿಡುತ್ತಿದ್ದೆವು. ಆಮೇಲೆ ಯಾವ ಕಾರಣಕ್ಕೂ ಹೊರಗೆ ಕಾಲಿಡಲು ನಿರಾಕರಿಸುತ್ತಿದ್ದೆವು.

ಮಳೆ ಬರಿಸುವ ಯಾವ ಆಚರಣೆಯನ್ನೂ ಜನ ಬಿಟ್ಟಿರಲಿಲ್ಲ. ಯಾವ ದೇವರನ್ನೂ ಮರೆತಿರಲಿಲ್ಲ. ಕಪ್ಪೆಕೊಂದು, ಶಿವನನ್ನು ಬಯ್ಯುತ್ತ ಆಕಾಶದ ಕಡೆ ಎರಚಿದ್ದರು; ಶಿವ ಮಳೆ ಕರುಣಿಸಿರಲಿಲ್ಲ. ಸೆಗಣೀ ಗುಂಪಿಯಿಟ್ಟು ಕರ್ರವ್ವನ ಹೆಸರಿನಲ್ಲಿ ಕಾದು ಮೂರನೇ ದಿನ ಕೆದರಿ ನೋಡಿದ್ದರು; ಕರ್ರವ್ವ ಹುಳ ಬೀಳಿಸಲಿಲ್ಲವಾದ್ದರಿಂದ ಮಳೆ ಬರಲಿಲ್ಲ. ಅವಮಾನವಾಗಿ ಮಳೆ ತರಲೆಂದು ಬಂಡೆವ್ವನ ಮೂರ್ತಿಗೆ ಸೆಗಣಿ ಬಳಿದು ಬೆನ್ನು ಮೇಲಾಗಿ ಚೆಲ್ಲಿದ್ದರು; ಅವಳೂ ಮಳೆ ತರಲಿಲ್ಲ. ಪೂಜಾರಿಯ ಕಾರಣಿಕದಂತೆ ಕುಮುದವ್ವ ಕುದುರೆ ಏರಿ ಪಶ್ಚಿಮದ ಆಕಾಶದಲ್ಲಿ ಕಾಣೆಯಾಗಿದ್ದವಳು ಇನ್ನೂ ತಿರುಗಿ ಬಂದಿರಲಿಲ್ಲ.

ಇಂಥ ಸಮಯದಲ್ಲಿ ನಮ್ಮೂರಿಗೆ ಅಗತ್ಯವಾಗಿ ಬೇಕಿದ್ದವನು ಹುಚ್ಚಯ್ಯ. ಮಳೆ ತಂದರೆ ಅವನೇ ತರಬಲ್ಲನೆಂದು, ಬಾರದ ಮಳೆಯನ್ನು ಅಟ್ಟಿಸಿಕೊಂಡಾದರೂ ತರಬಲ್ಲನೆಂದು ಜನರ ನಂಬಿಕೆ. ಆದರೆ ಹುಣ್ಣಿಮೆಯ ಮಾರನೇ ದಿನ ಕಾಣೆಯಾಗಿದ್ದವನು ಈತನಕ ಅವನ ಪತ್ತೆಯಿರಲಿಲ್ಲ. ಅವನೆಲ್ಲೋ ಮಳೆ ತರಲಿಕ್ಕೇ ಹೋಗಿರಬಹುದೆಂದು ಬಹಳ ಜನ ನಂಬಿದ್ದರು. ಸುದೈವದಿಂದ ಇನ್ನೂ ಯಾರೂ ಸತ್ತಿರಲಿಲ್ಲ. ಹೊಲಮನೆ ಕೆಲಸವಿರಲಿಲ್ಲವಲ್ಲ, ಜನ ಗೋಕಾವಿಗೆ, ಬೆಳಗಾವಿಗೆ ಹೋಗಿ ಅಷ್ಟಿಷ್ಟು ದಿನಬಳಕೆಯ ಬಾಳ್ವೆ ಸಾಮಾನುಗಳನ್ನು ಕದ್ದು ತರುತ್ತಿದ್ದರು. ಬೇರೆ ಹಳ್ಳಿಗಳಿಂದ ಮೇವು ಕನಿಕೆ ಕೂಡ ಕದ್ದು ತರುತ್ತಿದ್ದರು. ಸಾಧ್ಯವಿರಲಿಲ್ಲವಾದ್ದರಿಂದ ಕೆರೆಬಾವಿಗಳನ್ನು ಕದ್ದು ತಂದಿರಲಿಲ್ಲ. ನೀರಿನ ತೊಂದರೆ ಏನೆಂದು ದನಕಾಯುವ ನಮಗೇ ಗೊತ್ತು. ದನಗಳಿಗೆ ನೀರು ಕುಡಿಸಲು ಎರಡು ಮೈಲಿ ದೂರದ ಮಕ್ಕಳ ಗೇರಿಯ ಕೆರೆಗೆ ಹೋಗುತ್ತಿದ್ದೆವು.

ಅಮವಾಸ್ಯೆಯ ಮರುದಿನ ನಾವು ಊರಬಳಿಯ ಹೊಲಗಳಲ್ಲಿ ದನ ಬಿಟ್ಟುಕೊಂಡು ಕೂತಿದ್ದೆವು. ಅಷ್ಟರಲ್ಲಿ ಹುಚ್ಚಯ್ಯ ಕುಮುದವ್ವನ ಗುಡಿಯಲ್ಲಿ ಕೂತವನು ಹಾಗೇ ಸತ್ತಿದ್ದಾನೆಂದು ಸುದ್ದಿ ಬಂತು! ಸುದ್ದಿಯ ಹಿಂದಿನಿಂದಲೇ ಗಂಡಸರು ಗುಂಪುಗುಂಪಾಗಿ ಕುಮುದವ್ವನ ಗುಡಿಯ ಕಡೆ ನಡೆದರು. ನಾವೂ ಅವಸರದಲ್ಲಿ ನಮ್ಮ ನಮ್ಮ ದನಗಳನ್ನು ಓಡಿಸಿಕೊಂಡು ಮನೆಹೋಗಿಸಿ, ಗುಡಿಯತ್ತ ಓಡಿದೆವು. ಜನ ಆಗಲೇ ಗುಂಪುಗುಂಪಾಗಿ ಮಾತಾಡುತ್ತಿದ್ದರು ತುಸು ಹೊತ್ತಿನಲ್ಲೇ ಊರಿನ ಪ್ರತಿಯೊಬ್ಬ ಗಂಡಸು ಮತ್ತು ಹುಡುಗ ಗುಡಿಯಲ್ಲಿದ್ದರು! ಮಳೆ ತರಲಿಕ್ಕೆ ಹೋದ ಹುಚ್ಚಯ್ಯ ತಪಸಿಗೆ ಕೂತ ಭಂಗಿಯಲ್ಲೇ ಶಿವಲೋಕ ಸೇರಿದ್ದ. ಆತ ಎಂದಿನಿಂದ ಕೂತಿದ್ದ, ಯಾವಾಗ ಸತ್ತ ಇತ್ಯಾದಿ ಪ್ರಶ್ನೆಗಳು ಯಾರಿಗೂ ಹೊಳೆಯಲೇ ಇಲ್ಲ. ಯಾಕೆಂದರೆ ಹುಚ್ಚಯ್ಯ ಇಕಾ ಇಲ್ಲಿದ್ದಾನೆ ಎಂದರೆ ಅಲ್ಲಿರುತ್ತಿದ್ದ. ಅಕಾ ಅಲ್ಲಿದ್ದಾನೆಂದರೆ ಮಾಯವಾಗಿರುತ್ತಿದ್ದ. ಅಂಥವನ ನೆಲೆ ಪಾಮರರಿಗೆ ತಿಳಿಯೋದು ಹ್ಯಾಗೆ! ನೀವು ನಂಬುತ್ತೀರೋ ಬಿಡುತ್ತೀರೋ ಜನಕ್ಕೆ ಅವನ ಬಗೆಗಿನ ಭಕ್ತಿ ಇಮ್ಮಡಿಯಾಯ್ತು. ಪಕ್ಕದ ಹಳ್ಳಿಗಳಿಗೂ ಸುದ್ದಿ ಮುಟ್ಟುವುದು ತಡವಾಗಲಿಲ್ಲ. ತಂಡೋಪತಂಡವಾಗಿ ಭಕ್ತರು ಭಜನೆ ಮಾಡುತ್ತಲೇ ಬಂದರು. ಹೇಳಿಕಳಿಸದೆಯೇ ಊರೂರಿನ ಬಾಜಾಬಜಂತ್ರಿಯವರು ಬಂದರು. ನೋಡ ನೋಡುತ್ತಿರುವಂತೆ ಶಬ್ದವರಿಯದೆ ಉಸಿರುಗಟ್ಟಿದ ಊರಿನಲ್ಲಿ ದೊಡ್ಡ ಉತ್ಸವವೇ ಬಂದಿಳಿದಿತ್ತು. ಗುಡಿಯಲ್ಲಿ ಹೀಗಿದ್ದರೆ ಊರಿನಂಚಿಗೆ

ಹೆಂಗಸರೆಲ್ಲ ಸೇರಿ ಕೈಕೈ ಮುಗಿಯುತ್ತಲೋ, ಹುಚ್ಚಯ್ಯನ ನಾಮಸ್ಮರಣೆ ಮಾಡುತ್ತಲೋ ಕಥೆ ಕಟ್ಟುತ್ತಲೋ ಕೇಳುತ್ತಲೋ ಗುಡಿಯತ್ತಲೇ ನೋಡುತ್ತ ನಿಂತಿದ್ದರು. ಇಡೀ ಊರಲ್ಲಿ ಒಂದಾದರೂ ನರಪಿಳ್ಳೆ ಇದ್ದ ಬಗ್ಗೆ ನನಗೆ ಅನುಮಾನ.

ಇನ್ನೂ ಯಾರೂ ಊಟ ಮಾಡಿರಲಿಲ್ಲವಾದ್ದರಿಂದ, ಆ ಮುನ್ನ ಹೆಣ ಮಣ್ಣು ಮಾಡಬೇಕಾದ್ದರಿಂದ ಬೇಗನೆ ವಿಮಾನಕಟ್ಟಿ ಸಿಂಗರಿಸಿದರು. ಹೆಣಕ್ಕೂ ಸಿಂಗಾರ ಮಾಡಿ ಅದರೊಳಗಿಟ್ಟು ಹೊತ್ತರು. ಬಾಜಾಬಜಂತ್ರಿಯವರು ಜಿದ್ದಿನಿಂದ ಬಾರಿಸತೊಡಗಿದರು. ಭಕ್ತರು ಹುಚ್ಚಯ್ಯ ಮಾರಾಜರಿಗೆ ಜಯಕಾರ ಕೂಗಿದರು. ಭಜನೆಯವರು ಒದರಿ ಒದರಿ ಹಾಡಿದರು. ಮೆರವಣಿಗೆ ಊರಿನತ್ತ ನಡೆಯಿತು. ಈ ಬಗೆಯ ಚೇರುದನಿಯನ್ನು ಮೂರು ತಿಂಗಳಿಂದ ಮರೆತದ್ದರಿಂದಲೋ, ಮಳೆಯಿಲ್ಲದ ಉಮ್ಮಳವೋ - ಅಂತೂ ನಾವು ಹುಡುಗರು ಭಾರೀ ಖುಶಿಯಲ್ಲೇ ಇದ್ದೆವು. ಮೆರವಣಿಗೆ ಊರು ತಲುಪಿದಾಗ ಹೆಂಗಸರು ಬಿಕ್ಕಿಬಿಕ್ಕಿ ಅಳುತ್ತಿದ್ದರು. ಕೆಲವರು ತಮ್ಮ ಹತ್ತಿರದ ನಂಟನನ್ನು ಕಳಕೊಂಡಂತೆ ಎದೆ ಎದೆ ಬಡಿದುಕೊಂಡು ಅತ್ತರು. ಆಗ ಮಾತ್ರ ನಾವೂ ಅತ್ತ ಹಾಗೆ ನನಗೆ ನೆನಪು. ಮನೆಮನೆಗೂ ಹೆಣ ನಿಲ್ಲಿಸಿ ನೀರು ನೀಡಿ ಕಾಯಿ ಒಡೆಸಿದರು. ಹೆಜ್ಜೆಹೆಜ್ಜೆಗೆ ಸುತ್ತಲಿನ ಹಳ್ಳಿಕನ ಬಂದು ಮೆರವಣಿಗೆ ಸೇರುತ್ತಲೇ, ಭಕ್ತಿ ಮಾಡುತ್ತಲೇ ಇದ್ದರು. ಹೆಚ್ಚೇನು, ಸ್ವಥಾ ದೇವರೇ ಸತ್ತಂತೆ ಜನ ದುಃಖವನ್ನು ಆಚರಿಸಿದರು.

ಮೆರವಣಿಗೆ ಅರ್ಧ ಊರಿನಲ್ಲಿ ಹಾದು ಅರಮನೆಯ ಕಟ್ಟೆಯ ಮುಂದೆ ಬಂದಿರಬೇಕು, ಒಂದು ಪವಾಡ ಘಟಿಸಿಬಿಟ್ಟಿತು. ಜನರ ಹುಚ್ಚೆದ್ದ ಕೂಗು ಆಕಾಶದಲ್ಲಿ ಹುದುಗಿದ್ದ ಮಳೆರಾಯನಿಗೆ ಮುಟ್ಟಿತೋ, ಹುಚ್ಚಯ್ಯ ಕೈಲಾಸಕ್ಕೆ ಹೋಗಿ ಮಳೆ ಕಳಿಸಿದನೋ - ಹಾ ಹಾ ಎನ್ನುವುದರೊಳಗೆ ಆಕಾಶದ ತುಂಬ ಕರಿಮೋಡ ಆವರಿಸಿ ಗುಡುಗತೊಡಿದವು. ನಮ್ಮ ಆಕಾಶದ ಗುಣ ನಮಗೆ ಗೊತ್ತಿಲ್ಲವೆ? ಆಗಷ್ಟೆ ನೋಡಿದಾಗ ಸಾರಿಸಿದ ನೆಲದಂತೆ ಹಸನಾಗಿದ್ದ ಬಾನಿನಲ್ಲಿ ಈಪರಿ ಅನಿರೀಕ್ಷಿತ ಮೋಡಗಳು ಬಂದು ಸೇರುವುದೆಂದರೇನು, ಮ್ಯಾಲೆತ್ತಿದ ಮುಖವನ್ನು ನಾವಿನ್ನೂ ಕೆಳಗೆ ಮಾಡಿರಲಿಲ್ಲ. ಧೋ ಧೋ ಧೋ ಎಂದು ಮಳೆ ಸುರಿಯತೊಡಗಿತು! ಜನ ಎಷ್ಟು ಹಿಗ್ಗಿದರೆಂದರೆ ಮುಗಿಲು ಹರಿದುಬಿದ್ದಂತೆ ಅಡಿಕೆ ಗಾತ್ರದ ಹನಿಮಳೆ ಜಡಿಯುತ್ತಿದ್ದರೆ ಅದಕ್ಕೆ ಮೈಯೊಡ್ಡಿ ಕುಣಿದಾಡಿದರು. ಒಬ್ಬರೂ ಮರೆಗೆ ಅವಿತುಕೊಳ್ಳಲೇ ಇಲ್ಲ. ಇದು ಹುಚ್ಚಯ್ಯನ ಕೊನೆಯ ಪವಾಡವೆಂದೂ ಅವನ ದಯದಿಂದಲೇ ಮಳೆಯಾಯಿತೆಂದೂ ಜನ ಕೂಗಿಕೂಗಿ ಮಾತಾಡುತ್ತ ಹುಚ್ಚಯ್ಯನಿಗೆ ಜಯಕಾರಗಳನ್ನು ಒದರತೊಡಗಿದರು. ಆ ಭಕ್ತಿ, ಆ ಆವೇಶ, ಆ ಹುಚ್ಚು - ಎಲ್ಲ ವಯಸ್ಸಿನವರು ಒಂದೇ ವಯಸ್ಸಿನವರಾಗಿ ಕುಣಿದರು, ಹಾಡಿದರು, ಹಾರಿದರು, ಕುಪ್ಪಳಿಸಿದರು. ಈಗ ವಾದ್ಯ, ಭಜನೆಗಳೆಲ್ಲ ಹಾರಿಹೋಗಿ, ಎಲ್ಲರೂ ಹೆಣ್ಣು ಗಂಡೆನ್ನದೆ ನೆತ್ತಿಯ ಮೇಲೆ ಮುಗಿದ ಕೈಗಳನ್ನು ಹೊತ್ತು -

ಹುಚ್ಚಯ್ಯ ಹುಚ್ಚಯ್ಯಾ
ನಮ್ಮಪ್ಪಾ ಹುಚ್ಚಯ್ಯಾ
ನನ್ನಯ್ಯಾ ಹುಚ್ಚಯ್ಯಾ

- ಎಂದು ಹಾಡುತ್ತಾ ಕುಣಿಯತೊಡಗಿದರು. ಆ ದಿನ ಹುಚ್ಚಯ್ಯ ಕುಮುದವ್ವನಿಗಿಂತ ಹೆಚ್ಚಿನ ದೇವರಾಗಿಬಿಟ್ಟ.

ಮರೆಪ್ಪ ಇಡೀ ಜನರ ಕಣ್ಣೊಳಗೆ ಸರಿಯಾಗೇ ಮಣ್ಣೆರಚಿದ್ದನೆಂದು ನನಗೆ ಈಗ ಅನಿಸುತ್ತದೆ. ಸಮಾಧಿ ಸ್ಥಿತಿಯಲ್ಲಿ ಹುಚ್ಚಯ್ಯನನ್ನು ಕೂರಿಸಿ ಸುದ್ದಿ ಹಬ್ಬಿಸಿದವನು ಅವನು ತಾನೆ? ಮಳೆ ಕಾಣದ ಜನಕ್ಕೆ ಅದೇ ಸಾಕಾಯಿತು. ಹುಚ್ಚಯ್ಯ ಹ್ಯಾಗೆ ಸತ್ತನೆಂಬ ನಿಜಸಂಗತಿ ಜನಕ್ಕೆ ಗೊತ್ತಾಗಿದ್ದರೆ ಹೆಣಕ್ಕೆ ಈ ರೀತಿ ಮೆರವಣಿಗೆ ಮಾಡುತ್ತಿದ್ದರೋ? ಗೊತ್ತಿಲ್ಲ, ಅಥವಾ ಹುಚ್ಚಯ್ಯನ ಬಗ್ಗೆ ಮೊದಲೇ ಭಕ್ತಿ ಇತ್ತಲ್ಲ, ಅರಮನೆಗೇ ಬೆಂಕಿ ಹಚ್ಚುತ್ತಿದ್ದರೋ? ದೊರೆಸಾನಿ, ಸರಗಂ ದೇಸಾಯಿ ಗತಿ ಏನಾಗುತ್ತಿತ್ತು? ಇವೆಲ್ಲ ಈಗಿನ ಊಹೆಗಳಷ್ಟೆ. ಆಗಿನ ನಿಜವೇ ಬೇರೆ ಅದೇ ಅನಿರೀಕ್ಷಿತ ಜಡಿಮಳೆ.

ಮೋಡಗಳು ಹ್ಯಾಗೆ ಹ್ಯಾಗೆ ಗುಡುಗಿದರೆ ಹಾಗೆ ಹಾಗೆ ನೆಲ ಸಂಕೋಚಗೊಂಡು ಭೀರುವಾಗಿ ನಿಂತಿತ್ತು. ಎಲ್ಲೆಲ್ಲಿ ಮಳೆ ಬಿದ್ದರೆ ಅಲ್ಲಲ್ಲಿಯ ಮಣ್ಣಿನಿಕ್ಕಟ್ಟುಗಳು ಸಡಲಿ ತೆರೆದು ಸುರಿವ ನೀರನ್ನು ಸ್ವಾಗತಿಸಿದ್ದವು. ಮಾರನೇ ದಿನ ನೋಡಿದರೆ ಹೊಲಗಳೇನು,

ಮರಡಿಗಳೂ ಆಕಾರಗೆಟ್ಟು ಅಲ್ಲಲ್ಲಿ ಹಳ್ಳಬಿದ್ದಿದ್ದವು. ಏರಿನಿಂದ ನೀರಿಳಿದು ಹಳ್ಳ ಸೇರುವಲ್ಲಿ ಉಸುಕಿನ ದಿನ್ನೆಗಳೆದ್ದಿದ್ದವು. ಅಂಥ ಮಳೆಯನ್ನು ನಾನು ಇದುವರೆಗೂ ಕಂಡಿಲ್ಲ. ಅರಮನೆಯ ಮುಂದಿನ ದೊಡ್ಡಾಲದ ಮರದ ನಟ್ಟನಡುವಿನ ಟೊಂಗೆಯೇ ಮುರಿದು ಬಿದ್ದಿತೆಂದರೆ - ಹಾಳೆ ಹ್ಯಾಗಿತ್ತೆಂದು ನೀವೇ ಊಹಿಸಿಕೊಳ್ಳಿರಿ. ಅಂತೂ ಮಳೆ ಬಿತ್ತಲ್ಲ. ಒಂದು ಗಳಿಗೆ ತಡವಾದರೂ ಎಲ್ಲಿ ಹಂಗಾಮದ ಹದ ಹಾರಿ ಹೋಗುವುದೋ ಎಂದು ರೈತರು ಬಿತ್ತನೆಯ ಕಾರ್ಯದಲ್ಲಿ ತೊಡಗಿದರು. ಅರಮನೆ ಮಾತ್ರ ಮಳೆಯ ಆಘಾತದಲ್ಲಿ ತತ್ತರಿಸುತ್ತಿತ್ತು. ಇನ್ನು ಕೇಳಿರಿ:

* * *

# ಅಧ್ಯಾಯ - ೧೧

“ಸಿಂಗಾರೆವ್ವನಿಗೆ ಆ ದಿನ ಬಂದ ಜ್ವರ ಎಂಟು ದಿನಗಳಾದರೂ ಇಳಿಯಲೇ ಇಲ್ಲ. ಅಷ್ಟೂ ದಿನ ಸಂಕಟಪಟ್ಟಳು. ಗಂಟಲಲ್ಲಿ ಗಂಜಿ ಕೂಡ ಇಳಿಯುತ್ತಿರಲಿಲ್ಲ. ಡಾಕ್ಟರ್ ಬಂದು ದಿನಾ ಇಂಜೆಕ್ಷನ್ ಚುಚ್ಚುತ್ತಿದ್ದ. ಎಂತೆಂಥದೋ ಗುಳಿಗೆ, ಪುಡಿ ಬಣ್ಣದ ಔಷಧಿ ಕೊಡುತ್ತಿದ್ದ. ಆದರೆ ಏನು ಕೊಟ್ಟರೂ ವಾಂತಿಯಾಗಿ ಹೊರಳಿ ಬರುತ್ತಿತ್ತು. ಮೊದಲಿನ ನಾಕೈದು ದಿನಗಳಂತೂ ನಮ್ಮ ಗುರುತು ಕೂಡ ಹಿಡಿಯುತ್ತಿರಲಿಲ್ಲ. ಏನೇನೋ ಕನವರಿಸುತ್ತಿದ್ದಳು. ನೋಡಬಂದ ದೇಸಾಯಿಗೆ ಒಮ್ಮೆ “ಹೊಲೆಯಾ, ಹೊಲೆಯಾ” ಎಂದು ಚೀರಿದಳು. ಇನ್ನೊಮ್ಮೆ “ನೀ ನನ್ನ ಹಡದ ತಂದೆಯೇನೋ? ವೈರಿ! ವೈರಿ!” ಎಂದು ಉಗುಳಿದಳು. ಮತ್ತೊಮ್ಮೆ ಇದ್ದಕ್ಕಿದ್ದಂತೆ ಎದ್ದು ಕೂತು “ಅಯ್ ಶೀನಿಂಗೀ, ನಮ್ಮ ಕಪಲಿ ಮತ್ತು ಕರಾ ಹಾಕೇತಲ್ಲಾ!” ಎಂದಳು. ಕನಸು ಕಂಡಿದ್ದಾಳೇನೋ ಎಂದು ನಾನು “ಹೌಂದೆವ್ವಾ” ಎಂದೆ. “ಮರ್ಯಾಗ ಒಂದೆರಡು ಉಂಟಿ ಕೊಟ್ಟ ಬಾರಗಃ” ಅಂದಳು. ಎಳೆತನದ ನೆನಪಾಗಿರಬೇಕು. ಇಲ್ಲಾ ಕನಸು ಕಂಡಳೆಂದು “ಕೊಡೋಣೆವ್ವ” ಅಂದರೆ “ನನ್ನ ಹಾಟ್ಯ ಮರ್ಯಾ, ಇಷ್ಟ ಉಂಡೀ ತಿಂದರೂ ಒಂದು ಬೋರಂಗೀ ಹಿಡದ ಕೊಡಲಿಲ್ಲ ನೋಡಃ” ಎಂದು ವಿಷಾದದಿಂದ ಹೇಳಿ ಹಾಗೇ ಕಣ್ಣೀರಿಡುತ್ತ ಮಲಗಿದಳು.

ಖಬರು ಬಂದಾಗ ಹುಚ್ಚಯ್ಯನ ಹೆಣವಿದ್ದ ಗಡಂಚಿಯನ್ನೇ ತದೇಕ ದೃಷಿಯಿಂದ ನೋಡುತ್ತ ಕಣ್ಣೀರು ಸುರಿಸುತ್ತಿದ್ದಳು. ಇದ್ದಕ್ಕಿದ್ದಂತೆ ಚೀರಿ “ಹೊಲೆಯಾ ನಿನ್ನ ಕೈಗಿ ಹಾವ ಹರೀಲಿ, ನಿನ್ನ ಬಾಯಿಗೆ ಇರಿವಿ ಮುತ್ತಲಿ” ಎಂದು ಲಟಿಕೆ ಮುರಿದು ಶಾಪ ಹಾಕುತ್ತಿದ್ದಳು. ಹಾಗೇ ಕೆಟ್ಟದಿನಿ ತೆಗೆದು ಅಳುತ್ತಿದ್ದಳು. ಐದನೇ ದಿನ ವಾಂತಿಯಾಗುವುದು ನಿಂತು ಎರಡು ಗುಟುಕು ಗಂಜೀ ಕುಡಿದಿದ್ದಳು. ಆರಾಮವಾಗಿ ನಿದ್ದೆ ಹೋಗಿದ್ದಳು. ಇಷ್ಟು ದಿನವೂ ಅವಳ ಅಕ್ಕಪಕ್ಕ ಬಿಟ್ಟು ಸರಿಯುತ್ತಿರಲಿಲ್ಲ, ನಾನು. ಈ ದಿನ ನಿದ್ದೆ ಮಾಡಿದಳಲ್ಲಾ ಎಂದು ಹೋದ ಜೀವ ಬಂದಷ್ಟು ಸಮಾಧಾನವಾಗಿತ್ತು. ಹಾಸಿಗೆಯಲ್ಲೇ ಒರಗಿ ನನ್ನ ಕಡೆ ನೋಡಿ,

“ಶೀನೀಂಗಿ, ನಾ ಸಾಯತೇನ, ನನ್ನ ಸಾಯಾಕ ಬಿಡಃ” ಎಂದಳು. ಆಗಂತೂ ಬಿಕ್ಕಿಬಿಕ್ಕಿ ಅತ್ತೆ. ಅವಳನ್ನು ಉಳಿಸಿಕೊಳ್ಳುವ ಭಾಗ್ಯ ಈ ಮನೆಗಿಲ್ಲವೆಂದುಕೊಂಡೆ ಅಥವಾ ಬದುಕುವುದಕ್ಕೆ ಏನುಳಿದಿತ್ತು?

ಈಗ ಸರಗಂ ದೇಸಾಯಿ ಅಂತಸ್ತಿನ ಕೋಣೆಯಲ್ಲಿ ಮಲಗುವುದನ್ನು ನಿಲ್ಲಿಸಿ ಕೆಳಗೆ ದೇವರ ಮನೆಯ ಪಕ್ಕದ ಕೋಣೆಯಲ್ಲಿ ಮಲಗುತ್ತಿದ್ದ. ಅಷ್ಟಾಗಿ ಹೆಂಡತಿಯೆಂಬ ಅಂತಃಕರಣವೂ ಅವನಲ್ಲಿ ಕಾಣಿಲಿಲ್ಲ. ದಿನಕ್ಕೊಮ್ಮೆ ಮೇಲೇರಿ ಬಂದರೆ ಬಂದ, ಇಲ್ಲದಿದ್ದರಿಲ್ಲ, ಡಾಕ್ಟರ್ ಬಂದಾಗ ಮಾತ್ರ ಅವರೊಂದಿಗೆ ಹಾಜರಾಗುತ್ತಿದ್ದ. ಮೇಲೆ ಬಂದರೆ ಸುಮ್ಮನೇ ಕೂರುತ್ತಿದ್ದ. ಒಂದು ಮಾತಾಡುತ್ತಿರಲಿಲ್ಲ. ಹ್ಯಾಗೆಂದು ವಿಚಾರಿಸುತ್ತಿರಲಿಲ್ಲ. ಹೆಂಡತಿಯನ್ನೂ ನೋಡಿ ಬರುವುದು ಗಂಡನ ಕರ್ತವ್ಯವೆಂಬಂತೆ, ಅದನ್ನೂ ಆತನ ತಾಯಿ ಹೇಳಿಕೊಟ್ಟದ್ದೋ ಏನೋ, ಬರುತ್ತಿದ್ದ. ಅವನ ಬಯಲಾಟದಲ್ಲಿ ಇಂಥ ದೃಶ್ಯಗಳು ಇರಲಿಲ್ಲವೇನೋ! ಇದ್ದಿದ್ದರೆ ಅಲ್ಲಿಯ ಮಾತುಗಳನ್ನೇ ಇಲ್ಲಿಯೂ ಹೇಳಿ ನಗಿಸುತ್ತಿದ್ದ. ಆತ ಬಂದಾಗ ಸಿಂಗಾರೆವ್ವ ಮಾತ್ರ ಕಣ್ಣು ತೆರೆಯುತ್ತಲೇ ಇರಲಿಲ್ಲ. ಆದರೆ ದೇಸಾಯಿ ಅಂತಸ್ತಿನ ಕೋಣೆಯಲ್ಲಿ ಮಲಗುವುದು ನನ್ನ ಪಾಲಿಗೆ ಅತ್ಯಗತ್ಯವಾಗಿತ್ತು.

ಮೊನ್ನೆ ಅಮವಾಸ್ಯೆಯ ದಿನ ನಡೆದ ಘಟನೆ ನನ್ನ ತಲೆ ಕೊರೆಯುತ್ತಿತ್ತು. ಸಿಂಗಾರೆವ್ವ ಬೇಖುಬರಾಗಿ ಅದನ್ನು ಮರೆತ್ತಿದ್ದಳು. ಆಕೆಯ ಉಪಚಾರದಲ್ಲಿ ತೊಡಗಿದ್ದರೂ, ಅವಳ ಆರೋಗ್ಯದ ಚಿಂತೆ ಇಡೀ ಮನಸ್ಸನ್ನು ಆವರಿಸಿದ್ದರೂ, ಆ ನೆನಪು ಮಾತ್ರ ಆಗಾಗ ಇಣಿಕಿ ಹಾಕಿ ನನ್ನನ್ನು ಧೈರ್ಯಗೆಡಿಸುತ್ತಿತ್ತು. ನಾವು ಪಾರಾಗಿದ್ದೆವು. ನಿಜ, ಆದರೆ ಮಧ್ಯರಾತ್ರಿಯ ಸುಮಾರು ಒಂದೆರಡು ಬಾರಿ ಬಾಗಿಲ ಬಳಿಯ ಕತ್ತಲೆಯಲ್ಲಿ ಕರೀ ಆಕಾರವೊಂದು ನಿಂತು ಸಿಂಗಾರೆವ್ವನನ್ನೇ ದುರುಗುಟ್ಟಿ ನೋಡಿದ ಹಾಗೆ ಅನ್ನಿಸಿತ್ತು. ನಾನು “ಹಾ! ಯಾರದು?” ಎಂಬ ಗಾಬರಿಯಲ್ಲಿ ಕೂಗಿದಾಗ ಅದು ಹಾಗೇ ಕಣ್ಣೆದುರಿನಲ್ಲೇ ಕರಗಿಹೋಗಿತ್ತು. ಅದು ಹುಚ್ಚಯ್ಯನ ಭೂತವಿರಬಹುದೇ ಎಂದು ನೆನೆದು ಮೈ ಗಮ್ಮಂತ ಬೆವರಿತ್ತು.

ಮಾರನೇ ದಿನ ದೇಸಾಯರಿಗೆ, “ನೀವು ಮ್ಯಾಲೇ ಮಲಗೋದು ಒಳ್ಳೆಯದು” ಅಂದೆ, ಅದಕ್ಕೆ ದೇಸಾಯಿ “ಯಾಕಃ ಅಂಜತೀಯೇನು?” ಅಂದ.

“ಅದಕ್ಕಲ್ಲ, ಸಿಂಗಾರೆವ್ವ ನಿಮ್ಮನ್ನ ನೆನಸ್ತಾಳ” ಎಂದು ಸುಳ್ಳು ಹೇಳಿದೆ. ಭೂತದ ವಿಚಾರ ಮಾತ್ರ ಹೇಳಲಿಲ್ಲ. ಹೆಂಡತಿ ನೆನೆಸೋದು ಅವಳ ಒಳಕ್ಕೆ ಇಳಿಯಲೇ ಇಲ್ಲ. ನಾನು ಹೆದರಿದೆನೆಂದು ನನ್ನ ಪುಕ್ಕಲುತನಕ್ಕೆ ಖುಶಿಪಡುತ್ತ, ಪಾಪ ಹೆಂಗಸೆಂದು ಕರುಣೆಗೊಂಡು, ಆದರೆ ತಾನಿದ್ದಲ್ಲಿ ಯಾರೂ ಹೆದರುವ ಅಗತ್ಯವಿಲ್ಲವೆಂದು ಸಾರಿ ಸಾರಿ ಅಪ್ಪಣೆ ಮಾಡಿ ಪಕಪಕ ನಕ್ಕ! ಇನ್ನು ಹೇಳಿ ಪ್ರಯೋಜನವಿಲ್ಲ ಎಂದುಕೊಂಡೆ. ರಾತ್ರಿ ಆ ಬಾಗಿಲಲ್ಲಿ ಇನ್ನೊಂದು ಕಂದೀಲಿಟ್ಟು ಅಲ್ಲಿ ಕತ್ತಲಿಲ್ಲದ ಹಾಗೆ ಮಾಡಿ, ಸಾಧ್ಯವಾದಷ್ಟೂ ಆ ಕಡೆ ನೋಡದೆ, ಆದರೆ ಧ್ಯಾನವನ್ನೆಲ್ಲ ಆ ಕಡೆಗೇ ಇಟ್ಟುಕೊಂಡು, ದೇವರ ಹೆಸರು ತಗೊಂಡು ಕೂತೆ.

ಸಿಂಗಾರೆವ್ವನ ಆಜಾರಿಯ ದುಗುಡದ ಮಧ್ಯದಲ್ಲಿಯೂ ನನಗೆ ಆ ದಿನ ಮರ್ಯಾ ಸಿಕ್ಕಿದ್ದರ ಬಗ್ಗೆ ಆಶ್ಚರ್ಯವಾಗುತ್ತಿತ್ತು. ಈ ಊರಿಗೆ ಅವನು ಯಾವಾಗ ಬಂದಿದ್ದ? ಏನು ಕೆಲಸ ಮಾಡಿ ಕೊಂಡಿದ್ದ? ಎಂದಿನಿಂದ ಇಂಥ ಅವಕಾಶಕ್ಕಾಗಿ ಹೊಂಚುತ್ತಿದ್ದ? ಬಂದವನು ಒಮ್ಮೆಯಾದರೂ ನಮ್ಮ ಕಣ್ಣಿಗ್ಯಾಕೆ ಬೀಳಲಿಲ್ಲ? ಮಂದಿಯಾದರೂ ಆತನ ಬಗ್ಗೆ ಯಾಕೆ ಮಾತಾಡಲಿಲ್ಲ? - ಎಂದೇನೇನೋ ಕೇಳಿಕೊಳ್ಳುತ್ತಿದ್ದೆ. ಯಾವಾಗಲೋ ಬಂದಿದ್ದಾನಾದೀತು. ಕೂಲಿನಾಲಿ ಮಾಡಿ ಕೊಂಡಾದ್ದಾನು, ಇವನ್ಯಾವ ಮಾರಾಯನೆಂದು ಮಂದಿ ಇವನ ಬಗ್ಗೆ ಮಾತಾಡಿಕೊಳ್ಳಬೇಕು? ಅಲ್ಲದೆ ಇವನೂ ಮ್ಯಾಲೆ ಬಿದ್ದು ಮಂದಿಯ ಗುರುತು ಮಾಡಿಕೊಳ್ಳುವ ಪೈಕಿ ಅಲ್ಲ. ಹ್ಯಾಗೆ ಬಂದನೋ, ಯಾವಾಗ ಬಂದನೋ, ಅಂತೂ ಅದೆಲ್ಲ ನಮ್ಮ ದುರ್ದೈವದ ಭಾಗವೆಂದು ಸುಮ್ಮನಾಗುತ್ತಿದ್ದೆ. ಇವನು ಇಲ್ಲಿ ಬಂದ ಸುದ್ದಿ ನಮ್ಮೂರ ಗೌಡನಿಗಾದರೂ ಗೊತ್ತಿದೆಯೋ ಇಲ್ಲವೋ, ಅಥವಾ ಗೊತ್ತಿರಲಿಕ್ಕಿಲ್ಲ; ಗೊತ್ತಿದ್ದರೆ ಮರ್ಯಾ ಸತ್ತಿದ್ದಾನೆಂದು ಯಾಕೆ ಹೇಳುತ್ತಿದ್ದ?

ಸಿಂಗಾರೆವ್ವ ಅಜಾರಿ ಬಿದ್ದ ಸುದ್ದಿ ಕೇಳಿ ನೋಡಿಕೊಂಡು ಹೋಗಲು ನಂದಗಾಂವಿಯಿಂದ ನಿಂಗವ್ವಗೌಡ್ತಿ ಮತ್ತು ಗೌಡ ಬಂದರು. ಮಗಳ ಅನಾರೋಗ್ಯದಿಂದ ಗೌಡನೀಗೇನೂ ಆತಂಕವಾಗಿರಲಿಲ್ಲ. ಬಂದವನು ಅದೇ ತನ್ನ ನರಿಮುಖದ ಮೀಸೆ ಕೆದರಿ, ವಕ್ರನಗೆ ನಗುತ್ತ ದೇಸಾಯಿ ಗಂಟಿಕೊಂಡು ತಾನಾಯ್ತು, ಕುಡಿತವಾಯ್ತು, ದೇಸಾಯಿಯ ಪ್ರಾಸ ತಾರಕಗಳಾಯ್ತು, ಖುಶಿಮೋಜಿನಿಂದ ಇದ್ದ. ಗೌಡ್ತಿ ಮಾತ್ರ ಮಗಳನ್ನು ನೋಡಿ ಬಹಳ ಚಡಪಡಿಸುತ್ತಿದಳು. ಹಣೆ ಹಣೆ ಗಿಟ್ಟಿಸಿಕೊಂಡು ಕಣ್ಣೀರಿಟ್ಟಳು. ತಾನೇ ಔಷಧಿ ಕುಡಿಸಿ, ಮಲಗಿಸಿ ಸೆರಗಿನಿಂದ ಗಾಳಿ ಬೀಸಿದಳು. ಮಗಳ ಬಾಯಲ್ಲಿ ಗಂಜಿ ಇಳಿಯುವತನಕ ಊಟ ಮಾಡಲಿಲ್ಲ. ಹೆತ್ತ ಕರುಳಿನ ವೇದನೆ ಶಿವನಿಗೆ ತಟ್ಟಿತೇನೋ, ಆ ದಿನ ಸಾಯಂಕಾಲ ಸಿಂಗಾರೆವ್ವ ಅರಿವಿಗೆ ಬಂದಳು. ತಾಯಿ ಬಂದದ್ದು ತಿಳಿದು ಅವಳನ್ನು ತಬ್ಬಿಕೊಂಡು ಗಳಗಳ ಅತ್ತಳು. “ನಿನ್ನ ಮೈಯಾಗ ಅರಾಮಿಲ್ಲ. ನೀ ಅಳಬಾರದು” ಎಂದು ಹೇಳಿದರೂ ಕೇಳಲಿಲ್ಲ. ತಾಯಿಯನ್ನು ನೋಡಿದ ಸಂತೋಷದ ಉದ್ರೇಕಕ್ಕಿಂತ ತಾನು ಬದುಕಿದ್ದೇ ತಪ್ಪೆಂಬ ಭಾವನೆ ಅವಳನ್ನು ಆವರಿಸಿತ್ತೆಂದು ನಾನು ಬಲ್ಲೆ. “ನಾವು ಕಂಟಕ ದಾಟಿ ಬಂದೀವಿ, ಮತ್ತ ಯಾಕ ಆಳ್ತಿಯವ್ವಾ” ಎಂದು ಎರಡರ್ಥ ಬರುವಂಥ ಮಾತಾಡಿ, ಅವಳ ಮನಸ್ಸಿನ ಮುಳ್ಳು ಕಳೆಯಲು ನೋಡಿದೆ. ಗೌಡ್ತಿ ಅದನ್ನೇ ಸಮರ್ಥಿಸಿ “ಶೀನಿಂಗಿ ಹೇಳೋದ ಬರೋಬರಿ ಐತಿ. ಹೆಂಗೂ ಸಾವ ಗೆದ್ದ ಬಂದೀ ಮಗಳ; ಮುತ್ತೋದ್ಯಾಗಿ ತುಂಬಿದ ಮನ್ಯಾಗ ಅಳಬಾರದು” ಎಂದು ಅವಳು ಹೇಳಿದಳು. ಅತ್ತು ಅತ್ತು ಎದೆ ಹಗುರಾದ ಮೇಲೆ ತೌರುಮನೆಯ ಎಲ್ಲರ ಕ್ಷೇಮ

ವಿಚಾರಿಸಿಕೊಂಡಳು. ತಮ್ಮನ ಬಗ್ಗೆ, ಚಿಕ್ಕಮಂದಿರ ಬಗ್ಗೆ ಕೇಳಿ ಕೇಳಿ ತಿಳಿದಳು. ಒಂದೂ ಬಿಡದೆ ಮನೆಯ ಎಲ್ಲಾ ದನಗಳ ಬಗ್ಗೆ ಕೇಳಿ, ಕಪಲಿಯಕರು ಈಗ ದೊಡ್ಡದಾಗಿ ಗಬ್ಬವಾಗಿದೆ ಎಂದಾಗ ಹರ್ಷಗೊಂಡು ಮುಖ ಇಷ್ಟಗಲ ಮಾಡಿದಳು. ತಡೆಯಲಾರದೆ -

“ಕೇಳಿದೇನs ಶೀನಿಂಗೀ, ಕಪಲೀ ಕರಾ ಗಬ್ಬಾಗೇತಂತ. ಆಯ್ ನನ ಶಿವನ, ನಾ ನೋಡಬೇಕಾಗಿತ್ತಲs ಎವ್ವಾ!” ಎಂದು ಉದ್ಗಾರ ತೆಗೆದಳು. ಸಿಂಗಾರೆವ್ವನ ಮೈಯಲ್ಲೀಗ ಏನೆಂದರೆ ಏನೂ ಉಳಿದಿರಲಿಲ್ಲ; ಮೂರು ಮೂಳೆ, ಅವೆರಡು ಕಣ್ಣು ಬಿಟ್ಟು. ಒಂದು ವಾರದಲ್ಲಿ ಹ್ಯಾಗಿದ್ದವಳು ಹ್ಯಾಗಾಗಿಬಿಟ್ಟಿದ್ದಳು! ಮಾರನೇ ದಿನದಿಂದ ಆರೋಗ್ಯ ಸುಧಾರಿಸತೊಡಗಿತಾದರೂ ಸೂಸುಗೆಮ್ಮು ಸುರುವಾಗಿತ್ತು. ಅಮವಾಸ್ಯೆಯ ಆ ಕರೀ ದಿನದ ನೆನಪು ಅವಳ ಮನಸ್ಸಿನಲ್ಲಿ ಸುಳಿಯದ ಹಾಗೆ ಎಚ್ಚರ ವಹಿಸಿದ್ದೆ. ತಪ್ಪಿಕೂಡ ಹುಚ್ಚಯ್ಯನ ಭೂತದ ಮಾತು ತೆಗೆದಿರಲಿಲ್ಲ. ಗೌಡ ಸುದೈವದಿಂದ ಇನ್ನೂ ಸಿಂಗಾರೆವ್ವನ ಕಣ್ಣಿಗೆ ಬಿದ್ದಿರಲಿಲ್ಲ. ನಿಮ್ಮಪ್ಪ ಬಂದಿದ್ದಾನೆ ಎಂದು ನಾನಾಗಲಿ, ಗೌಡ್ತಿಯಾಗಲಿ ಹೇಳಲೂ ಇಲ್ಲ. ಆ ರಾತ್ರಿ ನಾನು ಕಾಸಿದ ನೀರು ತರಬೇಕೆಂದು ಅಡಿಗೆ ಮನೆಗೆ ಹೋದಾಗ ಗೌಡ್ತಿ, ಗೌಡನಿಗೆ ಊಟ ಬಡಿಸುತ್ತಿದ್ದಳು. ದೇಸಾಯಿ ಇನ್ನೂ ಬಂದಿರಲಿಲ್ಲ. ಗೌಡ “ನಾ ಹೇಳಿದ ಕೆಲಸ ಏನ ಮಾಡಿದಿ?” ಅಂದ.

“ಮಗಳಿನ್ನೂ ಬರೋಬರಿ ಖಬರಿನಾಗs ಬಂದಿಲ್ಲ, ಹೆಂಗ ಕೇಳಲಿ?” ಅಂದಳು ಗೌಡ್ತಿ.

ನನಗೆ ಸಂಶಯ ಬಂತು. ಕುತೂಹಲ ತಡೆಯದೆ ಅಲ್ಲೇ ಬಾಗಿಲ ಮರೆಯಲ್ಲಿ ಅವಿತುಕೊಂಡೆ.

“ಹೆಂಗೂ ನಿನ್ನ ಮಾತ ಕೇಳತಾಳ, ಅಡಚಣಿ ಆಗೇತಿ ಮಗಳs, ಸಾಲಗಾರರೆಲ್ಲಾ ಮನೀಗಿ ಬಂದ ಮುಗಿಬೀಳತಾರು, ಇದೊಂದ ಸಲ ಪಾರ ಮಾಡಂತ ಹೇಳು”

“ಇನ್ನೊಂದ ನಾಕ ದಿನ ಹೊಗಲೇಳು, ಕೇಳಿ ಇಸಗೊಂಬರ್ರೀನಿ”

“ಹಂಗಾದರ ಹಿಂಗ ಮಾಡು, ನಾ ನಂದಗಾಂವಿಗೆ ಹೋಗಿರ್ತೀನಿ. ನೀ ಇನ್ನೊಂದ ನಾಕ ದಿನ ನಿಂತ ಇಸಕೊಂಬಾ.”

ಅಷ್ಟರಲ್ಲಿ ನಾ ನಿಂತ ಬಾಗಿಲು ಗೋಡೆಗೆ ತಾಗಿ ಸದ್ದಾಯಿತು. ಅವರ ಮಾತೂ ನಿಂತು ಹೋಯಿತು.

ಆ ರಾತ್ರಿ ಮಲಗಿದಾಗ, ಹ್ಯಾಗೂ ಸಿಂಗಾರೆವ್ವನಿಗೆ ನಿದ್ದೆ ಹತ್ತಿತ್ತಲ್ಲ, ನಾನು ಬಿಡಲಿಲ್ಲ. ಗೌಡ್ತಿಯನ್ನು ಕೇಳಿಯೇಬಿಟ್ಟೆ. ಅವಳಿಗದೇ ಬೇಕಾಗಿತ್ತು. ಎದ್ದು ಕೂತು ಎದೆಯ ಮೇಲೆ ಕೈ ಇಟ್ಟುಕೊಂಡು

“ಏನ ಮಾಡಲೇ ಶೀನಿಂಗಿ? ಇಂತಾ ಗಂಡ ಗಂಟಬಿದ್ದೈತಿ! ಬೆಂಕೀ ಹಚ್ಚಿ ಸುಟ್ಟರೂ ಸುಡಲಾರದಷ್ಟು ಆಸ್ತಿ ಐತಿ, ಮತ್ತ ಮಗಳ ಕೈಯಾಗಿನ ಬಳೀ ಕೇಳಂತ ಗಂಟ ಬಿದ್ದೈತಿ!” ಎಂದು ಹೇಳಿದಳು.

“ಯಾವ ಬಳಿ?”

“ಅವs ಮದಿವ್ಯಾಗ ಸಿಂಗಾರೆವ್ವನ ಕೈಗಿ ಬಂಗಾರದ ಎರಡ ಕಡಗ ಹಾಕಿರಲಿಲ್ಲೇನs? ಹತ್ತತ್ತ ತೊಲೀವು?”

“ಹೂ. ಹೂ”

“ಅದರಾಗಿಂದ ಒಂದಾರ ಇಸಕೊಂಬರಬೇಕಂತ. ಅಲ್ಲs, ನೀನs, ಹೇಳಗs ಶಿವನ ಅಂತ ಮಗಳ ಕೈ ಹೊತ್ತ ಮಲಗ್ಯಾಳ, ಬಳೀ ಕೊಡಂತ ನಾ ಯಾವ ಬಾಯಲೆ ಕೇಳಲಿ?”

ಮುದುಕಿಯ ಸಂಕಟ ನನಗರಿವಾಯ್ತು. ಹಿಂದೆ ಸಿಂಗಾರೆವ್ವನಿಗೂ ಗೌಡನಿಗೂ ಆದ ಜಗಳವನ್ನು ಅದು ನಡೆದ ಹಾಗೇ ಹೇಳಿದೆ. ದತ್ತಕದ ಮಾತು ಬಂದೊಡನೆ ಮುದುಕಿ ಥಟ್ಟನೆ ನೆಲ ಬಾರಿಸಿ -

"ಅವ್ವಾ, ಅವ್ವಾ ಅವ್ವಾ! ಆ ಲಫೂಟ ಭಾಡ್ಯಾ ಹಿಂತಾದ ಹೊಂಚ್ಯಾನೇನ? ಆ ನನ್ನ ಸವತಿ ಗಂಗ ಮಗನ್ನ ಹಡದಾಳ ನೋಡೂ, ಅಂದಿನಿಂದ ನಾ ಅಂದರ ಅವನ ಕಾಲಾಗಿನ ಕಸ ಆಗಿದೇನ!" ಎಂದಾಡಿ ವೀರಾವೇಶದಿಂದ ಗೋಣು ಅಲುಗಿಸುತ್ತ "ನನ್ನ ಮಗಳ ಬಾಳ್ವೆ ಹಾಳು ಮಾಡಿ, ಇದನೆಲ್ಲಾ ತನ್ನ ಮಗ್ಗ ಮಾಡತಾನಂತs?... ಮಾಡಲಿ ಮಾಡಲಿ, ಶಿವಗ ಕಣ್ಣಿಲ್ಲೇನs ಶೀನಿಂಗಿ" ಎನ್ನುತ್ತ ಮುಖಕ್ಕೆ ಸೆರಗು ಹಾಕಿ, ಎಡಗೈ ನೆಲಕ್ಕೂರಿ ಬಲಗೈ ತಲೆಯ ಮೇಲೆ ಹೊತ್ತುಕೊಂಡು ಅಳತೊಡಗಿದಳು. ಅಷ್ಟರಲ್ಲಿ ಸಿಂಗಾರೆವ್ವನಿಗೆ ಎಚ್ಚರವಾಯ್ತು. ಕೆಮ್ಮುತ್ತಲೇ ಎದ್ದಳು. ಈಚೀಚೆ ನಮಗೆ ಗಾಬರಿ ಆಗುವ ಹಾಗೆ ಗೂರುತ್ತಿದ್ದಳು. ಅಸ್ತಮಾ ಸೇರಿರಬೇಕೆಂದು ಡಾಕ್ಟರು ಮದ್ದು ಕೊಟ್ಟದ್ದು ಏನೇನೂ ಉಪಯೋಗವಾಗಿರಲಿಲ್ಲ. ಎದ್ದು ಕೂತು ಏನೇನೋ ಕೇಳಬೇಕೆಂದವಳು ಕೆಮ್ಮು ಬಂದು ಕೇಳಲಾಗದೆ ಹಾಗೆ ಒರಗಿದಳು. ಇಬ್ಬರೂ ಎದ್ದು ಅವಳ ಬಳಿಗೆ ಹೋದೆವು. ಬರಬರುತ್ತ ಕೆಮ್ಮಿನ ಹುಕಿ ಇನ್ನೂ ಹೆಚ್ಚಾಗಿ ಹೊಟ್ಟೆಯೊಳಗಿನ ಕರುಳು ಬಾಯಿಗೆ ಬಂದಾವೆಂಬಂತೆ ಎದೆ ಹಿಡಿದುಕೊಂಡು ಕೆಮ್ಮಿದಳು. ಹೋಳಾಗಿ ಆ ಈ ಕಡೆ ಹೊರಳಿ ಮಗ್ಗುಲಾಗಿ ಕೆಮ್ಮಿದಳು. ಹ್ಯಾಗೋ ಸಾವರಿಸಿ ಔಷಧಿ ಕುಡಿಸಿದೆ. ಉಬ್ಬರ ತುಸು ಕಮ್ಮಿಯಾಯ್ತು. ಗೌಡ್ತಿ,

"ಈಗ ನೆನಪಾತ ನೋಡs ಶೀನಿಂಗೀ, ಸಕ್ಕರ್ಯಾಗ ಬೆರಸಿ ಇಣಚೀ ರಕ್ತ ಹಾಕಿದರ ಕೆಮ್ಮು ಗಪ್ಪನ ಕಡಿಮ್ಯಾಗತೈತಿ. ನಾಳಿ ಇಣಚಿ ತರಸು" ಎಂದಳು. ಆಗಲೆಂದೆ.

ಮಾರನೇ ದಿನ ದೇಸಾಯಿಗೆ ದೊರೆಸಾನೀ ಕೆಮ್ಮಿಗೋಸ್ಕರ ಇಣಚೀ ರಕ್ತಬೇಕೆಂದು ಹೇಳಿದೆ. ಅವನು ತನ್ನಿಬ್ಬರು ಆಳುಗಳಿಗೆ ಹೇಳಿದ. ಅವರೋ ಹಾ ಹೂ ಕೂಡ ಹೇಳದೆ ಹೋದರು. ಅವರ ಸೊಕ್ಕುತನ ನೋಡಿ ನನಗೆ ಸಿಟ್ಟು ಬಂದರೂ ದೇಸಾಯಿ ಯಥಾಪ್ರಕಾರ ಇದ್ದ. ಬೇರೆ ಯಾರಿಗಾದರೂ ಹೇಳುತ್ತೀರೋ ಎಂಬಂತೆ ಅವನ ಮುಖ ನೋಡಿದೆ. ಅವನು "ಸಂಜೀವಳಗ ತರತಾರ ನೀ ಹೋಗು" ಅಂದ.

ಮಧ್ಯಾಹ್ನ ಸಿಂಗಾರೆವ್ವನ ಕೆಮ್ಮು ಇನ್ನೂ ಜಾಸ್ತಿಯಾಯ್ತು. ಸಂಜೆಗೆ ಇಣಚಿ ರಕ್ತ ಸಿಗುತ್ತಲ್ಲ, ಕೊಟ್ಟರಾಯ್ತೆಂದು ಸುಮ್ಮನಿದ್ದೆ. ಸಂಜೆಯಾಗಿ ಕತ್ತಲೂ ಆಯ್ತು. ಆಳುಗಳು ಬಂದರು. ಕೇಳಿದರೆ "ಸಿಗಲಿಲ್ಲ" ಎಂದರು. ಹಾಗೆಂದು ದೇಸಾಯಿಗೆ ಹೇಳಿದರೆ "ನಾಳಿ ತರತಾರ ಬಿಡು" ಎಂದು ಹೇಳಿ ಆಳುಗಳಿಗೆ ಕಟ್ಟಪ್ಪಣೆ ಮಾಡುವಂತೆ "ನಾಳಿ ತಗೊಂಬರ್ರ್ಯೋ, ಮರೀಬ್ಯಾಡ್ರಿ" ಅಂದ. ಅವರು ಈ ಸಲವೂ ಹಾ ಹೂ ಎಂದು ಹೇಳಲಿಲ್ಲ.

ಹಾಗೇ ಅಡಿಗೆಮನೆಗೆ ಹೋಗಿ ಬರುತ್ತಿದ್ದೆ. ಕೊಟ್ಟಿಗೆಯಲ್ಲಿನ್ನೂ ದೀಪ ಹಚ್ಚಿರಲಿಲ್ಲ. ಆಳುಗಳಿಗೆ ಅದರ ದರಕಾರ ಇದ್ದರಲ್ಲವೆ? ದನ ಕಟ್ಟಿ, ತಂದ ಮೇವನ್ನೆಲ್ಲ ದಯಮಾಡಿ ಹಾಕಿ ಪಟ್ಟಾಡಲಿಕ್ಕೆ ಹೊರಟು ಹೋಗಿದ್ದರು. ಇನ್ನವರು ಹಾಜರಾಗುವುದು ಊಟಕ್ಕೇ. ಈ ನಡುವೆ ಅರಮನೆಯಲ್ಲಿ ಯಾರು ಸತ್ತರೂ ಹಣಿಕಿ ಹಾಕುವವರಲ್ಲ. ಇದು ಗೊತ್ತಾಗಿ ಅಲ್ಲಿದ್ದ ಕಂದೀಲು ತರಬೇಕೆಂದು ಕೈ ತಡಕುತ್ತ, ಕಾಲು ತಡವರಿಸುತ್ತ ಹೊರಟೆ. ಬಾಗಿಲು ಸರಿದ ಸದ್ದಾಯಿತ. ಹುಚ್ಚಯ್ಯನ ಭೂತದ ನೆನಪಾಯ್ತು. ಧೈರ್ಯ ಸಾಲದೆ ಹಿಂದಿರುಗುತ್ತಿದ್ದೆ. ಹಿಂದಿನಿಂದ ಸರ್‍ರನೇ ಯಾರೋ ನನ್ನನ್ನೆಳೆದು ಬಾಯಿ ಮುಚ್ಚಿ ಬಿಗಿ ಹಿಡಿದರು. ಗಾಬರಿಯಾಗಿ ಮೂತ್ರ ಬಸಿದು ತೊಡೆ ಒದ್ದೆಯಾಯ್ತು. ಹಿಡಿದವನು "ಒದರಬ್ಯಾಡ, ನಾನು" ಅಂದ. ಅದು ಮರ್ಯಾನ ದನಿಯೆಂದು ಗುರುತಾಗಿ ತುಸ ಜೀವ ಬಂತು. "ಇಕಾ ಇಣಚಿ, ಸಿಂಗಾರೆವ್ವಗ ಕೊಡು" ಎಂದು ಹೇಳಿ ಮೆತ್ತಗಿನ ಎರಡು ಇಣಚಿಗಳನ್ನ ನನ್ನ ಕೈಗಿಟ್ಟ. ಪ್ರಾಣ ಹಾರಿ ಬಹಳ ಹೊತ್ತಾಗಿರಲಿಲ್ಲವೆಂದು ಕಾಣುತ್ತದೆ; ಅವುಗಳ ಮೈಯಿನ್ನೂ ಬಿಸಿಬಿಸಿಯಾಗಿತ್ತು. ಸೈ ಎಂದು ಹೊರಟೆ. ಮತ್ತೆ ನನ್ನ ರಟ್ಟೆ ಹಿಡಿದೆಳೆದು "ನಾ ಕೊಟ್ಟೆನಂತ ಹೇಳಬ್ಯಾಡ" ಎಂದ. ಬಿಟ್ಟರೆ ಸಾಕಾಗಿತ್ತು. ನಾನು ಆಗಲೆಂದು ಹೇಳಿದ್ದು ಅವನಿಗಿರಲಿ ನನಗೂ ಕೇಳಿಸಲಿಲ್ಲ. ಬಾಯಿ ಒಣಗಿತ್ತು. ಬಿಟ್ಟಿದ್ದೇ ತಡ ಒಂದೇ ಉಸುರಿನಲ್ಲಿ ಅಂತಸ್ತಿಗೆ ಹಾರಿಬಿಟ್ಟೆ.

ನಿಂಗವ್ವ ಗೌಡ್ತಿಗೇ ಇಣಚಿ ಕೊಟ್ಟೆ. ಅವಳೇ ರಕ್ತ ಹಿಂಡಿ ಸಕ್ಕರೆಯಲ್ಲಿ ಬೆರೆಸಿಕೊಟ್ಟಳು. ನನ್ನ ಎದೆಬಡಿತವಿನ್ನೂ ನಿಂತಿರಲಿಲ್ಲ. ಮರ್ಯಾ ಹಿಡಿದಲ್ಲೆಲ್ಲ ಮೈ ಕೈ ನೋಯುತ್ತಿತ್ತು. ಕದ್ದು ಲಟಿಕೆ ಮುರಿದು ಅವನು ಸಾಯಲೆಂದು ಶಾಪ ಹಾಕಿದೆ. ಅಮವಾಸ್ಯೆಯ ದಿನ ಹಾಗೆ ಮಾಡಿದ್ದನಲ್ಲ, ಅವನು ಸೇಡು ತೀರಿತೆಂದುಕೊಂಡಿದ್ದೆ. ಇಣಚಿ ಕೊಟ್ಟು ಉಪಕಾರ ಮಾಡಿದ್ದ ನಿಜ. ಆದರೆ ಅರಮನೆಯ ಬಳಕೆ ತಪ್ಪಿರಲಿಲ್ಲವೆಂದಾಯಿತು. ಇನ್ನೂ ಹೊಂಚುತ್ತಿದ್ದಿರಬೇಕೆ? ಇದನ್ನು ದೊರೆಸಾನಿಗೆ ಹ್ಯಾಗೆ ಹೇಳೋದು? ಆ ದುಷ್ಟನಿಂದ ಅವಳನ್ನು ಕಾಪಾಡಬೇಕು, ಹ್ಯಾಗೆಂದು ಹೊಳೆಯಲ್ಲೊಲ್ಲದು. ಆತ ಬರೋದು ಹಿತ್ತಲ ಬಾಗಿಲಿಂದ ಅಲ್ಲವೆ? ಅದನ್ನು ನಾನೇ ಸಂಜೆ ದನ ಬಂದೊಡನೆ ಕೀಲೀ ಜಡಿದು ಭದ್ರಪಡಿಸಬೇಕೆಂದುಕೊಂಡೆ, ಅವನು ಛಾವಣಿ ಹಾರಿ ಬರಬಲ್ಲನೆಂದು ಗೊತ್ತಿದ್ದೂ, ಹೋಗಲಿ, ಇಣಚಿ ಬೇಕೆಂದು ಅವನಿಗ್ಯಾರು ಹೇಳಿದ್ದು?

ಆಶ್ಚರ್ಯವೆಂದರೆ ಮಾರನೇ ದಿನ ಸಿಂಗಾರೆವ್ವನ ಕೆಮ್ಮು ಕಮ್ಮಿಯಾಯ್ತು. ಮೂರು ನಾಲ್ಕು ದಿನಗಳಲ್ಲಿ ಎದ್ದು ನಡೆದಾಡುವಂತಾದಳು. ಯಾವ ಗಳಿಗೆ ಹುಚ್ಚಯ್ಯ ಇಲ್ಲವೆ ಮರ್ಯಾ ಪ್ರತ್ಯಕ್ಷವಾಗುತ್ತಾರೆಂದು ಗೊತ್ತಿರಲಿಲ್ಲವಲ್ಲ. ಅಂಥದೇನೂ ನಡೆಯಲಿಲ್ಲವಾದ್ದರಿಂದ ನಾನೂ ನೆಮ್ಮದಿಯಿಂದಿದ್ದೆ. ಕೊನೆಗೆ ಗೌಡ ನಿಂಗವ್ವ ಗೌಡ್ತಿಯನ್ನು ಕರೆದೊಯ್ಯಲು ಖುದ್ದಾಗಿ ಬಂದ. ಆಗ ಮುದುಕಿಯ ಚಡಪಡಿಕೆ ಹೇಳತೀರದು. ಮಗಳಿಗೆ ಹೇಳಲಾರಳು, ಗೌಡ ಬಿಡಲಾರ; ಅಡಕೊತ್ತಿನಲ್ಲಿ ಸಿಕ್ಕವಳಂತೆ ಒದ್ದಾಡಿದಳು. ಇಷ್ಟು ದಿನ ತಾಯಿಯನ್ನಿಟ್ಟುಕೊಂಡು ಎರೆಯದೇ ಹ್ಯಾಗೆ ಕಳಿಸೋದು? ಅವಳನ್ನು ಎರೆಯುವವರು ಅಲ್ಲಿ ಯಾರಿದ್ದಾರೆಂದು ಸಿಂಗಾರೆವ್ವ "ನಾಳಿ ನೀರ ಹಾಕ್ಕೊಂಡು ನಾಡಿದ್ದ ಹೋಗೆವ್ವಾ. ನಾಳಿ ಮೊಲದ ಮಾಂಸ ಮಾಡಸ್ತೀನಿ" ಎಂದಳು. ಮೊಲದ ಮಾಂಸವೆಂದರೆ ಆ ಮುದುಕಿಗೆ ಪ್ರಾಣ. ಆ ಸಂಜೆ ದೇಸಾಯಿಗೆ "ನಾಳಿ ಒಂದ ಮೊಲ ತರಿಸಿರಿ" ಎಂದು ಹೇಳಿಯೂ ಬಿಟ್ಟಳು. ಆದರೆ ದೇಸಾಯಿ ವಿಚಾರ ಅವಳಿಗ್ಯಾಕೋ ಮರೆತಂತಿತ್ತು. ಸಂಜೆ ಮಾತು ಬೆಳಿಗ್ಗಿಲ್ಲ, ಬೆಳಗಿನ ಮಾತು ಸಂಜೆಗಿಲ್ಲ, ಬಹುಶಃ ಇಣಚೀ ತಂದುಕೊಟ್ಟವನು ಅವನೇ ಎಂದು ನಂಬಿ ಹಾಗೆ ಕೇಳಿದ್ದಾಳು.

ಮಾರನೇ ಬೆಳಿಗ್ಗೆ ನಾನೇ ಇನ್ನೊಮ್ಮೆ ದೇಸಾಯಿಯ ಜಂಬಕ್ಕೆ ತಟ್ಟುವ ಹಾಗೆ ಹೇಳಿದೆ. "ಮಾರಾಜರ್ಹಾಂಗ ಇದ್ದೀರಿ, ಬ್ಯಾಟಿ ಆಡಿ ಒಂದು ಮೊಲ ತರಬಾರದೇನ?" ಅದವನ ಒಳಗಿಳಿದು ಖುಷಿಯ ಅಲೆಗಳನ್ನೆಬ್ಬಿಸಿತು. ಆದರೂ ಸರಿಯಾಗಿ ಹೇಳಿಸಿಕೊಳ್ಳಬೇಕೆಂದು "ಮಾರಾಜರ್ಹಾಂಗ ಅಲ್ಲಬೇ ಮಾರಾಜರಃ ಅನ್ನು" ಅಂದ. "ಅನ್ನಾಕೇನು ಮಾರಾಜರಃ ಅದೀರಿ. ಹುಲಿ ಬ್ಯಾಟಿ ಆಡಾವರಿಗೆ ಮೊಲ ಏನ ದೊಡ್ಡದ್ದು?" - ಹೀಗೆ ಹೇಳಿದ್ದೇ ತಡ ಅಯ್ಯಯ್ಯಯ್ಯೋ ಅವನ ಖುಶಿಯೇ - ತೊಡೆ ತಟ್ಟಿಕೊಂಡು ಪಕಪಕ ನಗೋದೇ? ಈತನಿಂದ ಎಷ್ಟು ಸುಲಭವಾಗಿ ಕೆಲಸ ತೆಗೆಯುವುದು ನನಗೆ ಈ ಮೊದಲೇ ಹೊಳೆಯಲಿಲ್ಲವಲ್ಲಾ ಎಂದುಕೊಂಡೆ. ದಂಟಿನಂಥ ದೇಹ ಬಳುಕಿಸಿ ಅವ ನಗೋದನ್ನ ನೋಡಿ ನಾನು ನಕ್ಕರೆ ಅವನು ಅಳ್ಳಳ್ಳೆ ತಟ್ಟಿಕೊಂಡು ನಕ್ಕ. "ಏ ಕಾಳ್ಯಾ ನಿಂಗ್ಯಾ ಬರ್ಯೊ ಇಲ್ಲಿ. ಕೇಳಿದಿರೇನ್ರೊ?" ಎಂದು ಕರೆದ. ಅವರ್ಯಾರೂ ಸಮೀಪ ಬರಲೂ ಇಲ್ಲ. ನಗಲೂ ಇಲ್ಲ. ಅಂತೂ ಬಂದೂಕು ಹಿಡಿದುಕೊಂಡು ಮಹಾರಾಜ ಹೊರಟ. ಬೇಟೆಗೆ ಹೋಗುವುದೆಂದರೆ ಆ ದಿನದ ಕೆಲಸಕ್ಕೆ ಸೂಟಿಯೆಂದು ಕಾಳ್ಯಾ, ನಿಂಗ್ಯಾ ಬೆನ್ನು ಹತ್ತಿದರು.

ಸಂಜೆ ನಿಜವಾಗಿ ಎರಡು ಮೊಲ ಹೊಡೆದು ತಂದರು! ಇನ್ನ ನಮ್ಮ ದೇಸಾಯರಿಗೆ ಪರಾಕು ಹೇಳಿ ಅವರ ತಾರಕ ಕೇಳಬೇಕಲ್ಲ ಎಂದು ಪಡಸಾಲೆಗೆ ಹೋದೆ. ದೇಸಾಯಿ ಕೈಕಾಲು ಅಗಲವಾಗಿ ಹರವಂಚಿ ಕುರ್ಚಿಯ ಮೇಲೆ ಬಟ್ಟೆ ಹೊದಿಸಿದ ಹಾಗೆ ಮೈ ಒಗೆದು ಕತ್ತು ಚೆಲ್ಲಿ ಬಾಯಿ ತೆರೆದುಕೊಂಡು ಬಿದ್ದಿದ್ದ. ಮುಖ ಬಿಳಿಚಿ ಮೂಗು ಕಿವಿಚಿಕೊಂಡಿತ್ತು. ದಿಗಿಲಾಗಿ "ದೇಸಾಯರಃ" ಅಂದೆ. ಕತ್ತೆತ್ತದೆ ಅಲ್ಲೇ ಕಣ್ಣು ತೆರೆದು "ಹಾ" ಅಂದ. "ಯಾಕ್ರೀ ಏನಾಯ್ತು?" ಅಂದೆ. ಮೆಲ್ಲಗೆ "ದಣಿವು" ಅಂದ. ಸುಕುಮಾರನಲ್ಲವೆ, ಆಗಿರಬಹುದೆಂದುಕೊಂಡೆ.

ಭರ್ಜರಿಯಾಗಿ ಮೊಲದ ಸಾರು, ಪಲ್ಯ ಮಾಡಿದ್ದೆ. ದೇಸಾಯಿ ಮಂಚಬಿಟ್ಟು ಕೆಳಗಿಳಿಯಲೇ ಇಲ್ಲ. ಅಲ್ಲೇ ಒಯ್ದು ಕೊಟ್ಟಿದ್ದಾಯ್ತು. ಗೌಡ ಮಾತ್ರ ಮತ್ತೆ ಮತ್ತೆ ನೀಡಿಸಿಕೊಂಡು ಉಂಡು "ಶೀನಿಂಗೀ ನಾಳಿ ಬೆಳಿಗ್ಗಿ ಒಂದ ರೊಟ್ಟಿಗಾಗೋವಷ್ಟು ಪಲ್ಯ, ಸಾರು ಇಡು" ಅಂದ.

ಬೆಳಿಗ್ಗೆ ಬಿಸಿ ರೊಟ್ಟಿ ಮಾಡಿದ್ದೆ. ಉಳಿದ ಪಲ್ಯ ಸಾರಿನೊಂದಿಗೆ ನ್ಯಾರೀ ಮಾಡಿಯೇ ಗೌಡ ಗೌಡ್ತಿ ಹೊರಟರು. ಬಳೆಯ ಬಗ್ಗೆ ಕೇಳಿದರೆ ಏನು ಹೇಳಬೇಕೆಂದು ಕೈಕೈ ಹೊಸೆಯುತ್ತಿದ್ದ ಗೌಡ್ತಿಗೆ "ಈಗ ಆ ಬಳಿ ಒತ್ತೇ ಇಟ್ಟಾರಂತ, ಆಮ್ಯಾಲ ಕೊಡತಾಳಂತ ಹೇಳು"

ಎಂದೊಂದು ಉಪಾಯ ಹೇಳಿಕೊಟ್ಟಿದ್ದೆ. ಅವಳು ಹಾ ಎಂದು ಚಪ್ಪಾಳೆ ತಟ್ಟಿ "ಆ ಲಫೂಟಗ ಮೋಸ ಮಾಡಕ ಇದಃ ಮಾತ ಸೈ" ಎಂದು ಒಪ್ಪಿಕೊಂಡಿದ್ದಳು. ಅಂತೂ ಬಳೆಯ ಮಾತು ಸಿಂಗಾರೆವ್ವನ ತನಕ ಬರದ ಹಾಗೆ ನೋಡಿಕೊಂಡಿದ್ದೆ.

ತಂದೆತಾಯಿಗಳನ್ನು ಸಿಂಗಾರೆವ್ವ ತೊಲೆಬಾಗಿಲ ತನಕ ಕಳಿಸಿಬರಲು ಹೋದಳು. ದೇಸಾಯಿ ಈಗಲೂ ಕಾಲು ನೋವೆಂದು ಮಂಚ ಬಿಟ್ಟು ಇಳಿಯಲೇ ಇಲ್ಲ. ನಾನೂ ಹೊರಟ್ಟಿದ್ದೆ. ಅಷ್ಟರಲ್ಲಿ ಕೊಟ್ಟಿಗೆಯಲ್ಲಿ ಖನ್ ಎಂದು ಸದ್ದಾಯಿತು. ಹೋಗಿ ನೋಡಿದರೆ ದೂರದಲ್ಲಿ ಹೋಗುತ್ತಿದ್ದ ಗೌಡನನ್ನು ಕಿಡಕಿಯಿಂದ ಖೆಕ್ಕರಿಸಿ ಕೆಂಡಗಣ್ಣಿಂದ ನೋಡುತ್ತ ಮರೆಪ್ಪ ನಿಂತಿದ್ದ! ಮೂಲೆಯಲ್ಲಿದ್ದ ನೇಗಿಲ ಕುಳವನ್ನು ಸಿಟ್ಟು ತಡೆಯದೆ ಗೋಡೆಯ ಕಡೆಗೆಸೆದಿದ್ದ. ಅದು ಗೂಟಗಲ್ಲಿಗೆ ತಾಗಿ ಸಪ್ಪಳ ಮಾಡಿ ಅಲ್ಲೇ ಬಿದ್ದಿತ್ತು. ಸದ್ಯ ಪಕ್ಕದಲ್ಲೇ ಇದ್ದ ಎತ್ತಿಗೆ ತಾಕಿದ್ದರೆ ಅದಲ್ಲೇ ಗೊಟಕ್ಕೆನ್ನುತ್ತಿತ್ತು.

* * *

# ಅಧ್ಯಾಯ - ೧೧

ಮಾರನೇ ದಿನ ಶೀನಿಂಗವ್ವನಿಗೆ ಭಾರೀ ಖುಶಿಯಾಗುವ ಹಾಗೆ ಮಾಡಿದ್ದೆ. ಮಧ್ಯಾಹ್ನ ನನ್ನ ಹಳೇ ದೋಸ್ತಿ ಕಿಳ್ಳಿಕ್ಯಾತರ ಕಟಬ್ಯಾನಿಂದ ಮೀನು ತರಿಸಿ ಶೀನಿಂಗವ್ವನಿಗೆ ಕಳಿಸಿದ್ದೆ. ಮನೆಯಿಂದ ರೊಟ್ಟಿ ಕಳಿಸಿ ಶಿರಸ್ತೈಲನಿಂದ ಡಬಲ್ ಹರಕೆ ಸಂದಾಯವಾಗುವ ಹಾಗೆ ಮಾಡಿದ್ದೆ. ಸಾಯಂಕಾಲ ನಾಲ್ಕು ನಾಲ್ಕೂವರೆಗೆ ಅರಮನೆಗೆ ಹೋದೆವು. ಅಷ್ಟರಲ್ಲಿ ಶಿರಸ್ತೈಲ ಹೋಗಿ ಮಲಗಿದವಳನ್ನು ಎಬ್ಬಿಸಿದ್ದ. ಶೀನಿಂಗವ್ವ ಬಂದು ಕೂತಳು. 'ಚಾ ಮಾಡತೇನ ತಮ್ಮಾ' ಎಂದಳು. ಅಂತೂ ಮುದುಕಿ ಅಡ್ಡಿಯಿಲ್ಲ ಎಂದುಕೊಂಡು "ನೀ ಎದ್ದ ಹೋಗೋದ ಬ್ಯಾಡಬೇ, ಇಲ್ಲೇ ತರಿಸೋಣ ತಡಿ" ಎಂದು ಶಿರಸ್ತೈಲನ ಕಡೆ ನೋಡಿದೆ. ಅವಳ ಕಥೆ ನಡೆಯುವ ಆಗಿನ ಶಿವಾಪುರದಲ್ಲಿ ಚಹದ ಅಂಗಡಿ ಇರಲಿಲ್ಲ. ಆದರೆ ಈಗ "ದಿ ಕುಮುದವ್ವ ಪ್ರಸನ್ನ ಶಿವಾಪುರ ಟೀ ಕ್ಲಬ್" ಎಂಬುದೊಂದಿದೆ. ಶಿರಸ್ತೈಲ "ನಾ ಬರೋತನಕ ಕಥಿ ಹಚ್ಚಬ್ಯಾಡ" ಎನ್ನುತ್ತ ಚಹಾ ಹೇಳಿ ಬರಲು ಟೀ ಕ್ಲಬ್ಬಿಗೆ ಹೋದ. ನಿದ್ದೆಯ ಮಬ್ಬಿನ್ನೂ ಮುದುಕಿಯನ್ನು ಬಿಟ್ಟಿರಲಿಲ್ಲ. ಕಥೆಯ ಮೂಡಿಗೂ ಬಂದಿರಲಿಲ್ಲ. ಅವಸರವೇನೆಂದು ನಾನು ಸುಮ್ಮನಿದ್ದೆ. ಆದರೆ ಆ ಮುದುಕಿ ಮಾತಿನವಳು. ಮಾತಿಲ್ಲದೆ ಇಬ್ಬರು ಟಕಮಕ ಕೂತದ್ದನ್ನ ಸಹಿಸುತ್ತಿರಲಿಲ್ಲ. ನನ್ನ ವಿಚಾರ ಕೇಳತೊಡಗಿದಳು. ನನ್ನ ತಂದೆ, ಅಣ್ಣಂದಿರ ವಿಚಾರ ಅವಳಿಗೆ ಸ್ವಲ್ಪ ಗೊತ್ತಿತ್ತು. ನಾನು ಊರು ಬಿಟ್ಟಾದ ಮೇಲಿನ ಕಥೆ ಕೇಳಿದಳು. ಅವಳು ಕೇಳಿದ್ದನ್ನೆಲ್ಲ ವಿವರಿಸುತ್ತ ನನ್ನ ಸುಖದುಃಖ ತೋಡಿಕೊಂಡೆ. ಅವಳು ನಂಬಲೇ ಇಲ್ಲ. ನಾನು ಸಾವಿರದ ಸರದಾರನೆಂದು ಒಂದು ಮಾತಿಗೆ ಸಾವಿರ ರೂಪಾಯಿ ತೆಗೆದುಕೊಳ್ಳುತ್ತೇನೆ ಎಂದೂ ಶಿರಸ್ತೈಲ ಹೇಳಿದ್ದ. ಆ ಮುದುಕಿ ಅದನ್ನು ಅಕ್ಷರಶಃ ನಂಬಿದ್ದಳು. ಹಾಗಲ್ಲ ಎಂದರೆ ಅವಳು "ನನಗ ಸಾಲ ಕೊಡಬ್ಯಾಡಪ್ಪ, ನಿನಗ ಬರ್ತಿದ್ದರ ಬರಲಿ. ಇನ್ನಷ್ಟ ಬರಲೇಳು" ಎಂದು ಹೇಳಿ ತುಸು ಧ್ಯಾನಿಸಿದಳು. ಆಮೇಲೆ ಮೆಲ್ಲಗೆ ನನ್ನ ಕಡೆ ಕತ್ತು ಒಲೆದು "ನಿನ್ನ ಮಾತಿಗಿ ಸಾವಿರಾದರೆ, ನಮ್ಮ ರವಿಚಂದ್ರನ ಮಾತಿಗೆಷ್ಟು?" ಅಂದಳು. ಆಧುನಿಕ ನಗರ ಜೀವನದ ಬಗೆಗಿನ ಕನಸುಗಳು ಅವಳ ಹಣದ ಮೌಲ್ಯವನ್ನೇ ಏರುಪೇರು ಮಾಡಿದ್ದವು. ರವಿಚಂದ್ರ ನಗರದಲ್ಲಿ ಏನು ಮಾಡುತ್ತಿದ್ದಾನೆಂದು ಅವಳಿಗೆ ತಿಳಿಯದು. ನಗರದಲ್ಲಿದ್ದಾನೆಂದ ಮೇಲೆ ಗಳಿಸುತ್ತಿದ್ದಾನೆಂಬುದೊಂದೇ ಅವಳ ತರ್ಕ. ನನಗೆ ತೋಚಿದ ರೀತಿಯಲ್ಲಿ ಅವಳ ಕನಸುಗಳನ್ನು ತಿದ್ದಲು ಯತ್ನಿಸಿದೆ. ತನ್ನ ಅಭಿಪ್ರಾಯ ಬದಲಿಸಿಕೊಳ್ಳಲು ಮುದುಕಿ ಸಿದ್ಧಳಿರಲಿಲ್ಲ. ಇಂಥ ಅಭಿಪ್ರಾಯ ನಮ್ಮೂರಿನ ಅನೇಕರಲ್ಲಿದೆ. ನಗರದ ಜನ ಏನು ಮಾಡಿದರೂ ದುಡ್ಡು ಸಿಗುತ್ತದೆಂದೂ ತಾವಿಲ್ಲಿ ಬೆವರು ಸುರಿಸಿದರೂ ಒಂದು ಕಾಸೂ ಹುಟ್ಟುವುದಿಲ್ಲವೆಂದೂ ಅವನ ನಂಬಿಕೆಯಾಗಿತ್ತು. ಮತ್ತು ಇದೇ ಕಾರಣಕ್ಕಾಗಿ ಬದುಕಿನ ಸರಳ ಸಂತೋಷಕ್ಕೂ ಎರವಾಗಿದ್ದರು. ನಾನು ಹೀಗೆ ಯೋಚಿಸುತ್ತಿರುವಲ್ಲಿ ಶಿರಸ್ತೈಲ ಚಹ ತಗಂಬಂದ. ಮೂವರೂ ಕುಡಿದೆವು. ಮುದುಕಿ ಹರುಪಾದಳು. "ನಿನ್ನೆ ಎಲ್ಲಿ ಬಿಟ್ಟಿದ್ದೆ?" ಎಂದಳು.

"ಮೊಲದ ಪಲ್ಯ ಸಾರು ಮಾಡಿ, ಗೌಡ - ಗೌಡ್ತಿಗೆ ಬಡಿಸಿದಿಯಲ್ಲ. ಅವರುಂಡು ನಂದ ಗಾಂವಿಗೆ ಹೋದರು. ಮರ್ಯಾ ನೇಗಿಲ ಕುಳ ಒಗೆದ."

“ಇನ್ನ ಮ್ಯಾಲ ಅವಗ ಮರ್ಯಾ ಅನ್ನಬ್ಯಾಡಪ್ಪ, ಮರೆಪ್ಪಾ ಅನ್ನು.”

- ಎನ್ನುತ್ತ ಕಥೆ ಸುರು ಮಾಡಿದಳು;

“ಸರಗಂ ದೇಸಾಯಿ ಮೊಲ ತಂದಿದ್ದನಲ್ಲ, ಅದು ಅವನೇ ಹೊಡೆದಿದ್ದರಬೇಕು ಇಲ್ಲಾ ಅವನ ಜೊತೆಗಿನ ಕಾಳ್ಯಾ, ನಿಂಗ್ಯಾ ಹೊಡೆದದ್ದಿರಬೇಕೆಂದು ನಾವು ಅಂದುಕೊಂಡಿದ್ದೆವು. ಆದರೆ ಅದು ಸುಳ್ಳಾಗಿತ್ತು. ಸಂಜೀತನಕ ಬಂದೂಕು ಹೊತ್ತು ತಿರುಗಿ ತಿರುಗಿ ದಣಿವಾಗಿ ಮೊಲವಿಲ್ಲದೆ ತಿರುಗಿ ಬರುತ್ತಿದ್ದಾಗ ಮರೆಪ್ಪ ಬಂದು “ತಗೊಳ್ಳಿ ಸರಕಾರ” ಎಂದು ಕೊಟ್ಟಿದ್ದನಂತೆ. ಆಮೇಲೆ ಈ ವಿಷಯ ಕಾಳ್ಯಾನಿಂದ ತಿಳಿಯಿತು. ನಮಗೆ ಆಮೇಲೆ ತಿಳಿದದ್ದೇ ಒಳ್ಳೆಯಾಯ್ತು. ಹಾಗೇನಾದರೂ ಅದು ಮೊದಲೇ ತಿಳಿದಿದ್ದರೆ ಸಿಂಗಾರೆವ್ವ ಹೊರಗೆಸೆದು ಬಿಡುತ್ತಿದ್ದಳು.

ಅದಲ್ಲ ಮುಖ್ಯ. ಇಲ್ಲಿ ಕೇಳು - ಅದೇ ನೆಪದಿಂದ ಮರೆಪ್ಪ ದೇಸಾಯಿಯ ಬಲಗೈ ಬಂಟನಾಗಿಬಿಟ್ಟ. ಬಿತ್ತನೆಯಲ್ಲಿ ತೊಡಗಿದ್ದರಿಂದ ಬಯಲಾಟದ ಗೆಣೆಕಾರರ್ಯಾರೂ ದೇಸಾಯಿಗೆ ಸಿಗುತ್ತಿರಲಿಲ್ಲ. ಅವನು ಹೊಲ ತೋಟಗಳಲ್ಲಿ ಅಷ್ಟು ಆಸಕ್ತಿಯವನೂ ಅಲ್ಲ. ದೇಸಗತಿ ಜಮೀನಿನ ಗತಿ ದೇವರೇ ಬಲ್ಲ, ಆಳುಗಳು ತಮಗೆ ತಿಳಿದಂತೆ, ತಿಳಿದಷ್ಟು ಬೀಜ ಬಿತ್ತಿ ಗೊಬ್ಬರ ಹಾಕಿದ್ದರು. ದೇಸಗತಿಯ ಬಣಿವೆ ಹಿರಿದರೆಷ್ಟು, ಬಿಟ್ಟರೆಷ್ಟು - ಅವರಿಗೆ ಬರುವ ಚಾಕರಿ ತಪ್ಪಿದ್ದಲ್ಲವಲ್ಲ - ಹಾಗಿದ್ದರು. ಈಗ ಅರಮನೆಗೆ ಬರುತ್ತಿದ್ದವನು ಪರಮಶೆಟ್ಟಿ ಒಬ್ಬನೇ. ಅವನು ಸಾಲ ವಸೂಲಿಗೆ ಬರುತ್ತಿದ್ದ. ದೇಸಾಯಿ ಏನೇನೋ ಹೇಳಿ ಕಳಿಸುತ್ತಿದ್ದ. ಹೀಗಾಗಿ ಪಾಪ, ದೇಸಾಯಿ ಒಬ್ಬಂಟಿಯಾಗಿದ್ದ. ಅವನ ಪ್ರಾಸ ನುಡಿಸವರಿಲ್ಲ. ತಾರಕ ಕೇಳವರಿಲ್ಲ, ಈಚೀಚೆ ಬೇಹೋಶ್ ಕೂಡ ಆಗಿರಲಿಲ್ಲ.

ಮರೆಪ್ಪ ಸಿಕ್ಕ ನೋಡು, ಅವನೋ ಎಳೆ ಸಿಕ್ಕರೆ ಹಚಡ ನುಂಗುವ ಪೈಕಿ. ದೇಸಾಯಿ ಎದುರಿಗಿದ್ದರೆ ಬಾಗಿದವನು ತಲೆ ಎತ್ತುತ್ತಿರಲೇ ಇಲ್ಲ. ಯಾವುದಾದರೂ ಕೆಲಸಕ್ಕೆ ಕಳಿಸಿದರೆ ಅದನ್ನು ಮಾಡಿಕೊಂಡೇ ಬರುತ್ತಿದ್ದ. ಮಾತ್ರವಲ್ಲ, ಕೆಲಸಕ್ಕೆ ಹೋಗುವಾಗೊಮ್ಮೆ ಮಾಡಿಕೊಂಡು ಬಂದ ಮೇಲೊಮ್ಮೆ ಬಯಲಾಟದ ಚಾರರಂತೆ ಬಲಗೈ ತನ್ನ ಹಣೆಗೂ ಮೊಳಕಾಲಿಗೂ ತಾಗಿಸಿ ಕುರ್ಣಿಸಾತ ಮಾಡುತ್ತಿದ್ದ. ಸಾಲದಕ್ಕೆ ಮಾತಿಗೊಮ್ಮೆ ಸರಕಾರ ಎನ್ನುತ್ತಿದ್ದ. ಇದು ನಮ್ಮ ದೇಸಾಯಿಗೆ ಹುಚ್ಚು ಹಿಡಿಸಿತು. ಅವನಿಂದ ಸರಕಾರ ಎನ್ನಿಸಿಕೊಳ್ಳುವುದಕ್ಕಾಗಿಯೇ ಅನೇಕ ಬಾರಿ ಏನೇನೋ ಹರಟುತ್ತಿದ್ದ. ಅವನ ವಿನಯದಿಂದ ದೇಸಾಯಿ ಎಷ್ಟು ಪ್ರಸನ್ನನಾದನೆಂದರೆ ಆ ವಿನಯವೇ ಚಟವಾಗಿ ಒಂದೇ ವಾರದಲ್ಲಿ ಅವನಿಗೆ ಎರಡು ಬಡ್ತಿ ಕೊಟ್ಟ. ಮೊದ ಮೊದಲು ದೇಸಾಯಿಯ ಆಳಾಗಿದ್ದವನು ವಾರದಂತ್ಯಕ್ಕೆ ಅವನು ಬಂದೂಕು ಹಿಡಿದು ಸದಾ ಕಾಲಿಗಂಟಿರುವ ಬಂಡನಾಗಿಬಿಟ್ಟ. ದೇಸಾಯಿ ಏನು ಹೇಳಿದರೂ ಮೆಚ್ಚುತ್ತಿದ್ದ. ಅವನ ತಾರಕ ಪ್ರಾಸಗಳಿಗೆ ಬೆಕ್ಕಸಬೆರಗಾಗುತ್ತಿದ್ದ. ಇಂಥ ದೊಡ್ಡ ಮನುಷ್ಯ ಜಗತ್ತಿನಲ್ಲೇ ಇಲ್ಲವೆಂಬಂತೆ ನಟಿಸುತ್ತಿದ್ದ. ದೇಸಾಯಿ ಈ ನಟನೆಯನ್ನು ನಂಬುತ್ತಿದ್ದ.

ಒಮ್ಮೆ ದರ್ಬಾರಿನಾಚೆ ನಿಂತಿದ್ದವನು ದೇಸಾಯಿ ಮೇಲಕ್ಕೇ ಕರೆದು ಕುರ್ಚಿಯ ಬಳಿಯಲ್ಲೇ ಕೂರಿಸಿಕೊಂಡ. ಮರೆಪ್ಪ ಕಿಲಾಡಿ, ಇಷ್ಟು ಅವಕಾಶ ದೇಸಾಯಿಯ ಕಾಲು ತಿಕ್ಕತೊಡಗಿದ. ಅಂದಿನಿಂದ ಆಳುಗಳು ಕೆಲಸ ಮಾಡದಿದ್ದರೆ ಅವರೆಲ್ಲರ ಕೆಲಸ ಇವನೊಬ್ಬನೇ ಮಾಡುತ್ತಿದ್ದ. ಮತ್ತು ತಾನು ಮಾಡಿದ್ದು ಹ್ಯಾಗೋ ದೇಸಾಯಿಯ ಗಮನಕ್ಕೆ ಬರುವ ಹಾಗೆ ಮಾಡುತ್ತಿದ್ದ. ಹೊಲೆಯನಿಗೆ ದರ್ಬಾರಿನಲ್ಲಿ ಕಾಲಿಡುವುದಕ್ಕೆ ಅವಕಾಶ ಕೊಡುವುದು ಸಲ್ಲದೆಂದು ಪರಮಶೆಟ್ಟಿ ಹೇಳಿದ. ದೇಸಾಯಿ ಕೇಳಲಿಲ್ಲ “ಇವನು ನನ್ನ ಬಂಟ” ಎಂದು ಜಂಬದಿಂದ ಹೇಳಿ ನಕ್ಕ. ಒಬ್ಬ ಹೊಲೆಯನಿಗೆ ಅಷ್ಟು ಸಲಿಗೆ ತೋರುವುದು ಹೆಚ್ಚೆ. ಅದರೇನು ಮಾಡುವುದು? ಅವನ ಸೇವೆಯಿಂದ ಇವನು ಧನ್ಯನಾಗಿದ್ದ. ತನ್ನ ಔದಾರ್ಯದಿಂದ ಅವನನ್ನೂ ಧನ್ಯಗೊಳಿಸಬೇಕೆಂದು ಮೇಲೆ ಕರೆದಿದ್ದ. “ಸಂತೋಷವಾಯ್ತೊ?” ಎಂದು ನಕ್ಕು ಕೇಳಿದ. ಅದಕ್ಕೆ ಮರೆಪ್ಪ “ಕಾಲಿದ್ದಲ್ಲಿ ಕಾಲ್ಮರಿ, ನೀವಿದ್ದಲ್ಲಿ ನಾನು” ಎಂದುಬಿಟ್ಟ. ಈ ಮಾತಿನಿಂದ ದೇಸಾಯಿ ಎಷ್ಟು ಧನ್ಯವಾದನೆಂದರೆ ಆಗಾಗ ಈ ಮಾತನ್ನು ಬೇರೆ ಆಳುಗಳಿಗೆ, ಬರುಹೋಗುವವರಿಗೆ ಹೇಳಿ ಹೇಳಿ ಆನಂದಪಟ್ಟ. ಆ ದಿನ ರಾತ್ರಿ ಕುಡಿದಾಗ ಮರೆಪ್ಪನ ತೊಡೆಯ ಮೇಲೊರಗಿ “ಮರ್ಯಾ, ನೀನಃ ನನ್ನ ರಾಣಿ ಆಗಿ ಹುಟ್ಟಬೇಕಾಗಿತ್ತೋ!” ಎಂದು ಕಣ್ಣೀರಿಟ್ಟ.

ದೊಡ್ಡವನಾದ ಮೇಲೆ ಮರೆಪ್ಪನನ್ನು ನಾನು ಸರಿಯಾಗಿ ನೋಡಿದ್ದು ಈಗಲೇ. ಅವನಲ್ಲಿ ಒರಟಾದ, ಯಾರೂ ಎದುರಿಸಲಾಗದ ಶಕ್ತಿ ತುಂಬಿದೆ ಎಂದು ನೋಡಿದ ಯಾರಿಗೂ ಅನಿಸುತ್ತಿತ್ತು. ವಯಸ್ಸಿಗೆ ಮೀರಿ ಬೆಳೆದ ಅವನ ಮೈಕಟ್ಟು ಒಂದೇ ಅಖಂಡ ಕಲ್ಲಿನಲ್ಲಿ ಒಡ್ಡೊಡ್ಡಾಗಿ ಕೆತ್ತಿದ ಮೂರ್ತಿಯಂತಿತ್ತು. ಮುಖದಲ್ಲಿ ಮಾತ್ರ ಗೆದ್ದ ಅಥವಾ ಕೊನೆಗೆ ತಾನೇ ಗೆಲ್ಲುವೆನೆಂಬ ವಿಶ್ವಾಸದ ಕಳೆಯಿರುತ್ತಿತ್ತು. ಅದು ತನ್ನ ತೋಳಬಲದಲ್ಲಿಯ ನಂಬಿಕೆಯಿಂದ ಹುಟ್ಟಿದ್ದಾಗಿರಬಹುದು. ಮರೆಪ್ಪ ಒಬ್ಬ ದರಿದ್ರ ಹೊಲೆಯನಂತೆ, ತಾಯಿಯನ್ನು ಕೊಂದ ಪಾಪಿಯಂತೆ ಕಾಣುತ್ತಲೇ ಇರಲಿಲ್ಲ. ಬದಲು ನಿರ್ಗತಿಕನಾದ ದೊಡ್ಡ ಮನುಷ್ಯನಂತೆ, ಸದಾ ಬಾರೀ ವ್ಯಥೆಯಿಂದ ಕೂಡಿದ, ಆದರೆ ತನ್ನ ಸಹಾಯಕ್ಕೆ ಯಾರನ್ನೂ ಅವಲಂಬಿಸಿದವನ ಹಾಗೆ ಕಾಣುತ್ತಿದ್ದ. ಅವನ ಕಣ್ಣೋ ಉಕ್ಕಿನವು. ಅವುಗಳಿಂದ ಹೊರಡುವ ನೋಟ ಗುರಿಯಾದವರ ಒಳಹೊಕ್ಕು ಪಾರಾಗಿ ಬರುತ್ತಿದ್ದವು. ಇವನ ಎದುರಿಗೆ ನಿಂತಿದ್ದರೆ ದೇಸಾಯಿ ಸಣ್ಣ ಬಾಲಕನಂತೆ ಕಾಣುತ್ತಿದ್ದ. ಆಗಲೇ ಅವನು ಅರಮನೆಯನ್ನು ಇದು ತನ್ನದೇ ಎಂಬಂತೆ ನೋಡುತ್ತಿದ್ದ.

ಇದನ್ನೆಲ್ಲಾ ನಾವು ಗಮನಿಸುತ್ತಿದ್ದೆವು. ಒಂದು ಸಣ್ಣ ಸಮಾಧಾನವೆಂದರೆ ಮರೆಪ್ಪ ಅಂತಸ್ತಿನ ಕೋಣೆಗೆ ನುಗ್ಗಿರಲಿಲ್ಲ. ಬಹುಶಃ ಸಜ್ಜನನಾದನೆಂದೂ ತಾನು ಮಾಡಿದ್ದರ ಬಗ್ಗೆ ಪಶ್ಚಾತ್ತಾಪ ಪಡುತ್ತಿದ್ದಾನೆಂದೂ ನಾನು ಹೇಳಿದೆ. ಸಿಂಗಾರೆವ್ವ ನಂಬಲಿಲ್ಲ. ದೇಸಾಯಿ ಇಷ್ಟು ಹತ್ತಿರದವನಾದರೆ ಮುಂದೊಂದು ದಿನ ಅಪಾಯ ತಪ್ಪಿದ್ದಲ್ಲ ಎಂದು ಅವಳ ತರ್ಕ. ಆದರೆ ನಾವು ಅವನಿಗೆ ಹೆದರಬೇಕಾದ ಅಗತ್ಯವಿಲ್ಲವೆಂದೇ ಕಂಡಿತು. ಹುಚ್ಚಯ್ಯನನ್ನು ಕೊಂದವರೆಂಬ ಬೆದರಿಕೆಯನ್ನು ಅವನು ಹಾಕುವ ಪೈಕಿ ಅಲ್ಲ. ಹಾಗೆ ಹೇಳಿದ ಎನ್ನೋಣ, ಅವನ ಹತ್ತಿರ ಸಾಕ್ಷ್ಯಾಧಾರ ಏನಿದೆ? ಇದನ್ನೇ ಹೇಳಿ ಅವಳಿಗೆ ಧೈರ್ಯ ತುಂಬಲು ನೋಡಿದೆ. ನಾನೋ ಆ ದುರ್ಘಟನೆಯನ್ನು ಬರೀ ಸಾಕ್ಷಿಕಳಾಗಿ ನೋಡಿದಳು. ಅವಳಾದರೆ ಪ್ರತ್ಯಕ್ಷ ಅನುಭವಿಸಿದವಳು. ಹ್ಯಾಗೆ ನಂಬುತ್ತಾಳೆ? ದೇಸಾಯಿಗೆ ಮರೆಪ್ಪನಿಂದ ದೂರ ಇರಲು, ಅದು ಸಾಧ್ಯವಾಗದಿದ್ದರೆ ಅರಮನೆಯಿಂದಾದರೂ ಅವನನ್ನು ದೂರವಿಡಲು ತಾಕೀತು ಮಾಡುವುದಾಗಿ ನಿರ್ಧರಿಸಿದಳು. ಆದರೆ ಸರಗಂ ದೇಸಾಯಿ ಸಿಂಗಾರೆವ್ವನಿಗೆ ಸಿಕ್ಕಾಗಲೆಲ್ಲ ಕುಡಿದಿರುತ್ತಿದ್ದ ಮತ್ತು ಕುಡಿದಾಗಾಡುವ ಆ ಭಾಷೆಯನ್ನು ಸಿಂಗಾರೆವ್ವ ಇನ್ನೂ ಕಲಿತಿರಲಿಲ್ಲ. ಆಗ ಅವನೊಂದಿಗೆ ಮಾತಾಡಬೇಕೆಂದರೆ ಬಯಲಾಟದ ಬಣ್ಣ ಹಚ್ಚಿಕೊಳ್ಳಬೇಕು. ಮತ್ತು ಆ ಪರಿಭಾಷೆಯಲ್ಲೇ ಮಾತಾಡಬೇಕು. ಉದಾಹರಣೆಗೆ ಅಲ್ಲಿ ಗಂಡ ಹೆಂಡತಿ ಹೊಲ ಮನೆ ಮುಂತಾದ ಶಬ್ದಗಳೇ ಇರಲಿಲ್ಲ. ಏನಿದ್ದರೂ ರಾಜ, ರಾಣಿ, ಮಂತ್ರಿ, ಪ್ರಧಾನಿ, ರಾಜ್ಯ, ಅರಮನೆ... ನಗು ಬಂದಾಗ ಹಹ್ಹಾ ಎನ್ನುವುದು. ಆಳು ಬಂದಾಗ ತಾರಕ ನುಡಿಯುವುದು ಇತ್ಯಾದಿ. ಅದೂ ಒಮ್ಮೆ ಹುಸಿಹೋಗಿ ಗೋಳುಪಡಬೇಕಾದ ಪ್ರಸಂಗವೊದಗಿತು; ಸಿಂಗಾರೆವ್ವ ಅಜಾರಿ ಬಿದ್ದಾಗಿನಿಂದ ದೇಸಾಯಿ ಕೆಳಗೇ ಮಲಗುತ್ತಿದ್ದನಲ್ಲ. ಗುಣವಾದ ಮೇಲೂ ಅಂತಸ್ತಿಗೆ ಏರಿ ಬರಲೇ ಇಲ್ಲ. ಅವನಿಗದರ ಅಗತ್ಯ ಕಾಣಲಿಲ್ಲ. ಸಿಂಗಾರೆವ್ವನಿಗೆ ಅವನ ಕೊರತೆ ಕಾಣಲಿಲ್ಲ. ನಾನೇ ಅವಳ ಜೊತೆ ಮಲಗುತ್ತಿದ್ದೆ. ಸಂಜೆಯಿನ್ನೂ ಆಗಿರಲಿಲ್ಲ. ಹೋಗಿ ದೇಸಾಯಿಯನ್ನು ಕರೆದು ಬಾ ಎಂದು ನನ್ನನ್ನಟ್ಟಿದಳು.

ನಾನು ಮೇಲೆ ಬಂದಾಗ ಸಿಂಗಾರೆವ್ವ ಕಿಡಕಿಯಿಂದ ಹೊರಗೆ ನೋಡುತ್ತಿದ್ದಳು. ಆ ಕಿಡಕಿಯಲ್ಲಿ ಮುಖ ಇಟ್ಟು ಹೊರಗೆ ನೋಡುವುದೆಂದರೆ ನಮಗಿಬ್ಬರಿಗೂ ಬಹಳ ಆನಂದ. ಅಥವಾ ನಮಗೊಂದು ಹೊರಗಿದೆಯೆಂದು ಅರಿವಾಗುತ್ತಿದ್ದದ್ದು ಈ ಸಣ್ಣ ಕಿಡಕಿಯಿಂದಲೇ. ಅದರಲ್ಲಿ ಕಾಣಿಸುವುದೇನು ಹೆಚ್ಚಿಗಿರಲಿಲ್ಲ. ಅರಮನೆಯ ಹಿತ್ತಲಿಗೆ ಅಂಟಿದ ಅವೆರಡು ಹೊಲೆಯರ ಗುಡಿಸಲುಗಳು ಅದರಾಚೆಯ ಹೊಲಗಳು. ಅವುಗಳ ತುದಿಯಿಂದ ಇನ್ನೊಂದು ಗುಡಿಸಲು, ಅದಕ್ಕಂಟಿ ಹುಚ್ಚಯ್ಯನ ಸಮಾಧಿ, ಕುಮುದವ್ವನ ಹುಣಸೇ ಮಳೆ ಇದ್ದವು. ಕುಮುದವ್ವನ ಆ ಹುಣಸೇ ಮಳೆ ಮಾತ್ರ ಯಾವಾಗ ನೋಡಿದರೂ ನಮಗೆ ಚಂದ ಕಾಣುತ್ತಿತ್ತು. ಅದೇ ನಮ್ಮ ಪಾಲಿಗೆ ಕ್ಷಿತಿಜವಾಗಿತ್ತು. ಅಲ್ಲಿಗೆ ಹೆಂಗಸರು ಹೋಗಬಾರದೆಂದು ಗೊತ್ತಿದ್ದರೂ ಒಮ್ಮೆ ಹ್ಯಾಗೋ ಮಾಡಿ ಹೋಗಿಯೇ ಬರಬೇಕೆಂದು, ಹುಣಸೇ ಮಳೆಯ ತುಂಬ ಓಡಾಡಿ ಆಟ ಆಡಿ ಬರಬೇಕೆಂದು ಮಾತಾಡಿಕೊಳ್ಳುತ್ತಿದ್ದೆವು. ಅಲ್ಲಿದ್ದ ಕುಮುದವ್ವನ ಗುಡಿ ಮತ್ತು ಮೂರ್ತಿಯ ವಿಚಾರವೂ ನಮಗೆ ಗೊತ್ತಿತ್ತು. ಕುಮುದವ್ವನ ಮೂರ್ತಿಯ ಬಗ್ಗೆ ಕೇಳು ನನಗೆಷ್ಟು ಗಾಬರಿಯಾಗಿದ್ದತೆಂದರೆ - ಒಂದು ದಿನ ನಾನು ಮೂರ್ತಿಯ ಮುಂದೆ ನಿಂತ ಹಾಗೆ, ಕುಮುದವ್ವನ ಸ್ಥಳದಲ್ಲಿ ಸಿಂಗಾರೆವ್ವ ಅದೇ ಭಂಗಿಯಲ್ಲಿ ಕೂತಿದ್ದಾಗ ಯಾವನೋ ಒಬ್ಬ ಹುಚ್ಚಯ್ಯನಂಥ ಪೂಜಾರಿ ಪೂಜೆ ಮಾಡಿದ ಹಾಗೆ, ಅವನೇ ಬರ ಬರುತ್ತ ಮರೆಪ್ಪ ಆದ ಹಾಗೆ, ಕನಸಾಗಿತ್ತು. ಹಾಗೆಂದು ಹೇಳಿದಾಗ ಸಿಂಗಾರೆವ್ವ "ಥೂ ಹಡಸು" ಎಂದು ಚಿವುಟಿದ್ದಳು.

ನಾನು ಸಿಂಗಾರೆವ್ವನ ಹಿಂದೆ ನಿಂತು ಕಿಟಕಿಯಲ್ಲಿ ನೋಡತೊಡಗಿದೆ. ಹೊಲ ಮೊಳಕೆಯೊಡೆದಿದ್ದವು. ಮೋಡ ಕವಿದಂತೆ ಕುಮುದವ್ವನ ಹುಣಸೇಮಳೆಯ ಅಂತರಾಳ ಮುಸುಕಾಗಿ ಗವಿಯಾದಂತೆ ಕಾಣುತ್ತಿತ್ತು. ಸೂರ್ಯ ಮೋಡಗಳ ಹೊರಬಂದು ಬಿಸಿಲು ಚೆಲ್ಲಿದಾಗ ಎಲ್ಲ ಪ್ರಕಾಶಮಾನವಾಗಿ ಬೆಳಗುತ್ತ ಇಡೀ ಮಳೆ ಚೆನ್ನದ ನಗೆ ನಕ್ಕಂತೆ, ಗಾಳಿಗೆ ತೇಲಾಡುತ್ತಿದ್ದ ಹುಣಸೇಗಿಡಗಳ ಎಲೆಗಳ ಮೇಲೆ ಬೆಳ್ಳಿ ಬಂಗಾರದ ಮುತ್ತು ತೂರಾಡಿದಂತೆ, ಮುಂಚಿನ ಹುಳುಗಳನ್ನು ಕೇರಿದಂತೆ ಕಾಣುತ್ತಿತ್ತು. ಇದೊಂದು ಅರೆಗಳಿಗೆ ಮಾತ್ರ ಮತ್ತೆ ಮಳೆ ಕಳ್ಳತನದಿಂದ ಸೆಳೆಯುತ್ತಿತ್ತು. ಇದ್ದಕ್ಕಿದ್ದಂತೆ ಉಳಿದ ಎಲ್ಲ ಕಡೆ ನೆರಳು, ಮೆಳೆಯ ಮೇಲೆ ಮಾತ್ರ ಬಿಸಿಲು ಬಿದ್ದು ಮಳೆಯೂ ಬೀಳತೊಡಗಿತು. ಮೆಳೆಯ ಬುಡದಲ್ಲಿ ಬಿಸಿಲಿನ ಕೋಲುಗಳು ಕೋಲಾಟ ನಡೆಸಿದ್ದರೆ ಮ್ಯಾಲೆ ಬಿಸಿಲಲ್ಲಿ ಹೊಳೆಯುವ ಹನಿ ಚೆನ್ನದ ಮಳೆ ಸುರಿವ ಹಾಗೆ ಕಂಡಿತು. ಇಬ್ಬರೂ "ಅಯ್ ಶಿವನಃ!" ಎಂದೆವು. ಆಗಲೇ ನಾನು ಬಂದದ್ದು ಅವಳಿಗೆ ಗೊತ್ತಾದದ್ದು, ತಿರುಗಿದೊಡನೆ ಒಮ್ಮೆ ಅವಳ ಮುಖ ಕಂದಿ ಬಾಡಿತು. ದೇಸಾಯಿ ಯಾವಾಗಲೋ ಬಂದು ಕಂಬದಲ್ಲಿಯ ಗೊಂಬೆಗಳನ್ನು ನೋಡುತ್ತ ಆಕಳಿಸುತ್ತಿದ್ದ.

ಹೇಳಿ ಕಳಿಸದ್ದು ಅವಳೇ ಆದರೂ ಅವನು ಬಂದದ್ದಕ್ಕೆ ಸಂತೋಷಪಡಲಿಲ್ಲ. ಎಳೇ ಕೂಸಿನ ಕೈಯೊಳಗಿನ ಕನ್ನಡಿ ಕಸಿದಾಗ ಆ ಕೂಸಿರುತ್ತದಲ್ಲ, ಆ ಥರ ಮುಖ ಮಾಡಿದಳು. ಕಣ್ಣು ಕಳೆ ಕಳೆದುಕೊಂಡಿದ್ದವು. ದೇಸಾಯಿ "ಏನ ಕರಿಸಿದ್ದು?" ಅಂದ. ಸಿಂಗಾರೆವ್ವ ಮಾತಾಡಲೇ ಬೇಕಿತ್ತಲ್ಲ ಮಾತಾಡಿದಳು;

"ಇಷ್ಟ ದಿನ ಬಯಲಾಟ ಮಾಡಿದೀರಿ. ಸಿಂಹಾಸನದಾಗ ರಾಜನ ಜೋಡಿ ನಾಯಿ ಕೂತದ್ದನ್ನ ನೋಡಿರೇನು?"

"ಇಲ್ಲ" ಎಂದಂದು ಯಾಕೆ ಹೀಗೆ ಹೇಳುತ್ತಿದ್ದಾಳೆಂದು ತಿಳಿಯದೆ ತಬ್ಬಿಬ್ಬಾಗಿ ಮತ್ತೆ ತಾನೆ "ಏನಂದ್ರಿ?" "ಏನಂದ್ರಿ?" ಎಂದ.

"ಆ ಹೊಲ್ಯಾಗಿಷ್ಟ ಅದರ ಕೊಟ್ಟರ ನೋಡಿದ ನಾಕ ಮಂದಿ ಏನಂದಾರು?"

"ಏನಂತಾರ? ನಿಮಗ್ಗೊತ್ತಿಲ್ಲ. ಭಾಳ ಛಲೋ ಮನುಶ ಅವ"

"ಚಲೋ ಮನಶ್ಯಾ ಇದ್ದರ, ಅವನ್ನಃ ಇಟ್ಟಗೊಂಡಿರ್ರಿ, ನಾ ಹೋಗತೀನಿ"

- ಅಂದಳು. ಸಿಂಗಾರೆವ್ವನ ಆಳದ ನಿರಾಸೆ ನನ್ನಲ್ಲಿ ಕಣ್ಣೀರು ಬರಿಸಿತು. ದೇಸಾಯಿ ಏನೂ ಹೇಳಲಿಲ್ಲ. ಎದ್ದು ಆಕಳಿಸಿ ಸರಸರ ಮೆಟ್ಟಿಲಿಳಿದು ಹೋದ. ಅವನು ಹೋದ ಮೇಲೆ ನಮಗೆ ಗೊತ್ತಾಯ್ತು: ಮರೆಪ್ಪ ಮರೆಯಲ್ಲಿ ನಿಂತಿದ್ದ ಎಂದು. "ಚಂಡಾಲ ದೈವ" ಎಂದು ಎರಡು ಸಲ ಹಣೆ ಹಣೆ ಬಡಿದುಕೊಂಡು ಸುಮ್ಮನಾದಳು.

ಆ ರಾತ್ರಿ ಇಬ್ಬರೂ ಊಟ ಮಾಡಲಿಲ್ಲ. ಸಿಂಗಾರೆವ್ವ ದಿಂಬಿನಲ್ಲಿ ನಿಟ್ಟುಸಿರು ತುಂಬುತ್ತ ಮಲಗಿದ್ದಳು. ನಾನೂ ದೀಪ ಆರಿಸಬೇಕೆಂದು ಈ ಕಡೆ ಬಂದರೆ ಬಾಗಿಲಲ್ಲಿ ಮರೆಪ್ಪ ಉಗುರು ಕಚ್ಚುತ್ತ ನಿಂತಿದ್ದ. "ಎವ್ವಾ" ಅಂದೆ. ನನ್ನ ದನಿಯ ಅನಿರೀಕ್ಷಿತ ಏರಿಳಿತ ಕೇಳಿ, ನನ್ನ ಕಡೆ ಹೊರಳಿ ಎದುರು ನಿಂತ ದೈತ್ಯನನ್ನು ನೋಡಿದಳು. ತಕ್ಷಣ ಎದ್ದು ನಿಂತು ಥರಥರ ನಡುಗ ತೊಡಗಿದಳು. ದನಿಮಾಡಿ ಅಳುವುದಕ್ಕೂ ಅವಳಿಗೆ ಧೈರ್ಯವಿರಲಿಲ್ಲ. ಆತ ರೆಪ್ಪೆಗಳನ್ನ ಇಕ್ಕಟ್ಟಾಗಿಸಿ ದೃಷ್ಟಿಯನ್ನ ಚೂಪಾಗಿಸಿ ಇರಿಯುವ ಹಾಗೆ ಅವಳನ್ನೇ ದುರುಗುಟ್ಟಿ ನೋಡಿದ. ತುಟಿ ಬಿಗಿ ಹಿಡಿದು ಮೂಗನ್ನು ಅರಳಿಸುತ್ತ ಹಾಗೆ ಬಾಗಿಲು ಮುಂದೆ ಮಾಡಿದ. ಸಿಂಗಾರೆವ್ವ "ಕೆಳಗ ದೇಸಾಯಿ ಇದ್ದಾನ ಕೂಗತೀನಿ" ಎಂದಳು ಸಣ್ಣ ದನಿಯಲ್ಲೇ. ಅವನು ಹೆದರಲೇ ಇಲ್ಲ. ತನ್ನ ಒರಟು ತುಟಿಗಳಲ್ಲಿ ತಾತ್ಸಾರಭರಿತ ನಗೆ ತೂರುತ್ತ, ದೃಢವಾದ ಹೆಜ್ಜೆಯಿಡುತ್ತ ಮುಂದೆ ಮಾತಿನಿಂದ ಜುಗುಪ್ಸೆಗೊಂಡವರಂತೆ ಬಾಯ ಕೊನೆಯನ್ನೊಮ್ಮೆ ಅಸಹ್ಯವಾಗಿ ಗೀಸಿ ನನ್ನ ಕಡೆ ಹಾರಿ ಉಗುಳಿ ಸಿಂಗಾರೆವ್ವನ ಕಡೆ ನಡೆದ. ಮೆಲ್ಲಗೆ ಹೋದವನೆ, ಆ ಚಂಡಾಲ - ಅವನ ಕೈಗೆ ಹಾವು ಹರಿಯಲಿ - ಜೋರಿನಿಂದ ಅವಳ ಕೆನ್ನೆಗೆ ಫಳೀರೆಂದು ಏಟು ಹಾಕಿದ. ಸಿಂಗಾರೆವ್ವ ತತ್ತರಿಸಿ ಹಾಸಿಗೆಯ ಮೇಲುರುಳಿ ವಿಲಿವಿಲಿ ಒದ್ದಾಡಿದಳು. ನಾನು "ಅಯ್ಯೋ!"

ಎಂದು ಒದರುವಷ್ಟರಲ್ಲಿ ಯಾರೋ ಮೆಟ್ಟಲೇರಿ ಬರುತ್ತಿರುವ ಸಪ್ಪಳಾಯಿತು. ಬಂದು ಧಡಾರನೆ ಬಾಗಿಲು ತೆರೆದವನು ದೇಸಾಯಿ. ಕಂದೀಲು ಹಿಡಿದುಕೊಂಡು "ಏನು ಏನು" ಎನ್ನುತ್ತ ಒಳ ಬಂದ. ಎದುರು ನೋಡಿದರೆ ಮಂಚದ ಬಳಿ ಥರಥರ ನಡುಗುತ್ತ ಅಸ್ತವ್ಯಸ್ತಳಾಗಿ ನಿಂತಿದ್ದ ರಾಣಿಯನ್ನು ನೋಡಿ, ನೋಡನೋಡುತ್ತ ಮುಖ ಕೆಂಜಗಾಗಿಸಿ ಬೇಹೋಶ್ ಆಗಿ ಬಿದ್ದ. ಆ ಗಾಬರಿಯಲ್ಲೂ ನಾನು ಓಡಿಹೋಗಿ ಬೀಳುತ್ತಿದ್ದ ಕಂದೀಲು ಹಿಡಿದುಕೊಂಡೆ. ಅದ್ಯಾವ ಪರಿಯಲ್ಲಿ ಮಾಯವಾಗಿದ್ದನೋ, ಮರೆಪ್ಪ ಅಲ್ಲಿರಲೇ ಇಲ್ಲ!

* * *

## ಅಧ್ಯಾಯ - ೧೩

ಆ ದಿನ ನಾವು ಕಣ್ಣಿಗೆ ಕಣ್ಣು ಹಚ್ಚಲಿಲ್ಲ. ದೇಸಾಯಿ ಬಂದಾಗ ಮರೆಪ್ಪ ಇರಲಿಲ್ಲವಾದರೂ ತಪ್ಪಿ ಕಣ್ಣಿಗೆ ಬಿದ್ದಿದ್ದರೆ ಏನು ಗತಿಯೆಂದು ಚಿಂತೆಯಾಗಿತ್ತು. ಅದರಿಂದ ಮರೆಪ್ಪನ ಚಾಕರಿ ಹೋಗುವುದಾದರೆ ಒಳ್ಳೆಯದೇ. ಆದರೆ ಸಿಂಗಾರೆವ್ವನಿಗೇನು ದಿಕ್ಕು? ಅವಳ ಎಡಗನ್ನೆಯ ಮೇಲೆ ಆಗ ದುರುಳನ ಐದೂ ಬೆರಳು ಹಾಗೆ ಹಚ್ಚಗೆ ಮೂಡಿದ್ದವು. ಮುಖ ಊದಿಕೊಂಡು ಅವಮಾನದ ಕರಾಳ ಭಾವನೆಗಳಿಂದ ವಿವರ್ಣವಾಗಿತ್ತು. "ನನ್ನ ಬಾಳ್ವೆ ಹಾಳ ಮಾಡಿದ; ನನಗೆ ವಿಷ ತಂದುಕೊಂಡಃ ಶೀನಿಂಗೀ" ಎಂದು ಗೋಳಾಡಿ ಅತ್ತಳು. ನನಗೂ ಮುಖ ತೋರಿಸದೆ ನನ್ನ ತೊಡೆಯಲ್ಲಿ ಮುಖ ಹುದುಗಿ ಉರುಳಾಡಿ ಅಳಾಪ ಮಾಡಿದಳು.

ಒಂದೇ ಒಂದು ಸಣ್ಣ ಆಸೆಯೆಂದರೆ ನಮ್ಮ ಕಣ್ಣಿಗೇ ಬೀಳದ ಮರೆಪ್ಪ ದೇಸಾಯಿಗೆ ಕಂಡಿರಲಿಕ್ಕಿಲ್ಲ ಎಂಬುದು. ಒಂದು ವೇಳೆ ಹಾಗೇ ಆಗಿ, ದೇಸಾಯಿ ಮರೆಪ್ಪನನ್ನು ಕಂಡಿರಲಿಲ್ಲವೆಂದೇ ಅನ್ನೋಣ - 'ತಾನು ಬಂದಾಗ ಸಿಂಗಾರೆವ್ವ ಅಸ್ತವ್ಯಸ್ತ ಯಾಕಿದ್ದಳು? ಕೂಗಾಡಿದ್ದು ಯಾಕೆ?' - ಇಂಥ ಪ್ರಶ್ನೆಗಳನ್ನಾದರೂ ಕೇಳುವುದು ಸ್ವಾಭಾವಿಕವಲ್ಲವೇ? ಅದಕ್ಕೇ ಸಿಂಗಾರೆವ್ವನನ್ನು ಅವಳ ಪಾಡಿಗೆ ಅಳುವುದಕ್ಕೆ ಬಿಟ್ಟು ನಾನು ನೆಪಗಳನ್ನು ಹುಡುಕತೊಡಗಿದ್ದೆ. ಇದೆಲ್ಲ ಸುಸೂತ್ರ ದಾಟಿ ಹೋದರೂ ಮರೆಪ್ಪನ ಬಗ್ಗೆ ನಾವು ಗಂಭೀರವಾಗಿ ಚಿಂತೆ ಮಾಡಲೇಬೇಕಿತ್ತು. ಹೊಲೆಯನೊಬ್ಬ ಯಾವಾಗೆಂದರೆ ಆವಾಗ ದೊರೆಸಾನಿ ಮಲಗುವಲ್ಲಿ ನುಗ್ಗೋದಂದರೇನು? ಈ ದಿನ ಸಂಜೆ ದೇಸಾಯಿಯ ಮುಂದೆ ಸಿಂಗಾರೆವ್ವ ಆತನ ಬಗ್ಗೆ ಕಟುವಾಗಿ ಮಾತಾಡಿದ್ದಳು ನಿಜ. ಕೇಳಿಸಿಕೊಂಡರೆ ಕೇಳಿಸಿಕೊಂಡಿರಲಿ. ಯಾವ ಕೊಮರಾಯನೆಂದು ಇವನಿಗೆ ಅಂಜಬೇಕು? ಹತ್ತಿದವನೆ? ಹೊಂದಿದವನೆ? ನಮ್ಮ ಮನೆ, ನಮ್ಮ ಮಾತು, ನಮ್ಮ ಮನೆವಾಳ್ತೆ ನಾವಾಡಬಾರದೆ? ಮಾಡಿಕೊಂಡ ಗಂಡನ ಹಾಗೆ ಮಧ್ಯೆ ನುಗ್ಗಿ ಜೋರು ಮಾಡಿದರೆ? ತಾ ಯಾರು, ಸಿಂಗಾರೆವ್ವ ಯಾರೆಂದು ಹಿಂದುಮುಂದಿನ ಅರಿವು ಬೇಡವೇ? - ನಾನು ಹೀಗೆ ಹಲವು ಹದಿನೆಂಟು ಪರಿ ಚಿಂತೆ ಮಾಡುತ್ತಿದ್ದಾಗ ಕೆಳಗಡೆ ಹಿರಿಯ ದೊರೆಸಾನಿ ಹಾಡಿಕೊಳ್ಳುತ್ತಿದ್ದಳು.

ಆದರೆ ಮುಂಜಾನೆ ದೇಸಾಯಿ ನಮ್ಮನ್ನೇನೂ ಕೇಳಲಿಲ್ಲ. ಕೇಳಿದ್ದರೆ ಸಿಂಗಾರೆವ್ವನ ಸೀರೆಯಲ್ಲಿ ಚೇಳು ಹೊಕ್ಕಿತ್ತೆಂದೂ, ಎಷ್ಟು ಜಾಡಿಸಿದರೂ ಹೋಗಲಿಲ್ಲವಾದ್ದರಿಂದ ಕೂಗಾಡುವಾಗ ಸೀರೆ ಸೆರಗು ಜಾರಿತ್ತೆಂದೂ ಹೇಳುವುದು. ನಂಬಿದರೆ ನಂಬಲಿ, ನಂಬದಿದ್ದರೆ ಬಂದದ್ದನ್ನು ಎದುರಿಸುವುದು - ಎಂದು ಇಬ್ಬರೂ ಮಾತಾಡಿಕೊಂಡಿದ್ದೆವು. ಈ ರಂಪಾಟ ಊಹಿಸಿಯೇ ಸಿಂಗಾರೆವ್ವ ಮುಂಜಾನೆ ಕೆಳಗಿಳಿದು ಬರಲೇ ಇಲ್ಲ. ಕರೆ ಬರಲಿಲ್ಲವಲ್ಲ. ನೋಡಿಕೊಂಡು ಬರಬೇಕೆಂದು ನಾನೇ ಕೆಳಗಿಳಿದು ಬಂದೆ. ದೇಸಾಯಿ ಅನೇಕಟ್ಟೆ ಮೇಲೆ ಕೂತಿದ್ದ. ಮರೆಪ್ಪ ಅಲ್ಲೇ ಹಗ್ಗ ಹೊಸೆಯುತ್ತಿದ್ದ. ಇಬ್ಬರೂ ಏನೇನೋ ಮಾತಾಡುತ್ತಿದ್ದರು. ಇಬ್ಬರ ಮುಖದಲ್ಲಿ ದುಗುಡವಾಗಲಿ, ನಿನ್ನೆಯ ನೆನಪಿನ ಗುರುತಾಗಲಿ ಇರಲಿಲ್ಲ. ನೆವ ಮಾಡಿಕೊಂಡು ಸಮೀಪ ಹೋಗಿ ಕಂಬದ ಮರೆಯಲ್ಲಿ ನಿಂತೆ, ಮರೆಪ್ಪ ಹೇಳಿದ:

"ಸರಕಾರ, ಹೊಲದಾಗ ಕಳೆ ಭರ್ತಿ ಬೆಳದ ಬಿಟ್ಟೈತಿ. ಆಳ ಹಚ್ಚಿ ಲಗೂನಃ ತಗಸಬೇಕ್ರಿ. ಹದ ಮೀರಿತಂದರ ಆಮ್ಯಾಲ ಏನ ಮಾಡಕೂ ಆಗಾಣೆಲ್ಲ."

- ಈ ಮಾತು ಕೇಳಿ ದೇಸಾಯಿ ಮರೆಪ್ಪನ ನಿಷ್ಠೆಯನ್ನು ಮೆಚ್ಚಿಕೊಂಡು,

“ನೋಡು, ಆ ಸೂಳೀ ಮಕ್ಕಳು, ಕಾಳ್ಯಾ ನಿಂಗ್ಯಾಗ ಒಂದೀಟಾದರೂ ಕಾಳಜಿ ಐತೇನ್ನೋಡು, ಹಂ? ಮೈಗಳ್ಳರು.”

“ಕೆಲಸದಾಗ ಅವರಿಗೂ ಹೇಳಾಕ ಆಗಿಲ್ಲೋ ಏನೊ, ಅಂತೂ ಅಗ್ಗದೀ ಜರೂರ ಕಳೆ ತಗಸಾಕ ಬೇಕ್ರಿ.”

“ಆಯ್ತು, ನೀನಃ ಮುಂದ ನಿಂತ ಆಳ ಹಚ್ಚಿ ತಗಸು. ಮಜೂರಿ ಎಷ್ಟಾಗತ್ತೈತಿ ನೋಡಿ ಕೊಡೊಣಂತ.”

- ನನ್ನ ಮನಸ್ಸು ಹಗುರವಾಯ್ತು. ನಿನ್ನೆ ದೇಸಾಯಿ ಮರೆಪ್ಪನನ್ನು ಕಂಡಿರಲಿಲ್ಲ ಎನ್ನುವುದು ಖಾತ್ರಿಯಾಯ್ತು. ಇನ್ನುಳಿದ ಪ್ರಶ್ನೆ - ತಾನು ಬಂದಾಗ ಯಾಕೆ ಸಿಂಗಾರೆವ್ವನ ಸೆರಗು ಜಾರಿತ್ತು ಎನ್ನುವುದು. ಚೇಳಿನ ನೆಪ ಹೇಳಿದರಾಯ್ತೆಂದು ತಿರುಗಿದೆ. ಅಷ್ಟರಲ್ಲಿ ದೇಸಾಯಿ ನನ್ನ ಕಡೆ ತಿರುಗಿ ನೋಡಿದ. ತಕ್ಷಣ ತಪ್ಪು ಮಾಡಿದವನಂತೆ ಮುಖ ಆ ಕಡೆ ಮಾಡಿ ನಾನು ದಾಟಿ ಬರುವವರೆಗೂ ಹಾಗೇ ಇದ್ದ. ಯಾಕೆಂದು ಬಹಳ ಹೊತ್ತು ನನಗೆ ಅರ್ಥವಾಗಲಿಲ್ಲ. ಬಹುಶಃ ನಿನ್ನೆ ರಾತ್ರಿ ನನ್ನೆದುರಿನಲ್ಲೇ ಆ ರೀತಿ ಬೇಹೋಶ್ ಆಗಿ ಬಿದ್ದಿದ್ದನಲ್ಲ. ಅದಕ್ಕೆ ನಾಚಿಕೆಪಟ್ಟುಕೊಂಡಿರಬಹುದೆ? ಹಾಗಿದ್ದರೆ ದೇವರು ನಮ್ಮನ್ನು ಕಾಪಾಡಿದನೆಂದೇ ಅಂದುಕೊಂಡು ಅಂತಸ್ತಿನ ಕೋಣೆಗೆ ಹೋದೆ.

ಈ ಬಾರಿಯೇನೋ ಕಂಟಕದಿಂದ ಪಾರಾಗಿದ್ದೆವು. ಅದರೆ ಮತ್ತೆ ಹೀಗೆ ಆಗಬಾರದಲ್ಲ. ಈಗ ಹುಚ್ಚಯ್ಯನ ಭೂತದ ಭಯ ಇರಲಿಲ್ಲ. ಹೊಲೆಯನ ಈ ಹೊಸ ಭಯ ಅಂಟಿಕೊಂಡಿತು. ಇಬ್ಬರೂ ಹುಷಾರಾದೆವು. ಹಾಗೇ ಹೆಚ್ಚು ಭೀತರಾದೆವು. ಸಿಂಗಾರೆವ್ವ ಹಗಲು ಹೊತ್ತಿನಲ್ಲಿ ಕೂಡ ನಾನಿಲ್ಲದೆ ಅರಮನೆಯಲ್ಲಿ ಅಡ್ಡಾಡುತ್ತಿರಲಿಲ್ಲ. ರಾತ್ರಿ ಮಲಗುವಾಗ ಅಂತಸ್ತಿನ ಬಾಗಿಲಿಕ್ಕೀ ಕೀಲೀ ಜಡಿಯುತ್ತಿದ್ದೆವು. ಲಾಟೀನನ್ನು ಬೆಳತನಕ ಉರಿಸುತ್ತಿದ್ದೆವು. ಯಾರಾದರೂ ಅಂದರೆ ಅಪ್ಪಿತಪ್ಪಿ ದೇಸಾಯಿ ಬಂದು ಬಾಗಿಲು ಬಡಿದರೂ “ಯಾರವರಾ?” ಎಂದು ಜೋರಾಗಿ ಕೂಗುತ್ತಿದ್ದೆವು. ಸಿಂಗಾರೆವ್ವ ಬೈಲ ಕಡೆ ಹೋಗುವಾಗಲೂ - ಅದಲ್ಲೇ ಹಿತ್ತಲಲ್ಲಿಗೆ ನನ್ನನ್ನು ಜೊತೆಯಲ್ಲೇ ಕರೆದೊಯ್ಯುತ್ತಿದ್ದಳು. ರಾತ್ರಿಯಂತೂ ಆ ಕಡೆ ಸುಳಿಯುತ್ತಲೇ ಇರಲಿಲ್ಲ. ಕನಸು ಮನಸ್ಸಿನಲ್ಲಿ ಕೂಡ ಅವನ ಭಯ ಆವರಿಸಿಬಿಟ್ಟಿತ್ತು. ಅವನಿದ್ದಾನೆಂದರೆ ಸಿಂಗಾರೆವ್ವ ಕೆಳಗಿಳಿದು ಬರುತ್ತಲೇ ಇರಲಿಲ್ಲ. ಈ ಕಾರಣಕ್ಕಾಗಿ ಅವಳಿಗೆ ಒಮ್ಮೊಮ್ಮೆ ಮಧ್ಯಾಹ್ನದ ಊಟವನ್ನೂ ಅಂತಸ್ತಿನ ಕೊಣೆಗೇ ಒಯ್ಯುತ್ತಿದ್ದೆ. ತಾನು ಹೊರಬಂದೊಡನೆ ಬಾಗಿಲಿಕ್ಕಿಕೊಂಡವಳು ನಾನು ಮತ್ತೆ ಹೋಗಿ ಬಾಗಿಲು ಬಡಿದು ಕೂಗಿದಾಗಲೇ ಬಾಗಿಲು ತೆಗೆಯುತ್ತಿದ್ದಳು. ಆಗಾಗ ದೇಸಾಯಿಗೆ ಮರೆಪ್ಪನ ಬಗ್ಗೆ, ಮರೆಪ್ಪ ಕದ್ದು ಕೇಳುತ್ತಿದ್ದಾನೆಂದು, ದೇಸಾಯಿ ನಂಬುವುದಿಲ್ಲವೆಂದು ಸಂಶಯವಿದ್ದರೂ ಚಾಡಿ ಹೇಳತೊಡಗಿದ್ದೆವು. ಹಿರಿಯ ದೊರೆಸಾನಿಗೆ ನಿಮ್ಮ ಮಗ ಹೊಲೆಯನ ಸಹವಾಸದಲ್ಲಿ ಕೆಡುತ್ತಿದ್ದಾನೆಂದೂ, ಈ ಬಗ್ಗೆ ಜನ ಆಡಿಕೊಳ್ಳುತ್ತಿದ್ದಾರೆಂದೂ ಒಬ್ಬರಾದ ಮೇಲೆ ಒಬ್ಬರಂತೆ ಇಬ್ಬರೂ ಹೇಳಿ ಬಂದೆವು. ಈಗೀಗ ಮರೆಪ್ಪನ ಉಲಿವೂ ಕಮ್ಮಿಯಾದ್ದರಿಂದ ಅವನೂ ಹಿಂದೆ ಸರಿದನೆಂದೇ ನಮ್ಮ ಕಲ್ಪನೆಯಾಗಿತ್ತು. ಆದರೆ ಅವನು ಬೇರೆ ಸಂಚಿನಲ್ಲಿದ್ದ.

ಅರಮನೆಗೆ ಬರುತ್ತಿದ್ದವನು ಪರಮಶೆಟ್ಟಿ ಮಾತ್ರ ಎಂದು ಹಿಂದೆ ಹೇಳಿದ್ದೆನಲ್ಲ - ಆ ಶೆಟ್ಟಿ ಇನ್ನೊಬ್ಬ ಚಂಡಾಲ. ಬಂದಾಗೊಮ್ಮೆ ದೇಸಾಯಿಯ ಕಿವಿಯಲ್ಲೇ ಮಾತಾಡುತ್ತಿದ್ದ. ಅದಕ್ಕೇ ಅವನ ಬಗ್ಗೆ, ಅವರಿಬ್ಬರ ಮಧ್ಯೆ ಇದ್ದಿರಬಹುದಾದ ವ್ಯವಹಾರದ ಬಗ್ಗೆ ಸಹಜವಾಗಿಯೇ ನನ್ನ ಆಸಕ್ತಿ ಕೆರಳಿತು. ದೇಸಾಯಿಯನ್ನು ರಮಿಸಿ ಇವನ ಆಸ್ತಿಯನ್ನು ಕೊಳ್ಳೆ ಹೊಡೆಯಲು ಹೊಂಚುತ್ತಿರಬಹುದೇ ಎಂದು ನನ್ನ ಅನುಮಾನ. ಅವ ಎಂಥವನು? ಅವನಿಗೂ ದೇಸಾಯಿಗೂ ವ್ಯವಹಾರವೇನು? ಮುಂತಾಗಿ ಊರಿನ ಅವರಿವರನ್ನು ಗುಟ್ಟಾಗಿ ಕೇಳಿದೆ. ಕೇಳಿದರೆ ನನ್ನ ಅನುಮಾನವೇ ನಿಜವಾಗಿತ್ತು!

ದೇಸಾಯಿ ಮೈಗಳ್ಳನಾದ್ದರಿಂದ ಹೊಲಮನೆಗಳಲ್ಲಿ ಆಸಕ್ತಿಯಿರಲಿಲ್ಲ. ಹೀಗಾಗಿ ಅಂಥ ದೊಡ್ಡ ಆಸ್ತಿಯಿಂದ ವರ್ಷಂಪ್ರತಿ ಬರುತ್ತಿದ್ದುದು ಮನೆಯವರ ಮತ್ತು ಆಳುಕಾಳಿನ ಊಟಕ್ಕೆ ಸಾಕಿತ್ತು. ಬಹಳವಾದರೆ ಉಪ್ಪೆಣ್ಣೆಯೂ ಅದರಲ್ಲೇ ಸಾಗುತ್ತಿತ್ತು. ಆದರೆ ದೇಸಾಯಿಯ ಕುಡಿತದ ಚಟಕ್ಕೆ ಬಯಲಾಟದ ಖಯಾಲಿಗೆ ಬೇಖರಾಗುವ ಸುಖಕ್ಕೆ ಹಣ ಬೇಕಾಗುತ್ತಿತ್ತು. ಆ ಹಣ ಒದಗಿಸುವವನು ಪರಮಶೆಟ್ಟಿ.

ದೇಸಾಯಿಯ ಮದುವೆಗೂ ಅವನೇ ಸಾಲ ಕೊಟ್ಟಿದ್ದ. ದೇಸಾಯಿ ಹತ್ತು ಕೇಳಿದರೆ ನೂರು ಕೊಟ್ಟು, ಮತ್ತೆ ಆ ನೂರೂ ಅವನಿಗೇ ಸೇರಿ ಸಾಲ ಮಾತ್ರ ಬೆಳೆಯುವ ಹಾಗೆ ಮಾಡಿದ್ದ. ಅವನೇ ದೇಸಾಯಿಯ ಮನೆಗೆ ಸೆರೆ ಕಳಿಸುತ್ತಿದ್ದ. ಬಯಲಾಟದ ತಾಲೀಮು ಮಾಡುವುದಕ್ಕೆ ತನ್ನ ಅಂಗಡಿಯ ಹಿಂಭಾಗದ ಕೋಣೆ ಬಿಟ್ಟುಕೊಟ್ಟು ತಾನೊಬ್ಬ ಭಾರೀ ಕಲಾಪ್ರೇಮಿಯಂತೆ ದೇಸಾಯಿಯ ಮುಂದೆ ವಿಜೃಂಭಿಸಿದ. ತಾನೇ ಹೋಗಿ ಚಿಮಣಾಳನ್ನು ಕರೆತರುತ್ತಿದ್ದ. ಅವಳ ತೊಡೆ ತೋರಿಸಿ, ದೇಸಾಯಿಯನ್ನು ಬೇಹೋಶ್ ಮಾಡಿ, ಕೊಟ್ಟ ಹಣವನ್ನು ಕಸಿಯುತ್ತಿದ್ದ. ಇದೆಲ್ಲ ಎಷ್ಟೇ ಗುಪ್ತವಾಗಿ ನಡೆದರೂ ಜನಕ್ಕೆ ಗೊತ್ತಾಗಿ ಆಡಿಕೊಳ್ಳುತ್ತಿದ್ದರು. ದೇಸಾಯಿಗೂ ಹೇಳಿದ್ದಾರು. ಆದರೆ ಇವನು ಕೇಳಬೇಕಲ್ಲ, ಈಗ ಹಳೇ ಸಾಲ, ಮದುವೆಯ ಸಾಲ ಮತ್ತು ಇತ್ತೀಚಿನ ಸಾಲಗಳೆಲ್ಲ ಸೇರಿ ಎಂದೂ ತೀರಿಸಬಾರದಷ್ಟು ಅಂದರೆ ಒಟ್ಟು ಒಂದೂವರೆ ಲಕ್ಷ ಬರಾಬರಿ ಮಾಡಿಟ್ಟಿದ್ದ. ಉತ್ಪನ್ನವೇ ಇಲ್ಲದ ದೇಸಾಯಿ ಈ ಸಾಲ ಹ್ಯಾಗೆ ತೀರಿಸುತ್ತಾನೆ? ಆಗಾಗ ಮನೆಯಲ್ಲಿಯ ಬಂಗಾರ ಕದ್ದು ಕೊಟ್ಟರೂ ಅದೆಲ್ಲ ಬರಿ ಬಡ್ಡಿಗಾಗಿತ್ತು. ನಿವ್ವಳ ಅಸಲು ಹಾಗೇ ಇತ್ತು. ಆದ್ದರಿಂದ ಕೊಟ್ಟ ಸಾಲದಲ್ಲಿ ಊರ ಮುಂದಿನ ತೋಟ ಮತ್ತು ಅರಮನೆಯನ್ನು ಖರೀದಿಗೆ ಬರೆಸಿಕೊಳ್ಳಬೇಕೆಂದು ಶೆಟ್ಟಿಯ ಉಪಾಯ. ಈ ಹಿಂದೆ ಗುಡ್ಡದ ಬಳಿಯ ಎರಡು ತೋಟಗಳನ್ನು ಹಾಗೆ ಬರೆಸಿಕೊಂಡಿದ್ದ. ದೇಸಾಯಿಯೂ ಅದಕ್ಕೊಪ್ಪಿದ್ದ. ಗೋಕಾವಿಗೆ ಯಾವಾಗ ಹೋಗೋಣವೆಂದು ಅವರಿಬ್ಬರೂ ತಾಳೆ ಹಾಕುತ್ತಿದ್ದರು.

ದೇಸಾಯೀ ಮನೆಯಲ್ಲಿ ಮೊದಲು ಇಡೀ ಒಂದು ಪೆಟ್ಟಿಗೆಯ ತುಂಬ ಬಂಗಾರ ಇತ್ತಂತೆ. ಅದೆಲ್ಲ ದೇಸಾಯಿಯ ಈ ಚಟುವಟಿಕೆಗಳಿಗಾಗಿಯೇ ಕಳೆದುಹೋಯಿತು. ಈಗ ನಾನು ಕಂಡಂತೆ ಉಳಿದಿರೋದು ಸಿಂಗಾರೆವ್ವನಿಗೆ ಸೇರಿದ, ಅವಳ ಮದುವೆ ಕಾಲಕ್ಕೆ ಹಾಕಿ ಉಳಿದ ಅವೆರಡು ಬಳೆ, ಹಿರಿಯ ದೊರೆಸಾನಿಯ ಅದೊಂದು ನಡುಪಟ್ಟಿ - ಇಷ್ಟೆ. ಈ ಸುದ್ದಿ ಗೊತ್ತಾದೊಡನೆ ಸಿಂಗಾರೆವ್ವನಿಗೆ "ನಿನ್ನದಾಗೀನ ಹುಷಾರೆವ್ವ" ಎಂದು ಹೇಳಿದೆ.

ಮರೆಪ್ಪ ಶೆಟ್ಟಿಯ ಉಪಾಯಗಳನ್ನು ಆಳದಲ್ಲೇ ಗ್ರಹಿಸಿದ್ದ. ಶೆಟ್ಟಿಯ ಮನೆಯಿಂದ ಸೆರೆ ತರುವುದಕ್ಕೆ ಈಗೀಗ ಮರೆಪ್ಪನೇ ಹೋಗುತ್ತಿದ್ದುದರಿಂದ, ಕುಡಿದಾಗ ದೇಸಾಯಿ ಬಾಯಿ ಬಿಟ್ಟುದರಿಂದ ಅವರ ವ್ಯವಹಾರದ ತುದಿಬುಡ ಇವನಿಗೂ ಅರ್ಥವಾಗಿಬಿಟ್ಟಿತ್ತು. ಅವರು ಗೋಕಾವಿಗೆ ಹೋಗಬೇಕೆಂದ ದಿನವೇ ಇವನು ಮುಂಜಾನೆ ದೇಸಾಯಿಗೆ ಕಂಠಮಟ ಕುಡಿಸಿ ಬಿಡುತ್ತಿದ್ದ. ಕುಡಿದಾಗ ದೇಸಾಯಿ ಸಹಜವಾಗಿಯೇ ತಾರಕ ಹಾಡುತ್ತ ಹಾರಾಡುತ್ತಿದ್ದ. ಸರಿ, ಪ್ರಯಾಣವನ್ನು ಮುಂದಕ್ಕೆ ಹಾಕುತ್ತಿದ್ದರು. ಮರೆಪ್ಪನ ಉಪಾಯ ಕೊನೆಯತನಕ ಶೆಟ್ಟಿಗಾಗಲಿ, ದೇಸಾಯಿಗಾಗಲಿ ತಿಳಿಯಲೇ ಇಲ್ಲ. ದೇಸಾಯಿ ಬೇಕೆಂದೇ ತಪ್ಪಿಸಿಕೊಳ್ಳುತ್ತಿದ್ದಾನೆಂದು ಶೆಟ್ಟಿಯ ತಿಳುವಳಿಕೆಯಾಗಿತ್ತು. ಆದರೆ ಬಾಯಿಮಾಡಿ ಗದ್ದಲ ಮಾಡುವ ಹಂತಕ್ಕೂ ಈ ವ್ಯವಹಾರ ಮುಟ್ಟಿರಲಿಲ್ಲ. ಸಮಯ ಬಂದಾಗ ನೋಡಿಕೊಳ್ಳೋಣವೆಂದು, ಅಂಥ ಸಮಯಕ್ಕೆ ಕಾಯುತ್ತ ಕೂತಿದ್ದ. ಇದೆಲ್ಲದರ ಪರಿಣಾಮವೆಂದರೆ ಮರೆಪ್ಪ ದೇಸಾಯಿಗೆ ಅವನ ಪ್ರಾಣವೆಂಬಷ್ಟು ಹತ್ತಿರದವನಾಗಿದ್ದ.

ಇದನ್ನೆಲ್ಲ ನಾವು ಗಮನಿಸುತ್ತಿದ್ದೆವು ಮತ್ತು ನಿರುಪಾಯರಾಗಿದ್ದೆವು. ಇದರಿಂದ ಮರೆಪ್ಪ ದೇಸಗತಿಗೆ ಉಪಕಾರ ಮಾಡುತ್ತಿದ್ದಾನೆಂದು ಅನ್ನಿಸಿದರೂ ಅವನು ಅರಮನೆಯಲ್ಲೇ ಖಾಯಂ ಆಗಿ ವಾಸಿಸುವುದೂ ಖಾತ್ರಿಯಾಯ್ತು. ಅದು ನಮಗೆ ಬೇಡದ ಸಂಗತಿ. ಆದಷ್ಟು ಬೇಗನೇ, ಅಂದರೆ ಇನ್ನೊಂದು ಅನಾಹುತವಾಗದಂತೆ, ಜಾಗ್ರತೆಯಾಗಿ ಅವನನ್ನು ಹೊರದೂಡುವುದು ನಮಗೆ ಜರೂರಿತ್ತು. ನಮ್ಮನ್ನ ನಾವೇ ಪಂಜರದಲ್ಲಿಟ್ಟುಕೊಂಡಿದ್ದೆವಾದ್ದರಿಂದ ಕೂತುಕೊಂಡು ಅವನನ್ನು ಹೊರಹಾಕುವ ಉಪಾಯಗಳನ್ನೆ ಯೋಚಿಸುತ್ತಿದ್ದೆವು. ಏನೂ ಹೊಳೆಯದೇ ಇದ್ದಾಗ ಒಮ್ಮೆ ಸಿಂಗಾರೆವ್ವ ಹೇಳಿದಳು:

"ಇದೇನಃ ನನ್ನ ದುರ್ಗತಿ! ಒಂದ ಅತ್ತಿಗಿ ಅಂಜಲಿಲ್ಲ. ಒಂದ ಗಂಡಗ ಅಂಜಲಿಲ್ಲ. ಈ ಎಂಜಲಾ ತಿನ್ನೋ ಹೊಲ್ಯಾಗ ಅಂಜಿಕೊಂಡ ಕೂರಬೇಕಾಯ್ತಲ್ಲ! ಏನ ಕರ್ಮ ಇದ್ದೀತ. ಹೇಳು."

"ಮುಳ್ಳ ತಗ್ಯಾಕ ನನಗೇನೂ ಹೊಳೀವಲ್ದೆವ್ವ, ಏನ ಮಾಡೂಣು?"

- ಅಂದೆ, ನನ್ನ ಮಾತಿನ ಕಡೆ ಅವಳ ಲಕ್ಷ್ಯವಿರಲಿಲ್ಲ. ಏನೋ ಹೊಂಚುತ್ತಿದ್ದಳು. ಅದು ಸರಿಹೋಗದೆಂದು ಮನಸ್ಸಿನಲ್ಲೇ ಅಂದುಕೊಂಡು ನಿರಾಸೆಯಾಗಿ ಮತ್ತೆ ಮರೆಪ್ಪನ ಮೇಲಿನ ಕೋಪದಿಂದ ಕುದಿಯುತ್ತಿದ್ದಳು.

"ಅವನಂತೂ ನನ್ನ ಹಾಟ್ಯಾ, ಎಲ್ಲಾ ಬಿಟ್ಟು ನಿಂತಾನೆವ್ವ... ಅವಗ ಮಾನ ಮರ್ಯಾದೀನೂ ಅಷ್ಟ, ಲಜ್ಜಿ ನಾಚಿಕೀನೂ ಅಷ್ಟ - ಗುದ್ದಾಡತೀಯಾ? ನಮ್ಮ ಮೋತಿಗೆ ಹೇಲ ಹಚ್ಚಾಕೂ ಹೇಸವನಲ್ಲ."

ಇದ್ದಕ್ಕಿದ್ದಂತೆ ಸಿಂಗಾರೆವ್ವನ ನನ್ನ ಮುಖವನ್ನೊಮ್ಮೆ ತೀಕ್ಷ್ಣವಾಗಿ, ಪರೀಕ್ಷೆ ಮಾಡುವವಳಂತೆ ನೋಡಿದಳು. ಏನೋ ಹೇಳುತ್ತಾಳೇನೋ ಎಂದು ಕಾದೆ. ಹೇಳಲಿಲ್ಲ. ಮತ್ತೆ ನಾನೇ ಹೇಳಿದೆ:

"ಎವ್ವಾ, ಆ ನನ್ನ ಹಾಟ್ಯಾ ಹೊಲ್ಯಾಗ ಬೇಕಾದರ ಒಂದ್ನೈನೂರ ರೂಪಾಯಿ ಕೊಟ್ಟ, ನೀ ಬ್ಯಾರ ಕಡೆ ಹೋಗು, ಈ ಕಡೆ ಬರಬ್ಯಾಡಂದರ ಹೆಂಗ?" - ಈ ಮಾತು ಹೇಳುವಾಗಿನ ನನ್ನ ತರ್ಕವಿಷ್ಟೆ: ಆದದ್ದಂತೂ ಆಗಿ ಹೋಗಿದೆಯಲ್ಲ, ಆದದ್ದನ್ನು ಮರೆತು, ಮತ್ತೆ ಮೊದಲಿನಂತೆ ಆತ ನನ್ನ ಪಾಡಿಗೆ ತಾನು ಬೇರೆಲ್ಲಿಗೋ ಹೋಗಿ ಇರೋದಾದರೆ ಒಳ್ಳೆಯದಲ್ಲವೆ? ಆದರೆ ಹಾಗವನು ಬೇರೆ ಕಡೆ ಹೋಗಿ ಇದ್ದಾನೆಂಬುದರಲ್ಲಿ ಅವಳಿಗೆ ನಂಬಿಕೆ ಬರಲಿಲ್ಲ.

"ನರಮಾಂಸ ತಿಂದ ಹುಲೀನಃ ಅವನು. ಕುರಿ ಕೋಳಿ ಮಾಂಸ ತಿಂದಾನಂದಿ?" - ಎಂದಳು, ಅದೂ ನಿಜವೇ. ಸಿಂಗಾರೆವ್ವ ಕಣ್ಣಿಗೆ ಬಿದ್ದಾಗೆಲ್ಲ ಅವನ ಕಣ್ಣು ಫಳಫಳ ಹೊಳೆದು ಕರಿ ಕೆನ್ನೆಗಳಲ್ಲಿ ನೆತ್ತರುಕ್ಕಿ ಮುಖ ಕಾದ ಉಕ್ಕಿನಂತೆ ಕಳೆಯೇರುತ್ತಿತ್ತು. ರೊಕ್ಕ ರೂಪಾಯಿ ಅವನ ಪಾಲಿಗೆ ಕ್ಷುಲ್ಲಕ ಆಮಿಷವಾಗಿ ಕಾಣಲೂಬಹುದು. "ನೀ ಹೇಳಿದ್ದು ಖರೆ ಎವ್ವಾ" ಅಂದೆ. ಈ ಮಾತಿನತ್ತ ಅವಳ ಗಮನವಿರಲಿಲ್ಲ. ತನ್ನ ವಿಚಾರದ ಗುಂಗಿನಲ್ಲೇ ಇದ್ದವಳು, ನಿರಾಸೆಯಾಗಿ ಹಲ್ಲುಕಚ್ಚಿ ಯಾವುದೋ ತೀರ್ಮಾನಕ್ಕೆ ಬಂದವಳಂತೆ -

"ಏ ಶೀನಿಂಗೀ" ಎಂದು ಸರ್ರನೇ ದೂರದ ನನ್ನ ರೆಟ್ಟೆ ಹಿಡಿದು ಬಳಿಗೆ ಸೆಳೆದುಕೊಂಡು ಕಿವಿಯಲ್ಲಿ ಹೇಳಿದಳು.

"ಏ ಶೀನೀಂಗೀ, ಮರ್ಯಾಗ ವಿಷ ಹಾಕಿದರ ಹೆಂಗ?"

ಸಿಂಗಾರೆವ್ವ ಹೀಗೆ ವಿಚಾರ ಮಾಡಿದ್ದಕ್ಕೆ ನನಗೆ ಆಶ್ಚರ್ಯವಾಯಿತಾದರೂ ನಾವೂ ತಲೆಯ ಮೇಲಿನ ಸೆರಗು ತೆಗೆದೇ ತಯಾರಾಗದಿದ್ದರೆ ಆತ ನಮ್ಮನ್ನು ಮುಗಿಸುವುದೂ ಅಷ್ಟೇ ಖಾತ್ರಿಯಾಗಿತ್ತು. ಆದರೆ ಅದೂ ಅಪಾಯದ ಕೆಲಸವೆಂದು ನನಗೆ ಗೊತ್ತು.

"ಅಲ್ಲರೀ ಎವ್ವಾ, ನಾಳಿ ಪೋಲಿಸ ಪೋಜುದಾರ ಬರೋಣ, ಅವರು ಏನೇನೋ ಕೇಳೋಣ: ಮರ್ಯಾ ಹೆಂಗ ಸತ್ತ? ವಿಷ ತಗೊಂಡ ಸತ್ತ. ತಾನಃ ತಗೊಂಡನೊ, ಬ್ಯಾರೇದವರು ಹಾಕಿದರೊ? ಬ್ಯಾರೇದವರು ಅಂದರ, ಯಾರ ಮನ್ಯಾಗ ಇದ್ದ? ದೇಸಾಯಿ ಮನ್ಯಾಗ ಇದ್ದ. ದೇಸಾಯರ ಮನ್ಯಾಗಂದರ ವಿಷ ಯಾರ ಹಾಕಿದ್ದಾರು? ತಗೊಳ್ಳವ, ಇದೆಲ್ಲ ಎಲ್ಲಿ ಹುಚ್ಚಯ್ಯನ ಹೆಣದ ತನಕ ಮುಟ್ಟಿತೋ ಅಂತೀನಿ."

ಆದರೆ ಇದ್ಯಾವುದರಿಂದಲೂ ಸಿಂಗಾರೆವ್ವ ತನ್ನ ನಿರ್ಧಾರದಿಂದ ಹಿಂದೆ ಬರಲಿಲ್ಲ. ಮನಸ್ಸು ಮಾಡಿದರೆ ಆತ ಯಾವ ಕ್ಷಣದಲ್ಲೂ ನಮ್ಮನ್ನು ಬಹಿರಂಗಪಡಿಸಬಲ್ಲ, ಬಹಿರಂಗಪಡಿಸುವುದೆಂದರೆ ನಾವು ಸಾಯುವುದೆಂದೇ ಅರ್ಥ. ಆದರೆ ಈಗ ನಾವಿರುವ ಸ್ಥಿತಿ ಸಾವಿಗಿಂತ ಉತ್ತಮವಾದದ್ದೇನಲ್ಲ. ನಿತ್ಯ ಸಾಯುವುದಕ್ಕಿಂತ ಒಂದೇ ದಿನ ಸಾಯುವುದೂ ಲೇಸೇ. ಆದರೆ ಆತ ಚಿತ್ರಹಿಂಸೆ ಮಾಡಿ ದಿನಾ ಕೊಲೆ ಮಾಡುವ ಮನಸ್ಸು ಮಾಡಿದ್ದಾನೋ ಏನೋ? ಆದರಿಂದ ತಪ್ಪಿಸಿಕೊಳ್ಳುವುದಕ್ಕೆ ಇರೋದಾರಿ ಒಂದೇ: ಅವನನ್ನೇ ಕೊಲ್ಲುವುದು. ವಿಷದಲ್ಲಿ ನಾನಾ ನಮೂನೆಗಳಿವೆ. ಹಾಕಿದೊಡನೆ ಸಾಯಿಸುವ ವಿಷ ಒಂದಾದರೆ, ಇಂದು ವಿಷ ಹಾಕಿದರೆ ಇನ್ನು ಆರು

ತಿಂಗಳಿಗೆ ಆ ವ್ಯಕ್ತಿ ಸವೆದು ಸವೆದು ಸಾಯುವಂಥ ವಿಷಗಳೂ ಇವೆ. ಈ ಆರು ತಿಂಗಳ ವಿಷ ಹಾಕಿದರೆ ಯಾರಿಗೂ ಸಂಶಯ ಬರುವುದಿಲ್ಲ. ಈ ಬಗ್ಗೆ ಮತ್ತೆ ಮತ್ತೆ ವಿಚಾರ ಮಾಡಿ ಇದೇ ಸೈ ಎಂದು ತೀರ್ಮಾನಕ್ಕೆ ಬಂದೆವು.

ಕಷ್ಟಪಟ್ಟು ವಿಷವನ್ನು ದೊರಕಿಸಿದ್ದಾಯಿತ್ತು. ಅದೊಮ್ಮೆ ಕೈ ಸೇರಿದೊಡನೆ ನನ್ನಲ್ಲಿ ತಳಮಳ ಸುರುವಾಯಿತು. ಮರೆಪ್ಪ ಸಜ್ಜನನಲ್ಲ ನಿಜ, ನಮ್ಮ ಮನಸ್ಸುಗಳಲ್ಲಿ ಮರೆಯಲಾರದ ಗಾಯಗಳನ್ನೂ ಮಾಡಿದ್ದ ಮತ್ತು ಅವನೇ ಬಂದು ನಾಲಗೆಯಿಂದ ನೆಕ್ಕಿದರೂ ಅವು ಮಾಯುವ ಸ್ಥಿತಿಯಲ್ಲಿರಲಿಲ್ಲ. ಹೆಚ್ಚೇನು, ನಮ್ಮ ದಯಮಾಯೆಗೆ ಅರ್ಹನಾಗುವ ಯಾವ ಲಕ್ಷಣಗಳೂ ಅವನಲ್ಲಿರಲಿಲ್ಲ. ಆದರೂ ಅವನಿಗೆ ಸಾವಿನ ಶಿಕ್ಷೆ ಕೊಡುವುದಕ್ಕೆ ನನಗ್ಯಾಕೋ ಮನಸ್ಸಾಗಲೊಲ್ಲದು. ಅವನನ್ನು ಕದ್ದು ಕಂಡು ಇದೆಲ್ಲವನ್ನೂ ತಿಳಿಸಿ, ಬೇರೆ ಕಡೆಗೆಲ್ಲಾದರೂ ಓಡಿಹೋಗುವಂತೆ ಹೇಳಬೇಕೆಂದೂ ಒಮ್ಮೊಮ್ಮೆ ಅನಿಸುತ್ತಿತ್ತು. ಆದರೆ ಇದರಿಂದಾಗುವ ಪ್ರಯೋಜನ ಕಮ್ಮಿ. ಅವನು ಓಡಿಹೋಗುವುದಕ್ಕೆ ನಿರಾಕರಿಸಿ ನಮ್ಮನ್ನು ಇನ್ನೂ ಹೆಚ್ಚಾಗಿ ಹಿಂಸಿಸಬಹುದು. ನಮ್ಮ ವಿಷ ನಮಗೇ ತಿನ್ನಿಸಬಹುದು. ನಮ್ಮ ಹಂಚಿಕೆ ಅವನಿಗೆ ತಿಳಿಯಲೂಬಾರದು. ಅವನು ಈ ಮನೆಯಲ್ಲಿ ಇರಲೂಬಾರದು - ಇದು ಹ್ಯಾಗೆ ಸಾಧ್ಯವಾದೀತೆಂದು ನಾನು ಲೆಕ್ಕ ಹಾಕುತ್ತಿದ್ದೆ. ಆದರೆ ನನ್ನ ಲೆಕ್ಕ ತಪ್ಪಿ ಕೂಡ ಸಿಂಗಾರೆವ್ವನಿಗೆ ತಿಳಿಯದ ಹಾಗೆ ಕಾಳಜಿಯಿಂದಿದ್ದೆ. ಸಿಂಗಾರೆವ್ವ ಮಾತ್ರ ನಿರುಮ್ಮಳವಾಗಿದ್ದಳು. ವಿಷ ತಂದಾಗ ಅದನ್ನಿಸಿದುಕೊಂಡು ಕಣ್ಣಾರೆ ನೋಡಿದಳು. ಹಾಕುವ ವಿಧಾನ ಕೇಳಿದಳು. ಅದರಿಂದಾಗುವ ಪರಿಣಾಮಗಳನ್ನು ವಿವರವಾಗಿಯೇ ಕೇಳಿದಳು. ನಾನು ಭಯಂಕರವಾಗಿಯೇ ಒಗ್ಗರಣೆ ಕೊಟ್ಟು ಹೆಚ್ಚು ಮಾಡಿ ಹೇಳಿದೆ. ಬೇಕಾದರೆ ಕೇಳಿ, ವಿಷ ಹಾಕುವ ವಿಚಾರ ಅವಳಾಗೇ ಕೈಬಿಟ್ಟರೂ ಬಿಡಲಿ ಎಂದು. ಆದರೆ ವಿಷ ತಿಂದು ಸಾಯುವವನ ಚಿತ್ರ ವರ್ಣಿಸುತ್ತ ಹೋದಂತೆ ಅವಳ ಮುಖ ಕಳೆಯೇರುತ್ತ ಹೋಯಿತು. ಅವಳ ಕಣ್ಣಲ್ಲಾಗಲೇ ಮರೆಪ್ಪ ಸಣಕಲಾಗಿ, ಬರೀ ಎಲುಬಿನ ಹಂದರವಾಗಿ, ನಿಸ್ಸಹಾಯಕವಾಗಿ ಅವರಿವರಿಗೆ ಅಂಗಲಾಚುತ್ತ ಸಾಯುತ್ತಿದ್ದ. ಆ ಕಲ್ಪನೆಯ ಚಿತ್ರದಲ್ಲಿ ಮರೆಪ್ಪ ಇವಳ ಕಾಲಿಗೂ ಬಿದ್ದನೆಂದು ತೋರುತ್ತದೆ. ಅವಳ ಸೇಡಿನ್ನೂ ಹೋಗಿರಲಿಲ್ಲ. "ಹೊಲೆಯಾ ಹೊಲೆಯಾ" ಎಂದು ಬಾರಿ ಬಿಟ್ಟೇ ಅಂದಳು. ಆಗ ಅವಳ ಕಣ್ಣಲ್ಲಿ ಹೊಳೆಯುತ್ತಿದ್ದ ಕ್ರೂರ ತೃಪ್ತಿ ಮತ್ತು ಸೇಡು ಮಾತ್ರ ನನಗೂ ಅಸಹ್ಯ ಹುಟ್ಟಿಸಿತು.

ವಿಷ ಹಾಕಬೇಕೆಂದ ದಿನ ಬೆಳಿಗ್ಗೆ ಎಚ್ಚರವಾದಾಗಿನಿಂದಲೇ ನನ್ನ ಹೊಟ್ಟೆಯಲ್ಲಿ ಸಂಕಟವಾಗ ತೊಡಗಿತು. ಕೆಲಸ ಕಾರ್ಯಗಳಲ್ಲಿ ಎಷ್ಟೂ ಉತ್ಸಾಹವಿರಲಿಲ್ಲ. ಒಮ್ಮೊಮ್ಮೆ ನೋಡುವುದಕ್ಕೂ ಕೂಡ ಸಿಕ್ಕದ ಮರೆಪ್ಪ ಆ ದಿನ ಎರಡು ಸಲ ಕಾಣಿಸಿಕೊಂಡ. ಎರಡನೇ ಸಲ ಆತನನ್ನು ಕಂಡಾಗಲಂತೂ ನನಗೆ ನಡುಕ ಬಂತು. ಸಿಂಗಾರೆವ್ವನಿಗೆ ಇದ್ಯಾವುದರ ಕಡೆ ಗಮನವಿರಲಿಲ್ಲ. ಹುಣಸೇಮಳೆಯನ್ನೇ ತದೇಕ ದೃಷ್ಟಿಯಿಂದ ಅನೇಕ ಬಾರಿ ನೋಡಿದಳು. ಅಲ್ಲಿಗೆ ಹೋಗಿ ಬರಬೇಕೆಂಬ ತನ್ನ ಹಳೇ ಆಸೆಯನ್ನು ಇನ್ನೊಮ್ಮೆ ಹೇಳಿದಳು. ಮಧ್ಯಾಹ್ನ ಅವಳೊಂದು ಹಾಡನ್ನು ಗುಣುಗಿದಳೆಂದೂ ನನ್ನ ಭಾವನೆ. ಮರೆಪ್ಪನ ಕಂಟಕದಿಂದ ಆಗಲೇ ಪಾರಾದ ಹಾಗೆ ಅವಳು ಸಡಗರದಿಂದ ಇದ್ದಳು. ಸಾಯಂಕಾಲವಾಗುತ್ತಲೂ ನಾನೇ ಅಡಿಗೆ ಮಾಡಬೇಕೆಂದೂ, ಈ ದಿನ ಅಗತ್ಯವಿಲ್ಲವೆಂದು ಹೇಳಿ ಹೆಣ್ಣಾಳನ್ನು ಅವಳೇ ಮನೆಗೆ ಕಳಿಸಿಳು. ಆಯ್ತು, ಒಲೆ ಹೊತ್ತಿಸಿ, ಅಡಿಗೆಗಿಟ್ಟು, ತಲೆಮೇಲೆ ಕೈ ಹೊತ್ತು ಒಲೆಯ ಜೊತೆ ನಾನೂ ಉರಿಯುತ್ತ ಕೂತೆ. ನಮಗೆಲ್ಲ ಬೇರ ಪಲ್ಯ ಮಾಡಿಕೊಳ್ಳುವುದೆಂದೂ ಮರೆಪ್ಪನಿಗೆ ಹುಳಿ ಪಲ್ಲೆ ಮಾಡಿ, ಅದರಲ್ಲೇ ವಿಷ ಬೆರೆಸುವುದೆಂದೂ ಮೊದಲೇ ಮಾತಾಡಿಕೊಂಡಿದ್ದೆವು. ನಮ್ಮ ಅಡಿಗೆ ಮುಗಿದಾದ ಮೇಲೆ ಅದನ್ನೆಲ್ಲ ಪ್ರತ್ಯೇಕ ತೆಗೆದಿಟ್ಟು, ಇನ್ನೊಂದು ಗಡಿಗೆ ಇಟ್ಟು, ಬೇಳೆ ಬೇಯಿಸಲು ಹಾಕಿದೆ. ಸಿಂಗಾರೆವ್ವ ಬಂದು ವಿಷದ ಪುಡಿಕೆ ಕೊಟ್ಟಳು. ಈಗ ಹಾಕಲೇಬೇಕು. ಏನೋ ಹೊಳೆಯಿತು. ತಕ್ಷಣ ಪುಡಿಕೆ ಬಿಚ್ಚಿ ವಿಷವನ್ನೆಲ್ಲ ಒಲೆಯಲ್ಲಿ ಹಾಕಿ, ಆ ಕಾಗದವನ್ನು ಮಾತ್ರ ಪಾತ್ರೆಯ ಬಾಯ ಮೇಲೆ ಹಿಡಿದು ಜಾಡಿಸಿದೆ. ಇದೆಲ್ಲ ಅಲ್ಲೇ ಇದ್ದ ಸಿಂಗಾರೆವ್ವನಿಗೆ ಗೊತ್ತಾಗದಂತೆ ನೋಡನೋಡುವಷ್ಟರಲ್ಲಿ ನಡೆದುಹೋಗಿತ್ತು. ಸದ್ಯ ಅವಳು ಮಾತ್ರ ಎಷ್ಟೂ ಸಂಶಯ ತೆಗೆದುಕೊಳ್ಳಲಿಲ್ಲ. ಮೈ ತುಂಬ ಗಮ್ಮಂತ ಬೆವರು ಬಂತು. ಮರೆಪ್ಪ ಬಚಾವಾಗಿದ್ದ.

ಆ ದಿನ ಮರೆಪ್ಪ ದೇಸಾಯಿಯೊಂದಿಗೆ ತಡವಾಗಿ ಮನೆಗೆ ಬಂದ. ದೇಸಾಯಿ ಕುಡಿದುದರಿಂದ ಎಷ್ಟು ಸೇರಿತೋ ಅಷ್ಟನ್ನು ಹೊಟ್ಟೆಗೆ ಸೇರಿಸಿ ಹಾಗೇ ಮಂಚದ ಮೇಲೆ ಅಡ್ಡಾದ. ಮರೆಪ್ಪ ಊಟಕ್ಕೆ ಕೂತ. ನನಗ್ಯಾವ ಆತಂಕವಿರಲಿಲ್ಲ. ಈಗ ಬರೀ ನಾಟಕ ಮಾಡಬೇಕಿತ್ತಷ್ಟೇ. ನಾನದನ್ನು ಸರಿಯಾಗಿ ನಿಭಾಯಿಸುತ್ತಿದ್ದೆ. ಅವನ ಪರಿಯಾಣದೊಳಗೆ ರೊಟ್ಟಿ ಹಾಕಿ ಮೇಲೆ ಹುಳಿಪಲ್ಲೆ ಹಾಕಿದೆ.

ಇನ್ನೇನು ಮರೆಪ್ಪ ಎಡೆಗೆ ಕೈ ಹಾಕಬೇಕಿ, ಎಲ್ಲಿದ್ದಳೋ ಮಾರಾಯ್ತಿ ಸಿಂಗಾರೆವ್ವ, ಬಂದವಳೇ ಜೋರಿನಿಂದ ಅವನ ಮುಂದಿನ ಎಡೆಯನ್ನು ಒದ್ದಳು. ಅದು ಅಷ್ಟು ದೂರ ಹೋಗಿ ಬಿತ್ತು. ನನಗೂ ಹೊಯ್ಕಾಯ್ತು. ಮರೆಪ್ಪ ತಬ್ಬಿಬ್ಬಾಗಿ ನನ್ನನ್ನೂ ಅವಳನ್ನೂ ನೋಡುತ್ತಿರುವಂತೆ ಸಿಂಗಾರೆವ್ವ ತಟ್ಟೆಯಲ್ಲಿ ನಮಗಾಗಿ ಇಟ್ಟಿದ್ದ ಅಡಿಗೆ ಬಡಿಸಿ ತಂದು ಮುಂದಿಟ್ಟಳು. ಮರೆಪ್ಪ ಉಂಡನೋ ಇಲ್ಲವೋ, ಇನ್ನೇನಾದರೂ ಇನ್ನಷ್ಟು ಬೇಕಾದರೇನು ಮಾಡುವನೋ - ಎಂದು ಯಾವುದನ್ನೂ ಯೋಚಿಸದೆ ನನ್ನ ರೆಟ್ಟೆಗೆ ಕೈ ಹಾಕಿ ಗಟ್ಟಿಯಾಗಿ ಹಿಡಿದು ಹಾಗೆ ಎಳೆದುಕೊಂಡು ಅಂತಸ್ತಿಗೆ ಕೋಣೆಗೆ ನಡೆದಳು.

ಭದ್ರವಾಗಿ ಬಾಗಿಲಿಕ್ಕಿದಳು. ಉರಿಯುತ್ತಿದ್ದ ದೀಪ ಕಳೆದಳು. ಕಿಡಕಿಯ ಹತ್ತಿರ ನನ್ನನ್ನು ಸೆಳೆಸು ತಬ್ಬಿಕೊಂಡು ಕಿವಿಯಲ್ಲಿ "ಶೀನಿಂಗೀ" ಎಂದಳು.

"ಯಾಕೆವ್ವ?"

"ಹುಣವಿ ಎರಡ ದಿನ ಮುಂದಿರ್ತ ಅಲ್ಲೇನs ನಾ ಹೊರಗಾಗೋದು?"

"ಹೌಂದು"

"ಹುಣ್ಣಿವ್ಯಾಗಿ ಹತ್ತ ದಿನ ಆಯ್ತು, ನಾ ಇನ್ನs ಹೊರಗಾಗಿಲ್ಲ."

"ಅಂದರ?"

"ಇಷ್ಟೂ ತಿಳಿಯಾಣಿಲ್ಲೇನ ಹಡಸು?" ಎನ್ನುತ್ತ ನನಗೊಂದು ಸಣ್ಣ ಏಟು ಹಾಕಿ ಮತ್ತೆ ಹತ್ತಿರ ಸೆಳೆದುಕೊಂಡು ಕಿವಿಯಲ್ಲಿ "ನಾ ಬಸರಾಗಿರಬೇಕೇನಗs?" ಎಂದಳು. ನನಗಾದ ಸಂತೋಷ ಹೇಳತೀರದು. ಮರ್ಯಾ ಬಚಾವಾದದ್ದಕ್ಕೊ, ಅವಳು ಗರ್ಭಿಣಿಯಾದದ್ದರ ಸಂತೋಷಕ್ಕೋ ಎಡೆ ಒದ್ದಿದ್ದಳಲ್ಲ ಅದರ ಕಾರಣ ತಿಳಿದು ಖುಷಿಯೋ - ಮುಂಜಾನೆಯಿಂದ ಅನುಭವಿಸಿದ ಆತಂಕ ಹಗುರಾದದ್ದಕ್ಕೋ - ನನ್ನ ಕಣ್ಣಲ್ಲಿ ಫಳಕ್ಕನೆ ನೀರು ಚಿಮ್ಮಿ ಹಾಗೇ ಅವಳನ್ನು ತಬ್ಬಿಕೊಂಡು "ಅಯ್ ನನ್ನ ತಾಯೀ, ನಿನ್ನ ಆಸೆ ಈಡೇರಲಿ" ಎಂದವಳೇ ಮಕ್ಕಳಿಗೆ ಕೊಡುವಂತೆ ಲಟಲಟ ಮುದ್ದುಕೊಟ್ಟೆ. ಎಂದೂ ಪ್ರೀತಿ ಕಾಣದ ಅನಾಥ ಕೂಸಿನಂತೆ ಅವಳು ಸುಮ್ಮನೇ ನಿಂತು ಮುದ್ದುಕೊಡಿಸಿಕೊಂಡಳು. ಆಮೇಲೆ ತಡಕಿ ನನ್ನ ಕೈ ಹಿಡಿದುಕೊಂಡು ಸುಮ್ಮನೆ ಒಂದು ನಿಮಿಷ ಗೋಡೆಗಾತು ನಿಂತಳು. ನಾನೂ ಅವಳ ಹಾಗೆ ನಿಂತೆ. ಪರಸ್ಪರ ಮುಖ ಕಾಣಿಸುತ್ತಿರಲಿಲ್ಲ. ಅವಳ ಮುಖ ಕೆಂಪಾಗಿರುವುದನ್ನು, ಕಣ್ಣು ಹೊಳೆಯುವುದನ್ನು, ತುಟಿಗಳು ಅದುರುವುದನ್ನು ಕಲ್ಪಿಸಿಕೊಂಡೆ. ಅವಳ ಮುಖ ನೋಡಬೇಕೆಂಬ ಹುಚ್ಚು ಆಸೆ ನನ್ನಲ್ಲಿ ಕುದಿಯುತ್ತಿತ್ತು. ನನ್ನ ಕೈಯಿನ್ನೂ ಅವಳ ಕೈಯಲ್ಲೇ ಇತ್ತು. ಅದನ್ನು ತೆಗೆದುಕೊಂಡು ತನ್ನ ಹೊಟ್ಟೆಯ ಮೇಲೆ ಮೆಲ್ಲಗೆ ಇಟ್ಟುಕೊಂಡು, ನನ್ನ ಕೈಯಿಂದಲೇ ಸವರಿಕೊಳ್ಳುತ್ತ "ಹೌಂದ?" ಎಂದಳು. ಒಂದು ತಿಂಗಳಲ್ಲೇನು ಹೊಟ್ಟೆ ಉಬ್ಬೀತು? ಆದರೆ ಅವಳ ಖುಶಿಗೆ ನಾನ್ಯಾಕ ಅಡ್ಡಬರಲಿ, ಮೆಲ್ಲಗೆ ಕೈಯಾಡಿಸುತ್ತ "ಹೌಂದೆವ್ವಾ" ಅಂದೆ. ಬಸುರು ಎಂದರೆ ಹಗುರವಾದ ಮಾತೆ? ಯಾರಿಂದಾದದ್ದೂ ಎಂಬ ಮಾತು ಮುಂದೆ ಬಂದೇ ಬರುತ್ತದೆ. ದೇಸಾಯಿಗೆ ಸಂಶಯ ಬರದೇ ಇರುತ್ತದೆಯೇ? ಆದರೆ ಅದ್ಯಾವುದೂ ಆಗ ಇಬ್ಬರ ತಲೆಯಲ್ಲೂ ಹೋಗಲಿಲ್ಲ.

"ಅದ್ಯಾಕೋ ನಮ್ಮತ್ತಿ ನಡಪಟ್ಟಿ ಹಾಡs ಹಾಡವೊಲ್ಲಲ್ಲ - ಬಾ, ನೋಡಿಕೊಂಡ ಊಟಾ ಮಾಡಿ ಬರೋಣು" ಎಂದಳು. ಕೆಳಗಿಳಿದೆವು.

ಮರ್ಯಾ ಉಂಡು ಹೋಗಿದ್ದ. ನಾವೂ ಅವಸರದಲ್ಲಿ ಊಟಾ ಮಾಡಿ ಹಿರಿಯ ದೊರೆಸಾನಿಯ ಕೋಣೆಗೆ ಹೋದೆವು. ಅವಳು ನಿದ್ದೆಯಲ್ಲಿದ್ದಳು. ಎಬ್ಬಿಸುವುದ್ಯಾಕೆಂದು ತಿರುಗಿ ಬಂದೆವು.

ಸಾಮಾನ್ಯವಾಗಿ ಅವಳು ಅಷ್ಟು ಬೇಗ ನಿದ್ದೆ ಮಾಡಿದವಳೇ ಅಲ್ಲ. ಈ ಮಧ್ಯೆ ಊಟಾ ಕಡಿಮೆ ಮಾಡಿದ್ದಳು. ಎರಡೂಟ ಮತ್ತು ಬೈಲಕಡೆ ಮಾಡಿಸುವುದನ್ನು ಬಿಟ್ಟರೆ ನಾವ್ಯಾರೂ ಅವಳ ಕಡೆ ಗಮನ ಕೊಟ್ಟಿರಲೇ ಇಲ್ಲ. ನಮ್ಮದೇ ನಮಗೆ ಹಾಸ್ಯುಂಡು ಬೀಸಿ ಒಗೆವಷ್ಟಿದ್ದಾಗ ಅವಳ ಹರಟೆ ಕೇಳುವುದಕ್ಕೆ ಸಮಯವೆಲ್ಲಿತ್ತು? ಊರಿನಲ್ಲೂ ಅವಳ ಬಗ್ಗೆ ಕರಗುವಂಥವರಿರಲಿಲ್ಲ. ಇಷ್ಟು ದಿನ ಅವಳು ಹಾಸಿಗೆ ಹಿಡಿದು ಬಿದ್ದಿದ್ದಳಲ್ಲ, ಊರಿನ ಅವಳ ಓರಗೆಯ ಒಬ್ಬಳಾದರೂ ಬಂದು ಮಾತಾಡಿಸಿರಲಿಲ್ಲ. ಹೆಣ್ಣಾಳುಗಳಂತೂ ಅವಳ ಕೋಣೆಯ ಕಡೆಗೆ ಮುಖ ಮಾಡಿದವರಲ್ಲ. ಪ್ರಾಯದ ಕಾಲದಲ್ಲಿ ಭಾರೀ ಜಿಪುಣಿಯಂತೆ, ಸಾಯುತ್ತೇನೆಂದರೂ ಯಾರಿಗೂ ಒಂದು ಹನಿ ನೀರು ಹಾಕಿದವಳಲ್ಲವಂತೆ. ಹೀಗಿದ್ದರೆ ಯಾರು ಬರುತ್ತಾರೆ? ಅವಳ ಬಗ್ಗೆ ಹೆಂಗಸರು ಆಡಿಕೊಳ್ಳುವುದಿತ್ತು. “ಅಯ್ಯೋ ಹಿರಿ ದೊರೆಸಾನಿ ಎಂಜಲು ಸಿಡಿದೀದಂತ ಎಂಜಲ ಕೈಯಿಂದ ಕಾಗೀ ಸೈತ ಹೊಡೀತಿರಲಿಲ್ಲ” - ಎಂದು. ಮಧ್ಯೆ ಮಧ್ಯೆ ಮುದುಕಿ ನಮ್ಮನ್ನು ಬಾಯಿಮಾಡಿ ಕರೆಯುವುದಿತ್ತು. ನಾವು ಕೇಳಿದರೂ ಕೇಳಿಸದವರಂತೆ ಇದ್ದುಬಿಡುತ್ತಿದ್ದೆವು. ನಮ್ಮ ಕಾರಾಭಾರ್ಯಾವುದೂ ಮುದುಕಿಗೆ ತಿಳಿಯುತ್ತಿರಲಿಲ್ಲವಾದ್ದರಿಂದ ಅವಳ ಬಗ್ಗೆ ನಿಷ್ಕಾಳಜಿಯಿಂದಲೇ ಇದ್ದೆವು.

ರಾತ್ರಿ ಗಾಢನಿದ್ದೆಯಲ್ಲಿದ್ದಾಗ ಸಿಂಗಾರೆವ್ವ ನನ್ನನ್ನೆಬ್ಬಿಸಿ “ಶೀನಿಂಗೀ, ನನಗೊಂದ ಕೆಟ್ಟಕನಸ ಬಿದ್ದಿತ್ತಲ್ಲ” ಎಂದಳು. ನಿದ್ದೆಯಿನ್ನೂ ನನ್ನ ಕಣ್ಣಿಗಂಟಿಕೊಂಡೇ ಇತ್ತು. ಹಾಗೆ ಹೊರಳಿ “ನಾಳಿ ಹೇಳಿಯಂತೆ ಮಲಕ್ಕೊ ಎವ್ವಾ” ಅಂದೆ. ಅವಳು ಬಿಡಲಿಲ್ಲ. “ಎದ್ದ ಕೊರಗs” ಎಂದು ಹೇಳಿ ರಟ್ಟೆಯಲ್ಲಿ ಕೈಹಾಕಿ ಎಬ್ಬಿಸಿ, ನನ್ನ ಪಕ್ಕದಲ್ಲೇ ಕೂತು,

“ಶೀನಿಂಗೀ ಅರಮನ್ಯಾಗ ಕಾಗಿ ಆಡತಿತ್ತು” ಎಂದಳು. ಅದನ್ನು ಕೇಳಿದೊಡನೆ ಥಟ್ಟನೆ ನನ್ನ ನಿದ್ದೆ ಹಾರಿಹೋಯಿತು.

“ಏನಂದಿ??” ಅಂದೆ.

“ಅರಮನ್ಯಾಗ ಕಾಗಿ ಆಡತಿತ್ತು! ನಮ್ಮತ್ತಿ ಓಡ್ಯಾಡಿ ಕೋಲುಚಾಚಿ ಹೋಡೀತಿದ್ದಳು. ಅದು ಆಕೀ ಕೋಲಿಗಿ ಸಿಗsಲಿಲ್ಲ. ಕಡೀಕಂದರ ನಮ್ಮತ್ತಿ ನಡಪಟ್ಟಿ ಹಾಡಹಾಡಾಕ ಸುರು ಮಾಡಿದ್ದು. ಕಾಗಿ ಹೋಗಿ ಆಕಿ ಬಾಯಿ ಕುಕ್ಕುತ್ತಿತ್ತು! ಅದನ್ನೋಡ್ತ ಎನಗ ಎಚ್ಚರಾಯ್ತು.”

ಇದಂತೂ ಸ್ಪಷ್ಟವಾಗಿ ಅನಿಷ್ಟ ಸೂಚಕ ಕನಸೇ ಸೈ. ನಾನು ಆ ಕನಸನ್ನೇ ಕಲ್ಪಿಸಿಕೊಳ್ಳುತ್ತ ಭಯಗೊಳ್ಳುತ್ತಿದ್ದೆ. ಸಿಂಗಾರೆವ್ವ

“ಶೀನಿಂಗಿ, ನಮ್ಮತ್ತಿ ಕರಧಾಂಗಾಯ್ತಲ್ಲ? ಬಾ” ಎಂದು ಎದ್ದಳು. ಮರೆಪ್ಪನ ಹೆದರಿಕೆ ನಮ್ಮ ಮನಸ್ಸಿನಲ್ಲಿ ಸುಳಿಯಲೇ ಇಲ್ಲ. ಎದ್ದು ಕಂದೀಲು ತಗೊಂಡು ಮುಂದಾದೆ.

ನಾವು ಬಂದುದು ಮುದುಕಿಗೆ ಕಾಲಸಪ್ಪಳದಿಂದಲೆ ಗೊತ್ತಾಯ್ತು. “ಯಾರು, ಶೀನಿಂಗೀ?” ಎಂದಳು. “ಹೌದ ನಾನs ಸಿಂಗಾರೆವ್ವ ಬಂದಾಳ’ ಎಂದೆ. ಸಿಂಗಾರೆವ್ವ ಹತ್ತಿರ ಹೋಗಿ ಏಳುವುದಕ್ಕೆ ಪ್ರಯತ್ನ ಮಾಡುತ್ತಿದ್ದ ಅವಳನ್ನು ಕೂರಿಸಿದಳು. ಹತ್ತಿರ ಕೂತವಳು ತನ್ನ ಸೊಸೆಯೇ ಎಂದು ಗೊತ್ತಾಗಿ ಮುದುಕಿಗೆ ಸಂತೋಷವಾಯ್ತು. ಅಕ್ಕರೆಯಿಂದ ಅವಳ ಮೈತುಂಬ ಕೈಯಾಡಿಸಿದಳು. ಆಶೀರ್ವಾದ ಮಾಡುವಂತೆ ನಾಕು ಐದು ಬಾರಿ ತಲೆ ಸವರಿದಳು. ಸಿಂಗಾರೆವ್ವನ ಹೊಟ್ಟೆ ಹಿಸುಕುವುದನ್ನು ಮರೆಯಲಿಲ್ಲ. “ಈ ಸಲ ನಿನ್ನ ಸೊಸೀ ಹೊಟ್ಟೆ ನಿಂತೈತಿ” ಎಂದು ಹೇಳುವವಳಿದ್ದೆ. ಅಷ್ಟರಲ್ಲಿ ಮುದುಕಿಯೇ ಸುರುಮಾಡಿದಳು.

“ಆಗಳೆ ಯಾರೋ ಐದ ಮಂದಿ ಹೆಂಗಸರು ಬಂದಾಗಿತ್ತು. ಅವರ್ಯಾರು?”

ನಾವು ಪರಸ್ಪರ ಮುಖ ನೋಡಿಕೊಂಡೆವು.

“ರಾತ್ರಿ ಯಾಳೆ ಯಾರ ಬರತಾರವ್ವ? ಎನ್ನೂ ಕತ್ತಲೈತಿ” ಅಂದೆ.

“ಯಾರೋ ನಿಮ್ಮ ಗೆಳೆತೇರೇನೋ ಅಂದುಕೊಂಡೆ. ಇನ್ನೂ ಕತ್ತಲೈತಿ?”

“ಹೌಂದು, ಕನಸಗಿನಸ ಕಂಡಿಯೋ ಏನೋ! ಎಂಥವರಿದ್ದರು?”

“ಥೇಟ ನಮ್ಮ ಸಿಂಗಾರೆವ್ವನ ಹಂತವರs. ಹೊಸಾ ಪೀತಾಂಬರ ಉಟ್ಟಿದ್ದರು. ಮೈತುಂಬ ದಾಗೀನ ಝಗಮಗ ಹೊಳೀತಿದ್ದವು. ಕುಮುದವ್ವನ ಗುಡೀಗಿ ಹೋಗೋಣ ಬಾ, ಅಂತಿದ್ದರು”

ಈ ಮಾತು ಕೇಳಿ ಸಿಂಗಾರೆವ್ವ ಮಳಮಳ ನನ್ನ ಮುಖ ನೋಡಿದಳು. ಆ ಮುದುಕಿ ಎಚ್ಚರದಲ್ಲಿದ್ದಾಳೋ, ಇನ್ನೂ ಕನಸು ಕಾಣುತ್ತಿದ್ದಾಳೋ - ನನಗೆ ಬೇಗ ಬಗೆಹರಿಯಲಿಲ್ಲ.

“ಕನಸ ಕಂಡೀದಿ ಅಷ್ಟs. ಆರಾಮ ಮಲಗು” ಅಂದೆ.

“ಕನಸ ಅಂತೀಯಾ?” ಅಂತಂದು ತನ್ನ ಸೊಸೆಯ ಕಡೆ ತಿರುಗಿ,

“ಸಿಂಗಾರೆವ್ವ, ನಾ ಸಾಯತೇನೋ ಏನೋ” ಎಂದಳು. ಕನಸು ಬೇರೆ ಕಂಡಿದ್ದಳಲ್ಲ. ಈ ಮಾತು ಕೇಳಿದೊಡನೆ ಸಿಂಗಾರೆವ್ವ ಥಟ್ಟನೆ ಕಣ್ಣೀರು ತಂದಳು.

“ಏನ ಅಂತೀಬೇ ಎವ್ವಾ, ಏನೇನೋ ಹೇಳಿ ಹೆದರಿಸ್ತಿ, ಆಗಲೇ ನಿನ್ನ ಸೊಸಿ ಅಳಾಕ ಹತ್ಯಾಳ” ಎಂದೆ.

“ಅಳಬ್ಯಾಡ ನನ್ನ ಕಂದಾ, ತುಂಬಿದ ಮನ್ಯಾಗ ನೀ ಅಳಬಾರದು” ಎಂದು ಹೇಳಿ ತಡಕಾಡಿ ಸೊಸೆಯ ಕಣ್ಣೀರೊರಿಸಿದಳು. ಸಿಂಗಾರೆವ್ವ “ಎವ್ವಾ” ಎನ್ನುತ್ತ ಅತ್ತೆಯನ್ನು ತಬ್ಬಿ ಅಳತೊಡಗಿದಳು. ಮಲಗುವ ಮಕ್ಕಳನ್ನು ತಟ್ಟುವ ಹಾಗೆ ಮುದುಕಿ ಸೊಸೆಯ ತಲೆ ತಟ್ಟುತ್ತ,

“ಚಿಂತೀ ಮಾಡಬ್ಯಾಡ ಕಂದಾ, ನಾ ಬಿಡು, ಹೆಚ್ಚ ಪುಣ್ಯಾ ಮಾಡಲಿಲ್ಲ. ಈ ಅರಮನ್ಯಾಗ ಹಿಂದ ಹಿರೇರಿದ್ದರಲ್ಲ. ಅವರೆಲ್ಲಾ ಪುಣ್ಯವಂತರು. ಅವರ ಪುಣ್ಯ ನಿನ್ನ ನೆತ್ತಿಗಿ ನಿಲ್ಲತೈತಿ. ನಾ ಏನ ಹೇಳಿದೆ ಅಂತ ಅಮ್ಯಾಲ ನಿನಗs ತಿಳೀತೈತಿ. ಮಲಕೋ ಹೋಗು. ಶೀನಿಂಗೀ, ಕರಕೊಂಡ ಹೋಗs”

- ಎಂದಳು. ಸಿಂಗಾರೆವ್ವ ಅಳುತ್ತಲೇ ಇದ್ದಳು.

“ನಾ ಸಾಯೋದಿಲ್ಲ ಹೋಗ ಮಗಳs. ನಾ ಅಂದರ ಹಗರ ಹೆಂಗಸಂತ ತಿಳೀಬ್ಯಾಡ; ನಿನ್ನ ಮಗನ್ನ ನೋಡೇ ಸಾಯ್ತಿನಿ.”

- ಎನ್ನುತ್ತ ಮುದುಕಿ ತಲೆ ತಟ್ಟುತ್ತಲೇ ಇದ್ದಳು. ತುಸು ಹೊತ್ತು ಹಾಗೇ ಕಾಲ ಕಳೆದೆವು. ಸಿಂಗಾರೆವ್ವನಿಗೆ ತುಸು ಸಮಾಧಾನವಾಗಿತ್ತು. ಹೋಗಿ ಮಲಗಿರೆಂದು ಮುದುಕಿ ಮತ್ತೆ ಮತ್ತೆ ಹೇಳಿದಳು. ಉಪಾಯವಿಲ್ಲದೆ ಇಬ್ಬರೂ ಎದ್ದೆವು. ನನಗೆ ತಡೆಯಲಿಕ್ಕಾಗಲಿಲ್ಲ. ಅವಳ ಕಿವಿಯಲ್ಲಿ.

“ಈ ತಿಂಗಳು ನಿನ್ನ ಸೊಸಿ ಮುಟ್ಟ ನಿಂತೈತಿ.”

- ಎಂದೆ. ಹೀಗೆನ್ನುವುದೇ ತಡ. ಮುದುಕಿ “ಹಾ” ಎಂದು ಆನಂದದಲ್ಲಿ ಹೌಹಾರಿ “ಸಿಂಗಾರೆವ್ವ” ಎಂದು ಕರೆದು ಸುತ್ತಿನ ದಿಕ್ಕುಗಳಿಗೆಲ್ಲ ಕೈ ಮುಗಿದಳು. ಸೊಸೆ ಬಂದೊಡನೆ ಅಡರಾಸಿ ತಬ್ಬಿಕೊಂಡು “ನನ್ನ ಕಂದಾ ನನ್ನ ಕಂದಾ” ಎಂದು ಹೇಳುತ್ತ ಕಣ್ಣೀರಿನ ದೊಡ್ಡ ದೊಡ್ಡ

ಹನಿಗಳನ್ನು ಸುರಿಸುತ್ತ "ಏ ಶೀನಿಂಗಿ, ಮೊದಲs ಯಾಕಗs ಹೇಳಲಿಲ್ಲ?" ಎಂದು ಕೋಪಿಸಿಕೊಂಡು ಮನೆತನದ ಗುರುಹಿರಿಯರನ್ನೆಲ್ಲಾ ಸ್ಮರಿಸಿದಳು. ಎಳೇಮಕ್ಕಳ ಹಾಗೆ ಹಾಸಿಗೆಯಲ್ಲೇ ಕುಣಿದು ಕುಪ್ಪಳಿಸಿದಳು. ಸೊಸೆಯ ಸೊಂಟ ತಬ್ಬಿಕೊಂಡು ಸೀರೆ ಕೆಳಗಿಳಿಸಿ ಅದರ ಸುತ್ತ ವಿಚಿತ್ರವಾಗಿ ಕೈಯಾಡಿಸತೊಡಗಿದಳು. ಅವಳು ಅಷ್ಟರಮಟ್ಟಿಗೆ ಸೀರೆ ಕೆಳಗಿಳಿಸಿದ್ದಕ್ಕೆ ಸಿಂಗಾರೆವ್ವನಿಗೆ ನಾಚಿಕೆ ಬಂದು ಸೀರೆ ಎತ್ತಿಕೊಳ್ಳುತ್ತಿದ್ದಳು. ಇವಳು "ತಡಿ ತಡಿಯೇ" ಎಂದು ಹಾಗೇ ನಿಲ್ಲಿಸಿ ತನ್ನ ಸೊಂಟದ ಚಿನ್ನದ ನಡುಪಟ್ಟಿ ಬಿಚ್ಚಿ ತಡಕಾಡಿ ಸಿಂಗಾರೆವ್ವನ ಸೊಂಟಕ್ಕೆ ಹಾಕಿದಳು. "ಬ್ಯಾಡಬ್ಯಾಡತ್ತೆವ್ವ" ಎಂದು ಸಿಂಗಾರೆವ್ವ ಎಷ್ಟು ಹೇಳಿದರೂ ಕೇಳಲಿಲ್ಲ. ಹಾಕಿದ ಮೇಲೆ ಅವಳ ಕುರುಡು ಕಣ್ಣಿನಲ್ಲೂ ಬೆಳಕಾಡಿತು. ಹಾಗೇ ಸೊಸೆಯ ಸೊಂಟ ಹಿಡಿದುಕೊಂಡು.

"ನಿನ್ನ ಅಂದಚಂದ ನೋಡಕ ನನಗೆ ಕಣ್ಣಿಲ್ಲs ಮಗಳs. ನನ್ನ ಕಾಲ ಬೀಳು ಆಶೀರ್ವಾದ ಮಾಡತೇನ" ಎಂದು ಪಾದ ಚಾಚಿದಳು. ಸಿಂಗಾರೆವ್ವ ಭಯಭಕ್ತಿಯಿಂದ ಎರಗಿದೊಡನೆ ಅವಳ ತಲೆಯ ಮೇಲೆ ಎರಡೂ ಕೈಯೂರಿ "ಆಶುಳ್ಳಕ್ಕಾಗಿ, ಹತ್ತ ಮಕ್ಕಳ ತಾಯಾಗs ಮಗಳ" ಎಂದು ಹರಸಿದಳು. ಇಬ್ಬರ ಕಣ್ಣಲ್ಲೇನು, ಈ ದೃಶ್ಯ ನೋಡಿ ನನ್ನ ಕಣ್ಣಲ್ಲೂ ನೀರಾಡಿತು.

"ಹಿರೇರ ಪುಣ್ಯ ನಿನಗೈತಿ ಕಂದಾ, ಕಾಳಜಿ ಮಾಡಬ್ಯಾಡ. ನಾಳಿ ಮಾತಾಡೋಣಂತ. ಹೋಗಿ ಮಲಕ್ಕೋ. ಏ ಶೀನಿಂಗಿ, ಸಿಂಗಾರೆವ್ವನ್ನ ಹೂವಿನಾಂಗ ನೋಡಿಕೋಬೇಕ ನೋಡು. ಈಗ ಬೇಕಾದರ ನೋಡು. ಕುಮುದವ್ವನ ಗುಡೀಗಿ ಹೋಗಾಕ ನಾ ತಯ್ಯಾರ" ಎಂದು ಮುದುಕಿ ಹೇಳಿದೊಡನೆ ನಾನು ಬಾಯಿ ಹಾಕಿ,

"ಏನ ಆಯಿ, ಥೇಟ ಸಾಯುವರ್ಹಾಂಗ ಮಾಡತಿ. ಮಲಗಂದರ ಸಿಂಗಾರೆವ್ವ ಹೆಂಗಮಲಗ್ಯಾಳು?" ಎಂದೆ. ಮುದುಕಿಯ ಮುಖ ಕಳೆಗೊಂಡಿತು.

"ನನ್ನ ಹಾಟ್ಯಾನ ಮಗಳs ನಾ ಸಾಯತೇನೇನs? ಮೊಮ್ಮಗನ ಉಚ್ಚೀ ಕುಡದ ಸಾಯತೇನ! ಮೊನ್ನಿ ಆ ಜಂಗಮ ಹುಚ್ಚಯ್ಯ ಕನಸಿನಾಗ ಬಂದಿದ್ದ. 'ಯಾಕ ಬಂದ್ಯೋ ಜಂಗಮಾ?' ಅಂದೆ. ಅವ 'ನಿನ್ನ ಪೂಜೀ ಮಾಡಾಕ ಬಂದೇನಬೇ' ಅಂದ! ಅಂದವನ ನನ ನೆತ್ತೀ ಮ್ಯಾಲ ಬಲಗಾಲ ಇಡಾಕ ಬಂದಾ! ನಾ ಕೇಳತೀನ? ಕೋಲ ತಗೊಂಡ, - ನನ್ನ ಹಾಟ ನೆಕ್ಕೋ ಭಾಡ್ಯಾ, ನನ್ನ ಪೂಜೀ ಮಾಡತೀಯೇನೋ? ನಿಂದs ಮಾಡತೀನಿ ತಡಿ, ಅಂತಂದು ಕೋಲಿನಿಂದ ಹಿಂಗ ಚುಚ್ಚಿದೆ."

- ಎಂದು ಹೇಳಿ, "ಹೋಗ್ರಿನ್ನ, ಮಲಗ್ಹೋಗ್ರಿ, ಮಲಗ್ಹೋಗ್ರಿ" ಎಂದು ನಮಗೂ ಕೋಲು ಚಾಚಿ ಚುಚ್ಚತೊಡಗಿದಳು. ನಾವು ತಪ್ಪಿಸಿಕೊಂಡು ಹೊರಬಂದೆವು. ಅರಮನೆಯ ಕಂಬಗಳೆಲ್ಲ ನಮ್ಮನ್ನೇ ದುರುಗುಟ್ಟಿ ನೋಡುತ್ತಿರುವಂತೆ ಕಂಡವು. ಅಡಿಗೆ ಮನೆಯ ಕಡೆ ಕತ್ತಲೆಗೆ ಉಸಿರುಗಟ್ಟಿತ್ತು. ನಮ್ಮ ಕಂದೀಲಿನ ಬೆಳಕಿಗೆ ಅದು ಮಿಸುಕಾಡಲೇ ಇಲ್ಲ. ಇನ್ನೂ ಬಸರಿನ ಬಗ್ಗೆ ಮೂಡುವ ಸಂಶಯಗಳನ್ನು ನಾವು ಎದುರಿಸಬೇಕಾಗಿತ್ತು. ಹೋಗಿ ಅದೇ ಮಾತಾಡುತ್ತ ಮಲಗಿದೆವು.

ಇಬ್ಬರಿಗೂ ಪೂರ್ತಿ ಬೆಳಗಾದ ಮೇಲೆಯೇ ಎಚ್ಚರವಾಯ್ತು. ಹಿರಿಯ ದೊರೆಸಾನಿಗೆ ಬೈಲಕಡೆ ಮಾಡಿಸುವ ಸಮಯವಾಯ್ತಲ್ಲಾ ಎಂದು ಅವಳ ಕೋಣೆಗೆ ಹೋದೆ. ಮುದುಕಿ ಯಾವಾಗಲೋ ಹರಾ ಅಂದಿದ್ದಳು. ಅವಳಿಗೆ ಹೀಗೆ ಸ್ನಾನ ಮಾಡಿಸಬೇಕಾಗಿ ಬಂದದ್ದಕ್ಕೆ ನನಗೆ ಬಹಳ ದುಃಖವಾಗಿತ್ತು. ಸಿಂಗಾರೆವ್ವನ ದುಃಖ ಹೇಳತೀರದು. "ನಿನ್ನ ಜೋಡಿ ನಿನ್ನ ಹಾಡೂ ಮಣ್ಣಗೂಡಿತs ಅತ್ತೀ" ಎಂದು ಅಳುತ್ತಿದ್ದಳು. ಅದರ ಕಾರಣ ನನಗೆ ಆಮೇಲೆ ತಿಳಿಯಿತು. ಸಿಂಗಾರೆವ್ವ ಅಂದೇ ಹೊರಗಾಗಿದ್ದಳು.

* * *

# ಅಧ್ಯಾಯ - ೧೪

ದೇಸಗತಿಯ ಮನೆಯ ಸಾವೆಂದರೆ ಎಲ್ಲೆಲ್ಲಿಂದ ಎಷ್ಟೊಂದು ಜನ ಬರಬೇಕು, ಆದರೆ ಹೆಣದ ಅಂತ್ಯದರ್ಶನಕ್ಕೆ ಕೂಡ ಊರಿನ ಜನ ಹೆಚ್ಚಾಗಿ ಬರಲಿಲ್ಲ. ಸುಡುವ ವ್ಯವಸ್ಥೆಗೂ ಓಡಾಡಲಿಕ್ಕೆ ಜನ ಇರಲಿಲ್ಲ. ಅಂದರೆ, ಮರೆಪ್ಪನೇ ಓಡಾಡಿ ಸುಡುವ ವ್ಯವಸ್ಥೆ ಮಾಡಿದ. ಈ ಮನೆತನದ ಬಗ್ಗೆ ಊರವರಿಗೆ ಅದೇನು ವೈರವೋ ಸೇಡೋ ಏನೇನೂ ಆಗಿಲ್ಲವೆಂಬಂತೆ ನಿರ್ಲಿಪ್ತರಾಗಿದ್ದರು. ಹೆಣಕ್ಕಾಗದಿದ್ದರೂ ಬೆಂಕಿಗಾದರೂ ನಂದಗಾಂವಿಯಿಂದ ಗೌಡ, ಗೌಡ್ತಿ ಬಂದರು. ಅವರು ಬರುವಷ್ಟರಲ್ಲಿ ಹೆಣವನ್ನು ಸುಡುಗಾಡಕ್ಕೆ ಸಾಗಿಸಲಾಗಿತ್ತು. ಹೀಗಾಗಿ ಅವರು ನೇರವಾಗಿ ಅಲ್ಲಿಗೇ ಬಂದರು. ಅಂತೂ ಹೆಣ ಸುಟ್ಟದ್ದಾಯ್ತು. ಹಿರಿಯ ದೊರೆಸಾನಿ ಸತ್ತಾಗ ದಾನ ಮಾಡದಿದ್ದರೆ ಹೇಗೇ? ಆದರೆ ಅದಕ್ಕೂ ದೇಸಾಯಿಯ ಹತ್ತಿರ ಹಣ ಇರಲಿಲ್ಲ. ಅದನ್ನೂ ಪರಮ ಶೆಟ್ಟಿಯಿಂದಲೇ ತಂದಾಯ್ತು.

ಅರಮನೆಯಲ್ಲಿ ಮುದುಕಿ ಓಡಾಡುತ್ತಿರಲಿಲ್ಲವಾದರೂ ಆಗಾಗ ಹಸಿವು ನೀರಡಿಕೆಗೆ ನಮ್ಮನ್ನು ಕರೆಯುವುದಿತ್ತು. ಹಗಲು ರಾತ್ರಿ ಯಾವಾಗೆಂದರೆ ಆವಾಗ ನಡುಪಟ್ಟಿಯ ಹಾಡನ್ನು ಹೇಳುವುದಿತ್ತು. ಸಾಯುವ ಮುನ್ನಾದಿನ ಅವಳು ನಡುಪಟ್ಟಿ ಕೊಟ್ಟ ದೃಶ್ಯವಂತೂ ನನ್ನ ಕಣ್ಣಿನಲ್ಲಿ ಇನ್ನೂ ಹಾಗೇ ಇದೆ. ಇದ್ದಾಗ ಅವಳಿದ್ದಾಳೆಂದು ಅನ್ನಿಸದಿದ್ದರೂ ಸತ್ತಮೇಲೆ ಮಾತ್ರ ಅವಳಿಲ್ಲದ್ದು ಹೆಜ್ಜೆಹೆಜ್ಜೆಗೆ ನಮ್ಮ ಅನುಭವಕ್ಕೆ ಬರುತ್ತಿತ್ತು. ಅವಳ ಕೋಣೆಯ ಕಡೆಗೆ ಕಣ್ಣು ಹರಿದಾಗೆಲ್ಲ ಖೇದವಾಗುತ್ತಿತ್ತು. ಹೆಣಕ್ಕೆ ಬಂದ ಗೌಡ್ತಿ ದಿನಕಾರ್ಯ ಮುಗಿಯುವ ತನಕ ಇಲ್ಲೇ ಇರಲೆಂದು ಬಿಟ್ಟು ಗೌಡ ನಂದಗಾಂವಿಗೆ ಹೋಗಿದ್ದ. ನಿಂಗವ್ವ ಗೌಡ್ತಿ ಮಗಳಿಗೆ ಸಮಾಧಾನ ಹೇಳುತ್ತಿದ್ದಳು. ಅವಳಿಗೆ ಒಳಗಿನ ವ್ಯವಹಾರಗಳ ಅರಿವಿರಲಿಲ್ಲ. ನಿರಾಸೆ ಮತ್ತು ದುಃಖದಿಂದ ಸಿಂಗಾರೆವ್ವ ಕಂಗಾಲಾಗಿದ್ದಳು. ಯಾವ ಬಸರಿನ ನೆಪದಲ್ಲಿ ಸಾಯುವ ತನಕ ಜತನವಾಗಿಟ್ಟ ನಡುಪಟ್ಟಿ ಕೊಟ್ಟಿದ್ದಳೋ ಆ ಬಸುರು ಅವಳು ಸತ್ತ ದಿನವೇ ಇಳಿದಿತ್ತು. ಹಿರಿಯ ದೊರೆಸಾನಿ ಸಾಯದೆ ಬಸಿರು ಇಳಿದಿದ್ದರೆ, ಅಥವಾ ಅವಳು ನಡುಪಟ್ಟಿ ಕೊಡದೆ ಸತ್ತಿದ್ದರೆ ಈ ಪರಿ ದುಃಖವಾಗುತ್ತಿರಲಿಲ್ಲ. ಅವಳ ಆಶೀರ್ವಾದವನ್ನೂ ಮೀರಿ ದೈವ ಸಿಂಗಾರೆವ್ವನನ್ನು ವಂಚಿಸಿತ್ತು. ಆ ದೈವವನ್ನು ನೆನೆದು ಇವಳು ಅಳುತ್ತಿದ್ದಳು. ಇದು ನನಗೆ ಮಾತ್ರ ಗೊತ್ತಿತ್ತು. ಆದರೆ ಸಮಾಧಾನದ ಮಾತುಗಳನ್ನಲ್ಲದೆ ನಾನೇನು ಕೊಡುವುದು ಸಾಧ್ಯವಿತ್ತು?

ಎಷ್ಟೇ ಸಣ್ಣ ಪ್ರಮಾಣದಲ್ಲೇ ಮಾಡಲಿ, ದಿನಕಾರ್ಯಕ್ಕೆ ಸಾವಿರ ರೂಪಾಯಿಗಳ ಅಗತ್ಯವಿತ್ತು. ದೇಸಾಯಿಯಂತೂ ಸದಾಶಿವ. ಹಣ ಎಂದೊಡನೆ ಪರಮಶೆಟ್ಟಿಯ ಮನೆಯ ಕಡೆಗೆ ಮುಖ ಮಾಡುತ್ತಿದ್ದ. ಆದರೆ ಶೆಟ್ಟಿ ಈ ಸಲ ಖಂಡಿತ ಹಣ ಕೊಡುವುದಿಲ್ಲವೆಂದು ಪಟ್ಟುಹಿಡಿದ. ಯಾವ ಭರವಸೆ ನಂಬಿ ಹಣ ಕೊಡಬೇಕು? ಹಾಗಂತ ದಿನಕಾರ್ಯ ನಿಲ್ಲಿಸಲಿಕ್ಕಾಗುವುದಿಲ್ಲವಲ್ಲ. ದೇಸಾಯಿ ಸಮಾಧಾನ ಹೇಳಿ ನೋಡಿದ. ಇದೊಂದು ದಿನಕಾರ್ಯ ಮುಗಿದೊಡನೆ ಗೋಕಾವಿಗೆ ಹೋಗಿ ಕಾಗದ ಪತ್ರದ ಹೊಸ ಪೂರೈಸೋಣವೆಂದ ದೇಸಾಯಿ, ಈ ದಿನಕಾರ್ಯ ಮುಗಿದರೆ ನೀವೆಲ್ಲಿ ನನ್ನ ಕೈಗೆ ಸಿಗುತ್ತೀರಿ? ಎಂದು ಶೆಟ್ಟಿ -

“ತಿಳದ ನೋಡ್ರಿ ದೇಸಾಯರ, ಒಂದಲ್ಲ ಎರಡಲ್ಲ ದೀಡಲಕ್ಷ ರೂಪಾಯಂದರ ಸಣ್ಣ ಮಾತೇನು? ಅದರಾಗಿಂದ ಒಂದs ಒಂದು ಕೆಂಪಾನ ಪೈಸಾ ಕೊಡಲಿಲ್ಲ. ಮತ್ತೂ ರೊಕ್ಕ ಕೇಳಿದರ ಯಾವ ಖಾತ್ರೀಲೇ ಕೊಡ್ಲಿ? ನಾಳಿ ಅಂದರ ನಾಳಿ ಅರಮನಿ ಬರಕೊಡ್ತೇನಿ ಅಂದಿರಿ. ನೀವs ನೋಡಿದಾಂಗ ಇಂಥಾ ನಾಳಿ ಎಷ್ಟಾದವು? ಮನ್ಯಾಗ ಹೆಣಾ ಬಿದ್ದಾಗ ಹಾರ್ಯಾಡಬಾರದಂತ ಮೊನ್ನಿ ಕೊಟ್ನೆ. ಇನ್ನs ಕೋಡೋದಂದರ ನನಗೇನು ಆಧಾರ ಬ್ಯಾಡೇನ್ರಿ? ಹೋಗಲಿ, ಇಷ್ಟದಿನ ಗೆಣಮೃತರಾಗಿ ಇದ್ದಿವಿ. ನಿಮಗ ಬಂದ ಸಂಕಟ ನನ್ನ ಸಂಕಟ ಒಂದs ಅನ್ನೋಣ. ಏನಾದರೂ ಚಿನ್ನ ಇದ್ದರ ಒತ್ತೆ ಇಡರಿ, ಹಣ ಎಣಸ್ತೀನಿ”.

ಅದೊಂದು ನಡಪಟ್ಟಿ ಮತ್ತು ಸಿಂಗಾರೆವ್ವನ ಅವೆರಡು ಬಳೆ ಬಿಟ್ಟರೆ ಚಿನ್ನ ಎಲ್ಲಿತ್ತು? ಇದ್ದುದೆಲ್ಲ ಆಗಲೇ ಶೆಟ್ಟಿಯ ಹೆಂಡತಿ ಮಕ್ಕಳ ಕೊರಳನ್ನಲಂಕರಿಸಿತ್ತು. ನಡುಪಟ್ಟಿಯ ವಿಚಾರ ಇವರ್ಯಾರಿಗೂ, ದೇಸಾಯಿಗೂ ತಿಳಿದಿರಲಿಲ್ಲವಾದ್ದರಿಂದ ಅಥವಾ ಮರೆತದ್ದರಿಂದ ಬಚಾವಾಗಿತ್ತು. ಇನ್ನುಳಿದದ್ದು ಬಳೆ. ಮನೆಯಲ್ಲಿ ಏನು ತೊಂದರೆ ಬಂದರೂ ಸಿಂಗಾರೆವ್ವನ ಕೈಬಳೆಗೇ ಕೈ ಹಾಕಬೇಕು. ಇಂಥಾ

ದೊಡ್ಡ ಅರಮನೆ ಅಷ್ಟೊಂದು ದೇಸಗತಿ ಜಮೀನಿದ್ದೂ ಇಂಥ ಗತಿ ಬಂದಿತ್ತೆಂದರೆ ನಂಬಲಿಕ್ಕಾದೀತ? ಆದರೆ ಪರಿಸ್ಥಿತಿ ಹಾಗಿತ್ತಪ್ಪ, ಪರಮಶೆಟ್ಟಿ ಹಾಗೆ ಹೇಳಿದೊಡನೆ ದೇಸಾಯಿ ಅಂತಸ್ತಿನ ಕೋಣೆಗೆ ಹೊರಟ. ನಾನು ಹಿಂದಿನಿಂದ ಹೋದೆ.

ಸಿಂಗಾರೆವ್ವ ಈ ದಿನವಷ್ಟೆ, ಅದೂ ಸ್ವಲ್ಪ ಗೆಲುವಾಗಿದ್ದಳು. ತಾಯಿಯ ಪಕ್ಕದಲ್ಲಿ ಕೂತು ಅದೇನೋ ಹೇಳಿತ್ತಿದ್ದಳು. ದೇಸಾಯಿಯನ್ನು ನೋಡಿದೊಡನೆ ಸುಮ್ಮನಾದಳು. ದೇಸಾಯಿ ಕಂಬದ ಬಳಿ ನಿಂತ. ಗಂಡ ಹೆಂಡತಿಯ ಖಾಸಗೀ ಮಾತಿನಲ್ಲಿ ತಾನ್ಯಾಕಿರಬೇಕೆಂದು ಗೌಡ್ತಿ ಎದ್ದು ಬಂದಳು. ಹೊರಗೆ ಬಾಗಿಲ ಮರೆಯಲ್ಲಿ ನಾನು ನಿಂತಿರುವುದನ್ನು ನೋಡಿ, ನಿಲ್ಲಬಹುದೇನೋ ಎನ್ನಿಸಿ ತಾನೂ ನನ್ನೊಂದಿಗೆ ನಿಂತಳು. ಈಗ ದೇಸಾಯಿ ಹೋಗಿ ಗಡಂಚಿಯ ಮೇಲೆ ಕೂತ. ಶೆಟ್ಟಿಯ ಮಾತಿನಿಂದ ಅವನ ಮುಖ ಕಳೆಗೆಟ್ಟಿತು. ಒಳಗೊಳಗೇ ಪಶ್ಚಾತ್ತಾಪಪಡುತ್ತಿದ್ದ. ಮತ್ತು ಅದನ್ನು ಇನ್ನೊಬ್ಬರು ನೋಡುವುದನ್ನು ಇಷ್ಟಪಡುತ್ತಿರಲಿಲ್ಲ. ತುಟಿ, ಒಣಗಿ, ಮುಖ ಹೀರಿದವನಾಗಿ ನೋಡಿದವರಿಗೆ ಅಯ್ಯೋ ಪಾಪ ಎನ್ನಿಸುವಂತಿದ್ದ. ಸಿಂಗಾರೆವ್ವ ಇವನನ್ನೇ ಖೇದದಿಂದ ನೋಡುತ್ತಿದ್ದಳು. ಅವಳು ತನ್ನನ್ನು ನೋಡುತ್ತಿದ್ದುದು ಗಮನಕ್ಕೆ ಬಂದೊಡನೆ ಎದ್ದು ಬಂದು ಕಿಡಕಿಯ ಬಳಿ ನಿಂತ. ಹೊರಗೆ ಹುಣಿಸೇಮಳೆ ನೋಡುತ್ತಿದ್ದಾನೆಂದು ಹೇಳಲಾರೆ. ಹೇಳಿದ -

"ದೊರೆಸಾನೀ, ಬಳಿ ಅದಾವಲ್ಲ, ಒಂದೆರಡು ದಿನ ಕೊಟ್ಟಿರಿ" ಈ ಮಾತು ಕೇಳಿದೊಡನೆ ದೊರೆಸಾನಿಯ ಕಣ್ಣೊಳಗೆ ಸಂಶಯ, ಭಯ ಎರಡೂ ಮೂಡಿದೆವು. ಅಗಲವಾಗಿ ಕಣ್ಣು ತೆರೆದು ದೇಸಾಯಿಯನ್ನು ನೋಡುತ್ತ,

"ಯಾವ ಬಳಿ?" ಅಂದಳು. ದೇಸಾಯಿ ನಿಂತ ಭಂಗಿ, ಮತ್ತು ಅದೇ ತಣ್ಣಗಿನ ದನಿ ಬದಲಿಸದೆ,

"ಚಿನ್ನದ ಬಳಿ, ನಿಮ್ಮ ಕೈಯಾಗದಾವಲ್ಲ ಅವು" ಅಂದ. ಅವಳ ಸಂಶಯ ನಿಜವಾಗಿ, ಭಯ ಮಾತ್ರ ಅವಳ ಮುಖದಲ್ಲಿತ್ತು.

"ಮದೀವೀ ಗುರುತಿಗಿ ಅವೆರಡಾದರೂ ನನ್ನ ಕೈಯಾಗಿರಲಿ ಅಂದರ, ಅದಕ್ಕೂ ಗಂಟ ಬಿದ್ದಿರೇನ?"

"ಒಂದೆರಡ ದಿನ ಕೊಟ್ಟಿರಿ. ಅಮ್ಯಾಲ ಬಿಡಿಸಿಕೊಂಡ ಬಂದ ಕೊಡೋಣ"

"ಬರತಾವಂತೇನು?"

"ಅವ್ವನ ದಿನಕಾರ್ಯ ಮಾಡಂತೀರೋ ಬ್ಯಾಡಂತಿರೋ?"

ಕೊನೆಯ ಶಬ್ದ ಕೇಳಿದಾಗ ನಿರಾಸೆ ಮತ್ತು ದುಃಖದಿಂದ ಅವನ ದನಿ ನಡುಗಿದ್ದನ್ನು ಗಮನಿಸಿದೆ. ಅವಳ ಉತ್ತರಕ್ಕೂ ಕಾಯದೆ ಹಾಗೇ ಕೆಳಕ್ಕೆ ನಡೆದ. ನಾವಿಬ್ಬರೂ ಇಲ್ಲಿ ನಿಂತಿದ್ದೆವಲ್ಲ. ನಮ್ಮನ್ನು ನೋಡಿದರೂ ನೋಡದವನಂತೆ ದಾಟಿ ಹೋದ. ನಾವಿಲ್ಲಿ ನಿಂತಿದ್ದಕ್ಕೆ, ಅವರ ಮಾತು ಕದ್ದು ಕೇಳಿದ್ದಕ್ಕೆ ಕೆಡುಕೆನಿಸಿತು. ಯಾಕೆಂದರೆ ದೇಸಾಯಿಗೆ ಇದರಿಂದ ಅಸಮಾಧಾನವಾಗುವುದು ಸಹಜವಾಗಿತ್ತು.

ನಾವು ಒಳಗೆ ಹೋದಾಗ ಸಿಂಗಾರೆವ್ವನ ಕಣ್ಣಂಚಿನಲ್ಲಿ ನೀರು ತುಂಬಿತ್ತು. ನಮ್ಮನ್ನು ನೋಡಿದ ಮೇಲೂ ಅವಳ ಮುಖಚರ್ಯೆ ಬದಲಾಗಲಿಲ್ಲ. ಕಣ್ಣು ತೆರೆದಿದ್ದಳಾದರೂ ಏನನ್ನಾದರೂ ನೋಡುತ್ತಿದ್ದಾಳೆಂದು ಅನ್ನಿಸಲಿಲ್ಲ. ಹಿಂದುರುಗಿ ನನ್ನ ಅಂತರಂಗವನ್ನೇ ನೋಡಿ ಕೊಳ್ಳುತ್ತಿದ್ದಳೋ ಏನೋ, ತುಸು ಹೊತ್ತು ಹೀಗೆ ಕೂತಿದ್ದು ಮೆಲ್ಲಗೆ ತನ್ನ ಕೈಬಳೆ ಕಳಚ ತೊಡಗಿದಳು. ಮುದುಕಿ ಮಳಮಳ ನನ್ನ ಮುಖವನ್ನು ಒಮ್ಮೆ, ಮಗಳ ಮುಖವನ್ನೊಮ್ಮೆ ನೋಡುತ್ತಿದ್ದಳು. ನಾನು ಏನೂ ಹೇಳಲಿಲ್ಲವಾದ್ದರಿಂದ ಮುಂದಾಗಿ ಬಂದು ಮಗಳ ಕೈ ಹಿಡಿದು "ಹುಚ್ಚೀ ಹಾಂಗ ಮಾಡಬ್ಯಾಡ. ಹೆಂಗೂ ಬಿಟ್ಟ ಹೋಗ್ಯಾನಲ್ಲ, ಹೋಗಲಿ ಸುಮ್ಮನಿರು" ಎಂದಳು. ಸ್ವಲ್ಪ ಹೊತ್ತು ಹಾಗೇ ಇದ್ದು ಮತ್ತೇನು ತಿಳಿಯಿತೋ ದೊರೆಸಾನಿ ಕೈಬಳೆ ಕಳಚಿದಳು. ಅತ್ತೆಯ ದಿನಕಾರ್ಯದ ಮಾತು ಅವಳ ಅಂತಃಕರಣ ಕಲಕಿತ್ತು. ಅವಳ ಕಣ್ಣಲ್ಲಿ ನೀರಾಡಿದ್ದು ಗಂಡನ ಮಾತಿನಿಂದಾದ ಬೇಸರಕ್ಕಲ್ಲ. ಅತ್ತೆಯ ದಿನಕಾರ್ಯದ ನಿರ್ಗತಿಕತನಕ್ಕೆ ಎಂದು ನನಗೆ

ಅನ್ನಿಸಿತು. ಮೆಲ್ಲಗೆ ನನ್ನ ಕೈಯಲ್ಲಿ ಬಳೆಯಿಟ್ಟು "ಕೆಳಗ ಕುಂತಾನೇನೋ ಹೋಗಿ ಕೊಟ್ಟ ಬಾ" ಎಂದಳು. ನಾನು ಮಾತಾಡಲಿಲ್ಲ. ಗೌಡ್ತಿ ಒಳಗೊಳಗೇ ಹಳಹಳಿಸುತ್ತಿದ್ದಳು. ನಾನು ಬಳೆ ತಗೊಂಡು ಹೊರಟೆ.

ಆದರೆ ಕೆಳಗಿಳಿದು ಬಂದಾಗ ದೇಸಾಯಿ ಇರಲಿಲ್ಲ. ತಿರುಗಿ ಹೋಗಿ ಬಳೆಗಳನ್ನು ಸಿಂಗಾರೆವ್ವನಿಗೇ ಕೊಟ್ಟೆ. ಅವಳು ಪುನಃ ಕೈಗೆ ಏರಿಸಲೇ ಇಲ್ಲ. ಅಲ್ಲೇ ಹಾಸಿಗೆಯ ಕೆಳಗೆ ಇಟ್ಟುಕೊಂಡಳು. ಈಗ ಗೌಡ್ತಿಗೆ ಹಾಯೆನಿಸಿ ದನಿ ಬಂತು.

"ಅಲ್ಲಃ ಮಗಳ, ಇರೋವ ಅವೆರಡ ಬಳಿ, ಅವನ್ನೂ ಕೊಟ್ಟೇನ ಮಾಡ್ತಿ?" ದೊರೆಸಾನಿ ಮಾತಾಡಲಿಲ್ಲ. ಮುದುಕಿ ತಂತಾನೇ ಗೊಣಗುಟ್ಟತೊಡಗಿದಳು.

"ನಿನ್ನನ್ನ ಹಡದಾಂವ ಬರಲಿ ತಡಿ. ಕರುಳಂದ ಮ್ಯಾಲ ಹೊತ್ತಿಗಾಗದಿದ್ದರ ಹೆಂಗ ಹೇಳು... ಆದರ ಅವ ಚಂಡಾಲ ಭಾಡ್ಯಾ. ಯಾಕ ಕೊಟ್ಟಾನ ಹೇಳು. ಬೇಕಂದರ ಬಳೀ ಕೊಡು, ಭೇಶ್ ಮಗಳ ಭೇಶ್ ಅಂತಾನ. ಬಳೀ ಏನು, ಅರಮನಿ ಕೊಟ್ಟರ ಬ್ಯಾಡಂತಾನೇನು? ಏನ ಮಾಡಿ ಈ ಅರಮನಿ ನುಂಗಿ ನೀರ ಕುಡೀಲಿ ಅಂತ ಕುಂತಾನ. ಆದರೂ ಭಾಳ ದಿನದಿಂದ ನಿನ್ನ ಬಳೀ ಮ್ಯಾಲ ಕಣ್ಣಿಟ್ಟಾನಂದ ಮ್ಯಾಲ ಈಗ ಬೇಕಂದರ ರೊಕ್ಕಾ ಕೊಟ್ಟಾದರೂ ಬಳೀ ತಗೊಂತಾನೋ ಏನೋವಾ" ಇತ್ಯಾದಿ.

ಮಾರನೇ ದಿನ ಹೇಳಿ ಕಳಿಸಿದ ಹಾಗೆ ದಿನಕಾರ್ಯಕ್ಕೆ ಗೌಡ ಬಂದ. ಮನೆಯಲ್ಲಿ ಯಾವ ವ್ಯವಸ್ಥೆಯೂ ಆಗಿರಲಿಲ್ಲ. ದೇಸಾಯಿಗೆ ನಾನು ಇನ್ನೊಮ್ಮೆ ಬಳೆ ಕೊಡಹೋಗಿದ್ದೆ. ಆಗ ನಿರಾಕರಿಸಿದವನು ಒಟ್ಟಾರೆ ನಿರಾಸಕ್ತನಾಗಿ ಇದ್ದುಬಿಟ್ಟ. ಗೌಡ ಬಂದವನು "ಏನಃ ಇದು? ದಿನಕಾರ್ಯೆ ಬಂದೈತಿ, ಎಲ್ಲಾರೂ ಹಿಂಗ ನಿಷ್ಕಾಳಜಿಯಿಂದ ಅದಾರು!" ಅಂದ. ಮುದುಕಿ ಇಲ್ಲಿಯ ಪರಿಸ್ಥಿತಿಯನ್ನೆಲ್ಲ ವಿವರಿಸಿದಳೆಂದು ತೋರುತ್ತದೆ. ಗೌಡ ತಾನೇ ಪರಮಶೆಟ್ಟಿಯನ್ನು ನೋಡುವುದಾಗಿ ಹೇಳಿ ಹೋದ. ಅವನ ಕಣ್ಣೊಳಗೆ ಸಂಚಿನ ಮಿಂಚುಗಳು ಹರಿದಾಡುತ್ತಿದ್ದುದನ್ನು ಅಷ್ಟು ದೂರದಿಂದಲೂ ನಾನು ಗಮನಿಸಿದೆ.

ಹೋದವನು ಅಷ್ಟೇ ರಭಸದಿಂದ ಬಂದ. ಮುಖ ಬಾಡಿತ್ತು. ನಡಿಗೆಯಲ್ಲಿ ನಿರುತ್ಸಾಹವಿತ್ತು. ಕಾಲು ತಡವರಿಸುತ್ತಿದ್ದವು. ತಲೆಯ ಮೇಲಿನ ಕೆಂಪು ರುಂಬಾಲನ್ನು ಬಗಲಲ್ಲಿ ಹಿಡಿದುಕೊಂಡಿದ್ದ. ಅವಸರದಲ್ಲಿ ಬರುವಾಗ ಸಡಿಲಾದ ಧೋತ್ರ ಬಲಗಾಲಲ್ಲಿ ಎರಡು ಬಾಡಿ ಸಿಕ್ಕಿಕೊಂಡಿತು. ಕೈಯಲ್ಲಿ ಅದರ ಚುಂಗು ಹಿಡಿದುಕೊಂಡು ದಡಬಡ ಜಿನೆ ಏರಿದ. ನಾನೂ ಬೆನ್ನು ಹತ್ತಿಹೋದೆ. ಗೌಡ್ತಿ ಮಲಗಿದ್ದಳು. ಪಕ್ಕದಲ್ಲಿ ಸಿಂಗಾರೆವ್ವ ಕೂತಿದ್ದಳು. ಗೌಡನ್ನ ಕಂಡು ಇಬ್ಬರೂ ಎದ್ದರು. ಗೌಡ ಹೇಳಬಾರದ ಕಳವಳದಿಂದ ಗಡಂಚೆಯ ಮೇಲೆ ಕೂತು "ಸಿಂಗಾರೆವ್ವ" ಅಂದ. ಮಗಳು ಸುಮ್ಮನೇ ಇದ್ದಳು.

"ನಿಮ್ಮ ಮನ್ಯಾಗೊಬ್ಬ ಆಳ ಇದ್ದಾನಲ್ಲಾ, ಅವ ಮರ್ಯಾ ಅಲ್ಲ?"

ತಕ್ಷಣ ನನಗೆ ಗೌಡ ಯಾಕೆ ಓಡಿಬಂದ ಎಂದು, ಅವನ ಮನಸ್ಸಿನಲ್ಲಿ ಯಾಕೆ ಈ ಪರಿ ಆತಂಕವಾಗಿದೆಯೆಂದು ಹೊಳೆಯಿತು. ಸಿಂಗಾರೆವ್ವನಿಗಿನ್ನೂ ಅವನ ಒಳಗುದಿ ತಿಳಿದಿರಲಿಲ್ಲ. ಸಹಜವಾಗಿಯೇ "ಹೌಂದು" ಎಂದಳು.

"ಎಂದ ಬಂದಾನಿಲ್ಲಿಗೆ?"

"ಬಂದಾಗಲೇ ಆರೆಂಟ ತಿಂಗಳ ಮ್ಯಾಲಾಯ್ತು."

"ಅಂತೂ ನನ್ನ ವೈರೀಗಿ ಅನ್ನಾಹಾಕಿ ಬೆಳಸಾಕ ಹತ್ತೀದಿ ಅನ್ನು!"

- ಎಂದು ಇರಿಯುವ ಕಣ್ಣುಗಳಿಂದ ಮಗಳ ಕಡೆ ನೋಡಿದ. ಆದ ಅನಾಹುತ ಏನೆಂದು ಸಿಂಗಾರೆವ್ವನಿಗೆ ಈಗ ಹೊಳೆಯಿತು. ಮಾತಾಡಬೇಕೆಂದು ಅವಳು ಬಾಯಿ ತೆರೆಯುವಷ್ಟರಲ್ಲಿ ನಾನು ಸುಮ್ಮನಿರಲಿಲ್ಲ.

"ಅವನ್ನ ಕರಕೊಂಬಂದವರು ನಾವಲ್ಲ. ದೇಸಾಯರ ಗೆಳಿತಾನ ಮಾಡಿಕೊಂಡ ಹೆಂಗೋ ಅರಮನಿ ಹೊಕ್ಕಾನ. ಅವನ್ನ ಹೊರಗ್ಹಾಕ್ರಿ - ಅಂತ ಹೇಳಿ ಹೇಳಿ ಸಾಕಾಗಿ ಹೋಯ್ತು ನಮಗ. ದೇಸಾಯರು ನಮ್ಮ ಮಾತಿಗಿ ಲಕ್ಷ ಕೊಡಃವಲ್ಲರು. ನಿಮ್ಮ ಮಗನ್ನ ಕೆಡಸ್ತಾನಂತ ಹಿರೀ ದೊರಿಸಾನಿಗೂ ಆಕಿ ಬದಿಕಿದ್ದಾಗ ಹೇಳಿದೀವಿ. ಅವರ ಮಾತಿಗೂ ಕಿವಿ ಕೊಡಲಿಲ್ಲ. ಅವ ಏನ ಮಾಯೇ ಮಾಡಿದಾನೋ ಅವನ ಬಿಟ್ಟ ಇರಾಕ ಆಗೋದಃ ಇಲ್ಲ ಅಂತಾರ. ಹೆಂಗೂ ಕೇಳಿಕೇಳಿದಾಗೆಲ್ಲ ಕುಡ್ಯಾಕ ಕೊಡತಾನ. ಮಾತಿಗೊಮ್ಮೆ ಸರಕಾರಂತ್ಹೇಳಿ ಸಲಾಮ ಹೊಡೀತಾನ. ಅವನ್ನ ಬಿಟ್ಟ ದೇಸಾಯರು ಹೆಂಗ ಇದ್ದಾರ ಹೇಳ್ರಿ? ನೀವಾದರೂ ದೇಸಾಯರಿಗೆ ಬುದ್ಧೀ ಹೇಳಿ ಹೊರಗ್ಹಾಕ್ರಿ."

ಎಂದೆ. ಗೌಡ ನನ್ನ ಮಾತು ನಂಬಿದ. ಮಗಳ ಬಗೆಗಿನ ಅವನ ಮುಖದ ತಿರಸ್ಕಾರ ಮಾಯವಾಯ್ತು. ಹುಬ್ಬು ಗಂಟುಹಾಕಿ ಹಣೆಯ ಮೇಲೆ ಚಿಂತೆಯ ಗೆರ ಮೂಡಿಸಿಕೊಂಡ. ನಾನೇ ಮತ್ತೆ ಮುಂದುವರಿಸಿದೆ.

"ಅವ ನೋಡಿದರ ಹೊಲೆಯ, ನಡುಮನೀತನಕ ಅವನ್ನ ಅಡ್ಡಾಡಾಕ ಬಿಡೋದೇನು; ಕುಡಿದಾಗ ಅವನ ಕೈಲೆ ಕಾಲ ತಿಕ್ಕಿಸಿಕೊಳ್ಳೋದೇನು! ಒಮ್ಮೆ ಇದನ್ನೆಲ್ಲ ನೋಡಿ ಪರಮಶೆಟ್ಟರು "ಇದಲ್ಲರೀ ದೇಸಾಯರಃ" ಅಂತ ಬುದ್ಧೀ ಹೇಳಿದರು. ಇವರೇನ ಕೇಳಲಿಲ್ಲ. ನೀವು ಬಂದಾಗ ಹೇಳೂಣಂತ ಸುಮ್ಮನಿದ್ದಿವಿ. ನಾವಂತೂ ಇವ ನಮ್ಮೂರಿನವ ಅಂತ ಸುದ್ದಾ ದೇಸಾಯಿಗೆ ಹೇಳಿಲ್ಲ."

ಗೌಡ ಏನೂ ಹೇಳದಾದ. ನಮ್ಮ ಮೂವರಲ್ಲಿ ಯಾರೊಬ್ಬರ ಕಡೆಗೂ ನೋಡಲಿಲ್ಲ. ಹೂ ಹೂ ಎಂದು ಒಂದೆರಡು ಬಾರಿ ಹೂಂಕರಿಸಿದ ಅಷ್ಟೆ. ಎದ್ದು ನಿಂತು ಬಗಲಲ್ಲಿಂದ ರುಂಬಾಲು ಬಿಡಿಸಿ ಬಕ್ಕತಲೆಗೆ ಸುತ್ತಿಕೊಳ್ಳುತ್ತ,

"ನೋಡು ಈಗಿಂದೀಗ ಮರ್ಯಾನ್ನ ಹೊರಗ ಹಾಕಿದರ ನಾವು ದಿನಕಾರ್ಯೇಕ ಇರತೀವು. ಇಲ್ಲದಿದ್ದರೆ ನಾವು ನಮ್ಮೂರಿಗಿ ಹೋಗತೀವಂತ ದೇಸಾಯರಿಗಿ ಹೇಳವಾ."

- ಎಂದು ಹೇಳಿ ದಡಬಡ ಜಿನಿಯಿಳಿದು ಮಾಯವಾದ. ಈವರೆಗಿನ ಮಾತುಗಳಿಂದ ಹೌಹಾರಿದ್ದ ನಿಂಗವ್ವಗೌಡ್ತಿ ಎರಡೂ ಕೈ ಎದೆಯ ಮ್ಯಾಲಿಟ್ಟುಕೊಂಡು "ಅಯ್ ನನ ಶಿವನ! ನನ್ನ ಹಾಟ್ಯಾ ಮರ್ಯಾ ಇಲ್ಲಿ ಬಂದಾನು? ಸತ್ತಾನಂತಿದ್ದರಲ್ಲ. ನನ್ನ ಕಣ್ಣಿಗೂ ಬಿದ್ದಿಲ್ಲಲ್ಲಃ ಶೀನಿಂಗೀ!" ಎಂದಳು. ನಾನು ಸಿಂಗಾರೆವ್ವನ ಮುಖ ನೋಡುತ್ತಿದ್ದೆ. ಅವಳ ಕಣ್ಣುಗಳಲ್ಲಾಗಲೇ ಹಳೇ ಬೆಂಕಿ ಹತ್ತಿಕೊಂಡಿತ್ತು. ಒಳಗೊಳಗೇ ತೃಪ್ತಿಯ ನಗೆ ನಗುತ್ತಿದ್ದಳೆಂದು ತೋರುತ್ತದೆ; ತುಟಿಯಂಚಿನಲ್ಲಿ ಅದು ಸ್ಪಷ್ಟವಾಗಿ ಕಾಣುತ್ತಿತ್ತು. ನಗಲಿ ಬಿಡಲಿ ಅವಳ ಮುಖದ ಸೊಗಸು ಮಾಸಿತ್ತು. ದಡ್ಡ ದೊರೆಸಾನಿ ಎಂದುಕೊಂಡೆ. ಮುದುಕಿ ನನ್ನತ್ತ ನೋಡಿ ಏನೂ ತಿಳಿಯದೆ ಮತ್ತೆ ಮಗಳ ಮುಖವನ್ನೇ ನೋಡತೊಡಗಿದಳು. ದೊರೆಸಾನಿ ನಮ್ಮಿಬ್ಬರ ದೃಷ್ಟಿಗಳನ್ನ ನಿವಾರಿಸಿ ಕಿಡಕಿಗೆ ಹೋಗಿ ಹುಣೀಸೆಮೆಳೆ ನೋಡುತ್ತ ನಿಂತಳು.

ರಾತ್ರಿ ಗೌಡ ಮತ್ತು ದೇಸಾಯಿ ಇಬ್ಬರೂ ಜೊತೆಯಲ್ಲೇ ಮನೆಗೆ ಬಂದರು. ಪಡಸಾಲೆಯಲ್ಲಿ ದೀಪದ ಅಕ್ಕಪಕ್ಕ ಕೂತರು. ಒಬ್ಬರ ಮುಖದಲ್ಲೂ ಗೆಲುವಿರಲಿಲ್ಲ. ದೇಸಾಯಿ ಕುಡಿದಿದ್ದನೆಂದು ಅವನ ತೇಲುಗಣ್ಣಿನಿಂದಲೇ ತಿಳಿಯುತ್ತಿತ್ತು. ಗೌಡನ ಮುಖದಲ್ಲಿ ಭಯ ಇತ್ತು. ಏನೋ ಭಯಂಕರವಾದುದನ್ನು ಕಂಡವರಂತೆ ಕಣ್ಣುಗಳನ್ನು ಅಗಲವಾಗಿ ತೆಗೆದು ಮಾತಾಡುತ್ತಿದ್ದ. ನಾನು ಊಟಕ್ಕೆ ಕರೆಯ ಹೋದವಳು ಕಂಬದ ಮರೆಯಲ್ಲಿ ನಿಂತು ಅವರ ಮಾತು ಕೇಳಿಸಿಕೊಂಡೆ. ಗೌಡ ಪ್ರತಿಯೊಂದು ಮಾತನ್ನೂ ಬಹಳ ಅವಸರದಿಂದ, ಇದು ಅಗ್ಗದೀ ಜರೂರೆಂಬಂತೆ ಮಾತಾಡುತ್ತಿದ್ದ. ಮಾತಿಗೊಮ್ಮೆ ಮರ್ಯಾ ಎನ್ನುತ್ತಿದ್ದ. ಮತ್ತು ಮರ್ಯಾ ಎಂದಾಗೊಮ್ಮೆ ಕಳ್ಳ ಸೂಳೀಮಗ, ಬೋಳೀಮಗ, ಹಾದರಗಿತ್ತೀ ಮಗ ಎಂದು ಬೈಗಳ ಸೇರಿಸುತ್ತಿದ್ದ.

“ಖರೆ ಹೇಳತೇನ್ರಿ ದೇಸಾಯರಃ. ಮರ್ಯಾ ಭಾಳ ಖೊಟ್ಟಿ ಸೂಳೀಮಗ. ಆ ಬೋಳೀಮಗ ಸಣ್ಣಂದಿರತ ನನ್ನ ಮನ್ಯಾಗಃ ಇದ್ದ. ನನ್ನ ಅನ್ನ ತಿಂದಕೊಂಡ ಬಿದ್ದಿದ್ದ. ಸ್ವಂತ ಅವ್ವನ್ನ ಖೂನೀ ಮಾಡಿ ಫರಾರಿ ಆದ, ಅಂದರ ಇದರ ಮ್ಯಾಲ ನೀವಃ ತಿಳಕೊಳ್ರಿ. ನಾ ಇದನ್ನ ಹೇಳತಿರಲಿಲ್ಲ. ಅದರ ನೀವು ಕಾಣಾ ಕಾಣಾ ಹಾಳಾಗೋವಾಗ ನಾ ಬಾಯಿ ಮುಚ್ಚಿಕೊಂಡ ಕುಂದರಾಕಾದೀತ? ಅವನ ಮ್ಯಾಲ ಪೊಲೀಸ್ ವಾರಂಟ್ ಐತಿ. ಆಮ್ಯಾಲ ಆ ಸೂಳೀಮಗನ ತಾಪತ್ರಯ ನಿಮಗಂಟೀತ ಮತ್ತ. ಮೊದಲವನ ಹೊರಗ್ಹಾಕ್ರಿ.”

“ಅವ ನಿಮ್ಮ ಊರಾವಂತ ದೊರೆಸಾನಿಯವರು, ಶೀನಿಂಗವ್ವ ಯಾಕ ಹೇಳಲಿಲ್ಲ?”

“ಅವ ಫರಾರಿ ಆದಮ್ಯಾಲ ಸತ್ತಹೋದನಂತ ಎಲ್ಲಾರೂ ನಂಬ್ಯಾರರೀ, ಹಿಂಗಾಗಿ ಅವರಿಗಿ ಅವನ ಗುರುತಃ ಹತ್ತಿಲ್ಲ. ಗುರುತಾದರ ಅವರೂ ಅಂಜಿ ನಡಗತಾರ. ಹೇಳಬ್ಯಾಡ್ರಿ ಮತ್ತ. ಬೇಕಾದರ ಅವನ್ನ ಹೊರಗ ಹಾಕಿ ಅಮ್ಯಾಲ ಹೇಳ್ರಿ.”

ಇಣಿಕಿ ನೋಡಿದೆ: ಮಾವನ ಮಾತಿಗೆ ದೇಸಾಯಿ ಹಾ ಹೂ ಎನ್ನುತ್ತಿದ್ದವನು ಆಳದಲ್ಲಿ ಬಹಳ ಖೇದಗೊಂಡಿದ್ದಂತೆ ಕಂಡಿತು. ಗೌಡ ಮರೆಪ್ಪನ ದುಷ್ಟತನದ ಬಗ್ಗೆ ಇನ್ನಷ್ಟು ಅವಸರದಿಂದ ಮಾತಾಡಿದ. ನಾನು ಕಾಣಿಸಿಕೊಂಡು ಊಟಕ್ಕೆ ಕರೆದೆ. ದೇಸಾಯಿ ನನ್ನ ಕಡೆ ಸಂಶಯದ ನೋಟವೊಂದನ್ನು ಬೀರಿ,

“ಶೀನಿಂಗವ್ವಾ, ನಮ್ಮ ಮನ್ಯಾಗ ಮರ್ಯಾ ಇದ್ದಾನಲ್ಲಾ, ಅವ ನಿಮ್ಮೂರಾವಂತ ನಿಮಗೆ ಗೊತ್ತೈತೋ ಇಲ್ಲೋ?”

“ಇಲ್ಲರಿ, ನಮ್ಮ ಊರಾಗಿದ್ದ ಮರ್ಯಾ ಇವ ಆಗಿರಾಕಿಲ್ಲರಿ” ಎಂದೊಂದು ಸುಳ್ಳು ಬಿಟ್ಟೆ. ದೇಸಾಯಿ ಏನೋ ತೀರ್ಮಾನ ತೆಗೆದುಕೊಂಡವರಂತೆ ಕತ್ತು ಹಾಕುತ್ತ “ಬರಲಿ ಬೋಳೀಮಗ. ಹೊರಗ ಹಾಕಬೇಕಂದರ ಹರ್ಯಾಗಿಂದ ನಾಪತ್ತೆ ಆಗ್ಯಾನಲ್ಲರಿ. ನಿಮ್ಮನ್ನ ನೋಡಿ ಎಲ್ಲಾ ಗೊತ್ತಾದೀತಂತ ಓಡಿಹೋದ್ನೋ ಏನೋ. ಹೋದರ ಚೆಲೋನ ಆತು. ನೀವು ಹೋದ ಮ್ಯಾಲ ಬಂದರ ಸೂಳೀಮಗನ್ನ ಕಾಲ್ಮರೀಲೆ ಹೊಡೆದ ಹೊರಗ ಹಾಕತೀನಿ” ಎಂದು ಗುಡುಗಿದ. ಗೌಡನಿಗೆ ಆನಂದವಾಗಿ ಮುಖದಲ್ಲಿದ್ದ ಭಯ ಮಾಯವಾಯ್ತು. ಹೆಮ್ಮೆಯಿಂದ ಅಳಿಯನ ಕಡೆ ನೋಡುತ್ತ “ಶೀನಿಂಗವ್ವಾ, ತಾಟ ಮಾಡು ನಡಿ” ಎಂದು ನನಗೆ ಹೇಳಿದ, ನಾನು ಹೋದೆ.

ಅಡಿಗೆಮನೆಯಲ್ಲಿ ಸಿಂಗಾರೆವ್ವ ಮತ್ತು ನಿಂಗವ್ವಗೌಡ್ತಿ ಇದ್ದರು. ಎಡೆ ಮಾಡುತ್ತ ಗೌಡ ದೇಸಾಯರ ನಡುವೆ ನಡೆದ ಮಾತುಕತೆಗಳನ್ನೆಲ್ಲ ಹೇಳಿದೆ. ಅಷ್ಟರಲ್ಲಿ ಹೊರಗಡೆ ಬಾಯಿ ಕೇಳಿಸಿತು. ಮೂವರು ಹೊರಗೆ ಬಂದು ಮರೆಯಲ್ಲಿ ನಿಂತೆವು. ಪರಮಶೆಟ್ಟಿ ಬಂದಿದ್ದ. ದೇಸಾಯಿ ಬಾಯಿ ಮಾಡಿ ಮಾತಾಡುತ್ತಿದ್ದ.

“ನಾನು ಸರಗಂ ದೇಸಾಯಿ, ದುಡ್ಡಿಗಾಗಿ ಸುಳ್ಳು ಹೇಳ್ತಿನೇನೋ ಶೆಟ್ಟಿ? ಇಲ್ಲೀತನಕಾ ಎಂದಾದರೂ ಸುಳ್ಳ ಹೇಳಿದೀನ?”

ಪರಮಶೆಟ್ಟಿ ಕೂತಲ್ಲೇ ಗೌಡನ ಕಡೆಗೊಮ್ಮೆ, ದೇಸಾಯಿಯ ಕಡೆಗೊಮ್ಮೆ ತಿರುಗಿ ಮಾತಿನ ಅವಕಾಶಕ್ಕಾಗಿ ಕಾಯುತ್ತಿದ್ದವನು, ದೇಸಾಯಿ ಮಾತು ಮುಗಿಸುವುದೇ ತಡ ಗೌಡನ ಕಡೆ ತಿರುಗಿ,

“ನೀವಃ ಹೇಳ್ರಿ ಗೌಡ್ರ, ಕೊಡೋ ಹಣ ಕೊಡ್ರಿ ಅಂದರೆ ಈ ಪರಿ ಸಿಟ್ಟು ಮಾಡಬೇಕೇನ್ರಿ?” ಎಂದ.

ಇಂಥ ಸಾಲದ ಮಾತು ಮಾವನ ಮುಂದೆ ಬರುವುದು ದೇಸಾಯಿಗಿಷ್ಟವಿದ್ದಂತಿರಲಿಲ್ಲ. ಆದರೆ ಅವನನ್ನೂ ಮೀರಿ ಬಂದಾಗಿತ್ತು. ಅವನ ದೇಸಗತಿ ಹಮ್ಮಿಗೆ ನೋವಾದದ್ದೇ ಇದಕ್ಕೆ ಕಾರಣವಾಗಿತ್ತು. ಮತ್ತೆ ಈಗಲೂ ಅದನ್ನು ಎತ್ತಿ ಕಾಪಾಡುವಂತೆ ಅವನ ಮಾತಿನ ಧಾಟಿಯಿತ್ತು. ಹೇಳಿದ:

“ಏ ಶೆಟ್ಟೀ, ಹೆಚ್ಚ ಮಾತಾಡಬ್ಯಾಡ. ಕೊಡೋ ಹಣದ ಬಾಬತ್ತಿನಾಗ ನಾ ನಿನಗೇನ ಹೇಳಿದೆ? ತೋಟ ಬರಕೊಡ್ತಿನಂತ ಹೇಳಲಿಲ್ಲ?”

“ಹೇಳದಿರಿ, ಅದನ್ನಾದರೂ ಬರಕೊಟ್ಟೀರೇನು? ಗೋಕಾವಿಗಿ ಇಂದು ಹೋಗೋಣ, ನಾಳಿ ಹೋಗೂಣಂತ ಬತೀ ದಿನಾ ನೂಕಿದಿರೇ ಹೊರತು ಇಲ್ಲೀತನಕಾ ಬರಕೊಡ್ಲಿಲ್ಲ. ನೀವಃ ಹೇಳ್ರಿ ಗೌಡ್ರ, ತ್ರಾಸ ಯಾರಿಗಿ ಬರಾಣಿಲ್ಲ? ದೇಸಾಯರ ಮನೀ ದಿನಕಾರ್ಯೆ ಬ್ಯಾರೇ ಅಲ್ಲ, ನನ್ನ ಮನೀದ ಬ್ಯಾರೇ ಅಲ್ಲ. ಆಯ್ತು ಕೊಡತೀನಿ ಹಳೀ ಸಾಲಕ್ಕ ಏನಾರ ಒಂದು ಆಧಾರ ಮಾಡಿಕೊಡ್ರಿ ಅಂದೆ, ತಪ್ಪ?”

ಗೌಡ ಮೆಲ್ಲಗೆ ಕೇಳಿದ -

“ಆಧಾರಂದರ?”

“ಹೇಳಿದೆನಲ್ಲ, ಸ್ಟಾಂಪ್ ಕಾಗದದ ಮ್ಯಾಲ ಈಗ ಅರಮನಿ ಬರಕೊಡ್ರಿ, ಮುಂದ ರಿಜಿಸ್ಟ್ರಿ ಮಾಡಸೂಣಂತ”

ಪರಮಶೆಟ್ಟಿ ಕೇಳಿದವರಲ್ಲಿ ದಯ ಬರುವ ಹಾಗೆ ದನಿ ಮಾಡಿ, ಮುಖ ಮಾಡಿ ಮಾತಾಡುತ್ತಿದ್ದ. ಗೌಡನಿಗೆ ವಿಷಯಗಳೆಲ್ಲ ತಿಳಿದುಬಿಟ್ಟವು. ಅವನ ತುಟಿ ವಕ್ರವಾಗಿ ಅದರಲ್ಲಿ ನಗೆಯೋ, ವ್ಯಂಗವೋ, ವಿಚಿತ್ರ ಆಸೆಯೋ - ಏನೆಂದು ಅರ್ಥವಾಗದ ಭಾವವೊಂದು ಮೂಡಿ ಮೂಡಿ ಮುಳುಗುತ್ತಿತ್ತು. ಕತ್ತು ಹಾಕುತ್ತ,

“ಅಂದರ ದೇಸಾಯರು ಹಣ ವಾಪಸ್ಸ ಕೊಟ್ಟಾರಂತ ನಿಮಗ ನಂಬಿಕಿ ಇಲ್ಲ ಅಂದಂಗಾಯ್ತು”

ಈ ಮಾತು ಕೇಳಿ ದೇಸಾಯಿ ಹುರುಪಾದ. “ಅದ ಹೇಳ್ರಿ, ಅದನ್ನ ಹೇಳ್ರಿ” ಎಂದು ತಾನು ನೊಂದ ಸ್ಥಳವನ್ನು ಸರಿಯಾಗಿ ಗುರುತಿಸಿದ್ದಕ್ಕೆ ಮೆಚ್ಚುಗೆಯ ನೋಟವನ್ನು ಮಾವನ ಕಡೆಗೆ ಬೀರಿದ. ಪರಮಶೆಟ್ಟಿ ಈಗ ಶಾಂತನಾಗಿ, ಗೌಡನಿಗೆ ಇನ್ನಷ್ಟು ಹತ್ತಿರ ಸುರಿದು,

ಹೌಂದರಿ, ನಂಬಿಕಿಲ್ಲದಃ ದೀಡಲಕ್ಷ ಕೊಟ್ಟೆನೇನು?”

“ಎಲ್ಲಾ ಗೊತ್ತಿದ್ದೂ ನೀವಃ ಹಿಂಗ ಮಾಡತೀರಂದರ ನಮಗೂ ಹೊಯ್ಯಾಗತೈತ್ರೆಪ. ಬಾರಾ ಊರಿನ ದೇಸಾಯರು, ಇಂಥಾ ಅರಮನಿ, ಇಷ್ಟ ಆಸ್ತಿ ಐತಿ. ನಿಮ್ಮ ದೀಡಲಕ್ಷಂದರ ಅವರಿಗಿ ದೀಡ ಲಕ್ಷ ಹುಣಸೀಪಕ್ಕ ಇದ್ದಾಂಗ ಅಲ್ಲೇನ್ರೀ? ಏನೋ ದಿನಕಾರ್ಯೆ ಬಂದೈತಂತ ಕೇಳ್ತಾರ ಕೊಡ್ರಿ. ಆಮ್ಯಾಲ ನೋಡೋಣು.”

“ಆಗೋದಿಲ್ಲರಿ”

ದೇಸಾಯಿಯ ಮುಖದ ಮೇಲೊಂದು ನಿಸ್ಸಹಾಯಕ ಕ್ರೌರ್ಯ ಮೂಡಿತು. ಒಳಗೆ ಅಸಾಧ್ಯ ಸೋಲನ್ನನುಭವಿಸುತ್ತಿದ್ದ. ಅಲ್ಲಿ ನಿಲ್ಲಬಾರದೆಂದು ಒಮ್ಮೆ ಎದ್ದು ನಿಂತ ಮತ್ತೆ ಕೂತ, ಎರಡು ಬಾರಿ ಎದೆ ಬಡಿದುಕೊಂಡು,

“ಈ ದೇಸಾಯಿ ಮ್ಯಾಲ ನಂಬಿಕ್ಕಿಲ್ಲಂತ ಹೇಳೋ ಶೆಟ್ಟಿ” ಅಂದ.

ಶೆಟ್ಟಿ ಅಷ್ಟೇ ತಣ್ಣಗಿನ ದನಿಯಲ್ಲಿ “ನಂಬಿಕಿ ಹೆಂಗಿಡಬೇಕ, ನೀವಃ ಹೇಳ್ರಿ. ಗೋಕಾವಿಗೆ ಹೋಗೂಣ ಅಂದಾಗೊಮ್ಮಿ ಕುದದಿರತೀತಿ. ಇದ್ಯಾವ ಸೀಮೀ ವ್ಯವಹಾರ ಗೌಡರ?”

“ಹೌಂದೋ, ಈ ಸಲ ಹೋಗೋಣು. ಇದೊಂದ ದಿನಕಾರ್ಯೆ ಮುಗೀಲಿ.”

ಇಷ್ಟು ಕೇಳಿದ್ದೇ ಸಿಂಗಾರೆವ್ವ ಸರ್‍ರನೇ ಒಳಗೆ ಹೋದಳು.

ಗೌಡ ಬಂದು ಊಟಕ್ಕೆ ಕೂತ. ದೇಸಾಯಿ ಬರಲೇ ಇಲ್ಲ. ನಾನು ಮತ್ತೆ ಕರೆಯಬಂದೆ. ಕಂಬಳಿ ಹೊದ್ದುಕೊಂಡು ಮಲಗಿಬಿಟ್ಟಿದ್ದ. ಹೋಗಿ ಸಿಂಗಾರೆವ್ವನಿಗೆ ಹೇಳಿದೆ. ಅವಳು ಸೀದಾ ದೇಸಾಯಿ ಮಲಗಿದ್ದಲಿಗೆ ಬಂದು ಕಂಬಳಿ ತೆಗೆದು “ಊಟಕ್ಕೇಳ್ರಿ” ಎಂದಳು. ದೇಸಾಯಿ ಎದ್ದು ಕೂತ. ಹೆಂಡತಿಯ ಕಡೆ ನೋಡಲೇ ಇಲ್ಲ. “ಹಸಿವಿಲ್ಲ” ಅಂದ. ಅವನ ಮುಖ ಅವಮಾನದಿಂದ ಕರಾಳವಾಗಿತ್ತು. ಎದ್ದು ಬರುತ್ತಾನೆಂದು ತುಸು ಹೊತ್ತು ಕಾದಳು. ಆ ಲಕ್ಷಣ ಕಾಣಲಿಲ್ಲ. ಹೋಗಿ ಕೈ ಹಿಡಿದು “ಏಳ್ರೀ, ಊಟಾ ಮಾಡೇಳ್ರಿ” ಎಂದಳು. ಸುಮ್ಮನೆ ಬಂದ.

* * *

## ಅಧ್ಯಾಯ - ೧೫

ಆ ದಿನ ಇಷ್ಟೊಂದು ಅನಿರೀಕ್ಷಿತಗಳು ಘಟಿಸಿದ್ದವಲ್ಲ, ಎಷ್ಟೆಂದರೆ ನಾನು ಮತ್ತು ಸಿಂಗಾರೆವ್ವ ಮಾತಾಡಿಕೊಳ್ಳುವುದು ಜರೂರಾಗಿತ್ತು. ಮಲಗಿದಾಗ ಮಾತಾಡಿಕೊಳ್ಳೋಣವೆಂದರೆ ನಮ್ಮ ನಡುವೆ ನಿಂಗವ್ವ ಗೌಡ್ತಿಯಿದ್ದಳು. ಆಕೆಗೆ ತಿಳಿಯಬಾರದ ಸಂಗತಿಗಳೆಷ್ಟೋ ನಮ್ಮ ಒಳಗಿದ್ದವು. ಕೆಳಗೆ ಗೌಡ ಮತ್ತು ದೇಸಾಯಿ ಮಲಗಿದ್ದುದರಿಂದ ಅಲ್ಲಿಗೆ ಹೋಗುವಂತಿರಲಿಲ್ಲ. ಕೊನೆಗೆ ಬೈಲಕಡೆ ಹೋಗುವ ನೆಪ ಮಾಡಿಕೊಂಡು ಹೊರಟು ನಿಂತರೆ ನಿಂಗವ್ವ ಗೌಡ್ತಿ ತಾನೂ ಬರುತ್ತೇನೆಂದು ಹೇಳಿದಳು. ಆಯ್ತು ಉಪಾಯವಿಲ್ಲವೆಂದು ಮಲಗಿದೆವು.

ದೇಸಾಯಿ ಶೆಟ್ಟಿಗೆ ಕೊಡುತ್ತೇನೆಂದದ್ದು ಅಖಂಡವಾದ ಮೂವತ್ತೆಕರೆ ತೋಟ. ಅದರಲ್ಲಿಯ ಬಾವಿ, ಮನೆ, ಗಿಡ, ಮರ ಲೆಕ್ಕಹಾಕಿದರೆ ಯಾರಾದರೂ ಮೂರ್ನಾಲ್ಕು ಲಕ್ಷದ ಬೆಲೆಯನ್ನು ದುಸರಾ ಮಾತಿಲ್ಲದೆ ಕೊಡಬೇಕು, ಅಂಥ ತೋಟ ಅದು. ಆದರೆ ಅಷ್ಟನ್ನು ಕೊಟ್ಟು ಕೊಳ್ಳಬಲ್ಲ ಶ್ರೀಮಂತ ಆ ಊರಿನಲ್ಲಿರಲಿಲ್ಲ. ಇದ್ದವನ್ನೊಬ್ಬ ಆ ಶೆಟ್ಟಿ, ಆತನ ಶ್ರೀಮಂತಿಕೆ ಕೂಡ ದೇಸಗತಿಯಿಂದಲೇ ಕೊಬ್ಬಿದ್ದು. ಅವನಿಗೆ ಈ ಬಾಬತ್ತಿನಲ್ಲಿ ಎದುರಾಳಿಗಳೇ ಇಲ್ಲದ್ದರಿಂದ ಆತ ಕೇಳಿದೇ ಕೊನೆಯ ಬೆಲೆಯಾಗುತ್ತಿತ್ತು. ಹಾಗೆಂದು ತೋಟ ಮಾರದಿರುವುದೂ ಸಾಧ್ಯವಿರಲಿಲ್ಲ. ಯಾಕೆಂದರೆ ಅಷ್ಟು ಸಾಲವಂತೂ ಆಗಿತ್ತಲ್ಲ. ಆ ಸಾಲ ತೀರಿಸುವ ದಾರಿಗಳೂ ಇರಲಿಲ್ಲ. ಮನಸ್ಸು ಮಾಡಿದ್ದರೆ ಈಗಿರುವ ಹೊಲಗಳಲ್ಲಿ ಚೆನ್ನಾಗಿ ದುಡಿದರೆ, ದುಡಿಸಿದರೆ ಒಂದೆರಡು ಬೆಳೆಗಳಲ್ಲೇ ದೇಸಾಯಿ ಶ್ರೀಮಂತನಾಗಬಹುದಿತ್ತು... ಇತ್ಯಾದಿ...

ನಮ್ಮ ಮಾತು ಕೇಳ ಕೇಳತ್ತ ನಿಂಗವ್ವ ಗೌಡ್ತಿಗೆ ನಮ್ಮ ಅಸಹಾಯಕತೆ ಸಹನವಾಗಲಿಲ್ಲವೆಂದು ತೋರುತ್ತದೆ. ಎದ್ದು ಕೂತವಳೇ “ಹಿಂಗ ಅವ ಹೊಲಾ ಮಾರಿಕೊಂಡ ಹೋಗಲಿ, ನೀ ನೋಡತಾ ಇರು. ನಾಳಿ ನಿನ್ನ ಕೈಗಿ ಸರವಿಜೋಳಿಗೆ ಕೊಡತಾನಷ್ಟ ತಿಳಕೋ” ಎಂದು ಹೇಳಿ, ಕೊಡುವ ಎಚ್ಚರ ಕೊಟ್ಟಾಯಿತೆಂದು ಮಲಗಿದಳು. ಆ ಮೇಲೆ ನಾವೇನೂ ಮಾತಾಡಲಿಲ್ಲ. ಆದರೆ ನಿದ್ದೆಯೂ ಹತ್ತಲಿಲ್ಲ. ನನ್ನ ಪಾಡಿಗೆ ನಾನು ವಿಚಾರ ಮಾಡುತ್ತ ಬಿದ್ದಿಕೊಂಡೆ.

ಮರೆಪ್ಪನನ್ನು ಹೊರಗೆ ಹಾಕಲು ಇದರಂಥ ಒಳ್ಳೇ ಅವಕಾಶ ಇನ್ನು ಮೇಲೆ ಸಿಕ್ಕಲಾರದು. ಆತ ಗೌಡನ ಭಯದಲ್ಲಿ ಮರೆಯಾಗಿದ್ದ ನಿಜ. ಆದರೆ ಇದರಲ್ಲಿ ಹೊಯ್ಕಿನ ಸಂಗತಿಗಳಿದ್ದವು. ಆತ ಭಯಗೊಂಡದ್ದು ಗೌಡನಿಗಲ್ಲ, ದೇಸಾಯಿಗೆ; ದೇಸಾಯಿಯ ಕಣ್ಣಿನಲ್ಲಿ ತಾನು ಖೂನಿಯಾಗುತ್ತೇನಲ್ಲಾ ಎಂಬುದಕ್ಕೆ. ಆದರೆ ಎಷ್ಟು ದಿನ ಹೀಗೆ ಮರೆಯಾದಾನು? ಇಂದೇ ಗೌಡ ನಂದಗಾಂವಿಗೆ ಹೋದರೆ ನಾಳೆಯೇ ಅವನು ಹಾಜರಾಗುವುದೂ ಅಷ್ಟೇ ಖಾತ್ರಿಯಿತ್ತು. ಸಜ್ಜನನಾದ ದೇಸಾಯಿಯ ಕೋಪವನ್ನು ರಿಪೇರಿ ಮಾಡುವುದು ಅವನಿಗೆ ಸುಲಭದ ಕೆಲಸ. ದೇಸಾಯರ ಆಸ್ತಿ ಬೇಕಾಬಿಟ್ಟಿಯಾಗಿ ಹೋಗುವುದು ಅವನಿಗೂ ಇಷ್ಟವಿರಲಿಲ್ಲವೆಂದು ತೋರುತ್ತದೆ, ತೋಟ ಮಾರಾಟದ

ಕಾಗದ ಕದ್ದಿದ್ದ. ಹಿಂದೆ ರಿಜಿಸ್ಟ್ರಿ ಮಾಡೋದಕ್ಕೆ ದೇಸಾಯಿ ಗೋಕಾವಿಗೆ ಹೊಂಟಾಗೆಲ್ಲ ಕುಡಿಸಿ ತಪ್ಪಿಸಿದ್ದ. ತೋಟ ಉಳಿಯುವ ಹಾಗೆ ಮಾಡುವುದಕ್ಕೆ ಈಗಿದ್ದ ಆಸೆ ಮತ್ತು ಉಪಾಯವೆಂದರೆ ಅವನೊಬ್ಬನೇ ಎಂದು ಅನ್ನಿಸಿತು. ನಾನು ಹೀಗೆ ವಿಚಾರ ಮಾಡುತ್ತಿದ್ದಾಗ ಸಿಂಗಾರೆವ್ವ ಎದ್ದು ಹೋಗಿ ಕಿಡಿಕಿಯ ಬಳಿ ನಿಂತಳು. ಬಹುಶಃ ಅಲ್ಲಿಗೇ ಬರಲಿ ಎಂದು ಸೂಚಿಸಲು ಹೀಗೆ ಮಾಡಿದಳೇನೋ ಅಂದುಕೊಂಡು ನಾನೂ ಎದ್ದು ಹೋದೆ. ಹೊರಗೆ ಬೆಳದಿಂಗಳು ಭರ್ಜರಿಯಾಗಿತ್ತು. ಹೊಲ ಬಂಡೆಗಳು ಬೆಳ್ಳಿ ನೀರಲ್ಲಿ ಅದ್ದಿ ತೆಗೆದಂತಿದ್ದವು. ಬಿಳೀ ಹಾಳೆಯ ಮೇಲೆ ಮಕ್ಕಳು ಕಪ್ಪು ಮಸಿ ಚೆಲ್ಲಿದ ಹಾಗೆ ಹುಣಿಸೇ ಮೆಳೆಯಿತ್ತು. ಅದರ ತುದಿಯಂಚಿನಲ್ಲಿ ಬೆಳ್ಳಿಯ ವಕ್ರಗೆರೆ ಮೂಡಿ, ಆಗೀಗ ಗಾಳಿ ಬೀಸಿದಾಗ ಅದು ಮೆಲ್ಲಗೆ ಅಲುಗಿ ಅದರ ಬೆನ್ನು ಹುರಿ ಬಿಗಿದಂತೆ ಕಾಣುತ್ತಿತ್ತು. ಈ ಆಟ ನೋಡುತ್ತ ನಿಂತಾಗ ಸಿಂಗಾರೆವ್ವ ನನ್ನ ಕಿವಿಯಲ್ಲಿ "ಮರ್ಯಾ ಎಲ್ಲಿ ಅದಾನ?" ಎಂದಳು. "ಗೊತ್ತಿಲ್ಲೆವ್ವ" ಎಂದು ಪಿಸುದನಿಯಲ್ಲೇ ಹೇಳಿದೆ. ಮುಂದುವರಿಸಿ "ಅವ ಇಂದ ನನ್ನ ಕಣ್ಣಿಗಿ ಬಿದ್ದಃ ಇಲ್ಲ" ಅಂದೆ. ಸಿಂಗಾರೆವ್ವ ಮಾತಾಡಲಿಲ್ಲ. ಮೆಳೆ ನೋಡುತ್ತ ನಿಂತಳು. ರೆಪ್ಪೆ ಭಾರವಾದುದರಿಂದ ನಾನು ಹೋಗಿ ಮಲಗಿಕೊಂಡೆ.

ಸಾಮಾನ್ಯವಾಗಿ ಬೆಳ್ಳಿ ಮೂಡೋ ಹೊತ್ತಿನಲ್ಲಿ ನನಗೆ ಎಚ್ಚರವಾಗುವುದೇ ಇಲ್ಲ. ಇಂದ್ಯಾಕೋ ಎಚ್ಚರವಾಯ್ತು. ಅವರಿಬ್ಬರೂ ಗಾಢ ನಿದ್ದೆಯಲ್ಲಿದ್ದರು. ನನಗೆ ಮತ್ತೆ ನಿದ್ದೆ ಬರಲಿಲ್ಲವಾದ್ದರಿಂದ ಹೊರಳಾಡುತ್ತ ಬಿದ್ದಿರುವುದಕ್ಕಿಂತ ಒಲೆಯನ್ನಾದರೂ ಹೊತ್ತಿಸೋಣವೆಂದು ಕೆಳಗಿಳಿದು ಬಂದೆ. ಹೊರಗಿನ್ನೂ ಬೆಳದಿಂಗಳಿದ್ದುದರಿಂದ ಪಡಸಾಲೆಯಲ್ಲಿ ದೀಪದ ಅಗತ್ಯವಿರಲಿಲ್ಲ. ಅದನ್ನು ದಾಟಿ ಅಡಿಗೆ ಮನೆಗೆ ಹೋಗುತ್ತಿದ್ದೆ. ಕಂಬವೊಂದು ನಡೆದಾಡಿದ ಹಾಗೆ, ನಡೆದು ಹಿರಿಯ ದೊರೆಸಾನಿಯ ಕೋಣೆಯ ಬಳಿ ನಿಂತುಕೊಂಡ ಹಾಗೆ ಅನ್ನಿಸಿತು. ಜೀವ ಜಲ್ಲೆಂದು ಮೈ ಝುಮ್ಮೆಂದು ಬೆವರಿಳಿಯಿತು. ಸತ್ತ ದೊರೆಸಾನಿ ಭೂತವಾಗಿರಬಹುದೇ ಅಂದುಕೊಂಡೆ. ಅತ್ತ ಅಂತಸ್ತಿನ ಬಾಗಿಲೂ ದೂರವಿತ್ತು. ಓಡಿಹೋದೇನೆಂದರೆ, ಅಷ್ಟರಲ್ಲಿ ಅದು ಕೈಮಾಡಿ ನನ್ನನ್ನು ಹಿಡಿದುಕೊಂಡರೆ, ಪಕ್ಕದ ಕಂಬದಲ್ಲೇ ಪ್ರತ್ಯಕ್ಷವಾದರೆ!... ಅಷ್ಟರಲ್ಲಿ ಅದು ಕೈಮಾಡಿ ನನ್ನನ್ನು ಕರೆದಂತೆನ್ನಿಸಿ ಕಿರಿಚಬೇಕೆಂದ, ದನಿ ಬರಲಿಲ್ಲ. ಅಷ್ಟರಲ್ಲಿ ಗುರುತು ಸಿಕ್ಕಂತಾಯ್ತು. ಮರೆಪ್ಪ ಮೆಲ್ಲಗೇ ಬಂದ. ದೀಪ ದೊಡ್ಡದಾಗಿಸಿದಾಗಲೇ ಅವನ ಕೈಯಲ್ಲಿ ಲಾಂಟೀನಿದೆಯೆಂದು ನನಗೆ ಗೊತ್ತಾದದ್ದು. ಮಾರಾಯ ಹಲ್ಲು ತೋರಿಸಿ ನಕ್ಕು ಮೆಲ್ಲಗೆ "ಯಾಕ ಹೆದರಿದಿ" ಅಂದ. "ಥೂ ಮೂಳಾ" ಎಂದು ಸಾವರಿಸಿಕೊಂಡು "ಎಲ್ಲಿ ಹಾಳಾಗಿ ಹೋಗಿದ್ದಿ?" ಅಂದೆ ಅಷ್ಟೇ ಮೆಲ್ಲಗೆ.

"ಮೆಲ್ಲಗ ಹೋಗು, ದೇಸಾಯರೊಬ್ಬರ್ನ ಎಬ್ಬಿಸಿ ಕರಕೊಂಬಾ" ಎಂದು ಕಿವಿಯಲ್ಲಿ ಪಿಸುಗುಟ್ಟಿದ.

"ಅಥೆಂಗಾದೀತು? ಇಂಥಾ ಕತ್ತಲ್ಯಾಗ ನಾ ಅಲ್ಲಿ ಹೋದರ ದೇಸಾಯರೇನಂದಾರು? ಗೌಡ್ರು ಅಲ್ಲೇ ಮಲಗ್ಯಾರ" ಅಂದೆ. "ಅವನವ್ವನ" ಎಂದು ಬೈದು ತುಸು ಚಿಂತೆ ಮಾಡಿದ.

"ಹಂಗಾರ ನಾ ಇಲ್ಲೇ ಕೊಟ್ಟಿಗ್ಯಾಗ ಇರತೀನಿ, ದೇಸಾಯರು ಎಚ್ಚರಾಗೂತ್ಲೂ ಇಲ್ಲಿಗಿ ಕರಕೊಂಬಾ, ಯಾರಾ, ಎಂತಾ, ಏನೂ ಹೇಳಬ್ಯಾಡ" ಎಂದು ಹೇಳಿ ಕೊಟ್ಟಿಗೆ ಹೊಕ್ಕ. ನಾನೂ ಬೆನ್ನು ಹತ್ತಿ ಹೋಗಿ,

"ಗೌಡರಾಗಲೇ ನಿಂದೆಲ್ಲಾ ಹೇಳ್ಯಾರ. ಈಗ ನೀ ಭೇಟ್ಯಾದರ ಸಾಕು, ಹೊರಗ ಹಾಕತಾರ ನೋಡಿಕೊ"

– ಎಂದೆ. ಅವನ ಮುಖ ಬಾಡಿತು. ಹಾಗೇ ಗೋಡೆಗಂಟಿ. ಕುಂತ. ಕಿಡಿಕಿಯಿಂದ ಹೊರಗೆ ನೋಡುತ್ತ ಉಗುರು ಕಚ್ಚಿಕೊಳ್ಳತೊಡಗಿದ. ಅವನ ಮುಖ ನೋಡಬೇಕೆಂದು ನಾನು, ಅವನು ತಿರುಗಲೇ ಇಲ್ಲ. ನಾನು ಬರುತ್ತಿದ್ದೆ, ಅವನು ತಿರುಗದೆಯೇ ಹೇಳಿದ:

"ದೇಸಾಯರೇನಂದರು?"

"ಬರಲಿ, ಹೊರಗ ಹಾಕತೇನ ಮಗನ್ನ ಅಂತಿದ್ದರು"

ಈಗ ಸರ್ರನೆ ತಿರುಗಿದ. ಕೆದರಿದ ತಲೆಯ, ಕುರುಚಲು ಗಡ್ಡದ, ಆತನ ಭಯಂಕರ ಕರಿಮುಖದಲ್ಲಿ ಕಣ್ಣುಗಳು ಮಾತ್ರ ಬೆಳ್ಳಗೆ ವಿಕಾರವಾಗಿ ತೆರೆದುಕೊಂಡಿದ್ದವು. ಉಕ್ಕಿ ಬರುತ್ತಿದ್ದ ಭಾವಾವೇಶವನ್ನು ತುಟಿಗಳಿಂದ ತಡೆ ಹಿಡಿದಂತೆ ಗಟ್ಟಿಯಾಗಿ ಬಾಯಿ ಮುಚ್ಚಿಕೊಂಡಿದ್ದ. ಮೂಗು ಆಗಾಗ ಹಿರಿದು ಕಿರಿದಾಗುತ್ತಿತ್ತು. ಬಹಳ ಹೊತ್ತು ನನ್ನನ್ನು ಇರಿಯುವ ಹಾಗೆ ನೋಡಿ, ವಿಲಕ್ಷಣವಾದ ಆದರೂ ಸಣ್ಣ ದನಿಯಲ್ಲಿ "ಅವನವ್ವನ" ಎಂದು ಒದರಿದ. ಸಾಮಾನ್ಯವಾಗಿ ಅವನ ಮುಖದಲ್ಲಿರುತ್ತಿದ್ದ ಬಿಗಿ ಮತ್ತು ಅವಸರದ ಬದಲು ಈಗ ತಿರಸ್ಕಾರ ಮತ್ತು ಸೋಲಿನ ಭಾವಗಳಿದ್ದವು. ಅತ್ತಿತ್ತ ಒಂದೆರಡು ಹೆಜ್ಜೆ ಹಾಕಿದ. ಕಂದೀಲನ್ನು ಕೈಲಿ ಹಿಡಿದುಕೊಂಡೇ ಒಂದು ಮೂಲೆಗೆ ಹೋದ. ಅದನ್ನೆತ್ತಿ ಹಿಡಿದು ರಭಸದಿಂದ ಊದಿ ಆರಿಸಿದ. ಹೊರಗಿನ ಬೆಳದಿಂಗಳು ಕಿಡಕಿಯಿಂದ ಒಳಗೆ ಬಿದ್ದಿತ್ತು. ಸೌಮ್ಯವಾದ ಚಂದ್ರನ ಕಿರಣಗಳು ಆ ಹುಚ್ಚನ ಒಂದು ಭುಜದ ಮೇಲೆ ಬಿದ್ದಿದ್ದವಷ್ಟೆ. ಆತನ ಉಳಿದ ದೇಹ ಕತ್ತಲೊಂದಿಗೆ ಬೆರೆತು ಹೋಗಿತ್ತು. ದನ ಮೆಲುಕಾಡಿಸುವ, ಅವುಗಳ ಕೊರಳ ಗೆಜ್ಜೆಯ ಸಪ್ಪಳ ಬಿಟ್ಟು ಮಿಕ್ಕೆಲ್ಲ ಸ್ತಬ್ಧವಾಗಿತ್ತು.

ಮರೆಪ್ಪ ಕೋಪದ ಉತ್ಕರ್ಷಾವಸ್ಥೆಯಲ್ಲಿ ಒಮ್ಮೆ ನೆಲ ಒದ್ದು "ನಿನ್ನವ್ವನ ಗೌಡಾ" ಎಂದು ಹೇಳುತ್ತ ಉಕ್ಕುತ್ತಿದ್ದ ಮಾತನ್ನೇ ಹಲ್ಲಿನಿಂದ ಕಚ್ಚಿಕೊಂಡ. ನಾನು ಉಸಿರು ಬಿಗಿ ಹಿಡಿದುಕೊಂಡು ಅವನನ್ನೇ ನೋಡುತ್ತಿದ್ದೆ. ಉಕ್ಕಿನ ಹಾಗೆ ದನಿ ಗಟ್ಟಿಮಾಡಿಕೊಂಡು "ನೋಡಿಕೋತೀನಿ" ಎಂದ, ಏನೋ ನಿರ್ಧರಿಸಿದಂತೆ. ಅಷ್ಟರಲ್ಲಿ ಹೊರಗೆ ಕಾಲ ಸಪ್ಪಳವಾಯ್ತು. ನಿಂತು ನೋಡಿದೆವು. ದೇಸಾಯಿ ಹೊರಗೆ ಕಾಲ್ಮಡಿದು ಒಳಗೆ ಬರುತ್ತಿದ್ದ. ನಾನು ಬಾಗಿಲ ಬಳಿ ಮುದುಡಿಕೊಂಡೆ. ಮರ್ಯಾ ಗಾಳಿಯಂತೆ ನುಗ್ಗಿದವನೇ ಹೋಗಿ "ಸರಕಾರ್" ಎಂದು ದೇಸಾಯಿಯ ಕಾಲು ಹಿಡಿದ. ದೇಸಾಯಿಗಿದು ಅನಿರೀಕ್ಷಿತವೆನ್ನಿಸಿ ಒಂದು ಹೆಜ್ಜೆ ಸರಿದು ಗಾಬರಿಯಲ್ಲೇ "ಯಾರು" ಅಂದ. "ನಾನು ನಿಮ್ಮ ಹೊಲ್ಯಾ, ಮರ್ಯಾರೀ ಸರ್ಕಾರ್" ಎಂದು ಮತ್ತೆ ಮುಂದೆ ಬಂದು ಕಾಲು ಹಿಡಿದುಕೊಂಡ. ಬಾಗಿಲ ಮರೆಯಿಂದಲೇ ನಾನಿದನ್ನೆಲ್ಲ ನೋಡುತ್ತಿದ್ದೆ. ಇಬ್ಬರೂ ಪೂರ್ತಿ ಬೆಳದಿಂಗಳಲ್ಲಿ ಇದ್ದುದರಿಂದ ನನಗೆ ಎಲ್ಲವೂ ಕಾಣಿಸುತ್ತಿತ್ತು.

"ನಿಮ್ಮ ಸೇವಾ ಬಿಟ್ಟ ಹೊಂಟೇನ್ರಿ ಸರಕಾರ್. ಕಡೀ ಸೇವಾ ಒಪ್ಪಸಬೇಕಂತ ಬಂದೀನಿ.

"ಏನ ಹಂಗದಂರ?"

"ತಗೊಳ್ರಿ ಸರಕಾರ್"

- ಎಂದು ಸೊಂಟದಲ್ಲಿ ಬಚ್ಚಿಟ್ಟುದನ್ನು ತೆಗೆದು ಮುಂದೆ ಹಿಡಿದ. ದೇಸಾಯಿ ಇನ್ನೂ ಪೂರ್ತಿ ತಿಳಿವಿಗೆ ಬಂದಿರಲಿಲ್ಲ. ಹಣಗಲದಲ್ಲೇ ನಿಂತಿದ್ದವನು, ಯಾಂತ್ರಿಕವಾಗಿ ಕೈಚಾಚಿ ತಗೊಂಡು "ಏನಿದು?" ಎಂದ.

"ಸಾವಿರ ರೂಪಾಯಿ ಅದಾವ್ರಿ, ತಾಯಿಯವರ ದಿನಕಾರ್ಯೆ ಮಾಡ್ರಿ,. ನಾ ಬರತೀನ್ರಿ ಸರ್ಕಾರ್"

- ಎಂದು ಹೇಳಿ ಎದ್ದ. ದೇಸಾಯಿ ತಕ್ಷಣ ಅವರ ರಟ್ಟೆಗೆ ಕೈಹಾಕಿ "ಎಲ್ಲಿ ಹೋಗ್ತಿ ಬಾರೋ ಇಲ್ಲಿ" ಎಂದು ಹೇಳಿ ಕರೆದುಕೊಂಡು ಆ ಕಡೆಗೇ ಬಂದ. ಇಬ್ಬರೂ ಇಲ್ಲಿಗೇ ಬರುತ್ತಿದ್ದುದರಿಂದ ನಾನು ಪಾರಾಗಿ ಅಂತಸ್ತಿನ ಕೋಣೆಗೆ ಹೋದೆ. ಈಗ ಕಂಡದ್ದನ್ನೆಲ್ಲ ಸಿಂಗಾರೆವ್ವನಿಗೆ ಹೇಳಿಬಿಡಬೇಕೆಂದು ನನ್ನ ತವಕ. ಆದರೆ ಅವಳು ರಾತ್ರಿ ಯಾವಾಗ ಮಲಗಿದ್ದಳೋ ಈಗ ಗಾಢ ನಿದ್ದೆಯಲ್ಲಿದ್ದಳು. ಎದ್ದ ಮೇಲೆ ಹೇಳಿದರಾಯ್ತೆಂದು ಕೆಳಕ್ಕೆ ಬಂದೆ. ಕೊಟ್ಟಿಗೆಯಲ್ಲಿನ್ನೂ ದೇಸಾಯಿ ಮತ್ತು ಮರೆಪ್ಪನ ದನಿ ಕೇಳಿಸುತ್ತಿತ್ತು. ಆ ಕಡೆ ಮುಖ ಹಾಕದೆ ನೇರವಾಗಿ ಅಡಿಗೆ ಮನೆಗೆ ಹೋಗಿ ಒಲೆ ಹೊತ್ತಿಸಿದೆ.

ಬೆಳಗು ಮುಂಜಾನೆ ನನಗೆ ಬಿಡುವಾಗುವುದೇ ಅಪರೂಪ. ಒಮ್ಮೆ ಅಡಿಗೆ ಮನೆ ಹೊಕ್ಕರಾಯ್ತು ಹೊರಗೆ ಬರಬೇಕೆಂದರೆ ಹೊತ್ತು ನೆತ್ತಿಗೇರಿರುತ್ತದೆ. ಮೂರಾಳು ಮಾಡೋ ಕೆಲಸ ಒಬ್ಬಳೇ ಮಾಡಿದರೆ ಇನ್ನೇನಾದೀತು? ನೀರು ಕಾಸಬೇಕು, ಎಲ್ಲರ ಜಳಕವಾಗುತ್ತಿದ್ದಂತೆ ರೊಟ್ಟಿ ಪಲ್ಯ ತಯಾರಾಗಬೇಕು. ಅಷ್ಟರಲ್ಲೇ ಮೊಸರು ಕಡೆದು ಬೆಣ್ಣೆ, ಮಜ್ಜಿಗೆ ಸಿದ್ಧವಾಗಿರಬೇಕು. ಎಲ್ಲರೂ

ನ್ಯಾರೇ ಮಾಡೋದಕ್ಕಾದರೂ ಜೊತೆಯಾಗಿ ಬರುತ್ತಾರೆಯೇ? ಒಬ್ಬೊಬ್ಬರದು ಒಂದೊಂದು ಹೊತ್ತು. ಇನ್ನು ಆಳುಗಳಿಗೆ ನ್ಯಾರೇ ನೀಡಿ ಅವರು ಸಕಾಲದಲ್ಲಿ ತೋಟಕ್ಕೆ ಹೋಗುವ ಹಾಗೆ ಮಾಡಬೇಕು. ದೊರೆಸಾನಿ ಒಮ್ಮೊಮ್ಮೆ ನೆರವಿಗೆ ಬಂದರೆ ಬಂದಳು, ಇಲ್ಲದಿದ್ದರೆ ಇಲ್ಲ. ಇಷ್ಟೆಲ್ಲಾ ಮುಗಿದು ನನ್ನ ಮತ್ತು ಸಿಂಗಾರೆವ್ವನ ಜಳಕ, ಊಟವಾಗುವ ಹೊತ್ತಿಗೆ ಕಣ್ಣೀರು ಕಪಾಳಿಗಿಳಿದಿರುತ್ತದೆ.

ಈ ದಿನ ಗೌಡ ಮತ್ತು ದೇಸಾಯಿಯ ಜಳಕ, ನ್ಯಾರೇ ಆಗಿ ಆಳುಗಳಿಗೆ ಬಡಿಸುತ್ತಿದ್ದೆ. ಸಿಂಗಾರೆವ್ವನ ಜೊತೆ ಮಾತಾಡಲು ಸಾಧ್ಯವಾಗಲೇ ಇಲ್ಲ. ಅಷ್ಟರಲ್ಲಿ ನಿಂಗವ್ವ ಗೌಡ್ತಿ ದೌಡಾಯಿಸಿ ಬಂದವಳು, ಬಂದ ಏದುಸಿರಿನಲ್ಲೇ - “ಶೀನಿಂಗೀ, ಸಿಂಗಾರೆವ್ವ ಕರೀತಾಳ, ಬಾರಗ” ಎಂದಳು. ಅವಳು ಹೇಳಿದ ರೀತಿಯಿಂದ ಏನೋ ಅನಾಹುತವಾಗಿದೆಯೆಂದೇ ಗಾಬರಿಯಾಯ್ತು. ಏನಾಯಿತೆಂದು ಕೇಳುವಷ್ಟರಲ್ಲಿ ಮುದುಕಿ ತಿರುಗಿ ಓಡುತ್ತಿದ್ದಳು. ನಾನೂ ದೌಡಾಯಿಸಿ ದಡಬಡ ಜಿನೆಯೇರಿ ಹೋದೆ. ನಾನು ಹೋಗುವುದಷ್ಟೇ ತಡ ಸಿಂಗಾರೆವ್ವ “ಶೀನಿಂಗಿ, ಹಾಸಿಗೆ ಕೆಳಗ ಬಳಿ ಇಟ್ಟಿದ್ನೆಲ್ಲ, ತಗೊಂಡೀಯೇನ?” ಎಂದಳು. ನನ್ನೆದೆ ಧಸಕ್ ಎಂದಿತು. ಅವಸರದಲ್ಲಿ “ಇಲ್ಲೆವ್ವಾ, ಮನ್ನಿ ನಿಮ್ಮ ಕೈಯಾಗ ಕೊಟ್ಟಿದ್ನೆಲ್ಲ” ಎಂದೆ.

“ಹೌಂದಗ, ನೀ ಕೊಟ್ಟ ಮ್ಯಾಲ ಇಲ್ಲೇ ಇಟ್ಟಿದ್ದೆ,”

- ಎಂದಳು, ಮತ್ತೆ ಗಾದಿ, ಹಾಸಿಗೆಯನ್ನು ಕೆದರುತ್ತ, ನಾನು ಕೊಟ್ಟೊಡನೆ ಆ ಬಳೆ ಇಟ್ಟದ್ದು ಅಲ್ಲಿಯೇ. ನನಗೆ ತಿಳಿದ ಮಟ್ಟಿಗೆ ದೇಸಾಯಿಗದನ್ನು ಕೊಡಲೂ ಇಲ್ಲ. ಒಮ್ಮೆ ಕಳಚಿದ ಬಳಿಕ ಸಿಂಗಾರೆವ್ವ ಪುನಃ ಅವನ್ನು ಧರಿಸಲೂ ಇಲ್ಲ. ಗೌಡ, ಇಲ್ಲವೆ ನಿಂಗವ್ವ ಗೌಡ್ತಿ ಹಾರಿಸಿರಬಹುದೇ ಅಂದುಕೊಂಡೆ. ಆದರೆ ಅವರಿಗಿಂತ ನನ್ನ ಪರಿಸ್ಥಿತಿ ನಾಜೂಕಿನದಾಗಿತ್ತು. ನಾನು ಎಷ್ಟೆಂದರೂ ಮನೆ ಆಳು. ಸಾಮನ್ಯವಾಗಿ ದೊಡ್ಡವರ ಮನೆಗಳಲ್ಲಿ ಏನು ಅನುಮಾನ ಬಂದರೂ ಅದಕ್ಕೆ ಮೊದಲು ಗುರಿಯಾಗುವವರು ಆಳುಗಳೇ. ಅವರ ಮನಸ್ಸಿನಲ್ಲಿ ಹಾಗಿತ್ತೆಂದು ಹೇಳಲಾರೆ. ಆದರೆ ಅವರಿಗೆ ಸದ್ಯ ನನ್ನ ಮೇಲೆ ಸಂಶಯವಿದೆಯೆಂದು ಅನ್ನಿಸಿ “ಸಾವಳಿಗಿ ಶಿವನಿಂಗಸಾಣೆ ಎವ್ವಾ, ನಾ ತಗೊಂಡಿಲ್ಲ. ನನ್ನ ಬಾಯಿಂದ ಸುಳ್ಳ ಬಂದಿದ್ದರ ನನ್ನ ನಾಲಿಗಿ ಕಳಚಿ ಬೀಳಲಿ” ಎಂದು ಸ್ವಾಮಿಯ ಮಠದ ಕಡೆ ಮುಖ ಮಾಡಿ ಕೈಮುಗಿದೆ. ಸ್ವಾಮಿಗೆ ನನ್ನ ಪ್ರಾರ್ಥನೆ ಮುಟ್ಟಲಿಲ್ಲ. ಯಾವಾಗಲೋ ಗೌಡ ಬಂದು ಇದನ್ನೆಲ್ಲ ಕೇಳಿಸಿಕೊಳ್ಳುತ್ತಿದ್ದವನು ಎಡಗಣ್ಣು ಚಿಕ್ಕದು ಮಾಡಿ, ಸೊಂಡಿ ಕಚ್ಚಿ ನನ್ನ ಕಡೆಗೆ ನೋಡುತ್ತಿದ್ದ. ಗೌಡ್ತಿಯೂ ಬಾಯಿ ತೆರೆದು ನನ್ನನ್ನೇ ನೋಡುತ್ತಿದ್ದಳು. ಸಿಂಗಾರೆವ್ವನಾದರೂ ಮಾತಾಡಿ ಅವರ ಮನಸ್ಸಿನ ಸಂಶಯ ದೂರ ಮಾಡ್ಯಾಳೆಂದರೆ ಅವಳು ಮತ್ತೆ ಹಾಸಿಗೆಯನ್ನೇ ಕೆದರಿ ಕೆದರಿ ನೋಡುತ್ತಿದ್ದಳು.

ನನ್ನ ಆಣೆಗಳಿಂದ ಅವರ ಮೇಲೆ ಯಾವ ಪರಿಣಾಮವೂ ಆಗಲಿಲ್ಲ. ಬದಲು ಅವರ ದೃಷ್ಟಿಯಲ್ಲಿ ಈ ತನಕ ಅಳ್ಳಕಾಗಿದ್ದ ಸಂದೇಹ ಬರಬರುತ್ತ ಗಟ್ಟಿಯಾಗುತ್ತಿರುವಂತೆ ಅನ್ನಿಸಿತು. “ನನ್ನಾಣೆ, ಕುಮುದವ್ವನ ಆಣೆ, ನಾ ತಗೊಂಡಿಲ್ಲೆವ್ವಾ” ಎಂದು ಹೇಳಿ ಪಕ್ಕನೆ ಕೆಳಕುಳಿತು ನೆಲಸವರಿ ಧೂಳನ್ನು ಹಣೆಗಂಟಿಸಿಕೊಂಡೆ. ಈಗಲೂ ಅವರ ಚೇರಾಪಟ್ಟಿಯಲ್ಲೇನೂ ಹೆಚ್ಚು ಕಮ್ಮಿಯಾಗಲಿಲ್ಲ. ನಿಜ ಹೇಳಬೇಕೆಂದರೆ ಇಂಥ ಅಗ್ಗದ ಕೆಲಸ ನನ್ನಿಂದ ಸಾಧ್ಯವೇ ಇಲ್ಲ. ಆದರೆ ಹ್ಯಾಗೆ ಹೇಳುವುದು? ನನ್ನ ಸಾಜೋಗತನವನ್ನು ಹ್ಯಾಗೆ ಸಾಬೀತು ಮಾಡುವುದು? ಗೌಡ ಗೌಡ್ತಿ ಮಾತ್ರ ಕಳ್ಳತನ ಮುಚ್ಚೋದಕ್ಕೆ ಇಂಥ ಅಭಿನಯ ಮಾಡುತ್ತಿದ್ದೇನೆಂಬಂತೆ ನನ್ನ ಕಡೆಗೆ ನೋಡುತ್ತಿದ್ದರು. ಅವರ ದೃಷ್ಟಿ ಎದುರಿಸಲಾರದೆ ನಾನು ಹುಡುಕುವ ನೆಪ ಮಾಡಿಕೊಂಡು ಸಿಂಗಾರೆವ್ವ ಹಾಸಿಗೆ ಕೆದರುವಲ್ಲಿಗೆ ಹೋದೆ. ಮೊದಲೇ ಕೆದರಿದ್ದ ಹಾಸಿಗೆಯನ್ನು ಇನ್ನಷ್ಟು ಕೆದರತೊಡಗಿದೆ. ಆದರೂ ಅವರ ದೃಷ್ಟಿ ನನ್ನ ಬೆನ್ನು ಹತ್ತಿದ್ದರಲ್ಲಿ ಸಂದೇಹವಿರಲಿಲ್ಲ. ಅವರ ಕಣ್ಣು ನನ್ನ ಬೆನ್ನಿನಲ್ಲಿ ನಾಟಿದಂತೆ ಭಾಸವಾಗುತ್ತಿತ್ತು. ಕಣ್ಣೇನು ಕಾಲೇ ನಾಟಿತು. ಗೌಡ ಬಂದವನೇ ಝಾಡಿಸಿ ನನ್ನ ಬೆನ್ನಿಗೊಂದು “ಖರೇ ಹೇಳ ಭೋಸಡೆ, ಬಳಿ ತಗೊಂಡಿಯೋ ಇಲ್ಲೋ?” ಎಂದ. ಅಪಮಾನ ಮತ್ತು ಕೋಪಗಳಿಂದ ನನ್ನ ಎದೆಯ ನೆತ್ತರೆಲ್ಲ ನೆತ್ತಿಗೇರುವಂತೆನಿಸಿತು. ನಡುಕ ಹುಟ್ಟಿ ದೇಹಾದ್ಯಂತ ಬೆವರಿತು. ಒದೆ ಬಿದ್ದವಳು ಎದ್ದು ಕೂರಲಿಕ್ಕೂ ಶಕ್ತಿ ಸಾಲದೆ ನೀನಾದರೂ ಉಳಿಸೆಂಬಂತೆ ದೊರೆಸಾನಿಯ ಕಡೆ ನೋಡಿದೆ. ಮತ್ತೆ ಗೌಡ ಅಡ್ಡ ಬಂದು, “ಬಾಯ್ಬಿಡತೀಯೋ, ಪೊಲೀಸರನ್ನ ಕರೀ ಅಂತೀಯೊ” ಎಂದು ಮೈಮ್ಯಾಲೇ ಬಂದ. ಸಿಂಗಾರೆವ್ವ ಬಾಯಿ ಹಾಕಿದಳು:

“ಎವ್ವಾ, ದೇಸಾಯರು ಕೆಳಗಿದ್ದಾರೇನು ಕರಿ, ಅವರ್ನೂ ಕೇಳೋಣ” ಅಂದಳು. ತಕ್ಷಣ ನನಗೆ ಹೊಳೆಯಿತು. “ಹಾ” ಎಂದು ನೆಲ ಬಾರಿಸಿ “ಎವ್ವಾ” ಅಂದೆ. ಎಲ್ಲರೂ ನನ್ನ ಕಡೆ ನೋಡಿದರು.

“ಎವ್ವಾ, ಮರ್ಯಾ ಇಂದ ಬೆಳಿಗ್ಗೆ ದೇಸಾಯರಿಗೆ ಸಾವಿರ ರೂಪಾಯಿ ಕೊಟ್ಟಾನ. ಅವ ತಗೊಂಡಾನೇನ್ಕೆಳ್ರಿ”

ಮೂವರು ಪರಸ್ಪರ ಮುಖಗಳನ್ನು ಮಳಮಳ ನೋಡಿ ಬರೆದ ಗೊಂಬೆಗಳ ಹಾಗೆ ನಿಶ್ಚಲರಾದರು. ಅದು ತುಸು ಹೊತ್ತಷ್ಟೆ. ಗೌಡ ನಾ ಕೂತಲ್ಲಿಗೇ ಬಂದು ಅವಸರದಲ್ಲಿ ನನ್ನ ಮುಂದೇ ಕೂತು “ಖರೇನ?” ಅಂದ.

“ಹೌಂದರಿ, ಅವ ಕೊಟ್ಟದ್ದ ನಾ ಕಣ್ಣಾರ ಕಂಡೀನಿ”

“ಆ ಬೋಳೀಮಗ ಯಾವಾಗ ಬಂದಿದ್ದ?”

“ಇಂದ ಬೆಳಿಗ್ಗಿರಿ”

“ಎಷ್ಟು ಕೊಟ್ಟ?”

“ಸಾವಿರ ರೂಪಾಯಿ”

“ದೇಸಾಯಿರೇನಾದರೂ ಅವನ ಕೈಯಾಗ ಬಳಿ ಕೊಟ್ಟಿದ್ದರೇನ?”

“ಇಲ್ಲರಿ.”

“ಶೀನಿಂಗಿ. ಏನೇನ ನಡೀತ ಎಲ್ಲಾ ಬರೋಬರಿ ಹೇಳ. ಒಂದ ಮಾತ ಎಪರಾ ತಪರಾ ಆದರ ಜೇಲಿಗೆ ಹೋಗ್ತಿ, ಹುಷಾರ್.”

ನಾನು ಆ ದಿನ ನಡೆದದ್ದನ್ನೆಲ್ಲ (ಆದರೆ ಮೊದಲಿನ ಭಾಗವನ್ನು ಬಿಟ್ಟು ಬರೀ ಹಣ ಕೊಟ್ಟ ಭಾಗವಷ್ಟನ್ನೂ) ವಿವರವಾಗಿ ಹೇಳಿದೆ. ಹೇಳುತ್ತ ಹೋದಂತೆ ಗೌಡನ ಮುಖ ವಿಕಾರವಾಗಿ ಬಿಳುಪೇರಿತು. ಬಾಯಿ ತೆರೆದುಕೊಂಡೇ ನಿಂತಿದ್ದ ಗೌಡ್ತಿಗೆ ನನ್ನ ಮಾತಿನಲ್ಲಿನ್ನೂ ನಂಬಿಕೆ ಬಂದಿರಲಿಲ್ಲ. ಗೌಡ ಎದ್ದವನೇ ಬಿಟ್ಟ ಬಾಣದ ಹಾಗೆ ಹೋಗಿಬಿಟ್ಟ.

ನಾನು ಆ ದಿನ ನಡೆದದ್ದನ್ನೆಲ್ಲ (ಆದರೆ ಮೊದಲಿನ ಭಾಗವನ್ನು ಬಿಟ್ಟು ಬರೀ ಹಣ ಕೊಟ್ಟ ಭಾಗವಷ್ಟನ್ನೂ) ವಿವರವಾಗಿ ಹೇಳಿದೆ. ಹೇಳುತ್ತ ಹೋದಂತೆ ಗೌಡನ ಮುಖ ವಿಕಾರವಾಗಿ ಬಿಳುಪೇರಿತು. ಬಾಯಿ ತೆರೆದುಕೊಂಡೇ ನಿಂತಿದ್ದ ಗೌಡ್ತಿಗೆ ನನ್ನ ಮಾತಿನಲ್ಲಿನ್ನೂ ನಂಬಿಕೆ ಮಬದಿರಲಿಲ್ಲ. ಗೌಡ ಎದ್ದವನೇ ಬಿಟ್ಟ ಬಾಣದ ಹಾಗೆ ಹೋಗಿಬಿಟ್ಟ.

ಅವನು ಅತ್ತ ಹೋಗುತ್ತಲೂ ಇತ್ತ ಸಿಂಗಾರೆವ್ವ “ಇದನ್ನ ನನಗ್ಯಾಕ ಮೊದಲ ಹೇಳಲಿಲ್ಲಗ?” ಎಂದಳು.

“ಹೇಳಾಕ ಬಂದಿದ್ದಿನೆವ್ವ. ನೀ ಮಲಗಿದ್ದಿ. ಆ ಮ್ಯಾಲೆ ಹೇಳಿದರಾಯ್ತಂತ ಹೋದೆ. ಕೆಲಸದಾಗ ಮ್ಯಾಲ ಬರಾಕ ಆಗಲಿಲ್ಲ. ನೀನೂ ಆ ಕಡೆ ಬರಲಿಲ್ಲ. ಉಂಡಮ್ಯಾಲ ಹೇಳಿದರಾಯ್ತಂತ ಸುಮ್ಮನಾದೆ.”

ಸಿಂಗಾರೆವ್ವ ಹಾಗೇ ಕೆದರೆದ ಹಾಸಿಗೆಯಲ್ಲೇ ಕುಸಿದಳು. ಮಾಡಿದ ತಪ್ಪಿನ ಅರಿವಾಗಿ ನನಗೂ ಈಗ ಚಿಂತೆಯಾಯಿತು. ಆದರೇನು ಮಾಡಲಿ ? ಅವರಿಬ್ಬರ ದೃಷ್ಟಿಗಳು ಇರಿಯುವಾಗ ನನ್ನ ನೆರವಿಗೆ ಯಾಕೆ ಬರಲಿಲ್ಲ ? ಆಣೆಯ ಮೇಲಾಣೆ ಮಾಡಿದಾಗಲೂ, ಹೋಗಲಿ,

ಗೌಡ ಒದ್ದಾಗಲೂ ಸುಮ್ಮನಿದ್ದಳಲ್ಲ? ನನ್ನ ಗೋಳು ಅವಳಿಗೆ ಅರ್ಥವಾಗುವುದೇ ಇಲ್ಲ. ಒದೆ ತಿಂದ ಅವಮಾನದ ನೋವು ಇನ್ನೂ ಬೆನ್ನಿಗಿದ್ದರೂ ನಾನು ಮಾಡಿದ್ದು ತಪ್ಪೆಂದೇ ತೋರಿತು. ಆಯ್ತು, ಗೌಡ ಗೌಡ್ತಿಗೆ ಸಂಶಯ ಬಂತು ಎನ್ನೋಣ, ಅವರೇನು ಯಜಮಾನರಲ್ಲವಲ್ಲ. ಸಿಂಗಾರೆವ್ವ ನಬದಿದ್ದರಾಯ್ತು. ಅಥವಾ ಅವಳು ನಂಬಿದ್ದರೂ ಆ ಮೇಲೆ ಮರ್ಯಾ ಸಾವಿರ ರೂಪಾಯಿ ಕಟ್ಟದ್ದನ್ನು ಹೇಲಿದ್ದರಾಗುತ್ತಿತು. ಆದರೆ ಅಲ್ಲಿಯವರೆಗೆ ನನ್ನ ಗತಿ? ಅದಿರಲಿ, ಇದೆಲ್ಲ ಆ ಮೇಲಿನ ತರ್ಕ ತಾನೆ? ಮಾತು ಯಾವಾಗಲೋ ಮಿಂಚಿಹೋಗಿತ್ತು.

ಸಿಂಗಾರೆವ್ವ ಮಾತ್ರ ಉಮ್ಮಳದಿಂದ ಕಂಗೆಟ್ಟಿದ್ದಳು. ಅವಳ ತುಟಿಗಳು ಅಸ್ಥಿರವಾಗಿ ನಡುಗುತ್ತದ್ದವು. ಕಣ್ಣೀರು ಕೆನ್ನೆಗಳನ್ನು ಒದ್ದೆಯಾಗಿಸಿತ್ತು ಅದ್ಯಾವುದರ ಕಡಗೂ ಲಕ್ಷ್ಯ ಕೊಡದೆ ಗೌಡ್ತಿ, “ಅಲ್ಲ, ಶೀನಿಂಗೀ, ಹೊಲೆಯಾ ಇಲ್ಲೀತನಕ ಬಂದ ಕದೀತಾನಂದರ ಇದು ನಂಬೋ ಮಾತೇನ?” ಎಂದಳು. ಬಹುಶಃ ಮುದುಕಿ ಇನ್ನೂ ನನ್ನ ಮಾತ ನಂಬಿರಲಿಲ್ಲ. ನಂಗದಿದ್ದರೆ ಬೇಡ. ಬೇಕಾದರೆ ನಾನೇ ಕದ್ದವಳೆಂದು ತಿಳಿಯಲಿ, ಏನಂತೆ. ಇದರಿಂದ ದೊಡ್ಡ ರಾದ್ಧಾಂತ ವಾಗದಿದ್ದರೆ ಸಾಕಿತ್ತು. ಯಾಕೆಂದರೆ ಈ ರಾದ್ಧಾಂತಗಳ ತುದಿಯಲ್ಲೇ ನಮ್ಮ ಗುಟ್ಟುಗಳಿದ್ದವು. ಸಿಂಗಾರೆವ್ವನ ಅಳುಮುಖ ನೋಡಿ ನನ್ನ ಅಪಮಾನ ಕೂಡ ಮರೆಯಾಗಿ ಹೋಗಿತ್ತು. ನನಗೀಗ ಮಾತಾಡುವುದ ಮೇಕಿರಲಿಲ್ಲ ಮಾತಾಡುವುದೇ ಆದರೆ ಸಿಂಗಾರೆವ್ವನ ಜೊತೆ ಮಾತಾಡುವುದಿತ್ತು. ಆದರೆ ಮುದುಕಿ ಬಿಡಲೊಲ್ಲಳು. “ಮರ್ಯಾಗ ಇಲ್ಲೀತನಕ ಬರೋವಷ್ಟು ಧೈರ್ಯ ಬಂತೆನ ? ಎನ್ನುತ್ತ ನನಗೇ ಗಂಟುಬಿದ್ದಳು. ಅಷ್ಟರಲ್ಲಿ ಕೆಳಗೆ ಗೌಡನ ಎತ್ತರ ದನಿ ಕೇಳಿಸಿತು. ಅದೇ ನೆಪ ಮುಂದೆ ಮಾಡಿ ಕೆಳಕ್ಕೆ ಬಂದೆ.

ಕೆಳಗೆ ದರ್ಬಾರಿನಲ್ಲಿ ಗೌಡ ಹಾರಾಡುತ್ತಿದ್ದ. ದೇಸಾಯಿ ಕಂಬಕ್ಕೊರಗಿ, ಅದೇ ಮರದಲ್ಲಿ ಕೊರೆದ ಗೊಂಬೆಯ ಹಾಗೆ ಕೂತಿದ್ದ. ನಾನಲ್ಲಿಗೆ ತಲುಪುವುದರೊಳಗೆ ಮರೆಪ್ಪನಿಂದ ಹಣ ಪಡೆದದ್ದನ್ನು ದೇಸಾಯಿ ಒಪ್ಪಿಕೊಂಡಿದ್ದ. ಈ ಸಂಗತಿ ನನ್ನಿಂದ ತಿಳಿಯಿತೆಂದು ಗೌಡ ಹೇಳಿದ್ದನೋ ಇಲ್ಲವೋ, ಹೀಳಿದ್ದರೆ ದೇಸಾಯಿ ನನ್ನ ಬಗ್ಗೆ ಏನಂದುಕೊಳ್ಳುವನೋ ಎಂದು ಚಿಂತೆಯಾಯಿತು. ಏನನ್ನು ಮಾಡುವುದೂ ಈಗ ಸಾಧ್ಯವಿರಲಿಲ್ಲವಲ್ಲ. ಎಲ್ಲ ಕೈ ಮೀರಿತ್ತು.

ಮರ್ಯಾನಂಥವನನ್ನು ನಂಬಿದರೆ ದೇಸಗತಿಯ ಘನತೆಗೆ ಹ್ಯಾಗೆ ಕುಂದು ಬರುತ್ತದೆ, ಹ್ಯಾಗೆ ವ್ಯಕ್ತಿಯ ಮಾನ ಮುಕ್ಕಾಗುತ್ತದೆ, ಈ ಸುದ್ದಿ ಶೆಟ್ಟಿಯಂಥವರಿಗೆ ತಿಳಿದರೆ ಊರಿನ ಸಮಾಜದಲ್ಲಿ ದೇಸಾಯಿ ಹ್ಯಾಗೆ ಹಗುರಾಗುತ್ತಾರೆ - ಎಂಬುದರ ಬಗ್ಗೆ ಗೌಡ ಭಾಷಣ ಮಾಡುತ್ತಿದ್ದ. ದೇಸಾಯಿಗೆ ಅವಮಾನ ಮತ್ತು ಆಘಾತವಾದದ್ದು ಸ್ಪಷ್ಟವಿತ್ತು. ಅವಮಾನ ಯಾಕೆಂದರೆ ಹಣವಿಲ್ಲದೆ ಒಬ್ಬ ಹೊಲೆಯನಿಂದ ಹಣ ಪಡೆದದ್ದು ತನ್ನ ಬೀಗರಿಗೆ ತಿಳುಯುವಂತಾಯಿತಲ್ಲಾ ಎಂದು. ಆಘಾತ ಯಾಕೆಂದರೆ ಆ ಹೊಲೆಯ ತನ್ನ ಮನೆಯ ಬಂಗಾರವನ್ನೇ ಕದ್ದು ತನಗೇ ಹಣ ಕೊಟ್ಟು ಉದಾರಿಯಾಗುವಂಥ ಧೂರ್ತನಿದ್ದಾನಲ್ಲಾ ಎಂದು. ಅವನ ಮುಖ ಒಣಗಿದ ಹಣ್ಣಿನಂತಾಗಿತ್ತು. ಗೌಡನ ಮಾತು ಕೇಳುತ್ತಿದ್ದನೇ ಹೊರತು ಮುಖ ನೋಡುತಿರಲಿಲ್ಲ. ಗೌಡ ಮರಪ್ಪನ ಬಗ್ಗೆ ಹೇಳುವುದನ್ನೆಲ್ಲಾ ಹೇಳಿ, ಮಾತು ನಿಲ್ಲಿಸಿ, ಆ ಹೊಲೆಯನ ವಿಶ್ವಾಸ ಘಾತಕತನ ಮತ್ತು ಧೂರ್ತತನಗಳನ್ನು ಸರಿಯಾಗಿ ದೇಸಾಯಿಯ ಮನಸ್ಸಿನ ಮೇಲೆ ಬಿಂಬಿಸುತ್ತಿದ್ದೇನೋ ಇಲ್ಲವೋ ಎಂದು ಪರೀಕ್ಷಿಸಿ ಮುಖ ನೋಡಿ, ಹೌದೆಂದು ಖಾತ್ರಿಯಾದ ಮೇಲೆ ಮೆಲ್ಲಗೆ ಬಂದು ದೇಸಾಯಿಯ ಪಕ್ಕದಲ್ಲಿ ಕೂತು. ತನಗೂ ಈ ಬಗ್ಗೆ ಬಹಳ ಕಾಳಜಿಯಿದೆಯೆಂದೂ ಈ ಚಿಂತೆಯಲ್ಲಿ ತಾನು ಕಂಗಾಲಾಗಿದ್ದೇನೆಂದೂ ಸೂಚಿಸುವಂತೆ ಅವನ ಮುಖ ಹಾಗೂ ಕೂತ ಭಂಗಿಯಿತ್ತು. ಆಗಾಗ ಓರೆನೋಟ ಬೀರಿ ದೇಸಾಯಿ ತಾನು ಬಯಸಿದಂತೆ ಯೋಚನೆ ಮಾಡುತ್ತಿದ್ದಾನೋ ಇಲ್ಲವೋ ಎಂದು ಕದ್ದು ನೋಡುತ್ತಿದ್ದ. ತುಸು ಹೊತ್ತು ಹೀಗೆ ಕಳೆಯಿತು. ನಾನು ತಿರುಗಿ ಹೊಡಬೇಕೆನ್ನುವಷ್ಟರಲ್ಲಿ ಗೌಡ ಗಂಭೀರದನಿಯಲ್ಲಿ ಕೇಳಿದ:

“ಈಗ ಏನು ಮಾಡೂಣಂತೀರಿ ದೇಸಾಯರ?”

ದೇಸಾಯಿ ತಬ್ಬಿಬ್ಬಾದ. ಏನು ಮಾಡಬೇಕೆಂದು ಅವನೇನಾದರೂ ಯೋಚನೆ ಮಾಡಿದ್ದರಲ್ಲವೆ ? ಅವನೂ ಅದನ್ನೇ ಕೇಳಿದ : “ಏನ ಮಾಡೂಣಂತೀರಿ?”

“ಏನಂದರ ಪೋಲೀಸ್ ಕಂಪ್ಲೇಂಟ್ ಕೊಡರಿ. ಮನ್ಯಾಗಿನ ದಾಗೀನ ಕಳವಾಗ್ಯಾವ. ಮರ್ಯಾನ ಮ್ಯಾಲ ಸಂಶೇ ಐತಿ ಅಂತ ಬರಕೊಡ್ರಿ. ಮುದಿಂದ ನಾ ನೋಡಿಕೋತ್ತೀನಿ.”

ದೇಸಾಯಿ ಎಳೆ ಮಕ್ಕಳ ಹಾಗೆ ಬೆದರಿದ ಕಣ್ಣು ತೆರೆದ ಗೌಡನತ್ತ ನೋಡಿ ಏನೋ ಹೇಳಹೋಗಿ ಮತ್ತೆ ತುಟಿ ಮುಚ್ಚಿದ. ಮತ್ತೆ ತಡೆಯಲಾರದೆ ದೈನ್ಯ ಸ್ವರದಲ್ಲಿ, -

“ಪೋಲೀಸ ಕೇಸಂದರ ನಾಳಿ ನಮ್ಮ ತಲೀಗೂ ಬಂದರ ಬಂತೃ. ಯಾಕವಸರ ? ಮರ್ಯಾ ಬರಲಿ ವಿಚಾರ ಮಾಡೂಣಲ್ಲರಿ”

- ಹೇಳಿದ. ಗೌಡನಿಗಿದು ಸರಿಬರಲಿಲ್ಲ. ನೊದವರಂತೆ ಮುಖ ಮಾಡಿ ಹೇಳಿದ :

“ಏನ್ರೀ ದೇಸಾಯರ, ಚಾಕರಿ ಮನಶ್ಯಾ ಹೊಲೆಯ, ದೇಸಗತಿ ಹೆಣ್ಣಮಕ್ಕಳು ಮಲಗೋವಲ್ಲಿಗೆ ಹೋಗಿ ಬಂಗಾರ ಕದೀತಾನಂದರ ಇದು ಸಾಮಾನ್ಯ ಮಾತೇನ್ರಿ? ನೀವು ಇಷ್ಟು ಸಲಿಗೀ ಕೊಡತೀರಂತೃ ಅವ ಅಷ್ಟು ಕೊಬ್ಬಿ ಹೋಗ್ಯನ. ಈ ಪರಿ ದೇಸಗತಿ ನಾ ಎಲ್ಲಿ ಕಂಡಿರಲ್ಲರೆಪ.”

“ಇಂದ ಪೋಲೀಸರು ಬರೋದು, ಮನ್ಯಾಗ ಹುಡಿಕ್ಯಾಡೋದು ಚಂದ ಕಾಣಾಣಿಲ್ಲರಿ. ದಿನಕಾರ್ಯ ಮುಗೀಲಿ, ನಾಳಿ ನೋಡೂಣಂತ.”

“ಹಿಂಗ ನೀವು ಎದಕ್ಕೆಲ್ಲಾ ನೋಡುಣು ಅಂತಂದರ ಹೆಂಗರಿ?”

“ಮರ್ಯಾನೃ ತಗೊಂಡಿದ್ದಾನನ್ನೂದು ಇನ್ನೃ ಖಾತ್ರಿಯಿಲ್ಲ. ಅವ ಬರಲಿ, ಮಾತಾಡಿ ನೋಡೋಣು. ಖಾತ್ರಿಯಾದ ಮ್ಯಾಲ ಐತೇ ಐತಲ್ಲ, ಪೋಲೀಸ್ ಸ್ಟೇಷನ್ನು.”

“ಇನ್ನು ಹೆಂಗಾಗಬೇಕರಿ ಖಾತ್ರಿ ನಿಮಗ? ಖಾತ್ರಿ ಆಗಿಲ್ಲ ಅಂತಿಟ್ಟಕೊಳ್ರಿ. ಪೋಲೀಸರು ಬಂದರೆ ತಾನೃಖರೆ ಹೊರಬೀಳತೈತಿ. ದೇಶಯರ ಮನ್ಯಾಗ ಕಳುವಾತೋದಂದರೇನ್ರಿ….?”

- ಎಂದು ಗೌಡ ವೀರಾವೇಶದಿಂದ ಇಡೀ ದೇಸಗತಿಯ ಮಾನವ ಹೊಣೆ ತನ್ನದೇ ಎಂಬಂತೆ ಇನ್ನೂ ಏನೋ ಹೇಳಹೊರಟಿದ್ದ. ಅಷ್ಟರಲ್ಲಿ ಪರಮಶೆಟ್ಟಿ ಹಾಗೂ ಊರಿನ ಮೂವರು ಪಂಚರು ತೊಲೆ ಬಾಗಿಲಲ್ಲಿ ಕಾಣಿಸಿಕೊಂಡರು. ಗೌಡ ಎದ್ದು ಅಂತಸ್ತಿಗೆ ಹೋದ.

ಬಂದವರು ದೇಸಾಯಿಗೆ ನಮಸ್ಕರಿಸಿ ಕೂತರು. ದೇಸಾಯಿಯ ಮನಸ್ಸು ನೊಂದಿತ್ತಾದ್ದರಿಂದ ಬಂದವರಿಗೆ ಮಾತಿನ ಪೀಠಿಕೆ ಹಾಕುವುದಕ್ಕೂ ಅವಕಾಶ ಕೊಡದೆ ನಿರ್ಭಾವದಿಂದ “ಏನಾಗಬೇಕಾಗಿತ್ತು?” ಎಂದ. ಏನೇನಾಡಿ ಏನೇನೋ ಅಭಿನಯಿಸಬೇಕೆಂದು ಬಂದವರಿಗೆ ನಿರಾಸೆಯಾಯ್ತು. ಶೆಟ್ಟಿ ಸುಮ್ಮನೆ ದೇಸಾಯರ ದೃಷ್ಟಿ ನಿವಾರಿಸಿ ದೂರದ ಕಂಬದ ಬಳಿಯಿದ್ದ ನನ್ನ ಕಡೆ ನೋಡುತ್ತ ಕುಳಿತಿದ್ದ. ಅವರಲ್ಲೇ ಹಿರಿಯನಾದ ಮುದುಕ - “ಇರತಾವಲ್ಲರಿ ಊರಗಾರಿಕಿ ಕೆಲಸ. ತಮ್ಮನ್ನ ಬಿಟ್ಟ ನಾವೇನ ಮಾಡಾಕಾದೀತು?” ಅಂದ.

“ಆಯ್ತಲ್ಲ. ನಮ್ಮಿಂದೇನಾಗಬೇಕಿತ್ತು, ಅದ್ದೇಳ್ರಿ” - ಎಂದು ದೇಸಾಯಿ ಅವನ ಮಾತನ್ನು ಅಲ್ಲಿಯೇ ಕತ್ತರಿಸಿದ.

“ಹುಚ್ಚಯ್ಯಸ್ವಾಮೀ ಸಮಾಧಿ ಕಟ್ಟಿಸಬೇಕಂತ ಊರವರೆಲ್ಲಾ ಠರಾವ ಮಾಡೀವ್ರಿ. ಮಾರಾಜರಂಥಾ ತಾವಿದ್ದೀರಿ. ತಮ್ಮನ್ನ ಬಿಟ್ಟು ನಾವೇನ ಮಾಡಾಕಾದೀತು?”

“ಸಮಾಧಿ ಕಟ್ಟಿಸಬೇಕಂತ ಠರಾವು ಮಾಡೋವಾಗ ಮಾರಾಜರ ನೆನಪ ಆಗಲಿಲ್ಲ. ಈಗ ನೆನಪಾಗೇದಂದರ ಅದರಾಗೇನೋ ಇರಬೇಕು. ಏನ ಬೇಕಾಗಿತ್ತು?”

- ದೇಸಾಯಿಯ ವ್ಯಂಗ್ಯ ಕೇಳಿ ಮುದುಕನ ಮುಖ ಸಪ್ಪಗಾಯ್ತು ತಪ್ಪಿನ ಅರಿವಿನಿಂದ ಅಕ್ಕಪಕ್ಕದವರ ಮುಖ ನೋಡಿದ, ಅವರು ನಿವಾರಿಸಿ ಬೇರೆ ಕಡೆ ನೋಡಿದರು. ಮುದುಕನೇ ಮತ್ತೆ ಧೈರ್ಯ ಸಂಪಾದಿಸಿಕೊಡು, “ಮಾರಾಜರು ಅಷ್ಟೋ ಇಷ್ಟೋ ಚಂದಾ ಕೊಟ್ಟು ಬೋನಿಗಿ ಮಾಡಿದರ ಮುಂದಿಂದ ನೋಡಾಕಾದೀತು.”

ಕೃತಕ ವಿನಯದ ಮುದುಕನ ಈ ಮಾತು ಅವನ ವಯಸ್ಸಾದ ಮುಖ ಮತ್ತು ಆಕೃತಿಗೆ ಎಷ್ಟೋ ಹೊಂದುತ್ತಿರಲಿಲ್ಲ. ಆದರೇನು ಮಾಡುವುದು? ಎಷ್ಟೆಷ್ಟು ದೇಸಾಯನ್ನು ಖುಶಿ ಮಾಡಿದರೆ ಅಷ್ಟಷ್ಟು ಗಿಟ್ಟುವುದೆಂಬುದನ್ನು ಅವರು ಹಿಂದಿನಿಂದ ಮನಗಂಡಿದ್ದರು. ಹೊರಗೆಷ್ಟೇ ನಾಟಕವಾಡಿದರೂ ಒಳಗೆ ಅವರು ನಗುತ್ತಿದ್ದರೆಂದು ಅವರ ಕಣ್ಣು ಮುಖ ನೋಡಿದರೇ ತಿಳಿಯುತ್ತಿತ್ತು. ಆದರೆ ದೇಸಾಯಿಯ ವ್ಯಂಗ್ಯದಿಂದ ಕೂಡ ಅವರು ಏನನ್ನೂ ಕಲಿಯಲಿಲ್ಲ. ದೇಸಾಯಿಯ ಹತ್ತಿರ ಹಣವಿಲ್ಲವೆಂದು ಶೆಟ್ಟಿಗೆ ಗೊತ್ತಿತ್ತು. ಅದಕ್ಕೇ ಅವನೇ ಮುಂದಾಗಿ,

“ಬೇಕಾದರ ಮರಾಜರ ಇಷ್ಟಂತ ಅಪ್ಪಣೆ ಕೊಡಿಸಿದರ ಅಷ್ಟು ಬರಕೊಂಡಿರ್ತೀವಿ. ಅಮ್ಯಾಲ ಅನುಕೂಲಾದಾಗ ಕೊಟ್ಟೀರಂತ” - ಎಂದು ಹೇಳಿದ. ದೇಸಾಯಿಗಿದು ದೀಡಿ ಮಾತನಿಸಿತು. ದೇಸಗತಿಯನ್ನು ಹಗುರವಾಗಿ ಕಂಡದ್ದರ ಮಾತೆನ್ನಿಸಿತು. ಈ ತನಕದ ಆತನ ಜಾಳು ನೋಟ ಈಗ ನಿರ್ದಿಷ್ಟಗೊಂಡು ಹರಿತವಾಯಿತು. ಶೆಟ್ಟಿಯನ್ನು ಆ ನೋಟಕ್ಕೆ ಬೇಟೆಯ ಪ್ರಾಣಿಯೆಂಬಂತೆ ಗುರಿಮಾಡಿ, “ಶೆಟ್ಟಿ ಎಷ್ಟ ಕೊಟ್ಟಾನ” ಎಂದು ಕೇಳಿದ.

“ಅವನೂ ಕೊಡಬೇಕಲ್ಲರಿ.”

- ಶೆಟ್ಟಿ ಸುಮ್ಮನಿರಲಾರದೆ “ಮಾರಾಜರೆಷ್ಟ ಹೇಳಿದರ ಅಷ್ಟ ಕೊಡೊಣ್ರಿ” ಅಂದ. ಈ ಮಾತಿನ ಅರ್ಥ ಬೇರೆ ದಾರಿ ಹಿಡಿಯಿತು. ಶೆಟ್ಟಿ ಹೇಳಿದ್ದು ನಾನು ಎಷ್ಟು ಕೊಡಬೇಕೆಂದು ಮಾರಾಜರು ಅಪ್ಪಣೆ ಕೊಡಿಸುತ್ತಾರೋ ಅಷ್ಟನ್ನು ಕೊಡುತ್ತೇನೆ ಎನ್ನುವ ಅರ್ಥದಲ್ಲಿ, ದೇಸಾಯಿಗಿದು ಸವಾಲೆಸೆದಂತೆನಿಸಿತು. ನಾನು ಕೊಟ್ಟಷ್ಟೇ ಶೆಟ್ಟಿ ಕೊಡುತ್ತಾನೆನ್ನಿಸಿ ತನ್ನನ್ನು ಸಮಾನವಾಗಿ ಗಣಿಸಿದನಲ್ಲಾ ಎಂದು ಉರಿಯ ತೊಡಗಿದ.

“ಅಂದರ ನಾವು ಕೊಟ್ಟಷ್ಟs ಕೊಡ್ತೀರಂಥಾಂಗಯ್ತು.”

- ಈ ಮಾತಿನ ಹಿಂದಿನ ನೋವು ಗೊತ್ತಾಗದೆ ಶೆಟ್ಟಿ “ಹೂ ಕೊಡೂಣ್ರಿ” ಅಂದ. ದೇಸಾಯಿ ಕಿಸೆಯಿಂದ ಮರ್ಯಾ ಕೊಟ್ಟಿದ್ದ ಅಷ್ಟು ಹಣ ತೆಗೆದು “ತೆಗೊ ಸಾವಿರ” ಎಂದು ಹೇಳಿ ಪಂಚನ ಕೈಗೆ ನೋಟಿನ ಕಂತೆಯಿಟ್ಟ! ಸಾವಿರವೆನ್ನುತ್ತಲೂ ಶೆಟ್ಟಿ ತಬ್ಬಿಬ್ಬಾಗಿ ದೇಸಾಯಿಯನ್ನೇ ನೋಡಿದ. ದೇಸಾಯಿ ಗೆದ್ದವನಂತೆ ಹೆಮ್ಮೆಯ ತೃಪ್ತಿಯಿಂದ ಮುಗುಳು ನಕ್ಕನಷ್ಟೆ. ಪಂಚರಿಗೆ ಅನಿರೀಕ್ಷಿತ ಆನಂದವಾಗಿ ಭಾವಪರವಶರಾಗಿ ಹೊಳಪುಳ್ಳ ಮಾತುಗಳಿಂದ ದೇಸಾಯಿಯನ್ನು ಹೊಗಳಿದರು. ಶೆಟ್ಟಿ ಕಂಗಾಲಾಗಿ ಕೂತ. ಅವನಿಗಿಂತ ನಾನು ಕಂಗಾಲಾಗಿದ್ದೆ. ಇನ್ನೆಲ್ಲಿಯ ದಿನಕಾರ್ಯೆ?

* * *

# ಅಧ್ಯಾಯ - ೧೬

ಅಂತೂ ಸಂಕ್ಷಿಪ್ತವಾಗಿಯಾದರೂ ದಿನಕಾರ್ಯ ಮಾಡಿದೆವು. ಒಂದು ಬೇಟೆ ಕಡಿಯಲಿಲ್ಲ, ಒಬ್ಬರನ್ನೂ ಆಮಂತ್ರಿಸಲಿಲ್ಲ. ಒಂದು ಕೋಳಿ ಕೊಯ್ದು ಇದ್ದುದರಲ್ಲಿಯೇ ದಿನಕಾರ್ಯ ಮಾಡಿ ಮುಗಿಸಿದೆವೆಂದು ಅನ್ನಿಸಿಕೊಂಡೆವು. ಸಿಂಗಾರೆವ್ವ ಈ ಬಡತನದ ದಿನಕಾರ್ಯದಿಂದ ಕೆಡುಕೆನಿಸಿಕೊಂಡಳು. ಹಿರಿಯ ದೊರೆಸಾನಿಗೆ ಎಡೆ ಮಾಡುವಾಗ ಕಣ್ಣೀರು ಸುರಿಸಿದಳು. ಏನು ಮಾಡುವುದು? ಬೇರೆ ದಿಕ್ಕಿರಲಿಲ್ಲ. ಸಾಲದ್ದಕ್ಕೆ ಕಾಗೆ ಪಿಂಡ ಮುಟ್ಟಿರಲೇ ಇಲ್ಲ. ಸಿಂಗಾರೆವ್ವ ಎಷ್ಟೋ ಹರಕೆ ಹೇಳಿಕೊಂಡರೂ, ದೇಸಾಯಿಯ ಮನಸ್ಸಿನಲ್ಲಿ ಮರೆಪ್ಪ ದೊಡ್ಡ ಗಾಯ ಮಾಡಿದ್ದನೆಂದು ತೋರುತ್ತದೆ. ದಿನಕಾರ್ಯದಲ್ಲಿ ಆತ ಆಸಕ್ತಿ ವಹಿಸಲೂ ಇಲ್ಲ, ಹೆಚ್ಚಿಗೆ ಮಾತಾಡಲೂ ಇಲ್ಲ. ಊಟ ಮಾಡುವಾಗಲೂ ಮುಂದಿನ ಎಡೆಯ ಮೇಲೆ ಅವನ ಗಮನವಿದ್ದಂತಿರಲಿಲ್ಲ. ಗೌಡ, ಗೌಡ್ತಿ ಚೆನ್ನಾಗಿಯೇ ಉಂಡರು. ಉಣ್ಣುವಾಗ ಗೌಡ ದೇಸಾಯಿಯನ್ನು ಮಾತಿಗೆಳೆಯಲು ಬಹಳ ಖಟಪಟಿ ಮಾಡಿದ. ದೇಸಾಯಿ ಮಾತ್ರ ಕೇಳಿದ್ದಕ್ಕೆಲ್ಲ ಹಾಹೂ ಎಂದು ಉತ್ತರಿಸಿ ಶಾಸ್ತ್ರಕ್ಕೆ ಒಂದೆರಡು ತುತ್ತು ತಿಂದು ಎದ್ದ. ಕೊನೆಗೆ ನಾನು ಮತ್ತು ಸಿಂಗಾರೆವ್ವ ಊಟಕ್ಕೆ ಕೂತೆವು. ನಮ್ಮ ಜೊತೆ ಗೌಡ್ತಿ ಇರಲಿಲ್ಲವಾದ್ದರಿಂದ ಈಗಲಾದರೂ ತುಸು ಮಾತಾಡಿ ಮನಸ್ಸು ಹಗುರ ಮಾಡಿಕೊಳ್ಳೋಣವೆಂದು ತನ್ನ ತವಕ. ಆದರೆ ಹೊರಗೆ ಕಣ್ಣೀರು ಇರಲಿಲ್ಲವಾದರೂ  ಒಳಗೆ ಆಕೆ ಆಳುತ್ತಿದ್ದಳು. ಹಿಂಡಿದ ಮುಖ ಸಪ್ಪೆಯಾಗಿ ಯಾವ ಕ್ಷಣವೂ ಅವಳು ದನಿ ಮಾಡಿ ಅಳುವಂತಿದ್ದಳು. ನಾನು ಅವಳೆದುರಿನಲ್ಲೇ ಓಡಾಡಿ ನೀಡುತ್ತಿದ್ದರೂ ನನ್ನ ಕಡೆ ನೋಡುತ್ತಿರಲಿಲ್ಲ. ಅವಳಿಗೆ ಬಹುಶಃ ಮಾತಾಡುವ ಮನಸ್ಸಿಲ್ಲವೆಂದು ಊಟಕ್ಕೆ ನೀಡಿ, ನಾನೂ ನೀಡಿಕೊಂಡು ಕೂತೆ. ಬಗ್ಗೆ ಮೊದಲನೇ ತುತ್ತನ್ನು ಬಾಯಲ್ಲಿ ಹಾಕಿಕೊಳ್ಳುತ್ತಿದ್ದಂತೆ ಆಕೆಯ ಎರಡೂ ಕಣ್ಣಿಂದ ಎರಡು ಹನಿ ಕಣ್ಣೀರು ತಟ್ಟೆಯಲ್ಲೇ ಟಪ್ ಟಪ್ ಎಂದು ಬಿದ್ದು, ಎಡಗೈಯಿಂದ ಸೀರೆ ಸೆರಗು ತಗೊಂಡು ಮುಖ ಮುಚ್ಚಿಕೊಂಡು ಬಿಕ್ಕಿಬಿಕ್ಕಿ ಅಳತೊಡಗಿದಳು. ಸಮಾಧಾನ ಮಾಡುವುದಕ್ಕೆ ನನ್ನ ಬಳಿ ಶಬ್ದಗಳೇ ಇರಲಿಲ್ಲ. ಆದರೂ ಉಪಚಾರಕ್ಕಾಗಿ "ಉಣ್ಣೂ ಎಡೀ ಮುಂದ ಕುಂತು ಅಳಬಾರದೆವ್ವ" ಅಂದೆ. ಈ ಮಾತು ಅವಳಿಗೆ ಮುಟ್ಟಲೇ ಇಲ್ಲ. ಆ ಮೇಲೆ ನಾನು ಮಾತಾಡುವ ಗೋಜಿಗೆ ಹೋಗಲೇ ಇಲ್ಲ. ಸುಮ್ಮನೇ ಅವಳನ್ನೆ ನೋಡುತ್ತ ಕುಳಿತೆ. ಅತ್ತು ಅತ್ತು ಉಣ್ಣಲಾರದೆ ಮುಂದಿನ ಎಡೆ ಸರಿಸಿ ಕೈ ತೊಳೆದುಕೊಂಡು ಅಂತಸ್ತಿಗೆ ಹೋದಳು. ಆದರೆ ನನಗೆ ಹಸಿವಾಗಿತ್ತು. ಊಟ ಮಾಡಿ ನಿಧಾನವಾಗಿಯೇ ಕಸಮುಸುರೆ ತೊಳಿದಿಟ್ಟು ಮಲಗಲಿಕ್ಕೆ ಹೊರಟೆ.

ಹೋಗುವ ಮುನ್ನ ಒಂದು ಸಲ ದರಬಾರಿನಲ್ಲಿ ಹಣಿಕಿ ಹಾಕಿದೆ. ಅದು ಎಂದಿಗಿಂತ ಇಂದು ಭಿಕೋ ಎನ್ನುತ್ತಿತ್ತು. ಪಟಾಂಗಳದಲ್ಲಿ ಪ್ರಶಾಂತವಾದ ಬೆಳದಿಂಗಳಿದ್ದು ಅದರ ಮಂದ ಬೆಳಕು ಪಡಸಾಲೆಗೂ ಹರಡಿತ್ತು. ಕರ್ರಗಿನ ಕಂಭಗಳು ಗುಂಭ ಗಂಭೀರವಾಗಿ ಬೆಳ್ದಿಂಗಳಿಗೆ ಬೆರಗಾಗಿ, ಸ್ತಬ್ಧವಾಗಿರುವಂತೆ, ಇಲ್ಲವೆ ಇಲ್ಲಿ ಇನ್ನೇನಾದರೂ ನಡೆಯುತ್ತದೆಯೋ ನೋಡೋಣವೆಂದು ಹೊಂಚಿ ನಿಂತಂತೆ ಕಾಣಿಸುತ್ತಿದ್ದವು.

ಪಟಾಂಗಳವೆಲ್ಲ ಬಯಲು ಹೊಲಗಳಾಗಿ ಈ ಕಂಬಗಳೆಲ್ಲಾ ಹುಣಿಸೇಮರದ ಬೊಡ್ಡೆಗಳಾದರೆ... ಒಂದೊಂದು ಮರಕ್ಕೆ ಬಾವಲಿಯ ಹಾಗೆ ಎಷ್ಟೊಂದು ಭೂತಗಳು ನೇತು ಬಿದ್ದಿರುತ್ತವೆಯೋ! ಅಲ್ಲೇನಾದರೂ ನರಸಂಚಾರವಾದರೆ ಆಗಲೂ ಅವು ಸುಮ್ಮನೆ ನೇತಾಡುತ್ತಿವೆಯೆ? ಥರಥರದ ರೂಪ ಆಕಾರ ತಕ್ಕೊಂಡು ಆ ಮನುಷ್ಯನ ಸುತ್ತ ಸುಳಿಯಬಹುದು. ನಾವೆಂದೂ ಕೇಳರಿಯದ ಸಪ್ಪಳ ಮಾಡಬಹುದು. ಕಿರಚಬಹುದು. ಕೇಕೆ ಹಾಕಬಹುದು, ಹುಣಸೇಮರದ ಬೊಡ್ಡೆಗಳೇ ಸುತ್ತ ನಡೆದಾಡುವ ಹಾಗೆ ಮಾಡಬಹುದು.. ಅವ್ವಯ್ಯಾ, ಹಿಂಗ್ಯಾಕ ವಿಚಾರ ಮಾಡುತ್ತಿದ್ದೇನೆಂದು ಹೊಯ್ಕಾಯ್ತು. ಇದಿನ್ನು ಸಾಕೆಂದು ತಿರುಗುವುದರಲ್ಲಿದೆ. ಕಂಬಳ ಬಳಿಯೊಂದು ನೆರಳು ಸುಳಿದಂತಾಗಿ ಗಪ್ಪಂತ ನಿಂತೆ. ನೆತ್ತರು ನೆತ್ತಿಗೇರಿದಂತಾಗಿ ಒಮ್ಮೆಲೆ ಮೈ ತಣ್ಣಗಾಯ್ತು. ಆ ನೆರಳಿನ ಕೈಯಲ್ಲಿ ಕೋಲಿತ್ತು. ಕೋಲಲ್ಲ, ಬಂದೂಕಿತ್ತು. ಅರೆ ನಮ್ಮ ದೇಸಾಯಿ! ಬಂದೂಕು ಹಿಡಿದುಕೊಂಡು ಕಾವಲು ಮಾಡುತ್ತಿದ್ದಂತೆ - ಆ ಕಡೆಯಿಂದ ಈ ಕಡೆಗೆ ಅಲೆದಾಡುತ್ತಿದ್ದ. ಸದ್ಯ ಜೀವ ಹೋಗುವುದರೊಳಗೇ ದೇಸಾಯಿಯೆಂದು ಗೊತ್ತಾಯ್ತಲ್ಲ, ಅಂದುಕೊಂಡೆ. ಅದ್ಯಾಕೆ ಹೀಗೆ ಒಬ್ಬನೇ ಅಲೆದಾಡುತ್ತಿರಬಹುದೆಂದು ಬಗೆಹರಿಯಲಿಲ್ಲ. ಮರ್ಯಾನಿಗೋಸ್ಕರ ಕಾಯುತ್ತಿರಬಹುದೇ? ಹಾಗೆ ಕಾದದ್ದೇ ಆದರೆ ಅದು ಅಪಾಯಕಾರಿಯೆಂದು ಅನ್ನಿಸಿ, ಗಾಬರಿಯಾಯ್ತು. ಮರೆಪ್ಪ ಬಳಿ ಕದ್ದಿರಬಹುದೆಂದು ಹೇಳಿದವಳು ನಾನು ತಾನೆ? ಅವನು

ಯಾವಾಗೆಂದರೆ ಆವಾಗ ಪ್ರತ್ಯಕ್ಷನಾಗಿ ಯಾವುದೆಂದರೆ ಆ ಅಪಾಯ ಮಾಡಲಿಕ್ಕೂ ಹೇಸಲಾರ. ಸ್ವಥಾ ತಂದೆ ಒದೆಯ ಬಂದತೇ ನನ್ನನ್ನು ಬಿಡಿಸಿಕೊಳ್ಳಲಾರದ ದೊರೆಸಾನಿ, ಇನ್ನು ಮರೆಪ್ಪ ಬಂದು ಒದ್ದರೆ ರಕ್ಷಣೆ ಕೊಡಬಲ್ಲಳೆ? ನಾನು ತಪ್ಪು ಮಾಡಿದೆನೆಂದು ಅನ್ನಿಸಿತು. ಆದರೆ ನನ್ನನ್ನು ಪಾರು ಮಾಡಿಕೊಳ್ಳಲು ಬೇರೆ ದಾರಿಗಳಿರಲಿಲ್ಲ. ಇನ್ನು ಮೇಲೆ ಇಲ್ಲಿರುವುದೇ ಬೇಡವೆಂದು ತೋರಿತು. ಆದರೆ ಹಾಗೆಂದು ನಂದಗಾವಿಂಗೆ ಹೋಗುವುದೂ ಸಾಧ್ಯವಿರಲಿಲ್ಲ. ಈ ಎಲ್ಲ ಚಿಂತೆಗಳಿಂದ ಮನಸ್ಸು ಗಾಸಿಯಾಗಿ ಅಂತಸ್ತಿಗೆ ಹೋದೆ.

ನಾನು ಹೋಗುವಷ್ಟರಲ್ಲಿ ಸಿಂಗಾರೆವ್ವ ಮತ್ತು ಗೌಡ್ತಿ ಮಲಗಿ ನಿದ್ರಿಸುತ್ತಿದ್ದರು. ದೀಪ ದೊಡ್ಡದು ಕೂಡ ಮಾಡದೆ ಇದ್ದ ಮಂದ ಬೆಳಕಿನಲ್ಲೇ ನನ್ನ ಹಾಸಿಗೆ ಹಾಸಿಕೊಂಡು ಮಲಗಿದೆ. ನಿದ್ದೆ ಬರಲೇ ಇಲ್ಲ. ದೇಸಾಯಿ ಬಂದೂಕ ಹಿಡಿದು ಅಲೆದಾಡುತ್ತಿರುವುದನ್ನು ಮಲಗಿದ್ದ ದೊರೆಸಾನಿಯನ್ನೆಬ್ಬಿಸಿ ಹೇಳೋಣವೆಂದುಕೊಂಡೆ. ಅಥವಾ ಈಗ ಆ ಕಂಬಗಳ ಮಧ್ಯೆ ಇದ್ದಕ್ಕಿದ್ದಂತೆ ಸಿಂಗಾರೆವ್ವ ಪ್ರತ್ಯಕ್ಷಳಾದಳೆನ್ನೋಣ. ದೇಸಾಯಿ ಏನು ಮಾಡಬಹುದು? ಛೀ, ಅವರಿಬ್ಬರೂ ಗಂಡ ಹೆಂಡಿರಂತೆ ಕಾಣುವುದೇ ಇಲ್ಲ. ಮಧ್ಯಾಹ್ನವೇ ಮುದುಕಿ ನನ್ನನ್ನು ನಿಲ್ಲಿಸಿ ಕೇಳಿತ್ತು "ಏನಃ ಶೀನಿಂಗೀ, ಬಂದಾಗನಿಂದ ನೋಡಿದೆ. ಸಿಂಗಾರೆವ್ವ ದೇಸಾಯಿ ಕೂಡಿ ಮಲಗಾಣಿಲೇನು?" "ನೀವು ಬಂದೀರಲ್ಲ, ಅದಕ್ಕ ಬಿಟ್ಟಾರೆ"ಂದು ಸುಳ್ಳು ಹೇಳಿದ್ದೆ. ಅಥವಾ ಆಗಳೆ ದೇಸಾಯಿಯನ್ನು ನೋಡುತ್ತ ದರ್ಬಾರ ಬಳಿ ನಿಂತಿದ್ದೆನಲ್ಲ, ಆಗೇನಾದರೂ ಹಿಂದಿನಿಂದ ಮರ್ಯಾ ಬಂದಿದ್ದರೆ... ಬಹುಶಃ ನನ್ನನ್ನು ಹೊಡೆಯುತ್ತಿದ್ದ, ಒದೆಯುತ್ತಿದ್ದ, ಕತ್ತು ಹಿಸುಕಿ ಕೊಲ್ಲುತ್ತಿದ್ದ. ಅಷ್ಟು ಹಿಂಸೆ ಕೊಟ್ಟಿದ್ದರೂ ನಾನು ಒದರುತ್ತಿರಲಿಲ್ಲ ಎಂದುಕೊಂಡೆ. ಅಥವಾ ಅದ್ಯಾಕೆ ಈ ದಿನ ಇಂಥ ವಿಚಾರಗಳು ತಲೆಯೊಳಗೆ ಸುತ್ತಾಡುತ್ತಿವೆ?! ಎನ್ನಿಸಿ ಆಶ್ಚರ್ಯವಾಯಿತು.

ಅಷ್ಟರಲ್ಲಿ ರಾತ್ರಿಯ ಎದೆಗೆ ನಟ್ಟಂತೆ - ಧಡಂ ಎಂದು ಗುಂಡು ಹಾರಿದ ಭಾರೀ ಸದ್ದು ಕೇಳಿಸಿತು. ತಕ್ಷಣ ಎದ್ದು ಕೂತೆ. ಸಿಂಗಾರೆವ್ವನೂ ಗಾಬರಿಯಾಗಿ ಎದ್ದಳು. ಪರಸ್ಪರ ಮುಖ ನೋಡಿಕೊಂಡೆವು. ಯಾರಿಗೆ ಗುಂಡು ಹಾರಿಸಿದನೋ, ಮರ್ಯಾ ಬಂದಿದ್ದನೋ, ಅವನಿಗೆ ಗುಂಡು ತಾಗಿತೋ - ಎಂದು ಎದೆ ನಡುಗಿತು.

"ದೇಸಾಯರಾಗಲೇ ಬಂದೂಕ ಹಿಡಕೊಂಡು ದರ್ಬಾರದಾಗ ಅಡ್ಡಾಡತಿದ್ದರೆವ್ವಾ" ಅಂದೆ. ಇಬ್ಬರೂ ಅವಸರದಿಂದ ಕೆಳಗೋಡಿ ಬಂದೆವು.

ಬಂದು ನೋಡಿದರೆ ಪಟಾಂಗಳದ ಬೆಳದಿಂಗಳಲ್ಲಿ ದೇಸಾಯಿ ಬಂದೂಕು ಹಿಡಕೊಂಡು ಓಡಾಡುತ್ತಿದ್ದ. ತೇಗುಸಿರಿನಲ್ಲೇ ನಾನು "ಏನ್ರೆಪ್ಪ?" ಅಂದೆ. "ಅಕಾ ಹಾವು" ಅಂದವನೇ ಆ ದಿಕ್ಕಿಗೆ ಓಡಿಹೋಗಿ ಗುರಿಹಿಡಿದ. ಅಲ್ಲಿ ದೊಡ್ಡ ಸರ್ಪವೊಂದು ಹೆದರಿ ಬಚ್ಚಿಟ್ಟುಕೊಳ್ಳುವುದಕ್ಕೆ ಪೊಳ್ಳು ಸ್ಥಳ ಸಿಕ್ಕದೆ ಗೋಡೆಗುಂಟ ರಕ್ಷಣೆಗಾಗಿ ಹರಿದಾಡತೊಡಗಿತ್ತು. ದೇಸಾಯಿ ಓಡಿ ಹೋಗಿ ಅದರೆದುರು ನಿಂತೊಡನೆ ಸಿಂಗಾರೆವ್ವ ಗಾಬರಿಯಿಂದ ತಾನು ಓಡಿ "ಅಯ್ಯಯ್ಯೋ ದೂರ ಸರೀರಿ" ಎನ್ನುತ್ತ ದೇಸಾಯಿಯನ್ನು ತಬ್ಬಿಕೊಂಡು ಹಿಂದೆ ಸರಿಸಿದಳು. ದೇಸಾಯಿ "ತಡೀರಿ ತಡೀರಿ" ಎಂದು ಮತ್ತೆ ಮತ್ತೆ ಗುರಿ ಹಿಡಿಯುತ್ತಿದ್ದ. ಹಾವು ಮುಂದೆ ಹೋಗಲು ದಾರಿ ಕಾಣದೆ ಬೊಗಸೆಯಗಲದ ಹೆಡೆ ತೆಗೆದು ಎಡ, ಬಲ ಎರಡು ಸಾರಿ ಆಡಿಸಿತು. ಅದರ ಮೇಲೆ ಶುಭ್ರವಾದ ಬೆಳದಿಂಗಳು ಬಿದ್ದಿತ್ತಲ್ಲ. ಮಿಂಚಿನ ವಕ್ರಗೆರೆ ಚಂಚಲವಾಗಿ ಸಳಸಳ ಸಂಚರಿಸಿದಂತೆ ಕಾಣುತ್ತಿತ್ತು. ದೇಸಾಯಿ ಈ ಬಾರಿ ಅದರ ಹೆಡೆಗೇ ಗುರುಹಿಡಿದ. "ಅಯ್ಯೋ, ಬ್ಯಾಡ್ರಿ ಕೊಲ್ಲಬ್ಯಾಡಂತ ಹೆಡಿ ಆಡಿಸಾಕ ಹತ್ತೇತಿ!" ಎಂದು ಸಿಂಗಾರೆವ್ವ ಮತ್ತೆ ದೇಸಾಯಿಯ ರಟ್ಟೆ ಹಿಡಿದೆಳೆದಳು. ಎಳೆತಕ್ಕೆ ದೇಸಾಯಿ ಹಿಂಜೋಲಿ ಹೊಡೆದು ಹಿಂದೆ ಸರಿದ. ಹಾವಿಗೆ ಅಷ್ಟೇ ಸಾಕಾಗಿತ್ತು. ಗೋಡೆಯ ಸಂದಿಯಗುಂಟ ಹರಿದು ದೊಡ್ಡ ಕಲ್ಲಿನ ಕೆಳಗೆ ನುಸುಳಿ ಮರೆಯಾಯಿತು.

ಅಷ್ಟರಲ್ಲಿ ಗೌಡ ಗೌಡ್ತಿ ಎದ್ದು ಬಂದಿದ್ದರು. ಕಾಳ್ಯಾ ಬಂದಿದ್ದ. ಕಲ್ಲೆತ್ತಿ ಅದನ್ನು ಹೊಡೆದೇ ಬಿಡೋಣವೆಂದು ಕಾಳ್ಯಾ ಹೊರಟಿದ್ದ. "ಬ್ಯಾಡಪಾ ಬ್ಯಾಡ" ಎಂದು ಸಿಂಗಾರೆವ್ವ ಹೇಳುತ್ತಲೂ ಸುಮ್ಮನಾದ. ತೊಲೆಬಾಗಿಲು ಬಡಿಯುತ್ತ "ಮಾರಾಜರಃ ಮಾರಜರಃ" ಎಂದು ಊರೊಳಗಿನ ಒಂದಿಬ್ಬರು ಹೊರಗಿನಿಂದ ಕೂಗುತ್ತಿದ್ದರು. "ಏನಿಲ್ಲ ಹಾವು, ಬಂದಿತ್ತಷ್ಟೆ" ಎಂದು ಒಳಗಿನಿಂದಲೇ ಹೇಳಿ, ಬಾಗಿಲು ತೆರೆಯದೆಯೇ ಅವರನ್ನು ನಿವಾರಿಸಿದರು.

ಮಾರನೇ ದಿನ ಮುಂಜಾನೆ ನಾವಿನ್ನೂ ಸೂರ್ಯನ ಮುಖ ನೋಡಿರಲಿಲ್ಲ. ಗೌಡ ಜಳಕ ಮಾಡಿದ್ದ. ದೇಸಾಯಿ ಎದ್ದು ಆಕಳಿಸುತ್ತ ಇನ್ನೂ ಹಾಸಿಗೆಯಲ್ಲೇ ಕುಂತಿದ್ದ. ಗೌಡ್ತಿ ಅಡಿಗೆ ಮನೆಯಲ್ಲಿದ್ದಳು. ಸಿಂಗಾರೆವ್ವ ಇನ್ನೂ ಕೆಳಗಿಳಿದು ಬಂದಿರಲಿಲ್ಲ. ಮುಂಜಾನೆಯ ತಂಪುಗಾಳಿಯಲ್ಲಿ ಅಂದ್ಯಾಕೋ ತುಸು ಚಳಿಯಿದ್ದು ಮೈಗೆ ಹಿತವಾಗಿತ್ತು. ಅಂಗಳದಾಚೆಯ ಆಲದ ಮರದಲ್ಲಿ ಗುಬ್ಬಿಗಳು ಚಿಲಿಪಿಲಿಗುಟ್ಟುತ್ತಿದ್ದವು. ಸಗಣಿ ಬಳಿದು ತಿಪ್ಪಗೆ ಚೆಲ್ಲಿ ಬರಹೋಗಿದ್ದ ಕಾಳ್ಯಾ ಇನ್ನೂ ಬಂದಿರಲಿಲ್ಲ. ನಾನು ತೊಲೆಬಾಗಿಲು ಅಗಲವಾಗಿ ತೆರೆದು ದರ್ಬಾರು ಗುಡಿಸಬೇಕೆಂದು ಕಸಬರಿಗೆ ಹಿಡಿದುಕೊಂಡು ಬರುತ್ತಿದ್ದೆ. ಅಷ್ಟರಲ್ಲಿ ಹಳಬ ಬಂದ. ಕಟ್ಟೆಯ ಕೆಳಗೇ ನಿಂತು "ಹಳಬ ಬಂದಾನಂತ ಹೇಳವಾ" ಅಂದ. ಅಲ್ಲೇ ಕಸಬರಿಗೆ ಚೆಲ್ಲಿಹೋಗಿ ದೇಸಾಯಿಗೆ ಹೇಳಿದೆ. ಅವನು ಬನಿಯನ್ನು, ಧೋತ್ರದಲ್ಲೇ ಆಕಳಿಸುತ್ತ ಹೊರಬಂದು "ಯಾಕಲೇ?" ಅಂದರು.

"ಪೊಲೀಸರು ಬಂದಾರ, ಕರ್ಯಾಕ ಹತ್ಯಾರ್ರೀ ಮಾರಾಜ" ಅಂದ.

ದೇಸಾಯಿಗೆ ದಿಗಿಲಾಯ್ತು, ಹುಬ್ಬು ಗಂಟಿಕ್ಕಿ "ಪೊಲೀಸರಾ?" ಅಂದ.

"ಹೌಂದ್ರಿ ಮಾರಾಜ."

"ಯಾಕ ಬಂದಾರ?"

"ಗೊತ್ತಿಲ್ಲರಿ ಮಾರಾಜ?"

"ನಮಗೇನ ಮಾಡಂದಿ?"

"ಕರ್ಯಾಕ ಹತ್ಯಾರೀ, ಮಾರಾಜ?"

"ಯಾರನ್ನ, ನಮ್ಮನ್ನ?"

"ಹೌಂದ್ರಿ, ಮಾರಾಜ."

ದೇಸಾಯಿ ಇಡೀ ಮುಖವನ್ನು ಕಗ್ಗಂಟಿನಂತೆ ಬಿಗಿದು ಹಣಗಲದಿಂದ ಹುಬ್ಬೇರಿಸಿ ಹಿಂದಿರುಗುವಷ್ಟರಲ್ಲಿ ಒಳಗಿನಿಂದ ಗೌಡ ಬಂದವನೇ, ಹಳಬನನ್ನು ಕುರಿತು,

"ಬಂದಾರ ಹೌಂದಲ್ಲೋ? ಬಂದಿವಿ, ನೀ ಮುಂದ ನಡಿ" ಎಂದು ಹೇಳಿ ವನು ತೊಲೆಬಾಗಿಲು ದಾಟುವ ತನಕ ಒಡೆದು,

"ಬರ್ರಿ ದೇಸಾಯರ, ಹ್ಯಾಂಗೂ ಪೊಲೀಸರು ಬಂದಾರಲ್ಲಾ, ಇನ್ನೆಲ್ಲಿ ಆ ಮಗಾ ಅಡಗತಾನ ನೋಡೋಣು" ಎಂದು ಹಲ್ಲು ಕಡಿದು ಸಿಟ್ಟು ಪ್ರದರ್ಶಿಸಿದ. ದೇಸಾಯಿಗಿನ್ನೂ ಮಾತಿನ ಅರ್ಥವಾಗಿರಲಿಲ್ಲ.

"ಪೊಲೀಸರು, ಯಾಕ ಬಂದಾರಂದ್ರಿ?" ಅಂದ.

"ಅದs ನಾ ನಿನ್ನಿ ಹೋಗಿ ನಿಮ್ಮ ಪರವಾಗಿ ಕಂಪ್ಲೇಂಟ್ ಕೊಟ್ಟು ಬಂದಿದ್ದೆ, ಅದಕ್ಕ ಬಂದಾರ, ಬರ್ರಿ, ಹೋಗಿ ನಡೆದದ್ದೆಲ್ಲಾ ಹೇಳೋಣು"

'ಮರ್ಯಾನ ವಿಚಾರ ಹೌಂದಲ್ಲೋ ನೀವು ಮಾತಾಡೋದು?"

“ಹೌಂದ್ರಿ”

ದೇಸಾಯಿಯ ಮುಖ ಒಮ್ಮೆಲೆ ಕಪ್ಪಿಟ್ಟಿತು.

“ನಮಗ ತಿಳಿಸದೆ ನೀವು ಪೊಲೀಸರಿಗಿ ಯಾಕ ಹೇಳಿದಿರಿ?”

“ನಿನ್ನಿ ಮಾತಾಡಿಕೊಂಡಿದ್ದಿವಲ್ಲ, ದಿನಕಾರ್ಯ ಮುಗೀಲಿ, ನೋಡೋಣಂತ ನೀವs ಹೇಳಿದ್ದಿರಿ.”

“ಹಾಂಗಂದ್ರ ಹೋಗಿ ಹೇಳೇ ಬಿಡೋದೇನ್ರಿ, ನಾವಿನ್ನ ಮರ್ಯಾನ ಜೋಡಿ ಮಾತಾಡಿ ವಿಚಾರ ಮಾಡೋಣಂತ ಇದ್ದಿವಿ”

“ಛೇ! ನೀವೊಬ್ಬರು, ಅವಗ ನಿಮ್ಮ ಅಂಜಿಕಿ ಇದ್ದಿದ್ದರ ನಿಮ್ಮ ಅರಮನ್ಯಾಗ ಹಿಂದ ಕದ್ಯಾಕಾಗತಿತ್ತೇನ್ರಿ? ಕಳ್ಳತನ ಮಾಡ್ಯಾನಂದ ಮ್ಯಾಲ ಅವಗೊಮ್ಮಿ ಬುದ್ಧಿ ಕಲಿಸಬೇಕಂತೀರೋ ಬ್ಯಾಂಡತಿರೋ? ನೀವು ಬಂದು ಚಾವಡ್ಯಾಗ ಸುಮ್ಮನ ಕುಂದರ್ರಿ. ಮುಂದಿಂದ ನಾ ಎಲ್ಲಾ ನೋಡಿಕೋತಿನಿ. ಆ ಪೋಜುದಾರ ನನ್ನ ದೋಸ್ತಿ, ನೀವೇನೂ ಕಾಳಜಿ ಮಾಡಬ್ಯಾಡ್ರಿ.”

ವಿಪರೀತ ಕಳವಳ, ಅವಮಾನಗಳೆಲ್ಲಾ ಒಟ್ಟಾಗಿ ಆದಂತೆ ದೇಸಾಯಿ ಸೊಟ್ಟ ಮುಖ ಮಾಡಿದ. ಅದೆಲ್ಲಾ ಕೋಪಕ್ಕೆ ತಿರುಗಿ, ಮರ್ಯಾನ ಮೇಲಿದ್ದ ಕೋಪವೂ ಈಗ ಗೌಡನ ಮೇಲೆ ತಿರುಗಿದವು. ತಮ್ಮ ಅರಮನೆಯ ವ್ಯವಹಾರದಲ್ಲಿ ಗೌಡ ಈ ರೀತಿ ತನ್ನ ಹೊಲಸು ಮೂಗು ಹಾಕುವುದು ಅವನ ಮನಸ್ಸಿಗೇ ಬರಲೇ ಇಲ್ಲ. ಉಕ್ಕಿ ಬರುತ್ತಿದ್ದ ಸಿಟ್ಟನ್ನು ನಿಯಂತ್ರಿಸಿಕೊಂಡು,

“ನೋಡ್ರಿ ಮಾವ, ಪೊಲೀಸು ಗೀಲೀಸು ಅಂದರೆ ನಮಗಾಗಿ ಬರೋಣಿಲ್ಲ. ಅದೇನ ಹೇಳಿಕೊಳ್ತಿರೋ ನೀವs ಹೇಳಿಕೊಳ್ರಿ.ಈ ಊರಾಗಂತೂ ಕಳುವಾಗೋದು ಶಕ್ಯs ಇಲ್ಲ. ಕಳುವಾದರೂ ಪೊಲೀಸರಿಗೂ ನಮಗೂ ಆಗಾಣಿಲ್ಲ, ಆಯ್ತು ಹೇಳೀರಲ್ಲ ಹೋಗ್ರಿ, ಕಳವಾದ ಬಳಿ ಸಿಕ್ಕಾವಂತ ಹೇಳಿ ಬರ್ರಿ.”

“ಅಲ್ಲರೀ ದೇಸಾಯರ…..”

“ಅಲ್ಲರೀ ಬ್ಯಾಡ, ಪಲ್ಲರೀ ಬ್ಯಾಡ, ಹೋಗಿ ನೀವಿಷ್ಟ ಹೇಳಿಬರ್ರಿ”

“ಇದರಾಗ ನನ್ನ ಹಿತ ಏನೈತ್ರಿ ದೇಸಾಯರ?”

“ನಮ್ಮ ಹಿತ ಅಂತೂ ಖಂಡಿತ ಇಲ್ಲ.”

– ಎಂದು ಸ್ಪಷ್ಟವಾಗಿ ಹೇಳಿ ಅರ್ಧ ಗೌಡನ ಅಧಿಕ ಪ್ರಸಂಗತನಕ್ಕೆ, ಅರ್ಧ ತನ್ನ ನಿಸ್ಸಹಾಯಕತೆಗೆ ಉಗುಳಿಕೊಂಡಂತೆ “ಛೇ!” ಅಂದ. ಅಂದು, ಹಿಂದೆ ಕೈಕಟ್ಟಿಕೊಂಡು ಅತ್ತಿತ್ತ ಅಡ್ಡಾಡತೊಡಗಿದ. ತನ್ನ ಮುಂಜಾಗರೂಕತೆಗಾಗಿ ದೇಸಾಯಿಯಿಂದ ಭೇಷ್ ಅನ್ನಿಸಿಕೊಳ್ಳಬೇಕೆಂದಿದ್ದನೋ, ಅಥವಾ ದೇಸಾಯಿ ತನ್ನ ಮಾತು ತೆಗೆದು ಹಾಕಲಾರನೆಂಬ ಆತ್ಮ ವಿಶ್ವಾಸಕ್ಕೆ ಘಾತವಾಯಿತೆಂದೋ ಏನೋ ಗೌಡನಿಗೆ ನಿರಾಸೆಯಾಗಿ ಮುಖ ಪೆಚ್ಚಾಯಿತು. ಅಲ್ಲೇ ಬಾಗಿಲ್ಲಿ ಇದನ್ನೆಲ್ಲ ಕೇಳುತ್ತ ನಿಂತಿದ್ದ ಗೌಡ್ತಿಯ ಕಡೆ ಮುಖ ಮಾಡಿ “ನೀನಾದರೂ ಬುದ್ಧಿ ಹೇಳ” ಎಂಬಂತೆ ನೋಡಿದ. ಇದೇ ಸಮಯವೆಂದು ನಾನು ಅಂತಸ್ತಿಗೆ ಓಡಿಹೋದೆ.

ಅಲ್ಲಿ ಸಿಂಗಾರೆವ್ವ ಇರಲಿಲ್ಲ. ಜಳಕಕ್ಕೆ ಹೋಗಿರಬೇಕೆಂದುಕೊಂಡು ತಿರುಗಿ ಬರುತ್ತಿದ್ದೆ. ಸಿಂಗಾರೆವ್ವನೇ ಜಿನೆಯೇರಿ ಬರುತ್ತಿದ್ದಳು. ಮುಖ ಕಳೆಗುಂದಿತ್ತು. ಕಾಲಲ್ಲಿ ಶಕ್ತಿ ಕೂಡ ಇರಲಿಲ್ಲ. ತುದಿ ಮೆಟ್ಟಿಲ ಬಳಿ ನಿಂತು ನನ್ನ ಕೈಹಿಡಿದೇ ಒಳಕ್ಕೆ ಬಂದಳು. ಬಂದವಳೇ “ಶೀನಿಂಗೀ,

ಮರ್ಯಾ ಕೊಟ್ಟಿಗ್ಯಾಗ ನಿಂತಿದ್ದ" ಎಂದಳು. ನನ್ನೆದೆ ಧಸಕ್ಕನೆ ಕುಸಿಯಿತು, ಇದಕ್ಕೆಲ್ಲ ನಾನೇ ಕಾರಣವೆಂದು ಅವನಿಗೆ ತಿಳಿಯುವುದು ತಡವಾಗಲಿಕ್ಕಿಲ್ಲ. ಒಮ್ಮೆ ತಿಳಿದರಾಯ್ತು. ಅವನ ಕೋಪಕ್ಕೆ ಗುರಿಯಾಗುವವರು ಇಬ್ಬರೇ, ನಾನು ಮತ್ತು ಗೌಡ, ಅವನು ಒಮ್ಮೆ ಕೋಪಗೊಂಡರೆ ಮನುಷ್ಯರಲ್ಲಿ ಇರುವುದೇ ಇಲ್ಲ. ಬಾಯೊಣಗಿ ಹೋಯ್ತು.

"ಏನಂದ ಎವ್ವಾ?" ಅಂದೆ.

"ನನ್ನ ಹಾಟ್ಯಾ ಮರೀಗಿ ನಿಂತ ಅವರಿಬ್ಬರು ಮಾತಾಡೋದನ್ನ ಕೇಳ್ತಾ ಇದ್ದ. ನಮ್ಮಪ್ಪ ಮತ್ತ ದೇಸಾಯಿ ಏನೇನ ಮಾತಾಡಿದರು?"

ಅದನ್ನೆಲ್ಲ ವಿವರವಾಗಿ ಹೇಳುವಷ್ಟು ಶಕ್ತಿ ನನ್ನಲ್ಲಿರಲಿಲ್ಲ.

"ಮರ್ಯಾನ ಹಿಡ್ಯಾಕ ಪೊಲೀಸರು ಬಂದಾರೆವ್ವ" ಅಂದೆ.

ಪೊಲೀಸರೆಂದೊಡನೆ ಇವಳ ಮುಖ ಇದ್ದದ್ದೂ ವಿವರ್ಣವಾಯಿತು.

"ಪೊಲೀಸರಾ!" ಎಂದು ತಂತಾನೇ ಅಂದುಕೊಂಡು ಕಣ್ಣು ಅಗಲಗೊಳಿಸಿ, ಎರಡೂ ಕೈ ಎದೆಯ ಮೇಲಿಟ್ಟುಕೊಂಡು ಹಾಗೇ ಹಾಸಿಗೆಯ ಮೇಲೆ ಕುಸಿದಳು. ಅವಳು ತುಟಿ ಒಣಗಿ ಕಂಪಿಸುತ್ತಿದ್ದವು. "ಶೀನಿಂಗೀ ದೇಸಾಯರ್ನ ಕರಿ" ಎಂದಳು.

ಕೆಳಗೋಡೀ ದೇಸಾಯರನ್ನು ಕರೆದೆ. ಗೌಡ ಇರಲಿಲ್ಲ. ಚಾವಡಿಗೆ ಪೊಲೀಸರಿದ್ದಲ್ಲಿಗೆ ಹೋಗಿದ್ದನೋ ಏನೋ. ದೇಸಾಯಿ ಕಂಡ ತಕ್ಷಣವೇ ಬಂದ. ಅವನ ಬೆನ್ನ ಹಿಂದೆ ನಾನೂ ಬಂದು ದೂರದಲ್ಲಿ ನಿಂತುಕೊಂಡೆ. ಸಿಂಗಾರೆವ್ವ ಓಡಿಹೋಗಿ ದೇಸಾಯರ ಎರಡೂ ಕೈ ಹಿಡಿದುಕೊಂಡು, ಹೆದರಿದ ಮಗು ಎತ್ತರದ ದನಿಯಲ್ಲಿ ಮಾತಾಡುವಂತೆ "ನೋಡ್ರಿ, ನೀವು ಇಂದ ಹೊರಗ ಹೋಗೂದು ಬ್ಯಾಡ. ಹೋದರ ನನ್ನಾಣಿ ಆಗೇತಿ ನೋಡ್ರಿ ಮತ್ತ. ಇಲ್ಲೇ ಮಲಗಿ ಬಿಡ್ರಿ. ಅಪ್ಪಿತಪ್ಪಿ ಹೋದರ ನನ್ನನ್ನ ಕೊಂದು ರಕ್ತಾ ಕುಡಧಾಂಗ ಅಗತೈತಿ ನೋಡ್ರಿ" ಎಂದು ಒಂದೇ ಉಸಿರಿನಲ್ಲಿ ಹೇಳಿಬಿಟ್ಟಳು. ದೇಸಾಯಿಗೆ ಹೋಯ್ಯಾಯ್ತು. ಹುಬ್ಬು ಗಂಟಿಕ್ಕಿ ಅವಳನ್ನೇ ನೋಡುತ್ತ "ಅದ್ಯಾಕ" ಎಂದು ಏನೋ ಹೇಳಬೇಕೆಂಬಷ್ಟರಲ್ಲಿ ಸಿಂಗಾರೆವ್ವ "ಈ ಸ್ತರೆ ನೀವು ನನ್ನ ಮಾತ ಕೇಳಾಕs ಬೇಕ್ರಿ, ಬೇಕೆಂದರ ಇಲ್ಲೇ ಶೆರೆ ತರಿಸಿ ಕುಡೀತಿ. ನಮ್ಮಪ್ಪ ಪೊಲೀಸರಿಗಿ ಹೇಳ್ಯಾನ. ಅವೇನು ಮಾಡಿಕೊಳ್ತಾನೊ ಮಾಡಿಕೊಳ್ಳಿ. ನೀವು ಮಾತ್ರ ಹೋಗಬ್ಯಾಡ್ರಿ" ಎಂದು ಅವನಿಗೆ ಮಾತೀನ ಅವಕಾಶ ಕೊಡದೆ ಹೇಳಿದಳು. ಇನ್ನಿವಳು ಏನು ಹೇಳಿದರೂ ಮಾತು ಕತ್ತರಿಸುತ್ತಾಳೆಂದು ಗೊತ್ತಾಗಿ ದೇಸಾಯಿ "ಆಯ್ತು" ಎಂದು ಹೇಳಿ ಅವಳನ್ನೇ ಆಶ್ಚ್ಯರ್ಯದಿಂದ ನೋಡುತ್ತ ಕೂತ. ನಾನು ಅಡಿಗೆ ಮನೆಗೆ ಹೋದೆ.

ಜಗತ್ತಿನಲ್ಲಿ ನೀನು ಬೇಕಾದಂಥ ಥರಾವರಿ ಜನರನ್ನು ಕಾಣಬಹುದು. ಆದರೆ ಗೌಡನಂಥ ನಿರ್ಲಜ್ಜನನ್ನು ಕಾಣುವುದು ಸಾಧ್ಯವೇ ಇಲ್ಲ. ಅದಾಗಿ ಅರ್ಧ ಗಂಟೆಯಾಗಿರಬಹುದು. ನಾನು ರೊಟ್ಟಿ ಬಡಿಯುತ್ತಿದ್ದೆ. ನಿಂಗವ್ವ ಗೌಡ್ತಿ ಗಾಬರಿಯಲ್ಲಿ ಬಂದು ನನ್ನ ಕಿವಿಯಲ್ಲಿ "ಪೊಲೀಸರು ಇಲ್ಲಿಗೇ ಬಂದಾರಗ" ಎಂದು ಹೇಳಿದಳು. ನನ್ನ ಅಂಗಾಲಿನಿಂದ ನೆತ್ತಿಯ ತನಕ ಮೈ ಭಗ್ಗೆಂದು ಉರಿಯಿತು. ಗೌಡನ್ನ ನೆನೆದು ಅವುಡುಗಚ್ಚಿದೆ. "ಮೊದಲು ಇಲ್ಲಿಂದ ಕಾಲ್ತಗಿ. ಅಲ್ಲಿ ಹೇಲು ತಿಂದದ್ದು ಸಾಲಗೆ ಇಲ್ಲಿಗೂ ಬಂದೇನೋ ಶನಿ?" ಎಂದು ಎದುರಿಗೆ ಗೌಡ ನಿಂತಿದ್ದಾನೆಂಬಂತೆ ಅಂದು ರಭಸದಿಂದ ರೊಟ್ಟಿ ಹಿಟ್ಟಿಗೆ ಹೊಡೆದೆ. ಒಲೆಯ ಮೇಲಿದ್ದ ರೊಟ್ಟಿಯೊಂದು ಹೊತ್ತಿ ಹೋಯ್ತು. ರೊಟ್ಟಿ ಬಡಿಯುವುದನ್ನು ಬಿಟ್ಟು ಕೈಕೂಡ ತೊಳೆಯದೆ ಎದ್ದು ಬಂದು ದರ್ಬಾರಿನಲ್ಲಿ ಹಣಿಕಿ ಹಾಕಿದೆ. ಒಬ್ಬ ಪೋಜುದಾರ, ಇಬ್ಬರು ಪೊಲೀಸರಿದ್ದರು. ಜೊತೆಗಿಬ್ಬರು ಊರಿನ ಹಿರಿಯರಿದ್ದರು. ಗೌಡ ಪೆಚ್ಚುಮೋರೆ ಹಾಕಿ ಕುಂತಿದ್ದ. ದೇಸಾಯಿ ನಿಂತ ನಿಲುವಿನಲ್ಲೇ ಹೇಳುತ್ತಿದ್ದ –

“ನೋಡ್ರಿ ನಮ್ಮ ಊರಾಗ ಎಂದೆಂದೂ ಕಳವಾಗಾಕ ಶಕ್ಯ ಇಲ್ಲ. ನಮ್ಮ ಮಾವನವರೇನೋ ನಿಮಗೆ ಬಂದ ಹೇಳಿರಬೇಕು. ಅವರಾಗಲೇ ಹೇಳಿದಾಂಗ ನಮಗಿನ್ನೂ ಬಳಿ ಸಿಕ್ಕಿಲ್ಲ ಖರೆ. ಅದರ ಅವು ಕಳುವಾಗ್ಯಾವಂತ ನಮಗ ಅನ್ನಿಸಿಲ್ಲ. ಇಂದಿಲ್ಲ ನಾಳಿ ಸಿಕ್ಕೇ ಸಿಗತಾವ.”

ಪೋಜುದಾರನಿಗೆ ದೇಸಾಯಿಯ ಮಾತು ಸರಿ ಬರಲಿಲ್ಲ.

“ಮರ್ಯಾ ಅಂಬಾವೆಲ್ಲಿದ್ದಾನ?”

“ನಮಗ್ಗೊತ್ತಿಲ್ಲ. ಅದರ ಬಳಿ ಕಳವಾಗಿಲ್ಲಂತ ನಾವಃ ಹೇಳತೀವಲ್ಲ”

“ಒಂದು ಸಲ ಅವನ್ನ ವಿಚಾರಿಸಬಹದಲ್ಲ?”

“ವಿಚಾರಿಸಬೇಕಾದವರು ನಾವು, ನೀವಲ್ಲ”

ಅಷ್ಟರಲ್ಲಿ, ಊರಿನ ಹಿರಿಯ ಮುದುಕ ಬಾಯಿ ಹಾಕಿದ.

“ಮಾರಾಜರು ಹೇಳೋದು ಬರೋಬರಿ ಐತ್ರಿ. ಕಳುವಾಗಿಲ್ಲಂತ ಅವರಃ ಹೇಳತಾರ. ನೀವ್ಯಾಗಿ ಮ್ಯಾಲಬಿದ್ದ ಕೇಸ ಹಾಕೋದಂದರ ತಪ್ಪಲ್ಲ?”

ತಕ್ಷಣ ಗೌಡ ಅವರ ಕಡೆ ಕೈಮಾಡಿ “ನಿಮಗ ತಿಳಿಯಾಣಿಲ್ಲ, ಸುಮ್ಮನಿರ್ರಿ” ಅಂದ.

“ಮಾವನವರಃ, ಎಷ್ಟ ಹೇಳಿದರೂ ನಿಮ್ಮ ಹಟ ಬಿಡವೊಲ್ಲಿರಿ. ಏನಾಗೇತಿ ನಿಮಗ? ಖರೆ ಹೇಳ್ತಿನಿ, ನಮ್ಮ ಅರಮನೆ ವ್ಯವಹಾರದಾಗ ಇನ್ನೊಬ್ಬರು ಕೈಹಾಕೋದನ್ನ ನಾವು ಸಹಿಸೋದಿಲ್ಲ.”

“ಬೀಗರಂದ ಮ್ಯಾಲ ಒಬ್ಬರಿಗೊಬ್ಬರು ಆಗದಃ ಇರಾಕ ಆದೇತೇನ್ರಿ, ದೇಸಾಯರ? ನಿಮ್ಮ ಮನ್ಯಾಗ ಕಳವಾದದ್ದೂ ಒಂದ, ನಮ್ಮ ಮನ್ಯಾಗ ಕಳವಾದದ್ದೂ ಒಂದ. ಒಬ್ಬ ಯಃಕಶ್ಚಿತ ಹೊಲೆಯಾ ಅರಮನ್ಯಾಗಿನ ಬಂಗಾರ ಬಳಿ ಕದಿಯೋದಂದರ ಸಾಮಾನ್ಯ ಮಾತೇನ್ರಿ? ನಾ ಮಾಡಿದ್ದಾದರೂ ಎದಕ್ಕ? ಸಿಂಗಾರೆವ್ವ ಹೇಳಿದಳಂತ..”

ದೇಸಾಯಿ ಈ ತನಕ ನಿಯಂತ್ರಿಸಿದ ಕೋಪವೆಲ್ಲ ಹೊರಗುಕ್ಕಿತು. ಎದೆಯ ನೆತ್ತರೆಲ್ಲ ತಲೆಗೇರಿ ಮುಖ ಕೆಂಪಗೆ ಕೆಂಜಗದಂತಾಯ್ತು. ತುಟಿ ಕಂಪಿಸಿದವು. ಉಸಿರಾಡಿಸುವುದೂ ಕಷ್ಟವಾಯ್ತೇನೋ, ಮೂಗಿನ ಹೊರಳೆಗಳನ್ನು ಅಗಲಗೊಳಿಸಿ “ಖಬರ್‌ದಾರ್!” ಅಂದ. “ಮಾವನವರ, ಅವರು ನಿಮ್ಮ ಮಗಳಾಗಿರಬಹುದು, ಅದರ ಅವರು ಈ ಅರಮನೆಯ ದೊರೆಸಾನಿ. ದೊರೆಸಾನಿಯವರ ಮಾತು ಇನ್ನೊಮ್ಮಿ ಈ ಮಂದ್ಯಾಗ ಎತ್ತಿದರ ನಾವು...ನಾವು ನಿಮಗ ಏನೇನೋ ಅಂದರ ಏನೇನೋ ಹೇಳಬೇಕಾಗತದ. ನಮ್ಮ ಅರಮನ್ಯಾಗ ಏನ ಆದರೂ ನೋಡಿಕೊಳ್ಳಾಕ ನಾವಿದ್ದೀವಿ. ನಮಗ್ಯಾರ ಸಹಾಯ ಬೇಕಿಲ್ಲ. ಈಗಲೂ ಹೇಳತೀನಿ ನಮ್ಮಲ್ಲಿ ಬಳಿ ಕಳವಾಗಿಲ್ಲ. ಕಳವಾಗ್ಯಾವ ಅನ್ನೋಣ, ಅದಕ್ಕಾಗಿ ನಮಗೆ ಕಾಳಜೀ ಇಲ್ಲ. ಇಪ್ಪತ್ತೆರಡು ಸಾವಿರ ಎಕರೆ ಜಮೀನ ದಾನಮಾಡಿದ ದಾನಶೂರ ಸಂಸ್ಥಾನ ನಮ್ಮದು. ಅವೆರಡು ಬಳಿಗಾಗಿ ಅಗ್ಗ ಆಗೋಣಂತೀರೇನು? ನನಗ ಜನ ಗೊತ್ತು, ಮರ್ಯಾನೂ ಗೊತ್ತು. ಅವನೂ ನಾನೂ ಮುಖಾಮುಖಿ ಮಾತಾಡಿಕೊಳ್ತೀವಿ. ದಯಮಾಡಿ ನೀವು ಅವರ್ನ ಮೊದಲಿಲ್ಲಿಂದ ಕಳಿಸಿ ಬರಬೇಕು” ಎಂದು ಹೇಳಿ ಅಲ್ಲಿ ನಿಲ್ಲದೆ ಒಳಗೆ ಹೋಗಲಿದ್ದ. ಅಷ್ಟರಲ್ಲಿ ಪೋಜದಾರ ಅಧಿಕಾರ ದರ್ಪದಿಂದ ಆದರೆ ಪರಿಣಾಮಕಾರಿಯಾಗಿ ಮಾತಾಡಿದ:

“ದೇಸಾಯರ, ನಿಮ್ಮ ಮನೀಗೆ ಬರೂ ಮೊದಲ ಅವ, ಎಷ್ಟ ಖೂನಿ ಮಾಡಿ ಪರಾರಿ ಆಗ್ಯನಂತ. ನಿಮಗೇನಾದರೂ ಗೊತ್ತದ ಏನು? ನಿಮ್ಮ ಮನ್ಯಾಗ ಬಳಿ ಕಳವಾಗದಿದ್ದರೆ ಬ್ಯಾಡ, ಆದರ ಬ್ಯಾರೆ ಕೇಸಿನಾಗ ಸಿಕ್ಕಾನ. ಅದಕ್ಕs ಅವ ನಮಗಬೇಕು. ಎಲ್ಲಿ ಅಡಗ್ಯಾನ ಹೇಳ್ರಿ”

ಈಗ ದೇಸಾಯಿ ತಣ್ಣಗಾದ. ಒಳಗಿನ ಗಾಬರಿಯನ್ನು ತೋಡಗೊಡದೆ “ನಮಗ್ಗೊತ್ತಿಲ್ಲ” ಎಂದು ಹೇಳಿ ಪೋಜುದಾರನ ಮುಖವನ್ನೇ ಮಳಮಳ ನೋಡಿದ. ಗೌಡನ ಮುಖವೀಗ ಕಳೆ ಏರಿತು. ಪೋಜುದಾರ ಮತ್ತೆ ಹೇಳಿದ -

“ಮತ್ತ ನಿಮಗಿದೂ ನೆನಪಿರಲಿ, ಒಂದಿಲ್ಲೊಂದು ದಿನ ಮರ್ಯಾ ನಮ್ಮ ಕೈಗಿ ಸಿಕ್ಕs ಸಿಗತಾನ. ನೀವು ಅವನ್ನ ಮನ್ಯಾಗಿಟ್ಟಕೊಂಡರ ನಾಳಿ ನೀವೂ ಅವನ ಕೇಸಿನಾಗ ಸಿಗಬೀಳ್ತಿರಿ. ಗೌಡರ ಅಳಿಯಂದಿರು ಅಂತ ನಿಮಗ ಈ ಮಾತ ಹೇಳ್ತೇನಿ. ಮುಂದಿಂದು ನಿಮ್ಮ ಜವಾಬ್ದಾರಿ”

- ಎಂದು ಹೇಳಿ ಎದ್ದ, ದೇಸಾಯಿ ಪೆಚ್ಚಾದ.

ಮರ್ಯಾ ಅನೇಕ ಖೂನಿ ಮಾಡಿದ್ದು, ಬೇರೆ ಕೇಸುಗಳಲ್ಲೂ ಸಿಗಬಿದ್ದದ್ದು ಇವೆಲ್ಲ ದೇಸಾಯಿಗೆ ಗೊತ್ತಿರಲಿಲ್ಲ. ಇವೇ ಆಪಾದನೆಗಳನ್ನು ಗೌಡ ಹೇಳಿದ್ದನಾದರೂ ನಂಬಿರಲಿಲ್ಲ. ಈಗ ಪೊಲೀಸರೇ ಹೇಳಿದ್ದರಿಂದ ನಂಬಿದ.

ನಂಬಿದನೋ ಅಥವಾ ಪೊಲೀಸರಿಗೆ ಬೆದರಿದನೋ, ಅಂದೇ ಸಂಜೆ ಮರ್ಯಾ ಸಿಕ್ಕೊಡನೆ -

“ನೋಡೊ ಮರ್ಯಾ, ನಿನ್ನ ಮ್ಯಾಲ ಅವೇನೋ ಭಾಳ ಕೇಸದಾವಂತ. ನಿನ್ನಿಂದಾಗಿ ಪೊಲೀಸರ ಕಣ್ಣು ನಮ್ಮ ಅರಮನಿ ಮ್ಯಾಲೂ ಬಿದ್ದಾವ. ಅದೆಲ್ಲಾ ನಮಗೆ ಬರೋಬರಿ ಕಾಣ್ಸಾಕಿಲ್ಲ. ನೀ ಇನ್ನಮ್ಯಾಲ ನಮ್ಮ ಅರಮನ್ಯಾಗ ಇರಬ್ಯಾಡ”

- ಎಂದು ಹೇಳಿದ. ಮರ್ಯಾನಿಗೀ ಮಾತು ಅನಿರೀಕ್ಷಿತವಾಗಿತ್ತು. ಉಗುರು ಕಚ್ಚುತ್ತ ನನ್ನ ಕಡೆಗೊಮ್ಮೆ ದೇಸಾಯಿಯ ಕಡೆಗೊಮ್ಮೆ ನೋಡಿ ಹೋಗಿಬಿಟ್ಟ. ದೇಸಾಯಿ ಮರ್ಯಾನ ಬಗೆಗಿನ ಪ್ರೀತಿಯನ್ನು ಇಷ್ಟು ಬೇಗ ಕಳಕೊಂಡಾನೆಂದು ನನಗೆ ಅನ್ನಿಸಿರಲಿಲ್ಲ.

* * *

## ಅಧ್ಯಾಯ - ೧೭

ಆ ದಿನ ಇನ್ನೇನೂ ನಡೆಯಲಾರದೆಂದಿದ್ದೆವು. ಗೌಡ, ಗೌಡ್ತಿ ನಂದಗಾಂವಿಗೆ ಹೋಗಿದ್ದರು. ಪೊಲೀಸರು ನಿರಾಶರಾಗಿ ತಿರುಗಿ ಹೋಗಿದ್ದರು. ಊರಲ್ಲಿ ಜನ ಏನೇನು ಮಾತಾಡಿಕೊಳ್ಳುತ್ತಿದ್ದರೆಂದು ನಮಗೆ ತಿಳಿಯದು. ಅರಮನೆಯಲ್ಲಿ ಕಳುವಾದದ್ದು, ಅದಕ್ಕಾಗಿ ಪೊಲೀಸರು ಬಂದದ್ದು - ಇವೆಲ್ಲ ಊರವರ ದೃಷ್ಟಿಯಲ್ಲಿ ಅರಮನೆಯನ್ನು ಹಾಸ್ಯಾಸ್ಪದಗೊಳಿಸುವ ಪ್ರಸಂಗಗಳಾಗಿದ್ದವು. ಮತ್ತು ಇದೇ ಕಾರಣಕ್ಕಾಗಿ ದೇಸಾಯಿಗೆ ಅಸಮಾಧಾನವಾಗಿತ್ತು. ಗೌಡ ತರಾತುರಿಯಿಂದ ಊರಿಗೆ ಹೊರಟು ನಿಂತಾಗಲೂ ದೇಸಾಯಿ ಬೇಡವೆಂದಿರಲಿಲ್ಲ. ಮಾತಾಡಿರಲಿಲ್ಲ ಕೂಡ. ಆದರೆ ಇಷ್ಟಕ್ಕೇ ಗೌಡ ಸುಮ್ಮನಾದಾನೆಂದು ನನಗನ್ನಿಸಿರಲಿಲ್ಲ. ಅವನ ವೈರಿ ಇರುವ ಸ್ಥಳ ಗೊತ್ತಾಗಿಬಿಟ್ಟಿದ್ದರಿಂದ, ಮತ್ತು ಅವನನ್ನು ಹಿಡಿಸಲೆಂದೇ ಪೊಲೀಸರನ್ನು ಕರೆಸಿದ್ದರಿಂದ ಈ ಸುದ್ದಿ ಮರೆಪ್ಪನಿಗೆ ತಿಳಿಯದೇ ಹೋಗುವುದು ಸಾಧ್ಯವಿರಲಿಲ್ಲ. ಹಾಗೇನಾದರೂ ತಿಳಿದಲ್ಲಿ ಅವನು ಸುಮ್ಮನಿರುವ ಪೈಕಿ ಅಲ್ಲ. ಗೌಡನಿಗೆ ವಕ್ರ ಉಪಾಯಗಳ ಧೈರ್ಯ ಇದ್ದರೆ ಮರೆಪ್ಪನಿಗೆ ನೇರವಾಗಿ ಗೌಡನನ್ನು ಎದುರಿಸುವ ಧೈರ್ಯವಿತ್ತು. ಗೌಡ ಮರೆಪ್ಪನಿಗೇನಾದರೂ ಒಬ್ಬಂಟಿಯಾಗಿ ಸಿಕ್ಕನೋ, ಅವನ ಕಥೆ ಮುಗಿದ ಹಾಗೇ ಲೆಕ್ಕ. ಗೌಡನಿಗಿದು ಚೆನ್ನಾಗಿ ತಿಳಿದಿತ್ತೆಂದು ನನ್ನ ಭಾವನೆ. ಅದಕ್ಕೇ ದೇಸಾಯಿ ಎಷ್ಟೇ ನಿಷ್ಠುರವಾಗಿ

ಮಾತಾಡಿದ್ದರೂ ಮತ್ತೆ ಮತ್ತೆ ಹಟ ಹಿಡಿದು ಮರೆಪ್ಪನನ್ನು ಪೊಲೀಸರಿಂದ ಹಿಡಿಸುವ ಉಪಾಯ ಮಾಡುತ್ತಿದ್ದ. ಆದರೆ ಗೌಡ ಅರಮನೆಯಿಂದ ಕಾಲ್ತೆಗೆದು ಹೋದನಲ್ಲ, ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಪೀಡೆಯ ಹಾಗೆ ಬಂದು ಒಕ್ಕರಿಸಿದ್ದ. ತನ್ನ ಮನೆ, ಹೆರವರ ಮನೆಯೆಂದು ನೋಡದೆ ಅಧಿಕಾರ ಚಲಾಯಿಸುತ್ತಿದ್ದನಲ್ಲ, ಈಗ ಮರೆಪ್ಪನನ್ನು ಅವನಾಗೇ ಎದುರು ಹಾಕಿಕೊಂಡಾಗಿತ್ತು. ಹಳೆಯದನ್ನೆಲ್ಲ ಮರೆದು ಏನೂ ನಡೆದಿಲ್ಲವೆಂಬಂತೆ ಇದ್ದಿದ್ದರೆ ಅವನಿಗೇನೂ ತೊಂದರೆಯಾಗುತ್ತಿರಲಿಲ್ಲವೆಂದು ನನ್ನ ಅಭಿಪ್ರಾಯ.

ಅದನು ಹೋದ ದಿನವೇ ಮರೆಪ್ಪ ಅರಮನೆಯಲ್ಲಿ ಪ್ರತ್ಯಕ್ಷನಾದ. ಉಂಡು ಮಲಗುವ ಹೊತ್ತಾಗಿತ್ತು. ದೇಸಾಯಿ ಇಡೀ ದಿನ ಬೇಸರದಲ್ಲಿದ್ದವನು ಹೊರಗೂ ಹೋಗಿರಲಿಲ್ಲ. ಒಬ್ಬಂಟಿಯಾಗಿ ಕುಡಿದು ಬೆಳ್ದಿಂಗಳಲ್ಲಿ ಕಟ್ಟೆಯ ಮೇಲೆ ಕುಂತಿದ್ದ. ನಮ್ಮ ಮನಸ್ಸುಗಳೂ ಹಗುರವಾಗಿದ್ದವು. ಊಟವಾದ ನಂತರ ತುಂಬಿದ ತಂಬಿಗೆ ತಗೊಂಡು ಗಂಡನ ಹಾಸಿಗೆಯ ಬಳಿಯಿಡಲು ಸಿಂಗಾರೆವ್ವ ಹೋದಳು. ಆಗಲೇ ಅವಸರದಲ್ಲಿ ಮರೆಪ್ಪ ಅವಳಿಗೆ ಭೇಟಿಯಾದನೆಂದು ಕಾಣುತ್ತದೆ. ನಾನು ಕಸಮುಸುರೆ ಮಾಡಲು ಅಡಿಗೆ ಮನೆಯಲ್ಲೇ ನಿಂತೆ. ಅದನ್ನೆಲ್ಲ ಮುಗಿಸಿ, ತಡಮಾಡಿ ಅಂತಸ್ತಿಗೆ ಹೋದೆ. ಬಾಗಿಲ ಮರೆಯಲ್ಲಿ ಯಾರೋ ನಿಂತಿದ್ದರು. ಯಾರೋ ಯಾರು? ಮರ್ಯಾ ನಿಂತಿದ್ದ. ಅಯ್ಯೋ! ಎಂದು ಗಾಬರಿಗೊಂಡು ಎದೆಯ ಮೇಲೆ ಕೈಯೂರಿ ಹಾಗೇ ನಿಂತುಕೊಂಡೆ. ಉಸಿರು ಗಕ್ಕನೆ ಹಾರಿಹೋದಂತಾಗಿ ಮೈಯೆಲ್ಲ ತಣ್ಣಗಾಯ್ತು. ತೊಡೆ ನಡುಗಿ ಕಾಲಲ್ಲಿ ಶಕ್ತಿಯಿಲ್ಲದೆ ಜೋಲಿ ತಪ್ಪಿ ಕುಸಿಯುತ್ತಿದ್ದೆ. ಅಷ್ಟರಲ್ಲಿ ನನ್ನ ರೆಟ್ಟೆ ಹಿಡದು, ಆಧಾರಕೊಟ್ಟು ತನ್ನ ಕರೀ ಮಸಡಿಯಲ್ಲಿ ಬಿಳೀ ಹಲ್ಲು ತೆರೆದು ತೋರಿಸುತ್ತ ನಕ್ಕ "ಅಂಜಿದಿ?" ಅಂದ. ಹಾ ಹೂ ಎನ್ನುವುದಕ್ಕೂ ನನಗೆ ಸಾಧ್ಯವಾಗಲಿಲ್ಲ.

"ಸಿಂಗಾರೀನ ಕರಕೊಂಬಾ ಹೋಗು" ಅಂದ. ನನ್ನ ಬಾಯೊಣಗಿತ್ತು.

"ದೇಸಾಯರ ಜೋಡಿ ಕುಂತಾಳ" ಅಂದೆ.

"ಕರಕೊಂಬರ್ತೀಯೋ ಇಲ್ಲೋ?" ಎಂದು ಹೆದರಿಸಲಿಕ್ಕೆ ನೋಡಿದ.

"ಆಗಾಣೆಲ್ಲ" ಎಂದು ತುಸು ಧೈರ್ಯದಿಂದಲೇ ಹೇಳಿದೆ. "ಥೂ" ಎಂದು ನನ್ನ ಮುಖದ ಮೇಲೆ ಉಗುಳಿದ. ಅವನ ಹೊಲಸು ನಾರುವ ಉಗುಳು ನನ್ನ ಮುಖದ ಮೇಲೆ ಸಿಡಿದು ಹೇಸಿಕೆ, ಅವಮಾನಗಳಿಂದ ಕುದಿಯುತ್ತ ಸೆರಗಿನಿಂದು ಒರೆಸಿಕೊಳ್ಳುತ್ತಿದ್ದೆ. ಹಾಳಾದವನು ಹಾಗೇ ಹೊರಗೆ ಹೋದ.

ಆಗ ನನಗೆ ಉಸಿರು ಬಂತು. ಗಮ್ಮಂತ ಬೆವೆತು, ಮೈತುಂಬ ನೀರಿಳಿದಿತ್ತು. ಹಾಗೇ ಕೂತು ಸೀರೆ ಸೆರಗಿಂದ ಮತ್ತೆ ಮುಖ ಒರೆಸಿಕೊಂಡೆ. ಬಾಯಾರಿಕೆಯಾಯ್ತು. ನೀರು ತಂದಿರಲಿಲ್ಲ. ಅಡಿಗೆ ಮನೆಗೇ ಹೋಗಬೇಕಿತ್ತು. ಎದ್ದು ಹೋಗುವುದಕ್ಕೆ ಶಕ್ತಿ ಸಾಲದೆಂದೆಣಿಸಿ, ಸೀರೆ ಸೆರಗಿನಿಂದ ಗಾಳಿ ಬೀಸಿಕೊಳ್ಳುತ್ತ - ಯಾಕೆ ಬಂದಿದ್ದಾನು - ಎಂದು ವಿಚಾರಮಾಡುತ್ತ ಕೂತೆ, ಬಗೆ ಹರಿಯಲಿಲ್ಲ ಎದ್ದು ಕೆಳಗೆ ಹೋದೆ. ಪಡಸಾಲೆಯಲ್ಲಿ ಯಾರೂ ಇರಲಿಲ್ಲ. ದರಬಾರಿಗೆ ಹೋದೆ.

ಪಟಾಂಗಳದ ಕಟ್ಟೆಯ ಮೇಲೆ ಬೆಳದಿಂಗಳಲ್ಲಿ ಗಂಡ ಹೆಂಡತಿ ಕೂತಿದ್ದರು. ಮರ್ಯಾ ಕಂಬದ ಮರೆಯಲ್ಲಿ ನಿಂತು ಅವರನ್ನೇ ನೋಡುತ್ತಿದ್ದ. ಅವರು ಆ ರೀತಿ ಅಕ್ಕಪಕ್ಕ ಕೂತದ್ದನ್ನು ನಾನು ಕೂಡ ಬಹಳ ಸಲ ನೋಡಿರಲಿಲ್ಲ. ಪರಸ್ಪರ ನೋಡುತ್ತ, ಮಾತಾಡುತ್ತ ಕೂತಿದ್ದರು. ದೇಸಾಯಿ ಅವಳ ಮುಂಗೈ ಹಿಡಿದುಕೊಂಡು ಆಸೆಬುರುಕುತನದಿಂದ ನೋಡುತ್ತಿದ್ದ. ಮರ್ಯಾ ಕೈಬಳೆಯೇನಾದರೂ ಕೊಟ್ಟನೇ ಎಂದು ಸಂಶಯ ಬಂತು. ಅವನ ಕಡೆ ನೋಡಿದೆ. ಅವನಿಗೆ ಆ ದೃಶ್ಯ ಸರಿಬಂದಿರಲಿಲ್ಲ. ಕಂಬಕ್ಕೆ ಬೆನ್ನು ತಿರುಗಿಸಿ ನಿಂತು ಉಗುರು ಕಚ್ಚಿಕೊಳ್ಳತೊಡಗಿದ್ದ. ಕಚ್ಚಿಕೊಂಡ ಉಗುರನ್ನು ರಭಸದಿಂದ ಉಗುಳುತ್ತಿದ್ದ. ಮತ್ತೆ ಕಚ್ಚುತ್ತಿದ್ದ. ನಿರೀಕ್ಷಿಸಿದ್ದಂತೆ ನನ್ನ ಬಗ್ಗೆ ಅವನಿನ್ನೂ ಕೋಪ ವ್ಯಕ್ತಪಡಿಸಿರಲಿಲ್ಲವಲ್ಲ. ನನಗೆ ತುಸು ನೆಮ್ಮದಿಯಾಗಿತ್ತು. ತುಂಟತನದಿಂದ ಅವನ ಆಟ ನೋಡುತ್ತಿದ್ದೆ. ಅದೂ ಅವನಿಗೆ ಸರಿಬರಲಿಲ್ಲ. ಹತ್ತಿರ ಬರುವಂತ ಕೈಸನ್ನೇ ಮಾಡಿ ಕರೆದ, ಹೋದೆ. ನನ್ನ ಕಿವಿಯಲ್ಲಿ "ಇನ್ನೇನ ಬೇಹೋಶ್ ಆಗಿ ಬೀಳತಾನ,

ಮೂಗಿನಾಗ ಹಿಂಡಾಕ ಉಳ್ಳಾಗಡ್ಡಿ ತಾ ಹೋಗು" - ಎಂದು ಹೇಳಿ ಕಿಸಕ್ಕನೆ ಹಲ್ಲುಕಿಸಿದು ನಕ್ಕು ಹೊರಟು ಹೋದ. ಹೋಗಿ ಹಿತ್ತಲ ಕಡೆಯ ಕತ್ತಲಲ್ಲಿ ಗಪ್ಪುಗಾರಾದ. ಹೊಟ್ಟೆ ಕಿಚ್ಚಿನವರು; ಗಂಡ ಹೆಂಡತಿ ಕೂಡಿ ಕೂತರೆ ಈ ದೊಣೆನಾಯ್ಕನಿಗ್ಯಾಕೆ ಸಿಟ್ಟು ಬರಬೇಕೋ! ಅವರು ಅಲ್ಲೇ ಕೂತಿರಲೆಂದು ನನ್ನ ಪಾಡಿಗೆ ನಾನು ಅಂತಸ್ತಿಗೆ ಬಂದೆ.

ಬಹಳ ಹೊತ್ತಾದ ನಂತರ ಸಿಂಗಾರೆವ್ವ ಬಂದಳು. ಅವಳ ಮುಖದಲ್ಲಿ ನೆಮ್ಮದಿಯ ಸೋಮಾರಿತನ ಇತ್ತು. ನನಗಿನ್ನೂ ನಿದ್ದೆ ಬಂದಿರಲಿಲ್ಲ. ಅಷ್ಟು ಹೊತ್ತು ಆಕೆಯ ಕೈಬಳೆಯ ಬಗ್ಗೆ ಯೋಚಿಸುತ್ತಿದ್ದೆ. ಈಗ ನೋಡಿದರೆ ಆಕೆಯ ಕೈಯಲ್ಲಿ ಬಳೆ ಇದ್ದವು! ನಾನು ಎಚ್ಚರವಿದ್ದದ್ದು ಅವಳಿಗೂ ಗೊತ್ತಿತ್ತು; ಆದರೂ ಒಂದೂ ಮಾತಾಡಲಿಲ್ಲ. ಸುಮ್ಮನೆ ಮಲಗಿಬಿಟ್ಟಳು. ನನಗೆ ಅಸಮಾಧಾನವಾಯ್ತು: ಈ ಬಳೆಗಳಿಂದಾಗಿ ಹೆಚ್ಚು ಯಾತನೆ ಪಟ್ಟವಳು ನಾನು. ಗೌಡನಿಂದ ಒದೆತ ತಿಂದಿದ್ದೆ. ಮರೆಪ್ಪನನ್ನು ಹ್ಯಾಗೆ ಎದುರಿಸುವುದೆಂದು ಹಗಲು ರಾತ್ರಿ ಚಿಂತೆ ಮಾಡಿದ್ದೆ. ಇದ್ಯಾವುದೂ ಅವಳ ಕರುಳಿಗೆ ತಟ್ಟಿರಲಿಲ್ಲವೆಂದಾಯಿತಲ್ಲ. ಈಗ ಅವು ಸಿಕ್ಕ ಬಗ್ಗೆ ಮೊದಲು ನನಗೆ ಹೇಳಬೇಕಾದ್ದು ಅವಳ ಜವಾಬ್ದಾರಿ ಎಂದೇ ಅಂದುಕೊಂಡೆ. ಗೆಳತಿ ಈಗ ಹೇಳುತ್ತಾಳೆ, ಆಗ ಹೇಳುತ್ತಾಳೆ - ಎಂದು ನಿರೀಕ್ಷೆಯಲ್ಲಿ ತುಸು ಹೊತ್ತು ಕಾದೆ. ಹೇಳಲೇ ಇಲ್ಲ. ಇನ್ನೂ ತಡೆಯದೆ ನಾನೇ "ಬಳಿ ಸಿಕ್ಕಾವಲ್ಲ, ಎವ್ವ ಯಾವಾಗ ಸಿಕ್ಕವು?" ಅಂದೆ.

"ಆಗಳೆ ಸಿಕ್ಕವು, ಇಲ್ಲೆ ಹಾಸಿಗ್ಯಾಗ ಇದ್ದವು."

ನಾನು ಈ ಮಾತನ್ನು ನಂಬಲಿಲ್ಲ. ಅಷ್ಟರಲ್ಲಿ ಮತ್ತೇನು ತಿಳಿಯಿತೋ ಮತ್ತೆ ತಾನೇ ಹೇಳಿದಳು:

"ಮರ್ಯಾ ಬಂದು ತಂದು ಕೊಟ್ಟು ಹೋದ."

ಇಷ್ಟು ಹೇಳಿ, ಏನೇನೂ ಆಗದವರಂತೆ ತನ್ನ ಪಾಡಿಗೆ ತಾನು ಸುಮ್ಮನಾದಳು.

"ನಾನs ಧಡ್ಡಿ, ಇಂಥವರನ್ನ ನಂಬತೀನಲ್ಲಾ! ಸದ್ಯ ಉಳ್ಳಾಗಡ್ಡಿ ಒಯ್ಯಬೇಕಾಗಲಿಲ್ಲ. ಈಗ ಶಿವಲಿಂಗಸ್ವಾಮಿ ಏನ ಮಾಡಬೇಕಂದರ - ನನ್ನ ತಪ್ಪ ಹೊಟ್ಟ್ಯಾಗ ಹಾಕೊಬೇಕಷ್ಟs !" ಎಂದು ಮನಸ್ಸಿನಲ್ಲೇ ಅಂದು ಕೊಂಡು ಸಾವಳಗಿ ಶಿವನಿಂಗನನ್ನು ನೆನೆದು ಮಗ್ಗಲು ಬದಲಿಸಿದೆ.

ಬಳೆ ಸಿಕ್ಕಿದ್ದರಿಂದ ಮರ್ಯಾ ನಿರ್ದೋಷಿಯಾಗಿದ್ದ. ಆತ ಸಾವಿರ ರೂಪಾಯಿ ತಂದದ್ದು ಹ್ಯಾಗೆಂದು ನಮಗೆ ಆ ಮೇಲೆ ತಿಳಿಯಿತು. ಇಲ್ಲಿಯ ಬಳೆ ಕದ್ದು ಪರಮಶೆಟ್ಟಿಯಲ್ಲಿ ಒತ್ತೆ ಇಟ್ಟು ಸಾವಿರ ರೂಪಾಯಿ ತಂದಿದ್ದ. ಆ ಮೇಲೆ ಗೌಡನಿಂದಾಗಿ ರಾದ್ಧಾಂತವಾಗುತ್ತಲೂ ಶೆಟ್ಟಿಯ ಕೈಕಾಲು ಹಿಡಿದು ವಾಪಸ್ ತಂದಿದ್ದ.

ಇನ್ನು ಅರಮನೆಯ ಕಥೆ ಹ್ಯಾಗೆ ತಿರುಗುತ್ತದೆ ನೋಡು :

ಶೆಟ್ಟಿ ದೇಸಾಯಿಗೆ ಒಂದೂವರ ಲಕ್ಷ ರೂಪಾಯಿ ಸಾಲ ಕೊಟ್ಟಿದ್ದನಲ್ಲ, ಅದಕ್ಕೆ ಪ್ರತಿಯಾಗಿ ಮುಂದಿನ ವಾರ ಎರಡು ತೋಟ ಬರೆದುಕೊಡುವುದಾಗಿ ದೇಸಾಯಿ ಹೇಳಿದ್ದ. ಆದರೆ ಶೆಟ್ಟಿಗೆ ತೋಟ ಬೇಕಿರಲಿಲ್ಲ. ಅವನ ಕಣ್ಣು ಅರಮನೆ ಮೇಲಿತ್ತು. ಬರೀ ಅರಮನೆಗೆ ಉಪಹೋಗಿಸಿದ ಮರ ಮಾರಿದರೆ ಹತ್ತೆಂಟು ಲಕ್ಷ ಬೆಲೆ ಬರುತ್ತಿತ್ತು. ದೇಸಾಯಿಗಾದರೋ ಅರಮನೆಯ ಬಗ್ಗೆ ಭರೀ ಹೆಮ್ಮೆ ಮತ್ತು ಅಭಿಮಾನ. ಅವನು ಅದನ್ನು ಮಾರಲು ಸುಭವಾಗಿ ಒಪ್ಪಲಾರ.

ಇಷ್ಟಾಯಿತಲ್ಲ. ಇನ್ನು ನಮ್ಮ ಗೌಡನೇನು ಕಮ್ಮಿ ? ಶೆಟ್ಟಿಗೆ ಬರೀ ಅರಮನೆ ಸಾಕಾದರೆ ಗೌಡನಿಗೆ ದೇಸಾಯಿಯ ತೋಟ, ಅರಮನೆ ಎರಡರ ಮೇಲೂ ಕಣ್ಣು. ದಾಸಾಯಿ ಬಹಳ ದಿನ ಬದುಕುವಕುಳವಲ್ಲವೆಂದು ಮಗಳನ್ನು ಕೊಡುವಾಗಲೇ ಅವನಿಗೆ ಖಾತ್ರಿಯಾಗಿತ್ತು ಅವನ ನಿರೀಕ್ಷ ಮೀರಿ ಅಳಿಯ ಬದುಕಿದ್ದ. ಆದ್ದರಿಂದಲೇ ಮಾವ ಚಡಪಡಿಸುತ್ತಿದ್ದ. ಉಪಾಯ ಮಾಡಿ ಕೈಯಾರೆ ಕೊಲ್ಲುವುದಕ್ಕೂ

ಹೇಸದವನು; ಅದ್ಯಾಕೋ ದಯಮಾಡಿ ಅಳಿಯನಿಗೆ ಜೀವದಾನ ಮಾಡಿದ್ದ. ಇಳಿವಯಸ್ಸಿನಲ್ಲಿ ಗಂಡು ಮಗ ಹುಟ್ಟಿದಾಗಿನಿಂದಂತೂ ಅವನ ಆಸೆಗೆ ಹೊಸ ರೆಕ್ಕೆ ಮೂಡಿದ್ದವು. ಒಂದೆರೆಡು ಬಾರಿ ಚೇಷ್ಟೆಗೆಂಬಂತೆ ದತ್ತಕದ ಮಾತಾಡಿ, ಸಿಂಗಾರೆವ್ವನ ಪ್ರತಿಕ್ರಿಯೆ ತಿಳಿಯಲು ನೋಡಿ ನಿರಾಸೆಗೊಂಡಿದ್ದ. ಮೊನ್ನೆ ಬಂದಾಗ ಅರಮನೆಯ ಸ್ಥೂಲ ಸೂಕ್ಷ್ಮಾ ಅವನಿಗೆ ತಿಳಿದುಬಿಟ್ಟಿತ್ತು. ಪರಮಶೆಟ್ಟಿಯ ಉಪಾಯವನ್ನೇ ಇವನೂ ಅನುಸರಿಸಬಹುದಿತ್ತು. ಶೆಟ್ಟಿ ಮಾತ್ರ ಆ ಉಪಾಯವನ್ನು ಬಿಟ್ಟುಕೊಡದೆ ಸಾಲದ ಬಾಬ್ತು ಮಾತ್ರ ತಿಳಿಸಿದ್ದ. ಹೀಗೆ ಬೇರೆ ದಾರಿಯಿಂದ ಸಾಧ್ಯವಾದರೆ ಶೆಟ್ಟಿಯ ಸಾಲವನ್ನು ಮುಳುಗಿಸಿ ಇಡೀ ಅರಮನೆ, ಆಸ್ತಿ ಸಮೇತ ನನಗೆ ಹ್ಯಾಗಾದೀತೆಂದು ಅವನು ಲೆಕ್ಕ ಹಾಕುತ್ತಿದ್ದ.

ಏನೇನೂ ಘಟಿಸದೆ ಒಂದು ತಿಂಗಳುರುಳಿತು.

ಈಗ ಶೆಟ್ಟಿ ಮೆಲ್ಲಗೆ ಅರಮನೆಗೆ ಬರತೊಡಗಿದ. ಬಂದವನು ಹಳೇ ಸಾಲ ಕೇಳಲಿಲ್ಲ, ಬರುವ ಸೀಗೀ ಹುಣ್ಣಿಮೆಗೆ ಹೊಸ ಬಯಲಾಟ ಮಾಡಬೇಕೆಂದು ದೇಸಾಯಿಯ ಕಿವಿಯಲ್ಲಿ ಊದಿದ. ಅವನು ಉಬ್ಬಿದ. ಆಯ್ತು, ತಾಲೀಮು ಸುರು ಮಾಡಿದರೆ! ಬಯಲಾಟ ಬೇಡವೆಂದು ಸಿಂಗಾರೆವ್ವ ಹೇಳಿದ್ದು ದೇಸಾಯಿಯ ಕಿವಿಗೆ ತಲುಪಲೂ ಇಲ್ಲ, ಅವಳು ಕಳಕಳಿಯಿಂದ ಕೈಮುಗಿದದ್ದು ಕಾಣಲೂ ಇಲ್ಲ. ಇವರು ತಾಲೀಮು ಸುರುಮಾಡಿದರು ನೋಡು. ಹ್ಯಾಗೆ ಗೊತ್ತಾಯಿತೊ ಗೌಡನ ಸವಾರಿ ಶಿವಾಪುರಕ್ಕೆ ಆಗಮಿಸಿತು. ಈ ಸಲ ಒಬ್ಬನೇ ಬಂದಿರಲಿಲ್ಲ. ಜೊತೆಗೊಬ್ಬ ಪೈಲವಾನನನ್ನೂ ಕರೆತಂದಿದ್ದ.

ಮಾರನೇ ದಿನ ಗೌಡ ಮಗಳೊಂದಿಗೆ ಮಾತಾಡಲು ಅಂತಸ್ತಿಗೇರಿ ಬಂದ. ಬಂದು ಕೃತಕವಾಗಿ ನಗುತ್ತ,

“ಬಳಿ ಸಿಕ್ಕುವಂತಲ್ಲ, ಎಲ್ಲಿಟ್ಟ ಮರೆತಿದ್ದಿವಾ?” - ಅಂದ.

“ಅಲ್ಲೇ ಟ್ರಂಕಿನಾಗ ಇಟ್ಟ ಮರೆತಿದ್ದೆ” - ಎಂದು ಹೇಳಿ ಸಿಂಗಾರೆವ್ವ ಕೆಳಗೆ ನಡೆದಳು.

“ಹಾಂಗ ಹೋಗಬ್ಯಾಡ ಬಾರವಾ, ಅಗ್ಗದೀ ಜರೂರು ನಿನ್ನ ಜೋಡೀ ಮಾತಾಡೂದೈತಿ.”

“ಹೆಣ್ಣು ಮಕ್ಕಳ ಜೋಡೀ ಏನು ಮಾತಪ?”

- ಎಂದು ಅಲ್ಲೇ ಕಿಟಕಿಯ ಬಳಿ ನಿಂತಳು. ನಾನು ಬಾಗಿಲಲ್ಲಿದ್ದೆ. ಗೌಡ ಹೋಗಿ ಗಡಂಚಿಯ ಮೇಲೆ ಕೂತ.

ನರಿ ಮತ್ತು ಗೌಡನಲ್ಲಿರುವಂಥ ಹೋಲಿಕೆಯನ್ನು ನಾನು ಇನ್ಯಾವ ಜೋಡಿಯಲ್ಲೂ ಕಂಡಿಲ್ಲ. ಉಣ್ಣುವಾಗ, ನಡೆಯುವಾಗ ಆ ಹೋಲಿಕೆ ಅಷ್ಟಾಗಿ ಕಾಣುತ್ತಿರಲಿಲ್ಲ. ಆದರೆ ಅವನು ಬಾಯಿ ಮುಚ್ಚಿಕೊಂಡು ಒಳಗಡೆ ಏನೋ ಹೊಂಚಿ ಬೇರೆಯವರನ್ನು ನೋಡುತ್ತಿದ್ದನಲ್ಲ; ಆಗ ಸ್ಪಷ್ಟವಾಗಿ ಅವನು ಎಲ್ಲ ರೀತಿಯಲ್ಲೂ ನರಿಯನ್ನೇ ಹೋಲುತ್ತಿದ್ದ. ಹೇಳಿದ -

“ಈಗ ಏನೇನ ನಡದೈತಿ ಗೊತ್ತೈತೇನು? ಬಯಲಾಟ ಮಾಡಿಸಿ ಅರಮನಿ ಬರೆಸಿಕೋಬೇಕಂತ ಶೆಟ್ಟಿ ಹೊಂಚ್ಯಾನ. ಅರಮನಿ ಆಸ್ತಿ ಕೈಬಿಟ್ಟು ಹೋದರೆ ನಾಳಿ ನಿಮ್ಮ ಗತಿಯೇನಂತ ಕೇಳ್ತಿನ್ನಾನು”

ನಮಗೆ ದಿಗಿಲಾಯಿತು. ಶೆಟ್ಟಿ ಮತ್ತು ದೇಸಾಯಿ ಗುಟ್ಟಾಗಿ ಮಾತಾಡುವುದನ್ನು ನಾವು ನೋಡಿದ್ದೆವು. ದೇಸಾಯಿಯನ್ನು ನಿಯಂತ್ರಿಸುವುದು ಆಗದ ಕೆಲಸ, ಸಿಂಗಾರೆವ್ವನ ಮುಖದಲ್ಲಿಯ ಅಸಹಾಯಕತೆಯನ್ನು ನಾನು ಗುರುತಿಸಬಲ್ಲೆ.

“ನನಗೇನ ಮಾಡಂದೆಪ?” - ಅಂದಳು. ತುಸು ಮತ್ತು ಗೌಡ ಮಾತಾಡಲಿಲ್ಲ. ಏನೋ ಲೆಕ್ಕ ಹಾಕಿದ.

ಸಿಂಗಾರೆವ್ವನ ಮುಖದಲ್ಲಿಯ ನಿರ್ಲಿಪ್ತತೆಯನ್ನು ಗುರುತಿಸಿದನೆಂದು ತೋರುತ್ತದೆ. ಬಹಳ ಹೊತ್ತು ಯೋಚಿಸುತ್ತಾ ಕೂತ. ಅವನ ಮನಸ್ಸಿನಲ್ಲೇನೋ ಸಂಚಿದೆಯೆಂದು ಅವನ ಮುಖ ನೋಡಿಯೇ ನಾನು ಕಂಡುಕೊಂಡೆ. ನಾವು ಹಾಗೇ ನಿಂತೇ ಇದ್ದವು. ಕೊನೆಗೆ ಗೌಡ ಎದ್ದು ನಿಂತ.

"ದತ್ತಕದ ಮಾತೇನಾದರೂ ದೇಸಾಯರ ಮುಂದ ತಗದಿದ್ದೇನು?" ಅಂದ. ಸಿಂಗಾರೆವ್ವ ಥಟ್ಟನೆ ಮುಖ ತಿರುಗಿಸಿ ಕಿಟಕಿಯಲ್ಲಿ ನೋಡತೊಡಗಿದಳು. ಹಾಗೆ ನಿಂತುಕೊಂಡೇ ಗೌಡ ಇನ್ನೂ ನಿಂತಿದ್ದನ್ನು ಗಮನಿಸಿ "ಇಲ್ಲಪ್ಪ" ಅಂದಳು.

"ಹಂಗಂದರ ಹೆಂಗವಾ? ಇಷ್ಟ ಆಸ್ತಿಯೆಲ್ಲ ಶೆಟ್ಟಿಗೆ ಪುಕ್ಕಟ ಹೋದರ ಮುಂದೇನ ಮಾಡ್ತಿ?"

"ದೈವದಾಗ ಇದ್ದದ್ದ ಯಾರ ತಪ್ಪಸಲಿಕ್ಕಾದೀತಪ?"

- ಎಂದು ಅನ್ಯಮನಸ್ಕಳಾಗಿ ಹೇಳಿ, ಹಾಗೇ ಹುಣಿಸೇ ಮೆಳೆಯ ಕಡೆ ನೋಡುತ್ತ ನಿಂತಳು. ಗೌಡ ಸುಮ್ಮನೆ ಹೋದ. ಅವನು ಹೋದದ್ದರ ಕಡೆಗೂ ಅವಳ ಗಮನವಿರಲಿಲ್ಲ. ನನಗೆ ಆತಂಕವಾಗಿತ್ತು. ಮೆಲ್ಲಗೆ ಅವಳ ಬಳಿ ಹೋಗಿ "ಎವ್ವ" ಅಂದೆ. ಈಗಷ್ಟೆ ಎಚ್ಚರಾದವಳ ಹಾಗೆ "ಆ?" ಅಂದು, ಹಿಂದಿರುಗದೆ "ಶೀನಿಂಗೀ ಆ ಹುಣಿಸೀ ಮೆಳೀಗೊಮ್ಮಿ ಹೋಗಿ ಬರೋಣೇನ" ಎಂದಳು. ನನ್ನ ಚಿಂತೆ ಬೇರೆ ಇತ್ತಲ್ಲ.

"ನಿಮ್ಮಪ್ಪ ಏನೋ ಹೇಳಿದರಲ್ಲ."

- ಅಂದೆ. ಇಷ್ಟು ಕೇಳಿದ್ದೇ, ಸಿಂಗಾರೆವ್ವ ವೀರಾವೇಶದಿಂದ ನನ್ನ ಕಡೆಗೆ ತಿರುಗಿ,

"ನನಗ ಏನ ಮಾಡಂದಿಗ ಹಡಸು? ದಿನಾ ಬೆಳಗಾದರ ನೀನಃ ನೋಡ್ತಿ. ಆ ನನ್ನ ಹಾಟ್ಯಾ ದೇಸಾಯಿ, ಬಯಲಾಟಕ ಹೋಗಬ್ಯಾಡೋ ಭಾಡ್ಯಾ, ಹೆಂಗಸರ ತೊಡಿ ನೋಡಿ ಸತ್ತಗಿತ್ತೀ ಅಂದೆ. ನನ್ನ ಮಾತ ಸೆಂಟಕ ಸಮ ಮಾಡಿ ಹೋದ. ರಾತ್ರಿ ಸುಖ ಇಲ್ಲ, ಬ್ಯಾಡ. ನನ್ನ ಹೇಂತಿಗಿ ಸುಳ ಇಲ್ಲಲಾ ಅಂತ ಒಮ್ಯಾದರೂ ಹಳಹಳಿಸಿದ್ನ? ನಾ ಅರಮನ್ಯಾಗ ಆ ಕಡೆ ಈ ಕಡೆ ಸುಳಿದಾಡಬೇಕಂತ, ಈ ಭ್ಯಾಡ್ಯಾ ಕೆಂಜಗಧಾಂಗ ಮಾರೀ ಮಾಡಿ ನೋಡತಾನಂತ. ಈ ಸುಖಾ ಸುರಕೊಳ್ಳಾಗ ಮದಿವ್ಯಾದಿನ? ಹಾಂಗಿದ್ದರ ಹೆಂಗಸ ಯಾಕ ಬೇಕಿತ್ತು? ಒಂದ ಗೊಂಬೀ ತಂದಿದ್ದರ ಆಗತಿರಲಿಲ್ಲ? ಚಿಮಣಾಗೋಳ ಇರಲಿಲ್ಲ? ಆ ಅಪ್ಪಂಬೂ ನನ್ನ ಹಾಟ್ಯಾಗ ಒಂಚೂರಾದರೂ ಕರಳದಾವೇನ? ಅರಮನಿ ನುಂಗಾಕ ಅವ ಹಾರ್ಯಾಡ್ತಾನ. ಯಾವ ಸುಖಕ್ಕಂತ ನಾನಿಲ್ಲಿರಬೇಕ ಅದನ್ಹೇಳು? ಅದೊಂದ ನಡಪಟ್ಟಿ; ಯಾರಿಗಾದರ ದಾನ ಮಾಡಿ ಹೊಳಿ ಭಾಂವೀ ಹಾರಿ ಸಾಯತೇನಷ್ಟ" - ಎಂದು ಹೇಳಿ ತಿರುಗಿ ಕಿಡಕಿಯಲ್ಲಿ ಮುಖ ಮಾಡಿ ಬಿಕ್ಕಿಬಿಕ್ಕಿ ಅಳತೊಡಗಿದಳು. ನನ್ನ ಕರುಳು ಚುರ್ರೆಂದವು. ಏನು ಹೇಳಲಿಕ್ಕೂ ನಾಲಗೆ ಏಳಲಿಲ್ಲ. ಸುಮ್ಮನೆ ನಾನು ಕಿಡಕಿಯಲ್ಲಿ ನೋಡಿದೆ: ತಿಳಿ ಹಸಿರು ಬೆಳೆಗಳ ಮಧ್ಯೆ ಕರಿಹಸಿರಿನ ಹುಣಿಸಿಯ ಮೆಳೆ ಮೈಮರೆತು ನಿಂತಹಾಗಿತ್ತು"

ನಮ್ಮ ಕಥಾನಾಯಕಿ, ನಮ್ಮೂರಿನ ಆ ಹುಣಿಸೆಯ ಮೆಳೆಯಿಂದ ತುಂಬ ಆಕರ್ಷಿತಳಾಗಿರುವುದರಿಂದ ಓದುಗರಿಗೆ ಅದರ ಪರಿಚಯ ಮಾಡಿಕೊಡಲೇಬೇಕೆಂದು ಅನ್ನಿಸುತ್ತಿದೆ. ಶೀನಿಂಗವ್ವನ ಕಥೆಗೆ ತುಸು ವಿರಾಮ ಹಾಕಿ ನೀವೀಗ ಅರಮನೆ ಬಿಟ್ಟು ಹೊರಬರಬೇಕು. ಉಸಿರುಗಟ್ಟಿಸುವ ಆ ಅರಮನೆಯ ವಾತಾವರಣದಿಂದ ನಿಮಗೂ ಕೊಂಚ ವಿಶ್ರಾಂತಿ ಸಿಕ್ಕ ಹಾಗೂ ಆಯ್ತು. ಹುಣಿಸೆಯ ಮೆಳೆಯನ್ನು ಕಂಡ ಹಾಗೂ ಆಯ್ತು. ಆದರಿಷ್ಟಂತೂ ನಿಜ, ಅದು ನೋಡಬೇಕಾದ ಸ್ಥಳವೇ. ಪ್ರವಾಸೀ ಕೇಂದ್ರವಲ್ಲ, ದೇವರ ದಯದಿಂದ ಅದರ ಮೇಲೆ ಸರ್ಕಾರದ ಕಣ್ಣು ಬೀಳುವುದೂ ಬೇಡ. ನಮ್ಮ ಕಥಾನಾಯಕಿ ಮತ್ತೆ ಮತ್ತೆ ಆ ಕಡೆ ನೋಡುತ್ತಿರುವುದರಿಂದ, ನನ್ನ ಎಳೆತನದ ಅನುಭವಗಳಲ್ಲಿ ಅದರ ಪಾತ್ರ ಬಹುಮುಖ್ಯವಾಗಿರುವುದರಿಂದ ತೋರಿಸುತ್ತೇನೆ.

ನಮ್ಮೂರಿನ ಪಶ್ಚಿಮಕ್ಕೆ ಸುಮಾರು ಆರು ಫರ್ಲಾಂಗಿನ ಅಂತರದಲ್ಲಿ ಕುಮುದವ್ವನ ಗುಡಿಯಿದೆಯೆಂದು ಹೇಳಿದ್ದೆನಲ್ಲ. ಆ ಗುಡಿಯಿರೋದು ಈ ಮೆಳೆಯ ಈಚೆ ಬದಿಯೊಳಗೆ. ಈ ಮೆಳೆಯಲ್ಲಿ ದಟ್ಟವಾಗಿ ಬೆಳೆದ ಭಾರೀ ಗಾತ್ರದ ಹುಣಿಸೆಯ ಮರಗಳಿವೆ. ಒಟ್ಟು ಸಾವಿರದೆಂಟು ಮರಗಳಿವೆಯೆಂದು ಹೇಳುತ್ತಾರೆ. ಚಿಕ್ಕಂದಿನಲ್ಲಿ ನಾವು ಇವುಗಳನ್ನು ಎಣಿಸುವ ಸಾಹಸ ಮಾಡಿದ್ದೆವು. ಎಷ್ಟು ಎಣಿಸಿದರೂ ಸಾವಿರದೆಂಟಂತೂ ಆಗುವುದೇ ಇಲ್ಲ. ಹೀಗೆ ಲೆಕ್ಕ ತಪ್ಪುವುದಿದೆಯಲ್ಲಾ, ಇದನ್ನೂ ನಾವು ಕುಮುದವ್ವನ ಮಹಿಮೆಯೆಂದೇ ಭಾವಿಸುತ್ತಿದ್ದೆವು. ಎಣಿಸುವುದಕ್ಕೆ ಹಣಗಲವಾಗುವ ಹಾಗೇ ಅವೂ ಬೆಳೆದಿವೆ. ಕೆಲವು ಮರಗಳು ಕೂಡಿಯೇ ಬೆಳೆದಿರುವುದರಿಂದ ಅವನ್ನು ಎರಡಾಗಿ ಎಣಿಸಬೇಕೋ, ಒಂದಾಗಿ ಎಣಿಸಬೇಕೋ ತಿಳಿಯುವುದಿಲ್ಲ.

ನೀವು ನಮ್ಮೂರಿಗೆ ಬಂದರೆ ಆ ಮೆಳೆ ನಿಮ್ಮನ್ನು ಆಕರ್ಷಿಸದೇ ಇರುವುದು ಸಾಧ್ಯವೇ ಇಲ್ಲ. ಯಾಕೆಂದರೆ ಸುತ್ತು ಬೋಳು ಬೋಳಾದ ಬಯಲಿನಲ್ಲಿ ಹಸಿರೆಂಬೋದು ಒಟ್ಟಾಗಿ ಕಾಣೋದು ಅಲ್ಲಿಯೇ. ಹಾಗೆ ಆಕರ್ಷಿತರಾಗಿ ಸಾಯಂಕಾಲ ಅಲ್ಲಿಗೆ ಬರುತ್ತೀರಿ ಎನ್ನೋಣ. ಒಮ್ಮೆ ಆ ಮೆಳೆಯನ್ನು ಪ್ರವೇಶಿಸಿದಿರೋ ನಿಮ್ಮ ಆಯಾಸ ದಣಿವುಗಳು ಪರಿಹಾರವಾಗಿ ಅಲ್ಲಿಯ ವಿಚಿತ್ರ ಗುಂಭಶಾಂತಿ ನಿಮ್ಮ ಸಹಜ ಇಂದ್ರಿಯಗಳನ್ನು ಮುಚ್ಚಿ, ತನ್ನ ಸೌಂದರ್ಯವನ್ನು ಆಸ್ವಾದಿಸುವಂಥ ಹೊಸ ಇಂದ್ರಿಯಗಳನ್ನು ಸೃಷ್ಟಿಸುತ್ತದೆ. ನೀವು ನಿಂತಲ್ಲಿ ಬಿಸಿಲಿಲ್ಲ. ಆದರೆ ಮರಗಳ ತುದಿಯಲ್ಲಿ ಬಿಸಿಲು ಬಂಗಾರ ಬಣ್ಣದ ಕ್ಷಿತಿಜಗಳನ್ನು ಕೊರೆಯುತ್ತದೆ. ಈ ಹೊಸ ಕ್ಷಿತಜ, ಗಾಳಿಗೆ ಮರ ಅಲುಗಾಡುತ್ತವಲ್ಲ ಆದ್ದರಿಂದ, ಮರದಿಂದ ಮರಕ್ಕೆ ನೆಗೆಯತೊಡಗುತ್ತದೆ. ಕಣ್ಣರಳಿಸಿ ನಿಂತ ನೀವು ಹೊರಗಿನೊಂದಿಗಿನ ಸಂಬಂಧ ಕಡಿದುಕೊಂಡು ಈಗ ಪೂರ್ತಿ ಮೆಳೆಯ ವಶರಾಗುತ್ತೀರಿ. ಯಾಕೆಂದರೆ ಈ ತನಕ ನೀವು ಕುಣಿಯುವ ಕ್ಷಿತಿಜ ಕಂಡವರಲ್ಲ, ನೀವು ಮೈಮರೆತದ್ದು ಗೊತ್ತಾದೊಡನೆ ಆ ಕ್ಷಿತಿಜ ನಿಮ್ಮೊಂದಿಗೆ ಆಟ ಆಡತೊಡಗುತ್ತದೆ. ಈ ಮರದ ತುದಿಯಲ್ಲಿ ಮಾಯವಾಗಿ, ಅಕೋ ಆ ಮರದ ತುದಿಯಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಲಿಂದಿಲ್ಲಿಗೆ, ಇಲ್ಲಿಂದ ಇನ್ನೆಲ್ಲಿಗೋ! ನೀವು ಆ ಕ್ಷಿತಿಜದ ಬೆನ್ನು ಹತ್ತಿ, ಎತ್ತ ಕಂಡರೆ ಅತ್ತ ತಿರುಗುತ್ತ, ಎಲ್ಲಿಂದೆಲ್ಲಿಗೋ ಮರದ ಬೊಡ್ಡೆಗಳನ್ನು ನಿರ್ಲಕ್ಷಿಸಿ ಸುತ್ತುತ್ತೀರಿ, ನಿಮಗೇ ಗೊತ್ತಿಲ್ಲದೆ. ಆಕಾಶ ಮತ್ತು ಮೆಳೆ ಎರಡೂ ಹೊಂಚಿ ಮಾಡುತ್ತಿರುವ ಮಾಟವಿದು. ಆಕಾಶದ ನೀಲಿ ನಿಧಾನವಾಗಿ ಕೆಂಪಾಗುತ್ತದೆ. ಈಗ ನಿಮ್ಮ ಕ್ಷಿತಿಜ ಕುಂಕುಮದ ಹುಡಿಯಾಗಿ ಹಾರತೊಡಗುತ್ತದೆ. ಬರಬರುತ್ತ ಕುಂಕುಮದ ಮೇಲೆ ಕಪ್ಪು ನೆರಳು ಕಾಣಿಸುತ್ತದೆ. ನೆರಳು ಗಟ್ಟಿಯಾಗಿ ಹೆಪ್ಪುಗಟ್ಟಿದ ರಕ್ತದಂತಾಗುತ್ತದೆ. ಈಗಲಾದರೂ ನಿಮಗೆ ಹೊರಹೋಗುವ ಬುದ್ಧಿ ಬಂದರೆ ಒಳ್ಳೆಯದು. ಹೊತ್ತು ಮುಳುಗಿದ್ದು ನಿಮಗೆ ಗೊತ್ತೇ ಆಗುವುದಿಲ್ಲ. ಸುತ್ತ ಕಾದ ಬಯಲ ಮಣ್ಣಿಗೆ ತಂಗಾಳಿ ತೀಡಿ ಬಂದು ಹಾಯಾದ ಮಣ್ಣಿನ ವಾಸನೆ ನಿಮ್ಮ ಮೂಗು ತುಂಬುತ್ತದೆ. ನಿಮಗೆ ಆಶ್ಚರ್ಯ! ಅರೆ ಅರೆ, ಮರಗಳಿವೆ, ಹಕ್ಕಿಗಳಿಲ್ಲ! ಗಾಳಿಯಿದೆ, ಸದ್ದಿಲ್ಲ! ನಿಮ್ಮ ಕಣ್ಣಿಗೆಲ್ಲ ಅಸ್ಪಷ್ಟವಾಗಿ ಕಾಣುತ್ತಿದೆ. ಮೇಲೆ ನೋಡುತ್ತೀರಿ, ಒಂದೆರಡು ನಕ್ಷತ್ರ ಮಿನುಗುತ್ತಿವೆ. ಅವು ಹುಣಸೇ ಮರಕ್ಕೆ ಬಿಟ್ಟ ನಕ್ಷತ್ರಗಳೋ, ಇಲ್ಲಾ ದೂರದ ಆಕಾಶದಲ್ಲಿರುವ ನಕ್ಷತ್ರಗಳೋ ಎಂದು ಭ್ರಮೆಯಾಗುತ್ತದೆ. ಅಂದರೆ ನೀವು ಪೂರ್ತಿ ಸಿಕ್ಕುಬಿದ್ದಿರಿ ಎಂದರ್ಥ. ಈಗಲೇ ಹೇಳಿಬಿಡುತ್ತೇನೆ, ನೀವಿನ್ನು ಹೊರಬರುವುದು ಸಾಧ್ಯವಿಲ್ಲ. ಹೊರಬರುವುದಕ್ಕೆ ನೀವು ತಡಕಾಡಿದಷ್ಟೂ ಮೆಳೆಯ ಆಳಕ್ಕೆ ಹೋಗುತ್ತಿರುವುದು ನಿಮಗೆ ಆ ಮೇಲೆ ತಿಳಿಯುತ್ತದೆ. ಈಗ ಪೂರ್ತಿ ಕತ್ತಲಾವರಿಸಿ ನೀವು ತಡಕಾಡಿದಲ್ಲೆಲ್ಲಾ ಮರಗಳೇ ಮುಂದೆ ಬಂದು ಕೈಗೆ ಸಿಕ್ಕುತ್ತವೆ. ಹಕ್ಕಿಗಳಿಲ್ಲ ಎಂದಿದ್ದಿರಲ್ಲ, ಈಗ ಕೇಳಿರಿ: ಹಕ್ಕಿಗಳ ವಿಚಿತ್ರನಾದ, ನೀವೆಂದೂ ಕೇಳಿರದ ಕಿರುಚಾಟ ಕೇಳಿಸುತ್ತದೆ. ಮರದಿಂದ ಮರಕ್ಕೆ ಯಾವುದೋ ಧಡೂತಿ ಪ್ರಾಣಿ ನೇತಾಡುತ್ತಿದೆಯೆಂದು, ಯಾರೋ ನಿಮ್ಮ ಹಿಂದೆಯೇ ನಿಂತಿದ್ದು ತಬ್ಬಿಕೊಂಡು ಹಿಸುಕಲು ಕಾತರರಾಗಿದ್ದಾರೆಂದು, ಮುಂದುಗಡೆ ಒಂದು ಹೆಜ್ಜೆಯಿಟ್ಟರೆ ಭಯಂಕರಾ ಕೃತಿಯೊಂದು ನಿಮ್ಮನ್ನು ನುಂಗಲು ಕಾದಿದೆಯೆಂದು ಅನ್ನಿಸತೊಡಗುತ್ತದೆ. ನಿಮಗೆ ಗೊತ್ತಿಲ್ಲದ ಸಾವಿರಾರು ಅಸ್ತಿತ್ವಗಳು ನಿಮ್ಮ ಸುತ್ತ ಹೊಂಚುತ್ತ ಓಡಾಡಿದ ಸರಸರ ಸದ್ದಾಗುತ್ತದೆ. ಇದಕ್ಕೆಲ್ಲ ಹೆದರಿ ಹೊಡೆವ ಎದೆಯ ಬಡಿತ ಕೇಳುತ್ತ ತಬ್ಬಿಬ್ಬಾಗಿ ನೀವು ನಿಂತರೆ ಹೋ ಎಂದು ಯಾರೋ ಚಪ್ಪಾಳೆ ತಟ್ಟಿ ನಕ್ಕದ್ದು ಕೇಳಿಸುತ್ತದೆ. ನಿಮ್ಮ ಎದೆ ಬಡಿತದಂತೆ ಅವುಗಳ ಕುಚೇಷ್ಟೆಯೂ ಜಾಸ್ತಿಯಾಗುತ್ತದೆ. ಇದ್ದಕ್ಕಿದ್ದಂತೆ ಮೈ ತಣ್ಣಗಾಗಿ ನೀವು ಯಾವುದೋ ನೀರಿನ ಮಡುವಿನಲ್ಲಿದ್ದಂತೆ, ಮಡುವಿನ ತಿರುಗಣೆಯಲ್ಲಿದ್ದಂತೆ, ಕೂಗದೆ, ಕೂಗದಿರಲಾರದೆ, ಈಸದೇ, ಈಸದಿರಲಾರದೆ, ಸತ್ತದ್ದು ಯಾರಿಗಾದರೂ ತಿಳಿದಿರಲೆಂದೋ, ಅಥವಾ ಯಾವುದಾದರೂ ಶಕ್ತಿಯಿದ್ದರೆ ಬದುಕಿಸಲೆಂದೋ ಅಂತೂ ಕಿಟಾರನೆ ಕಿರುಚುತ್ತೀರಿ. ಕಿರಿಚಿ ಮೂರ್ಛೆ ಬೀಳುತ್ತೀರಿ - ಖೇಲ್ ಖಲಾಸ್! ನೀವಿನ್ನು ದೈವಾಧೀನ, ನಿಮ್ಮ ನಶೀಬಿದ್ದರೆ ಬೆಳಿಗ್ಗೆ ನಿಮ್ಮ ನಮ್ಮ ಭೇಟಿ; ಇಲ್ಲದಿದ್ದರೆ ನಿಮ್ಮ ಆತ್ಮಕ್ಕೆ ಶಾಂತಿ ಕೋರುತ್ತೇನೆ.

ವಾಚಕ ಮಹಾಶಯರು ಮನ್ನಿಸಬೇಕು. ಈ ಮೆಳೆಯ ಒಳಹೊಕ್ಕು ನೀವು ನಿಮ್ಮ ಜೀವಕ್ಕೆ ಅಪಾಯ ತಂದುಕೊಳ್ಳಲೆಂದು ನನ್ನಾಸೆಯಲ್ಲ, ನಮ್ಮ ಕಥಾನಾಯಕಿ ಎಂಥಾ ಮೆಳೆಯ ಕನಸು ಕಾಣುತ್ತಿದ್ದಳು ಎಂದು ಹೇಳುವುದಕ್ಕೆ ಈ ಅನುಭವ ಹೇಳಿದೆ. ಈ ಭಾಗದ ದೆವ್ವ, ಭೂತ ಪಿಶಾಚಿಗಳೆಲ್ಲ ಈ ಮೆಳೆಯಲ್ಲೇ ವಾಸಿಸುತ್ತವೆ. ಈ ಭಾಗದ ಯಾವನೇ ಮಾಂತ್ರಿಕನಿರಲಿ, ದೆವ್ವ ಬಿಡಿಸಬೇಕಾದರೆ ಇಲ್ಲಿಯ ಹುಣಿಸೇ ಬರಲು ಬೇಕೆಬೇಕು. ಕೆಲವೊಮ್ಮೆ ಶಿವಾಪುರದ ಹುಣಿಸೇಮಳೆಯ ಹೆಸರು ಕೇಳಿಯೇ ಕೆಲವು ದೆವ್ವಗಳು ಹಿಡಿದವರನ್ನು ಬಿಟ್ಟದ್ದುಂಟು. ಅಮವಾಸ್ಯೆಯ ರಾತ್ರಿ ಊರಲ್ಲೇ ನಿಂತು ಈ ಕಡೆ ನೋಡಿದರೆ ಸಾಕು, ಕೊಳ್ಳಿದೆವ್ವಗಳ ಓಡಾಟ ಕಾಣಿಸುತ್ತದೆ. ಒಮ್ಮೆ ಅವುಗಳನ್ನು ನಾನೂ ನೋಡಿದ ಹಾಗೆ ನೆನಪಿದೆ. ಹೀಗಿದ್ದೂ ನಮ್ಮ ಕಥಾನಾಯಕಿಗೆ ಈ ಮೆಳೆ ಚೆಂದಾಗಿ ಕಂಡದ್ದು ಆಶ್ಚರ್ಯಕರ. ಅಥವಾ ಒಬ್ಬೊಬ್ಬರಿಗೆ ಒಂದೊಂದು ಥರ ಕಾಣುವುದಿದೆಯಲ್ಲ, ಅದೂ ಕುಮುದವ್ವನ ಮಹಿಮೆಯೇ ಇರಬೇಕು.

* * *

## ಅಧ್ಯಾಯ - ೧೮

ಈಗ ಹದಿನೈದು ದಿನಗಳ ಹಿಂದೆ ನಂದಗಾಂವಿಗೆ ಹೋಗಿದ್ದ ಗೌಡ ಶೀಗೀ ಹುಣ್ಣಿಮೆ ಇನ್ನೆರಡು ದಿನ ಇದೆ ಎನ್ನುವಾಗ ಮತ್ತೆ ಬಂದ. ಈ ಸಲವೂ ಒಬ್ಬ ಪೈಲವಾನನನ್ನು ಜೊತೆಗೆ ಕರೆತಂದಿದ್ದ. ಆತ ಮತ್ತೆ ಮತ್ತೆ ಬರುತ್ತಿರುವುದು ನಮಗ್ಯಾರಿಗೂ ಸರಿ ಬರಲಿಲ್ಲ. ಆದರೆ ಅಸಮಾಧಾನದ ದೃಷ್ಟಿಗಳಿಗೆ ಮೈ ಒಡ್ಡಿ ಅವನ ಮೈ ದಡ್ಡುಬಿದ್ದಿತ್ತು. ಈ ಸಲ ಮಾತ್ರ ಪಕ್ಕಾ ಹಂಚಿಕೆಯೊಂದಿಗೆ ಬಂದ ಹಾಗಿತ್ತು. ಯಾಕೆಂದರೆ ಬಂದ ದಿನ ಮಧ್ಯಾಹ್ನ ದೇಸಾಯಿ ಮಲಗಿದ್ದಾಗ ನಾವ್ಯಾರೂ ದರ್ಬಾರಿನ ಕಡೆ ಸುಳಿಯದಿದ್ದಾಗ ಕಾಗದ ಪತ್ರಗಳನ್ನು ಹುಷಾರಾಗಿ ಪರೀಕ್ಷಿಸಿದ್ದ. ಉದ್ದುದ್ದ ಕಾಗದಗಳನ್ನು ವಿಂಗಡಿಸಿ, ಪಿನ್ನು ಚುಚ್ಚಿ, ಸಿವುಡು ಕಟ್ಟಿ ಮಡಿಚಿ, ಎರಡು ಉದ್ದ ಪಾಕೀಟುಗಳಲ್ಲಿ ಹಾಕಿ, ಎರಡನ್ನೂ ಕೋಟಿನ ಕಿಸೆಯಲ್ಲಿ ಜತನವಾಗಿಟ್ಟುಕೊಂಡಿದ್ದ.

ನಾನು ಇದನ್ನೆಲ್ಲ ಸಿಂಗಾರೆವ್ವನಿಗೆ ಹೇಳಿದರೆ ಆಕೆ ಬೇರೆ ಖುಷಿಯಲ್ಲಿದ್ದಳು. ಈ ಊರಿಗೆ ಬಂದು ಇಷ್ಟು ದಿನಗಳಾದರೂ ಒಮ್ಮೆಯೂ ಆಕೆ ಮನೆಬಿಟ್ಟು ಹೊರಗೆ ಹೋಗಿರಲಿಲ್ಲ. ತೋಟದ ಕಡೆ ಹೋಗುವ ತನ್ನ ಆಸೆಯನ್ನು ದೇಸಾಯಿಗೆ ಹೇಳಿದಾಗ 'ಹ್ಯಾಗೂ ಶೀಗೀ ಹುಣ್ಣಿಮೆ ಬಂತಲ್ಲ, ಆ ದಿನ ತೋಟಕ್ಕೆ ಹೋಗಿ ಬರಬಹುದೆಂದು, ಹೇಳಿದ್ದ. ಆ ದಿನ ಮತ್ತು ಗಳಿಗೆಯನ್ನು ಎದುರು ನೋಡುತ್ತಿದ್ದ ಅವಳಿಗೆ ನಾನು ಹೇಳಿದ ವಿಷಯ ತಟ್ಟಲೇ ಇಲ್ಲ. ಅವಳಿಗೇ ಬೇಡಾದ ಮೇಲೆ ನಾನ್ಯಾಕೆ ತಲೆ ಕೆಡಿಸಿಕೊಳ್ಳಲಿ? ಸುಮ್ಮನಾದೆ.

ಈ ಸಲದ ವಿಶೇಷವೆಂದರೆ ಗೌಡ ಸದಾ ದೇಸಾಯಿಗಂಟಿಕೊಂಡೇ ಇರುತ್ತಿದ್ದ. ಅವನು ಹೋಗುಬರುವಲ್ಲೆಲ್ಲ ಇವನೂ ಜೊತೆಗೇ ಇರುತ್ತಿದ್ದ. ತಾಲೀಮಿಗೂ ಹೋದ. ಕುಡಿಯೋದಕ್ಕೂ ಹೋದ. ಇವನ ಬಯಲಾಟವನ್ನು ನೋಡಿದ್ದಾಗಿ ಸುಳ್ಳು ಸುಳ್ಳೇ ಹೇಳಿ, ಅಟ್ಟದ ಮೇಲೆ ದೇಸಾಯಿ ಥೇಟ್ ರಾಜನ ಹಾಗೆ ಕಾಣಿಸುವುದಾಗಿ ಅದಕ್ಕೆ ಸೇರಿಸಿದ. ಇಷ್ಟಾದರೆ ದೇಸಾಯಿಯನ್ನು ಹಿಡಿಯುವವರ್ಯಾರು? ಊಟ ಬಿಟ್ಟು ಅಂದಿನ ಬಯಲಾಟದ ರಾಜನ ಮಾತುಗಳನ್ನು ರಾಗವಾಗಿ ಮತ್ತೆ ಮತ್ತೆ ಹೇಳಿದ. ಒಂದೆರಡು ತಾರಕ ಕೂಡ ನುಡಿದ. ಗೌಡನಂತೂ ಅಗತ್ಯಕ್ಕಿಂತ ಹೆಚ್ಚು ನಗುತ್ತಿದ್ದ.

ಆಹಾ, ಓಹೋ, ಭಲಾ, ಭೇಷ್ ಎನ್ನುತ್ತ, ಬೆರಗನ್ನು ನಟಿಸುತ್ತ ಗೌಡ ದೇಸಾಯಿಯನ್ನು ಉಬ್ಬಿಸಿದ. ತನ್ನನ್ನು ಹೊಗಳಲು ಈ ಗೌಡನ ಬಳಿ ಸರಿಯಾದ ಮಾತುಗಳಿಲ್ಲವೇನೋ ಎಂದು ದೇಸಾಯಿ ಕೊನೆಗೆ ತನ್ನನ್ನು ತಾನೇ ಹೊಗಳಿಕೊಳ್ಳಲಾರಂಭಿಸಿದ. ಅಥವಾ ತನ್ನನ್ನು ಹೊಗಳಬೇಕಾದ ರೀತಿಯನ್ನು ಗೌಡನಿಗೆ ಕಲಿಸತೊಡಗಿದ. ಬೆರಳು ತೋರಿದರೆ ಹಸ್ತನುಂಗುವ ಗೌಡನಿಗೆ ಇಷ್ಟು ಸುಳಿ ಸಿಕದಕದ್ದೇ ಸಾಕಾಗಿ, ದೇಸಾಯಿಯ ಮಾತುಗಳನ್ನೆಲ್ಲ ಅವನಿಗೇ ತಿರುಗಿಸಿ, ನಾ ಹೇಳ ಬೇಕೆಂದದ್ದೂ ಇದನ್ನೇ - ಎಂದೂ ಹೇಳಿದ. ಊಟಕ್ಕೆ ನೀಡುತ್ತಿದ್ದ ನನಗೂ ಅಡಿಗೆ ಮನೆಯಲ್ಲಿದ್ದ ಸಿಂಗಾರವ್ವನಿಗೂ ಇವನ ಮನಸ್ಸಿನಲ್ಲೇನೋ ಸಂಚಿದೆ ಎಂದು ಖಾತ್ರಿಯಾಗಿತ್ತು.

ರಾತ್ರಿ ದರ್ಬಾರದಲ್ಲಿದ್ದ ದೊಡ್ಡ ಕಂದೀಲನ್ನು ದಾಸಾಯಿ ತನ್ನ ಕೋಣೆಗೆ ಒಯ್ದದ್ದರಿಂದ ಅಲ್ಲಿ ಕತ್ತಲಿತ್ತು. ಉಂಡು ಮಲಗುವ ಮುನ್ನ ನಾನು ಹಣಿಕಿ ಹಾಕಿದಾಗ ಗೌಡನೊಬ್ಬನೇ ದರ್ಬಾರಿನಲ್ಲಿ ಬಹುಶಃ ಯಾವುದೋ ಚಿಂತೆಯಿಂದ ಅಡ್ಡಾಡುತ್ತಿದ್ದ. ನಾನು ಬಾಗಿಲಿನಲ್ಲಿ ನಿಂತದ್ದು ಕಾಣುತ್ತಿರಲಿಲ್ಲವಾದ್ದರಿಂದ ಅದ್ಯಾಕೆ ಹೀಗೆ ಅಡ್ಡಾಡುತ್ತಿದ್ದ. ನಾನು ಬಾಗಿಲಿನಲ್ಲಿ ನಿತದ್ದು ಕಾಣುತ್ತಿರಲಿಲ್ಲವಾದ್ದರಿಂದ ಅದ್ಯಾಕೆ ಹೀಗೆ ಅಡ್ಡಾಡುತ್ತಿದ್ದಾನೆಂದು ತುಸು ಹೊತ್ತು ನಿಂತೆ. ಒಳಗೆ ಪಡಸಾಲೆಯ ತನ್ನ ಕೋಣೆಯಲ್ಲಿ ದೇಸಾಯಿ ಕಂದೀಲಿನ ಮುಂದೆ ಕೂತು ಬಹಳ ಗಂಭೀರವಾಗಿ ಏನನ್ನೋ ಓದುತ್ತಿದ್ದ. ಮತ್ತು ಹಾಗವನು ಓದುವಾಗ ಅವನ ಮುಖದ ಮೇಲಿನ ಪ್ರತಿಕ್ರಿಯಗಳನ್ನು ತಿಳಿಯಲು ಗೌಡ ಆಗಾಗ ಬಂದು ಇಣಕಿ ನೋಡುತ್ತಿದ್ದ. ಮತ್ತೆ ಮೆಲ್ಲಗೆ ಕಳ್ಳನಂತೆ ಹೆಜ್ಜೆ ಇಡುತ್ತ ಹಿಂದೆ ಸರಿಯುತ್ತಿದ್ದ. ಈ ಆಟ ಅನಿರೀಕ್ಷಿತವಾದ್ದರಿಂದ ನಾನು ಬಾಗಿಲು ಬಿಟ್ಟು ಕಂಬದ ಮರೆಯಲಿ ನಿಲ್ಲುವುದಕ್ಕೆ ಹೋದೆ. ಅಲ್ಲಿ ನನ್ನ ಹಾಗೆ ಅಡಗಿ ಯಾರೋ ನಿಂತದ್ದು ಕುಣಿಸಿತು ! ಗೌಡನ ಪೈಲವಾನ ಪಟ್ಟಾಂಗಳದಲ್ಲಿ ಮಲಗಿದ್ದ. ಇವನ್ಯಾರಿ ದ್ದೀತು ? ಇವರ ಸಹವಾಸವೇ ಬೇಡವೆಂದು ನನ್ನ ಪಾಡಿಗೆ ನಾನು ಅಂತಸ್ತಿಗೇರಿದೆ. ಸಿಂಗಾರೆವ್ವನಿಗೆ ಹೇಳಬೇಕೆಂದರೆ ಅವಳಾಗಲೇ ಮಲಗಿದ್ದಳು. ನಿದ್ದೆ ಹತ್ತಿತ್ತೋ ಇಲ್ಲವೋ ತಿಳಿಯೋ ಕುತೂಹಲವೂ ಆಗಲಿಲ್ಲ. ಹೊದ್ದುಕೊಂಡು ಮಲಗಿಬಿಟ್ಟೆ.

ಮಾರನೆಯ ದಿನ ಮಧ್ಯಾಹ್ನದಿಂದಲೇ ನಾನು ಮತ್ತು ಸಿಂಗಾರೆವ್ವ ನಾಳಿನ ಶೀಗೀ ಹುಣ್ಣಿಮೆ ತಯಾರಿಗೆ ತೊಡಗಿದೆವು. ಮನೆಯಲ್ಲಿ ಹೆಣ್ಣಾಳು ಇರಲಿಲ್ಲ. ನಂಜಿ ಹೋದಮೇಲೆ ಇದ್ದವಳೊಬ್ಬಳೂ ಗರ್ಭಿಣಿಯಾಗಿ ಬಿಟ್ಟು ಹೋದದ್ದರಿಂದ ಅಡಿಗೆಯ ಭಾರ ಈ ಒಂದು ತಿಂಗಳಿನಿಂದ ನನ್ನ ಮೇಲೆ ಬಿದ್ದಿತ್ತು. ಆದರೆ ಹಬ್ಬದ ಅಡಿಗೆ ನನ್ನಬ್ಬೊಳಿಂದಲೇ ಅಸಾಧ್ಯವೆಂದು ಬೇರೊಬ್ಬ ಆಳನ್ನು ಕರೆತಂದಿದ್ದೆ. ಸಿಂಗಾರೆವ್ವ ದೇಖರೇಖಿಗೆ ನಿಂತಳು. ದರ್ಬಾರಿನಲ್ಲಿ ಗಂಡಸರ ಮಧ್ಯೆ ಏನು ನಡೆಯುತ್ತಿದೆಯೆಂದು ನಮಗೆ ತಿಳಿಯಲೂ ಇಲ್ಲ. ಆ ಕಡೆ ನಾವು ಕಣ್ಣು ಹಾಯಿಸಲೂ ಇಲ್ಲ. ಹೆಣ್ಣಾಳು ಹುರೆಕ್ಕಿ ಹೋಳಿಗೆಯ ತಯಾರಿಗೆ ಕೂತಳು. ನಾನು ಜೋಳದ ವಡೆಯ ಹಿಟ್ಟಿನಲ್ಲಿ ಕೈಹಾಕಿದೆ. ವಡೆ - ಹೋಳಿಗೆ ಕರಿಯುವ ಕೆಲಸ ಬೆಳ್ಳಂಬೆಳತನಕ ಆಗುವುದರಿಂದ ಮಧ್ಯಾಹ್ನ ತುಸು ಮಲಗೋಣವೆಂದು ನಾನು ಹೇಳಿದೆ. ಸಿಂಗಾರೆವ್ವ ಕೇಳಲಿಲ್ಲ. ಉಳಿದ್ಯಾವ ಹಬ್ಬಗಳಲ್ಲೂ ಸಿಂಗಾರೆವ್ವ ಈ ಪರಿ ಓಡಾಡಿದಿಲ್ಲ. ಆದರೆ ನಾಳೆ ಖುದ್ದಾಗಿ ತೋಟಕ್ಕೆ ಅದೂ ಪ್ರಥಮ ಬಾರಿ ಅರಮನೆ ಬಿಟ್ಟು ಹೊರಗೆ ಹೋಗುವುದಿತ್ತಲ್ಲ, ಅದಕ್ಕೇ ಅವಳ ತರಾತುರಿ ಮಿತಿಮೀರಿತ್ತು. ದೇಸಾಯಿ ಎಂದಿನಂತೆ ಬಯಲಾಟದ ತನ್ನ ಮಾತುಗಳನ್ನು ಬಾಯಿಪಾಠ ಮಾಡುತ್ತಿದ್ದ. ಚಿಮಣಾ ಸಿಕ್ಕದ್ದರಿಂದ ನಾಳೆ ಆಗಬೇಕಿದ್ದ ಅವನ ಬಯಲಾಟ ದೀಪಾವಳಿಯ ದಿನ ಆಗುವುದೆಂದು ನಿರ್ಧಾರವಾಗಿ ಅವನಿಗೆ ನಿರಾಶೆಯಾಗಿತ್ತು. ಅದಕ್ಕೂ ಈಗಿನಿಂದಲೇ ತಯಾರಿ ನಡೆಸಿದ್ದ. ಇನ್ನೊಬ್ಬರಿಗೆ ಕೇಳಿಸದಂತೆ ಏನೇನೋ ಮಾತಾಡಿಕೊಳ್ಳುತ್ತ ಒಂದೊಂದು ಕಂಬದ ಬಳಿಗೆ ಹೋಗಿ ಅದೇ ನಾಯಕಿ ಎಂಬಂತೆ ಹಸ್ತಾಭಿನಯ ಮಾಡುತ್ತಿದ್ದ. ಮಾತು ಮರೆತು ಒಮ್ಮೊಮ್ಮೆ ಅವನ ಉತ್ಸಾಹ ಮಿತಿಮೀರಿ ಮಾತು ಇನ್ನೊಬ್ಬರಿಗೆ ಕೇಳಿಸುವಂತೆ ಹೊರಬರುತ್ತಿತ್ತು. ಛೇ ಎಂದು ಕಂಬಕ್ಕೊಂದು ಗುದ್ದು ಕೊಟ್ಟು, ಕಣ್ಣು ಮುಚ್ಚಿ ಏಕಾಂತ ಸಾಧಿಸಿ ಆ ಮಾತನ್ನು ಮತ್ತೆ ಮೊದಲಿನಿಂದ ಸುರುಮಾಡುತ್ತಿದ್ದ.

ಎರಡೂ ಹಿಟ್ಟು ಕಲಸಿ ಕೊನಿಮಿಗಿಯಲ್ಲಿಟ್ಟು ಹದಕ್ಕೆ ನೆನೆಯಿಟ್ಟಾಗ ಸಾಯಂಕಾಲವಾಗಿತ್ತು. ಕೈತೊಳೆದುಕೊಂಡು ಹೊರಬಂದೆ. ದನಕರು ಬರುವ ಹೊತ್ತಾಯಿತು ಎಂದು ಹಿತ್ತಲ ಬಾಗಿಲು ತೆರೆದಿಟ್ಟು ಬಂದೆ. ಅಷ್ಟರಲ್ಲಿ ದೇಸಾಯಿ ತನ್ನ ಕೋಣೆಯ ಹಾಸಿಗೆಯನ್ನೆಲ್ಲ ಕೊಡುವುತ್ತಿದ್ದುದು ಕಾಣಿಸಿತು. ಏನಿರಬೇಕೆಂದು ಅಲ್ಲಿಗೆ ಹೋದೆ. ಒಳಗೆ ಗೌಡ, ಶೆಟ್ಟಿ ಇಬ್ಬರೂ ಇದ್ದರು. ನನ್ನನ್ನು ಕಂಡೊಡನೆ ರಗ್ಗನ್ನು ಝಾಡಿಸುತ್ತಿದ್ದ ದೇಸಾಯಿ -

“ಶೀನಿಂಗವ್ವಾ, ಗಾದೀಕೆಳಗೊಂದ ಕಾಗದಿತ್ತಲ್ಲ, ನೋಡಿಯೇನು? ಅಂದ.

“ಇಲ್ಲರೀ” ಅಂದೆ.

“ಒಂದು ಕವರಿತ್ತು ನೋಡು, ಇಲ್ಲಿಟ್ಟಿದ್ದೆ” ಎಂದು ಅದರ ಆಕಾರ ಅಳತೆಗಳನ್ನು ಕೈಯಿಂದ ತೋರಿಸಿದ.

“ನಾ ನೋಡೆ ಇಲ್ಲಿರಿ” ಅಂದೆ.

“ಮುಂಜಾನೇ ಹಾಸಿಗೀ ಯಾರು ತೆಗೆದರು?”

“ನಾನs ತೆಗೆದ. ಬರೀ ರಗ್ಗ ಮಡಿಚಿಟ್ಟೆ, ಅಷ್ಟ” -

“ಕಸಾ ಗುಡಿಸೋವಾಗೇನೂ ಕಾಣಲಿಲ್ಲ?”

“ಇಲ್ಲರಿ”

“ದೊರೆಸಾನಿ ತಗೊಂಡಾಳೇನು, ಕೇಳು.”

- ಎಂದು ಹೇಳಿ, ನಾನು ಹೊರಡುವುದಕ್ಕೂ ಕಾಯದೆ ತಾನೇ ಮೇಲೆ ಹತ್ತಿಹೋದ. ಅವನ ಕೋಣೆಯನ್ನು ಹಸನು ಮಾಡುತ್ತಿದ್ದವಳು ನಾನೇ. ಒಮ್ಮೊಮ್ಮೆ ಸಿಂಗಾರೆವ್ವನೂ ಅವನ ಕೋಣೆಗೆ ಹೋಗುವುದಿತ್ತು. ನಮ್ಮಿಬ್ಬರನ್ನುಳಿದು ಬೇರೆ ಯಾರೂ ಅಲ್ಲಿ ಪ್ರವೇಶಿಸುತ್ತಿರಲಿಲ್ಲ. ಅಲ್ಲದೆ ಅಲ್ಲಿ ಅಂಥ ಅಪರೂಪದ್ದೇನೂ ಇರಲಿಲ್ಲಿ ಕೂಡ. ಎಂಥಾ ಕಾಗದ, ಏನು ಕಥೆ ಎಂದು ಹೊಯ್ಕಾಗಿ ನಾನೂ ಅವನ ಬೆನ್ನ ಹಿಂದೆ ಅಂತಸ್ತಿಗೇರಿದೆ. ಸಿಂಗಾರೆವ್ವ ನನ್ನ ಹಾಗೆ ತನಗೇನೂ ಗೊತ್ತಿಲ್ಲವೆಂದಳು - ದೇಸಾಯಿ ಚಡಪಡಿಸತೊಡಗಿದ. ಅದ್ಯಾವುದೋ ಮಹತ್ವದ ಕಾಗದವೆಂದು ಅವನ ಚಡಪಡಿಕೆ ನೋಡಿಯೇ ಗೊತ್ತಾಯಿತು. ಸಿಂಗಾರೆವ್ವ ತಡೆಯದೆ “ಏನ ಕಾಗದ ಅದು?” ಎಂದಳು. ದೇಸಾಯಿಗದು ಕೇಳಿಸಲಿಲ್ಲವೋ, ಅಥವಾ ಉತ್ತರ ಕೊಡೋದಕ್ಕೆ ಮನಸ್ಸಿರಲಿಲ್ಲವೊ ತನ್ನ ಕಳವಳದಲ್ಲಿ ತಾನಿದ್ದ. ಅವಸರದಲ್ಲಿ ಏನೋ ಹೇಳುವವನಂತೆ ಕೂತು, ಏನೂ ಹೇಳದೆ ಎದ್ದು ನಿರಾಶೆಯಿಂದ ಕೆಳಕ್ಕೆ ಹೊರಟ್ಟಿದ್ದ. ಅಷ್ಟರಲ್ಲಿ ಗೌಡನೂ ‘ಸಿಕ್ಕಿತೇನ್ರಿ?’ ಎನ್ನುತ್ತ ಮೇಲೆ ಬಂದ. ಇಲ್ಲ ಎಂದು ಹೇಳಿ ಹೊರಡುವುದರಲ್ಲಿದ್ದಾಗ,

“ಯಾವುದು? ನಾ ಕೊಟ್ಟ ಕಾಗದೇನ್ರಿ?” ಎಂದು ಗೌಡ ಕೇಳಿದ.

“ಹೌಂದು, ಅದೂ ಅದರಾಗs ಇತ್ತು”

“ಅಂದರ ನಾ ಕೊಟ್ಟದ್ದಲ್ಲದ ಇನ್ನೊಂದಿತ್ತೇನ್ರಿ?”

“ಹೌಂದು, ನೀವು ತಗೊಂಡೀರೇನು?”

“ಇಲ್ಲ, ಹುಡುಕೋಣ ತಡೀರಿ”

- ಎಂದು ಗೌಡ ಹೇಳುತ್ತಿದ್ದಂತೆಯೇ ದೇಸಾಯಿ ಕೆಳಗಿಳಿದು ಹೋದ. ಗೌಡ ಇಳಿಯಲಿಲ್ಲ. ದೇಸಾಯಿಯ ಪ್ರಶ್ನೆಗಳನ್ನೇ ಇವೂ ಕೇಳಿದ. ಇಬ್ಬರೂ ನಮಗ್ಗೊತ್ತಿಲ್ಲ ಎಂದೆವು. ಅದೇನು ಕಾಗದ ಎಂದು ಸಿಂಗಾರೆವ್ವ ಇವನನ್ನೂ ಕೇಳಿದಳು. ಏನಿಲ್ಲ ಎಂದು ಹಾರಿಕೆಯ ಉತ್ತರಕೊಟ್ಟು ವಕ್ರವಾಗಿ ನನ್ನ ಕಡೆ ನೋಡುತ್ತ “ನಿನ್ನೆ ರಾತ್ರಿ ಮರ್ಯಾ ಏನಾದರೂ ಈ ಕಡೆ ಬಂದಿದ್ನೇನು?” ಎಂದು ಕೇಳಿದ. ಇದ್ದಿರಬೇಕೆನೋ ಅಂದುಕೊಂಡೆ. ಯಾಕೆಂದರೆ ನಿನ್ನೆ ರಾತ್ರಿ ದೇಸಾಯಿ ಆ ಕಾಗದ ಓದುತ್ತಿದ್ದಾಗ, ಗೌಡ ಹೊರಗೆ ಹೊಂಚಿದ್ದಾಗ, ಕಂಬದ ಮರೆಯಲ್ಲಿ ಯಾರೋ ನಿಂತದ್ದನ್ನು ನೋಡಿದ್ದೆ, ಮರ್ಯಾ ಇದ್ದರೂ ಇರಬಹುದೆನಿಸಿತು. ಹೇಳಿ ಯಾರದೋ ಪೀಡೆಯನ್ನು ಮತ್ಯಾಕೆ ಉಡಿಗೆ ಹಾಕಿಕೊಳ್ಳಲಿ? ನಂಗೊತ್ತಿಲ್ಲ ಅಂದೆ. ಗೌಡ ಕೆಳಗೆ ಹೋದ. ನಾವಿಬ್ಬರೂ ಏನಿದರ ಅರ್ಥ ಎಂಬಂತೆ ಪರಸ್ಪರ ಮುಖ

ನೋಡಿಕೊಂಡೆವು. ಏನೂ ಬಗೆಹರಿಯಲಿಲ್ಲ. “ಗಂಡಸರ ವ್ಯವಹಾರs ಹಿಂಗ” ಎಂದು ಸಿಂಗಾರೆವ್ವ ಹೇಳಿ ಆ ಸಮಸ್ಯೆಗೆ ನಮ್ಮ ಪಾಲಿನ ಮುಕ್ತಾಯ ಕೊಟ್ಟಳು.

* * *

## ಅಧ್ಯಾಯ - ೧೯

ಅದರ ಮಾರನೇ ದಿನ ಅಂದರೆ ಶೀಗೀ ಹುಣ್ಣಿಮೆಯ ದಿನ ಬೆಳಿಗ್ಗೆಯೇ ಗೌಡ ನಂದದಾಂವಿಗೆ ಹೋದ. ಹಬ್ಬದ ದಿನವೆಂದರೂ ಕೇಳಲಿಲ್ಲ. ನಿಂಗ ತೋಟಕ್ಕೆ ಹೋಗಿ ಚರಗ ಚೆಲ್ಲಿ ಬಂದಿದ್ದ. ಆ ದಿನ ದೇಸಾಯಿ ತೋಟಕ್ಕೆ ಬರುವುದಿಲ್ಲವೆಂದು ಹೇಳಿದ್ದರಿಂದ ಮನೆಯಲ್ಲೇ ಅವನಿಗೆ ಊಟಕ್ಕೆ ನೀಡಿ, ನಾವು ಹೆಡಿಗೆ ತುಂಬಿಕೊಂಡು ತೋಟಕ್ಕೆ ಹೋಗಲು ಸಿದ್ದರಾದೆವು. ಸಿಂಗಾರೆವ್ವ ತಲೆ ಬಾಚಿಕೊಂಡು ಚಂದ್ರಕಾಳಿ ಸೀರೆ ಉಟ್ಟಳು. ಕೈಬಳೆ ಮತ್ತು ತನ್ನ ಅತ್ತೆಯ ನಡುಪಟ್ಟಿಯನ್ನೂ ಧರಿಸಿ ಮ್ಯಾಲೊಂದು ಬುರುಕಿ ಹಾಕಿಕೊಂಡಳು. ನನಗೂ ತನ್ನದೊಂದು ಇಳಕಲ್ ಸೀರೆಕೊಟ್ಟಳು. ಕೊಲ್ಲಾರಿ ಬಿಗಿದು ನಿಂಗ ಚಕ್ಕಡಿ ಹೂಡಿದ. ಗಾಡಿ ಹತ್ತಿದೆವು.

ಸಿಂಗಾರೆವ್ವನಿಗೆ ಏನೊಂದು ಖುಷಿ, ಎಷ್ಟೊಂದು ಉಮೇದಿ! ಊರು ದಾಟಿದೊಡನೆ ಮತ್ತು ಅಂತಸ್ತಿನ ಕಿಡಕಿಯಿಂದ ಕಾಣೋ ವಿವರಗಳನ್ನೆಲ್ಲ ನನಗೆ ತೋರಿಸತೊಡಗಿದಳು. ನಾನು ಕಂಡರಿಯದ ಸ್ಥಳವೇನಲ್ಲ ಅದು. ಆದರೆ ಆಕೆ ಕಣ್ಣರಳಿಸಿಕೊಂಡು ಅದನ್ನೋಡs ಇದನ್ನೋಡs ಎಂದು ಕೈಮಾಡಿ ತೋರಿಸುತ್ತಿರುವಾಗ ನಾನು ಅದಾವುದನ್ನೂ ನೋಡದೆ ಅವಳನ್ನೇ ನೋಡುತ್ತಿದ್ದೆ. ದೊರೆಸಾನಿಯ ಉದ್ಗಾರಗಳಿಂದ ನಿಂಗನೂ ಸಡಗರಗೊಂಡ.

ನಮ್ಮ ತೋಟ ಇನ್ನೂ ಚೆನ್ನಾಗಿ ಬೆಳಿದಿತ್ತು. ಭರ್ತಿ ಬೆಳೆಯ ಹೊಲಗದ್ದೆಗಳ ಹಸಿರು ಫಳಫಳ ಹೊಳೆಯುತ್ತಿತ್ತು. ಕಣ್ಣು ಹರಿದಲ್ಲೆಲ್ಲ ನೆಲದ ಉಲ್ಲಾಸ ಹಸಿರಾಗಿ ಉಕ್ಕಿದಂತೆ ಕಾಣುತ್ತಿತ್ತು. ಒಂದೊಂದು ಬೆಳೆ ಒಂದೊಂದು ಥರ ಹಸಿರಾಗಿತ್ತು. ನಿಚ್ಚಳವಾದ ಬಿಸಿಲು ಹಸಿರಿನ ಗರಿಗಳ ಅಂಚಿಗೆ ಬಂಗಾರದ ಗಿಲೀಟಿನ ಗೆರೆ ಕೊರೆದಂತೆ ಅಂಟಿಕೊಂಡಿತ್ತು. ಗಾಳಿ ಬೀಸಿದಾಗ ಈ ಗೆರೆಗಳು ಹೊಯ್ದಾಡಿ, ತಳಕಾಡಿ, ಕಣ್ಣಿಗೆ ಥರಾವರಿ ನಕ್ಷೆಗಳ ಇಂದ್ರಜಾಲವನ್ನೇ ಹರಡುತ್ತಿದ್ದವು. ಕೊಬ್ಬಿದ ಬೆಳೆಗಳಿಗೆ, ಅವುಗಳ ಹುಡಿಗೆ ತಾಗಿದ ತಂಗಾಳಿ ಅಲೆಅಲೆಯಾಗಿ ಬೀಸಿ ಸುಖೋನ್ಮಾದದ ಸುವಾಸನೆ ಬೀರಿ ಮೈಮನಸ್ಸಿಗೆ ಹಿತಕಾರಿಯಾಗಿತ್ತು. ಈ ಊರಿನಲ್ಲಿ ತರತರದ ಹಕ್ಕಿಗಳಿದ್ದದ್ದು ನಮಗೆ ಗೊತ್ತಾದದ್ದೇ ಈಗ. ನಾವು ಕಂಡರಿಯದ, ಹೆಸರು ಕೇಳರಿಯದ ಅನೇಕ ಹಕ್ಕಿಗಳು ನಾನಾ ನಮೂನೆಯ ದನಿ ಮಾಡಿ ಕೂಗುತ್ತಿದ್ದವು.

ಆಳುಗಳ ಊಟವಾದ ಮೇಲೆ ನಾವು ಕೂತೆವು. ಸಿಂಗಾರೆವ್ವ, ಬುರುಕಿ ತೆಗೆದಳು. ಎಂಥಾ ಚೆಲುವೆ ನಮ್ಮ ಸಿಂಗಾರೆವ್ವ! ದಿನಾ ನೋಡುತ್ತಿದ್ದೆನಲ್ಲ ಅವಳಿಂಥಾ ಚೆಲುವೆ ಎಂದು ನನಗೆ ಅನ್ನಿಸಿರಲಿಲ್ಲ. ಅಥವಾ ಅರಮನೆಯ ಹೊರಗೆ ಇಂಥ ಹಸಿರಿನಲ್ಲಿ ಅವಳನ್ನು ನೋಡಿರಲಿಲ್ಲ, ಈಗ ನೋಡಿ ಅಶ್ಚರ್ಯವಾಗಿ ಅಬ್ಬಾ! ಎನಿಸಿತು. ಚಂದ್ರಕಾಳಿ ಸೀರೆಗೂ ಅವಳ ಕೆಂಪು ಮೈಗೂ ಪಸಂದಾಗಿ ಹೊಂದಾಣಿಕೆಯಾಗಿತ್ತು. ಬಿಸಿಲಿಗಾಗಲೇ ಅವಳ ಕೆನ್ನೆ ಕೆಂಪಾಗಿ ಹಣೆ, ಮೂಗಿನಲ್ಲಿ ತಿಳಿ ಬೆವರು ಮೂಡಿತ್ತು. “ದೇವಿ ಕಂಡ್ಹಾಂಗ ಕಾಣ್ತೀಯವ್ವ” ಎಂದೆ. ಅದರಿಂದ ಅವಳಿಗೂ ಸಂತೋಷವಾಗಿ ಹುಸಿಕೋಪ ತೋರಿದಳು.

ಅಷ್ಟರಲ್ಲಿ ದೊರೆಸಾನಿ ಬಂದಾಳೆಂದು ಗೊತ್ತಾಗಿ ಅಕ್ಕಪಕ್ಕದ ಕೆಲವು ಹೆಂಗಸರು ಮಕ್ಕಳನ್ನು ಹೊಲಗಳಲ್ಲೇ ಬಿಟ್ಟು ನೋಡ ಬಂದರು. ಸಿಂಗಾರೆವ್ವ ಮತ್ತೆ ಬುರುಕಿ ಹಾಕಿಕೊಂಡಳು. ಬಂದವರಿಗೂ ವಡೆ, ಹೋಳಿಗೆ ಹಂಚಿದೆವು. ಜನರ ಉಲಿವು ಕಮ್ಮಿಯಾದ ಮೇಲೆ ತಿರುಗಾಡಿ ತೋಟ ನೋಡಿಕೊಂಡು ಬರಲು ಹೊರಟೆವು. ನಮ್ಮ ಹಿಂದೆ ಹಿಂದೆ ಕೇಳಿದ್ದಕ್ಕೆಲ್ಲ ಉತ್ತರಕೊಡುತ್ತ ನಿಂಗನೂ ಬೆನ್ನು ಹತ್ತಿದ.

ಗದ್ದೆ ದಾಟಿದೊಡನೆ ಬಾವಿಯ ಹೊಲ ಸಿಕ್ಕಿತು. ಅದಾಗಿ ಸೇಂಗಾಬೆಳೆ ಹೊಕ್ಕೆವು. ಅದನ್ನೂ ದಾಟಿ ಜೋಳದ ಬೆಳೆ. ಆಮೇಲೆ ಹಳ್ಳದ ದಂಡೆಯ ಕಬ್ಬಿನ ಗದ್ದೆ ಸಿಕ್ಕಿತು. ಸಿಂಗಾರೆವ್ವ ಕಬ್ಬು ಬೇಕೆಂದೊಡನೆ ನಿಂಗ ಹೋಗಿ ಪಸಂದಾದ ಒಂದು ಕಬ್ಬು ಮುರಿದುಕೊಟ್ಟ. ಅದರರ್ಧ ನನಗೂ ಕೊಟ್ಟಳು. ಇಬ್ಬರೂ ತಿನ್ನುತ್ತ ಹಳ್ಳದ ನೀರಿಗಿಳಿದೆವು. ನೀರು ನೆಲಕ್ಕೆ ಅಂಟಿಕೊಂಡೇ ಹರಿಯುತ್ತಿದ್ದುದರಿಂದ ಹಳ್ಳದ ತಳದ ಸ್ವಚ್ಛವಾದ ಉಸುಕು ಬಿಸಿಲಿನಲ್ಲಿ ಹೊಳೆ ಹೊಳೆದು ಕಾಣುತ್ತಿತ್ತು. ಕಿರಿಬೆರಳಗಾತ್ರದ ಸಾವಿರಾರು ಮೀನುಗಳು ಇಷ್ಟಿಷ್ಟೇ ನೆಗೆಯುತ್ತ ಚೆಂದಾಗಿ ಈಜುತ್ತಿದ್ದವು. ನಾವು ಕಾಲಿಟ್ಟರೆ ಕಾಲಿಗೇ ಮುತ್ತಿ ಇದೇನೋ ಹೊಸಬಗೆಯ ವಸ್ತುವೆಂಬಂತೆ ಬೆರಗಿನಿಂದ ನೋಡುತ್ತ ಕೊಂಚ ಕೊಂಚ ಕುಕ್ಕಿ, ಅಪಾಯವಿಲ್ಲವೆಂದು ಖಾತ್ರಿಯಾದೊಡನೆ ಕಾಲ ಬಳಸಿ ಚೆಲ್ಲಾಟವಾಡುತ್ತಿದ್ದವು. ಮುಂದೆ ಹೆಜ್ಜೆ ಇಟ್ಟರೆ ಅಲ್ಲಿಗೂ ನುಗ್ಗುತ್ತಿದ್ದವು. ಸರಿ, ಇಷ್ಟಾದರೆ ಕೇಳಬೇಕೆ? ಸಿಂಗಾರೆವ್ವ ಮೀನುಗಳ ಜೊತೆ ಚೆಲ್ಲಾಟಕ್ಕಿಳಿದು ಪ್ರವಾಹದ ಗುಂಟ ಕುಣಿದಾಡಿದಂತೆ ಹೆಜ್ಜೆ ಇಡುತ್ತ ನಡೆದಳು.

"ಭಾಳ ದೂರ ಬಂದಿವಿ. ಇನ್ನ ತಿರುಗಿ ಹೋಗೂಣೆವ್ವ" ಅಂದೆ.

"ಇನ್ನೇನ ಸಂಜಿ ಆಯ್ತಲ್ಲ, ಹೆಂಗೂ ಆಡತಾ ಆಡತಾ ಊರ ಸನೇಕಃ ಬಂದಿವಿ. ನಿಂಗಾ ನೀ ಹೋಗಿ ಹೆಡಿಗಿ ಬಿಟ್ಟು ಗಾಡ್ಯಾಗಿಟ್ಟುಕೊಂಡ ನಡಿ, ನಾವು ಹಿಂಗಃ ನಡಕೋತ ಮನೀಗಿ ಬರ್ತೀವಿ" ಎಂದಳು. ನಿಂಗ ಆಗಲೆಂದು ಕತ್ತು ಹಾಕಿ ಹೋದ.

ಈಗಂತೂ ಇದ್ದದ್ದೂ ಸ್ವಚ್ಛಂದವಾದಳು. ಹಳ್ಳದ ನೀರಿನಲ್ಲೇ ಮುಂದೆ ಮುಂದೆ ನಡೆಯುತ್ತಿದ್ದವಳು ಗಕ್ಕನೆ ನಿಂತು "ಅಯ್ ಶೀನಿಂಗೀ, ಅಕಾ ಹುಣಸೀ ಮೆಳಿ!" ಎಂದು ಹೇಳಿ ಮೆಳೆಯಿಂದ ಸೆಳೆಯಲ್ಪಟ್ಟವಳ ಹಾಗೆ ಆ ಕಡೆ ಓಡಿದಳು. ಹೊತ್ತು ಮುಣುಗಲಿದ್ದು ಎಲ್ಲರೂ ಊರಿಗೆ ಹೋಗಿದ್ದರಿಂದ ಅವಸರದಲ್ಲೇ ಮೆಳೆ ನೋಡಿ ಬರಬೇಕೆಂದು ನಾನೂ ಓಡಿದೆ.

ಎಂಥಾ ಮೆಳೆ ಅದು! ಒಂದೊಂದೂ ಗುಡ್ಡದಂಥಾ ಮರ, ಒಂದಕ್ಕಿಂತ ಒಂದು ಎತ್ತರವಾಗಿ ಬೆಳೆದಿವೆ. ಹರಬಯಲಾಗಿ ಕೆಲವು ಬೆಳೆದಿದ್ದರೆ, ಇನ್ನು ಕೆಲವು ಒಂದಕ್ಕೊಂದಂಟಿ ಗೋಡೆ ಕಟ್ಟಿ ಸದ್ದಿಲ್ಲದೆ ನಿಂತಿವೆ. ಅಥವಾ ತಾ ಹೊಂಚಿದ್ದು ಬೇಟೆಗೆ ಗೊತ್ತಾಗದಿರಲಿ ಎಂದು ಬಲೆಹಾಕಿ ಬೇಟೆಗಾರ ನಿಶ್ಶಬ್ದವಾಗಿ ಕಾದಿರುತ್ತಾನಲ್ಲ ಹಾಗಿದ್ದವು. ಬಹುಶಃ ಹಕ್ಕಿಗಳೂ ಈ ಮೆಳೆಯೊಳಕ್ಕೆ ಬರಲು ಹೆದರುತ್ತವೆ ಏನೋ, ಅವುಗಳ ಉಲಿವೇ ಇರಲಿಲ್ಲ! ಈ ತನಕ ಬೆರಗಿನ ಪುಳಕಗಳಿಂದ ಗಾಬರಿಗೊಂಡಂತೆ ನೋಡುತ್ತಿದ್ದ ದೊರೆಸಾನಿ "ಶೀನಿಂಗೀ ಅಲ್ಲಿ ನೋಡಗಃ!" ಎಂದು ಮೇಲೆ ತೋರಿಸಿದಳು. ಸೂರ್ಯನ ಸಂಜೆ ಕಿರಣಗಳು ಮರಗಳ ತುದಿ ಎಲೆಗಳ ಮೇಲೆ ಬಿದ್ದು, ಅವೆಲ್ಲ ಬಿಡಿಬಿಡಯಾಗಿ ಬೆಲೆಯುಳ್ಳ ರತ್ನಗಳ ಹಾಗೆ ಕಾಣುತ್ತಿದ್ದವು. ನಾನು ಅದನ್ನೇ ನೋಡುತ್ತಿದ್ದರೆ "ಶೀನಿಂಗೀ ಇಲ್ಲಿ ನೋಡಗಃ!" ಎಂದು ಹೇಳಿ ಆನಂದದ ಉನ್ಮಾದದಲ್ಲಿ ನಗತೊಡಗಿದಳು. ಅಲ್ಲಿ ನೋಡಿದರೆ ಇನ್ನೊಂದು ಬಗೆಯ ಬಣ್ಣದ ನಕ್ಷತ್ರಗಳ ಜಾಲ ಥಳಥಳ ಹೊಳೆಯುತ್ತಿತ್ತು. ಬಾಲ್ಯದ ನೆನಪು ಮರುಕಳಿಸಿತೇನೋ ಒಂದೊಂದು ಮರವನ್ನು ಕೈಯಿಂದ ಮುಟ್ಟಿ ಮುಟ್ಟಿ ಓಡಾಡತೊಡಗಿದಳು. ಹಾಗೇ ಮುಟ್ಟುತ್ತ ಆಳಕ್ಕೆ ಹೋಗಿ 'ಶೀನಿಂಗೀ' ಎಂದಳಲ್ಲ, ಅದು ಪ್ರತಿಧ್ವನಿಸಿತು. ಅದರಿಂದಂತೂ ಎಷ್ಟು ಉನ್ಮಾದಗೊಂಡಳೆಂದರೆ ತನ್ನ ಬುರುಕಿ ಹರಿದು ಹಾಕಿ "ಅಯ್ ಶಿವನ ಏನ ಚಂದ ಐತೇ ಈ ಮೆಳೀ!" ಎಂದು ನಗುತ್ತ ಕಳ್ಳೆಮಳ್ಳೆ ಆಡತೊಡಗಿದಳು. ನನಗೆ ಸಂತೋಷವಾಗಿತ್ತಾದರೂ, ಆಗಲೇ ಹೊತ್ತು ಮುಣಿಗಿ ಚಂದ್ರಾಮನ ಎಳೆ ಬೆಳಕು ಮೂಡಿದ್ದರಿಂದ ಬೇಗನೆ ಮನೆಗೆ ಹೋಗಬೇಕೆಂದು ನನ್ನ ತವಕ. ಅವಳ ಉತ್ಸಾಹದ ಚಿಲುಮೆ ಕ್ಷಣಕ್ಷಣಕ್ಕೆ ಹೆಚ್ಚುತ್ತ ಮೆಳೆ ಆಳ ಆಳಕ್ಕೆ ಹೋಗುತ್ತಿದ್ದಳು. ಎಷ್ಟು ಹೇಳಿದರೂ ಕೇಳದೇ ಅಡ್ಡಾಡುತ್ತ ಮೆಳೆಯಂಚಿನ ಗುಡಿಸಲನ್ನೂ ಹೊಕ್ಕಳು. ಈಗಲಾದರೂ ಕೈಗೆ ಸಿಗತಾಳಲ್ಲಾ ಎಂದು, ಒತ್ತಾಯದಿಂದಲಾದರೂ ಕರೆತರಬೇಕೆಂದು ನಾನೂ ಓಡಿ ಗುಡಿಸಲು ಹೊಕ್ಕೆ. ಆಗ ನಮ್ಮಿಬ್ಬರಿಗೂ ನಮ್ಮ ತಪ್ಪಿನ ಅರಿವಾಯಿತು. ಅದು ಹುಚ್ಚಯ್ಯನ ಸಮಾಧಿಯ ಗುಡಿಸಲು! ಎರಡಾಳೆತ್ತರ ಗಚ್ಚಿನ ಗೋಡೆ ಕಟ್ಟಿಸಿ, ಮೇಲೆ ಕಟ್ಟಿಸಲಾಗದೆ ಹುಲ್ಲು ಹೊಚ್ಚಿ ಮರೆ ಮಾಡಿದ್ದರು. ಬಾಗಿಲಿತ್ತು. ನಡುವೆ ಸಮಾಧಿ ಇದ್ದು, ಅದರ ಮುಂದೊಂದು ಉರಿಯುವ ಪಣತಿ ಇತ್ತು. ಮಣ್ಣಿನ ಒಂದು ಬಿಂದಿಗೆ, ಅದರ ಮ್ಯಾಲೊಂದು ಚಟಿಗೆ ಕೂಡ ಇದ್ದುದರಿಂದ ಯಾರೋ ವಾಸಿಸುತ್ತಿದ್ದ ಹಾಗಿತ್ತು. ತಕ್ಷಣ ಕೈಕೈ ಹಿಡಿದು ಹೊರಬರುತ್ತಿದ್ದೆವು. ಎದುರಿಗೆ ಕುಡಿದು ತೂರಾಡುತ್ತಿದ್ದ ಮರ್ಯಾ ಬಂದ. ಸಿಕ್ಕುಬಿದ್ದವೆಂದುಕೊಂಡೆವು. ನಮ್ಮ ರಕ್ಷಣೆಗಿನ್ಯಾರು ಬರುತ್ತಾರೆ? ಬಂದರೆ ದೇವರು ಬರಬೇಕಷ್ಟೆ. ಆದರೆ

ಸಿಂಗಾರೆವ್ವ ಹುಟ್ಟಿದಾಗಿನಿಂದ ಆಕೆಯ ಬಗ್ಗೆ ಕಣ್ಣು, ಕಿವಿ ಮುಚ್ಚಿಕೊಂಡ ದೇವರು ಈ ತನಕ ತೆರೆದಿರಲಿಲ್ಲ. ವಿಕಾರವಾಗಿ ಕಣ್ಣಗಲಿಸಿ "ಬಾರಃ ನನ್ನ ಅರಗಿಣಿಯೆ, ಪತ್ತೇದಾರ್‍ಕಿ ಮಾಡಾಕ ಬಂದಿ? ಬಾ" ಎಂದು ಮುಂದೆ ಬಂದ. ನಾನು ಅಡ್ಡ ಬಂದು "ಏಯ್, ಯಾಕೋ ಮೂಳ ಅಡ್ಡಗಟ್ಟತಿ - ಇನ್ನಃ ಬುದ್ಧೀ ಬಂದಿಲ್ಲ ನಿನಗ? ಬಿಡುದಾರಿ" ಅಂದೆ. ನನ್ನ ಮಾತನ್ನು ನಿರ್ಲಕ್ಷಿಸಿ ಎಡಗೈಯಿಂದ ಅಮಾತ ನನ್ನನ್ನು ದೂಕಿ ಹಾ ಎಂದು ಹಾರಿ ಹಿಂದೆ ಸರಿಯುತ್ತಿದ್ದ ದೊರೆಸಾನಿಯನ್ನು ಹಿಡಿದುಕೊಂಡ; ಅಷ್ಟು ದೂರದ ಗೋಡೆಗೆ ನನ್ನ ತಲೆ ಹಾಕಿ, 'ಅಯ್ಯೋ ಎವ್ವಾ' ಎಂದು ಬಿದ್ದೆ. ಅವರ ಗುದಮುರಿಗೆ ಸಾಗಿತ್ತು. ಹುಲಿ ಹುಲ್ಲೆಯ ಮರಿಯನ್ನು ಮುರಿಯುವಂತೆ ಒಂದೇ ಕೈಯಿಂದ ಮುರಿದು ತುರುಬು ಹಿಡಿದು, ಜಗ್ಗಿ, ಬಲಗೈ ಚಟಿಗೆಯಲ್ಲಿದ್ದ ಸಿಂದಿಯನ್ನು ರಪರಪ ಅವಳ ಮುಖಕ್ಕೆ ಗೊಜ್ಜಿದ. ಕಿರುಚಲಾರದೆ, ಕಣ್ಣುಮುಚ್ಚಿ ಅವ ಹಿಡಿದ ರಭಸಕ್ಕೆ ಮೇಲೆ ಮಾಡಿದ್ದ ಅವಳ ಒದ್ದೆಮುಖವನ್ನು ಹಸಿದ ನಾಯಿ ನೆಕ್ಕುವ ಹಾಗೆ ಚರಚರ ನೆಕ್ಕತೊಡಗಿದ. ಸಿಂಗಾರೆವ್ವ ಆಃ ಎಂದು ವೇದನೆ ಅನುಭವಿಸುತ್ತಿದ್ದಾಗ "ಕಂಡಿರಾ ಗೌಡರಃ" ಎಂದು ಹೇಳುತ್ತ ತೆಕ್ಕೆಯಲ್ಲಿದ್ದ ಅವಳನ್ನು ಚೆಲ್ಲಿದ. ಸಮಾಧಿಯ ಹತ್ತಿರ ಬಂದು ಅಲ್ಲಿದ್ದ ಹಿಲಾಲೊಂದನ್ನು ದೀಪಕ್ಕೆ ಹೊತ್ತಿಸಿಕೊಂಡು ಮತ್ತೆ ಅವಳ ಹತ್ತಿರ ಬಂದ. ಬಿದ್ದಿದ್ದ ಅವಳನ್ನು ಹಿಡಿದುಕೊಂಡು "ನಿಮ್ಮಪ್ಪನ್ನ ತೋರಿಸಲಿ" ಎನ್ನುತ್ತ ಮೂಲೆಕಡೆ ನಡೆದ. ದೊರೆಸಾನಿ ಜೋರಿನಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಿದ್ದಳು. ಹೆ… ಹೇ… ಹೇ…. ಎಂದ, ದೊಡ್ಡದನಿ ತೆಗೆದು ನಗುತ್ತ ಅವಳನ್ನು ಬಿಟ್ಟು ಮೂಲೆಗೆ ಹಿಲಾಲು ಹಿಡಿದು ತೋರಿಸಿದ. ಅಯ್ಯೋ ಎವ್ವ! ಗೌಡ ಮತ್ತು ಅವನ ಪೈಲ್ವಾನನ ಹೆಣ ನೆತ್ತರಲ್ಲಿ ತೊಯ್ದು ಬಿದ್ದಿದ್ದವು! ಗುರುತು ಸಿಕ್ಕೊಡನೆ ದೊರೆಸಾನಿ ಸಮಾಧಿಯಲ್ಲಿದ್ದ ಹುಚ್ಚಯ್ಯನೂ ಭಯಗೊಂಡು ಎದ್ದೋಡುವ ಹಾಗೆ ಕಿಟಾರನೆ ಕಿರಿಚಿ, ಚಂಗನೆ ಹಾರಿ, ಅವನ ಕೈಯ ಹಿಲಾಲು ಕಸಿದುಕೊಂಡು, ಅವನ ಎದೆಗೆ ಜೋರಿನಿಂದ ಚುಚ್ಚಿದಳು. ಅವ ಜೋಲಿ ತಪ್ಪಿ ಬಿದ್ದೊಡನೆ ಹುಚ್ಚು ಹತ್ತಿದವರಂತೆ ಮತ್ತೆ ಕಿರುಚುತ್ತ ಹೊರಗೋಡಿದಳು. ನಾನು ಓಡಿದೆ. ಹೊರಕ್ಕೆ ಬಂದವಳೆ ಗುಡಿಸಲ ಬಾಗಿಲು ಹಾಕಿ, ಹೊರಚಿಲಕ ಹಾಕಿಕೊಂಡಳು. ತಕ್ಷಣ ಹಿಲಾಲಿನಿಂದ ಗುಡಿಸಲಿಗೆ ಸಿಕ್ಕ ಸಿಕ್ಕಲ್ಲಿ ಸುತ್ತಲು ಓಡ್ಯಾಡಿ ಬೆಂಕಿ ಹಚ್ಚಿ ಅಲ್ಲೇ ಹಿಲಾಲು ಚೆಲ್ಲಿ "ಬಾರಗಃ" ಎಂದು ಊರು ಕಡೆ ಓಡಿದಳು. ನಾನೂ ಬೆನ್ನು ಹತ್ತಿದೆ."

- ಎಂದು ಹೇಳಿ ಶೀನಿಂಗವ್ವ ತನ್ನಕತೆ ನಿಲ್ಲಿಸಿದಳು. ರೋಮಾಂಚನಗೊಂಡು ಕೇಳುತ್ತಿದ್ದ ನಾನು ಅದ್ಯಾಕೆ ಜತೆ ನಿಲ್ಲಿಸಿದಳೋ ಎಂದುಕೊಂಡೆ. ಉಸಿರು ತಗೊಳ್ಳುತ್ತ ತಡೆ ಎಂಬಂತೆ ಕೈಮಾಡಿದಳು. ಮತ್ತೆದ್ದು ಮುದುಕಿ ಒಳಗೆ ಹೋದಳು. ಇಬ್ಬರೂ ಹೆಂಗಸರನ್ನು ಮೆಚ್ಚಿ ಎಂಥಾ ಗಂಡೆದೆ ಇವರದು ಎಂದುಕೊಂಡು ಶಿರಸ್ಸೈಲನ ಕಡೆ ನೋಡಿದೆ. ಯಾಕೆಂದರೆ ಚಿಕ್ಕಂದಿನಲ್ಲಿ ಹುಚ್ಚಯ್ಯನ ಸಮಾಧಿಯಿದ್ದ ಗುಡಿಸಲಿಗೆ ಬೆಂಕಿ ಬಿದ್ದದ್ದನು ನಾವು ನೋಡಿದ್ದೆವು. ಒಳಗೆ ಹೆಣಗಳಿದ್ದದ್ದೂ ಗೊತ್ತಿತ್ತು. ಆದರೆ ಗೌಡನ ಹೆಣವೂ ಅಲ್ಲಿದ್ದದ್ದು ನನಗೆ ಈತನಕ ತಿಳಿದಿರಲಿಲ್ಲ. ಆ ಬೆಂಕಿ ಈಗಲೂ ನನ್ನ ಕಣ್ಣ ಮುಂದೆ ಕಟ್ಟಿದಂತಿದೆ. ಆಗ ರಾತ್ರಿ ಉಂಡು ಮಲಗುವ ಹೊತ್ತಿನ್ನೂ ಆಗಿರಲಿಲ್ಲ. ನಾನು ದೇಸಾಯಿಯ ಬಯಲಾಟದ ತಾಲೀಮು ನೋಡುತ್ತಿದ್ದೆ. ನಮ್ಮಣ್ಣ ಪೆಟ್ಟಿಗೆ (ಹಾರ್ಮೋನಿಯಂ) ಬಾರಿಸುತ್ತಿದ್ದ. ಚಿಮಣಾಳ ಬದಲು ಮಲಕಪ್ಪಗೋಳ ನಾಗ್ಯಾನೇ ಚಿಮಣಾ ಆಗಿ ಮಾತಾಡುತ್ತಿದ್ದ. ದೇಸಾಯಿ ವೀರಾವೇಶದಿಂದ ಸುದೀರ್ಘವಾದ ಮಾತನ್ನೂ ಏನೂ ತಪ್ಪಿಲ್ಲದೆ ಹೇಳಿ - ಹೇಳುತ್ತೇನೆ ಕೇಳೆಂದು ತಾರಕ ನುಡಿಯಲ್ಲಿದ್ದ. ಅಷ್ಟರಲ್ಲಿ ದೇಸಾಯರ ಆಳು ನಿಂಗ್ಯಾ ಓಡಿ ಬಂದು "ಹುಚ್ಚಯ್ಯನ ಸಮಾಧಿಗೆ ಬೆಂಕಿ ಹತ್ತೇತ್ರಿ!" ಅಂದ. ಅವನ ಮಾತಿನ್ನೂ ಅವನ ಬಾಯಲ್ಲೇ ಇರುವಾಗಲೇ ನಾವೆಲ್ಲ ಠಣ್ಣನೆ ಹಾರಿ ಊರಿನಂಚಿಗೆ ಓಡಿದೆವು. ಅಲ್ಲಿ ಆಗಲೇ ಹೆಂಗಸರು ಗಂಡಸರು ಕೂಡಿದ್ದರು. ಕೆಲವು ಮಂದಿ ಗಂಡಸರು ಬೆಳದಿಂಗಳಿತ್ತಲ್ಲ. ಬೆಂಕಿ ಬಿದ್ದ ಗುಡಿಸಲ ಕಡೆಗೇ ಓಡಿಹೋದರು. ನನ್ನ ಸರೀಕರಲ್ಲಿ ಕೂಡ ಕೆಲವರು ಅವರೊಂದಿಗೆ ಓಡಿದರು. ಆದರೆ ನನಗೆ ಧೈರ್ಯವಾಗಲಿಲ್ಲ. ಅಲ್ಲೇ ನಿಂತೆ.

ನನ್ನೊಂದಿಗೆ ನಿಂತವರಲ್ಲಿ ಹೆಂಗಸರು ಮಕ್ಕಳೇ ಹೆಚ್ಚು. ಅವರೆಲ್ಲ ಪ್ಯಾಟಿ ಈರಭದ್ರ ಹೇಳಿದ ಕಥೆಯೊಂದನ್ನು ಆಗಲೇ ಆಡಿಕೊಳ್ಳುತ್ತಿದ್ದರು. ಅವನ ಹುಣಿಸೆಯ ಮೆಳೆಯ ಪಕ್ಕದಲ್ಲೇ ಇದೆಯಾದ್ದರಿಂದ ಆತ ಸುಳ್ಳು ಹೇಳಿದ್ದರೂ, ಅದೀಗ ಸತ್ಯವಾಗುತ್ತಿತ್ತು. ಆತ ಇನ್ನೇನು ಊರಕಡೆ ಹೊರಡಬೇಕೆಂದಾಗ ಹುಚ್ಚಯ್ಯನ ಗುಡಿಸಲಲ್ಲಿ ಹೆಣ್ಣು ದೆವ್ವಗಳು ಕಿರಿಚ್ಯಾಡಿ ಜಗಳ ಆಡತೊಡಗಿದವಂತೆ ಇವನು ಹೆದರಿ ಓಡಕಿತ್ತು. ಒಂದೇ ಉಸಿರಿನಲ್ಲಿ ಊರು ಮುಟ್ಟಿ ಇನ್ನು ಅಪಾಯವಿಲ್ಲವೆಂದಾಗ ತಿರುಗಿ ನೋಡಿದರೆ - ಗುಡಿಸಲಾಗಲೇ ಹತ್ತಿ ಉರಿಯತೊಡಗಿತ್ತಂತೆ. ನಾವು ನಿಂತ ಗುಂಪಿನಲ್ಲೇ ಇನ್ನೂ ಇದ್ದ ಅಬಾಯಿ ಹೇಳಿದ್ದು - ಅವಳು ಸೊಸೆಯ ಜೊತೆ ಬಯಲಕಡೆ ಕೂತಾಗ ಎರಡು ಹೆಣ್ಣು ಕೊಳ್ಳೀ ದೆವ್ವಗಳು ಜಗಳಾಡಿ ಆ ಕೊಳ್ಳಿ ಗುಡಿಸಲ ಮೇಲೆ ಬಿದ್ದು ಬೆಂಕಿ ಹೊತ್ತಿಕೊಂಡಿತಂತೆ. ಅವು ಚೀರಿ

ಜಿಗಿಯುತ್ತ ಊರಕಡೆ ಬಂದು ಹೊಲಗೇರಿಯಲ್ಲಿ ಮಟಾಮಾಯವಾದಂತೆ. ಇವೆರಡೂ ಹೆಣ್ಣುದೆವ್ವಗಳು ಯಾರೆಂದು ವಾಚಕರಿಗಾಗಲೇ ಗೊತ್ತಾಗಿದೆಯೆಂದು ಭಾವಿಸುತ್ತೇನೆ.

ಬೆಂಕಿ ಮಾತ್ರ ಹುಣಸೆ ಮರದಷ್ಟೇ ಎತ್ತರ ಹಬ್ಬಿ ದಟ್ಟವಾದ ಹೊಗೆ ಇಡೀ ಮೆಳೆಯನ್ನು ಮೋಡದ ಹಾಗೆ ಆವರಿಸಿ ನೆಲ - ಮುಗಿಲುಗಳನ್ನು ಏಕ ಮಾಡಿತ್ತು. ಬೆಂಕಿಯ ಬೆಳಕಿನಲ್ಲಿ ಮೆಳೆಯ ಆ ಭಾಗದ ಮರಗಳೆಲ್ಲ ಕಾಣಿಸಿ ನಮ್ಮಲ್ಲೇ ನಿಂತ ಕೆಲವರಿಗೆ ಹೆದರಿದ ಭೂತಗಳು ಮರ ಆಡರಿದ್ದೂ ಕಂಡಿತು. ಜ್ವಾಲೆಗಳು ಹೊಗೆ ಮೀರಿ ನೆಗೆದು ನಾ ಮುಂದೆ ತಾ ಮುಂದೆಂದು ಆಕಾಶ ನೆಕ್ಕುವುದಕ್ಕೆ ತವಕಿಸುತ್ತಿದ್ದವು. ಆಗ ಉರಿಯುವ ಬೆಂಕಿಯ ಛಿಳಿಚಿಟಿಲೆಂಬ ಸಪ್ಪಳ ಕೂಡ ಅಷ್ಟು ದೂರದ ನನಗೆ ಕೇಳಿಸಿದಂತೆ ನೆನಪು. ಅಕ್ಕಪಕ್ಕ ನೀರಿರಲಿಲ್ಲವಾದ್ದರಿಂದ ಬೆಂಕಿ ಆರಿಸುವ ಗೋಜಿಗೆ ಯಾರೂ ಹೋಗಲಿಲ್ಲ. ಅದೆಷ್ಟು ಹೊತ್ತು ಉರಿಯಿತೋ ಅಷ್ಟು ಹೊತ್ತೂ ನಾನು ಗುಂಪಿನಲ್ಲೇ ನಿಂತಿದ್ದೆ. ಅದು ಪೂರ್ತಿ ಬೂದಿಯಾದ ಮೇಲೆ ಗುಡಿಸಲಿಗೆ ಹೋದವರು ಗುಂಪುಗುಂಪಾಗಿ ಮಾತಾಡಿಕೊಂಡು ಬರುತ್ತಿದ್ದರು. ಏನಾದರೂ ಹೊಸ ವಿಷಯ ತಿಳಿದೀತೆಂದು ನಾನು ಹೋಗಿ ಪ್ರತಿಗುಂಪಿನಲ್ಲೂ ಸೇರಿಕೊಳ್ಳುತ್ತಿದ್ದೆ. ಆದರೆ ಅವರ್ಯಾರಿಗೂ ಬೆಂಕಿ ಹ್ಯಾಗೆ ಹತ್ತಿತೆಂಬ ಸರಿಯಾದ ಮಾಹಿತಿ ಸಿಕ್ಕಿರಲಿಲ್ಲ. ಪ್ಯಾಟಿ ಈರಭದ್ರನ ಕಥೆಯನ್ನೇ ಇನ್ನಷ್ಟು ಬೆಳಸಿ ಬೆಳಸಿ ಈರಭದ್ರನ ಬದಲು ಅಲ್ಲಿ ತಾವು ಇದ್ದ ಹಾಗೆ ಹೇಳಿಕೊಳ್ಳುತ್ತಿದ್ದರು. ಮನೆಗೆ ಹೋದಾಗ ನಮ್ಮಣ್ಣ ಬಂದಿದ್ದ. ಅವನೂ ಗುಡಿಸಲಿಗೆ ಹೋಗಿದ್ದನಾದ್ದರಿಂದ ಊಟ ಬಿಟ್ಟು ಅವನ ಮಾತನ್ನೂ ಕಿವಿಗೊಟ್ಟು ಆಲಿಸಿದೆ. ಅವನೂ ಅದೇ ಕಥೆ ಹೇಳಿದ. ಅದು ಮುಗಿದ ಮೇಲೆ ನಮ್ಮವ್ವ "ನೋಡಿದಿಲ್ಲ? ಕೆಲಸ ಬಿಟ್ಟ ಬರೀ ಮೆಳೀ ಕಡೇನಃ ಅಡ್ಡಾಡ್ತಿ. ಹೆಣ್ಣ ದೆವ್ವ ಜಗಳಾಡಿ ಗುಡಿಸಲಕ ಬೆಂಕಿ ಹಚ್ಚಿದುವಂತ. ಇನ್ನಾದರೂ ಅಂಜಿಕೊಂಡು ತಾಯಿ - ತಂದೀ ಮಾತ ಕೇಳಿಕೊಂಡಿರು" ಎಂದು ಹೇಳಿ ನನ್ನ ಬೆನ್ನಿಗೊಂದು ಏಟೂ ಬಿದ್ದಳು.

ಆ ದಿನ ಬಹಳ ಹೊತ್ತು ಊರಿನ ಯಾರಿಗೂ ನಿದ್ದೆ ಹತ್ತಿದ ಹಾಗೆ ಕಾಣೆ. ಊಹೆಗಳಲ್ಲಿ ಕನಸು ಹಳವಂಡಗಳಲ್ಲಿ ಆ ಬೆಂಕಿಯ ಚಿತ್ರವನ್ನೂ, ಅದರ ಭಯಂಕರತೆಯನ್ನೂ ಪುನಃ ಚಿತ್ರಿಸಿಕೊಳ್ಳುತ್ತ ಮಲಗಿದರು.

ಮುಂಜಾನೆ ನಾವು ಸಾಲೆಯಲ್ಲಿದ್ದೆವು. ಒಂದ ಮಾಡುವ ವಿಶ್ರಾಂತಿ ಸಿಕ್ಕಾಗ ಹೊರಬಂದಿವಲ್ಲ. ಬೆಂಕಿಯಲ್ಲಿ ಹೆಣಗಳಿದ್ದ ವಿಚಾರ ಗೊತ್ತಾಯಿತು. ತಕ್ಷಣ ಮೆಳೆ ಕಡೆ ಓಡಿದೆವು.

ಅಗೋ ಶೀನಿಂಗವ್ವ ಬಂದಳು. ನಮ್ಮ ಊರವರ್ಯಾರಿಗೂ ಕಥೆಯ ಕ್ರಿಯೆಯಲ್ಲಿ ಭಾಗವಹಿಸುವ ಅವಕಾಶ ಬರಲೇಇಲ್ಲ. ಬರೀ ಪ್ರತಿಕ್ರಿಯೆ ತೋರುವುದೆಷ್ಟೋ ಅಷ್ಟೆ. ಅಂಥವನ್ನು ನೀವೂ ಊಹಿಸಬಹುದು. ಈಗ ಶೀನಿಂಗವ್ವನ ಕಥೆ ಕೇಳೋಣ.

"ಗುಡಿಸಲಿಗಿ ಬೆಂಕಿ ಹಚ್ಚಿ ಓಡಿ ಬಂದ್ರಿ" ಮುಂದೇನೆಂದು ಅವಳು ಕೇಳುವ ಮೊದಲೇ ಕಥೆ ಎತ್ತಿಕೊಟ್ಟೆ.

"ಹೌಃ ಒಂದಃ ಹಾರಿಕ್ಕಾಗ ಒಂದಃ ಉಸರಿನ್ಯಾಗ, ಅರಮನೀಗಿ ಓಡಿ ಬಂದಿವಿ." ಎಂದು ಹೇಳಿ "ಮುಂದಿನ ಕತಿ ನಾಳಿ ಮಾಡೂಣಲ್ಲ ತಮ್ಮ" ಎಂದಳು. ನನಗೆ ನಿರಾಶೆಯಾಗಿ ಎದ್ದು ಬರುವ ಮನಸ್ಸಿಲ್ಲದೆ "ಬಂದೇನ ಮಾಡಿದಿರಿ" ಎಂದೆ.

"ಬಂದಿವಿ. ಓಡಿ ಹೋಗಿ ಅಂತಸ್ತೇರಿ ಕಿಡಿಕ್ಯಾಗ ನೋಡ್ತಾ ನಿಂತಿವಿ. ಧಗಧಗ ಬೆಂಕಿ ಆಕಾಶ - ಪಾತಾಳಕ್ಕ ಏಕಾಗಿ ಉರ್ಯಾಕ ಹತ್ತಿತ್ತು! ಭಾಳ ಹೊತ್ತ ನಮಗೆ ನೋಡಾಕ ಆಗಲಿಲ್ಲ. ಸಿಂಗಾರೆವ್ವ ಹೋಗಿ ಹಾಸಿಗ್ಯಾಗ ಬಿದ್ದುಕೊಂಡ್ಳು. ಆಕೀ ಮೈ ಕಾದ ತಗಡಾಗಿತ್ತು. ಗಡಗಡ ನಡಗತಿದ್ದಳು "ಜೋರಾ ಬಂದಾವಲ್ಲೆಃ ಎವ್ವ" ಅಂದೆ. "ದೇಸಾಯಿ ಕ್ವಾಣ್ಯಾಗ ಸೆರೇದ ಕಾಯಿ ಐತಿ. ಹೋಗಿ ತಗೊಂಬಾ" ಅಂದಳು. ತಗಂಬಂದೆ. ಗಟಗಟ ಒಂದ ಗುಟಕಿಗಿ ಇಡೀ ಅರ್ಧ ಕಾಯಿ ಮುಗಿಸಿ ಬಕ್ಕ ಬರಲ ಬಿದ್ದು ಬಿಟ್ಳು..."

"ಮುಂದ?"

“ಮುಂದೇನು, ಮುಂಜಾನೆ ಪೊಲೀಸರು ಬಂದರು.”

“ಹಂಗಲ್ಲಬೇ ಪೊಲೀಸರು ಬಂದೇನು ಮಾಡಿದ್ರು?”

“ಅದೇನೋ ನಂಗೊತ್ತಿಲ್ಲಪ್ಪ” ಅಂದಳು. ಮುದುಕಿಯ ಮೂಡು ಕೆಟ್ಟಿತ್ತು. ಮುಂದಿನ ಕತೆ ಇನ್ನವಳು ಹೇಳಲಾರಳು ಅಂದುಕೊಂಡೆ. ಕೊನೆಯದಾಗಿ “ಪೊಲೀಸರು ಅರಮನೀಗಿ ಬರಲಿಲ್ಲೇನು?” ಎಂದೆ.

“ಇಲ್ಲ, ಯಾಕ ಬರತಾರ, ಏನ ಆಧಾರಿತ್ತು??”

“ಊರಾಗಾದರೂ ಏನ ಮಾಡಿದರು?”

“ನಂಗೊತ್ತಿಲ್ಲಪ್ಪ” ಅಂದಳು. ನನಗೂ ಹೆಚ್ಚು ನೆನಪಿಲ್ಲ.

ಅಲ್ಲಿ ಹೆಣಗಳಿದ್ದದ್ದು ಗೊತ್ತಾಗುತ್ತಲೂ ನಮ್ಮೂರ ಗೌಡ ಓಡಿ ಹೋಗಿ ಗೋಕಾವಿಯಿಂದ ಪೊಲೀಸ್ ಪೋಜುದಾರರನ್ನು ಕರೆದುಕೊಂಡೇ ಬಂದ. ಹೆಣ ಬೆಂದಿರುವುದರಿಂದ ಗುರುತು ಸಿಕ್ಕುವುದಂತೂ ಸಾಧ್ಯವೇ ಇರಲಿಲ್ಲ. ಬಂದ ಪೋಜುದಾರ ಎರಡು ದಿನ ಇದ್ದು ಏನೇನೋ ಬರೆದುಕೊಂಡು ಹೋದ. ಆದರೆ ತಪ್ಪಿ ಕೂಡ ಗೌಡ ಮತ್ತು ಮರೆಪ್ಪನ ವಿಚಾರ ನಮ್ಮ ತಲೆಗೆ ಸುಳಿಯಲೇ ಇಲ್ಲ.

“ಬೆಳಿಗ್ಗೆ ಎಚ್ಚರವಾದಾಗ ಆಗಲೇ ಸೂರ್ಯ ಹುಟ್ಟಿದ್ದ. ಸಿಂಗಾರೆವ್ವನಿಗೆ ಇನ್ನೂ ಎಚ್ಚರವಾಗಿರಲಿಲ್ಲ. ನಿನ್ನ ಓಡಾಡಿದ್ದೆವಲ್ಲ ತೊಡೆ ತುಂಬ ನೋಯುತ್ತಿದ್ದವು. ಹಾಗೇ ಹೋಗಿ ಸಿಂಗಾರೆವ್ವನ ಮೈಮುಟ್ಟಿ ನೋಡಿದೆ. ಜ್ವರ ಇರಲಿಲ್ಲ. ಆಮೇಲೆ ಎಬ್ಬಿಸಿದರಾಯ್ತೆಂದು ಕೆಳಕ್ಕೆ ಹೋದೆ. ಜಳಕ - ಜಪಾತಿ ಮುಗಿಯುವಷ್ಟರಲ್ಲಿ ನಾಕು ತಾಸು ಹೊತ್ತೇರಿತ್ತು. ಹೋಗಿ ದನ ಬಿಟ್ಟು ಸಿಂಗಾರೆವ್ವನನ್ನು ಎಬ್ಬಿಸಲಿಕ್ಕೆ ಅಂತಸ್ತಿಗೆ ಹೋದೆ. ಎದ್ದು ಎರಡೂ ಕೈ ಹಿಂದೆ ಊರಿ ಬಿಮ್ಮನೆ ಕೂತಿದ್ದಳು. ನಶೆ ಇನ್ನೂ ಇಳಿದಿರಲಿಲ್ಲವೇನೊ, ಕಣ್ಣು ಗುಲಗಂಜಿಯಾಗಿದ್ದವು. ತುರುಬು ಬಿಚ್ಚಿ ಕೆದರಿದ ಕೂದಲು ಹೆಗಲ ಮೇಲೆ ಬಿದ್ದಿದ್ದವು. ನಿರ್ಭಾವದಿಂದ ಮುಖ ಬಾಡಿ ಹೆಣದ ಕಳೆಗಿಳಿದಿತ್ತು. ನೆಟ್ಟ ನೋಟದಿಂದ ಕಿಡಕಿಯ ಕಡೆ ನೋಡುತ್ತಿದ್ದಳಾದರೂ ನಿಜವಾಗಿ ಅದನ್ನೇ ನೋಡುತ್ತಿದ್ದಾಳೆಂದು ಅನ್ನಿಸಲಿಲ್ಲ. ಪಕ್ಕಕ್ಕೆ ಹೋಗಿ ಸಮಾಧಾನ ಮಾಡುವ ದನಿಯಲ್ಲಿ “ಎವ್ವಾ, ಚಿಂತೀ ಮಾಡಬ್ಯಾಡ, ಪಾರಾದಿವಿ ಬಿಡು” ಎಂದು ಅವಳ ಕಿವಿಯಲ್ಲಿ ಹೇಳಿದೆ. ಈಗಷ್ಟೆ ಅರಿವಿಗೆ ಬಂದಂತೆ “ಹಾಂ??” ಎಂದಳು. ಕೈಯೂರಿ ಏಳಹೋಗಿ ತೊಡೆ ನಡುಗಿ “ಅಯ್ ಶಿವನಃ! ನಿಲ್ಲಾಕ ಆಗವಲ್ಲದಲ್ಲಃ” ಎಂದು ಮತ್ತೆ ಅಲ್ಲೇ ಕುಸಿದಳು. ನನಗೇ ಹೀಗಾಗಿರುವಾಗ ಎಂದೂ ಹೊರಕ್ಕೆ ಬಾರದ ಅವಳ ಕಾಲೆಷ್ಟು ತುಂಬಿರಬೇಕು. “ಬಿಸಿ ಬಿಸಿ ನೀರ ಹನಿಸಿಕೊಂಡರ ಮೈ ಹಗರ ಆಗತೈತಿ. ಹಾಂಗ ಒಂದ ರೊಟ್ಟಿ ತಿಂದ ಬಂದೀಯಂತ ಬಾ ಎವ್ವಾ” ಅಂದೆ. ಹ್ಞೂಂ ಎಂದು ನರಳಿದಂತೆ ಹೇಳಿ ಮೆಲ್ಲಗೆ ಎದ್ದಳು. ಆಗಲೂ ನಿಲ್ಲಲಾಗುತ್ತಿರಲಿಲ್ಲ. ನನ್ನ ಹೆಗಲ ಮೇಲೆ ಕೈ ಊರಿದಳು. ಮೆಲ್ಲಗೆ ಕೆಳಗಿಳಿದೆವು.

ಬಿಸಿನೀರಿನಲ್ಲಿ ಜಳಕ ಮಾಡಿಸಿದೆ. ಮೈ ತುಸು ಹಗುರವಾಯಿತೆಂದು ಹೇಳಿದಳು. ನಾನೇ ನಿಂತು ಮೈ ಒರೆಸಿದೆ. ಸೀರೆ ಬದಲಿಸಿ ಅಡಿಗೆ ಮನೆಗೆ ಕರೆದೊಯ್ದೆ. ಬುಟ್ಟಿಯೊಳಗಿನ ನಾಲ್ಕು ರೊಟ್ಟಿ ಹಿರಿದು ಮ್ಯಾಲೆ ಪಲ್ಯ ಹಚ್ಚಿ ಕೈಗೆ ಕೊಟ್ಟೆ. ನಾಲ್ಕೂ ರೊಟ್ಟಿಗಳನ್ನು ಏಕ ಕಾಲಕ್ಕೆ ಕತ್ತರಿಸುತ್ತ ಮಾತಿಲ್ಲದೆ ತಿಂದಳು. ಮೆಲ್ಲಗೆ ಎಬ್ಬಿಸಿಕೊಂಡು ಅಂತಸ್ತಿನ ಕಡೆ ತರುತ್ತಿದ್ದೆ. ಅಷ್ಟರಲ್ಲಿ ದೇಸಾಯಿ ಬಂದವನು ದೊರೆಸಾನಿಯ ಸ್ಥಿತಿ ನೋಡಿ “ಏನಿದು?” ಅಂದ.

“ನಿನ್ನಿ ತೋಟದಾಗ ಅಡ್ಡಾಡಿದರು. ತೊಡಿ ತುಂಬ್ಯಾವರಿ” ಅಂದೆ.

“ಅದಕ್ಕs, ತೋಟಕ್ಕ ಹೋಗಬ್ಯಾಡ್ರೀ ಅಂದೆ. ಶೀನಿಂಗವ್ವ, ತೊಡೀಗಿ ಸ್ವಲ್ಪ ಸೆರೆ ಸವರು. ತಗೊಂಡರ ಒಂದ ಗುಟಕ ಕುಡಿಸಿ ಮಲಗಿಸು. ಬರೋಬರಿ ಆಗತಾರ” ಅಂದ.

ಹೂಂನ್ರಿ ಅಂದೆ. ಹೋದ. ಸಿಂಗಾರೆವ್ವ ಅವನ ಕಡೆ ನೋಡಲೇ ಇಲ್ಲ. ಅಷ್ಟರಲ್ಲಿ ನಿಂಗ್ಯಾ ಓಡಿ ಬಂದು. “ಊರಾಗೇನೇನ ಆಗೇತೆಂದಿರಿ?” ಎಂದ. ಮತ್ತೆ ತಾನೇ “ಹುಚ್ಚಯ್ಯನ ಗುಡಿಸಲಕ ಬೆಂಕಿ ಹತ್ತಿದ್ದ ನೋಡಿದಿರೇನ?” ಅಂದ. ನಾನು “ಹೌಂದು ನೋಡಿದೀವಿ. ಆ ಕಡೆ ಮಂದಿ ಓಡತಿದ್ರು” ಅಂದೆ.

“ಬೆಂಕಿ ಹತ್ತಿತ್ತಲ್ಲ. ಹರಿವತ್ತ ನೋಡಿದರ ಮೂರ ಹೆಣ ಬೆಂದ ಬಿದ್ದಾವ!”

ಈಗ ಸಿಂಗಾರೆವ್ವ ಹೊಯ್ಕಿನಿಂದ ಕಣ್ಣರಳಿಸಿ ನಿಂಗ್ಯಾನ ಕಡೆ ನೋಡಿದಳು. ಈ ತನಕ ನಿರ್ಭಾವವಾಗಿದ್ದ ಮುಖ ಈಗ ಆತಂಕದಿಂದ ಭಾವಪೂರ್ಣವಾಯಿತು. ಒಳಗೊಳಗೆ ಉದ್ವೇಗಗೊಂಡಿದ್ದಳೆಂದೂ ತೋರಿತು. ಮಾತಾಡಿದರೆಲ್ಲಿ ಒಳಗಿನದು ಹೊರಗುಕ್ಕುತ್ತದೋ ಎಂಬಂತೆ ಬಾಯಿಗೆ ಕೈ ಒಯ್ದುಳು. ನಾನು ಆಶ್ಚರ್ಯ ನಟಿಸುತ್ತ “ಯಾರ ಹೆಣ ಅಂತವು?” ಅಂದೆ. ನಿಂಗ್ಯಾ ನಿನ್ನ ಅಜ್ಞಾನಕ್ಕೆ ಒಮ್ಮೆ ಕೈಯಿಂದ ಹಣೆ ಹಣೆ ಹೊಡೆದುಕೊಂಡು,

“ಎಲ್ಲಾ ಬೆಂದ ಹೋಗಿ ಬರೀ ಎಲುವ ಉಳದಾವಬೆ. ಹೆಣ ಅಂತ ಗುರುತ ಹಿಡ್ಯಾಕಾಗಾಣೆಲ್ಲ. ಎಲ್ಲೋ ಒಂದು ಕಾಲ ಅರ್ಧಮರ್ಧ ಉಳದೈತಿ. ಅದನ್ನೋಡಿ ಇವು ಮನಶೇರ ಹೆಣ ಅಂತ ಅನ್ನಬೇಕಷ್ಟ. ಎಷ್ಟ ಹೆಣ ಅಂತ ಹೆಂಗ ಹೇಳೂದಾ? ಪೊಲೀಸರು ಬಂದಾರ - ನೋಡಬೇಕಷ್ಟ” ಎಂದು ಹೇಳಿ ಹೋದ. ಅಷ್ಟರಲ್ಲಿ ನಾನು ಹೋಗಿ ದೊರೆಸಾನಿಯನ್ನು ಮಲಗಿಸಿ ಕೆಳಗಿಳಿದು ಬಂದು ಊಟ ಮಾಡಿದೆ. ಬರುವಾಗ ಇನ್ನೊಂದು ಕಾಯಿ ಸೆರೆ ತಂದೆ.

ದೊರೆಸಾನಿ ಹಾಗೆಯೇ ಒರಗಿದ್ದಳು. ಎಡಗೈ ತಲೆಯ ಮೇಲಿತ್ತು. ಬಲಗೈ ಶವದ ಕೈಯಂತೆ ಅಡ್ಡವಾಗಿ ಈಕಡೆ ಬಿದ್ದಿತ್ತು. ಕಾಲು ಅಗಲವಾಗಿ ಸೆಟೆದಂತಿದ್ದವು. ಗಾಬರಿಯಾಗಿ ಹೋಗಿ ಮುಖ ನೋಡಿದೆ. ಕಣ್ಣು ತೆರೆದಿದ್ದವು. ಕಣ್ಣೀರು ಧಾರಾಕಾರವಾಗಿ ಕಿವಿಯ ಗುಂಟ ಕೆಳಗಿಳಿಯುತ್ತಿದ್ದವು. ಬಾಟ್ಲೆಯ ಸೆರೆ ಬಟ್ಟಲಿಗೆ ಹಾಕಿಕೊಂಡು ಕಾಲಿಗೆ ಉಜ್ಜತೊಡಗಿದೆ. ಎಷ್ಟು ಹೊತ್ತಾದರೂ ಅವಳಿಗೆ ನಿದ್ದೆ ಬರಲಿಲ್ಲ. ಉಜ್ಜುವುದನ್ನು ನಾನೂ ನಿಲ್ಲಿಸಲಿಲ್ಲ.

ಬಹುಶಃ ನಿನ್ನ ನಡೆದದ್ದನ್ನು ಧ್ಯಾನಿಸಿ ಅಳುತ್ತಿದ್ದಳೆಂದು ನನ್ನ ಭಾವನೆ. ನನಗೇನು ಸಮಾಧಾನವಿತ್ತೇ? ಕಣ್ಣೆದುರಿಗೆ ಏನು ಕಂಡರೂ ಅದು ನಿನ್ನೆಯ ಹೆಣವಾಗಿ, ಹೆಣ ಬೆಂಕಿಯಾಗಿ ಪರಿವರ್ತನೆ ಹೊಂದುತ್ತಿತ್ತು. ಅದು ಕಂಡೊಡನೆ ಕಿರುಚಬೇಕೆನಿಸುತ್ತಿತ್ತು. ಯಾವ ದನಿ ಕಿವಿಗೆ ಬಿದ್ದರೂ ಯಾರೋ ಕಿರುಚಿದ ಹಾಗೆ ಕೇಳಿಸುತ್ತಿತ್ತು. ಇದು ಹೀಗೆ ಮುಂದುವರಿದರೆ ನನಗೆ ಹುಚ್ಚು ಹತ್ತುವ ದಿನ ದೂರವಿಲ್ಲ ಎಂದುಕೊಂಡೆ. ನನಗೇ ಹೀಗಾಗಿದ್ದರೆ ದೊರೆಸಾನಿಗೆ ಏನಾಗಿರಬೇಡ! ಗೌಡನೇನೋ ನೀಚ ನಿಜ. ಆದರೆ ಹಡೆದ ತಂದೆ ಗೌಡೋ. ಅವನ ಜೀವದ ಜೊತೆ ತಾಯಿಯ ಜೀವವೂ ಅಂಟಿಕೊಂಡಿದೆಯೋ? ಮರ್ಯಾನ ಸೇಡಿಗೆ ಮಾತ್ರ ಗೌಡನೇ ಪೂರ್ತಿ ಹೊಣೆಗಾರ. ಅದರಲ್ಲಿ ದೊರೆಸಾನಿಯದೇನು ತಪ್ಪಿದೆ? ಅಡಾಡುತ್ತ ಬಂದು ಮರ್ಯಾನನ್ನು ಎದುರು ಹಾಕಿಕೊಂಡು ಮಣ್ಣು ಮುಕ್ಕಿದನೇ! ಶಿವನೇ, ಮಗಳು ತಂದೆಯ ಹೆಣಕ್ಕೆ ಈ ಪರಿ ಬೆಂಕಿಯಿಡಬೇಕಾಯಿತೇ! ಹೇಳಿಕೊಂಡಾದರೂ ಸಮಾಧಾನಪಡೋಣವೇ? ಬಾಯಿ ಮಾಡಿ ಅಳೋಣವೆ? ಯಾರ ಮುಂದೆ ಹೇಳೋಣ - ಅಳೋಣ?

ದೊರೆಸಾನಿ ಮೈ ಹಗುರಾಗಿ, ಇಲ್ಲವೆ ಬಿದ್ದುಕೊಂಡಿರಲಿಕ್ಕೆ ಬೇಸರವಾಗಿ ಎದ್ದಳು. ದಿಂಬು ತಗೊಂಡು ಗೋಡೆಗಾನಿಸಿ ಕೂತಳು. “ಬಾಟ್ಲಿ ತಾ” ಎಂದಂತೆ ಕೂ ಮಾಡಿದಳು. “ಬ್ಯಾಡೆವ್ವ” ಅಂದೆ. ಕೀ ಹಾಗೇ ಬಾಟ್ಲಿ ಕಡೆ ಹಿಡಿದಿದ್ದರಿಂದ ಕೊಟ್ಟೆ. ಕುಡಿದು ಕೆಳಗಿಟ್ಟು ಖಿನ್ನಳಾಗಿ ಹೇಳಿದಳು.

“ಶೀನಿಂಗೀ, ನಾ ಇನ್ನ ಸಾಯತೇನಗs ಬದಕೂವಂತ ಆಸೆ ಏನೇನೂ ಉಳಿದಿಲ್ಲ!”

ಅವಳ ಮಾತು ಕೇಳಿ ಅಳು ಒತ್ತರಿಸಿ ಬಂತೊ, ಅಥವಾ ನಿನ್ನೆಯ ಘಟನೆಯಾದಾಗಿನಿಂದ ಹಿಡಿದಿಟ್ಟ ದುಮ್ಮಾನ ದುಃಖವಾಗಿ ಉಕ್ಕಿತೊ - ಕಣ್ಣೀರಿಡುತ್ತ “ಏನಾಡ್ತಿ ಬಿಡs ಯವ್ವ” ಅಂದೆ. “ಕಂಟಕಾನೆಲ್ಲ ದಾಟಿ ಬಂದೀವಿ. ವೈರಿ ಗೌಡನೂ ಸತ್ತ. ಶನಿ ಮರ್ಯಾನೂ ಸತ್ತ. ಹಿಂದಿಂದ್ದೆಲ್ಲಾ ಕನಸಂತ ತಿಳಿ. ಮುಂದ ಚಲೋ ದಿನಾ ಬಂದೇ ಬರ್ತಾವು”. ನನ್ನ ಮಾತಿನಿಂದ ಯಾವ ಪರಿಣಾಮವೂ ಅವಳ ಮುಖದ ಮೇಲಾಗಲಿಲ್ಲ. ಈವರೆಗಿನ ನಿರಾಶೆಗಳು ತುಳಿದು ತುಳಿದು ಅವಳ ಮನಸ್ಸನ್ನು ಎಷ್ಟು ಒಣಗಿಸಿದ್ದವು ಎಂದರೆ ಈಗ ಸ್ವಯಂ ಶಿವನೇ ಬಂದು ಚಲೋದಿನದ ಭರವಸೆ ಕೊಟ್ಟಿದ್ದರೂ ಅದು ಆರ್ದ್ರವಾಗುತ್ತಿರಲಿಲ್ಲ. ಗೊತ್ತಿದ್ದೂ ಹೀಗೆ ಹೇಳುತ್ತೇನೆಂಬುದಕ್ಕೋ, ನನಗಿನ್ನೂ ಅನುಭವ ಸಾಲದೆಂಬುದಕ್ಕೋ ವ್ಯಂಗ್ಯವಾಗಿ ನಕ್ಕಳು. ಕಣ್ಣುಗಳು ಖಾಲಿ ಖಾಲಿ ಆಗಿದ್ದವು. ಎಲ್ಲ ಗುಟ್ಟುಗಳನ್ನು ತಿಳಿದು ಅರ್ಥ ಕಾಣದೆ ಹತಾಶಳಾದವಳಂತೆ ಹೇಳಿದಳು -

“ವೈರಿಗಳಿಬ್ಬರೂ ಸತ್ತರೂ ವಿಧಿ ನನ್ನ ಬೆನ್ನ ಬಿಡೋದಿಲ್ಲಗs. ಇಲ್ಲಾ ಅವರ್‍ನ ದೆವ್ವ ಮಾಡಿ ಕಾಡಸಾಕ ಹಚ್ಚತೈತಿ. ಇಲ್ಲಾ ಬ್ಯಾರೆ ವೈರೀನ್ನ ಹುಟ್ಟಿಸಿರತೈತಿ. ಈ ಅರಮನ್ಯಾಗ ಇದ್ದ ಇದ್ದ ನಾ ಆಗಲೇ ದೆವ್ವ ಆಗೀನಿ. ಕಾಣಾಸಾಣಿಲ್ಲೇನs?”

ನನ್ನ ಅಳು ನಿಂತಿರಲಿಲ್ಲ. ಅವಳ ದನಿ ಕೂಡ ಎಂದಿನ ಹಾಗಿರಲಿಲ್ಲ. ಅದರಲ್ಲೇನೋ ಒಂದು ಗಡಸುತನ, ಒಂದು ಧೈರ್ಯ, ‘ಇಷ್ಟs ಹೌಂದಲ್ಲೊ’ ಎಂಬ ತಿರಸ್ಕಾರಗಳಿದ್ದವು. ಈಗಷ್ಟೆ ದೆವ್ವಿನ ಮಾತಾಡಿದಳಲ್ಲ, ಮಾತಾಡುವಾಗ ತನ್ನ ಖಾಲಿ ಕಣ್ಣುಗಳನ್ನು ಅಗಲವಾಗಿ ತೆರೆದು ನನ್ನ ಕಡೆ ನೋಡಿದಳಲ್ಲ. ಹುಣಿಸೆ ಮೆಳೆಯ ಭೂತವೇನಾದರೂ ಮೈಯಲ್ಲಿ ಹೊಕ್ಕಿದೆಯೇ ಎಂದು ಅಂದುಕೊಂಡೆ. “ಬಿಡ ತಾಯಿ, ಏನ ಮಾತಾಡ್ತಿ, ಅರಾಮ ಒಂದು ಜಂಪ ನಿದ್ದಿ ಮಾಡು” ಅಂದೆ.

“ನನಗಿನ್ನೆಲ್ಲಿ ನಿದ್ದಿ ಬಂದೀತ ತಾಯಿ...”

- ಎಂದು ಇನ್ನೇನೊ ಹೇಳಲಿದ್ದಳು. ಅವಳ ಮನಸ್ಸನ್ನು ಬೇರೆ ಕಡೆಗೆ ತಿರುಗಿಸಲು “ಅದೇನವ್ವ ಇನ್ನ ಕುಂಕುಮ ಹಚ್ಚೆಲ್ಲ” ಅಂದೆ.

“ಅದೊಂದು ದಂಡ. ತೋರಿಕಿಗಾದರೂ ಹಚ್ಚಿಕೋಬೇಕಲ್ಲ. ಕರಡಿಗಿ ತಾ” ಅಂದಳು. ಮೆಲ್ಲಗೆದ್ದು ಕನ್ನಡಿಯ ಬಳಿಗೆ ಹೋಗುತ್ತ ಹೇಳಿದಳು,

“ನನ್ನ ಬೆನ್ನ ಹತ್ತಿ ಬಂದಿ, ನೀ ಏನ ಸುಖ ಸುರಕೊಂಡೇ ನನ್ನ ತಾಯಿ! ಎಂಥಾ ಅನಾಥ ಮನೀಗಿ ಬಂದಿವಿಬ್ಬರೂ! ಶೀನಿಂಗಿ, ಈಸಲ ನೀ ಮದಿವ್ಯಾಗು, ಇಲ್ಲೇ ಯಾವನ್ನಾದರೂ ಕಟ್ಟುಮಸ್ತು ಗಂಡನ್ನೋಡಿ ಕಟ್ಟತೀನಿ. ಗಂಡ ಹೆಂಡ್ತಿ ಇಬ್ಬರೂ ಅರಮನ್ಯಾಗs ಇರ್ರಿ. ವರ್ಷ ತುಂಬೂದರಾಗ ನೀ ಮಗನ್ನ ಹಡಿ! ನಾ ನಿನ್ನ ಮಗನ್ನ ದತ್ತಕ ತಗೋತೀನಿ! ನಿನ್ನ ಋಣಭಾರ ಇನ್ಹೆಂಗ ತೀರಿಸಲೆ ತಾಯಿ?”

- ಎನ್ನುತ್ತ ಕನ್ನಡಿಯಲ್ಲಿ ನೋಡಿಕೊಂಡು, ಕುಂಕುಮ ಹಚ್ಚಿಕೊಳ್ಳುತ್ತಿರುವಂತೆ ಹಾವು ತುಳಿದವರಂತೆ “ಶೀನಿಂಗಿ!” ಎಂದು ಕಿಟಾರನೆ ಕಿರಿಚಿ ಕರಡಿಗೆ ಎಸೆದಳು. ಕನ್ನಡಿಯಲ್ಲಿ ಏನು ಕಂಡಿತೊ ಎಂದು ನಾನು ಓಡಿಹೋಗಿ ಅವಳು ನೋಡುತ್ತಿದ್ದತ್ತ ನೋಡಿದೆ. ಗಡಂಚಿಯ ಹಿಂಭಾಗದಲ್ಲಿ ಮರ್ಯಾ ಹುದುಗಿದ್ದವನು ಹೊರಗೆದ್ದು ಬಂದು ಕೂತ! ಮರ್ಯಾನ ಭೂತವೇನೊ ಎಂದ ಒಮ್ಮೆ ಅಂದುಕೊಂಡೆ. ಸಿಂಗಾರೆವ್ವ ವಿಕಾರವಾಗಿ ಕಣ್ಣರಳಿಸಿ, ಬಾಯ್ತೆಗೆದು ಅವನನ್ನು ಹಾಗೇ ನೋಡುತ್ತ ಥರಥರ ನಡುಗುತ್ತ ನಿಂತಿದ್ದಳು. ಮರ್ಯಾ ನಮ್ಮನ್ನೇ ನೋಡುತ್ತ -

“ಗದ್ದಲ ಮಾಡಬ್ಯಾಡ್ರಿ, ಊರಾಗ ಪೊಲೀಸರು ಬಂದಾರ. ನನ್ನ ಏನಾರೂ ಹಿಡಿದುಕೊಟ್ರ ನನ್ನ ಜೋಡಿ ನೀವೂ ಜೇಲಿಗೆ ಬರಬೇಕಾಗ್ತೈತಿ. ಸುಮ್ಮನ ನನ್ನ ಅಡಗಿಸರಿ.”

“ಜೇಲಿಗಿ ನೀ ಹೋಗು - ಗೌಡನ್ನ ಕೊಂದವ ನೀನು. ನಾವ್ಯಾಕೊ ಹೋಗಬೇಕು ಭಾಡ್ಯಾ? ಹೊರಬಿಳ್ತಿಯೊ, ದೇಸಾಯರನ್ನ ಕರಿ ಅಂದ್ಯೊ?”

“ಸಿಂಗಾರೀ, ನಿನ್ನ ಬುರುಕಿ ಇನ್ನs ಮೆಳ್ಯಾಗs ಬಿದ್ದೈತಿ. ಹುಷಾರ್!”

* * *

# ಅಧ್ಯಾಯ - ೧೦

ಕೆಲವರಿರುತ್ತಾರೆ; ನೀವು ಬೆರಳು ಮಾಡಿ ತೋರುವಂಥ ಯಾವ ಕರ್ಮ ಯಾವ ಪಾಪ, ಯಾವ ಕೆಟ್ಟಕೆಲಸವನ್ನೂ ಮಾಡಿರುವುದಿಲ್ಲ. ಇನ್ನೊಬ್ಬರ ಮನಸ್ಸನ್ನು ಕೂಡ ನೋಯಿಸಿರುವುದಿಲ್ಲ. ಆದರೆ ಜೀವನದುದ್ದಕ್ಕೂ ಚಂಡಾಲರು ಅನುಭವಿಸುವಂಥ ಯಾತನೆ, ನೋವನ್ನು ಅನುಭವಿಸುತ್ತಾರೆ. ಅವರು ಚಿನ್ನ ಹಿಡಿದರೆ ಮಣ್ಣಾಗುತ್ತದೆ. ಅನ್ನವೆಂದದ್ದು ವಿಷವಾಗುತ್ತದೆ. ಅವರು ಕಾಲಿಟ್ಟಲ್ಲಿ ನಿಂತ ನೀರು ಇಂಗುತ್ತದೆ. ಬೆಳೆದ ಹಸಿರು ಒಣಗುತ್ತದೆ. ಮಕ್ಕಳು, ದನಕರು ಸಾಯುತ್ತವೆ. ನೀನು ಬಂದು, ಅವರ ಅಂತಃಕರಣ ಕಂಡು 'ದೇವರು ಒಳ್ಳೇದು ಮಾಡಲಿ' ಅಂತ ಮನಸಾರೆ ಹರಸಿದೆ ಅಂತಿಟ್ಟುಕೊ. ಆದರೆ ಪರಿಣಾಮ ಮಾತ್ರ ಅದಕ್ಕೆ ವಿರುದ್ಧವಾಗೇ ಆಗಿರುತ್ತದೆ. ಹಿಂಗ್ಯಾಕೆಂಬುದಕ್ಕೆ ಕಾರಣ ಕಡೀತನಕ ಗೊತ್ತಾಗೋದೇ ಇಲ್ಲ. ಯಾವುದಕ್ಕೂ ಒಂದು ತರ್ಕ ಇರಬೇಕಲ್ಲ. ಅದಿಲ್ಲಿ ಇರೋದೆ ಇಲ್ಲ. ನಮ್ಮ ದೊರೆಸಾನಿ ಅಂಥವಳು.

ಏನಪ್ಪಾ, ಗೌಡನಿಗೆ ಮಗಳಾಗಿ ಹುಟ್ಟಿದ್ದು ತಪ್ಪೆ? ಹೆಣ್ಣಾಗಿ ಹುಟ್ಟಿ ಹಾಳುಸುರಿವ ಅರಮನೆಗೆ ಆಡುವ ಮಕ್ಕಳನ್ನು ಕೊಡಬೇಕೆಂದದ್ದು ತಪ್ಪೆ? ಅದಕ್ಕಾಗಿ ಪೂಜಾ ವ್ರತ ಮಾಡಿದ್ದು ತಪ್ಪೆ? ಅದೇನೋ ಕತೆ ಹೇಳುತ್ತಾರಲ್ಲ, ರಾಜಕುಮಾರಿಗೆ ರಾಕ್ಷಸರು ಗಂಟು ಬಿದ್ದರು ಅಂತ. ಹಾಗೆ ಗೌಡ, ದೇಸಾಯಿ, ಮರ್ಯಾ - ಒಬ್ಬರಾದ ಮೇಲೊಬ್ಬರು ಕಡೆಕಡೆಗೆ ಮೂವರೂ ಕೂಡಿ ಗಂಟು ಬೀಳುವುದೆಂದರೇನು? ಆದರೆ ರಾಜಕುಮಾರೀನ ಬಿಡಿಸೋದಕ್ಕೊಬ್ಬ ರಾಜ ಕುಮಾರನಾದರೂ ಇದ್ದ. ಇಲ್ಲಿ ಅವನೂ ಇಲ್ಲ. ಚಿಕ್ಕಂದಿನಿಂದ ನಾನೇ ಕಂಡಿದ್ದೀನಲ್ಲ. ಒಂದು ಪಾಪ ಮಾಡಿದವಳಲ್ಲ. ಆದರೆ ಅವಳಂಥ ಯಮಯಾತನೆ ಪಟ್ಟವರೇ ಇಲ್ಲ. ಅಥವಾ ಅವಳು ಮಾಡಿದ ಒಂದೇ ಒಂದು ಪಾಪವೆಂದರೆ: ಅವಳು ಗೌಡನಿಗೆ ಹುಟ್ಟಿದ್ದೇ.

ಆಯಿತು, ಹೋದೆಯಾ ಶನಿ ಅಂದರೆ ಬಂದೆ ಗವಾಕ್ಷಿಲಿ ಅಂದ ಹಾಗೆ, ಮರ್ಯಾ ಬಂದು ಮನೆ ಸೇರಿ ವಕ್ಕರಿಸಿದನಲ್ಲ. ಬೆಂಕಿಯಿಂದ ಹ್ಯಾಗೆ ಪಾರಾದನೆಂದು ನಮಗೆ ತಿಳಿಯದು, ಆಸರೆ ಕೊಡಲೇಬೇಕಾಯಿತು, ಕೊಟ್ಟೆವು, ಹಿರಿಯ ದೊರೆಸಾನಿ ಇದ್ದ ಕೋಣೆಯನ್ನು ಹಗಲು - ರಾತ್ರಿ ಬಿದ್ದಿರುತ್ತಿದ್ದ. ಆದರೆ ಆ ದಿನ ಮರ್ಯಾನನ್ನು ನೋಡಿ ದೊರೆಸಾನಿ ಕಿರಿಚಿದಳಲ್ಲ. ಅಂದೇ, ಆಗಲೇ ಚಳಿಜ್ವರ ಬಂದು ಗಡಗಡ ನಡುಗತೊಡಗಿದಳು. ಇದ್ದ ರಗ್ಗನ್ನೆಲ್ಲ ಹೊದಿಸಿದರೂ ಚಳಿ ಕಡಿಮೆಯಾಗಲಿಲ್ಲ. ಕಷಾಯ ಮಾಡಿ ತಂದು ಕುಡಿಸಿದೆ. ಡಾಕ್ಟರಿಗೆ ಹೇಳಿ ಕಳಿಸೋಣವೆಂದರೆ ದೇಸಾಯಿ ಬಂದಿರಲಿಲ್ಲ. ನಿಂಗನನ್ನು ಕಳಿಸಿದೆ, ಡಾಕ್ಟರ್ ಊರಲಿಲ್ಲವೆಂದು ಹೇಳಿದ. ಬಹಳ ಹೊತ್ತಾದ ಮೇಲೆ ಪೂರ್ತಿ ಹೊದ್ದುಕೊಂಡು ಸುಮ್ಮನಾದಳು.

ರಾತ್ರಿ ಎಲ್ಲಾ ಜನ ಮಲಗಿದ್ದರು. ಆಗ ನಿಟ್ಟುಸಿರು ಬಿಟ್ಟು ಮುಖದ ಮೇಲಿನ ಹೊದಿಕೆ ತಕ್ಕೊಂಡಳು. ಆದರೆ ಜ್ವರ ಇತ್ತು. ಇನ್ನೇನು ಬಿಡುತ್ತದೆ ಎಂದುಕೊಂಡೆ. “ಒಂದ ಗುಟಕ ಗಂಜೀ ಮಾಡಿಕೊಡಲೇನs ಎವ್ವಾ” ಅಂದೆ. ಕೈಸನ್ನೆಯಿಂದಲೇ ಬೇಡವೆಂದಳು. ಇನ್ನು ನಾ ಹ್ಯಾಗೆ ಊಟ ಮಾಡಲಿ? ಸುಮ್ಮನಿದ್ದಳಲ್ಲ, ನಿದ್ದೆ ಮಾಡುತ್ತಿದ್ದಳೆಂದುಕೊಂಡೆ. ಮಧ್ಯರಾತ್ರಿ ತೂರಾಡುತ್ತಾ ಕೀರಲು ದನಿಯಲ್ಲಿ ದೇಸಾಯಿ ಬಂದ. ಹೋಗಿ ಜ್ವರ ಬಂದ ವಿಷಯ ಹೇಳಿದೆ. “ನಾಳಿ ಡಾಕ್ಟರಗ ತೋರಿಸೋಣ” ಎಂದು ಹೇಳಿ ಸೀದಾ ಮಲಗಲಿಕ್ಕ ಹೋದ.

ಮುಂದೆ ನಾಕು ದಿನಗಳಾದರೂ ಜ್ವರ ಇಳಿಯಲಿಲ್ಲ. ಹುಚ್ಚಯ್ಯ ಸತ್ತಾಗ ಬಂದಿತ್ತಲ್ಲ, ಅದೇ ಜ್ವರವೆಂದುಕೊಂಡರೂ ಈ ಸಲ ಮನಸ್ಸಿನ ಸ್ತಿಮಿತ ತೀರ ಹದಗೆಟ್ಟಿತ್ತು. ಬರುವ ಜ್ವರಕ್ಕೆ ಕೂಡ ಒಂದು ನಿಯಮವೆಂಬುದಿರಲಿಲ್ಲ. ಯಾವಾಗಲೋ ಬಂದು ಯಾವಾಗಲೋ ಇಳಿಯುತ್ತಿತ್ತು. ಜ್ವರ ಬಿಟ್ಟಾಗಲಾದರೂ ಸಮ ಇರುತ್ತಿದ್ದಳೇ? ಒಮ್ಮೊಮ್ಮೆ ಕೂತಲ್ಲೇ ಕಾಲು ಬಡಿಯುತ್ತ ಓಡಿದ ಹಾಗೆ ಮಾಡುತ್ತಿದ್ದಳು. ಮತ್ತೊಮ್ಮೆ ಗಡಂಚಿಯನ್ನೇ ತದೇಕ ದೃಷ್ಟಿಯಿಂದ ನೋಡ ನೋಡುತ್ತ ಕಿರಿಚಿ, ತಲೆತಲೆ ಚಚ್ಚಿಕೊಂಡು ಮೂರ್ಛೆ ಹೋದಳು. ಅದು ಹುಚ್ಚಿರಬೇಕು, ಇಲ್ಲವೆ ಹುಣಸೀಮೆಳೆಯ ಭೂತಭಾದೆ ಇರಬೇಕೆಂದು ಮೆಣಸಿನಕಾಯಿ ನಿವಾಳಿಸಿದೆ. ಅಂಗಾಲಿಗೆ ಬೂದಿ ತಿಕ್ಕಿದೆ. ಬಹಳ ಹೊತ್ತಾದ ಮೇಲೆ ಮೂರ್ಛೆ ತಿಳಿದೆದ್ದಳು. ಮಾತಾಡಲಿಕ್ಕೆ ಉಸಿರೇ ಇರಲಿಲ್ಲ. ಕೈಸನ್ನೆ ಮಾಡಿ ನೀರು ಕೇಳಿದಳು. ಸಣ್ಣ ದನಿಯಲ್ಲಿ “ದೇಸಾಯಿ ಬಂದರೇನs” ಎಂದಳು. “ಇನ್ನ ಬಂದಿಲ್ಲೆವ್ವಾ” ಅಂದೆ. ಖಿನ್ನಳಾಗಿ ಮುಖ ಆ ಕಡೆ ತಿರುಗಿಸಿದಳು.

ಇಷ್ಟಾದರೂ ದೇಸಾಯಿಯ ಕರುಳಿಗೆ ಇವಳ ಯಾತನೆ ಮುಟ್ಟಿಯೇ ಇರಲಿಲ್ಲ. ತನಗೇನೂ ಆಗಿಲ್ಲವೆಂಬಂತೆ ಏಳೋ ಹೊತ್ತಿಗೆದ್ದು, ತಿನ್ನೋ ಹೊತ್ತಿಗೆ ತಿಂದು, ಬರೋ ಹೊತ್ತಿಗೆ ಬಂದು ಮಲಗುತ್ತಿದ್ದ. ಈ ಸಲ ಹುಚ್ಚಿನ ಭಯವಿದೆಯಾದ್ದರಿಂದ ನಿರ್ಲಕ್ಷಿಸಬಾರದೆಂದು ತಾಕೀತು ಮಾಡಿದ್ದೆ. ‘ಆಗಲೇ ಸಾಯುವಂತಾಗಿದ್ದಾಳೆ, ಮತ್ತೆ ಮತ್ತೆ ನಿಮ್ಮನ್ನೇ ಜ್ಞಾಪಿಸಿಕೊಳ್ಳುತ್ತಾಳೆ, ನನಗಿಂತ ನಿಮ್ಮ ಸಾಮೀಪ್ಯದ ಅಗತ್ಯವೇ ಹೆಚ್ಚಾಗಿದೆ” ಎಂದು ಹೇಳಿ. “ತುಸು ಎಚ್ಚರ ತಪ್ಪಿದರೂ ಅವಳ ಜೀವಕ್ಕೆ ಗಂಡಾಂತರವಿದೆ” ಎಂದು ನಿಷ್ಠುರವಾಗಿಯೇ ಹೇಳಿದೆ “ಊರಾಗ ಡಾಕ್ಟರ ಇಲ್ಲs” ಎಂದು ಗುಣುಗುಣು ಮಾಡಿ ಅನುಗ್ರಹಿಸುವಂತೆ ಅಂತಸ್ತೇರಿ ಬಂದ, ದೊರೆಸಾನಿ ಮಲಗಿದ್ದಳು. ತುಸು ಹೊತ್ತು ಕರ್ತವ್ಯವೆಂಬಂತೆ ಕೂತಿದ್ದು, ತಾಲೀಮಿಗೆ ಸಮಯವಾಯ್ತೆಂದು ಹೊರಟು ಹೋದ. ನನಗೆ ಅವನ ಮೇಲೆ ಸಿಟ್ಟೂ ಕೂಡಬಂತು. ಯಾಕೆಂದರೆ ಹಗಲು ಹೊತ್ತು ಹ್ಯಾಗೋ ಸಾಗೀತು. ರಾತ್ರಿ ಹೊತ್ತು ಅವಳನ್ನು ಹಿಡಿಯುವುದೇ ಕಷ್ಟ. ನಾನು ಅವಳಿಗಿಂತ ಕಸುವಿನವಳಾದರೂ ಈ ಜ್ವರದಲ್ಲಿ ಮಾರಾಯ್ತಿಗೆ ಅದೆಲ್ಲಿಂದ ಕಸುವು ಬರುತ್ತಿತ್ತೊ, ಏನೇನೋ ಮಾತಾಡುತ್ತಾ ಗಾಳಿ ತುಂಬಿದ ಕರುವಿನ ಹಾಗೆ, ಎಲ್ಲೆಂದರಲ್ಲಿ ನುಗ್ಗುತ್ತಿದ್ದಳಲ್ಲ, ನನಗೆ ಅವಳನ್ನು ಹಿಡಿದು ನಿಭಾಯಿಸುವುದು ಭಾರಿ ಶ್ರಮದ ಕೆಲಸವಾಗುತ್ತಿತ್ತು. ನರಪೇತಲ ದೇಸಾಯಿಗಿದು ಅಸಾಧ್ಯ. ನಿಜ,. ಆದರೂ ಗಂಡೆಸೆಂಬುವನೊಬ್ಬ ಪಕ್ಕದಲ್ಲಿದ್ದರೆ ಎಷ್ಟೋ ಧೈರ್ಯವಿರುತ್ತದೆ.

ನಾಕನೆಯ ರಾತ್ರಿ ನನಗೆ ಪರೀಕ್ಷೆಯ ಕಾಲ, ಯಾವುದೋ ಪಿಶಾಚಿ ಬೆನ್ನು ಹತ್ತಿದವರಂತೆ ಅಂತಸ್ತಿನ ಕೋಣೆಯ ತುಂಬ ಆ ಕಡೆ ಈ ಕಡೆ ಕಿರುಚುತ್ತಾ ಓಡಾಡಿದಳು. ನಾನು ಹಿಡಿದುಕೊಳ್ಳಲು ಹೋದದ್ದೇ ತಪ್ಪಾಯಿತೇನೋ, ಚಂಗನೆ ಅಂತಸ್ತಿನಿಂದ ಹಾರಿ ಹಿತ್ತಲ ಕಡೆಗೆ ಓಡಿದಳು. ಸುದೈವವೆನ್ನಬೇಕು ಹಿತ್ತಲ ಬಾಗಿಲು ಬೇಗನೇ ತೆರೆಯಲಿಲ್ಲವಾದ್ದರಿಂದ ಸಿಕ್ಕಳು. ಸಿಕ್ಕವಳು ಸುಮ್ಮನಿದ್ದಳೆ, ಬಿಡಿಸಿಕೊಳ್ಳಲು ಹೋರಾಡತೊಡಗಿದಳು. ನನ್ನನ್ನು ಹಿಂದಿ ಮೂಳೆಗಳನ್ನೆಲ್ಲ ಮುರಿದು ಮುದ್ದಿ ಮಾಡುವಳೇನೋ ಅಂದುಕೊಂಡೆ. ಹೋರಾಡಿ ಸೆಣಸುತ್ತ ಕೊನೆಗೆ, ಹಾಗೇ ನನ್ನ ತೆಕ್ಕೆಯಲ್ಲಿ ಕುಸಿದಳು. ಇನ್ನಿವಳನ್ನು ಎತ್ತಿಕೊಂಡು ಮೇಲೆ ಅಂತಸ್ತಿಗೊಯ್ಯುವುದು ಹ್ಯಾಗೆಂದು ಚಿಂತೆಯಾಯಿತು. ಸದ್ಯ ಮರ್ಯಾ ಹೊರ ಬಂದು ನೋಡುತ್ತಿದ್ದವನು ನನ್ನ ಸಹಾಯಕ್ಕೆ ಬಂದ. ಎತ್ತಿಕೊಂಡು ಅಂತಸ್ತಿನ ಹಾಸಿಗೆಗೆ ತಂದು ಮಲಗಿಸಿದ. ಒರಗಿದಳೋ ಇಲ್ಲವೊ, ತಕ್ಷಣ ಮುಖ ಬಿಳಿಚಿ, ಕೈಕಾಲು ಸೆಟಸಿ, ತೇಲುಗಣ್ಣು, ಮೇಲುಗಣ್ಣಾಗಿ, ಜೀವ ಹೋಗಿ ಮೈ ತಣ್ಣಗಾಯಿತು! “ಎವ್ವಾ, ಎವ್ವಾ ಸಿಂಗಾರೆವ್ವಾ” ಎಂದು ಕಿರಿಚಿ ಕರೆಯುತ್ತ ರಭಸದಿಂದ ಅಂಗಾಲು ತಿಕ್ಕತೊಡಗಿದೆ. ಮರ್ಯಾ ಜೋರಿನಿಂದ ಕಿವಿ ಊದತೊಡಗಿದ. ಆದರೂ ಹ್ಞಾ ಇಲ್ಲ, ಹೂ ಇಲ್ಲ! ನಾನು, ನನ್ನ ದನಿ ಕೇಳಿ ಯಾರಾದರೂ ಬರಲೆಂದು, ಸಾಧ್ಯವಾದರೆ ದೇವರೇ ಬರಲೆಂದು ಚೀರಾಡುತ್ತಲೇ ಇದ್ದೆ. ಮರ್ಯಾ ಇನ್ನೂ ಜೋರಾಗಿ ಕಿವಿ ಊದಿದ. ಸಾವಿನೊಂದಿಗೆ ಗುದ್ದಾಡುವುದು ಸಾಮಾನ್ಯವೆ? ನನ್ನ ಕಿರಿಚಾಟ ಶಿವನಿಗೆ ಕೇಳಿಸಿ ತುಸು ಹೊತ್ತಿನಲ್ಲಿ ‘ಹಾ’ ಎಂದು ಹೊರಳಿದಳು. ಅವಳಿಗೆ ಜೀವ ಬಂತಲ್ಲ, ನನಗೂ ಬಂತು, ಮರ್ಯಾ ಗಾಬರಿಯಾಗಿದ್ದ ಉಸಿರಾಡಿಸಲಿಕ್ಕೂ ಧೈರ್ಯ ಸಾಲದಾಗಿತ್ತೇನೋ, ಒಂದು ಕ್ಷಣ ಕಣ್ಣು ಮುಚ್ಚಿ “ಎಪ್ಪಾ ಶಿವನಿಂಗ” ◌ಂದು ದೇವರನ್ನು ನೆನೆದ. ಮುಖ ಬೆವರಿನಿಂದ ಒದ್ದೆಯಾಗಿತ್ತು. ಮೆಲ್ಲಗೆ ಅವಳನ್ನು ಒರಗಿಸಿ, ಗಾಳಿ ಬೀಸೆಂದು ನನಗೆ ಕದ್ದು ಹೇಳಿ, ಮತ್ತೆ ಅವಳಲ್ಲಿ ಕಣ್ಣು ತೆರೆದು ನೋಡುತ್ತಾಳೊ ಎಂದು ಹೋಗಿ ಮೆಟ್ಟಿಲ ಮೇಲೆ ಮರೆಯಾಗಿ ಕೂತ.

ತುಸು ಹೊತ್ತಾದ ಮೇಲೆ ಅಲ್ಲಿಂದಲೇ ಕೈಮಾಡಿ ನನ್ನನು ಕರೆದ. ಅವಳನ್ನು ಬಿಟ್ಟು ಹೋಗುವ ಮನಸ್ಸಿರಲಿಲ್ಲ. ಕೈಸನ್ನೆ ಮಾಡಿ ಆಗಲೆಂದೆ. ಅವನು ಕೇಳಲಿಲ್ಲ. ಮತ್ತೆ ಕರೆದ. ನಾನು ಹೋಗಿ ಸಿಟ್ಟನಿಂದ “ನಿನ್ನಿಂದನs ಆಕಿಗಿ ಹಿಂಗ ಆದದ್ದು” ಎಂದು ತಕರಾರಿನ

ದನಿಯಲ್ಲಿ ಹೇಳಿದೆ. ನನ್ನ ಮಾತು ಕೇಳಿ ಅವ ಖಿನ್ನನಾದ. ಸಾಧ್ಯವಾದಷ್ಟು ನನ್ನ ಕಿವಿಯ ಬಳಿ ತನ್ನ ಬಾಯಿ ತಂದು "ಒಂದು ಮದ್ದೈತಿ, ತರಲೇನು?" ಅಂದ. ದೊರೆಸಾನಿಯ ಬಗೆಗಿನ ಪ್ರಾಮಾಣಿಕ ಕಳಕಳಿಯಿಂದಲೇ ಹೀಗೆ ಹೇಳಿದ್ದಾನೆಂದುಕೊಂಡು, ಬೇರೆ ದಾರಿಯೂ ಇರಲಿಲ್ಲವಲ್ಲ - ಅದಕ್ಕೆ "ತಗಂಬಾ" ಅಂದೆ. ಮಾಯವಾದ.

ಅಂಥ ಕತ್ತಲೆಯಲ್ಲಿ ಎಲ್ಲಿ ಹೋಗಿದ್ದನೊ, ಎರಡು ತಾಸಿನ ನಂತರ ತಿರುಗಿ ಬಂದ. ಎಂಥದೋ ಒಂದು ಸೊಪ್ಪನ್ನು ಖುದ್ದಾಗಿ ಅರೆದ. ದೊರೆಸಾನಿಗೆ ಇನ್ನೂ ಅರಿವು ಬಂದಿರಲಿಲ್ಲ. ಜ್ವರ ಮಾತ್ರ ಹಾಗೇ ಇದ್ದು ಮೈ ಕಾದ ಹಂಚಾಗಿತ್ತು. ಹಣೆ ಅಂಗೈ, ಅಂಗಾಲಿಗೆ ಹಚ್ಚಲು ಹೇಳಿ ಮತ್ತೆ ಅಡಗಿ ನಿಂತ. ಮದ್ದನ್ನುಜ್ಜಿದೆ.

ಬೆಳಗಿನ ತಂಗಾಳಿ ಮೈಗೆ ತೀಡಿತು. ನಾವಿಬ್ಬರೂ ಕಣ್ಣಿಗೆ ಕಣ್ಣು ಹಚ್ಚಿರಲಿಲ್ಲ. ಮತ್ತೆ ಮೈಮುಟ್ಟಿ ನೋಡಿದೆ. ಆಶ್ಚರ್ಯವೆಂದರೆ ಜ್ವರ ಇರಲಿಲ್ಲ. ಬೆವರಿದ್ದಳು. ಮರ್ಯಾ ಇದ್ದಲ್ಲಿಗೆ ಹೋಗಿ "ಅರಾಮ ಆಗ್ಯಾಳ ಇನ್ನೇನ ಕಾಳಜಿ ಇಲ್ಲ" ಎಂದು ನೆಮ್ಮದಿಯಿಂದ ಅವನ ಮದ್ದಿನ ಬಗೆಗಿನ ಮೆಚ್ಚುಗೆಯಿಂದ ಹೇಳಿದೆ. ಅತ್ತು ಅತ್ತು ಅವನ ಮುಖ ವಿಕಾರವಾಗಿತ್ತು. ಈ ಬಗೆಯ ಪಶ್ಚಾತ್ತಾಪದ ಭಾವವನ್ನ ಆತನಲ್ಲಿ ನಾನು ಹಿಂದೆಂದೂ ಕಂಡಿರಲಿಲ್ಲ. ತಾನು ಹಿಂದೆ ಮಾಡಿದ್ದ ಎಲ್ಲ ಅನ್ಯಾಯಗಳನ್ನು ಪಶ್ಚಾತ್ತಾಪದಿಂದ ತೊಳೆದುಕೊಂಡ ಹಾಗೆ ಕಂಡ. "ನಾ ಹೋಗತೀನಿ. ಇನ್ನೆಂದೂ ಆಕಿಗಿ ತ್ರಾಸ ಕೊಡಾಣಿಲ್ಲ" ಎಂದು ಹೇಳಿ ಎದ್ದು ನಿಂತ. ನನಗೆ ದಿಗಿಲಾಗಿ ಅವನ ಮುಖವನ್ನೇ ನೋಡುತ್ತ ನಿಂತೆ. ನನ್ನ ಕಡೆಗೂ ತಪ್ಪು ಮಾಡಿದವನಂತೆ ಒಮ್ಮೆ ನೋಡಿ "ಬರೋಬರಿ ನೋಡಿಕೊ" ಎಂದು ಹೇಳಿ ಕೆಳಗಿಳಿದು ಹೋದ. ಮರ್ಯಾ ಈ ಪರಿ ಮೆತ್ತಗಾಗುವುದೆಂದರೆ ಆಶ್ಚರ್ಯ ಮತ್ತು ನೆಮ್ಮದಿಯ ಸಂಗತಿಯೇ ಸೈ. ಅವನಲ್ಲಿ ಸೇಡಿತ್ತೆಂದು ನನ್ನ ಮುಂಚಿನ ಭಾವನೆಯಾಗಿತ್ತು. ಯಾಕೆಂದರೆ ಅವನನ್ನು ಜೀವಂತ ಸುಡುವ ಯತ್ನ ಮಾಡಿದ್ದೆವು. ಬಹುಶಃ ಸಿಂಗಾರೆವ್ವನ ಕರುಣಾಜನಕ ಸ್ಥಿತಿ ನೋಡಿಯೋ, ಇಲ್ಲ ಅವಳು ಸತ್ತೆ ಹೋಗುತ್ತಾಳೆ ಎಂಬ ಭಯದಿಂದಲೋ - ಅಂತೂ ಮನುಷ್ಯರೊಳಗೆ ಬಂದಿದ್ದ. ಇನ್ನವನ ಕಾಟದಿಂದ ದೊರೆಸಾನಿ ಮುಕ್ತಳಾದಳೆಂದೇ ನಂಬಿದೆ. ಎಷ್ಟು ದಿನ ಹೀಗಿದ್ದಾನು ಎಂದೂ ಸಂಶಯ ಬಂತು. ಆದರೆ ಮರ್ಯಾನಂಥವರ ಕಣ್ಣೀರು ಸುಳ್ಳು ಹೇಳಲಾರವು.

ನಾವು ಗೆದ್ದಿದ್ದೆವು. ಆ ಮುಂಜಾನೆಯಿಂದ ದೊರೆಸಾನಿ ಹುಷಾರಾದಳು. ಮೆಲ್ಲಗೆ ಎದ್ದು ಕೂತು ತುಸು ಕಷಾಯ ಕುಡಿದಳು. ಮಧ್ಯಾಹ್ನ ಗಂಜಿ ಕುಡಿದಳು. ಜ್ವರಬಿಟ್ಟಿತ್ತು. ಚಿತ್ತ ಕೂಡ ಸ್ವಸ್ಥವಾಗಿತ್ತು. ನನಗೆ ಸಿಟ್ಟು ಬಂದದ್ದು ಯಾವಾಗೆಂದರೆ ರಾತ್ರಿ ಅವಳ ಜೀವ ಹೋದುದನ್ನು ಹೇಳಿದರೂ ದೇಸಾಯಿ "ಹೌಂದ? ಅರೆ ಅರೆ!" ಎಂದಂದು ನಿರ್ಲಿಪ್ತನಾಗಿ ಉಳಿದಾಗ. "ಈಗ ಹೆಂಗದಾರ?" ಅಂದ. "ಅರಾಮದಾರ, ಹೋಗಿ ವಿಚಾರಿಸಿ ಬರ್ರಿ" ಅಂದೆ. ಮೇಲೇರಿ ಹೋದ - ಮತ್ತು ಹೋದವನು ಹಾಗೇ ಕೆಳಗಿಳಿದು ಬಂದ!

ಮುಂದಿನ ನಾಕೆಂಟು ದಿನಗಳಲ್ಲಿ ಸಿಂಗಾರೆವ್ವ ನೋಡುವ ಹಾಗಾದಳು. ಇಷ್ಟು ದಿನ ಉಟ್ಟ ಸೀರೆ ಬದಲಿಸಿರಲಿಲ್ಲ, ಕೂದಲು ಬಾಚಿರಲಿಲ್ಲ, ಕಣ್ಣು ಒಳಸೇರಿ, ಮುಖಬಾಡಿ, ಇನ್ನೂ ಅಕರಾಳ ವಿಕರಾಳವಾಗೇ ಕಾಣುತ್ತಿದ್ದಳು. ಆದರೆ ಚೆನ್ನಾಗಿ ಮಾತಾಡುತ್ತಿದ್ದಳು. ಅವಳಿಗೆ ಸಮಾಧಾನವಾಗಲೆಂದು ಮರ್ಯಾ ತನ್ನ ತಾನೇ ಹೊರಟು ಹೋದದ್ದನ್ನ, ಜೀವ ಹೋದಾಗ ಅವನು ಊದಿ ಜಿವ ತೆಗೆದದ್ದನ್ನ, ಅತ್ತದ್ದನ್ನ, ಕೊನೆಗೆ ಮದ್ದು ತಂದು ಅರೆದು ಕೊಟ್ಟದ್ದನ್ನೂ ಹೇಳಿದೆ. ಅವಳು ಯಾವ ಭಾವವನ್ನು ವ್ಯಕ್ತಪಡಿಸಲಿಲ್ಲವಾದರೂ ಸಧ್ಯ ಅವನ ಹೆಸರು ಹೇಳಿದೊಡನೆ ಗಾಬರಿಯಾಗಲಿಲ್ಲವಲ್ಲ, ಅಷ್ಟೇ ಸಾಕೆಂದುಕೊಂಡೆ. ದೀಪಾವಳಿ ಹಬ್ಬದ ಸುಮಾರಿಗೆ, ಮೊದಲಿನಷ್ಟೆಂದು ಹೇಳಲಾರೆ, ಅಂತೂ ಮೈತುಂಬಿಕೊಂಡು ಚುರುಕಾದಳು. ಆದರೆ ನಮಗಿನ್ನೊಂದು ಜರೂರು ಚಿಂತೆ ಶುರುವಾಯಿತು.

* * *

# ಅಧ್ಯಾಯ - ೨೧

ದೀಪಾವಳಿಗೆ ದೇಸಾಯಿ ಬಯಲಾಟವಿತ್ತಲ್ಲ, ಅದೇ ನಮಗೆ ಅಪಾಯದ ಸಮಯ. ಎರಡು ಬಾರಿ ಮರ್ಯಾ ಬಂದು ಸಿಂಗಾರೆವ್ವನ ಯೋಗಕ್ಷೇಮ ಕೇಳಿ ಈ ಬಯಲಾಟದಲ್ಲೇ ಶೆಟ್ಟಿ ದೇಸಾಯಿಯಿಂದ ಅರಮನೆ ಬರೆಸಿಕೊಳ್ಳುತ್ತಾನೆಂದು ಹೇಳಿದ್ದ. ಅವರ ಓಡಾಟ ನೋಡಿ ನಮಗೂ ಇದು ಖಾತ್ರಿಯಾಗಿತ್ತು. ಈಗ ದೇಸಾಯಿಯ ಕಿಸೆಯಲ್ಲಿ ಯಾವಾಗಲೂ ನೋಟಿನ ಕಂತೆಗಳಿರುತ್ತಿದ್ದವು. ಯಾವುದಕ್ಕೂ ಧಾರಳವಾಗಿ ಖರ್ಚು ಮಾಡುತ್ತಿದ್ದ. ಈಗೇನಾದರೂ ನಿರ್ಲಕ್ಷಿಸಿದರೆ ಸಿಂಗಾರೆವ್ವ ಬೀದಿಪಾಲಾಗುವುದು ಖಂಡಿತ. ಇದನ್ನೇ ಅವಳಿಗೆ ಸ್ಪಷ್ಟವಾಗಿ ಹೇಳಿ ಉಪಾಯ ಮಾಡುವಂತೆ ಪ್ರಚೋದನೆ ಮಾಡಿದೆ. ಅವಳು ಕೇಳಿ ಕೈಹೊತ್ತು ಕೂತಳು. ಕೂತರಾಯಿತೆ?" ಇಲ್ಲಾ ಗಂಡ ಬಯಲಾಟ ಮಾಡಧಂಗೆ ನಿಲ್ಲಿಸು, ಇಲ್ಲಾ ಅರಮನಿ ಮಾರೋದನ್ನಾದರೂ ನಿಲ್ಲಿಸು" ಎಂದು ಹೇಳಿದೆ. ಮಾತಾಡುವುದಾಗಿ ಹೇಳಿ ಆ ದಿನ ಮಧ್ಯಾಹ್ನ ದೇಸಾಯಿಯನ್ನು ಅಂತಸ್ತಿಗೆ ಕರೆಸಿದಳು.

ದೇಸಾಯಿ "ಈಗ ಆರಾಮಾಗೀರೆನು?" ಎನ್ನುತ್ತ ಹೋಗಿ ಗಡಂಚಿಯ ಮೇಲೆ ಕೂತ ಸಿಂಗಾರೆವ್ವ ವ್ಯಂಗ್ಯವಾಗಿ "ನಿಮ್ಮ ದಯದಿಂದ ಹಿಂಗಾದೀನಿ" ಎಂದಳು. ವ್ಯಂಗ್ಯ ಎಷ್ಟು ಸೂಕ್ಷ್ಮವಾದರೆ ದೇಸಾಯಿಗೆ ತಿಳಿಯೋದು ಕಷ್ಟ. ಆತನ ಬಗ್ಗೆ ಅವಳ ಮನಸ್ಸು ಕಹಿಯಾದದ್ದಕ್ಕೆ ಕಾರಣಗಳಿದ್ದವು. ಹೆಂಡತಿಯ ಜೀವ ಹೋಗಿ ಜೀವ ಬಂದರೂ ಗಂಡನ ಕರುಳು ಚುರ್ರೆನ್ನದಿದ್ದರೆ ಹ್ಯಾಗೆ? ಅವಳದ್ದನೇ ಪಟ್ಟಾಗಿ ಹಿಡಿಯಲಿಲ್ಲವೆನ್ನುವುದು ಒಂದೇ ಸಮಾಧಾನ. ಗಂಡ ಹೆಂಡತಿ ಬಹಳ ಹೊತ್ತಿನ ತನಕ ಮಾತಾಡಿದರು. ನಾನಾಗ ಅಲ್ಲಿರಲಿಲ್ಲ. ಏನೇನು ನಡೆಯಿತೆಂದು ಅವಳೇ ಆಮೇಲೆ ಹೇಲಿದಳು. ಅವರ ಸಂಭಾಷಣೆ ನಿನ್ನೆದುರು ಹೇಳಿದರೆ ಬರೀ ಸಿಂಗಾರೆವ್ವನ ಸ್ವಗತ ಕೇಳಿದ ಹಾಗಾಗುತ್ತದೆ ಅಷ್ಟೆ. ಯಾಕೆಂದರೆ ಅಷ್ಟು ಹೊತ್ತು ಮಾಡಾಡಿದವಳು ಸಿಂಗಾರೆವ್ವ ಒಬ್ಬಳೇ. ಕೇಳಿದ್ದಕ್ಕೆ ಹೇಳಿದ್ದಕ್ಕೆ ಹಾ....ಹಾ.... ಎಂಬ ಆಕಳಿಕೆ ಪ್ರತಿಕ್ರಿಯೆ ಬಿಟ್ಟು ಈ ಮಹಾನುಭಾವ ಏನು ಮಾತಾಡಲಿಲ್ಲ. ಸಿಂಗಾರೆವ್ವನ ಮಾತು ಆತ ಮತಿವಂತನಾಗಿದ್ದರೆ ಎದೆಯಲ್ಲಿ ನೆಡುವ ಹಾಗಿತ್ತು.

ಅವಳು ಹೇಳಿದ್ದು ದೀರ್ಘವಾಗಿ ಮೂರು ಮಾತುಗಳನ್ನ. ಒಂದು : ಅರಮನೆಯ ಮುನ್ನೂರು ವರ್ಷಗಳ ಗತವೈಭವದ ಬಗ್ಗೆ ಹೇಳಿ ಅದನ್ನು ಒಬ್ಬ ತಕ್ಕಡಿ ತೂಗುವ ಶೆಟ್ಟಿಯಲ್ಲಿ ಒತ್ತೆ ಇಡುವುದು ನಾಚಿಕೆ ಪಟ್ಟುಕೊಳ್ಳಬೇಕಾದ ಪ್ರಸಂಗವಲ್ಲವೆ? ಎರಡು: ಮಕ್ಕಳಿಂದ ಮುಂದುವರಿಯಬೇಕಾದ ವಂಶ ವಿಕಾರಕ್ಕೆ ಈಡಾಗಿ, ಅರಮನೆ ಅನಾಥವಾಗುವ ಪ್ರಸಂಗಕ್ಕೆ ವಿಷಾದವಾಗುವುದಿಲ್ಲವೆ? ಮೂರು: ಆಯಿತು. ನಿರ್ಭಿಡೆಯಿಂದ ಒಪ್ಪಿಕೊ, ಬಿಡು. ಗಂಡ - ಹೆಂಡತಿ ಅಂದಮೇಲೆ ಪರಸ್ಪರ ಪ್ರೀತಿ ವಿಶ್ವಾಸ ಇರದಿದ್ದರೂ ಚಿಂತೆಯಿಲ್ಲ; ಒಬ್ಬರ ಬಗ್ಗೆ ಇನ್ನೊಬ್ಬರ ಕರ್ತವ್ಯಗಳಿರುತ್ತವೆ - ಎಂಬುದನ್ನಾದರೂ ಒಪ್ಪಿಕೋಬೇಕು. ಕೊನೇಪಕ್ಷ ಸಾಯುವುದಕ್ಕಾದರೂ ಬಿಡಬಾರದಲ್ಲ? ಯಾರದೋ ತೊಡೆ ನೋಡಿ ಹಾದೀಹೆಣವಾಗೋದಕ್ಕಿಂತ ಮನೆಹೆಂಡತಿಯನ್ನೇ ನಿನ್ನ ವಿಲಾಸಿನಿಯನ್ನಾಗಿ ಮಾಡಿಕೊ. ನಿನಗಾಗಿ ನಿನ್ನ ನೆಮ್ಮದಿಗಾಗಿ ತೊಡೆ ತೋರಿಸಲು ನಾನು ಸಿದ್ಧ. ಅದರಲ್ಲಿ ತಪ್ಪೇನಿಲ್ಲ. ಅದರಿಂದ ನನಗೆ ನಾಚಿಕೆಯೂ ಆಗುವುದಿಲ್ಲ.

ಮೂರನೇ ಮಾತು ಹೇಳುವಾಗ ಬಹಳ ಅವಮಾನವಾಯಿತೆಂದು, ಅವಮಾನದಿಂದ ಕಣ್ಣೀರುಕ್ಕಿತೆಂದೂ ಹೇಳಿದಳು. ಈ ಮಾತು ಕೇಳಿ ದೇಸಾಯಿಯ ಮುಖ, ಬಹುಶಃ ಪಶ್ಚಾತ್ತಾಪದಿಂದ ಪೆಚ್ಚಾಯಿತೆಂದೂ, ಇನ್ನು ಮುಂದೆ ತಾಲೀಮು ಮುಗಿಸಿ ನೇರವಾಗಿ ಮನೆಗೇ ಬರುವುದಾಗಿ ಹೇಳಿ ಹೋದನಂತೆ.

ಆತ ದಾರಿಗೆ ಬಂದರೂ ಆಶ್ಚರ್ಯವಿಲ್ಲ ಎಂದುಕೊಂಡೆ. ನಮ್ಮ ಸಿಂಗಾರೆವ್ವ ಹಾಗಿದ್ದಳು: ಸುಳ್ಳಾಡಿದವಳಲ್ಲ. ಒಬ್ಬರಿಗೆ ಅಹಿತ ಬಯಸಿದವಳಲ್ಲ, ಒಳಗೊಂದಿಟ್ಟುಕೊಂಡು ಹೊರಗೊಂದು ಆಡಿ ಅಭಿನಯ ಮಾಡಿದವಳಲ್ಲ, ಅವಳೇನು ಮಾತಾಡಿದರೂ ಆ ಮಾತು ಹೃದಯದಿಂದ ಮೂಡಿ ಬಂದು, ಭಾವನೆಗಳಿಂದ ಆರ್ದ್ರವಾಗಿರುತ್ತಿತ್ತು. ಕೇಳಿದವರು ಎದುರುತ್ತರ ಕೊಡುವುದಾಗಲಿ, ಅವಳ ಮಾತನ್ನು ನಿರಾಕರಿಸುವುದಾಗಲಿ, ಸಾಧ್ಯವೇ ಇರಲಿಲ್ಲ. ಅವಳ ಮಾತಿನ ತೀವ್ರ ಪ್ರಾಮಾಣಿಕತೆ ಮತ್ತು ಮುಗ್ಧತೆಗಳಲ್ಲಿ ಕರಗಿ ಹೋಗುತ್ತಿದ್ದರು.

ಇಲ್ಲದಿದ್ದರೆ ನನ್ನಂಥವಳು ಯಾರನ್ನೋ ಕಟ್ಟಿಕೊಂಡು ಓಡಿ ಹೋಗುವ ಬದಲು ಸದಾ ಅವಳ ಕಾಲ ಬಳಿಗೆ ಯಾಕೆ ಬಿದ್ದಿರುತ್ತಿದ್ದೆ ಹೇಳು? ಅವನೊಬ್ಬ ಅಪ್ಪ, ಹುಟ್ಟು ಚಂಡಾಳ; ಸತ್ತವರ ಬಗ್ಗೆ ಕೆಟ್ಟ ಮಾತ್ಯಾಕೆ ಆಡಬೇಕು ಬಿಡು. ಮರ್ಯಾನಂಥ ಮರ್ಯಾ ಕೂಡ ದಾರಿಗೆ ಬಂದಿದ್ದನೆಂದರೆ! ಕಾಡಿಸಿ ನೋಡಿದ, ಪೀಡಿಸಿ ನೋಡಿದ. ಕೊನೆಗವಳು ತನ್ನಿಂದ ಸಾಯುತ್ತಾಳೆಂದಾಗ ನನಗಿಂತ ಅವನೇ ಹೆಚ್ಚು ಹೆದರಿದ. ಹಾಳಾದವನಿಗೆ ಗೌಡನ ಬಗ್ಗೆ ಮಾತ್ರ ಸೇಡಿತ್ತೇನೋ. ಆಳದಲ್ಲಿ ಸಿಂಗಾರೆವ್ವನನ್ನು ಪ್ರೀತಿಸುತ್ತಿದ್ದ. ಚಿಕ್ಕಂದಿನಲ್ಲಿ ನನಗದು ತಿಳಿಯುತ್ತಿರಲಿಲ್ಲ. ಅವಾಗಾದರೆ ಒಬ್ಬ ಹೊಲೆಯ ಮತ್ತು ಗೌಡಸಾನಿಗೆ ಎಷ್ಟು ದೂರದ ಸಂಬಂಧ - ಆ ಸಂಬಂಧವನ್ನು ಪ್ರೀತಿಯಂಥ ಶಬ್ದದಿಂದ ಹೇಳುವುದು ಅಸಾಧ್ಯವೆಂದೇ ನನಗನ್ನಿಸಿತ್ತು. ತಿಳಿದು ನೋಡಿದರೆ ಹಿಂದಿನದೆಲ್ಲ ನನಗೀಗೀಗ ಅರ್ಥವಾಗುತ್ತಿದ್ದೆ. ಸಿಂಗಾರೆವ್ವ ಭೇಟಿಯಾಗದೆ, ದೂರದಲ್ಲೇ ನಿಂತಾಗ ಈತ ಒದ್ದಾಡಿದ್ದು, ಅವಳು ವಿಧವೆಯಾಗಿದ್ದಾಗ ಇವಳು ಅಳುಮೋರೆ ಮಾಡಿದ್ದು, ಇಲ್ಲಿ ಆಕೆ ನಡೆದಾಡುತ್ತಿದ್ದರೆ ಕಣ್ಣಲ್ಲೇ ಜೊಲ್ಲು ಸುರಿಸುತ್ತಿದ್ದದ್ದು - ಪ್ರೀತಿ ಅಂದರೇನಂದಿ? ತ್ಯಾಗ ಮಾಡೋದು, ನೀ ಯಾರನ್ನ ಪ್ರೀತಿಸ್ತಿಯೊ ಅವರಿಗಾಗಿ ನಿನ್ನ ಹೇರು - ಪೇರುಗಳನ್ನು ಬಿಡುತ್ತ, ಸವೆಯುತ್ತ, ಕೊನೆಗೆ ಅವರಿಗಿಷ್ಟವಾದದ್ದೇ ಆಗೋದು, ಅಂದರೆ ಅವರೇ ಆಗೋದು. ಅದೇನಾದರೂ ಇದ್ದಿರಲಿ, ಅಂದ ಹಾಗೆ ನೀನೂ ಪ್ರೀತಿ ಮಾಡಿದ್ದೀಯಲ್ಲ? ನೀನು ಬೆಂಗಳೂರಿನವನು, ನಿನಗೆಲ್ಲಿಯ ಪ್ರೀತಿ? ಅದಿರಲಿ, ಏನೋ ಹೇಳ ಹೋಗಿ ಏನೇನೋ ಹೇಳಿದೆ. ನನಗೂ ವಯಸ್ಸಾಯಿತು, ನೋಡು. ಈವರೆಗಿನ ಮರ್ಯಾನ ನಡಾವಳಿ ನೀನೇ ಕೇಳಿದ್ದಿಯಲ್ಲ, ಪ್ರೀತಿ ಹೀಗೂ ಇರುತ್ತದೆ ಎನ್ನುವುದನ್ನು ನೀನು ಒಪ್ಪಲೇಬೇಕು.

ಆಯಿತಪ್ಪ, ಮೊದಮೊದಲು ದೇಸಾಯಿ ದಾರಿಗೆ ಬಂದ. ಈ ಸಲ ದೀಪಾವಳಿಗಿನ್ನೂ ನಾಕು ದಿನ ಇರುವಾಗಲೇ ಚಿಮಣಾ ಬಂದಳು. ದೇಸಾಯಿ ದುರ್ಬಲ ಮನಸ್ಸಿನವನಾದ್ದರಿಂದ ಎಷ್ಟೇ ಮಾತು ಕೊಟ್ಟಿದ್ದರೂ ನಮಗೆ ಭರವಸೆಯಿರಲಿಲ್ಲ. ಚಿಮಣಾ ಬಂದ ಮೊದಲನೆ ರಾತ್ರಿ ತಡವಾಗಿಯಾದರೂ ನಡೆದುಕೊಂಡೇ ಮನೆಗೆ ಬಂದ, ಕುಡಿದು ತೂರಾಡುತ್ತಿದ್ದನಷ್ಟೆ. ಅದು ಹೆಚ್ಚಲ್ಲ. ಆದರೆ ಚಿಮಣಾ ಆಟ ಮಾಡಿ, ತಿರುಗಿ ಹೋಗುವ ತನಕ ನಾವು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯಬೇಕಿತ್ತು. ಮೊದಲ ದಿನದ ಪರಿಣಾಮದಿಂದಲೇ ಸಿಂಗಾರೆವ್ವನಿಗೆ ಎಷ್ಟು ಆನಂದವಾಯಿತೆಂದರೆ - ದೇಸಾಯಿ ಎದ್ದಾಗಿನಿಂದ ಹಿಡಿದು ಆತ ತಾಲೀಮಿಗೆ ಹೋಗುವ ತನಕ ಅವನ ಇಂಚಿಂಚು ಕಾಳಜಿಯನ್ನೂ ಮಾಡತೊಡಗಿದಳು. ಸ್ನಾನ ಮಾಡುವಾಗ ಬೆನ್ನುಜ್ಜುವುದೇನು, ಒಡ್ಯಾಡಿ ಊಟಕ್ಕೆ ಹಾಕುವುದೇನು, ತಿಕ್ಕಿ ತೀಡಿ ಬಟ್ಟೆ ನೋಡಿಕೊಳ್ಳುವುದೇನು, ಶಿವನೇ, ಶಿವನೇ ನಮ್ಮ ಸಿಂಗಾರೆವ್ವ ಯಾವಾಗಲೋ ಹಾಗೆ. ಏನನ್ನು ಕೊಟ್ಟರು ದಂಡಿಯಾಗೆ, ಪುಷ್ಕಳವಾಗೇ ಕೊಡೋಳು. ಈಸಿಕೊಂಬವನಿಗೆ ಅತಿಯಾಗಿ ವಾಂತಿಯಾದರೂ ಕೇಳುವವಳಲ್ಲ. ಅವರೇನಾದರೂ ಸಾಕೆಂದರೆ ನಿರಾಶೆಯಿಂದ ಕೋಪಗೊಳ್ಳುವವಳು. ಮಾರನೇ ದಿನವೂ ದೇಸಾಯಿ ಹಾಗೇ ಬಂದ. ಗೆದ್ದೆನೆಂದೇ ಅಂದುಕೊಂಡು ಆತನಕ ಎಚ್ಚರವಾಗಿದ್ದು, ಅವ ಬಂದ ಮೇಲೆ ಕೈ ಹಿಡಿದು ಅಂತಸ್ತಿಗೇ ಕರೆದೊಯ್ದಳು. ನಾನು ಕೆಳಗೆ ಮಲಗಿದೆ.

ಮಾರನೆ ದಿನ ನಾಳೆ ದೀಪಾವಳಿ ಅಂದರೆ ಇಂದು ಬಲಿಪಾಡ್ಯಮಿ ಇತ್ತಲ್ಲ, ದೇಸಾಯಿಯ ರಂಗ ತಾಲೀಮಿತ್ತು. ಕ್ಷತ್ರಿಯರಿಗೆ ಅಂದೂ ಹಬ್ಬ. ತಾನೇ ಓಡ್ಯಾಡಿ ಮಡಿಯಾಗಿ ಅರಮನೆಯ ಹಳೆಯ ದೈವಗಳನ್ನೆಲ್ಲ ಪೂಜೆ ಮಾಡಿದಳು. ಪಟಾಂಗಳದ ಕಟ್ಟೆಯ ಹತ್ತಿರ, ಹಾವು ಬಂದರೆ ಬರಲೆಂದು ಇಳಿಹೊತ್ತಿನಲ್ಲಿ ಬಟ್ಟಲತುಂಬ ಹಾಲನ್ನೂ ಇಟ್ಟು ಬಂದಳು. ಅಲ್ಲದೆ ಆ ದಿನದ ಅವಳ ಹಂಚಿಕೆ ಬೇರೆ ಇತ್ತು. ತಲೆಬಾಚಿ ಪುಗ್ಗಾ ತೆಗೆದು, ಎಡಕ್ಕೆ ಬೈತಲೆ ತೆಗೆದು ಹೂ ಮುಡಿದಳು. ಭರ್ಜರಿ ಕೆಂಪುಶಾಲೆಯನ್ನು ಕಚ್ಚೆ ಹಾಕಿ ಉಟ್ಟಳು. ಕಾಲಿಗೆ ಕಾಲುಂದುಗೆ, ನಡುವಿಗೆ ನಡುಪಟ್ಟಿ, ಕೈಗೆ ಚಿನ್ನದ ಬಳೆ ಇಟ್ಟುಕೊಂಡಳು. ಅವಳ ಹುನ್ನಾರ ಗೊತ್ತಿತ್ತಲ್ಲ, ನಾನೇ ಎರಡು ಬಾರಿ ಅವಳ ಕೆನ್ನೆ ಚಿವುಟಿ, ಚಿವುಟಿದ ಬೆರಳನ್ನು ತುಟಿಗಿಟ್ಟುಕೊಂಡೆ. ಅವಳ ಇಂಥ ಸೊಬಗನ್ನು ನೋಡಿ ಎಷ್ಟೋ ದಿನಗಳಾಗಿದ್ದವು. ಗಿಣಿಯ ಹಾಗೆ ಮುದ್ದು ಮುದ್ದಾಗಿ ಅದಿದನ್ನಾಡುತ್ತ ಅರಮನೆಯ ತುಂಬ ಓಡಾಡಿದಳು.

ಸಂಜೆ ದೇಸಾಯಿ ತಾಲೀಮಿಗೆ ಹೋಗಲು ಸಿದ್ದನಾಗಿದ್ದಾಗ ಅಂತಸ್ತಿಗೆ ಬರ ಹೇಳಿದಳು. ತುಂಟತನದಿಂದ ನಾನು ಮೆಟ್ಟಿಲ ಮೇಲೆ ನಿಂತು ಅವಳ ಚಿನ್ನಾಟ ನೋಡುತ್ತಿದ್ದೆ. ಕನ್ನಡಿ ನೋಡಿಕೊಳ್ಳುತ್ತಿದ್ದವಳು, ಆತ ಬಂದೊಡನೆ ಅವನೆದುರಿಗೆ ಓಡಿಬಂದಳು. ಅವನ ಕಣ್ಣಲ್ಲಿ ಕಣ್ಣಿಟ್ಟು ನೋಡಿ ಮಂದಹಾಸ ಬೀರುತ್ತ,

“ಯಾಕ, ನಾ ಚಂದ ಕಾಣಸಾಣಿಲ್ಲೇನು?” ಅಂದಳು. “ಹ್ಞೂಂ” ಅಂದ.

“ಮತ್ತ ಹೇಳಲಿಲ್ಲ?”

“ಹೇಳಿದ್ನೆಲ್ಲ, ಭಾಳ ಚಂದ ಕಾಣ್ತೀರಿ ಅಂತ”

“ಈ ಸೀರಿ ನನಗ ಹೆಂಗ ಕಾಣಸ್ತೈತಿ?”

“ಓಹೋ, ನಿವುಳ ಕಾಣತ್ತೈತಿ.”

ಪ್ರೀತಿಯಿಂದ ಅವನ ಹೆಗಲಮೇಲೆ ಕೈ ಹಾಕಿ ಮುಖ ಇನ್ನೂ ಹತ್ತಿರ, ಅವನ ಮುಖಕ್ಕೆ ತಾಗುವಷ್ಟು ಹತ್ತಿರ ಒಯ್ದು,

“ರಾತ್ರಿ ಲಗು ಬರ್ರಿ - ಸೆರೆ ನಾನs ಕುಡಸ್ತೀನಿ. ಹೊರಗೆ ಕುಡೀಬ್ಯಾಡ್ರಿ, ಬರ್ತೀರಿ ಹೌಂದಲ್ಲ?” ಎಂದು ಓರೆನೋಟ ಬೀರಿ ತನ್ನ ಸುಂದರವಾದ ಕತ್ತನ್ನು ಚೆಂದಾಗಿ ನಲುಗುತ್ತ ಕೇಳಿದಳು. ದೇಸಾಯಿಯ ಕಣ್ಣು ಭಗ್ಗನೆ ಹೊತ್ತಿ, ಮುಖ ಕೆಂಜಗಾಯಿತು. “ಆಗಲಿ ಬರ್ತೀನಿ” ಎಂದು ಹೇಳಿ ತಿರುಗ ಅವಳನ್ನೇ ನೋಡುತ್ತ ಬಂದ. ಕಾಣಿಸದಿರಲೆಂದು ನಾನು ಕೆಳಗಿಳಿದು ಹೋದೆ.

ಆದರೆ ಯಾವುದನ್ನೂ ಪಡೆದು ಬಂದಿರಬೇಕಲ್ಲವೆ? ಆತ ಹುಟ್ಟಾ ದರಿದ್ರ. ಈಗ ಬೇಡಿದರೆ ಆ ಭಾಗ್ಯ ಎಲ್ಲಿಂದ ಬರಬೇಕು? ಮಧ್ಯರಾತ್ರಿಯಾಗಿದ್ದೀತು, ಮರೆಪ್ಪ ದೇಸಾಯಿಯನ್ನು ಹೊತ್ತುಕೊಂಡು ಬಂದ. ಈಗೆರಡು ದಿನಗಳಿಂದ ಅಂತಸ್ತಿನಲ್ಲೇ ಮಲಗುತ್ತಿದ್ದನಲ್ಲ. “ಮ್ಯಾಲs ನಡಿ” ಅಂದೆ. ಹೋದೆವು. ಸಿಂಗಾರೆವ್ವ ಇನ್ನೂ ಎಚ್ಚರಿದ್ದಳು. ಜಿನೆಯ ಸಪ್ಪಳ ಕೇಳಿ ಎದ್ದು ಬಂದಳು. ಮರೆಪ್ಪ ಹೋಗಿ ಮಂಚದ ಮೇಲೆ ದೇಸಾಯಿಯನ್ನು ಮಲಗಿಸಿದ. ನಾನು ಓಡಿ ಹೋಗಿ ಅಡಿಗೆ ಮನೆಯಿಂದ ಉಳ್ಳಾಗಡ್ಡಿ ತಂದೆ. ನೋಡುತ್ತೇನೆ: ಸಿಂಗಾರೆವ್ವ ಒಲೆಬೆಂಕಿಯ ಹಾಗೆ ಧಗಧಗನೆ ಉರಿಯುತ್ತಿದ್ದಳು. ಎರಡು ಕೈ ಬಿಗಿದು ಹಲ್ಲು ಕಡಿಯುತ್ತ, ಸಾಧ್ಯವಾದರೆ ಕಣ್ಣಿನಿಂದಲೇ ಇರಿದು ಕೊಲ್ಲಬೇಕೆಂಬಂತೆ ಬೇಹೋಶ್ ಆಗಿ ಬಿದ್ದಿದ್ದ ದೇಸಾಯಿಯನ್ನು ನೋಡುತ್ತಿದ್ದಳು. ದೇಸಾಯಿಗೆ ಕೈಹಚ್ಚಲೇ ಇಲ್ಲ. ಮೂಗಿನಲ್ಲಿ ಉಳ್ಳಾಗಡ್ಡಿ ರಸ ಹಿಂಡಬೇಕೆಂದು ನಾನು ಹೋದೆ. ರಭಸದಿಂದ ಬಂದು ನನ್ನ ಕೈಯಿಂದ ಉಳ್ಳಾಗಡ್ಡಿ ಕಸಿದು ಕಿಡಕಿಯಿಂದ ಹೊರಕ್ಕೆಸೆದಳು. “ನನ್ನ ಹಾಟ್ಯಾ ಸಾಯಲಿ, ಸುಮ್ಮನಿರು” ಎಂದಳು. ಮರೆಪ್ಪ ಚಕಿತನಾಗಿ ಮಳಮಳ ನನ್ನ ಮುಖವನ್ನೇ ನೋಡಿದ. ಕೊನೆಗೆ ಸಿಂಗಾರೆವ್ವನ ಕಡೆ ನೋಡಿ ಏನು ಮಾಡುವುದಕ್ಕೂ ತೋಚದ ದೇಸಾಯಿಯ ಅಂಗಾಲು ತಿಕ್ಕತೊಡಗಿದ. ಸಿಂಗಾರೆವ್ವ ಅದಕ್ಕೂ ಸಿಡಿದು “ನೀ ಅವನ ಕಾಲ ತಿಕ್ಕೋ ಜರೂರಿಲ್ಲ” ಎಂದಳು. ಒಂದು ಕ್ಷಣ ನಿಲ್ಲಿಸಿ ಅವಳನ್ನೇ ನೋಡುತ್ತ ಮತ್ತೆ ತಿಕ್ಕ ತೊಡಗಿದ. “ಹೇಳಲಿಲ್ಲ ಬ್ಯಾಡಂತ?” ಎಂದು ಗುಡುಗಿದಳು. ಅವ ಬಿಟ್ಟು ಎದ್ದ. ನನಗೇನೂ ತೋಚಲೊಲ್ಲದು. ಮರ್ಯಾ ಬಂದದ್ದಕ್ಕೋ, ದೇಸಾಯಿ ಮತ್ತೆ ಬೇಹೋಶ್ ಆದದ್ದಕ್ಕೋ ಅಥವಾ ಆಸೆಯಿಂದ ಕಾದಿದ್ದಳಲ್ಲ, ನಿರಾಶೆಯಾದದ್ದಕ್ಕೋ - ಯಾಕೀ ಕೋಪವೆಂದೇ ನನಗೆ ತಿಳಿಯಲಿಲ್ಲ.

“ಮತ್ತ ಯಾಕೋ ಬಂದಿ?” ಎಂದಳು ಉರಿಯುತ್ತ

ಮರ್ಯಾ ಪೆಚ್ಚಾದ. ಮುಖ ಕೆಳಗೆ ಹಾಕಿ,

“ಗುಡಿಸಲದ ಹಂತ್ಯಾಕ ಬಿದ್ದಿದ್ದರು. ಶೆಟ್ಟಿ, ಚಿಮಣಾ ನಕ್ಯೋತ ಒಳಗಿದ್ದವರು ಬರಲೇ ಇಲ್ಲ. ದೇಸಾಯರ್ನ ಯಾರೂ ತಗೊಂಬರಾಕ ತಯ್ಯಾರಿರಲಿಲ್ಲ. ಅದಕ್ಕs ನಾ ಹೊತ್ತುಕೊಂಬಂದೆ, ಹೋಗತೀನಿ”

ಎಂದು ಆಕೆಯ ಕಡೆ ಕೂಡ ನೋಡದೆ ಹೊರಟ.

“ಏ ಹೊಲೆಯಾ, ತಡಿಯೋ”

ಎಂದಳು. ಅವಳ ದನಿ ವಿಕಾರವಾಗಿತ್ತು. ಮುಖ ದೇಸಾಯಿಯ ಮುಖದ ಹಾಗೆ ಕೆಂಜಗಾಗಿ, ಕಣ್ಣೊಳಗೆ ಯಾವುದೋ ಸ್ಪಷ್ಟ ನಿರ್ಧಾರಕ್ಕೆ ಬಂದ ನಿಲುವಿತ್ತು. ಅಷ್ಟು ನಿಷ್ಠುರಭಾವ ಅವಳ ಮುಖದಲ್ಲಿ ಮೂಡಿದ್ದನ್ನು ನಾನು ಬಹಳ ಸಲ ಕಂಡಿಲ್ಲ. ಮರೆಪ್ಪ ಹಿಂದಿರುಗಿ ನಿಂತ. ದೊರೆಸಾನಿ ಮಂಚದ ಬಳಿ ಹೋದಳು. ಬಿದ್ದಿದ್ದ ದೇಸಾಯಿಯನ್ನು ತಿರಸ್ಕಾರದಿಂದ ಸತ್ತ ನಾಯಿಯನ್ನು ಕಾಲಿನಿಂದ ದೂಕೋಹಾಗೆ, ಕೆಳಕ್ಕೆ ದೂಕಿದಳು. ಅವನು ಒಣಗಿದ ಬಟ್ಟೆಯ ಹಾಗೆ ಕೆಳಕ್ಕೆ ಬಿದ್ದ. ಅವನ ಕಿಸೆಯಲ್ಲಿದ್ದ ನೋಟಿನ ಸಿವುಡು ಅರ್ಧ ಹೊರಬಂದು ಬೀಳುವುದರಲ್ಲಿತ್ತು. ಆಘಾತ ಹೊಂದು ಕಣ್ಣಗಲ ಮಾಡಿದ್ದ ಮರ್ಯಾ ಯಾವ ಕ್ಷಣ ಏನು ಮಾಡುತ್ತಾಳೋ ಎಂಬಂತೆ ಗಾಬರಿಯಾಗಿ ನೋಡುತ್ತಿದ್ದ. ದೇಸಾಯಿಯನ್ನು ಕೊಂದೇ ಬಿಡುತ್ತಾಳೆಂದು ನಾನು ಅಂದುಕೊಂಡೆ.

ದೇಸಾಯಿ ಮಾಡಿದ್ದೂ ತಪ್ಪೇ. ಇಷ್ಟು ಅನುಕೂಲಕರ ಹೆಂಡತಿ ಯಾವಾಕಿ ಸಿಕ್ಕಾಳು? ಹೆಂಡತಿಯ ಆಸೆಗೆ ತುಸುವಾದರೂ ಗೌರವ ಕೊಡಬ್ಯಾಡವೆ? ಪರೀಕ್ಷೆ ಮಾಡುವುದೆಂದರೆ, ಅದಕ್ಕೊಂದು ಮಿತಿ ಬ್ಯಾಡವೆ? ಸಂತರನ್ನು ಅವರು ರೇಗುವ ತನಕ ಪರೀಕ್ಷೆ ಮಾಡಬಾರದಪ್ಪ. ರೇಗಿಸಿದರೆ ಶಾಪ ಹಾಕುತ್ತಾರೆ. ಸಿಂಗಾರೆವ್ವನನ್ನು ರೇಗಿಸಿದ್ದು ಆಗಿತ್ತು. ಈಗ ಶಾಪ ತಗೋಬೇಕಷ್ಟೆ.

ದೇಸಾಯಿ ಕೆಳಕ್ಕೆ ಬಿದ್ದನಲ್ಲ.

“ಶೀನಿಂಗೀ, ನೀ ಕೆಳಗ ನಡಿ. ಹೊಲೆಯಾ ಬಾರೋ”

ಎನ್ನುತ್ತ ಬಂದು ಅವನ ಕೈಹಿಡಿದು ದೀಪ ಆರಿಸಿದಳು.

* * *

## ಅಧ್ಯಾಯ - ೧೧

ಈ ಮಧ್ಯೆ ಊರುಗಾರಿಕೆಯ ಸಣ್ಣ ಕೆಲಸವೊಂದನ್ನು ನಾನು ಒಪ್ಪಿಕೊಳ್ಳಲೇಬೇಕಾದ್ದರಿಂದ ಮಾರನೇ ದಿನ ಶೀನಿಂಗವ್ವನ ಕತೆ ಕೇಳಲಾಗಲಿಲ್ಲ. ಊರ ಹಿರಿಯರೊಂದಿಗೆ ಬೆಳಗಾವಿಗೆ ಹೋದೆ. ರವಿಚಂದ್ರ, ಈ ಅರಮನೆಯ ಯಜಮಾನ ಬೆಳಗಾವಿಗೆ ಬಂದಿದ್ದ. ಆದರೆ ಶಿವಾಪುರಕ್ಕೆ ಬರಲು ನಿರಾಕರಿಸಿದ್ದ. ಯಾಕೆಂದು ನನಗೆ ತಿಳಿಯದು. ಈ ಅರಮನೆ ಕೊಳ್ಳುವುದಕ್ಕೆ ಇಬ್ಬರು ಮೂವರು ಗಿರಾಕಿಗಳು ಲಕ್ಷಾಂತರ ಹಣದ ಚೀಲ ಹಿಡಿದುಕೊಂಡು ರವಿಚಂದ್ರನ ಹಿಂದೆ - ಮುಂದೆ ಓಡಾಡುತ್ತಿದ್ದರು. ನಮ್ಮ ಊರಿನವರಿಗೆ ಒಂದಾಸೆ. ಹೈಸ್ಕೂಲು ಮಾಡಿದ್ದರು. ಕಟ್ಟಡವಿಲ್ಲದೆ ಪ್ರಾಥಮಿಕ ಶಾಲೆಯಲ್ಲೇ ಅವಕಾಶ ಮಾಡಿಕೊಂಡು ಕಷ್ಟಪಟ್ಟು ಹ್ಯಾಗೋ ನಡೆಸುತ್ತಿದ್ದರು. ಕಟ್ಟಡ ಕಟ್ಟುವುದಕ್ಕೆ ಹಣ ಇಲ್ಲ, ಸರ್ಕಾರದ ಮಂಜೂರಿ ಎಂದಾಗುವುದೊ. ಆದ್ದರಿಂದ ಹೈಸ್ಕೂಲಿಗಾಗಿ ಹಾಲಿ ಖಾಲಿಯಿರುವ ಅರಮನೆಯನ್ನೇ ಯಾಕೆ ಕೇಳಬಾರದು ಎಂದು ಅವರ ಆಸೆ. ಈ ಆಸೆಯನ್ನು ನಾನು ಹಂಚಿಕೊಂಡದ್ದರ ಕಾರಣವೆಂದರೆ - ನಾನು ಕಲಿಯುವಾಗ ಹೈಸ್ಕೂಲು ಶಿಕ್ಷಣದ ಅವಕಾಶ ನನ್ನ ಹಳ್ಳಿಯಲ್ಲಿರಲಿಲ್ಲ. ಮುಂದಿನ ಮಕ್ಕಳೂ ನನ್ನಂತೆ ಪರದಾಡುವಂತಾಗದಿರಲಿ ಎಂಬುದು ನನ್ನ ಆಸೆ. ಹೈಸ್ಕೂಲ್ ಕಟ್ಟಡಕ್ಕಾಗಿ ಅರಮನೆ ಕೇಳುವುದಕ್ಕಾಗಿ ಹೊರಟಿದ್ದವರು ನನ್ನನ್ನೂ ಜೊತೆಗೆ ಕರೆದೊಯ್ದರು. ನನ್ನ ಮಾತನ್ನವನು ಒಪ್ಪಿದರೂ ಒಪ್ಪಬಹುದೆಂಬುದು ಅವರ ಒಳಆಸೆ. ನಾನು ಬೆಳಗಾವಿಗೆ ಬರುವುದರಿಂದ ಊರಿಗೆ ಸಹಾಯವಾಗುವಂತಿದ್ದರೆ ಸರಿಯೆ. ಅಷ್ಟಕ್ಕೂ ರವಿಚಂದ್ರ ಲಕ್ಷಾಂತರದ ಆಮಿಷ ಮೀತಿ ಇಂಥ ಅಪರೂಪದ ಕಟ್ಟಡವನ್ನು ಊರವರಿಗೆ ಬಿಟ್ಟುಕೊಟ್ಟಾನೆಂಬುದರಲ್ಲಿ ನನಗೆ ನಂಬಿಕೆಯಿರಲಿಲ್ಲ. ಕೊನೇಪಕ್ಷ ಈ ಅರಮನೆಯ ಕೊನೆಯ ದೊರೆಯನ್ನಾದರೂ ನೋಡಿದಂತಾದೀತೆಂದು ಹೋದೆ.

ಆತ ಭರ್ಜರಿ ಹೋಟಲೊಂದರಲ್ಲಿ ಇಳಿದುಕೊಂಡಿದ್ದ. ನಾವು ಹೋದಾಗ ಒಬ್ಬ ಮಾರವಾಡಿಯ ಜೊತೆ ಮಾತಾಡುತ್ತಿದ್ದ. ಊರಿನ ಒಬ್ಬಿಬ್ಬರ ವಿನಾ ಉಳಿದವರ ಪರಿಚಯವೇ ಅವನಿಗಿರಲಿಲ್ಲ. ನಮಗೆಲ್ಲ ಹಿರಿಯರಾದವರು, ಅವನಿಗೂ ಗೊತ್ತಿದ್ದವರು ಒಬ್ಬೊಬ್ಬರನ್ನೇ ಪರಿಚಯಿಸಿದರು. ಕೇಳುತ್ತ ದೇಸಗತಿಯ ಗತ್ತಿನಲ್ಲೇ ಕತ್ತುಹಾಕಿ ವಂದಿಸುತ್ತಿದ್ದ. ನನ್ನ ಹೆಸರು ಕೇಳಿದೊಡನೆ, ಸುದೈವದಿಂದ ನನ್ನ ಹೆಸರನ್ನು ಹಿಂದೆ ಕೇಳಿದ್ದನಂತೆ, ಎದ್ದು ಬಂದು ಕೂ ಕುಲುಕಿದ. ಆಮೇಲೆ ಮೇಲಿಂದ ಮೇಲೆ ಮಾತಿನ ಮಧ್ಯೆ ಒಮ್ಮೊಮ್ಮೆ ಮಾರ್ವಾಡಿಯ ಮಾತನ್ನೂ ನಿರ್ಲಕ್ಷಿಸಿ ನನ್ನ ಕಡೆ ನೋಡುತ್ತಿದ್ದ. ಮಾರ್ವಾಡಿ ಎದ್ದು ಹೋಗುವ ತನಕ ನಾವ್ಯಾರೂ ಮಾತಾಡಲೇ ಇಲ್ಲ.

ದಟ್ಟ ಹುಬ್ಬಿನ ಕೆಳಗೆ ಹೊಳಪುಳ್ಳ ನೀಲಿ ಕಣ್ಣಿನ ಹುಡುಗ ನೋಡುವುದಕ್ಕೆ ಬಹಳ ಚೆಂದಾಗಿದ್ದ. ತುಂಬುಗೆನ್ನೆ, ಸಮಕರಿದು ಬಣ್ಣದ, ದೇಸಗತಿಯ ಕೊನೆಯ ಕುಡಿಯಾದ, ಶೀನಿಂಗವ್ವನಿಗೆ ತುಂಬ ಪ್ರಿಯನಾದ ಆ ಯುವಕನನ್ನು ನೋಡಿ ನನಗೆ ಸಂಭ್ರಮವೇ ಆಯಿತೆನ್ನಬೇಕು. ಮಾರ್ವಾಡಿ ಹೋದ ಮೇಲೆ ನಾವಿಬ್ಬರೂ ಬಹಳ ಹೊತ್ತು ಅದು ಇದು ಮಾತಾಡಿದೆವು. ನನ್ನ ಪರಿಚಯದಿಂದ ಅವನು ಬಹಳ ಸಂತೋಷಪಟ್ಟಂತೆನಿಸಿತು. ಮಾತಿಗೊಮ್ಮೆ ಸರ್ ಎನ್ನುತ್ತಿದ್ದ. ವಯಸ್ಸಿಗೆ ಸಹಜವಾದ ಅಸಡ್ಡೆಯನ್ನು ಕಾಳಜಿಯಿಂದ ನಿಯಂತ್ರಿಸಿದ್ದ. ನಾನು ಶೀನಿಂಗವ್ವನಿಂದ ಅರಮನೆಯ ಕತೆಯನ್ನು ಕೇಳುತ್ತಿರುವದನ್ನೂ ಹೇಳಿದೆ. ಕೊನೆಗೆ ಅರಮನೆಯನ್ನು ಹೈಸ್ಕೂಲಾಗಿ ಪರಿವರ್ತಿಸಲು ಊರವರಿಗೆ ದಾನ ಮಾಡಬೇಕೆಂದು, ಇದರಿಂದ ಸಿಂಗಾರೆವ್ವನ ಆತ್ಮಕ್ಕೆ ನಿಜವಾದ ಶಾಂತಿ ಸಿಕ್ಕುವುದೆಂದು ಹೇಳಿದೆ. ಹೈಸ್ಕೂಲಿಗೆ ಅವರ ಹೆಸರನ್ನೇ ಇಡುವುದಾಗಿ ನಮ್ಮ ಊರವರು ಸೇರಿಸಿದರು. ಯಾವುದಕ್ಕೂ ವಿಚಾರಮಾಡಿ ತಿಳಿಸುವುದಾಗಿ ಹೇಳಿದ. ಸರಿ ಎಂದು ಬಂದೆವು. ಇದನ್ನೆಲ್ಲ ಶೀನಿಂಗವ್ವನಿಗೆ ಹೇಳಿದೆ. ಮುದುಕಿ ಆನಂದಭರಿತಳಾದಳು. ಮತ್ತೆ ಮತ್ತೆ ರವಿಚಂದ್ರನ ಬಗ್ಗೆ ಕೇಳಿದಳು. ರವಿಚಂದ್ರನ ಬಗೆಗಿನ ನನ್ನ ಜ್ಞಾನಕ್ಕೆ ಒಂದು ಮಿತಿಯಿದೆಯೆಂದು ಯಾವಾಗ ಅನ್ನಿಸಿತೊ, ಆವಾಗ ಸುಮ್ಮನಾಗಿ ಕಥೆಗೆ ಇಳಿದಳು.

"ಆಕಾ, ಆ ಪತ್ರೀಗಿಡ ಐತೆಲ್ಲ ಆದಾಗಲೇ ಹುಟ್ಟಿದ್ದು"

- ಎಂದು ಹೇಳಿ, ನಾವು ಕೂತ ಕಟ್ಟೆಯೊಡೆದು ಬೆಳೆದ ಪತ್ರೀಗಿಡ ತೋರಿಸಿ ಶೀನಿಂಗವ್ವ ಕಥೆ ಸುರುಮಾಡಿದಳು.

"ಸಿಂಗಾರೆವ್ವ ಸುಖಪಟ್ಟುದೂ ಈ ಮುನ್ನಾಕು ತಿಂಗಳ ಅವಧಿಯಲ್ಲೆ. ದೇಸಾಯಿಯ ಮೇಲಿನ ಸೇಡಿನಿಂದಲೋ, ಈ ತನಕ ಸಿಕ್ಕದ ಅಪರೂಪದ ಸುಖ ಅಳತೆಮೀರಿ ಸಿಕ್ಕಿದ್ದಕ್ಕೋ - ಸಿಂಗಾರೆವ್ವ ಆನಂದದಿಂದ ಉನ್ಮತ್ತಳಾಗಿದ್ದಳು. ಹುಚ್ಚು ತಲೆಗೇರಿದವರು ತಮ್ಮ ಬಟ್ಟೆಗಳನ್ನೆಲ್ಲಾ ಕಳಚುವಂತೆ ಸಂಕೋಚಗಳನ್ನೆಲ್ಲಾ ಸುಲಿದು ಸುಖದ ನಿಧಿಯನ್ನು ಧಾರಾಳವಾಗಿ ಸೂರಾಡಿ ಬಿಟ್ಟಳು. ಈಗವಳು ಮೊದಲಿನ, ಸದಾ ಒಂದಲ್ಲೊಂದು ಆತಂಕದಲ್ಲಿದ್ದ ಅಳುಮೋರೆಯ ದೊರೆಸಾನಿಯಾಗಿರಲಿಲ್ಲ. ಸೆರೆ ಇಲ್ಲವೆ ಸುಖದ ಅಮಲಿನಲ್ಲಿ ಸದಾ ತೇಲುವ ಸಿಂಗಾರಿಯಾಗಿದ್ದಳು.

ದಿನಾ ಶಿಂಗಾರವಾಗುತ್ತಿದ್ದಳು. ತಲೆ ಬಾಚಿ ಎಡಕ್ಕೆ ಬೈತಲೆ ತೆಗೆದು, ತೀಡಿತೀಡಿ ಮಡಿಸೀರೆ ಕಚ್ಚೆ ಹಾಕಿ ಉಟ್ಟು , ಐಷಾರಾಮಾಗಿ ಅರ್ಧಕಾಯಿ ಸೆರೆ ಕುಡಿದು, ಎಲಡಿಕೆ ಹಾಕಿ, ರಂಗುರಂಗಾಗಿ ಆಕಾಶದ ದೇವತೆ ಹಾರಿ ಕೆಳಗಿಳಿದು ಬಂದ ಹಾಗೆ, - ಅವಯ್ಯ - ನಮ್ಮ ದೊರೆಸಾನಿ ಅಂತಸ್ತಿನಿಂದಿಳಿದು ಸುಖದಲ್ಲಿ ತೇಲುತ್ತ ಬರುತ್ತಿದ್ದಳು. ಮೊದಲೇ ನೋಡಿದವರು ಆಶ್ಚರ್ಯಗೊಳ್ಳುವಂಥ ಸುಂದರಿ. ಭರ್ತಿ ಯೌವ್ವನದ ಸುಖವುಂಡ ಮೇಲೆ ಕೇಳಬೇಕೆ? ಅವಳ ಈಗಿನ ಸೌಂದರ್ಯದ ಕಳೆ ಅದ್ಭುತವಾಗಿತ್ತು. ಒಂದು ಮಾತಿನಲ್ಲಿ ಹೇಳಲೇನಪ್ಪ? - ನೀನು ಘೋಡಗೇರಿಯ ಹೊಳಿ ಓಣಿ ಕಾಮಣ್ಣನ ರತಿಯ ಗೊಂಬೆ ನೋಡಿದ್ದೀಯಾ? - ಹಾಂಗಿದ್ದಳು. ಅದೇ ಚೆಲವು, ಅದೇ ತೃಪ್ತಿ, ಅದರ ಹಾಗೇ ಇವಳ ಮುಖದಲ್ಲೂ ಸುಖ ತುಳುಕುತ್ತಿತ್ತು. ದೇಸಾಯಿಗೆ ದ್ರೋಹ ಮಾಡಿದ್ದೇನೆಂದು ಒಳಗೊಳಗೇ ಆಳದಲ್ಲಿ ಅನ್ನಿಸಿತ್ತು. ಆದರೆ ಹೊರಗೆ ದ್ರೋಹವೆಂದು ಅನ್ನಿಸಲೊಲ್ಲದು. ಈ ಬಗ್ಗೆ ವಿಚಾರ ಮಾಡುವುದೂ ಅವಳಿಗೆ ಸಾಧ್ಯವಿರಲಿಲ್ಲ. ಹೋಗಲಿ ಅದು ದ್ರೋಹವೇ ಎನ್ನುವುದಾದರೆ ಎಷ್ಟೊಂದು ಸುಖಕರವಾಗಿದೆಯಲ್ಲಾ! - ಎಂದು ಹೇಳುತ್ತಿದ್ದಳು.

ಆದರೆ ಒಮ್ಮೊಮ್ಮೆ ಜಾಸ್ತಿ ಕುಡಿದಾಗ ಅವಳ ನೋವು ಒಳಗಿನ ಮಾತಾಗಿ ಹೊರಬರುತ್ತಿತ್ತು. "ಶೀನಿಂಗೀ, ಯಾರೋ ನನ್ನ ಚೂರಿಯಿಂದ ಚುಚ್ಚಿದಾಂಗ ಆಗತೈತಿ. ನನ್ನ ನೋಡಬ್ಯಾಡಂತ ದೇಸಾಯಿಗಿ ಹೇಳು. ಅವ ಎದರ ಬಂದರ ನನಗ ಭಾಳ ತ್ರಾಸ ಆಗತೈತಿ, ಇದಕ್ಕೆಲ್ಲಾ ಅವನೇ ಹೊಣೆಗಾರ. ಒಮ್ಮೊಮ್ಮಿ ಅವನ್ನ ಕೊಲ್ಲಬೇಕಂತ ಅನಸತೈತಿ. ಅವ ಹೊರಗೇನ ಮಾಡತಾನೋ ನನಗೆ ಬೇಕಿಲ್ಲ. ಬೇಕಾದರ ಸೂಳೇರ ತೊಡಿ ನೋಡಲಿ, ಸಾಕಾದರ ಸಾಯಲಿ. ನಾವೀಗ ಗಂಡ ಹೆಂಡತಿ ಅಲ್ಲs ಅಲ್ಲ. ಚೆದರಿ ಚೆಲ್ಲಾಪಿಲ್ಲಿ ಆಗಿ ಅವ ಯಾರೋ, ನಾ ಯಾರೋ ಆಗೇವಿ. ನನ್ನ ಮನಸ್ಸ ನೋಯಿಸಿ ಅದ್ಯಾವ ಸುಖ ಪಡಿತಾನೋ ಪಡೀಲಿ. ಅದರ ಅವ ನನ್ನ ಎದರ ಬರೋದ ಬ್ಯಾಡ" ಎನ್ನುತ್ತಿದ್ದಳು. ಇದೆಲ್ಲ ಮರೆಪ್ಪ ಬರೋತನಕ. ಅವನೊಮ್ಮೆ ಎದುರು ಬಂದರೆ ಸಾಕು, ಇವಳ ಮೈಕಾವೇರಿ, ಕೆನ್ನೆ ಕೆಂಪಗಾಗುತ್ತಿದ್ದವು. ಮೈಯ ಹದವಾದ ಬಿಸಿಯನ್ನು ಅನುಭವಿಸುತ್ತ ತೇಲುಗಣ್ಣು ಮೇಲುಗಣ್ಣಾಗಿ "ನನ್ನ ಮರ್ಯಾ" ಎನ್ನುತ್ತಿದ್ದಳು. "ನನ್ನ ಮರ್ಯಾ ನೋಡೋದಕ್ಕೆ ಹೆಂಗಿದ್ದಾನಂದಿ. ಬೆರಗುಗೊಳಿಸೋ ಗಂಡಸು. ಉಕ್ಕಿನ ಮೈಯವನು. ಅವನ ಆತ್ಮ ಎಷ್ಟು ಹಸು ಐತೆಂದಿ! ಅವ ಹತ್ತಿರ ಇದ್ದರೆ ಅರಮನೆಯ ಯಾವ ದೆವ್ವ ಭೂತಗಳೂ ಇನ್ನ ಬಳಿ ಸುಳಿಯುವುದಿಲ್ಲ" ಎನ್ನುತ್ತಿದ್ದಳು.

ಈ ಮಾತುಗಳನ್ನವಳು ಸುಮ್ಮಸುಮ್ಮನೇ ಹೇಳಿರಲಿಲ್ಲ. ಆ ರೀತಿ ಸಿದ್ಧವಾಗಿದ್ದಳು. ಇದನ್ನೆಲ್ಲ ದೇಸಾಯಿಗೆ ಹೇಳಿ ಅವನನ್ನು ಗಾಬರಿಗೊಳಿಸುವುದಾಗಲಿ, ಅವನನ್ನು ಹೊಟ್ಟೆಕಿಚ್ಚಿನಿಂದ ಉರಿಸುವುದಾಗಲಿ ನನ್ನ ಉದ್ದೇಶವಲ್ಲ. ನನ್ನಿಂದ ಅದು ಆಗದ ಕೆಲಸ. ಆದರೆ ಆತ ತೊಡೆ ನೋಡುವ ಸುಖದಲ್ಲಿ ಹೆಂಡತಿಯ ಬಗ್ಗೆ ಇಷ್ಟು ನಿರ್ಲಕ್ಷತನ ತೋರಿಸುವುದು ಯಾರ ಕೋಪವನ್ನಾದರೂ ಕೆರಳಿಸುವಂಥದು. ತನಗೊಬ್ಬ ಹೆಂಡತಿ ಇದ್ದಾಳೆ. ತಾನು ಸತ್ತರೂ ಅವಳ ಬದುಕಿನ ಬಗ್ಗೆ ತನಗೂ ಜವಾಬ್ದಾರಿಯಿದೆಯೆಂದು ಹೊಳೆಯಲಾರದೆ? ಅರಮನೆ ಮಾರುವ ವಿಷಯದಲ್ಲಿ ಹೆಂಡತಿಯೆಂಬಾಕೆಯನ್ನು ಒಂದು ಮಾತು ಕೇಳಿದನೆ? ಅರಮನೆ ಮಾರಿದರೆ ಅವಳ ಗತಿಯೇನು? ತನ್ನ ಆಸ್ತಿಯೆಲ್ಲ ತನ್ನೊಬ್ಬನ ಸುಖಕ್ಕಾಗೇ ಇದೆ ಎಂದರೆ ಹೇಗೆ? ಸೂಳೆಯರ ಹಾಗೆ ತೊಡೆ ತೋರಿಸುತ್ತೇನೆ ಎಂಬಂಥ ಮಾತು ಯಾವ ಗೃಹಿಣಿಗೆ ಅವಮಾನಕರವಲ್ಲ? ಹೋಗಲಿ, ಮಾರನೇ ದಿನ ದಾರಿಗೆ ಬಂದನ? ಸಿಂಗಾರೆವ್ವನಿಂದ ಕದ್ದು ಕದ್ದು ಹೊರಚಾಳಿಗೆ ಹೋಗತೊಡಗಿದ. ತನ್ನ ಬಾಹ್ಯ ವಿಕಾರ ಸುಖಗಳಲ್ಲಿ ಅವ ಎಷ್ಟು ತನ್ಮಯನಾಗಿದ್ದನೆಂದರೆ ತನ್ನ ದೊರೆಸಾನಿಯನ್ನು ಕಳೆದುಕೊಂಡದ್ದು ಅವನಿಗೆ ತಿಳಿದುಬಂದಿರಲೇ ಇಲ್ಲ.

ನೀನು ಮರೆಪ್ಪನನ್ನು ನೋಡಿಲ್ಲ, ಅಲ್ಲ? ಹೋಗಲಿ ಈ ತನಕ ಅವನ ಕಥಿ ಕೇಳಿದ್ದೀಯಲ್ಲ. ಆತನಿಗೊಂದು ಆತ್ಮ ಇದೆಯೆಂದು ನಿನಗೆಂದಾದರೂ ಅನ್ನಿಸಿತ್ತೆ? ಅವನಲ್ಲಿ ಅದು ಹುಟ್ಟುಕೊಳ್ಳುವ ಹಾಗೆ ಮಾಡಿದಳು. ಹೊಳೆಯಲ್ಲಿಯ ಕಲ್ಲು ಸವೆದು ಸವೆದು ಲಿಂಗವಾಗುತ್ತದಲ್ಲಾ, ಹಾಗೆ ತನ್ನ ಪ್ರೇಮದ ಅಮೃತಧಾರೆಯನ್ನು ಅವನ ಮೇಲೆ ಸುರಿದೂ ಸುರಿದೂ ಅವನು ಲಿಂಗವಾಗುವ ಹಾಗೆ, ಆತ್ಮವಾಗುವ ಹಾಗೆ ಮಾಡಿದ್ದಳು. ಆ ಪ್ರವಾಹದಲ್ಲಿ ಅವ ತೇಲಿ ಮುಳುಗಿ, ತೇಲಿ ಮುಳುಗಿ ಧನ್ಯವಾಗಿದ್ದ. ಆ ಪ್ರವಾಹಕ್ಕೆ ತನ್ನನ್ನು ಪೂರ್ತಿಯಾಗಿ ಅರ್ಪಿಸಿಕೊಂಡಿದ್ದ.

ಅವಳು ಕಾಲಿನಿಂದ ಹೇಳಿದ್ದನ್ನು ನೆತ್ತಿಯಲ್ಲಿ ಹೊತ್ತು ಮಾಡುತ್ತಿದ್ದ. ಸದಾ ಅವಳ ಆಜ್ಞೆಗಾಗಿ ಕಾಯುತ್ತಿದ್ದ. ಅವಳ ಯಾವುದೇ ಆಸೆಯಿರಲಿ, ಬಾಯಿಂದ ಹೊರಬರುವ ಮೊದಲೇ ಈಡೇರಿಸುತ್ತಿದ್ದ. ಮೊದಲಿನ ಹಾಗೆ ಯಾವಾಗೆಂದರೆ ಆವಾಗ ಅಂತಸ್ತಿಗೆ ನುಗ್ಗುತ್ತಿರಲಿಲ್ಲ. ಸಿಂಗಾರೆವ್ವನ ಮಾನಕ್ಕಾಗಿ ಅತ್ಯಂತ ಕಾಳಜಿಯಿಂದಿರುತ್ತಿದ್ದ. ದೇಸಾಯಿ ಮತ್ತೆ ಅವನನ್ನು ಆಳಾಗಿ ನೇಮಿಸಿಕೊಂಡಿದ್ದ. ಅವನ ಬಗ್ಗೆ ಊರವರ್ಯಾರಿಗೂ ಅನುಮಾನಗಳಿರಲಿಲ್ಲ. ಗೌಡನನ್ನು ನಾನೇ ಕೊಂದವನೆಂದು ಸ್ವಯಂ ಮರೆಪ್ಪನೇ ಬಂದು ಹೇಳಿದ್ದರೂ ಜನ ಏನು, ದೇಸಾಯಿಯೂ ನಂಬುತ್ತಿರಲಿಲ್ಲ.

ಮುಂದೆ ಸಿಂಗಾರೆವ್ವ ಬಸಿರಾಗುವತನಕ ಮಹತ್ವದ ಘಟನೆಗಳೇನೂ ನಡೆಯಲಿಲ್ಲ. ಹೊರಗಿನ ವ್ಯವಹಾರ ನನಗೆ ಅಷ್ಟೇನು ತಿಳಿಯದು. ಅದನ್ನು ಮರೆಪ್ಪ ನೋಡಿಕೊಳ್ಳುತ್ತಿದ್ದ. ಆಗಾಗ ಬಂದು ದೊರೆಸಾನಿಗೆ ವರದಿ ಒಪ್ಪಿಸುತ್ತಿದ್ದ. ಅವರು ಮಾತಾಡುವಾಗ ನಾನು ಕೇಳಿದ್ದೆಷ್ಟೋ ಅಷ್ಟೆ. ಆದರೆ ಒಳಗೆ ಮಾತ್ರ ಮರೆಪ್ಪ ಬದಲಾಗಿದ್ದ, ದೊರೆಸಾನಿ ಬದಲಾಗಿದ್ದಳು. ದೇಸಾಯಿ ಮಾತ್ರ ಹಾಗೇ ಇದ್ದ. ಅವನ ದಿನಚರಿಯಲ್ಲಾಗಲೀ ಸ್ವಭಾವದಲ್ಲಾಗಲೀ, ಯಾವ ಪರಿವರ್ತನೆಗಳೂ ಆಗಿರಲಿಲ್ಲ. ಅಥವಾ ತನ್ನ ಹೊರಗೆ ಏನೋ

ಬದಲಾಗಿದೆಯೆಂಬುದನ್ನು ತಿಳಿಯುವಷ್ಟು ಸೂಕ್ಷ್ಮ ಬುದ್ಧಿಯೂ ಅವನಿಗಿರಲಿಲ್ಲ. ದೊರೆಸಾನಿ ದೇಸಾಯಿಯ ಉಸಾಬರಿಯನ್ನೇ ಬಿಟ್ಟುಬಿಟ್ಟಿದ್ದಳು. ದೇಸಾಯಿ ಮಾತ್ರ ಒಳ್ಳೇದೇ ಆಯಿತೆಂಬಂತೆ ದೂರದಲ್ಲೆ ಇದ್ದ. ಅದಕ್ಕೇ ಒಮ್ಮೊಮ್ಮೆ ಅವನಿಗಾದ ಶಿಕ್ಷೆ ಸರಿಯೆನಿಸುತ್ತಿತ್ತು.

ನನ್ನ ಪ್ರಕಾರ ಅವನೊಬ್ಬ ಮನುಷ್ಯನೇ ಅಲ್ಲ. ಮಾನವ ಸಹಜವಾದ ಯಾವುದೇ ಭಾವನೆಯನ್ನೂ ಅವನು ಈ ತನಕ ತೋರಿರಲಿಲ್ಲ. ಜೊತೆಯವರನ್ನು ಹೋಗಲಿ, ದೊರೆಸಾನಿಯನ್ನು ಕಂಡಾಗ ಕೂಡ ಅವನ ಹೃದಯ ಬೆಚ್ಚಗಾಗುತ್ತಿರಲಿಲ್ಲ. ಹೆತ್ತ ತಾಯಿ ಸತ್ತಾಗಲೂ ಏನೇನೂ ಅಲ್ಲದ ನಾವು ಅತ್ತರೆ, ಆತ ನಿರ್ಲಿಪ್ತ ಪ್ರೇಕ್ಷಕನಾಗಿ ನೋಡಿದ. ಹಬ್ಬದ ಮುನ್ನಾದಿನ ದೊರೆಸಾನಿ ಪರಿಪರಿಯಾಗಿ ಹೇಳಿದ್ದನ್ನು ಕೇಳಿಯೂ ತನ್ನ ಚಾಳಿ ಬಿಡಲಿಲ್ಲ. ಅದೇ ಅವನ ದುರಂತವೆಂದು ನನ್ನ ಭಾವನೆ, ಮನುಷ್ಯನಾಗಿ ಹುಟ್ಟಿಯೂ ಮನುಷ್ಯ ಹೃದಯವಿಲ್ಲದಿರುವುದುದಿದೆಯಲ್ಲ, ಅದು ದುರಂತವಲ್ಲದೆ ಇನ್ನೇನು? ಅವನಲ್ಲಿ ದೇಸಗತಿಯ ಬಗೆಗೆ ಅಭಿಮಾನವಿದ್ದದ್ದು ನಿಜ. ಮರೆಪ್ಪ 'ಸರ್ಕಾರ' ಎಂದಾಗ ಹಿಗ್ಗುತ್ತಿದ್ದ. ಅರಮನೆಗೆ ಪೊಲೀಸರು ಬಂದಾಗ ಚಡಪಡಿಸಿದ್ದ. ಸಭೆಯಲ್ಲಿ ಗೌಡ ದೊರೆಸಾನಿಯ ಹೆಸರು ತಂದಾಗ 'ಖಬರ್‌ದಾರ್' ಎಂದಿದ್ದ. ಅಭಿಮಾನಕ್ಕೆ ಅರ್ಥ ಬರುವುದು ಸಂಬಂಧಗಳಲ್ಲಿ ಅಲ್ಲವೆ? ಅಲ್ಲದಿದ್ದರೆ ಅಂಥ ಅಭಿಮಾನ ಇದ್ದರೆಷ್ಟು ಬಿಟ್ಟರೆಷ್ಟು? ನನ್ನ ಕೇಳಿದರೆ, ಅರಮನೆಯೆಂದರೆ ಹೆಚ್ಚು ಬೆಲೆ ಬಾಳುವ ವಸ್ತು, ಮತ್ತು ಅದು ನನ್ನ ಕೈಲಿದೆ - ಎಂಬುದೇ ಅವನ ಅಭಿಮಾನವಾಗಿತ್ತು.

ದೀಪಾವಳಿಯ ಬಯಲಾಟಕ್ಕೆ ಚಿಮಣಾ ಬಂದಿದ್ದಳಲ್ಲ, ಆಟ ಚೆನ್ನಾಗಿ ಆಗಲಿಲ್ಲ. ಆಮೇಲೂ ಅವಳು ಹೆಚ್ಚು ದಿನ ನಿಲ್ಲಲಿಲ್ಲ. ಯಾಕೆಂದರೆ ಅವಳ ಕರಿಯ ದೇಹವನ್ನು ನೋಡಲು ದೇಸಾಯಿ ಇಷ್ಟಪಡಲಿಲ್ಲವಂತೆ. ಮಾಡಿದ ಖರ್ಚೆಲ್ಲ ನೀರಲ್ಲಿ ಹುಣಸೇ ಹಣ್ಣು ತೊಳೆದಂತಾಯಿತಲ್ಲಾ ಎಂದು ಶೆಟ್ಟಿ ಕೈ ಕೈ ಹೊಸೆದುಕೊಂಡನಂತೆ. ಈ ಸಲ ಕೊಲ್ಲಾಪುರದ ತಮಶಾ ಹುಡುಗಿಯನ್ನು ತರುವುದಾಗಿ ಹೇಳಿ ದೇಸಾಯಿಗೆ ಹೊಸ ಆಸೆ ಹಚ್ಚಿದ್ದನಂತೆ. ಮರೆಪ್ಪನೂ ಮೊದಲಿನಂತೆ ದೇಸಾಯಿಗೆ ವಿಶ್ವಾಸಿಗನಾಗಿದ್ದ. ಸಿಂಗಾರೆವ್ವ ಮಾತ್ರ ಒಳಗೊಳಗೇ ಚುಚ್ಚಿ ಚುಚಿ ಹಿಂಸೆ ಮಾಡಿಕೊಳ್ಳುತ್ತಿದ್ದಳು. ಅದ್ಯಾರಿಗೂ ಕಾಣುತ್ತಿರಲಿಲ್ಲ. ತಂದೆ ಸತ್ತದ್ದನ್ನು ಸ್ಮರಿಸಲಿಲ್ಲ. ತಾಯಿಯನ್ನು ನೆನೆಯಲಿಲ್ಲ. ತೀರ ಕ್ವಚಿತ್ತಾಗಿ ಆ ಒಳಗಿನ ನೋವನ್ನು ಮಾತ್ರ ನನ್ನ ಮುಂದೆ ಆಡಿಕೊಳ್ಳುತ್ತಿದ್ದಳು.

ಮುಂದೊಂದು ದಿನ ನಂದಗಾಂವಿಯಿಂದ ಅವಳ ತಾಯಿ ಬಂದಳು. ಗೌಡ ಮಾಯವಾದದ್ದನ್ನೂ ಸವತೆಯರಿಂದ ಅಲ್ಲಿ ತನಗಾಗುತ್ತಿರುವ ಅವ್ಯವಸ್ಥೆಯನ್ನು ಮುದುಕಿ ಬಣ್ಣಿಸಿ ಕಣ್ಣೀರು ಕರೆದಳು. ಸಿಂಗಾರೆವ್ವ ಏನೂ ಹೇಳಲಿಲ್ಲ. ಆ ದಿನ ಇಳಿಹೊತ್ತಾಗಿತ್ತು. ನಾವು ಮೂವರೂ ಪಟಾಂಗಳದಲ್ಲಿದ್ದೆವು. ದರ್ಬಾರಿನಂಚಿನ ಮೆಟ್ಟಲಿನ ಮೇಲೆ ನಾನು ಮತ್ತು ಮುದುಕಿ ಕೂತಿದ್ದೆವು. ಆಕ ಆ ಕಟ್ಟೆಯ ಮೇಲೆ ಬಿಸಿಲು ಕಾಯಿಸುತ್ತ ಸಿಂಗಾರೆವ್ವ ಕೂತಿದ್ದಳು. ಆ ದಿನ ಅವಳು ನೀರು ಹಾಕಿಕೊಂಡಿದ್ದರಿಂದ ಮಾರುದ್ದ ಕೂದಲನ್ನು ಬೆನ್ನಿಗಿಳಿಬಿಟ್ಟು ಎಳೆಬಿಸಿಲಿನಲ್ಲಿ ಒಣಗಿಸುತ್ತಿದ್ದಳು. ಮುದುಕಿಯಿನ್ನೂ ತನ್ನ ದುಃಖ ತೋಡಿಕೊಳ್ಳುತ್ತಲೇ ಇದ್ದಳು. ಮಾತಾಡುತ್ತಿದ್ದಳು, ಬಿಕ್ಕುತ್ತಿದ್ದಳು, ಕಣ್ಣೀರು ಸುರಿಸುತ್ತಿದ್ದಳು. ಒಮ್ಮೊಮ್ಮೆ ಯಾವುದು ಬಿಕ್ಕು, ಯಾವುದು ಮಾತೆಂದು ತಿಳಿಯುತ್ತಲೇ ಇರಲಿಲ್ಲ. ಯಥಾಪ್ರಕಾರ ನಾನು ಸಹಾನುಭೂತಿ ಸೂಚಿಸುತ್ತಿದ್ದೆ. ಗೌಡ ಮಾಯವಾದದ್ದರ ಬಗ್ಗೆ ಅಷ್ಟಾಗಿ ಅವಳಿಗೆ ದುಃಖವೇನಿರಲಿಲ್ಲ. ಆದರೆ ತನ್ನ 'ಕಲ್ಲು ಕುದಿಸಿ ಮುಳ್ಳು ಬೇಯಿಸಿ' ತಿನ್ನಬೇಕಾದ ಸ್ಥಿತಿಯ ಬಗ್ಗೆ ಮರುಕವುಂಟಾಗುವ ಹಾಗೆ ಬಣ್ಣಿಸುತ್ತಿದ್ದಳು. ಈ ಸ್ಥಿತಿಗೆ ಗೌಡನೇ ಕಾರಣನೆಂದು ಸಿಟ್ಟೂ ಅವಳಲ್ಲಿತ್ತು. ಅದಕ್ಕೇ ಗೌಡನೆಂದೊಡನೆ ಅಳು ಬಿಟ್ಟು ಸಿಟ್ಟಿಗೇಳುತ್ತಿದ್ದಳು. ಸಿಂಗಾರೆವ್ವ ಮಾತ್ರ ಈಗಲೂ ಸುಮ್ಮನಿದ್ದಳು. ಇನ್ನೇನು ಮಾಡಲು ಸಾಧ್ಯ? ಗೌಡ ಹ್ಯಾಗೆ ಸತ್ತನೆಂದು ನಮಗೆ ಗೊತ್ತಿಲ್ಲವೆ? ಆದರೆ ಆಡಲಾರೆವು, ಅನುಭವಿಸಲಾರೆವು. ಮುದುಕಿ ಹೇಳುತ್ತಿದ್ದಳು:

"ಆ ನನ್ನ ಹಾಟ್ಯಾ ಗೌಡ ಸತ್ತಿರಬೇಕಂತಿನ್ನಾನು. ಎಲ್ಲೆಲ್ಲಿ ಹೋಗಿ ಏನೇನ ಕಾರಭಾರ ಮಾಡಿದ್ದನೋ! ಮಂದಿ ಎಷ್ಟಂತ ತಾಳಿಕೊಂಡಾರು? ಶಿರಟ್ಟೈವರಃ ಇವನ್ನ ಖೂನಿ ಮಾಡದರಂತ ಹೇಳತಿದ್ದರು. ಎಷ್ಟ ಖರೇನೋ ಎಷ್ಟ ಸುಳ್ಳೋ! ಸನ್ಯಾಸಿ ಆಗಿ ಕಾಶಿ

ಕಡೆ ಹೋದನಂತ ನಮ್ಮೂರ ಜಂಗಮ ಹೇಳತಿದ್ದ. ಅವ ಎಂದಾದರೂ ಸನ್ಯಾಸಿ ಆದಾನೇನ? ಖೂನಿಯಾಗಿದ್ದರ ಪೊಲೀಸರ್ಯಾಕ ಸುಮ್ಮನ ಅದಾರು? ಒಂದೂ ಹೊಯ್ಕ ತಿಳಿಯೋದಃ ಇಲ್ಲ..."

- ಎಂದು ಹೇಳಹೇಳುತ್ತ ಮುದುಕಿ ಥಟ್ಟನೆ ಎದ್ದು ಸಿಂಗಾರೆವ್ವನ ಬಳಿಗೆ ಧಾವಿಸುತ್ತ "ಅಯ್ ನನ ಕಂದಾ, ಬಸರಗಿಸರ ಆಗಿಯೇನು?" ಎಂದು ಹೋಗಿ ಅವಳ ಎದುರಿಗೆ ಕಣ್ಣರಳಿಸಿಕೊಂಡು ನಿಂತಳು. ಸಿಂಗಾರೆವ್ವ ನಾಚಿ, ಕತ್ತು ಹಾಕಿ 'ಹೂಂ' ಎಂದಳು. ನನಗೂ ಇದು ಗೊತ್ತಿರಲಿಲ್ಲ. ಆನಂದ, ಆಶ್ಚರ್ಯಗಳಿಂದ ಸಿಂಗಾರೆವ್ವನನ್ನೇ ನೋಡುತ್ತಿದ್ದೆ. ಹೌದೆನ್ನಿಸಿತು. ಕೆಂಪು ಕೆನ್ನೆ ಕಳೆಕಳೆಯಾಗಿ ಅರಳಿದ ಗುಲಾಬಿಗಳಾಗಿದ್ದವು. ತುಳುಕುವ ತೃಪ್ತಿಗಳಿಂದ ಕಣ್ಣು ಫಳಫಳ ಹೊಳೆಯುತ್ತಿದ್ದವು. ದುಂಡಗಿನ ಮುಖ ಮತ್ತಷ್ಟು ತುಂಬಿಕೊಂಡು, ತುಂಬಿದಲ್ಲೆಲ್ಲ ಚಿವುಟಿದರೆ ನೆತ್ತರು ತುಂಬಿಕೊಂಡಿತ್ತು. ಆ ಸೀರೆ, ಆ ಎಳೆಬಿಸಿಲು, ಆ ಹೊಳೆಯುವ ಕೂದಲು - ಅಯ್ ಶಿವನ - ನನ ಗೆಳತಿ ಗರ್ಭಿಣಿಯಾದ ದೇವತೆಯಂತೆ ಕಾಣುತ್ತಿದ್ದಳು. ನಾನು ಎದ್ದು ಅವರ ಬಳಿ ಹೋದೆ.

ಮುದುಕಿಗೆ ಸಂತೋಷವೆಂಬ ಹುಚ್ಚು ಹತ್ತಿತ್ತು. "ಅಯ್ ನನ್ನ ಗೌರಿ, ನನ್ನ ಭಾಗ್ಯವಂತಿ, ಈಸ ಬಸರಾದೇನ? ನನಗ ಮೊದಲಃ ಯಾಕ ಹೇಳಲಿಲ್ಲ? ನನ್ನ ಕಂದಾ, ನನ್ನ ಲಕ್ಷ್ಮ, ನನ್ನ ಸಿಂಗಾರಿ" - ಎನ್ನುತ್ತ ಮಾತಿಗೊಮ್ಮೆ ಕೈಗಳಿಂದ ಸಿಂಗಾರೆವ್ವನ ಎರಡೂ ಕೆನ್ನೆ ಮುಟ್ಟಿ ಮುಟ್ಟಿ ಲಟಿಕೆ ಮುರಿಯುತ್ತಿದ್ದಳು. ಸಿಂಗಾರೆವ್ವ ಸುಮ್ಮನೆ ತಾಯಿ ಹ್ಯಾಗೆ ಹೇಳಿದರೆ ಹಾಗೆ ಮುಖ ಮಾಡುತ್ತ ನಾಚಿಕೆಯ ಮಂದಹಾಸ ಬೀರುತ್ತ ತೇಲುಗಣ್ಣಾಗಿ ತಾಯಿಯ ಆನಂದವನ್ನು ಅನುಭವಿಸುತ್ತಿದ್ದಳು. ಮುದುಕಿ ಥಟ್ಟನೆ ಮಗಳ ಮುಂದೆ ಕೂತು ಕಣ್ಣು ಮಿಟುಕಿಸದೆ ಮಗಳನ್ನೇ ನೋಡುತ್ತ, ಆನಂದದಿಂದ, ಕಣ್ಣೀರು ಸುರಿಸುತ್ತಿದ್ದಳು. ಮುದುಕಿ ಹುಚ್ಚಾದದ್ದು ಹೆಚ್ಚಲ್ಲ ಎನ್ನಿಸಿತು. ಅವಕಾಶ ಸಿಕ್ಕಿದ್ದರೆ ಈಗ ನಾನೂ ಹಾಗೇ ಮಾಡುತ್ತಿದ್ದೆ, ಅಥವಾ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನನ್ನ ಸಿಂಗಾರಿಗೆ ಲಟಲಟ ಮುದ್ದು ಕೊಡುತ್ತಿದ್ದೆ.

ಈ ಮುದುಕಿಯನ್ನು ತಡೆಯದಿದ್ದರೆ ಅವಳು ನಿಜವಾಗಿಯೂ ಹುಚ್ಚಿಯಾಗುತ್ತಾಳೆ ಎನ್ನಿಸಿತು. ಅಷ್ಟರಲ್ಲಿ ಅವಳ ಎತ್ತರದ ದನಿಯ ಉದ್ಗಾರ ಕೇಳಿ ಮಲಗಿದ್ದ ದೇಸಾಯಿ ಆಕಳಿಸುತ್ತ, ಹೊರಬಂದ. ಮುದುಕಿ ಅವನನ್ನು ನೋಡಿದ್ದೇ - ಅಲ್ಲಿಗೇ ಓಡಿ ಹೋಗಿ "ಏನ್ರೀ ಅಳಿಯದೇವರ, ಸಿಂಗಾರೆವ್ವ ಬಸಿರಾದ ಸುದ್ದಿ ನೀವಾದ್ರೂ ನಮಗ ತಿಳಿಸಬಾರದ? ತಿಳಿಸಿದ್ರ ನಮಗೂ ಆನಂದ ಆಗ್ತಿರಲಿಲ್ಲೇನು? ಗೌಡ ಹೋದರೇನ ಆಯ್ತು? ಇನ್ನೂ ನಾನು ಅವಳ ತಾಯಿ ಜೀವಂತ ಇದ್ದೀನಿ. ಮಗಳಿಗಿ ಮಾಡೋ ಮರ್ಯಾದಿ ಮಾಡೇ ಮಾಡ್ತೀನಿ"

ದೇಸಾಯಿ ಆಶ್ಚರ್ಯ ಮತ್ತು ಆಘಾತ ಹೊಂದಿದವನಾಗಿ "ಬಸರ?" ಎಂದು ಕೇಳಿದ. ಇಲ್ಲಿಯ ತನಕ ಆನಂದದ ಉನ್ಮಾದದಲ್ಲಿದ್ದ ನಾನು ಆಗ ಮನುಷ್ಯರೊಳಗೆ ಬಂದೆ. ಆಗುವ ಅಪಾಯ ಆಗಿ ಹೋಗಿತ್ತು. ದೇಸಾಯಿ ಮುದುಕಿಯ ಮುಖವನ್ನೇ ನೋಡುತ್ತ, ಕಣ್ಣಗಲಿಸಿ ಮತ್ತೆ ಮತ್ತೆ "ಬಸರ? ಬಸರ?" ಎಂದು ಹೇಳಹೇಳುತ್ತ ಮುಖ ಕೆಂಪಗಾಗಿಸಿ, ಬೇಹೋಶ್ ಆಗಿ ದೊಪ್ಪನೆ ಕೆಳಗೆ ಬಿದ್ದ. ಸಿಂಗಾರೆವ್ವ ಏನೇನ ಆಗಿಲ್ಲವೆಂಬಂತೆ ನಡೆದು ಅಂತಸ್ತಿಗೆ ಹೋದಳು.

* * *

## ಅಧ್ಯಾಯ - ೧೩

ನಿಂಗವ್ವ ಗೌಡ್ತಿ ತನ್ನ ಊರಿಗೆ ಹೋಗುವ ತನಕ ದೇಸಾಯಿ ಕೇಳಲೇ ಇಲ್ಲ. ತನ್ನ ಕೋಣೆ ಬಿಟ್ಟು ಹೊರಬರಲು ಇಲ್ಲ. ಗೌಡ್ತಿ ಮಾತ್ರ, ಇದ್ದಷ್ಟು ದಿನವೂ ಸಂಭ್ರಮದಲ್ಲೇ ಇದ್ದಳು. ಮಗಳಿಗೆ ಬೇಕು - ಬೇಕಾದ್ದನ್ನು ಮಾಡಿ, ನೀಡಿ ತೃಪ್ತಿಯಿಂದ ಹೋದಳು. ಆ ದಿನ ದೇಸಾಯಿ ಮಾತ್ರ ಊಟ ಮಾಡಲೇ ಇಲ್ಲ. ಇಳಿಹೊತ್ತಾದರೂ ಬರಲಿಲ್ಲವಾದ್ದರಿಂದ ಊಟಕ್ಕೆ ಕರೆಯೋಣವೆಂದು ಹೋದೆ. ಬಾಗಿಲಿಕ್ಕಿತ್ತು. ದೂಡಿದೆ. ಮಂಚದ ಮೇಲೆ ಎರಡು ಕೈಯೂರಿ, ತೆರೆದ ಕಣ್ಣು ತೆರೆದಂತೇ, ಪಿಳುಕಿಸದೇ, ಹಾಗೇ ಬಾಗಿಲ ಕಡೆ ನೋಡುತ್ತ ಕೂತಿದ್ದ. ಮುಖದ ಮೇಲೆ ಶವದ ಕಳೆಯಿತ್ತು. ಗಾಬರಿಯಾಗಿ ಕಿರಚಬೇಕೆನ್ನುವಷ್ಟರಲ್ಲಿ ಪುಣ್ಯಾತ್ಮ ಕೈತೆಗೆದು ತೊಡೆಯ

ಮೇಲಿಟ್ಟುಕೊಂಡ. ಊಟಕ್ಕೆ ಬರ್ರಿ ಎಂದೆ. ನಿಟ್ಟುಸಿರುಗರೆದ, ಮಾತಾಡಲಿಲ್ಲ. ಪುನಃ ಕರೆದೆ. ಆಗಲೂ ಮಾತಾಡಲಿಲ್ಲ. ತಿರುಗಿ ಅಂತಸ್ತಿನ ಕಡೆಗೆ ನಡೆದಾಗ ದೊರೆಸಾನಿಯೇ ಎದುರಾದಳು. ದೇಸಾಯಿ ಊಟ ಮಾಡಿಲ್ಲವೆಂದು ಹೇಳಿದೆ. ಅವಳೂ ಸುಮ್ಮನಾದಳು. ಅವನ ಸ್ಥಿತಿ ಚಿಂತಾಜನಕವಾಹಿದೆಯೆಂದೂ, ನೀನು ಹೋಗಿ ಕರೆದರೆ ಸಮಾಧಾನಗೊಂಡು ಬಂದಾನೆಂದೂ ಹೇಳಿದೆ. ನಮಗ್ಯಾರಿಗೂ ಅವನ ಸಿಟ್ಟಿನ ಅಂದಾಜಾಗಿರಲಿಲ್ಲ. ಈ ಮೂರೂ ದಿನ ಒಂದು ನಮೂನಿ ಇದ್ದವನಾದ್ದರಿಂದ ಸಿಂಗಾರೆವ್ವನೂ ಕರುಣೆಗೊಂಡು ಬಂದಳು. ಬಾಗಿಲಲ್ಲಿ ನಿಂತು "ಊಟಕ್ಕೇಳ್ರಿ" ಎಂದಳು. ದೇಸಾಯಿ ಕೆಳಗೆ ಮಾಡಿದ್ದ ಮುಖವನ್ನು ಮ್ಯಾಲೆತ್ತಲೇ ಇಲ್ಲ. ಮತ್ತೊಮ್ಮೆ ಕರೆದಳು. ಮೆಲ್ಲಗೆ ಮುಖ ಎತ್ತಿ ಅವಳನ್ನು ತೀಕ್ಷ್ಣವಾಗಿ ನೋಡಿದ. ಸಿಂಗಾರೆವ್ವನ ಮುಖ ಕೂಡ ಪೆಚ್ಚಾಯಿತು. ರೋಗಿಷ್ಠನಂಥ ಶೀರುದನಿಯಲ್ಲಿ "ನೀವು ನನ್ನ ಮಾತಿಗೆ ಉತ್ತರ ಕೊಡಬೇಕು" ಅಂದ. ಅವನ ಪ್ರಶ್ನೆ ಏನೆಂದು ಗೊತ್ತಿತ್ತಲ್ಲ, ದೊರೆಸಾನಿ ತಿರುಗಿದಳು. "ಉತ್ತರ ಕೊಟ್ಟ ಹೋಗ್ರಿ ಅಂದೆ" ಎಂದು ಜೋರಾಗಿ ಕಿರುಚಿದ. ಸಿಂಗಾರೆವ್ವ ತಿರುಗಿ ಅವನನ್ನು ಎದುರಿಸಲೆಂದೇ ಪ್ರಶ್ನೆ ಏನೆಂಬಂತೆ ನಿಂತಳು. ದೇಸಾಯಿ ಉದ್ವೇಗದಲ್ಲಿದ್ದ ಅವನ ಎದೆಯ ರಕ್ತ ನೆತ್ತಿಗೇರುವಂತೆ ಕಂಡಿತು. ಹುಚ್ಚನಂತೆ,

"ಬಸರಾದದ್ದ ಖರೆ ಏನು?" ಅಂದ.

"ಹೌಂದು" ಎಂದಳು ಶಾಂತವಾಗೇ.

"ಯಾವ ಹೊಲ್ಯಾಗ ಬಸರಾದ್ರಿ?"

ಸಿಂಗಾರೆವ್ವ ಉಕ್ಕಿ ಬರುತ್ತಿದ್ದ ಸಿಟ್ಟನ್ನು ನಿಯಂತ್ರಿಸಿಕೊಳ್ಳುತ್ತ,

"ಈಗ ಅದೆಲ್ಲ ಯಾಕ, ಊಟಮಾಡ್ರಿ, ಮಾತಾಡೋಣು"

ಎಂದಳು. ಇವ ಕಿರಿಚಿದ

"ನಮ್ಮ ಅರಮನ್ಯಾಗ ಅದೆಲ್ಲ ನಡೆಯೋದಿಲ್ಲ, ಏನಂಬೋದು ಈಗ ತೀರ್ಮಾನ ಆಗಾಕs ಬೇಕು"

"ಏನ ತೀರ್ಮಾನ?"

"ಏನಂದರ… ಇದು ನಮ್ಮ ಅರಮನಿ ತೀರ್ಮಾನ"

ಎಂದು ಒದರಿ ಓಡಿಹೋಗಿ, ಹಿಂದೆ ಗೋಡೆಗೆ ನೇತುಹಾಕಿದ್ದ ಬಂದೂಕು ತಂದು ಸಿಂಗಾರೆವ್ವನಿಗೆ ಗುರಿ ಹಿಡಿದನೇ! ಎದುರಾ ಎದುರು ನೋಡುತ್ತ ನಾ ಹ್ಯಾಗೆ ಸುಮ್ಮನಿರಲಿ? ಇಬ್ಬರ ಮಧ್ಯೆ ಹೋಗಿ ಬಂದೂಕಿಗೆ ನಾನೇ ಗುರಿಯಾಗಿ "ಏನ್ರಿ ಎಪ್ಪ, ಗಂಡ ಹೆಂಡ್ತಿ ಹೀಂಗ ಜಗಳ ಆಡೋದ? ತುಸ ಸಮಾಧಾನ ಮಾಡಿಕೊಳ್ರಿ. ಅಮ್ಯಾಲ ವಿಚಾರ ಮಾಡೋಣು" ಎಂದು ಏನೇನೋ ಕರುಣೆ ಬರುವ ಹಾಗೆ ಕೈ ಮುಗಿದು ಹೇಳಿದೆ. ಈಗಲೂ ಸಿಂಗಾರೆವ್ವ ಸಿಟ್ಟನ್ನು ಹಿಡಿದಿಟ್ಟುಕೊಂಡೇ ಇದ್ದಳು. ದೇಸಾಯಿಯ ಕೈ ನಿಶ್ಯಕ್ತಿಯಿಂದಲೋ ಅಥವಾ ತೀವ್ರ ಕೋಪದಿಂದಲೋ ನಡುಗುತ್ತಿದ್ದವು. ಪರಸ್ಪರ ಮುಖ ನೋಡುತ್ತ ಒಂದು ಕ್ಷಣ ಇಬ್ಬರೂ ಸುಮ್ಮನಾದರು. ದೃಶ್ಯ ಮುಗಿಯಿತೇನೋ ಅಂದೆ. ಒಮ್ಮೆಲೆ ದೇಸಾಯಿ "ಥೂ ಹಾದರಗಿತ್ತೆ!" ಎಂದು ಸಿಂಗಾರೆವ್ವನ ಕಡೆ ಉಗುಳಿಬಿಟ್ಟ! ಈ ಶಬುದ ಅಂದನೋ ಇಲ್ಲವೋ ದೊರೆಸಾನಿಯ ಸಿಟ್ಟು ಕಟ್ಟೊಡೆದು ಕಣ್ಣು, ಮೂಗು ಅರಳಿಕೊಂಡವು. ದೇಹಾದ್ಯಂತ ಬಿದುರು ಮೆಳೆಯ ಹಾಗೆ ನಡುಗಿ "ತಗಿ ಶೀನಿಂಗೀ" ಎಂದು ನನ್ನನ್ನು ಪಕ್ಕಕ್ಕೆ ತಳ್ಳಿ "ಯಾರೋ ಹಾದರಗಿತ್ತಿ? ಗಂಡಿಗ್ಯಾ ಭ್ಯಾಡ್ಯಾ, ಮದಿವ್ಯಾಗಿ ಇಷ್ಟು ದಿನಾ ಆಯ್ತು, ಒಮ್ಮ್ಯಾದರೂ ನನ್ನ ಹೆಂಡ್ತಿ ಅಂಬೋ ಮಾಯೆ ಮಾಡಿದಿ? ಹೋಗಿ ಸೂಳೇರ ತೊಡಿ ನೋಡಿ ಬೇಹೋಶ್ ಆಗ್ತಿ, ಹಾಸಿಗ್ಯಾಗಿನ ಹೇಂತಿ ಮರಗತಾಳಂತ ಅಂದಿ? ಹಾದರಗಿತ್ತಿ ನಾ ಅಲ್ಲೋ…."

ಇನ್ನೇನು ಹೇಳಲಿದ್ದಳೋ ದೇಸಾಯಿ ಮತ್ತೆ "ಹಾದರಗಿತ್ತೇ" ಎಂದು ಚೀರಿದ. ಇವಳೂ ಅಷ್ಟೆ. ಮೈತುಂಬಿದ ಮಾರಿ ಸಿಡಿಯಾಡುವ ಹಾಗೆ ಹೋಗಿ, "ಸಿಟ್ಟಿಗೇಳಬ್ಯಾಡೊ, ಸತ್ತಗಿತ್ತೀ, ಸಿಟ್ಟ ತಡಕೊಳ್ಳೋ ತಾಕತ್ತೂ ನಿನಗಿಲ್ಲ, ನಿನ್ನಲ್ಲಿ ಇರೋದು ಅದೊಂದು ಶಿರ, ಅದೂ ಹರಿದರಗೊಟಕ್ಕಂತೀ" ಎಂದು ಹೇಳುತ್ತ, ಅವನ ಕೈ ಬಂದೂಕು ಸಮೇತ ತಳ್ಳಿದಳು. ಬಂದೂಕೊಂದು ಕಡೆ, ದೇಸಾಯಿ ಒಂದ ಕಡೆ ಬಿದ್ದು, ಬಿದ್ದಲ್ಲೇ ಗಡಗಡ ನಡುಗಿ, ಬೇಹೋಶ್ ಆದ. ಸಿಂಗಾರೆವ್ವ ಥೂ ಎಂದುಗುಳಿ ಹೊರಗೆ ಹೋದಳು. ನಾನು ಯಾರನ್ನು ನೋಡಲಿ, ಯಾರನ್ನು ಬಿಡಲಿ? ಸುದೈವದಿಂದ ಹೊರಗೆ ದರ್ಬಾರಿನ ಬಾಗಿಲಲ್ಲಿ ನಿಂತು ಮರೆಪ್ಪ ಇದನ್ನೆಲ್ಲ ಕೇಳುತ್ತಿದ್ದ. ಏನು ಮಾಡಬೇಕೆಂದು ತೋಚದೆ ನಾನು ಹೊರಬಂದಾಗ ಉಗುರು ಕಚ್ಚುತ್ತ, ಯಮದೈತ್ಯನಂತೆ ನಿಂತುಕೊಂಡಿದ್ದ. ಅಂತಸ್ತಿಗೆ ಹೋಗುವಂತೆ ಕೈಸನ್ನೆ ಮಾಡಿದೆ. ಹೋದ. ನಾನು ಅಡಿಗೆ ಮನೆಗೆ ಉಳ್ಳಾಗಡ್ಡಿ ತರಲಿಕ್ಕೆ ಓಡಿದೆ.

ಆಮೇಲೆ ಅಂತಸ್ತಿಗೆ ಹೋಗಿ ನೋಡಿದರೆ ಸಿಂಗಾರೆವ್ವನ ಸ್ಥಿತಿ ಇನ್ನೂ ಭಯಾನಕವಾಗಿತ್ತು. ಕಣ್ಣೀರು ಧಾರಾಕಾರವಾಗಿ ಇಳಿಯುತ್ತಿತ್ತು. ಕೂದಲು ಕೆದರಿ, ಕಣ್ಣು ಕೆಂಜಗಾಗಿ, ಹಲ್ಲು ಕಡಿಯುತ್ತಿದ್ದಳು. ಇದ್ದಕ್ಕಿದ್ದಂತೆ ತಲೆ ತಲೆ ಚಚ್ಚಿಕೊಳ್ಳುತ್ತಿದ್ದಳು. ತೂಕದಲ್ಲಿಟ್ಟ ಗಾಜಿನ ಗೊಂಬೆ ಎಲ್ಲಿ ಮುಟ್ಟಿದರೆ ಒಡೆಯುತ್ತದೊ ಎಂಬಂತೆ, ಮರೆಪ್ಪ ದೂರದಲ್ಲಿ ಕಾಳಜಿಯಿಂದ ನಿಂತಿದ್ದ. ಗಾಬರಿಯಾಗಿದ್ದ ಕೂಡ; ಯಾಕೆಂದರೆ "ನಿನ್ನ ಕೈ ಮುಗಿತೀನಿ, ಸಂಕಟ ಮಾಡಿಕೋಬ್ಯಾಡ" ಎಂದು ಕೈಕೈ ಮುಗಿದು ಹೇಳುತ್ತಿದ್ದಾಗ ಅವನ ದನಿ ನಡುಗುತ್ತಿತ್ತು. ನಾನು ಹೋದವಳೇ ಬಟ್ಟಲು ತುಂಬ ಶೆರೆ ಹಾಕಿ, "ಕುಡಿಯವ್ವ" ಎಂದೆ. ದೇವರ ದಯದಿಂದ ಕುಡಿದಳು. ಹಾಗೆ ಅಡ್ಡಾದಳು. ಮರೆಪ್ಪ ಗಾಬರಿ - ಗೊಂದಲಗಳಿಂದ ಸ್ತಂಭೀಭೂತನಾಗಿ ನಿಂತಿದ್ದ. ಕೆಳಗೆ ಅಂದರೆ ದೇಸಾಯನ್ನು ನೋಡಿಕೊಳ್ಳಲು ಹೇಳಿ ಕಳಿಸಿದೆ.

ತುಸು ಹೊತ್ತಾದ ಮೇಲೆ, ಸಿಂಗಾರೆವ್ವ ಉನ್ಮಾದಗೊಂಡವಳಂತೆ ಕೆಳಕ್ಕೆ ನಡೆದಳು. ನಾನು ಓಡಿಹೋಗಿ ಹಿಡಿದುಕೊಂಡು "ಎವ್ವಾ ಸಿಂಗಾರೆವ್ವ.... ಎಂದೆ. ನನ್ನ ಕೈ ಬಿಡಿಸಿಕೊಳ್ಳುತ್ತ,

"ಇಲ್ಲ ಅವನಿಗೆಲ್ಲಾ ಹೇಳಿಬಿಡ್ತೀನಿ, ನೀ ಎಂಥಾ ಲಜ್ಜೆಗೇಡಿ ಅಂತ ಹೇಳತೀನಿ. ನಾ ಯಾಕ ಹಾದರಗಿತ್ತಿ ಆದೆ, ಹೆಂಗ ಬಸರಾದೆ, ಹೆಂಗ ನೀನಃ ಹಾದರಾ ಮಾಡಕ ಹಚ್ಚಿದಿ; ನೀನು ಮತ್ತ ನಿನ್ನ ರೋಗ ಎರಡೂ ಸೇರಿ ಕುಂಟಲತನ ಮಾಡಿ, ಹಾದರಾ ಮಾಡಕ ನನ್ನ ಹೆಂಗ ದೂಕಿದಿರಿ - ಅಂತ ಹೇಳತೀನಿ. ಇದನ್ನ ಕೇಳಿ ಅವ ಬೇಹೋಶ್ ಆಗತಾನ. ಅದನ್ನೋಡಿ ನಾ ಸಂತೋಷಪಡ್ತೀನಿ. ಅವ ಗುಂಡ ಹಾರಿಸಲಿಕ್ಕೇನಾದರೂ ಬಂದನೋ, ಬಂದೂಕು ಕಸೀತೀನಿ. ಯಾಕಂದರ ಗುಂಡ ಹಾಕಿದರ ನಾ ಸಾಯ್ತಿನ್ನೋಡು. ಇಲ್ಲ, ನಾ ಸಾಯಾಣಿಲ್ಲ. ಹಂಗಿಸಿ ಹಂಗಿಸಿ ಅವ ದಿನಾ ಸಾಯೋಹಾಂಗ ಮಾಡತೀನಿ. ದಿನಾ ಸಾವಿರ ಬಾರಿ ಬೇಹೋಶ್ ಆಗೋಹಂಗ ಮಾಡಿ, ಮಾಡಿ ಕೊಲ್ಲತೀನಿ... ನೀನಃ ಕಂಡ್ಹಾಂಗ ನಾ ಹಾದರಗಿತ್ತಿ ಏನ ಶೀನಿಂಗೀ? ದೇವರು ಇಷ್ಟು ದೊಡ್ಡ ಶಿಕ್ಷಾ ನನಗ್ಯಾಕ ಕೊಡಬೇಕು?"

ಇರಿಯುವುದಕ್ಕೆ ಉಕ್ಕಿನ ಚೂರಿಯೇ ಬೇಕೇನಪ್ಪ? ಮಾತು ಸಾಲದೆ? ಗಂಡ ಹೆಂಡತಿ ಪರಸ್ಪರ ಇರಿದು ಗಾಯ ಮಾಡಿಕೊಂಡರು. ಈ ಗಾಯಗಳು ಕೊನೇ ತನಕ ಮಾಯಲೇ ಇಲ್ಲ. ದಿನ ಕಳೆದಂತೆ ಇದನ್ನೆಲ್ಲಾ ಮರೆತಾರು, ಹುಣ್ಣು ಹೋದಾವು ಎಂದರೆ - ಇಲ್ಲ, ಹೆಚ್ಚಾದುವು. ಗಂಡ - ಹೆಂಡತಿ ಒಂದೇ ಮನೆಯಲ್ಲಿದ್ದರೂ ಪರಸ್ಪರ ಮುಖ ನೋಡುತ್ತಿರಲಿಲ್ಲ.

ದೇಸಾಯಿಯ ವಿಷಯ ನನಗೆ ಗೊತ್ತಾದದ್ದು ಸ್ವಲ್ಪ. ಯಾಕೆಂದರೆ ಆತ ಮಾತಿನವಲ್ಲ. ಹಿಂದೆ ನೀನೇ ಕೇಳೀಯಲ್ಲ, ಆತ ಬಾಯಿ ತೆರೆದಾಗೆಲ್ಲಾ ಬಯಲಾಟದ ಮಾತುಗಳನ್ನೇ, ಅಂದರೆ ಹೆರವರ ಮಾತುಗಳನ್ನೇ ಹೇಳುತ್ತಿದ್ದ. ನಾನವನ ಕೋಣೆಗೆ ಊಟ ಒಯ್ಯುತ್ತಿದ್ದೆ. ಎಷ್ಟು ಒಯ್ದರೆ ಅಷ್ಟೇ ತಿನ್ನುತ್ತಿದ್ದ. ಮತ್ತೆ ಬೇಕೆಂಬುದಿಲ್ಲ. ಸಾಕೆಂಬುದಿಲ್ಲ. ಅವನಿಗೆ ಶೆಟ್ಟಿ, ಮರೆಪ್ಪ, ಮತ್ತು ನಿಂಗ ಈ ಮೂವರ ಮೇಲೂ ಸಂಶಯವಿತ್ತು. ಕೇಳಿ ಖಾತ್ರಿ ಮಾಡಿಕೊಳ್ಳಬೇಕೆಂದರೆ ಅಭಿಮಾನ ಅಡ್ಡಬರುತ್ತಿತ್ತು. ಅರಮನೆಯ ಇಂಥ ವಿಚಾರ ಸಾಮಾಜಿಕವಾಗುವುದು ಅವನಿಗೆ ಇಷ್ಟವಿರಲಿಲ್ಲ. ಮೂವರನ್ನೂ ಗಮನಿಸುತ್ತ ಹಿಂದೆ ಅವರು ಅರಮನೆಯಲ್ಲಿದ್ದಾಗ ಹ್ಯಾಗೆ ಹ್ಯಾಗೆ ನಡೆದುಕೊಂಡಿದ್ದರೆಂಬುದನ್ನು ಜ್ಞಾಪಿಸಿಕೊಳ್ಳುತ್ತ, ಆ ಮೂಲಕ ಅವರಲ್ಲಿಯ ದ್ರೋಹವನ್ನು ಪತ್ತೆ ಮಾಡಲಿಕ್ಕೆ ನೋಡುತ್ತಿದ್ದ. ಕೊನೆಗೊಮ್ಮೆ ಅವನಿಗ ಏನು ಹೊಳೆಯಿತೋ ಒಂದು ದಿನ ಮಧ್ಯಾಹ್ನವೇ ಬಂದೂಕು ಹಿಡಿದುಕೊಂಡು ಬಂದು ಕೊಟ್ಟಿಗೆಯಲ್ಲಿ ವೀರಾವೇಶದಿಂದ ಕೂತುಬಿಟ್ಟ. ದೊರೆಸಾನಿಯ ಜೊತೆ ಮತ್ತೆ ಲಟಾಪಟಿ ಸುರುವಾಗುವುದೇನೋ ಎಂದು ನಾನು ಹೆದರಿದ್ದೆ. ಮರೆಪ್ಪ

ಮರೆಯಲ್ಲಿದ್ದುಕೊಂಡು ಅಂತಸ್ತಿನ ಬಾಗಿಲ ಕಾಯುತ್ತಿದ್ದ. ಬಹುಶಃ ನನ್ನ ಮೇಲೇನೂ ಸಿಟ್ಟಿರಲಾರದೆಂದು ನಂಬಿ, ಆದರೂ ಹೆದರುತ್ತಲೇ ಆ ಕಡೆ ಹೋದೆ. ಎಂದೂ ಆ ಕಡೆ ಕಾಲಿಡದವನು ಇಂದ್ಯಾಕೆ ಅಲ್ಲಿ ಕೂತಿದ್ದಾನೆಂದೂ ಆಶ್ಚರ್ಯವಾಯ್ತು. ದೇಸಾಯಿ ನನ್ನನ್ನು ನೋಡಿದನೇ ಹೊರತು, ಮುಖದ ಭಾವವನ್ನಾಗಲಿ, ಕೂತ ಭಂಗಿಯನ್ನಾಗಲಿ ಬದಲಿಸಲಿಲ್ಲ. ಮುಖ ಹೀರಿ, ಕಣ್ಣು ಒಳ ಸೇರಿದ್ದವು. ಮೊದಲೇ ಸಣಕಲು ಮೈ, ಒಂದು ಹೂಮಾಲೆ ಹಾಕಿದರೆ ಸಾಕು, ಈಗಷ್ಟೇ ಗೋರಿಯಿಂದೆದ್ದು ಬಂದ ತಾಜಾ ಹೆಣದಂತೆ ಕಾಣುತ್ತಿದ್ದ. ಮಾತಾಡಿಸಲಿಕ್ಕೆ ಧೈರ್ಯ ಸಾಲದೆ ತಿರುಗಿ ಬಂದೆ.

ಹೊತ್ತು ಮುಳುಗುತ್ತಿತ್ತು. ದನ ಮನೆಗೆ ಬಂದುವು. ಅವುಗಳ ಹಿಂದಿನಿಂದ ನಿಂಗ ಬಂದ. ಬಂದು ಕೊಟ್ಟಿಗೆಯಲ್ಲಿ ಮೇವು ಚಲ್ಲಲಿಕ್ಕೆ ಹೋದದ್ದೇ ತಡ, ದೇಸಾಯಿ ವೀರಾವೇಶದಿಂದ "ಬೋಳಿ ಮಗನ, ಉಂಡಮನೀ ಗಳಾ ಎಣಿಸಿದೇನೋ?" ಎಂದು ಒದರುತ್ತ ಬಂದೂಕಿನ ಗುರಿ ನಿಂಗನಿಗೆ ಹಿಡಿದ. ಹಿಂದು - ಮುಂದು ಗೊತ್ತಿಲ್ಲದ ನಿಂಗ ಮೇವು ಚಲ್ಲಿ "ಅಯ್ಯೋ ಎಪ್ಪಾ ಸತ್ತಿನ್ರೋ" ಎನ್ನುತ್ತ ಅಡಿಗೆಮನೆ ಮುಂದೆ ಹಾದು, ಪಡಸಾಲೆಯ ಕಡೆ ಓಡಿದ. ದೇಸಾಯಿ ಗುರಿ ಹಿಡಿದುಕೊಂಡೇ ಹಿಂದಿನಿಂದ ಓಡಿ ಬಂದ. ನಾನು ಹೊಯ್ಕಿನಿಂದ ಬೆನ್ನು ಹತ್ತಿದೆ. ನಿಂಗ ಪಡಸಾಲೆ ದಾಟಿ, "ಎಪ್ಪಾ, ಎಪ್ಪಾ" ಎನ್ನುತ್ತ ದರ್ಬಾರಿಗೆ ಹೋದ. ನೇರ ತೊಲೆ ಬಾಗಿಲ ಕಡೆ ಓಡಿದರೆ ಗುಂಡಿಗೆ ಗುರಿಯಾಗುತ್ತೇನೆಂದುಕೊಂಡನೋ ಏನೋ - ಕಂಬದ ಮರೆಯಲ್ಲಿ ನಿಂತ. ದೇಸಾಯಿ ಅಲ್ಲಿಗೂ ನುಗ್ಗಿದ. ಅವನು ಕಂಬದ ಮರೆಯಿಂದ ಇನ್ನೊಂದು ಕಂಬದ ಮರೆಗೆ ನೆಗೆಯುತ್ತ ಹಾರಾಡುತ್ತಿದ್ದರೆ, ದೇಸಾಯಿ ಹೊಂಚಿ ನಡೆವ ಬೇಟೆಗಾರನಂತೆ ಗುರಿ ಹಿಡಿದು ನಡೆದ. ದರ್ಬಾರಿನ ಕೊನೆ ಬಂತೆಂಬಾಗ ನಿಂಗ ಚಂಗನೆ ಕೆಳಗೆ ನೆಗೆದು, ಒಂದೇ ಏಟಿಗೆ ತೊಲೆ ಬಾಗಿಲ ಕಡೆ ಓಡಿದ. ಅವನಿನ್ನೂ ಹೊಸ್ತಿಲು ದಾಟಿರಲಿಲ್ಲ. ದೇಸಾಯಿ ಢಂ ಎಂದು ಗುಂಡು ಹಾರಿಸಿಯೇ ಬಿಟ್ಟ! ನಿಂಗನಿಗೆ ಸಪ್ಪಳ ತಾಗಿತ್ತಷ್ಟೆ. ಗುಂಡು ತಾಗಲೂ ಇಲ್ಲ, ತಾಗುವುದು ಸಾಧ್ಯವೂ ಇರಲಿಲ್ಲ. ಯಾಕೆಂದರೆ ತೊಲೆ ಬಾಗಿಲೆಲ್ಲೋ, ಗುಂಡು ಬಿದ್ದದ್ದೆಲ್ಲೋ, ಆದರೆ ಸಪ್ಪಳ ಕೇಳಿ, ನೆಗೆದು ಕಿರುಚಿಕೊಂಡು ಓಡಿದನಲ್ಲಾ - ದೇಸಾಯಿ ಹಿಂದಿನಿಂದ ಓಡಿ ಹೋಗಿ, ತೊಲೆ ಬಾಗಿಲಿಕ್ಕಿ, ಅಗಳಿ ಹಾಕಿ, ಭದ್ರಪಡಿಸಿ ಬಂದ. ನಿಂಗನಿಗೆ ಗುಂಡು ತಾಗಿತೆಂದು ಭ್ರಮಿಸಿದನೋ, ಅಥವಾ ಹೊರಗಿನ ಜನ ಬರದಿರಲೆಂದುಕೊಂಡನೋ, ಬರುವಾಗ ಅವನ ಮುಖದಲ್ಲಿ ಬೇಟೆಯಾಡಿದ ಆಯಾಸ ಮತ್ತು ಸಮಧಾನ ಇದ್ದವು. ನಮಗೆ ಆಮೇಲೆ ತಿಳಿಯಿತು. ದೇಸಾಯಿಗೆ ನಿಂಗನ ಮೇಲೆ ಸಂಶಯವಿತ್ತೆಂದು.

ಆದರೆ ಸಿಂಗಾರೆವ್ವನದೇ ನಮಗೆ ಹೆಚ್ಚು ಕಾಳಜಿಯಾಗಿತ್ತು. ಎಷ್ಟೆಂದರೂ ಅವಳದು ತುಂಬಿದ ಆತ್ಮ. ಭಾವಪೂರ್ಣ ಮನಸ್ಸಿನವಳು. ಅವಳ ಮುಖದ ಮೇಲೆ ಒಂದು ಮಂದಹಾಸವಾದರೂ ಮೂಡುವಂತೆ ಮಾಡಬೇಕೆಂದು ನಾನು ಖಟಪಟಿ ಮಾಡುತ್ತಿದ್ದೆ, ಒಮ್ಮೆ ಅವಳು ಮತ್ತು ನಾನು ಪಟಾಂಗಳದ ಕಟ್ಟೆಯ ಮೇಲೆ ಕೂತಿದ್ದೆವು. ಬೆಳದಿಂಗಳು ಅವಳ ಮನಸ್ಸಿಗೆ ತಂಪೆರೆದು ಶಾಂತಗೊಳಿಸಿದೆಯೆಂದೂ ಭಾವಿಸಿದ್ದೆ. ಅರಮನೆ ಮತ್ತು ಊರು ಕೂಡ ಸ್ತಬ್ಧವಾಗಿತ್ತು. ನನ್ನ ಭುಜಕ್ಕೊರಗಿ ಕೂತಿದ್ದಳು. ನಾನು ಸುಮ್ಮನಿರಲಾರದೆ ಒಂದು ಸಣ್ಣ ಚೇಷ್ಟೇ ಮಾಡೋಣವೆಂದು "ಬಿಡs ಗೆಳತಿ, ನಿನ್ನ ಗೆಳಿತಾನಾ ತಿಳದೈತಿ ಬಿಡು. ಬಸರಾದದ್ದ ನನಗೆ ಹೇಳೇ ಇರಲಿಲ್ಲ" ಎಂದೆ.

"ಏನಂತ ಹೇಳ್ಲೇ ತಾಯಿ. ಈ ಮದಿವ್ಯಾದಾಗs ನಾ ರಂಡಿಮುಂಡಿ (ವಿಧವೆ) ಆಗಿದ್ದೆ. ರಂಡಿಮುಂಡಿ ಬಸರಾದರ ಜನ ಏನಂದುಕೊಂಡಾರು?"

ಎಂದು ಹೇಳಿ ನನ್ನ ತೊಡೆಯ ಮೇಲೆ ತಲೆಯೂರಿ ಅಳತೊಡಗಿದ್ದಳು. ಯಾಕಾದರೂ ಮಾತಾಡಿದೇನೋ ಎನ್ನಿಸಿತು. ಏನು ಮಾತಾಡಿದರೂ ಅದನ್ನು ಬಸರಿಗೆ ಅನ್ವಯಿಸುತ್ತ ಹೋದರೆ ಮಾತಾಡುವುದು ಹ್ಯಾಗೆ?

ಇಷ್ಟಾದರೂ ಅವಳು ಆಗಾಗ ದೇಸಾಯರು ಬಂದರ? ಉಂಡರ? ಇಂದೇನಂದರು? ನನ್ನ ಮೇಲಿನ ಹಳೇ ಸಿಟ್ಟಿನ್ನೂ ಹಾಗೆ ಇದೆಯೇ? - ಮುಂತಾಗಿ ಕೇಳುತ್ತಿದ್ದಳು. ಆ ದಿನ ತಾನವನಿಗೆ ಘಾಸಿ ಮಾಡುವ ಮಾತುಗಳನ್ನು ಆಡಬಾರದಿತ್ತೆಂದು ಹೇಳುತ್ತಿದ್ದಳು. ದೇಸಾಯಿ ಮುಖ ಪೆಚ್ಚು ಮಾಡಿಕೊಂಡು ಅವಳ ಮುಂದೊಮ್ಮೆ ಅಡ್ಡಾಡಿದರೂ ಸಾಕಿತ್ತು. ತಬ್ಬಿಕೊಂಡು ಕ್ಷಮಿಸಲು ಸಿದ್ಧವಾಗಿದ್ದಳು. ನಾನು ಇದೇ ಸಮಯವೆಂದು ದೇಸಾಯಿ, ನಿಂಗನಿಗೆ ಗುಂಡು ಹಾಕಲು ಓಡಾಡಿದ್ದನ್ನು ಹೇಳಿದೆ. ಸದ್ಯ, ಸಣ್ಣದೊಂದು ಮಂದಹಾಸ ಅವಳ ಮುಖದ

ಮೇಲಾಡಿತು. “ಈಗಿದ್ದಾರೇನು, ನೋಡು ಅವರನ್ನ ನಾನs ಸಮಾಧಾನ ಮಾಡತೀನಿ” ಎಂದಳು. ನನಗೆ ತುಸು ಹೊಯ್ಕಾಯಿತು. ಸಂಶಯದಲ್ಲಿ ಪಡಸಾಲೆಗೆ ಹೋಗಿ ಅವನ ಕೋಣೆಯಲ್ಲಿ ಹಣಿಕಿ ಹಾಕಿದೆ. ಒಳಗೆ ಕತ್ತಲಿತ್ತು, ಮಂಚದ ಮೇಲೆ ಬಿದ್ದುಕೊಂಡಿದ್ದ. “ದೊರೆಸಾನಿ ನಿಮ್ಮ ಕೂಡ ಮಾತಾಡಬೇಕಂತ, ಕರೀತಾರ” ಅಂದೆ.

“ನೀನೂ ಬ್ಯಾಡಾ, ನಿಮ್ಮ ದೊರೆಸಾನಿಯೂ ಬ್ಯಾಡಾ” ಎಂದು ಹೇಳಿ ಬಾಗಿಲು ಹಾಕಿಕೊಂಡ. ಬಂದು ನಡೆದದ್ದನ್ನೆಲ್ಲ ಹೇಳಿದೆ. ದೊರೆಸಾನಿಗಿದು ತಮಾಷೆಯಾಗಿ ಕಂಡಿತು. ಮುಗುಳು ನಕ್ಕಳು.

ಈ ಮಧ್ಯೆ ಹೊರಗಡೆ ಏನೇನೋ ವ್ಯವಹಾರಗಳು ಕುದುರುತ್ತಿದ್ದವು. ಕೊಲ್ಲಾಪುರದಿಂದ ತಮಾಶಾದ ನಾಚವಾಲಿಯನ್ನು ಕರೆತರುವುದಾಗಿ ಶೆಟ್ಟಿ, ದೇಸಾಯಿಗೆ ಭರವಸೆ ಕೊಟ್ಟಿದ್ದನಂತೆ. ಮರೆಪ್ಪನೂ ಅರಮನೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಏನೇನೋ ಹಂಚಿಕೆ ಹಾಕುತ್ತಿದ್ದ. ಮೊದಮೊದಲು ದೊರೆಸಾನಿಗೆ ಇದನ್ನೆಲ್ಲ ಹೇಳುತ್ತಿದ್ದ. ಆದರೆ ಬರಬರುತ್ತಾ ಅವಳಿಗೆ ಅದರಲ್ಲಿ ಆಸಕ್ತಿಯೇ ಉಳಿಯಲಿಲ್ಲವಾದ್ದರಿಂದ ಹೇಳುವುದನ್ನೇ ಬಿಟ್ಟುಬಿಟ್ಟಿದ್ದ. ನನಗೆ ಆ ವ್ಯವಹಾರದ ತುದಿ ಇಲ್ಲವೆ ಬುಡ ತಿಳಿದಿರುತ್ತಿತ್ತು ಅಷ್ಟೆ. ಕೊಲ್ಲಾಪುರದ ಮಹಾರಾಜರ ಸೂಳೆ ಒಬ್ಬಳು ಇರುವಳೆಂದೂ, ಅವಳನ್ನು ಕರೆತರುವುದಾಗಿಯೂ ಮರೆಪ್ಪ ಹೇಳಿದ್ದನಂತೆ. ದೇಸಾಯಿ ಸ್ಪಷ್ಟವಾಗಿ ಹೇಳಿದ್ದನಂತೆ: “ನಾನು ಮಹಾರಾಜ, ಸುಖಪಡುವುದಕ್ಕಾಗೇ ಹುಟ್ಟಿದವನು, ನಾನು ಸುಖಪಡುತ್ತಲೇ ಸಾಯುತ್ತೇನೆ” ಎಂದು. ಆದರೆ ದೇಸಾಯಿಗೆ ಮರೆಪ್ಪನ ಆಮಿಷವೇ ದೊಡ್ಡದಾಗಿ ಕಂಡಿತ್ತು. ಯಾಕೆಂದರೆ ಎಷ್ಟೆಂದರೂ ಇವನ ಹುಡುಗಿ ಕೊಲ್ಲಾಪುರ ಮಹಾರಾಜರ ಸೂಳೆ, ಸಣ್ಣಪುಟ್ಟ ಜಮೀನುದಾರರಿಗೆಲ್ಲ ತೊಡೆ ತೋರಿಸುತ್ತಾಳೆಯೇ?

ಇಂಥ ನಂಬಬಾರದ ಸಂಗತಿಗಳನ್ನ ಮರೆಪ್ಪ ಹ್ಯಾಗೆ ನಂಬಿಸಿದ್ದನೋ, ದೇಸಾಯಿ ಹ್ಯಾಗೆ ನಂಬಿದ್ದನೋ! ಈ ವ್ಯವಹಾರ ಶೆಟ್ಟಿಗೆ ತಿಳಿಯದ ಹಾಗೆ ನಡೆದಿತ್ತು. ಆ ಕಡೆ ಶೆಟ್ಟಿ, ಈ ಕಡೆ ಮರೆಪ್ಪ ಅರಮನೆಯನ್ನು ತಮ್ಮದಾಗಿಸಿಕೊಳ್ಳುವ ಕಾಗದಗಳ ಮೇಲೆ ದೇಸಾಯಿಯ ಸಹಿ ಹಾಕಿಸಿಕೊಳ್ಳಲು ಸ್ಪರ್ಧಿಸುತ್ತಿದ್ದರು. ಇಂಥದನ್ನು ನಂಬಲಿಕ್ಕಾದೀತೇನಪ್ಪ? ಅರಮನೆ ಎಂದರೆ ಪೇಟೆಯೊಳಗಿನ ತರಕಾರಿಯೇ? ಅಂತೂ ಅವರು ಹ್ಯಾಗೋ ತಂತಮ್ಮ ವ್ಯವಹಾರಗಳನ್ನು ನಿಭಾಯಿಸುತ್ತಿದ್ದರು. ದೇಸಾಯಿಯೂ ಹಾಗಿದ್ದ ಅಂತಿಟ್ಟುಕೊ.

ದೇಸಾಯಿಯ ಇಂಥ ನಡತೆಯಿಂದ ದೊರೆಸಾನಿ ಬಹಳ ನೊಂದುಕೊಂಡಳು. ದೊರೆಸಾನಿಯಾಗಿ ಇಷ್ಟು ದಿನ ಈ ಮನೆಯಲ್ಲಿ ಸವೆದಿಲ್ಲವೆ? ಹೆಂಡತಿಯಾಗಿ ಗಂಡನಿಂದ ಕುಟಿಲೋಪಾಯ ಮಾಡಿ ಅರಮನೆ ಪಡೆಯಬೇಕೆ?

“ನೀನs ಹೇಳ ಶೀನಿಂಗೀ, ನಾ ಇಲ್ಲಿ ಸಾಯ್ತಾ ಇದ್ದೀನಿ. ಅವ ಅಲ್ಲಿ ಹುಡಿಗೇರ ತೊಡಿ ನೋಡಾಕ ಹಾತೋರಿತಾನ! ನಾ ಏನೇನೋ ಮಾತಾಡಿದೆ ಅಂತಿಟಕ. ಅದರ ಅವ ಏನ ಕಮ್ಮಿ? ಆ ಶಬುದ ನನಗನ್ನಭೌದೇನ? ಹೋಗಲೇ, ನಾ ಹಾದರಗಿತ್ತಿ ಅಂತನ್ನು, ಅವ ಹುಡುಗೇರ ತೊಡಿ ನೋಡತಾನಲ್ಲ, ಅವರಿಂದಾದರೂ ಮಕ್ಕಳ್ನ ಪಡೆದು ಈ ಅರಮನಿ ಮತ್ತ ನಿಲ್ಲಿಸ್ತಾನೇನ? ಈ ಅರಮನಿಗೀ ಮಕ್ಕಳು ಬ್ಯಾಡೇನ? ಮೊದಲು ಇಲ್ಲಿ ಬಂದಾಗ ಅರಮನಿ ನೋಡಿದೆ. ಅರಮನಿ ತುಂಬ ಕಂಬಗಳು. ಕಂಬಕ್ಕೊಂದು ಮಕ್ಕಳ್ನ ಹಡೀಬೇಕಲ್ಲ!... ಅವಯ್ಯ, ನಾ ಇನ್ನೂ ಎಷ್ಟು ಕೆಲಸ ಮಾಡಬೇಕಲ್ಲ - ಅಂತಂದುಕೊಂಡು ಹುಟ್ಟಿ ಬರೋ ಮಕ್ಕಳಿಗಾಗಿ ಅರಮನಿ ಹಸನ ಮಾಡಬೇಕಂತ ಗುಡಸಾಕ ಶುರು ಮಾಡಿದೆ.

ಅದರ ದೇಸಾಯರ್ನ ನೋಡಿದ ಮ್ಯಾಲ ಅನ್ನಿಸ್ತು: ಈ ಅರಮನ್ಯಾಗ ಇನ್ನೇನೂ ಹುಟ್ಟೋದs ಇಲ್ಲ ಅಂತ. ಹುಟ್ಟಿದರ ಪತ್ರೀಬನ ಹುಟ್ಟಬೇಕಷ್ಟ. ದರ್ಬಾರದಾಗ ಅದಾವಲ್ಲ, ಅವು ಕಂಬಗಳಲ್ಲ, ಪತ್ರೀಗಿಡ! ಒಂದೊಂದು ಕಂಬ ಒಂದೊಂದು ಪತ್ರೀಗಿಡಾನs!” ಎಂದು ಹೇಳುತ್ತ ಬಿಕ್ಕಿಬಿಕ್ಕಿ ಅತ್ತಳು. ಏನೆಂದು ಸಮಾಧಾನ ಮಾಡುವುದಕ್ಕೋ ನನಗೆ ತೋಚಲಿಲ್ಲ. ಮತ್ತೆ ಉದ್ವೇಗಗೊಂಡು ಬಲಗೈ ತೋರಬೆರಳು ತೋರುತ್ತ,

“ನೋಡ್ತಾ ಇರು, ಈ ಅರಮನಿ ಪುಣ್ಯೆ, ದೇಸಾಯಿ ಷಂಡತನ, ನನ್ನ ಹಾದರ ಎಲ್ಲಾ ಮುಗ್ಯಾಕ ಬಂದಾವಗs! ದೀಪ ಆರೋವಾಗ ದೊಡ್ಡದಾಗತೈತಲ್ಲಾ, ಹಾಂಗ ಇವರೆಲ್ಲಾ ದೊಡ್ಡದಾಗಿ ಉರ್ಯಾಕ ಹತ್ಯಾರ. ಇನ್ನೆನ ಎಲ್ಲಾ ಮುಗೀತೈತಿ! ನೋಡ್ತಾ ಇರು. ಮುಗೀತೈತಿ” ಎಂದು ಎರಡೂ ಕೈ ಮ್ಯಾಲೆತ್ತಿ ರೆಕ್ಕೆಯ ಹಾಗೆ ಆಡಿಸುತ್ತ ಕಣ್ಣೀರು ಸುರಿಸಿದಳು. ಕೊನೆಯ ಮಾತುಗಳನ್ನವಳು ಶಾಂತವಾಗೇ ಹೇಳಿದ್ದಳು. ಆದರೆ ಒಳಗಿನ ನೋವಿನ ಒತ್ತಡದಿಂದ ಅವಳಿಗೇ ಗೊತ್ತಾಗದ ಹಾಗೆ, ಅವು ಶಾಪದಂತೆ ಬಿರುಸಾಗಿ ಬಂದವು.

ದೇಸಾಯಿ ಹ್ಯಾಗಾದರೂ ತನ್ನ ಸುಖದಲ್ಲಿ ತಾನಿರಲಿ, ಸಿಂಗಾರೆವ್ವನ ತಂಟೆಗೆ ಬರದಿದ್ದರೆ ಸಾಕೆಂದಿದ್ದೆ. ಇಬ್ಬರೂ ದೂರವಾದದ್ದರ ಬಗ್ಗೆ ದೊರೆಸಾನಿಗೆ ದುಃಖವಾಗಿತ್ತು. ಮೊದಲೇನು ಅವರು ಸಮೀಪದಲ್ಲಿ, ಗಂಡಹೆಂಡಿರ ಹಾಗೆ ಇದ್ದರೆಂದಲ್ಲ, ಆದರೆ ಈಗಿನ ದೂರ ಅವಳಿಗೆ ಚುಚ್ಚುತ್ತಿತ್ತು. ಆ ದಿನ ಮರೆಪ್ಪ ವ್ಯವಹಾರದ ಕೆಲಸವೆಂದು ಗೋಕಾವಿಗೆ ವಕೀಲರಲ್ಲಿಗೆ ಹೋಗಿದ್ದ. ರಾತ್ರಿ ಸಿಂಗಾರೆವ್ವನಿಗೆ ಅಂತಸ್ತಿಗೆ ಊಟ ತಗೊಂಡು ಹೋಗಿದ್ದೆ. “ದೇಸಾಯಿ ಉಂಡರ?” ಎಂದಳು. “ಹ್ಞೂ ಎವ್ವ” ಅಂದೆ. ಮೆಲ್ಲಗೆದ್ದು ಅಲ್ಲೇ ಮಂಚದ ಮೇಲೆ ಕೂತಳು. ಈಗಂತೂ ತುಂಬ ದುರ್ಬಲಳಾಗಿದ್ದಳು. ಬರೀ ಹೊಟ್ಟೆಯೇ ಕಾಣುತ್ತಿತ್ತು. ಒಂದೆರಡು ತುತ್ತು ತಿಂದು ಸಾಕೆಂದಳು. ಬಸರಿ ಎಂದರೆ ಎರಡು ಜೀವಕ್ಕೆ ಸಮ, ಚೆನ್ನಾಗಿ ತಿನ್ನಬೇಕೆಂದು ಹೇಳಿ ತುತ್ತು ಮಾಡಿ ಇನ್ನಷ್ಟು ತಿನ್ನಿಸಿದೆ. ಕೈತೊಳೆದು ಎಲಡಿಕೆ ಹಾಕಿಕೊಂಡಳು. ಬಿಚ್ಚಿದ ಕೂದಲನ್ನು ಕೂಡಿಸಿ ಗಂಟು ಕಟ್ಟಿದೆ. “ಒಬ್ಬಾಕೀನs ಆಗ್ತಿ, ಮಲಗಾಕ ಮ್ಯಾಲs ಬರಲೇನವ್ವಾ?” ಅಂದೆ. ಹ್ಞೂಂ ಎಂದಳು. ಊಟ ಮಾಡಿರಬೇಕೆಂದು ಅಡಿಗೆ ಮನೆಗೆ ಹೋದೆ.

ನನ್ನ ಊಟ, ಕಸಮುಸರೆ ಮುಗಿಯುವುದಕ್ಕೆ ಸಮಯ ಹಿಡಿಯಿತು. ಮುಗಿಸಿ ನೀರಿನ ತಂಬಿಗೆ ತಗೊಂಡು ಅಂತಸ್ತಿಗೆ ಬರುತ್ತಿದ್ದೆ. ಆಗಲೇ ದೇಸಾಯಿ ತುದಿಬಾಗಿಲಲ್ಲಿ ನಿಂತು, ಮೇಲೇರಿ ಹೋಗಲೋ ಬೇಡವೋ ಎಂಬಂತೆ ನಿಂತಿದ್ದ. ನಾನಲ್ಲೇ ನಿಂತೆ. ಮತ್ತೇನು ನಿರ್ಧರಿಸಿದನೋ ಮೇಲೇರಿ ಹೋದ. ಗಂಡ ಹೆಂಡತಿ ನಾನಿಲ್ಲದೆ ರಾಜಿಯಾಗುವುದಾದರೆ ಒಳ್ಳೆಯದೇ, ಆಗಲಿ ಎಂದುಕೊಂಡೆ. ಆದರೆ ಮನುಷ್ಯನ ಮನಸ್ಸು ಯಾವ ಹೊತ್ತು ಹ್ಯಾಗಿರುತ್ತದೆಂದು ಹ್ಯಾಗ ಹೇಳಲಾದೀತು? ನಾನು ಮೆಟ್ಟಿಲು ಹತ್ತಿ ಬಾಗಿಲ ಬಳಿ ಅವರಿಗೆ ಕಾಣಿಸದಂತೆ, ಆದರೆ ಒಳಗೆ ನಡೆಯುವುದು ನನಗೆ ಕಾಣುವಂತೆ ನಿಂತೆ.

ಸಿಂಗಾರೆವ್ವ ಕಣ್ಣು ತೆರೆದುಕೊಂಡೇ ಮಲಗಿದ್ದಳು. ದೇಸಾಯಿಯನ್ನು ನೋಡಿ ಅವಳ ಮುಖದಲ್ಲಿ ಸಮಾಧಾನದ ಮಂದಹಾಸ ಮೂಡಿತು. ಕಷ್ಟಪಟ್ಟು ಎದ್ದು ಕೂತಳು. ದೇಸಾಯಿ ಈ ಕಡೆ ತಿರುಗಿದ.

“ನಿಮಗಾಗಿ ನಾ ಇಲ್ಲಿ ಸಾಯಾಕಹತ್ತೇನಿ. ಈಗ ಬಂದಿರೇನು? ಇಲ್ಲಿ ಬರ್ರಿ” ಅಂದಳು. ದೇಸಾಯಿ ಹಾಗೆಯೇ ಸೆಟಗೊಂಡು ನಿಂತಿದ್ದ.

“ಇನ್ನs ನನ್ನ ಮ್ಯಾಲಿನ ಸಿಟ್ಟು ಹೋಗಿಲ್ಲೇನು? ಮಾರಾಯರ, ತಪ್ಪಾಯಿತು, ಕಾಲ ಹಿಡೀಲೇನು? ಕಾಲ ಹಿಡಿಸಿಕೊಳ್ಳೋಕಾದರೂ ನೀವs ಬರಬೇಕು. ನನಗೆ ಏಳಾಕ ಆಗವೊಲ್ದು”

ಈಗ ದೇಸಾಯಿ ಮೆಲ್ಲಗೆ ಒಂದೊಂದೆ ಅಡಿಯಿಟ್ಟು ಅವಳ ಸಮೀಪ ಹೋದ. ಮಂಚದ ಮೇಲೆ ಕೈಬಡಿದು ಅಲ್ಲಿ ಕೂರಲು ಸೂಚಿಸಿದಳು. ದೇಸಾಯಿ ತಟ್ಟನೆ ಕೆಳಕ್ಕೆ, ಅವಳ ಕಾಲ ಬಳಿ ಕೂತ. ಸಿಂಗಾರೆವ್ವನಿಗೆ ಸಂಕೋಚವಾಯಿತಾದರೂ, ಕೆಳಗೆದ್ದು ಕೂರಲು ಸಾಧ್ಯವಾಗಲಿಲ್ಲ. ದೇಸಾಯಿ ಕೋಪದಲ್ಲಿ ಹೇಳಿದ.

“ನಮಗ ನಿಮ್ಮ ಬಸಿರು ಮನಸ್ಸಿಗಿ ಬರಲಿಲ್ಲ” ಸಿಂಗಾರೆವ್ವ ಅಸಮಾಧಾನಗೊಳ್ಳಲಿಲ್ಲ. ಮೆಲ್ಲಗೆ ದೇಸಾಯಿಯ ನೆತ್ತಿಯ ಮೇಲೆ ಎಡಗೈಯಿಟ್ಟು, ಬಲಗೈಯಿಂದ ಅವನ ಗದ್ದ ಹಿಡಿದು, ಮೇಲೆತ್ತಿ, ಅದೇ ಮಂದಹಾಸದಿಂದ ಅವನ ಮುಖ ನೋಡಿದಳು.

“ಆಯ್ತು, ಮಾರಾಯರ, ಈ ಅರಮನೀಗಿ ಮಕ್ಕಳs ಬ್ಯಾಡೇನು? ನಿಮ್ಮ ತಾಯಿ ಸಾಯೋ ಮುನ್ನ ನಡುಪಟ್ಟಿಕೊಟ್ಟು, ಮಕ್ಕಳ್ನ ಹಡೀಮಗಳs ಅಂತ ಆಶೀರ್ವಾದ ಮಾಡಿದಳು. ಅದೂ ಹುಸಿಯಾಗಬೇಕೇನು? ನೀವಂತೂ ಬಯಲಾಟ ಮಾಡಿಕೊಂಡ ಅಡ್ಡಾಡತೀರಿ. ನಿಮ್ಮ ಆಳಿಕಿ ಆದ ಮ್ಯಾಲ ಅರಮನೀಗಿ ಯಾರೂ ಹಕ್ಕುದಾರ ಬ್ಯಾಡೇನು? ನನ್ನ ಮದಿವ್ಯಾದಿರಿ. ನಾನೂ ನಿಮ್ಮ ಬಳಗ ಸೇರಿಕೊಂಡೆ. ನನ್ನ ಬಿಟ್ಟು ನಿಮಗೆ ಅದಾರಾದ್ರೂ ಯಾರು?” ತುಂಟ ಮಗನಿಗೆ ತಾಯಿ ಬುದ್ಧಿ ಹೇಳುವಂತಿದ್ದ ಈ ಮಾತುಗಳಿಂದ ನನಗೆ ಮನರಂಜನೆ ಸಿಗುತ್ತಿತ್ತು. ಅರ್ಥವಿಲ್ಲದ ಅಭಿಮಾನವನ್ನು ಬದಿಗಿರಿಸಿ ಇರೋ ಸತ್ಯವನ್ನ ಎದುರಿಸೋಣ ಎನ್ನುವುದು ಅವಳ ಮಾತಿನ ಆಶಯವಾಗಿತ್ತು. ದೇಸಾಯಿ ಆ ಮಾತಿನ ಹಿಂದಿನ ಅಂತಃಕರಣ ತಟ್ಟಿತೇನೋ, ಮುಖ ಕೆಳಗೆ ಹಾಕಿದ. ಮೆಲ್ಲಗೆ “ಯಾರಿಂದಾಯ್ತು?” ಎಂದ.

“ಯಾರಿಂದಲೋ... ಕೇಳಿ ಏನ ಮಾಡ್ತೀರಿ? ನಿಮ್ಮಿಂದs ಅಂತ ತಿಳಕೊಂಡ ಬಿಡ್ರಲ್ಲ” ಎಂದು ಹೇಳಿ ಮತ್ತೆ ಎಡಗೈ ಅವನ ತಲೆಯ ಮೇಲೆ ಆಡಿಸಿದಳು. ಅವನು ಹಾಗೆಯೇ ಅವಳ ತೊಡೆಯ ಮೇಲೊರಗಿದ. ಸಿಂಗಾರೆವ್ವ ಕಣ್ಣೊಳಗೆ ಮುಂಬರುವ ಮಗನ ಲೀಲೆಗಳ ಕನಸು ಕಾಣುತ್ತ ಕೂತಳು. ದೇಸಾಯಿ ತುಸು ಬಿರುಸು ದನಿಯಲ್ಲಿ,

“ನೀವು ಈ ಅರಮನ್ಯಾಗ ಇರಬೇಕಾದರ ಈ ಬಸರ ತಗಸಬೇಕು” ಎಂದ. ಸಿಂಗಾರೆವ್ವ,

“ಅಷ್ಟು ಯಾಕ ಅಭಿಮಾನ ಹಿಡೀತೀರಿ? ಬ್ಯಾರೆ ಸೀಮೀ ದೇವರು ಮೂಡ್ಯಾನ. ಬರೋದಕ್ಕ ತಯ್ಯಾರಾಗ್ಯಾನ. ಅವನಿಗೆ ಇಂಥ ಅಭಿಮಾನ ಇಲ್ಲs ಇಲ್ಲ. ಬರತಾನ, ಅರಮನಿ ಕಂಬ ಹಿಡ್ಕೊಂಡು ಆಡತಾನ, ನಗ್ತಾನ, ಹಾಡ್ತಾನ, ಕ್ಯಾಕಿ ಹಾಕತಾನ, ಕಂಬಗಳೆಲ್ಲ ಅವನ ಜೋಡೀ ಮಾತಾಡ್ತಾವ...”

ಹೀಗೆ ಮೈಮರೆತು ಏನೇನೋ ಹೇಳುತ್ತಿದ್ದರೆ, ಆ ಚಂಡಾಲ -

“ಹಾದರಕೂಸ ನಮ್ಮ ಅರಮನ್ಯಾಗ ಆಡೋದಕ್ಕ ನಾವು ಬಿಡೋದಿಲ್ಲ” ಎಂದು ಚೀರಿ ಎತ್ತಿನ ಹಾಗೆ ತಲೆಯಿಂದ ಸಿಂಗಾರೆವ್ವನ ಗರ್ಭಕ್ಕೆ ಗುಮ್ಮಿಬಿಟ್ಟ! ತಾಯಿ ಹಾ ಎಂದು ಹೊಟ್ಟೆ ಹಿಡಿದುಕೊಂಡು ಹಿಂದೆ ಬಿದ್ದಳು. “ಅಯ್ಯೊ ಎವ್ವಾ” ಎಂದವಳೇ ನಾನು ತಟ್ಟನೆ ಓಡಿಹೋಗಿ ದೇಸಾಯಿಯ ಕತ್ತು ಹಿಡಿದು ಹಿಂದೆ ತಳ್ಳಿಬಿಟ್ಟೆ. ಅಷ್ಟು ದೂರ ಹೋಗಿ ಬಿದ್ದ. “ಮನಶೇರೇನ್ರಿ ನೀವು?” ಎಂದು ಹೇಳಿ ಸಿಂಗಾರೆವ್ವನನ್ನು ಉಪಚರಿಸತೊಡಗಿದೆ. ದೇಸಾಯಿ ಎದ್ದು ಸರ್ರನೆ ಕೆಳಗಿಳಿದು ಹೋದ. ಗರ್ಭಕ್ಕೆ ಪೆಟ್ಟುತಾಗಿ ಕಳೆ ಹತ್ತಿತ್ತು. ಕಣ್ಣು ಮುಚ್ಚಿ, ತುಟಿ ಕಚ್ಚಿ, ಒಳನೋವನ್ನು ಸಹಿಸಲಾರದೆ ಒದ್ದಾಡುತ್ತಿದ್ದಳು. ಎವ್ವಾ ಎವ್ವಾ ಎನ್ನುತ್ತ ಏನೂ ಮಾಡಲಾಗದೆ ಕಾಪಾಡೋ ಶಿವಲಿಂಗಾ ಎಂದು ಬೇಡಿಕೊಂಡೆ. ದೇವರಿಗೆ ನನ್ನ ಮೊರೆ ಕೇಳಿಸಿತು. ತುಸು ಹೊತ್ತಾದ ಬಳಿಕ ಸಮಾಧಾನ ಹೊಂದಿ, ಮೆಲ್ಲಗೆ ಪಂಜು ಹೊತ್ತಿಸಿದ ಹಾಗೆ ಕಣ್ಣು ತೆರೆದಳು.

ನೀನೇ ಕೇಳಿದ್ದೀಯಲ್ಲಪ್ಪ ಸಿಂಗಾರೆವ್ವನ ಮಾತು. ಅವು ಆಡಬಾರದ ಮಾತುಗಳ? ಆದರೆ ಆ ಚಂಡಾಲ ದನ ಇರಿದ ಹಾಗೆ ತಾಯಿಯ ಗರ್ಭಕ್ಕೆ ಇರಿಯುವದ? ಆ ದಿನ ಮೊದಲಾಗಿ ದೇಸಾಯಿ ಮತ್ತು ಒಳ್ಳೆಯತನಗಳಲ್ಲಿಯ ನನ್ನ ನಂಬಿಕೆಯೇ ಹಾರಿ ಹೋಯಿತು. ಎಂದಿದ್ದರೂ ಇವನು ಗರ್ಭಕ್ಕೆ ಕಂಟಕನಾಗುವವನೇ ಎಂಬುದು ಅವಳಿಗೆ ಖಾತ್ರಿಯಾಗಿ ಹೋಯಿತು. ಆಯಾಸವಾದ್ದರಿಂದ ಆ ದಿನವೇನೋ ಸುಮ್ಮನಿದ್ದಳು. ಆಮೇಲೆ ಉರಿಯತೊಡಗಿದಳಪ್ಪ! ಈಗ ಬರೀ ಸಿಂಗಾರೆವ್ವ ಅಲ್ಲ, ಬಸರಿಯಾದ ತಾಯಿ ಸಿಟ್ಟಿಗೆದ್ದಿದ್ದಳು. ಅವಳ ಹೆಸರೆತ್ತಿದರೆ ಸಾಕು ಉರಿದುರಿದು ಬೀಳುತ್ತಿದ್ದಳು. ದೇಸಾಯಿ ಎಂದರೆ ಮೊದಲಿನ ಹಾಗೆ, ಅವರು - ಇವರು ಹೋಗಲಿ, ಅವನು - ಇವನು ಎಂದೂ ಮಾತಾಡುತ್ತಿರಲಿಲ್ಲ. ತಿರಸ್ಕಾರದಿಂದ ಅವನೊಂದು ಕ್ರಿಮಿ ಎಂಬಂತೆ ಅದು, ಇದು ಎನ್ನುತ್ತಿದ್ದಳು.

ಅಯ್ಯೋ, ಆ ಇಡೀ ದಿನ ಅವಳ ಕೋಪವನ್ನು ಉಪಶಮನ ಮಾಡುವುದು ಕಷ್ಟವಾಯಿತು. ಮಧ್ಯಾಹ್ನ ಊಟ ಮಾಡಿ ಅಂತಸ್ತಿಗೇರಿ ಬರುತ್ತಿರಬೇಕಾದರೆ ದೇಸಾಯಿಯ ಕೋಣೆ ಕಡೆ ಮುಖ ಮಾಡಿ ಪಡಸಾಲೆಯಲ್ಲಿ ಕೂತಳು. ನೆಲಕ್ಕೆ ಕೈ ಕೈ ಬಾರಿಸಿ, ಶಪಿಸತೊಡಗಿದಳು:

"ನನ್ನ ಗರ್ಭಕ್ಕೆ ಘಾತ ಮಾಡಾಕ ಬಂದ್ಯೇನೋ ನಾಯೆ? ಥೂ ಗಂಡಿಗ್ಯಾ ಭಾಡ್ಯಾ! ನಿನ್ನ ಮೈಯಾಗ ರಕ್ತ ಇಲ್ಲೋ, ವಿಷ ತುಂಬೇತಿ. ಆ ವಿಷಾನೂ ಬೆಚ್ಚಗಿಲ್ಲ. ನಿನಗ ದೇವರು ಬಡಕೊಳ್ಳೋ ಎದಿ ಕೊಟ್ಟಿಲ್ಲ. ನೀ ಮನಶ್ಯಾ ಆಗಿದ್ದರ ತಿಳೀತಿತ್ತೋ. ನಾ ಎಂಥಾಕಿ ಅಂತ ಹಾಳ ಮೂಳ ಜಂಗಮರೆಲ್ಲಾ ಅರಮನಿ ಮ್ಯಾಲ ಬೂದಿ ಹಾರಿಸಿದರು. ಅವರ ಮಾತ ಮೀರಿ ನಿನ್ನ ಸುಡಗಾಡ ಅರಮನ್ಯಾಗ ಮಕ್ಕಳ್ನ ಹುಟ್ಟಿಸಬೇಕಂತ ಹಟತೊಟ್ಟೆ. ಯಾಕಂದರ ನನ್ನ ಮೈಯಾಗ ಬೇಕಾದಷ್ಟು ಹುಟ್ಟಿಸೋ ಶಕ್ತಿ ಐತಿ. ನೀನ ಗಂಡಸಾಗಿದ್ದರ ಹಾ ಅನ್ನೂದರಾಗ ಈ ಅರಮನಿ ತುಂಬ ಮಕ್ಕಳ ಹಡೀತಿದ್ದೆ. ಆ ಮಕ್ಕಳೆಲ್ಲ ಅರಮನಿ ತುಂಬ ಗಲಗಲ ಗದ್ದಲ ಮಾಡಿಕೊಂಡ ಆಡತಿದ್ದರ, ಆಗ ನಿನ್ನ ಅರಮನಿ ಚಂದ ನೋಡಬೇಕಿತ್ತು. ಒಂದು, ಎರಡು ಹಡೆಯೋದಕ್ಕ ಹುಟ್ಟಿದವಳಲ್ಲೋ ನಾನು. ಸಾವಿರ ಮಕ್ಕಳ ತಾಯಿ! ನಿನ್ನ ಅರಮನಿ ಮಾನದ ಸಲುವಾಗಿ ಬಂಜಿ ಆಗಬೇಕೆನೋ ನಾನು? ಇನ್ನೊಮ್ಮಿ ನನ್ನ ಹಂತ್ಯಾಕ ಬಂದರ ಅರಮನಿಗೆ ಬೆಂಕಿ ಹಚ್ಚಿ, ಆ ಬೆಂಕ್ಯಾಗ ನಿನ್ನ ಹುರಿದ ತಿಂತೀನಿ; ಹುಷಾರ್!"

ಅವಳನ್ನು ಸಮಾಧಾನ ಮಾಡಿ ಮೇಲೆ ಕರೆದೊಯ್ಯುವದೇ ದೊಡ್ಡ ಸಮಸ್ಯೆಯಾಯಿತು. ರಟ್ಟೆಯಲ್ಲಿ ಕೈ ಹಾಕಿ "ಏಳ ತಾಯಿ, ಮನಸಿಗಿ ತ್ರಾಸ ಮಾಡ್ಕೋಬ್ಯಾಡ" ಎಂದು ಮೆಲ್ಲಗೆ ಎಬ್ಬಿಸಿದೆ. ಅಂತಸ್ತಿನ ಮೆಟ್ಟಲೇರುತ್ತ "ನನಗಾಗಲೇ ಒಳಗ ಬೆಂಕಿ ಹತ್ತೇತಿ. ಸುಡಾಕ್ಹತ್ತೀನಿ ಕಾಣಬಾರದ?" ಎಂದಳು, "ಒಳಗಿನ ಕೂಸಿಗಾಗಿಯಾದರೂ ಸಮಾಧಾನ ಮಾಡಿಕೋ ಎವ್ವಾ" ಅಂದೆ.

ದೇಸಾಯಿಯನ್ನು ಆಮೇಲೆ ಅವಳು ಕ್ಷಮಿಸಲೇ ಇಲ್ಲ. ಅವನ ಕೋಪತಾಪಗಳು ಹೀಗಿದ್ದಾವೆಂದು, ಗರ್ಭ ಇರಿಯುವ ಮಟ್ಟಕ್ಕೂ ಆತ ಹೋಗಬಲ್ಲನೆಂದು ನನಗೆ ಅನ್ನಿಸಿರಲೇ ಇಲ್ಲ. ಈಗ ನಾವು ದೇಸಾಯಿಯನ್ನು ಕಾಯುತ್ತಿದ್ದೆವು. ಅವನು ಬಂದೂಕು ಹಿಡಿದರೆ, ಅಂತಸ್ತಿನ ಕಡೆ ನೋಡಿದರೆ ತಕ್ಷಣ ಹುಷಾರಾಗುತ್ತಿದ್ದೆವು. ಆತ ತಲೆಯಿಂದ ಇರಿದು ಮಾಡಿದ ನೋವಿಗಿಂತ ಅವನ ಮಾತುಗಳು ಸಿಂಗಾರೆವ್ವನನ್ನು ಹೆಚ್ಚು ನೋಯಿಸಿದ್ದವು. ಅದನ್ನು ಮರೆಯುವುದಕ್ಕಾಗಿ ಕುಡಿಯುತ್ತಿದ್ದಳು. ಕುಡಿದಾಗ ಉನ್ಮಾದಗೊಂಡು ಏನೇನೋ ಮಾತನಾಡುತ್ತಿದ್ದಳು. ಹಲ್ಲು ಕಡಿಯುತ್ತಿದ್ದಳು. ಈ ಅರಮನೆ ತನಗೆ ಸೆರೆಮನೆಯಾಗಿದೆ ಎನ್ನುತ್ತಿದ್ದಳು. ದಿಗ್ಗನೆ ಎದ್ದು ಕಿಟಕಿಯಿಂದ ಹುಣಿಸೇಮೆಳೆ ನೋಡುತ್ತಿದ್ದಳು. ತಕ್ಷಣ ಅವಳ ಮುಖದಲ್ಲಿ ಕರಾಳ ಭಾವನೆಗಳೇಳುತ್ತಿದ್ದವು. ಮತ್ತು ಆ ಭಾವನೆಗಳು ಕ್ಷಣಕ್ಷಣಕ್ಕೆ ಬದಲಾಗುತ್ತಿದ್ದವು. ಅವಳ ನಡತೆ ನೋಡಿ ನನಗೆ ಗಾಬರಿಯಾಗುತ್ತಿತ್ತು. ಬರಬರುತ್ತ ಅದು ಹುಚ್ಚಿಗೆ ತಿರುಗುತ್ತಿದೆಯೆಂದು ಖಾತ್ರಿಯಾಗತೊಡಗಿತು.

ಒಮ್ಮೆ ಸಂಜೆ ಇಡೀ ಅರಮನೆಯ ವ್ಯವಸ್ಥೆಯನ್ನೆಲ್ಲ ತಿರುಗುಮರುಗು ಮಾಡುವೆನೆಂದು ಇದ್ದಬಿದ್ದ ಸಾಮಾನುಗಳನ್ನೆಲ್ಲ ಎಸೆದಾಡಿಬಿಟ್ಟಳು. ಹಲ್ಲಿನಿಂದ ದಿಂಬನ್ನು ಹರಿದು ಬಿಸಾಕಿದಳು. ನಾನು ಸಮಾಧಾನ ಮಾಡಹೋದರೆ ತಕ್ಷಣ ನನ್ನ ಕೈಹಿಡಿದು "ಶೀನಿಂಗೀ ಕೇಳಿದೆಯೇನ?" ಎನ್ನುತ್ತ ಆ ಕಿಟಕಿಗೆ ಕರೆದೊಯ್ದಳು.

"ಏನೆವ್ವ"? ಅಂದೆ,

"ಹುಣಿಸೀ ಮೆಳ್ಯಾಗ ಕೋಗಿಲ ಕೂಗಾಕ ಹತ್ತೇತಿ."

"ಇಲ್ಲಲ್ಲ, ನನಗ್ಯಾವುದೂ ಕೇಳವಲ್ದು"

"ಲಕ್ಷಗೊಟ್ಟ ಕೇಳಿ ನೋಡಗs"

– ಕೇಳಿದೆ, ಕೋಗಿಲ ದನಿ ಕೇಳಿಸಲೂ ಇಲ್ಲ, ಅದು ಅಂಥ ಕಾಲವೂ ಆಗಿರಲಿಲ್ಲ. ಕೇಳಿಸಲಿಲ್ಲ ಎಂದರೆ ಅವಳು ಕೇಳುತ್ತಲೂ ಇರಲಿಲ್ಲ. ಆದ್ದರಿಂದ 'ಹೌಂದೆವ್ವ' ಎಂದೆ. ಅವಳನ್ನು ಹಾಗೆಯೇ ಕಿಡಕಿಯಲ್ಲಿ ಬಿಟ್ಟು ಹಾಸಿಗೆ ಸರಿಪಡಿಸಿದೆ. ಚಲ್ಲಾಪಿಲ್ಲಿಯಾದ ಸಾಮಾನುಗಳನ್ನು ಜೋಡಿಸಿಟ್ಟು, ಅವಳನ್ನು ರಮಿಸಿ ಕರೆದೊಯ್ದು ಹಾಸಿಗೆ ಮೇಲೆ ಮಲಗಿಸಿದೆ. ಮಲಗಿಸಿ ಬರುವಾಗ ನನ್ನ ಸೆರಗು ಹಿಡಿದು "ಶೀನಿಂಗೀ, ನನ್ನ ಬಿಟ್ಟು ಎಲ್ಲಿಗೂ ಹೋಗಬ್ಯಾಡಃ" ಎಂದಳು. "ಆಗಲವ್ವ" ಎಂದೆ.

ಅಂದಿನಿಂದ ಅವಳು ಅರೆ ಎಚ್ಚರ, ಅರೆ ಮರೆವಿನಲ್ಲೇ ಇರುತ್ತಿದ್ದಳು. ವೈದ್ಯರಿಗೆ ತೋರಿಸಲಿಕ್ಕೂ ಸಾಧ್ಯವಾಗಲಿಲ್ಲ. ಅವಳಿಗೆ ಹುಚ್ಚು ಹತ್ತದಿರಲಿ ಎಂದು ಸುತ್ತಲಿನ ದೇವರಿಗೆ ಹರಕೆ ಹೊತ್ತೆ. ಭೂತಭಾದೆಯಾಗದಿರಲೆಂದು ಮೆಣಸಿನಕಾಯಿ ಇಳಿಸಿದೆ. ಮರೆಪ್ಪನಿಂದ ಮೆಳೆಯ ಹುಣಸೇ ಬರಲು ತರಿಸಿ ಬೆನ್ನ ಮೇಲಿಂದ ಇಳಿಸಿದೆ.

ಮಾರನೇ ದಿನ ಮರೆಪ್ಪ ಪಡಸಾಲೆಯಲ್ಲಿ ಅವಳೆದುರಿಗೆ ಏನೇನೋ ನಿರಾಶೆಯ ಮಾತುಗಳನ್ನಾಡುತ್ತಿದ್ದ. ನಾನು ದೂರದಲ್ಲಿದ್ದುದರಿಂದ ನನಗವು ಸ್ಪಷ್ಟವಾಗಿ ಕೇಳಿಸಲಿಲ್ಲ. ಅವನ ಮಾತಿನ ಉದ್ವೇಗದಿಂದ ಅದು ಬಹಳ ಜರೂರೀ ಕೆಲಸವೆಂದು ನನಗೆ ತೋರಿತು. ದೊರೆಸಾನಿ ಕೋಪದಿಂದ ಕುದಿಯುತ್ತಿರುವುದು ಅಷ್ಟು ದೂರದಿಂದಲೂ ನನಗೆ ಕಾಣಿಸುತ್ತಿತ್ತು. ಮತ್ತು ನನಗೆ ಆತಂಕವಾಯಿತು. ಮೊದಲೇ ಅರೆಹುಚ್ಚಿಯಂತಿರುವ ಅವಳನ್ನು ಇಷ್ಟು ಉದ್ವೇಗಗೊಳಿಸುವುದು ನನಗಿಷ್ಟವಿರಲಿಲ್ಲ. ಆದರೆ ಕಾರ್ಯ ಮಿಂಚಿಹೋಗಿತ್ತು. ಅಷ್ಟರಲ್ಲೇ ದೊರೆಸಾನಿ ಕಣ್ಣುಕಿಸಿದು ಬಲ ಅಂಗೈಯಿಂದ ಅರಮನೆಯ ನೆಲ ಬಡಿಯುತ್ತ ನಿರ್ಧಾರದ ಮಾತುಗಳನ್ನಾಡುತ್ತಿದ್ದಳು. ಅದನ್ನು ಕೇಳಿ ಚಕಿತನಾಗಿದ್ದ ಮರೆಪ್ಪ ಆಕೆಯ ಮುಖವನ್ನೇ ನೋಡುತ್ತಿದ್ದ.

ಅಂದು ರಾತ್ರಿ ಇಡಿ ಬಾಟ್ಲಿ ಸೆರೆ ಕುಡಿದಳು. ಕುಡಿದ ಮೇಲೂ ಉದ್ವೇಗದಲ್ಲಿದ್ದಳು. ಚಿತ್ತಸ್ವಾಸ್ಥ್ಯ ಕಳೆದುಕೊಂಡು ಆಕಡೆ ಈ ಕಡೆ ಅಡ್ಡಾಡುತ್ತಿದ್ದಳು. ಒಳಗೊಳಗೇ ಏನೇನೋ ಮಾತಾಡಿಕೊಂಡಂತೆ, ತನ್ನನ್ನೇ ಪ್ರಶ್ನಿಸಿಕೊಂಡಂತೆ, ಅದಕ್ಕೆ ತಾನು ಮಾಡುತ್ತಿರುವುದೇ ಸರಿಯೆಂಬಂತೆ ಸಮರ್ಥನೆಯ ಉತ್ತರ ಕೊಟ್ಟಕೊಂಡಂತೆ ಮಾಡುತ್ತಿದ್ದಳು. ಹುಬ್ಬು ಗಂಟು ಹಾಕುತ್ತಿದ್ದಳು. ಯವುದೋ ಜರೂರಾದ ಚಿಂತೆ ಅವಳನ್ನು ಕಾಡುತ್ತಿದೆಯೆಂದುಕೊಂಡೆ. ಆದರೆ ತುಟಿಯಿಂದ ಚಕಾರವನ್ನೂ ಹೊರಬಿಡಲಿಲ್ಲ. ನನ್ನ ಮುಂದೆ ಆಡಿಕೊಳ್ಳಬಾರದ ಚಿಂತೆ ಯಾವುದಿದ್ದೀತು? ಮಾತಾಡಿಸಬೇಕೆಂದ ನನ್ನ ಯತ್ನಗಳೆಲ್ಲ ವಿಫಲವಾದವು. ಜೀವಕ್ಕೇನೂ ಅಪಾಯ ಮಾಡಿಕೊಳ್ಳಲಾರಳು ಎಂದು ಅನ್ನಿಸಿ "ಮಲಗಾಕ ಹೋಗ್ತೀನವ್ವ" ಅಂದೆ. ಈಗ ಮಾತ್ರ "ಹೂಂ ಹೂಂ ಹೋಗು" ಎಂದಳು. "ಸೈ" ಎಂದು ಬಂದೆ. ಮಲಗಿಕೊಂಡೆ.

ಆ ದಿನ ತುಂಬ ದಣಿದಿದ್ದರಿಂದ ನನಗೆ ಬೇಗನೇ ನಿದ್ದೆ ಹತ್ತಿತ್ತು. ಮಧ್ಯರಾತ್ರಿ ಹಿತ್ತಲ ಬಾಗಿಲ ಸಪ್ಪಳವಾಗಿ ಎಚ್ಚರವಾಯಿತು. ಯಾಕಿದ್ದಿತೆಂದು ಎದ್ದುಹೋದೆ. ಹೊರಗಿನಿಂದ ಮರೆಪ್ಪ ದೊರೆಸಾನಿಯನ್ನು ಕರೆತರುತ್ತಿದ್ದ! ಅವಳನ್ನು ಒಳಗೆ ಕಳಿಸಿ ಮತ್ತೆ ಹೊರಗೆ ಹೋದ. ದೊರೆಸಾನಿ ಹೆದರಿದ್ದಳು. ಅವಸರದಲ್ಲಿ ಬರುತ್ತಿದ್ದಳಲ್ಲ, ನಾನು ಮಾತಾಡಿಸಬೇಕೆಂದೆ. ಆಕೆ ಹೊರಗಿನಿಂದ ಬಂದದ್ದೇ ಆಘಾತವಾಗಿ ಇದರಲ್ಲೇನೋ ರಹಸ್ಯವಿದೆಯೆಂದೂ ನಾಳೆ ಹೊರಗೆ ಬಂದೇ ಬರುತ್ತದೆಂದೂ ಸುಮ್ಮನಾದೆ.

ದಿಗಿಲಿನಿಂದಾಗಿ ಆಮೇಲೆ ನನಗೆ ನಿದ್ದೆ ಬರಲೇ ಇಲ್ಲ. ಎಷ್ಟು ಸಲ ಮಗ್ಗಲು ಬದಲಿಸಿ ವಿಚಾರ ಮಾಡಿದರೂ, ನಾನು ತಿಳಿದಂತೆ ಈತನಕ ಆಕೆ ನನ್ನಿಂದ ಏನನ್ನೂ ಬಚ್ಚಿಟ್ಟವಳಲ್ಲ. ಇಂದ್ಯಾಕೆ ಹೀಗೆಂದು ಬಗೆಹರಿಯಲಿಲ್ಲ. ಮುಂದೆ ತುಸು ಸಮಯದಲ್ಲೇ ಮರೆಪ್ಪ ದೇಸಾಯಿಯನ್ನು ಹೊತ್ತುಕೊಂಡು ಬಂದು ಅವನ ಕೋಣೆಯಲ್ಲಿ ಮಲಗಿಸಿ ಹೋದ. ಇದೇನೋ ದಿನನಿತ್ಯದ ಘಟನೆಯಾದರೂ ದೊರೆಸಾನಿ ಮೊದಲು ಬಂದದ್ದು. ಆಮೇಲೆ ದೇಸಾಯಿಯನ್ನು ತಂದದ್ದು ನನಗೆ ಅರ್ಥವಾಗದಾಯಿತು. ಹ್ಯಾಗೂ ನಾಳೆ ಹೇಳೇ ಹೇಳುತ್ತಾಳೆ ಎಂದು ಸಮಾಧಾನ ಮಾಡಿಕೊಳ್ಳಲಿಕ್ಕೆ ನೋಡಿದೆ. ಯಾವಾಗ ನಿದ್ದೆ ಹತ್ತಿತ್ತೋ ಗೊತ್ತಾಗಲಿಲ್ಲ.

ಬೆಳಿಗ್ಗೆ ಬೆಳ್ಳಿಚಿಕ್ಕೆ ಮೂಡಿದ್ದಿತು. ತಂಗಾಳಿ ತೀಡಿ ಎಚ್ಚರವಾಯಿತು. ದರ್ಬಾರಿನಲ್ಲಿ ದೊರೆಸಾನಿಯ ದನಿ ಕೇಳಿಸಿ ಎದ್ದು ಹೋದೆ. ನೋಡಿದರೆ ದೊರೆಸಾನಿ ಒಬ್ಬಳೇ ಕಂದೀಲು ಹಿಡಿದುಕೊಂಡು ಅತ್ತಿತ್ತ ಅಡ್ಡಾಡುತ್ತ ತಂತಾನೆ ಮಾತಾಡಿಕೊಳ್ಳುತ್ತಿದ್ದಳು:

“ಈ ಅರಮನಿ ಹಿರೇರಿಗೆಲ್ಲ ನಾ ಹಾದರಗಿತ್ತಿ ಅಲ್ಲ ಅಂತ ತಿಳಿದಿರಲಿ. ನಿಮ್ಮ ವಂಶದ ಕುಡಿ, ಹಾ ಹಾ ಮಹಾರಾ, ಅವನ ಷಂಡತನದಿಂದ ಹಿಂಗೆಲ್ಲ ನಡೀತು ಅಂತ ತಿಳಿದಿರಲಿ. ಈ ಅರಮನ್ಯಾಗ ಯಾರಾದ್ರೂ ದೇವರಿದ್ರ, ಹಿರೇರ ಆತ್ಮ ಇದ್ರ ಅವರಿಗಿ ನಾನು ಯಾರಂತ ಗೊತ್ತೈತಿ. ನಾ ಹಾದರ ಮಾಡಿದ್ರ ಈ ಅರಮನಿ ಕಂಬದಾಗ ಮಕ್ಕಳ ಅರಳಿಸಲಿಕ್ಕೆ ಅಂತ ತಿಳಿದಿರಲಿ...”

- ಹೀಗೆ ಏನೇನೋ, ಹೊರಗಿನ್ನೂ ದಟ್ಟವಾದ ಕತ್ತಲಿತ್ತು. ಬೆರಗುಗೊಂಡ ಕಂಬಗಳು ಅವಳ ಮಾತಿಗೆ ಹೆದರಿ ಸ್ತಬ್ಧವಾಗಿರುವಂತೆ ಗುಂಭವಾಗಿ ನಿಂತಿದ್ದವು. ಕಂದೀಲು ಹಿಡಿದುಕೊಂಡು ಆಕೆ ಅತ್ತಿತ್ತು ಅಡ್ಡಾಡುವಾಗ ಕಂಬಳ ನೆರಳುಗಳು ಸಾಲಾಗಿ ಆಕೆ ನಡೆವ ವಿರುದ್ದ ದಿಕ್ಕಿನತ್ತ ಸರಿಯುತ್ತಿದ್ದವು. ಆಕೆ ಹಾಗೆ ನಡೆದರೆ ಹೀಗೆ, ಹೀಗೆ ನಡೆದರೆ ಹಾಗೆ ಅರಮನೆಯ ಕಂಬಗಳೆಲ್ಲ ತಮ್ಮ ನಿತ್ಯದ ಸ್ಥಳ ಬದಲಿಸಿ ಒಂದರ ಸ್ಥಳಕ್ಕೆ ಇನ್ನೊಂದು, ಅದರ ಸ್ಥಳಕ್ಕೆ ಮತ್ತೊಂದು - ಹೀಗೆ ನೆಗೆದು ನೆಗೆದು ಆಟ ಆಡುತ್ತಿರುವಂತೆ ಕಾಣಿಸಿತು. ದೊರೆಸಾನಿ ಚಲಿಸುವುದು ಜೋರಾದಾಗ ಇವುಗಳ ಚಲನೆಯೂ ಅಷ್ಟೇ ಅವಸರದ್ದಾಗಿ ಒಂದು ಕ್ಷಣ ಅವೆಲ್ಲ ಅವಳ ಸುತ್ತ ಕುಣಿದಾಡುತ್ತಿರುವಂತೆ ಕಂಡಿತು. ಮರುಕ್ಷಣ ಕಂಬಗಳು ಹುಣಿಸೇಮರದ ಬೊಡ್ಡೆಗಳಾಗಿ ಆಕಡೆ ಈಕಡೆ ತಿಳಿಯಾಡುತ್ತ ಕುಣಿಯತೊಡಗಿದವು. ನಾನು ನಿಂತದ್ದು ಪತ್ರೀ ಬನದಲ್ಲಿಯೇ ಎಂದೂ ಅನ್ನಿಸಿತು! ದೊರೆಸಾನಿಯ ಕಂದೀಲು ಬೆಟ್ಟದ ಮೇಲೆ ಓಡಾಡುವ ಸೂರ್ಯನಂತೆ - ಆ ಸೂರ್ಯನ ಬೆಳಕು ಬೊಡ್ಡಿಬೊಡ್ಡಿಗಳಲ್ಲಿ ತೂರಿ ಕಿರಣಗಳ ಭಲ್ಲೆಗಳಿಂದ ನನ್ನನ್ನು ಇರಿಯುತ್ತಿರುವಂತೆ ಅನ್ನಿಸಿತು. ಅಷ್ಟರಲ್ಲಿ ‘ಢಂ’ ಎಂದು ಗುಂಡಿನ ಭಯಂಕ ಸಪ್ಪಳ ಕೇಳಿಸಿತು!

* * *

## ಅಧ್ಯಾಯ - ೧೪

“ದೇಸಾಯಿ ಗುಂಡು ಹೊಡೆದುಕೊಂಡು ತನ್ನ ಕೋಣೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ. ದುರ್ಬಲರಿರುತ್ತಾರೆ ನೋಡು, ಅವರು ಹಟಮಾರಿಗಳಾದರೆ ಬಹುಬೇಗ ಮನಸ್ಸಿನ ಸ್ಥಿಮಿತ ಕಳಕೊಳ್ಳುತ್ತಾರೆ. ವೈರಿಯನ್ನು ಇರಿಯಬೇಕು. ಆದರೆ ತಾಕತ್ತಿರೋದಿಲ್ಲ, ಹಾಗೆಂದು ಸುಮ್ಮನೆ ಇರುವುದಿಲ್ಲ. ತಾವೇ ಇರಿದುಕೊಂಡಾದರೂ ಅದನ್ನು ನೋಡಬೇಕಾದ ಸಂಕಟಕ್ಕೆ ವೈರಿಯನ್ನು ಗುರಿಪಡಿಸುತ್ತಾರೆ. ಅಂಥವರಿಗೆ ಸಾವು ಕೂಡ ಔದಾರ್ಯ ಕಲಿಸುವುದಿಲ್ಲ. ದೇಸಾಯಿ ಅಂಥವ. ಪುಣ್ಯಾತ್ಮ, ತನ್ನ ಪಾಡಿನ ತಾನು ತಣ್ಣಗೆ ಸತ್ತನೆ? ತನ್ನ ಹಾಸಿಗೆಯ ಮೇಲೊಂದು ಕಾಗದ ಬರೆದಿಟ್ಟಿದ್ದ. ತರತೀನಿ ತಾಳು, ನೀನೇ ನೋಡೀಯಂತೆ.”

- ಎಂದು ಹೇಳಿ ಶೀನಿಂಗವ್ವ ಆ ಕಾಗದ ತರೋದಕ್ಕ ಒಳಗೆ ಹೋದಳು. ನಾನು, ಶಿರಸ್ತೈಲ ಇಬ್ಬರೇ ಕೂತೆವು.

“ರವಿಚಂದ್ರನ ಕಾಗದ ಬಂತೇನೋ?” ಅಂದೆ.

“ಇನ್ನಃ ಬಂಥಂಗಿಲ್ಲ” ಅಂದ.

- ಹೈಸ್ಕೂಲಿನ ವಿವರಗಳನ್ನು ಚರ್ಚಿಸುತ್ತ ಕೂತೆವು. ಅಷ್ಟರಲ್ಲಿ ಮುದುಕಿ ಬಂದು ದೇಸಾಯಿ ಬರೆದಿಟ್ಟಿದ್ದ ಕಾಗದಕೊಟ್ಟಳು. ಮಡಿಚಿ ಎಲ್ಲಿಟ್ಟಿದ್ದಳೋ ಸಾಕಷ್ಟು ಹಳೆಯದಾಗಿ ತನ್ನ ಮೂಲ ಬಣ್ಣ ಕಳೆದುಕೊಂಡಿತ್ತು. ಅದು ಹೀಗಿತ್ತು:

ಬೆಳಗಾಂ ಜಿಲ್ಲಾ, ಗೋಕಾಕ ತಾಲ್ಲೂಕು ಶಿವಾಪುರ ಗ್ರಾಮದ ದೊರೆಸಾನಿ ಚಿ||ಸೌ||ಸಿಂಗಾರಿಬಾಯಿವರಿಗೆ,

ನೀವು ಮುದದಿಂದ ಎನ್ನ ಮದುವೆಯಾಗಿ ಸದನಕ್ಕೆ ಬಂದಾಗ ನಮ್ಮ ಆನಂದಕ್ಕೆ ಕುಂದಿರಲಿಲ್ಲ. ನೀವು ಪತಿವ್ರತಾ ಶಿರೋಮಣಿಯೆಂದೂ ಸಾಧ್ವೀಮಣಿಯೆಂದೂ ನಾವು ಎಣಿಸಿದ್ದೆವು. ಆದರೆ ಗೋಮುಖವ್ಯಾಘ್ರದೋಪಾದಿಯಲ್ಲಿ ನೀವು ಹೊರಗೊಂದು

ಒಳಗೊಂದು ಇದ್ದಿತಿ. ಹೊರಗೆ ಹಿಂದೂ ನಾರಿಯಾಗಿಯೂ ಒಳಗೆ ಹಾದರಗಿತ್ತಿಯೂ ಆಗಿದ್ದಿರಿ. ಸಿಂಗಾರಿಯಾಗಿ ಬಂದು ಬಂಗಾರದ ಅರಮನೆಯನ್ನು ಲೂಟಿ ಮಾಡುವುದೇ ನಿಮ್ಮ ಮಹದೋದ್ದೇಶವಾಗಿತ್ತೆಂದು ನಮಗೆ ಮನವರಿಕೆಯಾಗಿದೆ.

ತೌರಮನೆಯಲ್ಲಿ ಚಿಕ್ಕಂದಿನಲ್ಲಿಯೇ ನೀವು ಮತಿಹೀನ ಹೊಲೆಯನಾದ ಮರ್ಯಾನ ಜೊತೆಗೂಡಿ ಹಿತದಿಂದ ಅತಿ ವಿಲಾಸ ಮಾಡಿದ್ದಿತಿ. ಮದುವೆಯಾದ ಮೇಲಾದರೂ ನಿಮಗೆ ಸದ್ಭುದ್ಧಿ ಬರಲಿಲ್ಲ. ಆ ಮೂಢನು ಓಡ್ಯೋಡಿ ಇಲ್ಲಿಗೇ ಬರುವಂತೆ ಮೋಡಿಮಾಡಿ ಕೂಡಿಕೊಂಡಿರಿ. ನಮ್ಮ ಮಂದಿರದಲ್ಲೇ ಇದ್ದು ಕುಂದು ಬರುವ ರೀತಿಯಲ್ಲಿ ಮಂದಮತಿ ಹೊಲೆಯನೊಂದಿಗೆ ಕಂದರ್ಪನ ಕೇಳಿಯಲ್ಲಿ ಆನಂದ ಪಡುತ್ತಿದ್ದಿರಿ. ಈ ಹತಭಾಗ್ಯನಾದ ನನ್ನನ್ನು ವಂಚಿಸಿ ಸಂಚು ಮಾಡಿದಿರಿ. ಅದು ಕೊನೇತನಕ ನಮಗೆ ತಿಳಿಯದಿದ್ದದ್ದು ನಮ್ಮ ದೌರ್ಭಾಗ್ಯವಲ್ಲದೆ ಮತ್ತಿನ್ನೇನು? ಆದರೆ ಕೊನೇ ಹಂತದಲ್ಲಾದರೂ ಬಸಿರಾಗಿ ಸಿಕ್ಕುಬಿದ್ದಿರಿ. ಯಾರಿಗೆ ಬಸಿರಾದರೆಂದು ಕೇಳಿದರೆ, ಸೂಕ್ಷ್ಮಮತಿಗಳಾದ ನಮ್ಮ ಆಪೇಕ್ಷೆಯನ್ನು ಲಕ್ಷಗೊಟ್ಟು ಕೇಳದೆ ಉಪೇಕ್ಷೆ ಮಾಡಿದಿರಿ. ನಮ್ಮ ರಾಜವಾಡೆಯ ನಡುಭಾಗದಲ್ಲಿ ಕಡುತರವಾದ ಸಿಡಿಲಿನೋಪಾದಿಯಲ್ಲಿ ನೀವು ಘುಡು ಘುಡಿಸಿ ಅಡಿಗಡಿಗೆ ನಮ್ಮ ಎದೆ ಬಡಿದುಕೊಳ್ಳುವಂತೆ ಮಾಡಿದಿರಿ.

ನೀವು ಅಕ್ರಮಾವಿ ಬಸಿರಾಗಿ ನಮ್ಮ ಅರಮನೆಯ ಮುಖಕಮಲಕ್ಕೆ ಮಸಿ ಹಚ್ಚಿ ನಾವು ಹುಚ್ಚರಾಗಿ ಅಡ್ಡಾಡುವಂತೆ ಮಾಡಿದಿರಿ. ಶಿವಾಪುರದಲ್ಲಿ ನಮ್ಮ ಬಂಧುರತ್ವ ಕಳೆಗುಂದಿ ನಿಂದಾಸ್ಪದರಾಗುವಂತೆ ಮಾಡಿದಿರಿ. ಆದ್ದರಿಂದ ಶಿವಾಪುರದ ಪ್ರಜೆಗಳಿಗೆ ಎಮ್ಮ ಮಸಿ ಹತ್ತಿದ ಮುಖಾರವಿಂದವನ್ನು ತೋರಿಸುವುದಕ್ಕಿಂತ ಸಾಯುವುದೇ ಸಾವಿರ ಪಾಲು ಲೇಸೆಂದು ಅಂತಿಮವಾಗಿ ತೀರ್ಮಾನಿಸಿದೆವು.

ಈ ನಡುವೆ ಮರ್ಯಾ ಎಂಬ ಮತಿಹೀನ ಹೊಲೆಯನು ಕೊಲ್ಲಾಪುರ ಮಹಾರಾಜರ ಸೂಳೆಯನ್ನು ನಮಗೆ ತೋರಿಸುವುದಾಗಿ ಆಮಿಷ ತೋರಿಸಿದನು. ಮಹಾರಾಜರಾದವರು ಸರಿಕ ಮಹಾರಾಜರ ಸೂಳೆಯ ದರ್ಶನ ಮಾಡಿ ಮಹಾರಾಜರಂತೇ ಸಾಯುವುದು ಉಚಿತವಲ್ಲವೇ? ಹಾಯ್ ಧಿಕ್! ಅಲ್ಲಿಯೂ ನೀವು ನಮ್ಮನ್ನು ವಂಚಿಸಿದಿರಿ. ಮಹಾರಾಜರ ಸೂಳೆಯ ಸುಂದರವಾದ ಸರ್ವಾಂಗಗಳನ್ನು ಕಣ್ಣಿಂದ ನೋಡಿ ಆನಂದ ಹೊಂದಬೇಕೆಂದು ಗುಡಿಸಲಲ್ಲಿ ಹಣಿಕಿ ಹಾಕಿದರೆ ಸೂಳೆಯ ಬದಲು ನೀವೇ ಬೆತ್ತಲಾಗಿ ನಿಂತಿದ್ದಿರಿ! ಸಲ್ಲಲಿತ ವಲ್ಲಭೆಯಾದ ನೀವು ಉಲ್ಲಾಸದಿಂದ ಅಗ್ಗದ ನಲ್ಲೆಯಂತೆ ನಿಂತು ನಿಮ್ಮ ಸುಲಿದ ಮೈಯನ್ನು ತೋರಿಸುತ್ತಿದ್ದೀರಿ!! ಮತಿಗೇಡಿ ಹೊಲೆಯನ ಮೋಡಿ ಮಾತಿಗೆ ಮರುಳಾದ ನಾವು ಎಂಥಾ ಮೂರ್ಖರೆಂದು ಕರುಣೆ ಬಂದಿತೋ ಏನೋ ಎಂಬಂತೆ ನಿಮ್ಮ ಕಣ್ಣಲ್ಲಿ ಅಶ್ರುಧಾರೆ ಧಾರಾಕಾರ ಸುರಿಯುತ್ತಿತ್ತು. ನೋಡಿ ಸಂತೋಷ ನೀಗಿ ಸಂತಾಪಗೊಂಡೆವು. ಆದರೆ ನೀವು ಭಾವಿಸಿದಂತೆ ನಾವು ನಿನ್ನೆ ಬೇಹೋಶ್ ಆಗಲಿಲ್ಲ. ಆದವರ ಹಾಗೆ ಬಿದ್ದೆವು. ಬಯಲಾಟದ ಸರ್ವಶ್ರೇಷ್ಠ ನಟರೆಂದು ಸದಾಕಾಲ ಈ ನಾಡಿನ ತುಂಬ ಕೀರ್ತಿಯ ಜಯಭೇರಿ ಹೊಡೆದ ನಮಗೆ ಬೇಹೋಶ್ ಆದಂತೆ ಬೀಳುವುದು ಕಷ್ಟವಾಗಲಿಲ್ಲ. ಮತಿಗೇಡಿ ಮರ್ಯಾ ನಮ್ಮ ಅಭಿನಯವನ್ನು ನಂಬಿ ಅರಮನೆಗೆ ಹೊತ್ತು ತಂದನು. ಆದರೆ ದುಷ್ಟ ಹೊಲೆಯನ ಮಾತಿಗೆ ಮರುಳಾಗಿ ನಾವಾಗಲೇ ಅರಮನೆಯನ್ನು ಬರೆದುಕೊಟ್ಟಾಗಿತ್ತು. ಅಂತೂ ನೀವು ನಿಮ್ಮ ಸಂಚಿನಲ್ಲಿ ಯಶಸ್ವಿಯಾದಿರಿ. ಅರಮನೆ ನಿಮ್ಮದಾಯಿತು.

ಚಂದ್ರ ಬಿಸಿಯಾಗಬಹುದು, ಸೂರ್ಯ ತಂಪಾಗಬಹುದು, ಸಮುದ್ರ ಬತ್ತಬಹುದು ಆದರೆ ನಿಮ್ಮಂಥ ಹಾದರಗಿತ್ತಿಯಿಂದ ಜಗತ್ತಿಗೆ ಸುಖವಿಲ್ಲವೆಂದು ಭಾರತ ಸಂಜಾತರಿಗೆ ಸಾರಿ ಸಾರಿ ಕರಮುಗಿದು ನಾವು ಹೇಳುತ್ತೇವೆ, ಮತ್ತು ನೀವೇ ನಮ್ಮನ್ನು ಕೈಯಾರೆ ಕೊಂದಿರೆಂದು ಜಗನ್ನಿಯಾಮಕಳಾದ ಕುಮುದವ್ವ ತಾಯಿಯ ಮುಂದೆ ಜವಾಬುಕೊಡುತ್ತೇನೆ. ನಿಮ್ಮಲ್ಲಿ ಕೊಂಚವಾದರೂ ಮನುಷ್ಯತ್ವವಿದ್ದರೆ ನಮ್ಮನ್ನು ನೀವೇ ಕೈಯಾರೆ ಕೊಂದೆವೆಂದು ಕೋರ್ಟಿನಲ್ಲಿ ಜವಾಬು ಹೇಳಿ ಜೈಲಿಗೆ ಹೋಗಬೇಕೆಂದು ನಮ್ಮ ಅಂತಿಮ ಆಸೆ.

ಇಂತೀ ವಿದ್ವಜ್ಜನ ವಿಧೇಯ,

ಸರಗಂ ದೇಸಾಯಿ.

ಪತ್ರ ಓದಿ ಮತ್ತೆ ಶೀನಿಂಗವ್ವನ ಕೈಗೇ ಕೊಟ್ಟೆ. ಅನ್ಯಾಯವೆಂದರೆ ಹೀಗೂ ಇರುವುದುಂಟೆ ಎಂಬಂತೆ ಮುದುಕಿ ಮಳಮಳ ನನ್ನ ಮುಖವನ್ನೇ ನೋಡುತ್ತಿದ್ದಳು. ಆದರೆ ನನ್ನ ದಿಗಿಲು ಬೇರೆ ಇತ್ತು. ಕೊನೇ ದಿನ ದೊರೆಸಾನಿಯೇ ಕೊಲ್ಲಾಪುರ ಮಹಾರಾಜನ ಸೂಳೆಯೆಂಬಂತೆ ಮೈ ತೋರಿದ್ದನ್ನು ಓದು ಘನವಾದ ಆಶ್ಚರ್ಯವಾಗಿತ್ತು. ದಂಗುಬಡಿದು ಕೂತಿದ್ದೆ. ಶಿರಸ್ತೈಲ ಮುದುಕಿಗೆ,

"ಮುಂದೇನಾಯ್ತು?" ಎಂದು ಕೇಳಿದೆ.

"ಆಯಿತಲ್ಲಪ್ಪ, ತಾಯಿ ಅಂದೇ ಹೋದ್ಲು" ಎಂದು ಹೇಳಿ ಮುದುಕಿ ಅಳತೊಡಗಿದಳು. ವಿವರವಾಗಿ ನಾವೇನೂ ಕೇಳಿದರೂ ಈಗಷ್ಟೇ ಇದೇ ಬಾಗಿಲಿನಿಂದ ಹೋದಳೆಂಬಂತೆ ತೊಲೆ ಬಾಗಿಲ ಕಡೆ ಕೈತೋರಿಸಿ, "ಹೋದ್ಲು ಹೊಂಟೋದ್ಲು. ತಿರಿಗಿ ಬರಽಲಿಲ್ಲ!" ಎಂದು ಮತ್ತೆ ಮತ್ತೆ ಅದನ್ನೇ ಹೇಳುತ್ತ ಅಳತೊಡಗಿದಳು. ಅತ್ತು ಹಗುರಾಗಲೆಂದು ಸುಮ್ಮನಾದೆವು. ಆ ದಿನ ಮುದುಕಿ ಕಥೆ ಮೂಡಿಗೆ ಬರಲೇ ಇಲ್ಲ.

ಮಾರನೇ ದಿನ ಸರಿಹೋದಾಳೆಂದರೆ ಆಗಲೂ ಅಷ್ಟೆ. ಆ ಘಟನೆಯ ಬಗ್ಗೆ ಕೇಳಿದೊಡನೆ ಅಳುತ್ತಿದ್ದಳು. ಹೆಚ್ಚಾಗಿಯೇ ಸಂದಾಯವಾದ ಹರಕೆಯಿಂದ ಏನೂ ಉಪಯೋಗವಾಗಲಿಲ್ಲ. ಆ ಘಟನೆ ನೆನಪಾದರೆ ಕಣ್ಣಿಗೆ ಕಟ್ಟುತ್ತಿದ್ದಿತೆಂದು ತೋರುತ್ತದೆ; ಅದನ್ನು ನೆನೆದಾಗೆಲ್ಲ ಕಂಠ ಗದ್ಗದವಾಗಿ, ಮಾತು ನಿಂತು, ಕಣ್ಣೀರು ಬಳಬಳ ಸುರಿಯುತ್ತಿತ್ತು. ತುಂಡು ತುಂಡು ಮಾತುಗಳಲ್ಲೇ ಕಥೆಯ ವಿವರ ತಿಳಿದೆವೇ ಹೊರತು, ಮೊದಲು ಎಷ್ಟೊಂದು ಉತ್ಕೃಷ್ಟವಾಗಿ ಹೇಳಿದ್ದಳಲ್ಲ, ಹಾಗೆ ಹೇಳಲೇ ಇಲ್ಲ. ಅವಳ ತುಂಡು ವಾಕ್ಯಗಳಿಂದ ತಿಳಿದದಿಷ್ಟು:

ಹಾಸಿಗೆಯ ಮೇಲಿನ ಈ ಪತ್ರವನ್ನು ಸಿಂಗಾರೆವ್ವ ದೊರೆಸಾನಿ ಓದಿದಳು. ಓದಿ ಹಾಗೇ ಕಂಬಕ್ಕೊರಗಿ ಕೂತಳು. ಅಳಲಿಲ್ಲ, ಪತ್ರದಲ್ಲೇನಿದೆಯೆಂದು ಇವರ್ಯಾರಿಗೂ ಹೇಳಲಿಲ್ಲ. ಮಾತಾಡಿಸಿದರೆ ಮಾತಾಡಲಿಲ್ಲ. ಕಣ್ಣು ಪಿಳುಕಿಸಲಿಲ್ಲ. ಜೀವ ಹೋಯಿತೇನೋ ಎಂದು ಗಾಬರಿಯಾಗಿದ್ದರು. ಆದರೆ ಜೀವಂತವಾಗಿದ್ದಳು. ಅವಳನ್ನು ನೋಡಿ ಇವರೂ ಸ್ತಂಭೀಭೂತರಾದರು.

ಮುಂದೆ ಜನ ಬಂದರು. ಆದರೂ ಅವಳು ಅಲುಗಲಿಲ್ಲ. ಮಧ್ಯಾಹ್ನ ಪೊಲೀಸ್ ಪೋಜುದಾರರೂ ಬಂದರು. ಆಗ ಮಾತ್ರ ದಿಗ್ಗನೆ ಎದ್ದಳು. ಮುಖ ನಿರ್ಭಾವವಾಗಿತ್ತು. ಮಾತಿಲ್ಲದೆ ಸಭೆಯಲ್ಲೇ ನಡುಪಟ್ಟಿ ಬಿಚ್ಚಿ, ಶೀನಿಂಗವ್ವನ ಕೈಗೆ ಕೊಟ್ಟಳು. ಹಾಗೆಯೇ ಆ ಪತ್ರವನ್ನೂ ಕೂಡ ಗಂಭೀರವಾಗಿ ಪೋಜುದಾರರ ಮುಂದೆ ಹೋಗಿ ನಿಂತು ದೇಸಾಯಿಯನ್ನು ತಾನೇ ಕೊಂದುದಾಗಿ ಒಪ್ಪಿಕೊಂಡಳು. ಸುಳ್ಳು ಹೇಳುತ್ತಿದ್ದಾಳೆಂದು ಶೀನಿಂಗವ್ವ, ಮರೆಪ್ಪ ಕೂಗಾಡಿದರು. ಇವಳು ಕೇಳಲಿಲ್ಲ. ನಿರ್ಲಿಪ್ತವಾಗಿ ಮತ್ತೆ ಮತ್ತೆ ಅದೇ ಮಾತನ್ನು ಹೇಳಿದಳು. ಹೇಳಿ, ಪೊಲೀಸ್ ಪೋಜುದಾರರೊಂದಿಗೆ ಜೇಲಿಗೆ ಹೊರಟುನಿಂತಳು.

ಅರಮನೆಯ ತುಂಬ ಜನ ಕಿಕ್ಕಿರಿದಿದ್ದರು. ಬೆಳಿಗ್ಗೆ ಪತ್ರ ಓದಿದಾಗ ಅವಳ ಮುಖಭಾವ ಇತ್ತಲ್ಲ, ಅದನ್ನು ಕೊನೇತನಕ ಬದಲಿಸಲಿಲ್ಲ. ಜನರ ಎದುರಿನಲ್ಲಿ ಅಂಜಲಿಲ್ಲ, ಅಳುಕಲಿಲ್ಲ, ಹ್ಯಾಗಿದ್ದಾಳೋ ಹಾಗೆ ನೆಟ್ಟಗೆ ಸೆಟೆದುಕೊಂಡೇ ನಡೆದಳು. ಶೀನಿಂಗವ್ವ ಮತ್ತು ಮರೆಪ್ಪ ದಿಗ್ಮೂಢರಾಗಿ ಕೈಕಾಲು ಬಿದ್ದು ಅವಳ ಮನಸ್ಸನ್ನು ಪರಿವರ್ತಿಸಲು ಕರುಣೆ ಬರುವ ಹಾಗೆ ಕಿರುಚಾಡುತ್ತಿದ್ದರು. ಮುಂದೆ ಮುಂದೆ ಹೋದ ಹಾಗೆ ಶೀನಿಂಗವ್ವ ಎದೆಎದೆ ಬಡಿದುಕೊಂಡು ಅತ್ತಳು. ದೊರೆಸಾನಿ ಇದ್ಯಾವುದನ್ನೂ ಗಮನಿಸಲೇ ಇಲ್ಲ. ತೊಲೆಬಾಗಿಲು ದಾಟಿ ಅರಮನೆ ಕಡೆಗೊಮ್ಮೆ ತಿರುಗಿದಳು. ಬಗ್ಗಿ ಹೊಸ್ತಿಲಿಗೆ ನಮಸ್ಕರಿಸಿದಳು. ಎರಡೂ ಕೈ ಮ್ಯಾಲೆತ್ತಿ ಮುಗಿದು, ಮುಗಿದ ಕೈ ತಲೆಯಮೇಲಿಟ್ಟುಕೊಂಡು ಅರಮನೆಗೆ ಅಲ್ಲಿಂದಲೇ ಶರಣೆಂದಳು. ಆಗ ಮಾತ್ರ ಕಣ್ಣಲ್ಲಿ ನೀರು ತುಂಬಿತ್ತಂತೆ. ಅಲ್ಲಿ ನಿಲ್ಲದೆ ಥಟ್ಟನೆ ಹೋಗಿ ಜೀಪು ಹತ್ತಿದಳಂತೆ.

"ಹೋದ್ಲಪ್ಪ ಮಗಾ ಹೊಂಟೋದ್ಲು!"

ಜೇಲಿನಲ್ಲಿದ್ದ ಅವಳನ್ನು ಬಿಡಿಸಿಕೊಂಡು ಬರುವುದು ಸಾಧ್ಯವಿತ್ತಂತೆ. ಮರೆಪ್ಪ ಅದಕ್ಕಾಗಿ ಯತ್ನ ಮಾಡಿದ್ದ. ಆದರೆ ಅರಮನೆಯಲ್ಲಿ ತಿರುಗಿ ಕಾಲಿಡಲು ಅವಳೇ ಒಪ್ಪಲಿಲ್ಲ. ಜೇಲಿನಲ್ಲೇ ಗಂಡುಮಗನನ್ನು ಹೆತ್ತು ಅಷ್ಟಕ್ಕಾಗಿಯೇ ಕಾಯುತ್ತಿದ್ದಳೋ ಎನ್ನುವಂತೆ ಹೆರಿಗೆಯಲ್ಲೇ ಸತ್ತಳು. ಆ ಗಂಡುಮಗನೇ ನಮ್ಮ ರವಿಚಂದ್ರ. ಅರಮನೆಯ ಈಗಿನ ವಾರಸುದಾರ.

ಮುಂದೆ ಮರೆಪ್ಪನ ವಿಚಾರವೇನಾಯಿತೆಂದು, ಅದನ್ನಾದರೂ ತುಸು ವಿವರವಾಗಿ ಹೇಳೆಂದು ಮುದುಕಿಯನ್ನು ಪೀಡಿಸಿದೆವು. ಸಿಂಗಾರೆವ್ವನ ಸಾವಿನಿಂದಲೇ ಕಥೆ ಮುಗಿಯಿತೆಂದು ಅವಳ ಅಭಿಪ್ರಾಯ. ನಾವು ಪೀಡಿಸಿದಾಗ ಮರೆಪ್ಪನ ವಿಚಾರವನ್ನೂ ಸಂಕ್ಷಿಪ್ತವಾಗೇ ಮುಗಿಸಿಬಿಟ್ಟಳು.

"ಆಕೆ ಸತ್ತ ಮೂರು ದಿನಕ್ಕೇ ಅವನೂ ಸತ್ತ. ಅಷ್ಟು ದಿನವೂ ಆತ ಉಣ್ಣಲಿಲ್ಲ, ತಿನ್ನಲಿಲ್ಲ, ಯಾರ ಜೊತೆ ಮಾತಾಡಲಿಲ್ಲ, ನೋಡಿದ್ದನ್ನೇ ನೋಡುತ್ತ, ಕೂತಲ್ಲೇ ಕೂರುತ್ತಿದ್ದ. ಆತ ಕೂತದ್ದು ಆಕಾ ಆ ಪತ್ರಿಗಿಡಕ್ಕೆ ಆಧಾರವಾಗಿ. ಹಗಲೂ ರಾತ್ರಿ ಅಲ್ಲಿಂದ ಅಲುಗಿರಲಿಲ್ಲ ಎಂದರೆ ಅವನೇನಾಗಿದ್ದ ಎಂದು ನೀನೇ ತಿಳಿದುಕೊ. ನನಗಾದರೆ ಉಡಿಯಲ್ಲಿ ಕೂಸಿತ್ತು. ಅಷ್ಟರಲ್ಲಿ "ಏ ಏ ಏ" ಎಂದು ಮರೆಪ್ಪ ಕೂಗಿದ್ದು ಕೇಳಿಸಿತು. ಬಹುಶಃ ನನ್ನನ್ನೇ ಕರೆದನೇನೋ ಅಂದುಕೊಂಡು ಹೊರಗೆ ಬಂದೆ. ಪಟಾಂಗಳದಲ್ಲಿ ಹೆಡೆತೆಗೆದ ಹಾವು ಮಿಂಚಿನ ಹಾಗೆ ಅತ್ತಿತ್ತ ಹರಿದಾಡುತ್ತಿತ್ತು. ಈತ ಅದರ ಬೆನ್ನುಹತ್ತಿ ಹಿಡಿಯುವುದಕ್ಕೆ ಹೋದನೆ! ಇವನನ್ನು ಕಂಡೊಡನೆ ಅದು ತೊಲೆಬಾಗಿಲ ಕಡೆ ಓಡತೊಡಗಿತು. ಇವ ಬಿಡಲಿಲ್ಲ, ಓಡಿ ಹೋಗಿ ಹಿಡಿದುಕೊಂಡೇ ಬಿಟ್ಟ. "ಮರೆಪ್ಪಾ ಮರೆಪ್ಪಾ ಏನೊ ಇದು?" ಎಂದು ನಾನು ಕೂಗಿ ದೂರ ಬಂದು ನಿಂತೆ, ಅವನಿಗೆ ನನ್ನ ಮಾತು ಕೇಳಲಿಲ್ಲ. "ಹಾವು ಕಡಿತೈತಿ ಬಿಟ್ಟಬಿಡೋ" ಎಂದು ಕೂಗಿದೆ. "ಸಿಂಗಾರೀ ಸಿಂಗಾರೀ" ಎಂದು ಅದನ್ನು ಕೈಗೆ ಸುತ್ತಿಕೊಂಡು ಆಟವಾಡತೊಡಗಿದ! ಹಾವು ಕೇಳಿತೇ? ಅವಕಾಶ ಸಿಕ್ಕೊಡನೆ ಎಲ್ಲೆಂದರಲ್ಲಿ ಕಚ್ಚಿ ಹರಿದು ಹೋಯಿತು. ಆಗಲೂ ನಾನು "ಮರೆಪ್ಪಾ ಮರೆಪ್ಪಾ!" ಎಂದು ಕಿರುಚುತ್ತಿದ್ದೆ. ಅವನಿಗೆ ಅರಿವಿದ್ದರಲ್ಲವೆ? ಅಲ್ಲೇ ಬೆಳ್ದಿಂಗಳಲ್ಲೇ ಬರುಗು ಕಾರುತ್ತ ಬಿದ್ದು ಸತ್ತ. ನನಗಿನ್ನೂ ನೆನಪಿದೆ. ಸಾಯುವ ಮುನ್ನ ಆತ ಇನ್ನೊಮ್ಮೆ "ಸಿಂಗಾರೀ!" ಅಂದ.

"ಪುಣ್ಯವಂತರೆಲ್ಲಾ ಸತ್ತರಪ್ಪಾ : ಇಕಾ ನೋಡು, ನಾನೊಬ್ಬಳು ಪಾಪಿ, ಇನ್ನೂ ಬದುಕಿದ್ದೇನೆ!"

- ಎಂದು ಹೇಳಿ ಶೀನಿಂಗವ್ವ ಕಥೆ ಮುಗಿಸಿದಳು. ಆಕೆ ಬದುಕಿದ್ದು ನನ್ನ ಪುಣ್ಯ ಎಂದುಕೊಂಡೆ.

ಮಾರನೇ ದಿನ ರವಿಚಂದ್ರನಿಂದ ನನಗೆ ಕಾಗದಬಂತು. ದೊಡ್ಡಮನಸ್ಸು ಮಾಡಿ ಅರಮನೆಯನ್ನು ಹೈಸ್ಕೂಲಿಗೆ ದಾನ ಮಾಡುವುದಾಗಿ ಬರೆದಿದ್ದ. ಕಥೆ ಕೇಳಿ ಖಿನ್ನನಾಗಿದ್ದವನು ರವಿಚಂದ್ರನ ಪತ್ರ ಓದಿ ಸಂತೋಷಗೊಂಡೆ. ಅರಮನೆಯ ಯಾವುದೇ ವಿವರಗಳನ್ನು ಬದಲಿಸದೆ ಹೈಸ್ಕೂಲಿಗಾಗಿ ಉಪಯೋಗಿಸುವಂತೆ ಬರೆದಿದ್ದ. ನಮ್ಮೂರ ಹಿರಿಯರನ್ನು ಕರೆದು, ರವಿಚಂದ್ರ ಹೇಳಿದ್ದ ಸೂಚನೆಗಳನ್ನು ಹೇಳಿ ಪತ್ರ ಅವರ ಕೈಗಿತ್ತೆ. ಅವರೆಲ್ಲ ಬಹಳ ಸಂತೋಷಪಟ್ಟರು. ಹೈಸ್ಕೂಲಿಗೆ ದೊರೆಸಾನಿಯ ಹೆಸರಿಡುವುದಾಗಿಯೂ ಹೇಳಿದರು. ಆ ದಿನ ಶೀನಿಂಗವ್ವನಿಗೆ ಆಯಾರು ಮಾಡಿ ಮಾರನೇ ದಿನ ಬೆಂಗಳೂರಿಗೆ ಹೊರಟೆ. ಬಸ್ಸಿನಲ್ಲಿ ಅಂದುಕೊಂಡೆ. ಈಗ ಸಿಂಗಾರೆವ್ವನ ಆತ್ಮಕ್ಕೆ ದಿವ್ಯಶಾಂತಿ ಸಿಕ್ಕುತ್ತದೆ. ಇನ್ನು ಮೇಲೆ ಅರಮನೆ ಎಲ್ಲ ವಯಸ್ಸಿನ ಮಕ್ಕಳ ನಗು, ಕೇಕೆ, ಚೇಷ್ಟೆಗಳಿಂದ ತುಂಬುತ್ತದೆ. ಕಂಬಕ್ಕೆ ಒಂದೇನು ಹತ್ತು ಮಕ್ಕಳು ಮುತ್ತಿ ಮಾತಾಡಿಸುತ್ತವೆ. ಅವೆಲ್ಲ ಮಕ್ಕಳನ್ನು ಸಿಂಗಾರೆವ್ವನ ಆತ್ಮ ಹರಸುತ್ತದೆ!

* * *